[illegible]

[illegible]

[illegible]	[illegible]	[illegible]	[illegible]	[illegible]	[illegible]
[illegible]	[illegible]				[illegible]
[illegible]	[illegible]				[illegible]
[illegible]	[illegible]				
[illegible]	[illegible]				
[illegible]	[illegible]	"	"	"	
[illegible]	[illegible]				
[illegible]	[illegible]		"	"	
[illegible]	[illegible]		"	"	
[illegible]	[illegible]	"		[illegible]	
[illegible]	[illegible]			[illegible]	
[illegible]	[illegible]		"	"	
[illegible]	[illegible]	"	"	"	
[illegible]	[illegible]	"	"	"	
[illegible]	[illegible]	"	"		
[illegible]	[illegible]	"			
[illegible]	[illegible]	"	"	"	
[illegible]	[illegible]	"		[illegible]	
[illegible]	[illegible]		"	[illegible]	
[illegible]	[illegible]				
[illegible]	[illegible]				
[illegible]	[illegible]				
[illegible]	[illegible]				"
[illegible]	[illegible]				
[illegible]	[illegible]				[illegible]
[illegible]	[illegible]				[illegible]
[illegible]	[illegible]		"	"	
[illegible]	[illegible]		"		
[illegible]	[illegible]				
[illegible]	[illegible]				
[illegible]	[illegible]		"	"	
[illegible]	[illegible]			"	[illegible]
[illegible]	[illegible]		"		
[illegible]					

R.N. B. 1443

ಬಿಲೆ ಅರ್ಧ ಆಣೆ

ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವಾರ ತಾರೀಖು ೧ನೇ ಮೇ ೧೯೨೭ [ಸಂಚಿಕೆ ೪೭

ಟೀಸು.

ಲಾವು

ಕಡಿಯಿಂದಾ ಇದರ ಮೂಲಕ ಯಾವ ರಾಮಚಂದ್ರ ಶಿಂದೆ ನ ರಾಯಣರಾವ ಸೈಕಿ ಅಲೂರ ಗ್ರಾಮದ ಬಿ.ನೀಸು ೧|| ೯|| ಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ತವ ಅಲೂರ ಇವರ ಮನೆ, ಸಕ್ಕಿಮಕ್ಕ- ದಸ್ತಿ - ಬಸಪ್ಪಾ ಹಕಿಗ ಇವರ ಮನೆ ಅಲೂರಲ್ಲಿ ಹುಕುಮು ಆದ ಪ್ರಕಾರ ನಾವು ಸದರ ತ ದಿವಸ ಅಲೂರ ಗ್ರಾಮದ ಸರಕಾರಿ ಚಾವ ಸಿಂದ ಮಾಡುವೆವು. ತಗೊಳ್ಳತಕ್ಕ ಜನರ ಇರಬೇಕು. ಲಿಲಾವಿನ ಶರ್ತುಗಳು ಓದಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು

೩ ಏಪ್ರಿಲ ೧೯೨೭ ಇಸ್ವಿ

G. V. DESHPANDE,
Dy. Nazir & Guardian of
hrinivas & Ramachandra Alur.

ಮು ಪುಣೆಕ್ಕೆ ಹೋಗುವದು.

ಬಜೋಡೆ ಇವರ ಆಶ್ರಯದಲ್ಲಿದೆ.

ಕ ಮಂಡಳಿ.

ಥಿಯೇಟರಿನಲ್ಲಿ.

ವಾರ ಹಗಲು ೪ ಘಂಟೆಗೆ

ಕರ ಕೃತ

ವರ.

[೩–೫

ರ; ಆಸೆ. ೮; ಕು. ಸ್ತ್ರೀಯರಿಗೆಯೂ ಆ

ಧರ್ವ ನಾಟಕ ಮಂಡಳಿ.

ಹೊಲದ ಮಾರಾಟ.

ಜಮಖಂಡಿ ಇಲಾಖಾ ಕುಂದಗೋಳ ಸಂಸ್ಥಾನ ಕುಂದಗೋಳದಲ್ಲಿರುವ ನಮ್ಮ ಖಾಸ ಮಾಲಕಿಯ ಮತ್ತು ವಹಿವಾಟಿಯ ಜಮೀನು ರಿ|| ಸ|| ನಂಬ ೨೪೭ ಎಕರೆ ೨೦.೩೦ ಅದಕ್ಕೂ ರೂ. ೮೯ ಪ್ರೊರಾ ಎರಿ ಕಿರ್ದಸಿಕಿ ಇದ್ದದ್ದನ್ನು ಮಾರಾಟ ಮಾಡತಕ್ಕವರಿದ್ದೇವೆ. ತೆಗೆದುಕೊಳ್ಳಬಿಚ್ಛಿಸುವವರು ಕೆಳಗೆ ಸಹೀ ಮಾಡಿದವರನ್ನು ಸಮಕ್ಷಮ ಕಂಡು ಅಥವಾ ಪತ್ರವ್ಯವಹಾರ ಮಾಡಿ, ಬೇಕಾದ ಮಾಹಿತಿ ಪಡಕೊಂಡು ವ್ಯವಹಾರ ಮಾಡಬಹುದು ತಿಳಿಯುವದು ತಾ|| ೨೦-೪-೨೭ನೇ ಇಸ್ವಿ

ರಾಘವೇಂದ್ರ ಶ್ರೀನಿವಾಸ ವಾಯಿ
C/o ವಿಜಯ ಆಫೀಸ, ಧಾರವಾಡ.

ಜಾಹೀರಾತು.

ಹೊಜೂರ ಹುಕುಮು ನಂಬರ ೧೩೯ / ೬-೨ ೧೯೨೭

ನೇ ಪ್ರಕಾರ ಇನ್ನು ಮುಂದೆ ನನ್ನ ಹೆಸರು ಈ ವರೆಗೆ ನಾಗೇಶ ಗೋವಿಂದ ಕುಲಕರ್ಣಿ ಎಂದಿದ್ದನ್ನು ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇಸಾಯಿ ಶಾಳಾ ಹೆಡ್ಡ ಮಾಸ್ತರ ಮುತ್ತಗಿ ಎಂದು ದುರಸ್ತ ಮಾಡಿದೆ ಆದ ಕಾರಣ ಯಾವತ್ತು ಜನರು ನನ್ನ ಮೊದಲಿನ ಹೆಸರು ಬಿಟ್ಟು ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇಸಾಯಿ ಶಾಳಾ ಹೆಡ್ಡಮಾಸ್ತರ ಎಂಬ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬೇಕು ತಿಳಿಯುವದು. ತಾ|| ೧೭-೪-೨೭

ಸಹಿ ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇಸಾಯಿ, ಶಾಳಾ ಹೆಡ್ಡಮಾಸ್ತರ ಮುತ್ತಗಿ ತಾ. ಕಲಘಟಗಿ

ತಿರಪಟ್ಟಿ ಜಾತ್ರೆಯು ಬಂದಾಯಿತು.

ಸಾಂಗಲಿ ಇಲಾಖಾ ತಿರಪಟ್ಟಿಯಲ್ಲಿ ಪ್ರತಿ ವರುಷ ವೈಶಾಖ ಶುದ್ಧ ೧೫ ಹಿಡಿದು ಮುಂದೆ ೫ ದಿವಸಗಳ ವರೆಗೆ ಆಗುವ ಶ್ರೀ ಫಕೀರಸ್ವಾಮಿಯ ಜಾತ್ರೆಯು ಎಲ್ಲ ಕಡೆ ಸುತ್ತಮುತ್ತಲೂ ಮಾರಿಕಾ ಬೇನೆಯು ಹಬ್ಬಿದ್ದರಿಂದ ಸಾರ್ವಜನಿಕ ಹಿತದ ದೃಷ್ಟಿಯಿಂದ ಸದರಿ ಜಾತ್ರೆಯನ್ನು ನೆರೆಸುವದು ಬಂದು ಮಾಡಿದೆ. ಯಾರೂ ಮೇಲಿನ ಮುದತಿಯಲ್ಲಿ ಅಲ್ಲಿಗೆ ಹೋಗಬಾರದು. ಹೋದರೆ ಅವರನ್ನು ಊರಲ್ಲಿ ಬರಗೊಡಲಿಕ್ಕಿಲ್ಲೆಂದು ಮೆ|| ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾಂಗಲಿ ಇವರು ಜಾಹೀರನಾಮೆಯನ್ನು ತೆಗೆದು ಜಾತ್ರೆಯನ್ನು ಬಂದು ಮಾಡಿದ್ದಾರೆ. ಇತ್ತ ಕಡೆಗೆ ಯಾವತ್ತರೂ ಲಕ್ಷ್ಯ ಕೊಡಬೇಕು.

ಹೊಸಗನ್ನಡ **ನವನೀತ** ಮಾಸ ಪತ್ರಿಕೆ

ಸಂಪಾದಕ— ಪಂಡಿತ ಚನ್ನಬಸಪ್ಪ ಕವಲಿ.

ಸಮಾಜದ ಸರ್ವಾಂಗ ಸುಂದರ ಉನ್ನತಿಗೆ ಶ್ರೇಷ್ಠವಾದ ಎಲ್ಲ ಬಗೆಯ ಲೇಖಗಳೂ ಬರುವವು. ವರ್ಷಕ್ಕೆ ೩ ಸಾಮಾಜಿಕ ನಾಟಕ ಕಾದಂಬರಿಗಳು ಪೂರ್ಣವಾಗುವವು. ವಾ. ವ. ಮೂರು ರೂಪಾಯಿ.

ಪತ್ತೆ

ನವನೀತ ಕಾರ್ಯಾಲಯ ಬ್ಯಾಡಗಿ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುತ್ತಿರುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವಿಠ್ಠಲರಾವ ಜಿ. ಜಕಾತಿ,

ಮ್ಯಾನೇಜಿಂಗ. ಡಾಯರೆಕ್ಟರ

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದ ಹೆಚ್ಚಿನ ಸಂಗತಿ ಬಗ್ಗೆ ಕೇಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಯುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒನ್ನರಡು ಆಣೆಯಂತಿರುತ್ತದೆ.

ಎ. ಶಿ. ಶೆಟ್ಟಿ.

ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮] ಧಾರವಾಡ ರವಿವಾರ ತಾರೀಖು ೧ ನೇ ಮೇ ೧೯೨೧ [ಸಂಚಿಕೆ ೪೭

ಜಾಹೀರ ನೋಟೀಸು.

ಹೊಲ ಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕ ಯಾವ ತ್ತೂ ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ॥ ಸ॥ ನಂಬರ ೩೨ ಎಕರೆ ೧೧.೧೬ ತರಮ ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸ್ಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಹಿರೆ ಇವರ ಮನೆ ಆಲೂರಲ್ಲಿ ರೋದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ॥ ೩೧ ಮಾಹೆ ಮೆ ಸನ್ನ ೧೯೨೧ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವ ಡಿಯಲ್ಲಿ ಮಧ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖು ೨೫ನೇ ಮಾಹೆ ಎಪ್ರಿಲ ೧೯೨೧ ಇಸ್ವಿ

G V DESHPANDE,
Dy. Nazir & Guardian of
Shrinivas & Ramachandra Alur.

ಈ ಪ್ರಯೋಗವನ್ನು ಮಾಡಿ, ಮಂಡಳಿಯು ಪುಣೆಕ್ಕೆ ಹೋಗುವದು.

ಶ್ರೀಮಂತ ಸಯಾಜಿರಾವ ಮಹಾರಾಜ ರಾಜ್ಯ ಬಡೋದೆ ಇವರ ಆಶ್ರಯದಲ್ಲಿದ.

ಗಂಧರ್ವ ನಾಟಕ ಮಂಡಳಿ.

ಹುಬ್ಬಳ್ಳಿ ಮಲ್ಲಿಕಾರ್ಜುನ ಥಿಯೇಟರಿನಲ್ಲಿ-
ರವಿವಾರ ತಾ॥ ೧ ನೇ ೧೯೨೧ ಇಸವಿ ಹಗಲು ೪ ಘಂಟೆಗೆ

ರಾ. ಕೃ. ಪ. ಖಾಡಿಲಕರ ಕೃತ

ಅಂಕ] **ಸ್ವಯಂವರ.** [೩—೫

ಟಿಕೀಟಿನ ದರ— ರೂ. ೫; ೪; ೩; ೨॥; ೨; ೧॥; ೧; ಆಣೆ. ೮; ಕು. ಸ್ತ್ರೀಯರಿಗೆ ೧॥ ಆ

ವ್ಯವಸ್ಥಾಪಕ—ಗಂಧರ್ವ ನಾಟಕ ಮಂಡಳಿ.

ಹೊಲದ ಮಾರಾಟ.

ಜಮಖಂಡಿ ಇಲಾಖಾ ಕುಂದರಗೋಳ ಸಂ ಸ್ಥಾನ ಕುಂದರಗೋಳದಲ್ಲಿರುವ ನಮ್ಮ ಪಾಸ ಮಾಲ ಕಿಯ ಮತ್ತು ವಹಿವಾಟಿಯ ಜಮೀನು ರಿ॥ ಸ॥ ನಂ ಬ ೨೪೭ ಎಕರೆ ೨೦.೩೦ ತರಮ ರೂ. ೮೯ ಪೂ ರಾ ಎರಿ ಕಿರ್ದಿಸಿಕಿ ಇದದ್ದನ್ನು ಮಾರಾಟ ಮಾಡತ ಕ್ಕ ವರಿಪ್ಪೇವೆ. ತೆಗೆದುಕೊಳ್ಳಬಿಚ್ಛಿಸುವವರು ಕಳ ಗೆ ಸಹೀ ಮಾಡಿದವರನ್ನ ಸಮಕ್ಷಮ ಕಂಡು ಅ ಥವಾ ಪತ್ರವ್ಯವಹಾರ ಮಾಡಿ, ಬೇಕಾದ ಮಾಹಿತಿ ಪಡಕೊಂಡು ವ್ಯವಹಾರ ಮಾಡಬಹುದು ತಿಳಿಯು ವದು ತಾ॥ ೨೦-೪-೨೧ನೇ ಇಸ್ವಿ

ರಾಘವೇಂದ್ರ ಶ್ರೀನಿವಾಸ ನಾಯಿ
C/o ವಿಜಯ ಆಫೀಸ, ಧಾರವಾಡ.

ಜಾಹೀರಾತು.

ಹುಜೂರ ಹುಕುಮು ನಂಬರ ೧೩೭ / ೭-೨ ೧೯೨೧

ನೇ ಪ್ರಕಾರ ಇನ್ನು ಮುಂದೆ ನನ್ನ ಹೆಸರು ಈ ಪರಿ ಗೆ ನಾಗೇಶ ಗೋವಿಂದ ಕುಲಕರ್ಣಿ ಎಂದಿದ್ದನ್ನು ನಾಗಪ್ಪಯ್ಯಾ ಗೋವಿ ದಪ್ಪಯ್ಯಾ ದೇಸಾಯಿ ಶಾ ಳಾ ಹೆಡ್ಡ ಮಾಸ್ತರ ಮುತ್ತಗಿ ಎಂದು ದುರಸ್ತ ಮಾ ಡಿದೆ ಅದ ಕಾರಣ ಯಾವತ್ತು ಜನರು ನನ್ನ ಮೊ ದಲಿನ ಹೆಸರು ಬಿಟ್ಟು ನಾಗಪ್ಪಯ್ಯಾ ಗೋವಿಂದಪ್ಪ ಯ್ಯಾ ದೇಸಾಯಿ ಶಾಳಾ ಹೆಡ್ಡ ಮಾಸ್ತರ ಎಂಬ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬೇಕು ತಿಳಿ ಯುವದು. ತಾ॥ ೧೭-೪-೨೧

ಸಹಿ ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇ ಸಾಯಿ, ಶಾಳಾ ಹೆಡ್ಡ ಮಾಸ್ತರ ಮುತ್ತಗಿ ತಾ. ಕಲ ಘಟಗಿ

ವಿಜಯ.

ಧಾರವಾಡ ತಾ- ೧-೫-೨೭ ನೇ ಇಸ್ವಿ

ಕರ್ನಾಟಕ ಸ್ಥಾನಿಕ ಸ್ವರಾಜ್ಯಗಳ ಮೊದಲನೆಯ ಪರಿಷತ್ತು

ರಾವಬಹಾದ್ದೂರ ಪೈಯವರ ಭಾಷಣ.

ಅಧ್ಯಕ್ಷರಾದ ರಾ. ಬ. ಪೈಯವರು ಎರಡು ಸಾವಿರ ವರ್ಷಗಳ ಹಿಂದೆ ಗ್ರೀಸ ಮತ್ತು ರೋಮ ಸಾಮ್ರಾಜ್ಯಗಳ ಅಭ್ಯುದಯದಲ್ಲಿ ಸ್ಥಾಪಿತವಾದ ಸ್ಥಾನಿಕ ಸ್ವರಾಜ್ಯಗಳ ಇತಿಹಾಸವನ್ನು ಪ್ರಾರಂಭಿಸಿ, ಹಿಂದುಸ್ಥಾನದಲ್ಲಿ ಮೊನ್ನೆ ಮೊನ್ನೆ ಇದೇ ವಿಷಯವಾಗಿಯಾದ ಕಾಯದೆಯ ತನಕ ಪೂರ್ವ ಕಥಾನುವಾದ ಮಾಡಿ, ಪ್ರಸ್ತುತದಲ್ಲಿ ಮ್ಯುನಿಸಿಪಾಲಿಟಿಗಳ ಕರ್ತವ್ಯವನ್ನು ಕುರಿತು ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಅವುಗಳ ಸಾರಾಂಶವನ್ನು ಇದರಡಿ ಕೊಡುತ್ತೇವೆ.

ಮ್ಯುನಿಸಿಪಾಲಿಟಿಗೆ ಸಂಬಂಧಿಸಿದ ಆರೋಗ್ಯ ವಿಷಯವಾಗಿ ಪೋಲೀಸರೂ ಕರ್ತವ್ಯದಕ್ಷರಾಗತಕ್ಕದ್ದು. ಅದು ತಮ್ಮ ಕೆಲಸವಲ್ಲೆನ್ನಕೂಡದು. ಬೀದಿಗಳಲ್ಲಿ ವಾಹನಗಳ ಓಡಾಟ, ಬೀದಿಗಳಲ್ಲಿ ಜನರು ಮಲಮೂತ್ರವಿಸರ್ಜನೆ ಮಾಡಿ, ಹೊಲಸು ಮಾಡುವದು, ಯಾರಿಗಾದರು ಅಪಘಾತವಾದರೆ ಮೊದಲನೆಯ ಸಹಾಯ ಮಾಡುವದು. ಇನ್ನು ಅನೇಕ ಸಾಮಾಜಿಕ ದುರ್ವ್ಯಾಪಾರಗಳನ್ನು ನಿಲ್ಲಿಸುವದು ಪೋಲೀಸರ ಕೆಲಸವು. ಯುರೋಪದಲ್ಲಿ ಪೋಲೀಸರಿಗೆ ಇಂಥ ಕೆಲಸ ಒಪ್ಪಿಸಿದ್ದಾರೆ. ಮ್ಯುನಿಸಿಪಾಲಿಟಿಯು ಆಕ್ಟಿನ ವಿರುದ್ಧ ಅನೇಕ ಅಪರಾಧಗಳಿಗೆ ಶಿಕ್ಷೆ ಮಾಡದಿದ್ದರೆ ಪಟ್ಟಣವಾಸವು ಅಸಹ್ಯವಾಗಿ, ಸಾರ್ವಜನಿಕ ಹಿತಕ್ಕೆ ಭಯಂಕರ ಕಡಕುಂಟಾಗುವದು. ಮೂತ್ರ ವಿಸರ್ಜನೆಯು ಒಂದೇ ಉದಾಹರಣೆ ತಕ್ಕೊಳ್ಳುವಾ. ಇದು ಅಪರಾಧವೆಂದು ಪೋಲೀಸರಿಗೆ ಗೊತ್ತಿದ್ದರೂ, ಅವರು ಅಪರಾಧಿಯನ್ನು ಹೋಗಗೊಡುತ್ತಾರೆ. ಏಕೆಂದರೆ- ವರಿಷ್ಠಾಧಿಕಾರಿಗಳು ಈ ಬಗ್ಗೆ ತಮ್ಮ ಜವಾಬು ಕೇಳಿ, ತಮಗೆ ಶಿಕ್ಷೆ ಮಾಡುವರಲ್ಲೆಂದು ಇವರಿಗೆ ಗೊತ್ತುಂಟು. ಇದರ ಹೊರ್ತು ಸರಕಾರದ ಶೇವಕರು; ಮ್ಯುನಿಸಿಪಾಲಿಟಿಯು ಆಳಲ್ಲೆಂದು ಅವರ ತಿಳುವಳಿಕೆಯು ಇದ್ದದ್ದರಿಂದ ಮ್ಯುನಿಸಿಪಾಲಿಟಿಯ ಅಪರಾಧಗಳನ್ನು ದುರ್ಲಕ್ಷಿಸುವರು.

ಮ್ಯುನಿಸಿಪಾಲಿಟಿಗಳ ಕಾಯದೆ ಪ್ರಕಾರ ಆಗುವ ಅಪರಾಧಿಗಳ ವಿಚಾರಣೆ ಮಾಡುವದಕ್ಕಾಗಿಯೇ ಸ್ವತಂತ್ರ ಮ್ಯಾಜಿಸ್ಟ್ರೇಟರಿರುವದಿಲ್ಲ. ಕಲಕತ್ತೆ ಪುಣೆ ಮುಂತಾದ ಸ್ಥಳಗಳಲ್ಲಿ ಮಾತ್ರ ಇರುವರು. ಸ್ವತಂತ್ರ ಮ್ಯಾಜಿಸ್ಟ್ರೇಟರಿಲ್ಲದ್ದರಿಂದ ಇಂಥ ಅಪರಾಧಿಗಳು ತುಸು ಶಿಕ್ಷೆಯಿಂದ ಪಾರಾಗುತ್ತಾರೆ. ಮುಂಬಯಿಯಲ್ಲಿ ಸ್ವತಂತ್ರ ಮ್ಯಾಜಿಸ್ಟ್ರೇಟರ ಬೇಕೆಂಬ ವಿಚಾರ ನಡೆದಿದೆ.

ದೊಡ್ಡ ದೊಡ್ಡ ಪಟ್ಟಣಗಳಂತೆ ಕರ್ನಾಟಕದಲ್ಲಿ ಅಗ್ನಿಕೋಪವನ್ನು ಶಾಂತ ಮಾಡುವ ವ್ಯವಸ್ಥೆಯಿರುವದಿಲ್ಲ. ಬೆಂಕಿ ಹತ್ತಿದಾಗ ಕೂಡಿದ ಜನರ ಸಹಾಯದಿಂದ ಆರಿಸುವರು. ಈಗಿನ ಸುಧಾರಣೆಯ ಪ್ರಕಾರ ವ್ಯವಸ್ಥೆ ಮಾಡತಕ್ಕದ್ದು. ದೊಡ್ಡ ದೊಡ್ಡ ಕಟ್ಟಡಗಳ ಮೇಲೆ ನೀರಿನ ಟಾಕಿಗಳಿರತಕ್ಕದ್ದು. ಮುಖ್ಯವಾಗಿ ವಿಪುಲ ನೀರಿನ ಸಂಗ್ರಹವಿರಬೇಕು.

ಮ್ಯುನಿಸಿಪಾಲಿಟಿಗಳ ಮೊದಲನೆಯ ಕರ್ತವ್ಯವು ಒಳ್ಳೇ ನೀರು ಮತ್ತು ಆಹಾರ ಪದಾರ್ಥಗಳು ದೊರೆಯುವಂತೆ ಮಾಡುವದಾಗಿರುತ್ತದೆ. ಅನ್ನದಲ್ಲಿ ನೀರು ಸಾರ್ವತ್ರಿಕ ಮತ್ತು ಮಹತ್ವದ ವಸ್ತುವಾಗಿದೆ. ನೀರು ಬೇಗನೆ ಕೆಡುವದು. ಮತ್ತು ಒಮ್ಮೆ ಕೆಟ್ಟಿತೆಂದರೆ ಅದರಿಂದ ಭಯಂಕರ ಪರಿಣಾಮವಾಗುವದು. ಸ್ವಚ್ಛ ನೀರಿನ ಬಗ್ಗೆ ಕರ್ನಾಟಕದ ಮ್ಯುನಿಸಿಪಾಲಿಟಿಗಳು ದುರ್ಲಕ್ಷ ಮಾಡಿರುತ್ತವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಕೆರೆ ಬಾವಿಗಳ ನೀರನ್ನು ಜಂತುಶಾಸ್ತ್ರದ ಪ್ರಕಾರ ಪರೀಕ್ಷೆ ಮಾಡುವದಿಲ್ಲ. ಕಾಲುವೆಯ ನೀರು ಊರ ಹೊರಗೆ ಹರಿದು ಹೋಗುವ ವ್ಯವಸ್ಥೆ ಇರುವದಿಲ್ಲ. ಊರೊಳಗಿನ ಎಷ್ಟೋ ಕಡಿಯ ಹೊಲಸು ನೀರು ಈ ಜಲಾಶಯಗಳಿಗೆ ಬರುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ನೀರು ಕೆಟ್ಟದ್ದರಿಂದ ಹೊರಟ ವಿಷಗಾಳಿಯು ಎಂಥ ಹಾಹಾಕಾರ ಮಾಡಿತೆಂಬುದು ತಮಗೆಲ್ಲರಿಗೂ ಗೊತ್ತುಂಟು. ಒಂದು ಕೆರೆಯಲ್ಲಿ ಹೆಣ ಕೊಳೆತು, ನೀರು ಕೆಟ್ಟದ್ದರ ಪರಿಣಾಮವಲ್ಲವೇ! ಜಂತುಶಾಸ್ತ್ರದಿಂದ ನೀರಿನ ಪರೀಕ್ಷೆ ಮಾಡಿ, ಮತ್ತು ನೀರು ಶುದ್ಧ ಮಾಡುವದರಿಂದ, ಈ ರೋಗವನ್ನು ದೂರ ಮಾಡಬಹುದು. ಮನೆ ಮನೆಯ ಬಾವಿಯನ್ನು ತಪಾಸ ಮಾಡುವದು ಕಷ್ಟ ಮತ್ತು ವೆಚ್ಚದ ಕೆಲಸವಾಗುವದು. ಆದುದರಿಂದ, ಮ್ಯುನಿಸಿಪಾಲಿಟಿಯು ಮೊದಲು ನೀರಿನ ಜವಾಬದಾರಿ ಹೊರಬೇಕು. ಊರಿಗೆ ಸಮೃದ್ಧಿಯಾಗುವಂತೆ ನೀರಿನ ಸಂಗ್ರಹ ಮಾಡಿಕೊಂಡು, ನೀರಿನ ಅರಬು ಆಗದಂತೆ ವ್ಯವಸ್ಥೆಯಾಯಿತೆಂದು ನಂಬಿಗೆಯಾದ ಬಳಿಕ ಬಾವಿಗಳನ್ನು ಮುಚ್ಚಿಸಬೇಕು. ಸನಿಸಾದ ಮ್ಯುನಿಸಿಪಾಲಿಟಿಗಳು ಸಹಕಾರ ಮಾಡಿಕೊಂಡು ದೂರದ ನೀರು ತಂದುಕೊಳ್ಳಬಹುದು. ಮುಂಬಯಿಗೆ ೮೦ ಮೈಲುಗಳ ಮೇಲಿಂದ ನೀರು ತರುತ್ತೇವೆ. ಪಟ್ಟಣದ ಹೊರ್ತು ಪಟ್ಟಣದ ಸುತ್ತಲಿರುವ ಮ್ಯುನಿಸಿಪಾಲಿಟಿಗಳಿಗೆ ಸಾವಿರ ಗ್ಯಾಲನಕ್ಕೆ ಎಂಟಾಣೆ ತಕ್ಕೊಂಡು ನೀರಿನ ಪೂರೈಕೆ ಮಾಡಿಕೊಡುತ್ತೇವೆ.

ಶುದ್ಧ ಹಾಲು, ಕೊಳೆಯದಂಥ ಹಣ್ಣು ಹಂಪಲ, ಆರೋಗ್ಯಕರವಾದಂಥ ಪುಷ್ಟ ಧಾನ್ಯ ಇವೇ ಮುಂತಾದವು ನಾಗರಿಕರಿಗೆ ದೊರೆಯುವಂತೆ ಮಾಡುವದು ಮ್ಯುನಿಸಿಪಾಲಿಟಿಗಳ ಕರ್ತವ್ಯವಾಗಿರುತ್ತದೆ. ಇವುಗಳ ಮೇಲೆ ಕೂಡ್ರುವ ನೊಣವು ಭಯಂಕರ ಪ್ರಾಣಿಯಾಗಿರುತ್ತದೆ. ನೊಣದ ವಿರುದ್ಧ ದೊಡ್ಡ ದಾಳಿಯನ್ನು ಎಬ್ಬಿಸಬೇಕು. ಗೊಬ್ಬರಗುಂಪಿ ಮತ್ತು ಕಸ ಮುಸುರೆಗಳ ಕುಂಡಿಗಳು ನೊಣದ ಉತ್ಪತ್ತಿಸ್ಥಾನವು. ನೊಣದ ತರುವಾಯ ಗುಂಗಾಡಗಳು ಎರಡನೇ ಭಯಂಕರ ಪ್ರಾಣಿಯು. ಇವುಗಳ ಜನ್ಮಸ್ಥಾನವು ನೀರು ಆಗಿರುತ್ತದೆ. ಇದು ಹೂವಿನ ಕುಂಡೆ ಮೊದಲು ಮಾಡಿಕೊಂಡು ಕೊಳೆಯುತ್ತ ನಿಂತ ನೀರಲ್ಲಿ ಹುಟ್ಟುವದು. ಎಮ್ಮೆ, ಆಕಳು, ನಾಯಿ, ಕುದುರೆಗಳನ್ನು ಕಟ್ಟುವ ಸ್ಥಳಗಳನ್ನು ಸ್ವಚ್ಛ ಮಾಡದಿದ್ದರೆ ಅವು ಅನಾರೋಗ್ಯ ಸ್ಥಳಗಳಾಗುತ್ತವೆ. ಬೀದಿಗಳ ಧೂಳವು ಹವೆಯನ್ನು ಕೆಡಿಸುವದು. ದಿನಾಲು ನೀರು ಹಾಕಿ, ಧೂಳವೇಳದಂತೆ ಮಾಡಬೇಕು. ಅಥವಾ ಇತ್ತಲಾಗಿನ ಶೋಧದಂತೆ ನೆಲಮಾಡಬೇಕು. ಕರ್ನಾಟಕದಲ್ಲಿ ಧೂಳವು ಹೇರಾಳವು. ಒಂದು ಮೋಟಾರು ಹಾದು ಹೋದ ಬಳಿಕ ನೋಡಿರಿ. ಅದರಿಂದೆದ್ದ ಧೂಳದಿಂದ ಎರಡು ನಿಮಿಷಗಳ ತನಕ ಏನೂ ಕಾಣಿಸುವದಿಲ್ಲ.

ನಾಗರಿಕರಿಗೆ ಔಷಧ ಪೂರೈಸಿಕೊಡುವದೂ ಒಂದು ಕರ್ತವ್ಯವು. ಶಾಲೆಗಳಲ್ಲಿ ಓದುವ ಹುಡುಗರ ಶರೀರ ಸಂಪತ್ತಿನ ಹಾಗು ಅವರಿಗೆ ಯಾವದೊಂದು ಸಂಸರ್ಗಜನ್ಯರೋಗ ತಗಲಿರುತ್ತದೆಂಬದರ ತಪಾಸಣೆ ಮಾಡಿಸಬೇಕು. ವ್ಯಾಧಿಗಳು ಅಲ್ಪವಿರುವಾಗ ಉಪಚಾರ ಮಾಡುವದರಿಂದ, ರೋಗಗಳು ಬಲಿಯುತ್ತಿರವು. ಹುಳುಕು ಹಲ್ಲು, ದುರ್ಬಲ ಕಣ್ಣು, ದೂಷಿತವಾದ ಗಂಟಲು ಇವೆಲ್ಲ ವಿಕೃತಿಯನ್ನು ಕೆಡಿಸಿ, ಉತ್ತಮ ವಯಸ್ಸಿನಲ್ಲಿ ಮನುಷ್ಯ ಮಾತ್ರನನ್ನು ಹಣ್ಣಣ್ಣು ಮಾಡುತ್ತವೆ. ಅದ್ದರಿಂದ ಆರೋಗ್ಯ ರಕ್ಷಣೆಯ ಪ್ರಾರಂಭವು ಚಿಕ್ಕಂದಿನಿಂದಲೇ ಪ್ರಾರಂಭವಾಗಬೇಕು. ಈ ವಿಷಯವಾಗಿರುವ ಅಜ್ಞಾನದಿಂದ

ವಂಶವೃಕ್ಷಕ್ಕೇ ಹುಳಹತ್ತುತ್ತದೆ. ತಾಯಿ ಮತ್ತು ಕೂಸನ್ನು ಪೀಡಿಸುವದು. ಮ್ಯುನಿಸಿಪಾಲಿಟಿಯವರು ಬಾಣಂತಿಯರಿಗೆ ಆರೋಗ್ಯಶಾಸ್ತ್ರದ ಮಹತ್ವವನ್ನು ತಿಳಿಸಿ ಕೊಟ್ಟು, ಸೂತಿಕಾಗೃಹ ಸ್ಥಾಪಿಸಿ, ಬಾಣಂತಿ ಮತ್ತು ಕೂಸುಗಳ ಆರೋಗ್ಯಾಭಿವೃದ್ಧಿಯಾಗುವಂತೆ ವ್ಯವಸ್ಥೆ ಮಾಡಬೇಕು. ಡಾಕ್ಟರ, ನರ್ಸ ಮೊದಲಾದವರಿಂದ ಮನೆ ಮನೆಗೆ ಬಾಣಂತಿತನ ಮತ್ತು ಶಿಶು ಸಂಗೋಪನ ಹೇಗೆ ಮಾಡಬೇಕೆಂದು ವ್ಯಾಖ್ಯಾನ ಕೊಡಿಸಬೇಕು.

(ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಸಿದ್ಧ ಮಾಡುವೆವು)

ಹನಮಸಾಗರದಲ್ಲಿ
ಹಿಂದೂ ಮುಸಲಮಾನ ದಂಗೆ.

—೦—

ನಿಜಾಮ ರಾಜ್ಯಕ್ಕೆ ಸೇರಿದ ಹನಮಸಾಗರ ಗ್ರಾಮದಲ್ಲಿ ಹಿಂದೂ ಮುಸಲಮಾನ ದಂಗೆಯಾಯಿತೆಂದು ತಾರಿನ ವರ್ತಮಾನ ಪ್ರಸಿದ್ಧವಾಗಿದೆ. ಹಿಂದೂಗಳಲ್ಲಿ ಸುಮ್ಯರಾದ ಬ್ರಾಹ್ಮಣರು ತಮ್ಮ ಮಸೀದೆಯಲ್ಲಿ ಹೊಕ್ಕು ಕಾಜಿಯು ಪ್ರಾರ್ಥನೆ ಮಾಡುವ ಪೀಠವನ್ನು ಕೆಡಿಸಿ, ಕುರಾಣ ಮತ್ತು ಸತರಂಜಿಯನ್ನು ಹರಿದು ಹಾಕಿದರೆಂದು ಮುಸಲಮಾನರು ಹೇಳುತ್ತಾರೆ. ಇದರ ಪರಿಣಾಮವಾಗಿ ಮುಸಲಮಾನರು ಅಲ್ಲಿಯ ಜಮೀನದಾರರಿಂದ ಆ ಬ್ರಾಹ್ಮಣರನ್ನು, ಅವರ ಮಕ್ಕಳನ್ನು ಹೊಡೆದು, ಅವರನ್ನು ಬಹಳವಾಗಿ ಘಾಯಪಡಿಸಿದ್ದಾರೆಂದು ಹಿಂದೂ ಜನರು ಹೇಳುತ್ತಾರೆ.

ಮುಂಬಯಿಯಲ್ಲಿ ಹಾಡಹಗಲು ಪೇಟೆಯಲ್ಲಿ
ಕೊಲೆ ಮತ್ತು ಸುಲಿಗೆಯು.

—೦—

ಮುಂಬಯಿ ಸಂಗಂಘಟ್ಟಿಯಲ್ಲಿ ಒಬ್ಬ ಚಿನಿವಾಲನ ಅಂಗಡಿಯಲ್ಲಿ ನಡುಮಧ್ಯಾಹ್ನದಲ್ಲಿ ೧೭ ವರ್ಷದ ಹುಡುಗನು ಅಂಗಡಿ ಕಾಯುತ್ತಿದ್ದನು. ಮೂವರು ಮುಸಲಮಾನರು ಒಮ್ಮಿಂದೊಮ್ಮೆ ಅಂಗಡಿಯಲ್ಲಿ ಹೊಕ್ಕು ಹುಡುಗನನ್ನು ಕೊಂದು, ೫೦ ಸಾವಿರದ ಒಡವೆಗಳನ್ನು ತೆಗೆದು ಪಲಾಯನ ಹೇಳಿಸಿದರು. ಈ ಕೃತ್ಯ ನೋಡುತ್ತಿದ್ದ ಹುಡುಗಿಯು ಚೀರಿತು. ಅಷ್ಟರಲ್ಲಿ ಮೂವರೂ ಪಲಾಯನ ಸೂಕ್ತ ಪಠಿಸಿದ್ದರು.

ತಿರುಪತಿಯ ಮಹಂತರು ಮದ್ರಾಸದ ದೇವೋದ್ಧಾರ ಧರ್ಮಾದಾಯ ಬಿಲ್ಲಿನ ವಿರುದ್ಧ ಹಾಯಿಕೋರ್ಟಿನಲ್ಲಿ ದಾವೇ ಮಾಡಿದರು. ಆದರೆ ಮೊನ್ನಿನ ದಿವಸ ಇವರು ದಾವೆಯನ್ನು ತೆಗೆಸಿಕೊಂಡರು.

ಮೈಸೂರ ನಾಡಿನಲ್ಲಿ ರೇಲ್ವೆ ವಿಸ್ತಾರ

—೦—

ಮೈಸೂರ ಸರಕಾರದವರು ತಮ್ಮ ಸಂಸ್ಥಾನದ ದಕ್ಷಿಣ ಭಾಗದಲ್ಲಿ ಈರೋಡ ಮತ್ತು ಮೆಟ್ಟುಪಾಳಯದ ವರೆಗೆ ರೇಲ್ವೆ ಹಾಕುವರು. ಇದರಿಂದ ನೀಲಗಿರಿ ಕೊಯಮುತ್ತೂರಿನ ಪ್ರವಾಸವು ಸನಿಯವಾಗುವದು. ಬರುವ ಹತ್ತು ವರ್ಷಗಳಲ್ಲಿ ಈ ಸಂಸ್ಥಾನದಲ್ಲಾಗುವ ರೇಲ್ವೆ ವಿಸ್ತಾರವು ೮೨೧ ಮೈಲಾಗಿ, ಸಂಸ್ಥಾನಕ್ಕೆ ದೊಡ್ಡ ಆದಾಯದ ಬಾಬತೆಯಾಗುವದು.

ಪೆಕಿಂಗ ರಾಜಧಾನಿಯಲ್ಲಿ ಒಂದೇ ವೇಳೆಯಲ್ಲಿ
೨೧ ಜನರಿಗೆ ಗಲ್ಲು !!!

ಪೆಕಿಂಗದಲ್ಲಿ ೧೨ ಜಪಾನಿ ವಕೀಲರ ಮೇಲೆ ದಾಳಿಯಿಟ್ಟು ಅನೇಕರನ್ನು ದಸ್ತಗಿರಿ ಮಾಡಿದ್ದಾರಷ್ಟೆ; ಇದರಲ್ಲಿ ೪೨ ವರುಷದ ಹಸನಾದ ಚೆಲ್ವಿ ವಕೀಲನು, ಮುಂದೆ ತನ್ನ ಮೇಲೆ ಖಟ್ಲೆ ನಡೆದಾಗ, ಇವನು ವಕೀಲಿ ಕೊಟ್ಟಿದ್ದರು. ಹಾಂಗನೆ, ಲಿನ್ನನು ಹೋಗಾದರೂ ಮಾಡಿ, ಇವನ್ನು ಗಲ್ಲಿಗೆ ಹಾಕಿಸುವ ಸಂಬಂಧವನ್ನು ಕಂಡು ವಕೀಲರ ಖಟ್ಲೆ ನಡೆಸುವದನ್ನು ಬಿಟ್ಟು ಬಿಟ್ಟರು. ಕೋರ್ಟಿನಲ್ಲಿ ಒಟ್ಟು ೨೧ ಜನರಿಗೆ ಉರ್ಲು ಹಾಕಿಸಿ, ಮರಣಕ್ಕೆ ಕೊಂದರು.

ಬ್ರಿಟಿಶ ಸರಕಾರವನ್ನು ಮಣಿಸುವ
ಮಾದರಿಯ ಯುಕ್ತಿಯು.

—೦:೦—

ಬ್ರಿಟಿಶ ಮಂತ್ರಿಗಳು ಸಂಪುಗಳನ್ನು ನುರಿಯುವ ಕಾಯದೆ ಮಾಡತೊಡಗಿದ್ದಾರಷ್ಟೆ; ಇವರು ಬರುವ ತಿಂಗಳಿಂದ ಕಾಯದೆಯನ್ನು ಪಾಸ ಮಾಡಿದರೆ ಕೂಲಿಕಾರರೆಂಬುವರು ತಲೆ ಕುಡಿಯಬಾರದು; ತಂಬಾಕ ಸಿಗರೇಟ ಸೇದಬಾರದು. ಆಂದರೆ ಸರಕಾರಕ್ಕೆ ಬರುವ ಕರ-ಜಕಾತಿಯ ಬಾಯಿಗೆ ಗಡ್ಡಿ ಬಿದ್ದು, ಸರಕಾರವು ತಾನಾಗಿ ಕಾಯದೆಯನ್ನು ರದ್ದು ಮಾಡುವದೆಂದು ಕೂಲಿಕಾರ ಪಕ್ಷದ ಸೋಸಿಯಲ 'ಡೆಮೋಕ್ರೆಟಿಕ'ವೆಂಬ ಪತ್ರ ಹೇಳುತ್ತದೆ.

ಬಂಗಾಲದ ನ್ಯಾಶನಲ ಬ್ಯಾಂಕಿನ ದಿವಾಳೆ ಹೊರಟಿತು. ಇದನ್ನು ೧೯೦೭ ರಲ್ಲಿ ವಂಗಭಂಗದ ಚಳವಳಿಯಲ್ಲಿ ಸ್ಥಾಪಿಸಿದ್ದರು. ದೊಡ್ಡ ದೊಡ್ಡ ಮಹಾರಾಜರು ಸಾಲಿಗಾರರೂ ಡಾಯರೆಕ್ಟರರೂ ಆಗಿದ್ದರು. ಈಗಿನ ಮಂತ್ರಿಯಾದ ಬಿ. ಚಕ್ರವರ್ತಿಯವರು ಚೇರಮನ್ನರಾಗಿದ್ದರು. ಬ್ಯಾಂಕಿನ ದಿವಾಳೆ ಹೊರಡುವದೆಂದು ಮೊದಲೇ ಸುದ್ದಿಯಾಗಿತ್ತು.

ವಿವಿಧ ವರ್ತಮಾನಗಳು

—(೦)—

ಬೆಳಗಾವಿಯಲ್ಲಿ ೫೩ ಜನ ಹಿಂದೂ ಕ್ರೈಸ್ತರು ಪುನಃ ಹಿಂದೂ ಧರ್ಮಸ್ವೀಕಾರ ಮಾಡಿದರು.

ಮುಂಬಯಿಯಲ್ಲಿ ನಾಗದೇವಿಯಲ್ಲಿ ಹಗಲು ಡಾಕೇ ಒಬ್ಬನನ್ನು ತಂಬಿದ ಬೀದಿಯಲ್ಲಿ ಕೊಂದು, ಕೊಲೆಗಾಡರು ಮೋಟರದಲ್ಲಿ ಕೂತು ಪಲಾಯನ ಹೇಳಿಸಿದರು. ಪೋಲಿಸರು ಏಳು ಜನರನ್ನು ದಸ್ತಗಿರ ಮಾಡಿದ್ದಾರೆ.

ನಾಗಪೂರದ ಕಾಯದೆಭಂಗದಲ್ಲಿ ಶಿಕ್ಷೆಯಾದ ಶರಣಾರ್ಥರೂ ಬಿಡುಗಡೆಯಾದರು. ನಾಗರಿಕರು ಸಭೆ ಕರೆದು, ಇವರ ಗೌರವ ಮಾಡಿದರು. ತುರುಂಗದಲ್ಲಿರುವ ತನಕ ಇವರು ಅನ್ನ ತೆಗೆದುಕೊಳ್ಳಲಿಲ್ಲ.

ಡಾಕ್ಟರ ಮುಂಜೆಯವರು ಪಟಕ್ಕೆಯಾಲಿಗೆ ಹೋಗಿ ಮಸೀದೆಗಳ ಮುಂದೆ ವಾದ್ಯ ಬಾರಿಸುವ ವಿಷಯವಾಗಿ ಮುಸಲಮಾನರ ಕರಾರು ರಾಜಿ ಮಾಡಿಕೊಳ್ಳುವದಕ್ಕಾಗಿ ಮಾಡಿದ ಪ್ರಯತ್ನವು ನಿಷ್ಫಲವಾಯಿತು.

ಪಂಡಿತ ಮಾಲವೀಯರು ಕಾಶಿಯಲ್ಲಿದ್ದಾರೆ. ಹಿಮಾಲಯದಲ್ಲಿ ಎರಡು ತಿಂಗಳು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರು ಅಭಿಪ್ರಾಯಪಟ್ಟಿದ್ದಾರೆ.

ಎಪ್ರಿಲ ತಿಂಗಳ ೩೭ನೆಯ ತಾರೀಖಿಗೆ ಮುಗಿಯುವ ಒಂದು ವಾರದಲ್ಲಿ ಕರ್ನಾಟಕದಲ್ಲಿ ೧೪೨೧ ಜನರಿಗೆ ಮಾರಿಕಾ ಬಂದು, ೬೧೭ ಜನರು ಸತ್ತರು. ಹಿಂದಿನ ವಾರದಲ್ಲಿ ಮರಣ ಸಂಖ್ಯೆಯು ೬೨೧ ಆಗಿತ್ತು.

ತಮ್ಮ ನಾಡಿಗೆ ಮಹಾತ್ಮರು ಬಂದಾಗ, ಅವರಿಗೆ ೩೦ ಸಾವಿರ ರೂಪಾಯಿಗಳ ಕಾಣಿಕೆ ಕೊಡಬೇಕೆಂದು ಓರಿಸಾದ ಕಾಂಗ್ರೆಸ ಕಮೀಟಿಯು ಠರಾವು ಮಾಡಿದ್ದಾರೆ.

ದಿಲ್ಲಿಯಲ್ಲಿ ದೊಡ್ಡ ದೊಡ್ಡ ಸಂಸ್ಥಾನಗಳ ದಿವಾನರದೊಂದು ಪರಿಷತ್ತು ಕೂಡುವದು. ಇದಕ್ಕಾಗಿ ಮೈಸೂರಿನ ದಿವಾನರು ಪ್ರಯಾಣ ಬೆಳೆಸಿದ್ದಾರೆ.

ಕಾಲರಾ ಪಿಲ್ಸ

ಕಾಲರಾ (ಮಾರಿಕಾ) ರೋಗದ ಮೇಲೆ ಈ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೮೭೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು ಇಂಥ ಅಮೌಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು- ೩೫ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ ಪತ್ತಾ:- ಮ್ಯಾ. ಆಯುರ್ವೌಷಧಿ ಕಾರಖಾನಾ ಕಿತ್ತೂರ, ಪೋ. ಕಿತ್ತೂರ ಜಿ, ಬೆಳಗಾವ

ತಿಳಿಗನ್ನಡ **ನವನೀತ** ಮಾಸ ಪತ್ರಿಕೆ

ಸಂಪಾದಕ- ಪಂಡಿತ ಚನ್ನಬಸಪ್ಪ ಕವಲಿ.

ಸಮಾಜದ ಸರ್ವಾಂಗ ಸುಂದರ ಉನ್ನತಿಗೆ ತಕ್ಕವಾದ ಎಲ್ಲ ಬಗೆಯ ಲೇಖಗಳೂ ಬರುವವು. ವರ್ಷಕ್ಕೆ ೨ ಸಾಮಾಜಿಕ ನಾಟಕ ಕಾದಂಬರಿಗಳು ಪೂರ್ಣವಾಗುವವು. ವಾ. ವ. ಮೂರು ರೂಪಾಯಿ.

ಪತ್ತೆ
ನವನೀತ ಕಾರ್ಯಾಲಯ ಬ್ಯಾಡಗಿ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಕಾಯ್ದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಯುವದು. ಕಾಯಿಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

[illegible] ವರ್ಗಣೀ ದರ

ನಿತ್ಯ ಪತ್ರಕ್ಕೆ

೩ ತಿಂಗಳಿಗೆ	೧೨—೮—೦ ರೂ
"	೬—೦—೦ ರೂ
"	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚು ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ [illegible] ಧಾರವಾಡ.

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರಕಿದ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.
೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible]

ಎ. ಬಿ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಸಹಾಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ [illegible] ಧಾರವಾಡ

ಈ ಪತ್ರವನ್ನು [illegible] ಧಾರವಾಡದಲ್ಲಿಯ ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿ[illegible]

R.N. B. 1443

ವಿಜಯ

ನಿತ್ಯ ಪತ್ರ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮। ಧಾರವಾಡ ಸೋಮವಾರ ತಾರೀಖು ೨ನೇ ಮೇ ೧೯೨೨ । ಸಂಚಿಕೆ ೮೯

ಚಿಂಚಲಿಯ ಜಾತ್ರೆ ನಿಂತಿತು.

ಯಾವತ್ತು ಜನರಿಗೆ ಈ ಜಾಹೀರ ಪತ್ರಿಕೆಯಿಂದ ತಿಳಿಸುವದೇನಂದರೆ—

ಪ್ರತಿ ವರ್ಷ ಗದಗ ತಾಲೂಕ ಚಿಂಚಲಿ ಗ್ರಾಮದಲ್ಲಾಗುತ್ತಿರುವಂತೆ ಈ ವರ್ಷ ತಾರೀಖು ೬—೫—೧೯೨೨ ನೆಯ ದಿವಸ ಆಗಬೇಕಾಗಿದ್ದ ಶ್ರೀ. ಬಸವೇಶ್ವರರ ಜಾತ್ರೆ ಮತ್ತು ಅದರ ಕೂಡ ಆಗುತ್ತಿರುವ ಒಕ್ಕಲತನದ ಹಾಗು ದನಗಳ ಪ್ರದರ್ಶನವನ್ನು ನಾಲ್ಕು ಕಡೆಗೆ ಮಾರಿಕಾ ಬೇನೆಯು ಹಬ್ಬಿರುವದರಿಂದ, ಮೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟಸಾಹೇಬ ಬಹಾದ್ದೂರ ಧಾರವಾಡ ಇವರ ಪತ್ರಪ್ರಕಾರ ನಿಲ್ಲಿಸಲ್ಪಟ್ಟಿದೆ. ಆದರಿಂದ ಯಾರೂ ಜಾತ್ರೆ ಅಥವಾ ಪ್ರದರ್ಶನಕ್ಕೆ ಬರಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಳೆಯಾದನಂತರ ಜಾತ್ರೆ ಮಾಡುವ ವಿಚಾರವಿದ್ದು, ಆ ದಿವಸವನ್ನು ಯೋಗ್ಯ ವೇಳೆಯಲ್ಲಿ ಜಾಹೀರ ಮಾಡುವೆನು.

ಮಹಾದೇವಪ್ಪಾ ಬಸಪ್ಪಾ ಕತ್ತಿ,
ಚೇರಮನ ಸ್ವಾಗತ ಕಮಿಟಿ.

ಜಾಹೀರ ನೋಟೀಸು.

ಸಾಂಗಲಿಸಂಸ್ಥಾನ ಪೈಕಿ ಶಿರಹಟ್ಟಿ ಶ್ರೀಫಕೀರಸ್ವಾಮಿಗಳ ಸಂಸ್ಥಾನ ಮಠದ ವಹಿವಾಟು ಮುಖ್ತ್ಯಾರ ಇವರಿಂದಾ—

ಈ ಜಾಹೀರ ನೋಟೀಸಿನಿಂದ ಸರ್ವರಿಗೂ ತಿಳಿಸುವದೇನಂದರೆ- ಶಿರಹಟ್ಟಿಯು ಆಜೂಬಾಜು ಗ್ರಾಮಗಳಲ್ಲಿ ಮಹಾಮಾರಿಕಾ ರೋಗವು ಇರುವದರಿಂದಲೂ ಇಲ್ಲಿ ನೀರಿನ ಪೂರವಠೆಯು ಕಡಿಮೆ ಇರುವದರಿಂದಲೂ ಈ ವರ್ಷ ಜಾತ್ರೆಯನ್ನು ಬಂದ ಇಡುವದರ ದೆಸೆಯಿಂದ ಶ್ರೀಮಂತ ಸರಕಾರ ಸಾಂಗಲಿ ಇವರಿಂದ ಹುಕುಂ ಬಂದಿರುವದು. ಆದರಿಂದ್ದ ಶ್ರೀ ಫಕೀರಸ್ವಾಮಿಗಳ ಜಾತ್ರೆಗೆ ಬರತಕ್ಕವರು ಹಾಗೂ ಶ್ರೀಗಳವರ ಆಶೀರ್ವಾದ ಪಡೆಯತಕ್ಕವರು ಈ ವೈಶಾಖ ಪೌರ್ಣಿಮೆಗೆ ಬರಬಾರದು ಹಿಂದಿನಂತೆ ಸವಡಿ ಪ್ರಕಾರ ಬರತಕ್ಕದ್ದು. ತಿಳಿಯುವದು.

ಶಿರಹಟ್ಟಿ ೨೯—೪—೨೨ } ವಿರುಪಾಕ್ಷಶಾಸ್ತ್ರಿ ಉಪಾಧ್ಯಾಯ ಸಂದಿಗಿವಾಡಮಠ ವಹಿವಾಟು ಮುಖ್ತ್ಯಾರ ಸಂಸ್ಥಾನಮಠ ಶಿರಹಟ್ಟಿ.

ಹೊಲದ ಮಾರಾಟ.

ಬಮ್ಮಿಗಟ್ಟಿ ತಾಲೂಕಾ ಧಾರವಾಡ ಸಂಸ್ಥಾನ ಕುಂದಗೋಳದಲ್ಲಿರುವ ನನ್ನ ಹೊಲದ ಮಾಲಕಿಯು ಮತ್ತು ವಹಿವಾಟಿಯ ಬಾಬು ಸ. ನಂ. ೩೫೨ ಎಕರೆ ೨೦-೩೦ ಆಕಾರ ರೂ. ೮೯ ದ್ರಾರಾ ಎರಡು ಹಿಸ್ಸೆ ಇದ್ದದ್ದನ್ನು ಮಾರಾಟ ಮಾಡತಕ್ಕವರಿದ್ದೇವೆ. ತೆಗೆದುಕೊಳ್ಳತಕ್ಕವರು ಕೆಳಗೆ ಸಹೀ ಮಾಡಿದವರನ್ನು ಸ್ವತಃ ಕಂಡು ಅಥವಾ ಪತ್ರವ್ಯವಹಾರ ಮಾಡಿ, ಬೇಕಾದ ಮಾಹಿತಿ ಪಡಕೊಂಡು ವ್ಯವಹಾರ ಮಾಡಬಹುದು ತಿಳಿಯುವದು ತಾ॥ ೨೦-೪-೨೨ನೇ ಇಸ್ವಿ

ರಾಘವೇಂದ್ರ ಶ್ರೀನಿವಾಸ ನಾಯಿಕ
C/o ವಿಜಯ ಆಫೀಸ, ಧಾರವಾಡ.

ಜಾಹೀರಾತು.

ಮಡಿವಾಳ ಹುಕುಮ ನಂಬರ ೧೭೧ / ೭-೫-೧೯೨೨

ನೇ ಪ್ರಕಾರ ಇನ್ನು ಮುಂದೆ ನನ್ನ ಹೆಸರು ಈ ವರೆಗೆ ನಾಗೇಶ ಗೋವಿಂದ ಕುಲಕರ್ಣಿ ಎಂದಿದ್ದನ್ನು ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇಸಾಯಿ ತಾಳಾ ಹೆಸ್ಕ ಮೂಸ್ಕರ ಮುತ್ತಗಿ ಎಂದು ದುರಸ್ತ ಮಾಡಿದೆ ಆದ ಕಾರಣ ಯಾವತ್ತು ಜನರು ನನ್ನ ಮೊದಲಿನ ಹೆಸರು ಬಿಟ್ಟು ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇಸಾಯಿ ತಾಳಾ ಹೆಸ್ಕಮೂಸ್ಕರ ಎಂಬ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬೇಕು ತಿಳಿಯುವದು. ತಾ॥ ೭-೪-೨೨.

ಸಹಿ ನಾಗಪ್ಪಯ್ಯಾ ಗೋವಿಂದಪ್ಪಯ್ಯಾ ದೇಸಾಯಿ, ತಾಳಾ ಹೆಸ್ಕಮೂಸ್ಕರ ಮುತ್ತಗಿ ತಾ. ಬಾಗಲಕೋಟ

ವಿಜಯ.

ಧಾರವಾಡ ತಾ- ೨-೫-೨೭ ನೇ ಇಸ್ವಿ

ವರ್ಷ ವರ್ಷಕ್ಕೆ ಅಧ್ಯಕ್ಷರನ್ನು ಆರಿಸುವ ಠರಾವು.

ಹೋದ ವಾರದಲ್ಲಿ ಬೆಳಗಾವಿ ಮ್ಯುನಿಸಿಪಾಲಿಟಿಯು ಜನರಲ ಕಮಿಟಿ ಕೂಡಿ, ಪ್ರತಿವರ್ಷ ಹೊಸಬರಿಗೆ ಅಧ್ಯಕ್ಷ ಉಪಾಧ್ಯಕ್ಷರನ್ನು ಆರಿಸಬೇಕೆಂಬ ಠರಾವು ಪಾಸ ಮಾಡಿದ್ದಲ್ಲದೆ, ಆ ಪ್ರಕಾರ ಇವರೀರ್ವರನ್ನು ಆರಿಸಿದರು. ಇಂಥ ಪದ್ಧತಿಯು ಮುಂಬಯಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲುಂಟು. ಈ ಪದ್ಧತಿಯಿಂದ ಮೆಂಬರಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗುವ ಯೋಗ್ಯತೆಯುಳ್ಳವರೆಲ್ಲ ಈ ಅಧಿಕಾರ ನೋಡುವ ಸಮಯ ಬರುವದು. ಇದರಿಂದ ಪರೋತ್ಕರ್ಷಾಸಹಿಷ್ಣುತೆಯು ಎಷ್ಟೂ ಹುಟ್ಟಲಾರದು. ಯಾರೊಬ್ಬರು ತಾವು ಪ್ರೆಸಿಡೆಂಟರಾಗಬೇಕೆಂದು ದುರಿಚ್ಛೆಯುಳ್ಳವರಾದರೆ ಅದು ವ್ಯಕ್ತಿ ಸಂಬಂಧವಾಗುವದು.

ಪ್ರತಿವರ್ಷ ಹೊಸ ಅಧ್ಯಕ್ಷರನ್ನಾರಿಸುವ ಪದ್ಧತಿಯಿಂದ ಮುಂಬಯಿಯಲ್ಲಿ ಎಲ್ಲ ಜಾತಿಯವರು ಅಧ್ಯಕ್ಷ ಪದದ ಉಪಭೋಗ ಮಾಡಿದರು ಅಲ್ಲಿಬ್ರಾಹ್ಮಣ- ಬ್ರಾಹ್ಮಣೇತರವಿಲ್ಲ. ಆದರೂ ಪ್ರತಿಯೊಂದು ಜಾತಿಗೆ ಬಹುಮಾನವೆಂದು ಒಂತಿಗೆಯಿಂದ ಹಿಂದೂ, ಮುಸಲ್ಮಾನ, ಕ್ರಿಶ್ಚನ್ನ, ಪಾರ್ಸಿ, ಇವರೆಲ್ಲ ಮೊದಲಾದವರನ್ನು ಆರಿಸುತ್ತಾ ಬಂದರು. ಈ ತರದ ವ್ಯವಸ್ಥೆಯಿಂದ ಅಲ್ಲಿ ಜಾತ್ಯಭಿಮಾನದ ಸೊಂಕವು ಯಾರನ್ನೂ ಬಡಕೊಳ್ಳಲಿಲ್ಲ.

ಕರ್ನಾಟಕ ಪ್ರಾಂತದಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರ ಪೈಕಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಪದಕ್ಕಾಗಿ ಇವೆರಡೂ ಪಂಗಡಗಳಲ್ಲಿ ಅನೇಕರಿಂದ ಸ್ಪರ್ಧೆಯಾಗುವದು. ಇದು ದ್ವೇಷಾಸೂಯೆಗಳಲ್ಲಿ [illegible] ಪರಿಣಮಿಸುವದು. ಬ್ರಾಹ್ಮಣ-ಬ್ರಾಹ್ಮಣೇತರರಲ್ಲಿರುವ ದ್ವೇಷವನ್ನಳಿಯಬೇಕೆಂದು ವಿವಿಧ ರೀತಿಯಿಂದ ಪ್ರಯತ್ನಗಳಾಗಿರುತ್ತವೆ. [illegible] ತಂಗಳುಗಳು ಸರಕಾರೀ ಕೆಲಸಗಳಿಗಿಂತಲೂ, ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳಾಗಿರುತ್ತವೆ. ಪ್ರತಿವರ್ಷ ಚುನಾವಣೆಯಿಂದ ಅಧ್ಯಕ್ಷ ಉಪಾಧ್ಯಕ್ಷರನ್ನು ಚುನಾವಣೆ ಮಾಡುವದರಿಂದ, ಬ್ರಾಹ್ಮಣ- ಬ್ರಾಹ್ಮಣೇತರರಲ್ಲಿ, ಹಿಂದೂ ಮುಸಲಮಾನರಲ್ಲಿಯೂ ಐಕ್ಯಭಾವವು ಬೆಳೆಯುವದು;

ಅಲ್ಪ ಸಂಖ್ಯಾಕರಿಗಂತೂ ಇದರಿಂದ ಹೆಚ್ಚು ಹಿತವಾಗುವದುಂಟು. ಕರ್ನಾಟಕದಲ್ಲಿ ಯಾವದೇ ಮ್ಯುನಿಸಿಪಾಲಿಟಿಯನ್ನು ನೋಡಿರಿ. ಅಲ್ಲಿ ಅಲ್ಪ ಸಂಖ್ಯಾಕರಾಗಿರುವಂಥ ಕ್ರಿಶ್ಚನ್- ಪಾರ್ಸಿ ಮೊದಲಾದವರು ದೊಡ್ಡ ದೊಡ್ಡ ಹುದ್ದೆಯ ಸ್ಥಳಗಳ ಆಶೆ ಮಾಡುವಂತಿಲ್ಲ. ಅವರು ಎಷ್ಟೇ ಕಾರ್ಯ ಕರ್ತೃತ್ವಶಾಲಿಗಳಾದರೂ, ಜಾತ್ಯಾಭಿಮಾನದ ದೆಸೆಯಿಂದ ಬೆಂಬಲವಿರದ ಮೂಲಕ ಅವರು ಕಡೆತನಕ ಬರೇ ಮೆಂಬರರಾಗಿ ಉಳಿಯುವರು. ಒಂದು ವರ್ಷದ ಪದ್ಧತಿಯಿಂದ ಇವರಿಗೆ ಸಹ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗುವ ಸುಯೋಗ ಬರುವದು. ಆದುದರಿಂದ ಬೆಳಗಾವಿಯ ಮ್ಯುನಿಸಿಪಾಲಿಟಿಯಂತೆ ಉಳಿದ ಮ್ಯುನಿಸಿಪಾಲಿಟಿ ಲೋಕಲಬೋರ್ಡುಗಳೂ ಇವರನ್ನು ಒಂದೊಂದೇ ವರ್ಷದವರೆಗೆ ಆರಿಸುವ ವ್ಯವಸ್ಥೆ ಮಾಡಿಕೊಳ್ಳಬೇಕೆಂದೂ, ಈ ಮೂಲಕ ಜಾತಿಭೇದದ ಬಂಧನವನ್ನು ಮುರಿಯಬೇಕೆಂದೂ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ನಿಬಂಧ ವಾಚನ.

ಕಲ್ಲಾಪುರದ ಶ್ರೀಮಂತ ದೇಸಾಯಿ ನರಸಿಂಗರಾಯರು ಸ್ಥಾನಿಕ ಸ್ವರಾಜ್ಯದ ಸಭೆಯಲ್ಲಿ ಓದಿದ ನಿಬಂಧವು.

ಅಧ್ಯಕ್ಷರೇ ಮತ್ತು ಬಂಧುಗಳೇ,

ತಾಲೂಕ ಲೋಕಲ ಬೋರ್ಡ ಕಮಿಟಿಗೆ ಈಗ ಇರತಕ್ಕ ಅಧಿಕಾರವೆಷ್ಟು ಮತ್ತು ಇನ್ನು ಎಷ್ಟು ಹೆಚ್ಚು ಅಧಿಕಾರವನ್ನು ಮಾಡಬೇಕೆಂಬ ಬಗ್ಗೆ ನಿಮ್ಮ ಮುಂದೆ ನನ್ನ ಅಭಿಪ್ರಾಯವನ್ನು ಇಡುತ್ತೇನೆ.

ಈಗ ಇರುವ ಪರಿಸ್ಥಿತಿಯನ್ನು ವಿಚಾರ ಮಾಡಿದರೆ ತಾಲೂಕ ಬೋರ್ಡ ಅಂದರೆ ಒಂದು ಎಳ್ಳಷ್ಟಾದರೂ ಸ್ವತಂತ್ರತೆಯುಳ್ಳ ಸಂಸ್ಥೆಯಾಗಿರದೆ ಕೇವಲ ಜಿಲ್ಲಾ ಬೋರ್ಡಿನ ಕೈಕೆಳಗಿನ ಸಂಸ್ಥೆಯಾಗಿರುತ್ತದೆ. ಯಾವದೇ ಬೋರ್ಡಿನ ಕೆಲಸವೆಂದರೆ ಗ ಬಜೆಟ್ಟು ಪಾಸ ಮಾಡುವದು ೨ ಬೋರ್ಡಿನ ನವಕರಿ ಸೇವಕರ ನಗ್ರತೆ ವ್ಯವಸ್ಥೆ ಮಾಡುವದು ೩ ಬಜೆಟ್ಟಿನಲ್ಲಿ ಪಾಸಾದ ಕೆಲಸಗಳ ಬಿಲ್ಲು ಪಾಸು ಮಾಡುವದು ೪ ಆ, ಎ. ಪತ್ರಿಕೆ ಪಾಸ ಮಾಡುವದು ೫ ಟಿ. ಎ. ಬಿಲ್ಲುಗಳನ್ನು ಪಾಸ ಮಾಡುವದು, ೬ ಬೋರ್ಡಿನ ಮೆಂಬರ ವ ನವಕರ ಜನರೊಳಗೆ ಆಡಳಿತ ನೋಡುವದು, ಮುಂತಾದ್ದು.

ಈ ಪ್ರಕಾರ ಇರತಕ್ಕ ೫-೬ ಕೆಲಸಗಳಲ್ಲಿ ಒಂದರಲ್ಲಾದರೂ ತಾಲೂಕ ಬೋರ್ಡಿಗೆ ಪೂರ್ಣ ಸ್ವತಂತ್ರವಿಲ್ಲ. ಪ್ರತಿ ಒಂದು ಕೆಲಸದಲ್ಲಿ ಜಿಲ್ಲಾ ಬೋರ್ಡಿನ ಅನುಮತಿ ತೆಗೆದುಕೊಳ್ಳಬೇಕಾಗುವದು. ಇದು ಈಗಿನ ಸ್ಥಿತಿ ಇರುತ್ತದೆ.

ಇದೆಲ್ಲ ಯಾಕೆ ಇರಬೇಕು? ಚನ್ನಾಗಿ ವಿಚಾರ ಮಾಡಿ ನೋಡಿದರೆ ತಾಲೂಕ ಬೋರ್ಡಿನ ಮೆಂಬರರಿಗೂ ಜಿಲ್ಲಾ ಬೋರ್ಡಿನ ಮೆಂಬರರಿಗೂ ಏನೂ ಹೆಚ್ಚು ಕಡಿಮೆ ಕಂಡು ಬರಲಾರದು. ಹೀಗಿರುತ್ತ ತಾಲೂಕಿನ ಮೇಲೆ ಜಿಲ್ಲಾ ಬೋರ್ಡಿನ ಅನಿಯಂತ್ರಿತ ಅಧಿಕಾರವು ಯಾಕೆ ಇರಬೇಕು? ಮತ್ತು ತಾಲೂಕಿಗೆ ಒಪ್ಪಿಸಿಕೊಟ್ಟ ೫-೬ ಸಾವಿರ ರೂಪಾಯಿಯ ವ್ಯವಸ್ಥೆ ಮಾಡಿಕೊಳ್ಳಲಿಕ್ಕೆ ಆ ಬೋರ್ಡ ಸಮರ್ಥವಿಲ್ಲವೆಂದು ತಿಳಿಯಬೇಕೋ ಹ್ಯಾಗೆ? ತಾಲೂಕ ಬೋರ್ಡಿನ ಮೆಂಬರರಿಂತಲೂ ಜಿಲ್ಲಾ ಬೋರ್ಡಿನ ಮೆಂಬರರಿಗೆ ಏನಾದರೂ ವಿದ್ಯಾವಿಷಯಕ ಹೆಚ್ಚಿನ ಯೋಗ್ಯತೆ ಇರಬೇಕೆಂಬ ನಿಯಮವಿದೆಯೋ ಹ್ಯಾಗೆ? ಅದೇನೂ ಇಲ್ಲ. ತಾಲೂಕ ಬೋರ್ಡಿನ ಮೆಂಬರನಾಗುವಷ್ಟು ಕಲಿತವನೂ ಜಿಲ್ಲಾ ಬೋರ್ಡಿಗೂ ಮೆಂಬರನಾಗುವನು. ಅಂದ ಮೇಲೆ ಅವನು ಜಿಲ್ಲಾ ಬೋರ್ಡಿನ ಕಚೇರಿಯಲ್ಲಿ ಕೂತು ತಾಲೂಕ ಬೋರ್ಡಿನ ಮೆಂಬರನ ಮೇಲೆ "ತಾಲೂಕ ಬೋರ್ಡಿನ ಮೇಲೆ" ಟೀಕಾ ಮಾಡುವ ಅಧಿಕಾರವು ಯಾಕೆ ಇರಬೇಕು? ಮತ್ತು ತಾಲೂಕ ಬೋರ್ಡಿನಲ್ಲಿ ಪಾಸಾದಂಥ ಠರಾವುಗಳನ್ನು ಯಾತಕ್ಕೂ ಲಕ್ಷಿಸದೇ ಅವನ್ನು ರದ್ದು ಮಾಡುವ ಥ ಇಲ್ಲವೇ ಸದ್ಯದಲ್ಲಿ ತಹಕೂಬ ಮಾಡುವಂಥ ಠರಾವುಗಳನ್ನು ಜಿಲ್ಲಾ ಬೋರ್ಡಿನಲ್ಲಿ ಮಾಡಿ ಕಳಿಸುತ್ತಾರೆ. ಅಂದ ಮೇಲೆ ತಾಲೂಕಿನಲ್ಲಿ ಜನರಿಂದ ಆರಿಸಿದ ಕಮಿಟಿ ಮೆಂಬರು ಪಬ್ಲಿಕಿನಿಂದ ಪಾಸ ಮಾಡಿದ್ದರ ಅರ್ಥವೇನು? ಇವನ್ನೆಲ್ಲ ವಿಚಾರ ಮಾಡಿ ತಾಲೂಕ ಬೋರ್ಡಿಗೆ ತನ್ನ ಬಜೆಟ್ಟನ್ನು ಆರ್. ಎ. ಪತ್ರಿಕೆಗಳ [illegible] ನ್ನು ವಹಿವಾಟಿನ ಪ್ರಕಾರ ಪಾಸು ಮಾಡಿಕೊಳ್ಳಲಿಕ್ಕೆ ತನ್ನ ನವಕರರ ವ್ಯವಸ್ಥೆಯನ್ನು ತಾನು ಮಾಡಿಕೊಳ್ಳಲಿಕ್ಕೂ ಮೊದಲಾದ ಮೇಲೆ ವಿವರಿಸಿದ ಯಾವತ್ತು ಅಧಿಕಾರಗಳನ್ನು ನಡಿಸಿಕೊಳ್ಳಲಿಕ್ಕೆ ಪೂರ್ಣ ಸ್ವಾತಂತ್ರ್ಯ ಕೊಟ್ಟು ಜಿಲ್ಲಾ ಬೋರ್ಡಿನಿಂದ ಸ್ವತಂತ್ರ ಮಾಡಬೇಕು. ತಹಸೀಲ ಅಮಲದಾರರೂ ಇಂಥ ಠರಾವು ಹ್ಯಾಗೂ ನಜರು ಇಡುವವರು ಇದ್ದೇ ಇರುತ್ತಾರೆ. ಅಂದ ಮೇಲೆ ಜಿಲ್ಲಾ ಬೋರ್ಡಿನ ಅಧಿಕಾರವು ತಾಲೂಕಿನ ಮೇಲೆ ಅನವಶ್ಯಕವಿರುತ್ತದೆ. ಇನ್ನೂ ಕೆಲವಟ್ಟಿಗೆ ಅಧಿಕಾರವಿರಬೇಕೆಂದು ನಿಮ್ಮ

ಅಭಿಪ್ರಾಯವಿದ್ದರೆ ಕೆಲವು ವಿಟ್ಟಿಗಾದರೂ ಅಂದರೆ ಬಜೆಟ್ಟು ಮತ್ತು ಆರ್. ಎ. ಪತ್ರಿಕೆಗಳನ್ನು ಪಾಸು ಮಾಡುವ ಕಾಲದಲ್ಲಿ ೫೦೦ ರೂಪಾಯಿಗಳ ವರೆಗೆ ದರ ತಿಂಗಳಿಗೆ ೨೦-೨೫ ರೂಪಾಯಿ ಪಗಾರದ ನವಕರರನ್ನು ನೇಮಿಸಿಕೊಳ್ಳಲಿಕ್ಕಾದರೂ ಫತ್ತೇದ ಬಿಲ್ಲುಗಳನ್ನು ಪಾಸು ಮಾಡಲಿಕ್ಕಾದರೂ ಇವೇ ಮೊದಲಾದ ಕೆಲಸಗಳಲ್ಲಿ ಏನಾದರೊಂದು ಪ್ರಮಾಣದ ವರೆಗೆ ಅಧಿಕಾರ ಕೊಡಬೇಕು. ಮತ್ತು ಬೋರ್ಡಿನ ಅಂತರ್ವ್ಯವಸ್ಥೆಯಲ್ಲಿ ಜಿಲ್ಲಾ ಬೋರ್ಡಿನವರು ಯಾವ ರೀತಿಯಿಂದಲೂ ಕೈ ಹಾಕಬಾರದು. ಮತ್ತು ತಾಲೂಕ ಬೋರ್ಡ ಎಂದರೆ ತಮ್ಮ ಕೈಕೆಳಗಿನ ಎಂಥದೋ ಒಂದು ಕಲ್ಪನೆಯನ್ನು ತೆಗೆದು ಹಾಕಿ ತಮ್ಮ ಸರಿ ಯೋಗ್ಯತೆಯ ಸಂಸ್ಥೆ ಎಂಬ ಭಾವನೆಯಿಂದ ನಡೆಯಬೇಕೆಂದು ಜಿಲ್ಲಾ ಬೋರ್ಡಿಗೆ ಈ ಕಾನಫರನ್ಸಿನವರು ಶಿಫಾರಸ ಮಾಡಬೇಕು

ತಾಲೂಕ ಬೋರ್ಡಿನ ಪ್ರೆಸಿಡೆಂಟರ ಅಧಿಕಾರದ ವಿಷಯಕ್ಕೆ ವಿಚಾರ ಮಾಡಿದರೆ ಹೆಸರಿಗೆ ಕೂಡ ಯಾವ ಅಧಿಕಾರವೂ ಇರುವದಿಲ್ಲ. ಜಿಲ್ಲಾ ಬೋರ್ಡಿನ ರೂಲ್ಸುಗಳನ್ನು ನೋಡಿದರೆ ಅದರಲ್ಲಿ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಿಗೆ ತಮ್ಮ ಬೋರ್ಡಿನ ಬಗ್ಗೆ ಕೊಡಲ್ಪಟ್ಟ ಯಾವ ಅಧಿಕಾರವೂ ತನ್ನ ತಾಲೂಕಿನ ಬಗ್ಗೆ ತಾಲೂಕ ಬೋರ್ಡಿನ ಪ್ರೆಸಿಡೆಂಟರಿಗೆ ಕೊಟ್ಟಿಲ್ಲ. ಅವುಗಳ ಬಗ್ಗೆ ಜಿಲ್ಲಾ ಬೋರ್ಡಿನ ರೂಲ್ಸ ನೋಡಬೇಕು.

ಇವೆಲ್ಲ ಬಾಬುಗಳಲ್ಲಿ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಿಗೆ ತಮ್ಮ ಬೋರ್ಡಿನ ವಿಟ್ಟಿಗೆ ಎಷ್ಟು ಅಧಿಕಾರ ಕೊಟ್ಟಿರುತ್ತದೆಯೋ ಅಷ್ಟೇ ಅಧಿಕಾರವು ತಾಲೂಕ ಬೋರ್ಡಿನ ಪ್ರೆಸಿಡೆಂಟರಿಗೆ ಅವರವರ ತಾಲೂಕಿನ ವಿಟ್ಟಿಗೆ ಕೊಡಬೇಕು. ಯಾಕೆಂದರೆ ಆರಿಸಿ ಬಂದಂಥ ಪ್ರೆಸಿಡೆಂಟನೆಂದರೆ ಅವನು ಯೋಗ್ಯತೆ ಇದ್ದವನೇ ಇರುತ್ತಾನೆ ಮತ್ತು ಜವಾಬ್ದಾರನೇ ಇರುತ್ತಾನೆ. ಕಾರಣ ಪ್ರೆಸಿಡೆಂಟ ಈ ಹೆಸರಿಗೆ ಶೋಭಿಸತಕ್ಕಷ್ಟು ಅಧಿಕಾರವಾದರೂ ಅವನಿಗೆ ಇರಲಿಕ್ಕೆ ಬೇಕು. ಇನ್ನೆಲ್ಲ ತಾವು ವಿಚಾರ ಮಾಡಿ ತಾಲೂಕ ಬೋರ್ಡಿನ ಪ್ರೆಸಿಡೆಂಟರಿಗೆ ಇವೆಲ್ಲ ಬಾಬುಗಳಲ್ಲಿ ಕೆಲ ವಿಟ್ಟಿಗೆ ಅಧಿಕಾರ ಕೊಡಬೇಕೆಂದು ಈ ಕಾನಫರನ್ಸು ಶಿಫಾರಸ ಮಾಡಬೇಕೆಂದು ನನ್ನ ವಿನಂತಿ ಅದೆ;

ಎಸ್. ಎಸ್. ದೇಸಾಯಿ

ಧಾರವಾಡ-

ಮುಂದಿನ ವರ್ಷ ಕರ್ನಾಟಕ ಸ್ಥಾನಿಕಸ್ವರಾಜ್ಯಗಳ ಪರಿಷತ್ತು ವಿಜಾಪೂರದಲ್ಲಿ ಕೂಡಬೇಕೆಂದು ಗೊತ್ತಾಗಿದೆ.

ಕಾಂಗ್ರೆಸ ಪಕ್ಷದ ಜಯ.

—೦—

ಕಲಕತ್ತೆಯಲ್ಲಿ ಅಲ್ಲಿಯ ಕೌನ್ಸಿಲದ ಜಾಗೆಯಿಂದ ಉಪಚುನಾವಣೆಯಾಯಿತು. ಅದರಲ್ಲಿ ಸ್ವರಾಜ್ಯ ಪಕ್ಷೀಯನೇ ಜಯ ಹೊಂದಿದನು. ಆನಂತರ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಚುನಾವಣೆಯಾಯಿತು. ಸೇನಗುಪ್ತರನ್ನು ಸೋಲಿಸಬೇಕೆಂದು ಪ್ರತಿಯೋಗಿ ಸಹಕಾರಿಗಳು ಜಂಗು ಕಟ್ಟಿದರು. ಯುರೋಪಿಯನ್ನ ಮತ್ತು ಬಹುತೇಕ ಮುಸಲಮಾನರು ಇವರ ವಿರುದ್ಧ ಸಡ್ಡು ಹೊಡೆದು ನಿಂತರು. ಆದರೂ ಬಹುಮತದಿಂದ ಶ್ರೀ. ಸೇನಗುಪ್ತರೇ ಜಯ ಹೊಂದಿದರು.

ಚೀಫ ಆಫೀಸರರಿಗೂ ಮೆಂಬರರಿಗೂ ಕದನ.

—೦—

ಮ್ಯುನಿಸಿಪಾಲಿಟಿಯಲ್ಲಿ ಚೀಫ ಆಫೀಸರರ ಹಕ್ಕು ಮತ್ತು ಮೆಂಬರರ ಮೇಲೆಯೋ ಎಂಬ ಮಹತ್ವದವಾದ ಪ್ರಶ್ನೆ ಹೊರಟಿದೆ. ಒಬ್ಬ ಮೆಂಬರರು ಮ್ಯುನಿಸಿಪಾಲಿಟಿಯ ಕಾಗದ ಪತ್ರಗಳನ್ನು ನೋಡಲಿಕ್ಕೆ ಹೋದರು. ಚೀಫ ಆಫೀಸರರು ಇವರಿಗೆ ಆ ಕಾಗದವನ್ನು ತೋರಿಸುವದಿಲ್ಲೆಂದು ಹೇಳಿದ್ದಲ್ಲದೆ, ಕೈಕೆಳಗಿನವರಿಗೆ ತೋರಿಸಬೇಡಿರೆಂದು ಹುಕುಮು ಮಾಡಿದರು. ಚೀಫ ಆಫೀಸರರ ಕೃತ್ಯವು ಬೇಕಾಯದೆಶೀರ ಮತ್ತು ಅಪಮಾನಕಾರಕವಾಗಿರುತ್ತದೆಂದು ಆ ಮೆಂಬರನು ಅಂದುಕೊಂಡು, ಚೀಫ ಆಫೀಸರರಿಗೆ ಕ್ಷಮೆ ಬೇಡಿಕೊಳ್ಳಬೇಕೆಂಬ ನೋಟೀಸು ಕೊಟ್ಟಿರುತ್ತಾನೆ. ಕ್ಷಮೆ ಬೇಡಿಕೊಳ್ಳದಿದ್ದರೆ ಮೆಂಬರನು ಇವರ ಮೇಲೆ ಫಿರ್ಯಾದಿ ಮಾಡುವನು.

ಇವನೆಂಥ ಮಾರವಾಡಿಯು.

—೦—

ಖಿಲಾಫತ ಕಮಿಟಿಯವರು ಖಿಲಾಫತ ಫಂಡಿಗಾಗಿ ನೋಟಿನ ಮಾದರಿಯ ನೋಟುಗಳನ್ನು ಮಾಡಿದ್ದಾರಷ್ಟೆ; ಪುಣೆಯಲ್ಲಿ ಕೆಲ ಭಾನಗಡಿಯವರು ಈ ಕಮಿಟಿಯ ಹತ್ತು ಸಾವಿರದ ಒಂದು ನೋಟನ್ನು ಒಬ್ಬ ಮಾರವಾಡಿಗೆ ಕೊಟ್ಟು, ಅವನಿಂದ ಹತ್ತು ಸಾವಿರ ರೂಪಾಯಿ ತಕ್ಕೊಂಡರು. ಮಾರವಾಡಿಯು ಈ ನೋಟನ್ನು ಬ್ಯಾಂಕಿಗೆ ಕಳಿಸಲು ಮೋಸ ಹೊರಬಿತ್ತು. ಮಾರವಾಡಿಯು ಹೀಗೆ ಮೋಸ ಹೋದದ್ದನ್ನು ಕಂಡು ಇವನೆಂಥ ಮಾರವಾಡಿಯು? ಇವನು ಮಾರವಾಡಿಯೇ ಅಲ್ಲೆಂದು ಜನರು ಟೀಕಿಸುತ್ತಿದ್ದಾರೆ.

ಕುರಬಾನಿಯ ವಿರುದ್ಧ ಠರಾವು.

ಬಕರೀದ ಹಬ್ಬದ ದಿವಸ ಮುಸಲಮಾನರು ಕುರಬಾನಿ ಎಂದು ಪಶುವಧ ಮಾಡುವರು. ಆಕಳ ಕೊಲ್ಲುವದೊಂದು ಘನ ಕೆಲಸವೆಂದು ತಿಳಿಯುವರು. ಆದರೆ ಯಾವದೇ ಪಶುವಿನ ಕುರಬಾನಿ ಮಾಡುವದು ಧರ್ಮಶಾಸ್ತ್ರದ ವಿರುದ್ಧವಿರುತ್ತದೆಂದು ದಿಲ್ಲಿಯಲ್ಲಿ ಕೂಡಿದ ಮುಸಲಮಾನರ ಸಭೆಯಲ್ಲಿ ಠರಾವು ಮಾಡಲ್ಪಟ್ಟಿದೆ.

ಗೃಹ ಮಂತ್ರಿಯ ಗ್ರಹಬಲದ ವಿಚಾರ.

ನಾಗಪೂರದ ಝೆಂಡಾಗುಡಿಯ ಸತ್ಯಾಗ್ರಹದಲ್ಲಿ ಸರ ಮೋರೋಪಂತ ಜೋಶಿಯವರು ಗೃಹಮಂತ್ರಿಯಾಗಿದ್ದರು. ಇವರು ಅಸಹಕಾರದ ದ್ವೇಷಿಯಾಗಿದ್ದರಿಂದ ಕಾಯದೆಭಂಗದ ಕೈದಿಗಳಿಗೆ ಒಂದೊಂದು ವರ್ಷದ ಶಿಕ್ಷೆ ಕೊಡಿಸಿದರು. ಆದರೂ ಅಸಹಕಾರಿಗಳು ದಿಗ್ವಿಜಯ ಮಾಡಿದರು. ಪ್ರಸ್ತುತದ ಕಾಯದೆಭಂಗದಲ್ಲಿ ಸ್ವರಾಜ್ಯ ಪಕ್ಷದವರಾಗಿ ಆದ ಪ್ರತಿಯೋಗಿ ಸಹಕಾರಿಯಾಗಿರುವ ಎಂ. ತಾಂಬೆಯವರು ಗೃಹಮಂತ್ರಿಯಾಗಿದ್ದಾರೆ. ಇವರು ಕಾಯದೆಭಂಗದ ವರ್ತಮಾನ ಕೇಳಿ ಆ ಇರಾಟಿಯಲ್ಲಿ ಮಹಾಬಳೇಶ್ವರದಿಂದ ನಾಗಪೂರಕ್ಕೆ ಬಂದು, ಕಾಯದೆಭಂಗದ ವಿಚಾರವನ್ನು ಅಂಗೀಕಾರವಾಗಿ ಮಾಡತಕ್ಕವರಿದ್ದಾರೆ. ಇವರಿಗೆ ಆಳರಸರ ಗ್ರಹಾನುಕೂಲವಾಗುವದೋ? ಇವರಲ್ಲಿ ರಾಷ್ಟ್ರೀಯತ್ವವು ಜೀವಂತವಿರುವದೋ ಎಂಬ ಪ್ರಶ್ನೆಯು ಪರೀಕ್ಷೆಯ ಕಾಲವೇ ಬಂದಿದೆ.

ಬೆಳಗಾವಿಯ ಸುದ್ದಿ-

ಅಸಿಸ್ಟಂಟ ಕಮೀಶನರರಾಗಿರುವ ಮಿ. ಸಾಲ್ಡಾನಾಸಾಹೇಬರು ಕಾನಡಾ ಜಿಲ್ಲೆಯಲ್ಲಿ ಡಿ. ಡಿ. ಕಲೆಕ್ಟರರಾಗಿ ಹೋಗುವರು. ಇವರ ಸ್ಥಳದಲ್ಲಿ ಮಿ. ಪಂಡಿತರು ನೇಮಿಸಲ್ಪಟ್ಟಿದ್ದಾರೆ.

ಪಂತಬಾಳೇಕುಂದ್ರಿಯ ಒಬ್ಬ ಮುಸಲಮಾನನಾಗಿದ್ದ ಮೋನನ್ನಲ್ಲಿ ಸಂಚಾರಮಂಡಳಿಯ ಆರ್ಯಸಮಾಜದವರು ಹಿಂದೂ ದೀಕ್ಷೆ ಕೊಟ್ಟು, ಇವನಿಗೆ ಭಗವಂತರಾಯನೆಂಬ ಹೆಸರಿಟ್ಟರು.

ಕಲಘಟಗಿ-

ಈ ಊರಿಗೆ ಮಾರುತಿ ಪ್ರಾಸಾದಿಕ ಚಿತ್ತಾಕರ್ಷಕ ಸಂಗೀತ ನಾಟಕ ಮಂಡಳಿಯು ಬಂದು ತನ್ನ ಆಖ್ಯಾನಗಳನ್ನು ಆಡಿ ತೋರಿಸುತ್ತಿದ್ದಾರೆ. ಕಂಪನಿಯು ಎಲ್ಲ ದೃಷ್ಟಿಯಿಂದಲೂ ಎತ್ತರವಿದ್ದದೆ. ಹಳ್ಳಿಯ ಊರಿಗೆ ತಕ್ಕ ಅಭಿನಯವಿದೆ. ಮುನ್ನೆ ಒಂದು ಮಳೆಯಾಗಿ ಹಿಂಗಾರಿಯಕ್ಕೆ ಪ್ರಾರಂಭವಾಗಿದೆ. ರೋಗರಾಯಿಗಳೇನೂ ಇಲ್ಲ.

-ಕೌಶಲ್ಯಾ ಸುತನಂದನ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.
೨-೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಯುವದು
ಇದೇ ತಿಂಗಳಲ್ಲಿ ಸಮಸಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ನೋಟೀಸಿಗೆ ಉತ್ತರ

ಧಾರವಾಡ ತಾಲೂಕ ನರೇಂದ್ರದಲ್ಲಿರುವ ನಂಕಿ ಕೋಂ ಫಕೀರಪ್ಪಾ ಮಾಗುಂಡನವರ ಈಕಿಗೆ

ಕೆಳಗೆ ಸಹಿ ಮಾಡಿದ ಫಕೀರಪ್ಪಾ ತಂದಿ ಚನ್ನಪ್ಪಾ ಮಾಗುಂಡನವರ ಸಾಕೀನ ಧಾರವಾಡ ಈತನು ಉತ್ತರ ಕೊಡುವದೇನಂದರೆ ತಾರೀಖು ೨೭ ನೇ ಎಪ್ರೀಲ ೧೯೩೭ ನೇ ದಿವಸ ವಿಜಯ ಪತ್ರದಲ್ಲಿ ಕೊಟ್ಟ ನೋಟೀಸು ಮುಟ್ಟಿತು ಅದರ ಮಜಕೂರು ಪೂರಾ ಸುಳ್ಳು ಇರುತ್ತದೆ. ನೀನು ಮೈ ನೆರೆದ ಮೇಲೆ ಅಥವಾ ಕಾರಣವಾದನಂತರ ನಮ್ಮ ಮನೆಯಲ್ಲಿ ಇದ್ದು ನನ್ನ ಕೂಡಾ ಅಜಮಾಸು ೧|| ದೇಢ ವರ್ಷ ಪ್ರಪಂಚ ಮಾಡಿದಿ ನಾನು ನಿನಗೆ ತ್ರಾಸ ಕೊಟ್ಟು ಹೊಡೆದು ಬಡೆದು ಮಾಡಿಲ್ಲಾ ಮತ್ತು ನಾನು ನಿನ್ನನ್ನು ಮನೆ ಬಿಟ್ಟು ಹೊರಗೆ ಹಾಕಿಲ್ಲ ಈಗ ಐದಾರು ತಿಂಗಳದ ಹಿಂದೆ ನಿಮ್ಮ ತಂದೆಯ ಚಿತಾವಣಿಯಿಂದ ಪತಿ ಕೆಟ್ಟ ಜನರ ದುರ್ಬೋಧನೆಯಿಂದ ನನ್ನ ಮನೆ ಬಿಟ್ಟು ನಾನು ಮತ್ತು ನನ್ನ ತಂದೆ ಹೊರಗೆ ಹೋದಾಗ್ಗೆ ನಿನ್ನ ಮೈಮೇಲೆ ಸಾಮಾನ ಇದ್ದಂಥ ಬಂಗಾರದ ಒಳಿ ಜೋಡು ೧ ಬೆಳ್ಳಿ ಚಾಕಾ ೧ ಬಂಗಾರದ ಸರದಾಳಿ ಒಂದು ಗುಂಡಿನಟೀಕಿ ಒಂದು ಮತ್ತು ಅಪಾಪದ ಶೀರಿ ಒಂದು ಈಪ್ರಕಾರ ಅಜಮಾಸು ೨೦೦ ಎರಡು ನೂರು ರೂಪಾಯಿ ಕಿಮ್ಮತ್ತಿನ ದಾಗೀನೆ ಸಹಿತವಾಗಿ ತಗೊಂಡು ಓಡಿ ಹೋಗಿರುತ್ತೀದಿ ನಮ್ಮ ತಂದಿ ನಿಮ್ಮ ಮನೆಗೆ ಕರೀಲಿಕ್ಕೆ ಬಂದಾಗ್ಯೂ ಬರಲಿಲ್ಲ ನೀನು ದೆ ಜೇ ಮಾಡಿರುತ್ತೀನಂತ ಬರದದ್ದು ಸುಳ್ಳು ಇರುತ್ತದೆ ಸ್ತ್ರೀಧನದ ಮತ್ತು ನನ್ನ ಮನೆಯವರು ಕೊಟ್ಟ ದಾಗೀನೆ ನಮ್ಮಲ್ಲಿ ಬಿಟ್ಟಿರುತ್ತೀನಂತ ಸುಳ್ಳು ಬರದಿರುತ್ತೀ ನಿನ್ನ ಮನಸ್ಸಿನಲ್ಲಿ ನನ್ನ ಕೂಡಾ ಪ್ರಪಂಚ ಮಾಡೋದು ಇದ್ದಂತೆ ಕಾಣುವದಿಲ್ಲಾ ಮತ್ತು ತಪ್ಪುಗಾಣ್ಣಾ ಈತನಿಗೆ ನಮ್ಮ ತಂದೆ ಶೀರೆಗಳು ಕೊಟ್ಟ ಬಾಬತ ಅಜಮಾಸು ೭೫ ರೂಪಾಯಿಗಳು ಕೊಡಬೇಕಾಗಿದ್ದು ಆ ಬಗ್ಗೆ ನಮ್ಮ ತಂದೆಯು ಅವನ ಕೂಡ ಜಗಳಾಡಿದ ಕಾರಣ ಅವನ ಮಾತು ಮತ್ತು ನಿಮ್ಮ ತಂದೀ ಮಾತು ಕೇಳಿಕೊಂಡು ಈ ಪ್ರಕಾರ ಸುಳ್ಳು ನೋಟೀಸು ಕೊಟ್ಟಿರುತ್ತೀ ನಾನು ನನ್ನ ಪ್ರಪಂಚದ ಅಡಚಣೆಗೋಸ್ಕರ ಎರಡನೇ ಹೆಂಡತಿನ್ನ ಲಗ್ನ ಮಾಡಿಕೊಳ್ಳಲಿಕ್ಕೆ ವಿಚಾರ ಮಾಡಿಕೊಂಡದ್ದು ಖರೆ ಇರುತ್ತದೆ. ಆದರೆ ಇಷ್ಟರಿಂದ ನಿನಗೆ ನೋಟೀಸು ಸಿಗಲಾರದು ನೀನು ನಮ್ಮ ಯಾವತ್ತು ದಾಗೀನೆ ಸಹಿತ ಒಂದು ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ಒಂದು ಬಾಳ್ವೆ ಮಾಡಬೇಕು. ಇದಕ್ಕೆ ತಪ್ಪಿ ನೀನು ಎರಡನೆಯವರನ್ನು ಉಡಿಕೆ ಮಾಡಿಕೊಂಡರೆ ನಿನ್ನ ಮೇಲೆ ಮತ್ತು ಉಡಿಕೆ ಮಾಡಿಕೊಂಡವನ ಮೇಲೆ ನಾನು ಫೌಜದಾರಿ ಪಟ್ಟಿ ಮಾಡಬೇಕಾದೀತು ಮತ್ತು ನನ್ನ ದಾಗೀನೆಗಳ ಬಗ್ಗೆ ಮತ್ತು ನಿನ್ನ ಕಜಾದ ಬಗ್ಗೆ ದಿವಾಣಿ ಕೋರ್ಟಿನಲ್ಲಿ ದಾವೆ ಮಾಡಬೇಕಾದೀತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿದೆ.

ತಾ|| ೨-೫-೧೯೩೭ ನೇ ಇಸ್ವಿ

ಸಹಿ ಫಕೀರಪ್ಪಾ ಚನ್ನಪ್ಪಾ ಮಾಗುಂಡನವರ.

ನೋಟೀಸು

ಹನಮಕ್ಕಾ ಕೋಂ ಹನಮಂತಾ ಬಸಲಿಂಗಪ್ಪನವರ ಸಾ. ಬುಳ್ಳಾಪುರ ಮುಜರೆ ಹಾಡೆ ತಾಲ್ಲೂಕ ಕೋಡ ಇವಳಿಗೆ ಶಿದ್ದಪ್ಪಾ ಬಿನ್ನ ಹಣಮಂತಪ್ಪಾ ಸಂ|| ದಾರ ಅಜ್ಜಾ ಅಡಿವೆಪ್ಪಾ ಬಿಂನ ಸತ್ಯಪ್ಪಾ ಅಡಿವವರ ಸಾ|| ಬುಳ್ಳಾಪುರ ಮುಜರೆಹಾಡೆ ತಾಲ್ಲೂಕ ಕೋಡ ಈ ನೋಟೀಶಿನ ಮೂಲಕ ತಿಳಿಸೋದೇನಂದರೆ-

ನೀನು ಅಲ್ಪವಯಿ ಶಿದ್ದಪ್ಪಗೆ ಖಾಸ ತಾಯಿ ಇದ್ದು ನನಗೆ ಮಗಳಾಗಬೇಕು. ನಿನ್ನ ಗಂಡಾ ಸತ್ತು ೧೦-೧೨ ವರ್ಷಗಳಾದವು. ಆ ಲಾಗಾಯಿತು ನೀನು ಅಲ್ಪವಯಿ ಹುಡುಗನನ್ನು ಬಿಟ್ಟು ದೇಶ ಸಂಚಾರಕ್ಕೆ ಹೋಗಿ ಬಿಟ್ಟು ಎಲ್ಲಿಯೂ ಪತ್ತೆ ಇಲ್ಲಾ ಅಲ್ಪವಯಿ ಶಿದ್ದಪ್ಪನು ನನ್ನಲ್ಲೆ ಇದ್ದು ನಂದ ರಕ್ಷಣೆ ಆಗತಾನೆ ಕೆಳ್ಗು ಪತ್ರದಲ್ಲಿ ಸಂರಕ್ಷಣೆದಾರ ನಾನೇ ಅಂತಾ ನಮೂದ ಆಗೇದ ಅಲ್ಪವಯಿ ಬಾ|| ಸರ್ವೆ ನಂಬರು ೧೬೮ ಯಕರೆ ೭-೧೬ ಕಂ ೮-೦-೦ ರೂಪಾಯಿ ಇವು ನನ್ನ ತಾಬಾನೇ ಇದ್ದು ಇದನ್ನು ಮೋಜಿನಸಾಬ ವ|| ಒಡೆಸಾಬ ಶೇತಸನದಿ ಕೆರಗಾಂವಿ ಇವನಿಗೆ ದರ ವರ್ಷ ನಾಲ್ವತ್ತು ರೂಪಾಯಿ ಲಾವಣಿ ಕೊಡುವ ಕರಾರಿನಿಂದ ೭ ವರ್ಷ ಕೊಟ್ಟು ಲಾವಣಿಪತ್ರಾ ನೊಂದಣೆ ಮಾಡಿಸಿಂತೇನೆ ಈ ಜಮೀನಿನ ದಸಿಂದ ಹಾಲಪ್ಪಾ ಬಿನ್ನ ಬಸಪ್ಪಾ ಚಟ್ಟಿನಕಳೀರವ ಯಲ್ಲಪ್ಪಾ ಬಿನ್ನ ಶಿವಪ್ಪಾ ಅಡಿನವರು ಸಾ|| ಕೆರಗಾಂವಿ ಇವರು ನಿನ್ನನ್ನು ಕರಕೊಂಡು ಒಂದು ಜಮೀನಿಗೆ ಹಕಕತ ಕೊಡಿಸಬೇಕಂತಾ ಪ್ರಯತ್ನ ನಡಸಿಂತಾ ನೀನು ಹೆಂಗಸು ಇವರ ಮಾತಿಗೆ ಮರುಳಾಗಿ ಕಡಬೇಡಾ ನಿಂನ ಇಚ್ಛಾ ಇದ್ದರೆ ಸರಕಾರಕ್ಕೆ ಅರ್ಜಿ ಕೊಟ್ಟು ಜಮೀನ ನಿಂನ ತಾಬಾ ಮಾಡಿಕೊ ನನ್ನ ತಕರಾರ ಇಲ್ಲ ಲಾವಣಿದಾರ ಮೋಜಿನಸಾಬಗೆ ಹರಕತ್ತು ಮಾಡಿದರೆ ಅಥವಾ ದಾಂದಲೆ ಮಾಡಿದರೆ ನಿನ್ನ ಮೇಲೆ ವ ನಿನ್ನ ಸಂಗಡ ಬೆಂಬಲ ಇದ್ದವರ ಮೇಲೆ ಫೌ|| ದಿ ಮಾಡತೇನೆ ಜಮೀನಿಯಲ್ಲಿ ಯಾರೂ ಧಾಂದಲೆ ಮಾಡಬಾರದಾಗಿ ಸರ್ವರಿಗೂ ಸಹಾ ಜಾಹೀರ ಮಾಡಿ ತ್ತೀನೆ ತಿಳಿಯುವದು ತಾ|| ೨೮-೪-೩೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಅಡಿವೆಪ್ಪಾ ಬಿನ್ನ ಸತ್ಯಪ್ಪಾ ಅಡಿನವರ ಈತ ಮಾಡಿದ್ದು

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಕಾಯ್ದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗೆಯು ೫ರು ಲಕ್ಷದ ಮೇಲುಂಟು. ೧೯೧೮ ರಿಂದ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಯಮ ಮತ್ತು ಠೇವಿ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರ ನ್ನ ವೆಂಕಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ — ಧಾರವಾಡ ಬುಧವಾರ ತಾರೀಖು ೪ ನೇ ಮೇ ೧೯೨೭ — ಸಂಚಿಕೆ ೯೦

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಪೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಪಾಲ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಚಿಂಚಲಿಯ ಜಾತ್ರೆ ನಿಂತಿತು.

ಯಾವತ್ತು ಜನರಿಗೆ ಈ ಜಾಹೀರ ಪತ್ರಿಕೆಯಿಂದ ತಿಳಿಸುವದೇನಂದರೆ—

ಪ್ರತಿ ವರ್ಷ ಗದಗ ತಾಲೂಕ ಚಿಂಚಲಿ ಗ್ರಾಮದಲ್ಲಾಗುತ್ತಿರುವಂತೆ ಈ ವರ್ಷ ತಾರೀಖು ೭—೫—೧೯೨೭ ನೆಯ ದಿವಸ ಆಗಬೇಕಾಗಿದ್ದ ಶ್ರೀ. ಬಸವೇಶ್ವರನ ಜಾತ್ರೆ ಮತ್ತು ಅದರ ಕೂಡ ಆಗುತ್ತಿರುವ ಒಕ್ಕಲತನದ ಹಾಗು ದನಗಳ ಪ್ರದರ್ಶನವನ್ನು ನಾಲ್ಕು ಕಡೆಗೆ ಮಾರಿಕಾ ಬೇನೆಯು ಹಬ್ಬಿರುವದರಿಂದ, ಮೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟಸಾಹೇಬ ಬಹಾದ್ದೂರ ಧಾರವಾಡ ಇವರ ಪತ್ರಪ್ರಕಾರ ನಿಲ್ಲಿಸಲ್ಪಟ್ಟಿದೆ. ಅದರಿಂದ ಯಾರೂ ಜಾತ್ರೆ ಅಥವಾ ಪ್ರದರ್ಶನಕ್ಕೆ ಬರಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಳೆಯಾದನಂತರ ಜಾತ್ರೆ ನಡೆಸುವ ಹಂಬಲವಿದ್ದು, ಆ ದಿವಸವನ್ನು ಯೋಗ್ಯ ವೇಳೆಯಲ್ಲಿ ಜಾಹೀರ ಮಾಡುವೆನು.

ಮಹಾದೇವಪ್ಪಾ ಬಸಪ್ಪಾಶೆಟ್ಟಿ,
ಚೇರಮನ ಸ್ವಾಗತ ಕಮಿಟಿ-

ಕಾಲರಾ ಪಿಲ್ಸ್

—೦—

ಬೇನೆ ಒಂದ ಮೇಲೆ ಹಾಗು ಬಾರದಂತೆ [illegible]

[illegible]

—೦—

ನಾನು [illegible] ಗುಣ ಮಾಡ್ಯ [illegible] ಗಳಿಗೆ [illegible] ಗುತ್ತದೆ. [illegible] ಧಾರವಾಡ, [illegible] ಹೊಂದಿದವರಿಂದ [illegible] ದೊರೆತಿದೆ. [illegible] ತಿಳಿಸುವೆನು.

ಚಿರಂಜೀವಿ [illegible] ಪ್ರೊಪ್ರಾಯಟರ
[illegible] ಧಾರವಾಡ.

—

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡಲಿಕ್ಕೆ ಆಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಆಣೆಯಂತಿರುತ್ತದೆ.

ಎ. ಶಿ. ಕಟಿ.
ಮ್ಯಾನೇಜಿಂಗ ಡಾಯರೆಕ್ಟರ

—

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಿಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೪-೫-೨೭ ನೇ ಇಸ್ವಿ

ಸ್ಥಾನಿಕ ಸ್ವರಾಜ್ಯದ ಪರಿಷತ್ತಿನಲ್ಲಿ ಶ್ರೀ ಜೋಶ್ಯಾಪೂರಮಠ ವಕೀಲರು ಮಾಡಿದ ಭಾಷಣವು.

ಮುಂಬಯಿ ಇಲಾಖೆಯಲ್ಲಿ ೧೫೬ ಮ್ಯುನಿಸಿಪಾಲಿಟಿ ಮತ್ತು ೨೧೯ ಡಿಸ್ಟ್ರಿಕ್ಟ ಮತ್ತು ತಾಲೂಕ ಲೋಕಲಬೋರ್ಡುಗಳುಂಟು. ಇವುಗಳಲ್ಲಿ ಮುಂಬಯಿ ಕರ್ನಾಟಕದಲ್ಲಿ ೩೮ ಮ್ಯುನಿಸಿಪಾಲಿಟಿಗಳೂ ೩೦ ಡಿಸ್ಟ್ರಿಕ್ಟ ಮತ್ತು ತಾಲೂಕ ಬೋರ್ಡುಗಳೂ ಉಂಟು. ಇವುಗಳ ಮುಖ್ಯ ಕರ್ತವ್ಯವು ಆರೋಗ್ಯರಕ್ಷಣೆ, ಮಾರ್ಗಗಳ ವ್ಯವಸ್ಥೆ, ನೀರಿನ ಪೂರೈಕೆ ಔಷಧೋಪಚಾರ ಮತ್ತು ಶಿಶುಗಳ ಶಿಕ್ಷಣವಾಗಿರುತ್ತವೆ. ಈ ಕೆಲಸಗಳನ್ನು ಯೋಗ್ಯ ರೀತಿಯಿಂದ ಮಾಡಿದರೆ ಜನರ ಶಾರೀರಿಕ, ಮಾನಸಿಕ ಮತ್ತು ನೈತಿಕ ಉನ್ನತಿಗೆ ಸಹಾಯ ಮಾಡಿದಂತಾಗುತ್ತದೆ. ಸಮಾಧಾನಕಾರಕವಾದ ಆರೋಗ್ಯದ ವಿಚಾರದಲ್ಲಿ ಜನರು ಸಹಕಾರ ಮಾಡುವದರಿಂದ ಸಂಸ್ಥೆಗಳ ಕೆಲಸವು ಸುಸೂತ್ರವಾಗಿ ಹೆಚ್ಚು ಕಡಿಮೆ ಒರುವದು. ಹೊಲಸು ಮತ್ತು ಮಲವನ್ನು ಅಲ್ಲಲ್ಲಿ ಕೂಡಿಹಾಕುವದರಿಂದ ರೋಗೋತ್ಪತ್ತಿಯಾಗುತ್ತದೆ. ಇದನ್ನು ಆಗಿಂದಾಗ ತೆಗೆದು ಹಾಕಿದರೆ ರೋಗಗಳುಂಟಾಗಲಾರವು. ಈ ಹೊಲಸನ್ನು ಜನರು ಅಲ್ಲಲ್ಲಿಯ ಕುಂಡೆಗಳಲ್ಲಿ ಹಾಕಿದರೆ ಮ್ಯುನಿಸಿಪಾಲಿಟಿಯ ನೌಕರರು ಅವನ್ನು ತೆಗೆದುಕೊಂಡು ಹೋಗುವರು. ಜನರು ತಮ್ಮ ಹುಡುಗರು ಬೀದಿಗಳಲ್ಲಿ ಹೊಲಸು ಮಾಡಗೊಡಬಾರದು. ಮತ್ತು ತಂತಮ್ಮ ಮನೆಯ ಮುಂದಿನ ಕಾಲುವೆಗಳನ್ನು ಸ್ವಚ್ಛವಾಗಿಟ್ಟರೆ ಅವುಗಳಲ್ಲಿ ದುರ್ಗಂಧ ವಾಸನೆ ಹುಟ್ಟಲಾರದು. ಪ್ಲೇಗ, ಕಾಲರಾ, ಇನ್ಫ್ಲುಯೆಂಜಾ ಮುಂತಾದ ಸಾಂಸರ್ಗಿಕ ರೋಗಗಳು ಮನೆಯಿಂದ ಮನೆಗೆ, ಬೀದಿಯಿಂದ ಬೀದಿಗೆ, ಊರಿಂದ ಊರಿಗೆ ಮತ್ತು ದೇಶದಿಂದ ದೇಶಕ್ಕೆ ಹಬ್ಬುವವು. ಇಷ್ಟು ಶಿಕ್ಷಣವನ್ನು ಜನರು ತಿಳಕೊಂಡಿರುವರೆ? ಅದರಿಂದ ಇವು ಹಬ್ಬದಂತೆ ನಾವು ಪ್ರಯತ್ನ ಮಾಡತಕ್ಕದ್ದು. ಇದಕ್ಕಾಗಿ ಜನತೆಯ ಸಹಕಾರವು ಅವಶ್ಯವಾಗಿ ಬೇಕಾಗಿದೆ. ಜನರ ಸಹಾಯವಿಲ್ಲದೆ ಲೋಕಲಬೋರ್ಡ ಮ್ಯುನಿಸಿಪಾಲಿಟಿಗಳೇನು ಮಾಡುವವು? ಮಾನವ ಜಾತಿಯ ಸುಖಸೋಯಿಯ ದೆಸೆಯಿಂದ ಸಹಕಾರವು ಮಹತ್ವದ ಕೆಲಸ ಮಾಡುತ್ತದೆ. ಆದುದರಿಂದ ಸುಶಿಕ್ಷಿತರು ಅಜ್ಞಾನಿಗಳಿಗೆ ಈ ಬಗ್ಗೆ ತಿಳಿಸಿ ಕೊಡತಕ್ಕದ್ದು. ವ್ಯಾಖ್ಯಾನ, ಹಸ್ತಪತ್ರಿಕೆಗಳ ಪ್ರಸಾರ ಮತ್ತು ಮ್ಯಾಜಿಕ ಲ್ಯಾಂಟರ್ನದಿಂದ ಈ ಕಾರ್ಯ ಮಾಡಬಹುದು. ಸಹಕಾರದಿಂದ ಸ್ಥಾನಿಕ ಸ್ವರಾಜ್ಯಗಳು ರೋಗಗಳ ಪ್ರತಿಬಂಧ ಮಾಡುವದಲ್ಲದೆ ಸಹಕಾರಿ ಸೊಸಾಯಿಟಿ, ಹೆರಿಗೆಯ ಆಸ್ಪತ್ರೆ, ಸ್ತ್ರೀಯರ ಆಸ್ಪತ್ರೆ, ಮಕ್ಕಳ ಸಹಕಾರ ಸಂಘ ಮುಂತಾದವುಗಳನ್ನು ಸ್ಥಾಪಿಸಬಹುದು. ಈಗ ಅನೇಕ ತರದ ಸೊಸಾಯಿಟಿಗಳುಂಟು. ಅವೆಲ್ಲ ಧನೋತ್ಪಾದಕವಾಗಿವೆ. ಆದರೆ ಆರೋಗ್ಯ ಸಂಬಂಧವಾದ ಸೊಸಾಯಿಟಿಗಳು ಮಾನವ ಜಾತಿಗೆ ಹಿತಮಾಡುವವು.

ಮುಂಬಯಿಯಲ್ಲಿರುವ ಸ್ಯಾನಿಟರಿ ಅಸೋಸಿಯೇಶನದವರೂ ಮ್ಯುನಿಸಿಪಾಲಿಟಿಯವರೂ ಸಹಕಾರ ಮಾಡಿ, ಬಡಜನರು ವಾಸವಾಗಿರುವಂಥ ಸ್ಥಳಗಳಿಗೆ ದಿನಾಲು ನರ್ಸರನ್ನು ಕಳಿಸಿ, ಅವರಿಗೆ ಆರೋಗ್ಯದ ಜ್ಞಾನ ಮಾಡಿಸುತ್ತಿದ್ದಾರೆ. ಬಸುರು ಹೆಣ್ಣುಮಕ್ಕಳಿಗೆ ಹೆರಿಗೆಯ ಆಸ್ಪತ್ರೆಗೆ ಹೋಗಲು ಮನವೊಲಿಸುವರು. ಅಲ್ಲಿ ಇವರಿಗೆ ಹಾಲು, ಹೊದ್ದುಕೊಳ್ಳುವ ಅರಿವೆ ಮತ್ತು ಬೇರೆ ಅವಶ್ಯಕ ಪದಾರ್ಥಗಳು ದೊರೆಯುವವು. ಪ್ರಜರ ಸಹಕಾರ ಮತ್ತು ಸ್ಥಾನಿಕ ಸರಕಾರದ ಆಶ್ರಯದಿಂದ ಬೆಂಗಳೂರಲ್ಲಿರುವ ಹೆರಿಗೆಯ ಆಸ್ಪತ್ರೆಯು ಸರ್ವೋತ್ಕೃಷ್ಟ ಕೆಲಸ ಮಾಡುತ್ತಿರುವದು. ಇವುಗಳ ತರುವಾಯ ಡಾಕ್ಟರ ಪಾಲನೆಯಂತೆ ಹುಬ್ಬಳ್ಳಿಯಲ್ಲಿ ಸ್ಥಾಪಿಸಲ್ಪಟ್ಟ ಸಹಕಾರದ ಆಸ್ಪತ್ರೆಯು ಉತ್ತಮವಾಗಿ ಕೆಲಸ ಮಾಡುತ್ತಿರುವದು. ರಡ್ಡಿ ಮತ್ತು ಸಾರಸ್ವತ ಮನೆಗಳ ಸಹಕಾರ ಸಂಘಗಳೂ ತಮ್ಮ ಜನರಿಗೆ ಉತ್ತಮವಾದ ನಿವಾಸಸ್ಥಾನಗಳನ್ನು ಮಾಡಿಕೊಟ್ಟಿರುತ್ತವೆ.

ತಾಲೂಕಗಳಲ್ಲಿ ತಾಲೂಕ ಲೋಕಲಬೋರ್ಡ, ಹೈಜೀನ ಸ್ಯಾನಿಟೇಶನ ಕಮಿಟಿ ಮತ್ತು ಗ್ರಾಮ ಪಂಚಾಯತಿಗಳು ಹಳ್ಳಿಗಳ ಸುಧಾರಣೆಯ ವಿಷಯವಾಗಿ ಕೆಲಸ ಮಾಡುತ್ತವೆ. ಮನೆಗಳ ಹಾಗು ಕಸಕಡ್ಡಿ ಮುಂತಾದ ಹೊಲಸನ್ನು ತೆಗೆದು ಹಾಕಲಿಕ್ಕೆ ಹಳ್ಳಿಗಳು ಪ್ರಯತ್ನ ಮಾಡಿದರೆ ಜನರಿಗೆ ಹಿತವಾಗುವಂಥ ಕೆಲಸ ಮಾಡಿದಂತಾಗುತ್ತದೆ. ಏಕೆಂದರೆ ಈ ಜನರು ಬಕ್ಕಲತನದವರೂ, ಒಕ್ಕಲತನದ ಮೇಲೆ ಜೀವಿಸುವಂಥವರೂ ಆಗಿದ್ದಾರೆ. ಪ್ರತಿಯೊಂದು ಜಿಲ್ಲೆಯ ಮುಖ್ಯ ಸ್ಥಳದಲ್ಲಿ ನೊಸಿ [illegible] ಗಳಲ್ಲಿ ಆರೋಗ್ಯಾಭಿವೃದ್ಧಿಯ ಶಿಕ್ಷಣ ಕೊಡಬೇಕೆಂದು [illegible] ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಹ ಅವರ ಪಠ್ಯ ಪುಸ್ತಕಗಳಿಂದ ಶಿಕ್ಷಣ ಕೊಡಬಹುದು. ಈ ಪದ್ಧತಿಯಿಂದ ಹಳ್ಳಿಗಳಲ್ಲಿ ಮಾತ್ರವಲ್ಲ; ಪಟ್ಟಣಗಳಲ್ಲಿ ಸಹ ಆರೋಗ್ಯಶಾಸ್ತ್ರದ ಪ್ರಸಾರ ಮಾಡಬಹುದು. ಹೀಗಾಗಿ ಜನರಲ್ಲಿ ಜಾಗೃತೆಯುಂಟಾಗಿ ಎಲ್ಲ ಉಪಯುಕ್ತ ಕೆಲಸಗಳಲ್ಲಿ ಸ್ಥಾನಿಕ ಸ್ವರಾಜ್ಯಗಳ ಕೂಡ ಸಹಕಾರ ಮಾಡುವರು. ಸಾರ್ವಜನಿಕ ಆರೋಗ್ಯವರ್ಧನ ಕಾರ್ಯದಲ್ಲಿ ಕೂಡಿ ನಡೆಯುವದರಿಂದ ಮಾತ್ರ ಅವರ ಕರ್ತವ್ಯ ಮುಗಿಯುವದಿಲ್ಲ. ಸ್ಥಾನಿಕ ಸಂಸ್ಥೆಗಳು ಕೈಕೊಳ್ಳುವ ಇಂಥ ಎಲ್ಲ ಕೆಲಸಗಳಲ್ಲಿಯೂ ಸಹಕಾರ ಮಾಡತಕ್ಕದ್ದು.

ಉಳಿದ ಭಾಗವನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು.

ಕೂಲಿಕಾರರ ಸಂಸ್ಮರಣೆಯ ದಿನೋತ್ಸವ.

ಮೇ ತಿಂಗಳ ೧ ನೆಯ ತಾರೀಖು ಜಗತ್ತಿನಲ್ಲಿ ಕೂಲಿಕಾರರ ಸಂಸ್ಮರಣೋತ್ಸವ ದಿನವಾಗಿದೆ. ವಿಲಾಯತಿಯಲ್ಲಿ ಬಂಡವಲಗಾರರಿಗೂ, ಕೂಲಿಕಾರರಿಗೂ ಶ್ರಮವಿಭಾಗದ ಪ್ರಶ್ನೆಯ ದೆಸೆಯಿಂದ ದೊಡ್ಡ ವಾದ ಬೆಳೆದಿದೆ. ಕೂಲಿಕಾರರು ಸಂಘಸತ್ತಾಗ್ರಹಗಳಿಂದ ಬಂಡವಲಗಾರರನ್ನು ದಣಿಸಿ ಮಣಿಸಬೇಕೆಂಬ ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಒಂದು ದಿವಸ ತಮ್ಮ ಸಾಮರ್ಥ್ಯವನ್ನು ತೋರಿಸಲು ಜಗತ್ತಿನ ತುಂಬ ಪ್ರಚಂಡ ಮೆರವಣಿಗೆಗಳನ್ನು ತೆಗೆದು, ಪ್ರಚಂಡ ಸಭೆಗಳನ್ನು ಕೂಡಿಸಿ, ತಮ್ಮ ಹಕ್ಕುಗಳನ್ನು ಸಾರಿ, ಆ ಪ್ರಕಾರ ಠರಾವು ಮಾಡುವರು. ಇವರ ಸಭೆಗಳು ರಾಜಕೀಯದೃಷ್ಟಿ ದೇಶಗಳಲ್ಲಿಯೂ, ಪ್ರಜಾಸತ್ತಾತ್ಮಕ ದೇಶಗಳಲ್ಲಿಯೂ ಭೀತಿಯಿಲ್ಲದೆ ನಡೆಯುವವು. ಇವರ ನಿಶಾನೆಯು ಗುಲಾಬಿ ಕೆಂಪು. ಅಂದರೆ ರಶಿಯದ್ದು. ರಶಿಯವೆಂದರೆ ಕೂಲಿಕಾರರ ಸಾಮ್ರಾಜ್ಯವು. ರಶಿಯಾದಲ್ಲಿ ಕೂಲಿಕಾರರ ಸಾಮ್ರಾಜ್ಯವಾದಂತೆ ಜಗತ್ತಿನ ಪ್ರತಿಯೊಂದು ದೇಶದಲ್ಲಿಯೂ ಕೂಲಿಕಾರರ ಆಧಿಪತ್ಯ ನಡೆಯಬೇಕು, ಅವರ ಹಿತವೇ ಜಗತ್ತಿನ ಹಿತವಾಗಬೇಕೆಂಬ ಹಂಬಲವು, ಇವರು ಈ ಪ್ರಕಾರ ಉದ್ದೇಶವಿಟ್ಟುಕೊಂಡು ತೆಗೆಯುವ ಮೆರವಣಿಗೆಯ ವೇಳೆಯಲ್ಲಿ ದಂಗೆಗಳಾಗುವವು. ಪೋಲೀಸ ಫಾಯರ ಆಗುವದು. ಆದರೆ ಸಾರ್ವಜನಿಕ ಶಾಂತತಾಭಂಗವೆಂದು ಯಾವ ಸರಕಾರವೂ ಇವರ ಉತ್ಸವವನ್ನು ಬಂದು ಮಾಡುವದಿಲ್ಲ. [illegible] ಸಹ ಇರುವದು.

ಈ ವರ್ಷ ೧ನೆಯ ತಾರೀಖು ರವಿವಾರ ಇ

ದ್ದರೂ, ಕೂಲಿಕಾರರು ಕ್ರಿಸ್ತ ಧರ್ಮದ ಪ್ರಕಾರ ವಿಶ್ರಾಂತಿ ತಕ್ಕೊಳ್ಳದೆ, ಉತ್ಸವ ಮಾಡಿದರು, ಯಾವ ದೇಶದಲ್ಲಿ ಎಂಥ ಗೊಂದಲವಾಯಿತೆಂಬುದು ಇನ್ನೂ ತಿಳಿದಿಲ್ಲ. ಹೆಕಂಗದಲ್ಲಿ ಮಾತ್ರ ಅಧಿಕಾರಿಗಳು ಈ ಉತ್ಸವ ಮಾಡಗೊಡಲಿಲ್ಲೆಂದು ತಂತಿಯ ವರ್ತಮಾನ ಬಂದಿದೆ. ಕೂಲಿಕಾರರ ಸಾಮ್ರಾಜ್ಯದ ಮುಖ್ಯ ಸ್ಥಳವಾದ ಮಾಸ್ಕೋ ಪಟ್ಟಣದಲ್ಲಿ ದಂಡಿನ ಕವಾಯತು ಆಗಿ, ಕೆಂಪು ನಿಶಾನೆಯು ನಾಡಗುಡಿಯ ಮೇಲೆ ಏರಿಸಲ್ಪಟ್ಟಿತು. ಹಿಂದುಸ್ತಾನದಲ್ಲಿ ಈ ಸಮಾರಂಭವು ಇದುವರೆಗಾಗುತ್ತಿದ್ದಿಲ್ಲ. ಮುಂಬಯಿ, ಮದ್ರಾಸ, ಕಲಕತ್ತೆ ಮುಂತಾದ ಪಟ್ಟಣಗಳಲ್ಲಿ ಈ ಸಾರೆ ಮಾಡಲ್ಪಟ್ಟಿತು. ಕೂಲಿಕಾರರು ಕೆಂಪು ನಿಶಾನೆಯನ್ನು ಹಿಡಿದು ಮೆರವಣಿಗೆ ತೆಗೆದಿದ್ದರು.

ಇಂಗ್ಲಂಡದಲ್ಲಿ ಕೂಲಿಕಾರರಿಗೂ ಮುಕ್ತಿಗಾಗಿ ಹಂಬಲವು.

—[ ][ ]—

ಇಂಗ್ಲೆಂಡದ ಮಂತ್ರಿಗಳು ಕೂಲಿಕಾರರ ಸಂಪು ಮತ್ತು ಸತ್ಯಾಗ್ರಹವನ್ನು ಮಾಡುವುದಕ್ಕಾಗಿ ಅವನ್ನು ಬೇಕಾಯದೇಶೀರ ಮಾಡುವ ಕುರಿತು ಒಂದು ಬಿಲ್ಲು ತಂದಿದ್ದುದರಿಂದ ಈ ಬಿಲ್ಲಿನ ವಿರುದ್ಧ ಕೂಲಿಕಾರರು ೧ ನೆಯ ತಾರೀಖಿನ ದಿವಸ ಇಂಗ್ಲಂಡಿನ ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಚಳವಳಿ ಮಾಡಿ, ಮೆರವಣಿಗೆ ತೆಗೆದು, ಸಭೆ ಕೂಡಿಸಿ, ತಮ್ಮ ವಿಚಾರವನ್ನು ಜಾಹೀರ ಮಾಡಿದರು. ಇದಕ್ಕೆ ಪ್ರತ್ಯುತ್ತರವಾಗಿ ಭಾರತ ಮಂತ್ರಿಯಾದ [illegible] ಭಾಷಣ ಮಾಡಿದ್ದಾರೆ. ಇವರು ಕೂಲಿಕಾರರನ್ನು ಹಂಗಿಸಿ, ಅಂದದ್ದೇನೆಂದರೆ-

> ನಿಮ್ಮಿಂದ ಆಗುವಷ್ಟು ಎಲ್ಲ ಸಭೆಗಳನ್ನು ಕೂಡಿಸಿರಿ. ನಿಮ್ಮ ಎಲ್ಲ ತುತ್ತೂರಿಗಳನ್ನು ಊದಿರಿ. ನಿಮ್ಮ ಎಲ್ಲ ಭಾಷಣಗಳನ್ನು ಮಾಡಿರಿ ನಿಮ್ಮಲ್ಲಿದ್ದಷ್ಟು ಕೆಂಪು ನಿಶಾನೆಗಳನ್ನೇರಿಸಿರಿ. ನೀವು ಹೀಗೆಲ್ಲ ಮಾಡುತ್ತಿರುವಾಗ ನಮ್ಮ ಬಿಲ್ಲು ಪಾರ್ಲಮೆಂಟ ಸಭೆಯಲ್ಲಿ ಪಾಸಾಗುತ್ತಿರುವದು.

ಪಾರ್ಲಮೆಂಟಿನಲ್ಲಿ ಬಿಲ್ಲಿನ ಚರ್ಚೆ ನಡೆದಾಗ ಕೂಲಿಕಾರರು ಬಹಿಷ್ಕಾರ ಹಾಕಿ ಸಭೆಗೆ ಹೋಗಬಾರದೆಂಬ ವಿಚಾರ ಮಾಡುತ್ತಿದ್ದಾರೆ

ಮುಂಬಯಿ ಕೌನ್ಸಿಲಿನ [illegible]
ಕರ್ನಾಟಕ ಶ್ರೀ. [illegible]
[illegible]

ನಾಗಪೂರದ ಸತ್ಯಾಗ್ರಹದ ವಿಚಿತ್ರ ವರ್ತನೆ.

ಇಂಗ್ಲಿಷರಿಗೆ ನಾಗಪೂರು ಬಿಟ್ಟು ಹೋಗುವ ಮುಂಜಾಗ್ರತೆಯ ಪತ್ರ.

— o —

ನಾಗಪೂರದ ಕಾಯದೆಭಂಗದ ಸತ್ಯಾಗ್ರಹಿಗಳಲ್ಲಿ ಮುಖ್ಯಸ್ಥನಾದ ರಾಮಲಾಲನು ಕಲೆಕ್ಟರ ಬಂಗಲೆದಲ್ಲಿ ಜಪ್ತ ಮಾಡಿದ ತನ್ನ ಕತ್ತಿಯನ್ನು ತಿರಿಗಿ ಕೊಡಬೇಕೆಂದು ಜಿದ್ದಿ ಕೂತಿದ್ದಾನೆ. ಇವರ ಪಕ್ಷದ ಮುಖಂಡನಾದ ಆವರಿ ಎಂಬವನು ಗವರ್ನರಸಾಹೇಬರಿಗೆ ಪತ್ರ ಬರೆದು "ನೀವು ಇಂಗ್ಲಿಷ ಜನರು ನಾಗಪೂರ ಇಲಾಖೆ ಬಿಟ್ಟು ಹೊರಟು ಹೋಗಿರಿ. ಇಲ್ಲವಾದರೆ ನಿಮ್ಮನ್ನು ನಾಗಪೂರಿನಿಂದ ದಬ್ಬಿ ಹಾಕುವೆವೆಂದು" ತಿಳಿಸಿದ್ದಾನೆ. ಇವನು ತನ್ನ ದಂಡು ಸೈನ್ಯ ಕಟ್ಟಿದ್ದು, ಅದಕ್ಕೆ ಪ್ರಜಾಸತ್ತಾತ್ಮಕವೆಂಬ ಹೆಸರಿಟ್ಟಿದ್ದಾರೆ.

ಅಲೀಬಾಗದಲ್ಲಿ ರೈತರ ಸತ್ಯಾಗ್ರಹ.

ಕೊಲಾಬಾ ಜಿಲ್ಹೆಗೆ ಸೇರಿದ ಅಲಿಬಾಗ ತಾಲೂಕಿನ ರೈತರು ಸರಕಾರದ ಬಿಸ್ತಿನ ಸರ್ವೆ ಪಟ್ಟಿಯ ಹಪ್ತೆಯನ್ನು ಕೊಡಬಾರದೆಂಬ ಸತ್ಯಾಗ್ರಹವನ್ನು ಇತ್ತೀಚೆಗೆ ಪ್ರಾರಂಭಿಸುವರು. ಬಿಸ್ತಿನ ಮಾಡಿದ ಮ. ಮೂಡಲ-ಹೇಟಿ ಈಗ ಅಲ್ಲಿಯ ಕಲೆಕ್ಟರರಾಗಿದ್ದಾರೆ. ಬಿಸ್ತಿನ ಅಷ್ಟು ಸಾಗಿಲ್ಲ. ತಂಟೆಯು ನೂರಕ್ಕೆ ೭೭ ಮತ್ತು ರಿಸ್ಟಿಯು ೩೩ರಂತೆ ಹೆಚ್ಚಾಗಿರುತ್ತದೆ.

ಮೂರ್ತಿಧ್ವಂಸಕರಿಗೆ ಶಿಕ್ಷೆ-

ಕಲಕತ್ತೆಯಲ್ಲಿ ಶೇಖ ಕಾಲು ಎಂಬ ಹೆಸರಿನ ಮುಸಲಮಾನನು ಸರಸ್ವತಿಯ ಪ್ರತಿಮೆಯನ್ನು ಭಂಗ ಪಡಿಸಿದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಆತನಿಗೆ ಆರು ತಿಂಗಳ ಸಖ್ತ ಮಜೂರಿಯ ಕೈದು ಮತ್ತು ೫೦ ರೂಪಾಯಿ ದಂಡ ಮಾಡಿದ್ದಲ್ಲದೆ, ಮುಂದೆ ಒಳ್ಳೇ ನಡತೆಯ ಜಾಮೀನು ಕೊಡಬೇಕೆಂದೂ ಹುಕುಮು ಮಾಡಿದ್ದಾರೆ.

ಹಿಂದೂ ಮುಸಲಮಾನರ ಜಗಳದಲ್ಲಿ ಹಿಂದೂ ಜನರ ಪಕ್ಷದಿಂದ ಭಾಗವಹಿಸಿದ್ದ ಬ್ರಾಹ್ಮಣ ಪಂಡಿತ ಜನಾರ್ದನಲಾಲರೆಂಬವರನ್ನು ಕೆಲ ಕಟುಕರು ಕಲ್ಯಾಣಪುರವೆಂಬ ಸ್ಟೇಶನದಲ್ಲಿ ಗಾಡಿಯಿಂದ ಇಳಿದು [illegible] ಈ ಅಪರಾಧದ ಮುಸಲ [illegible] ಜನ [illegible] ಮಾಡಿದ್ದಾರೆ.

ವಿವಿಧ ವರ್ತಮಾನಗಳು

ಬೈಲಹೊಂಗಲದಲ್ಲಿ ಮಾರಿಕಾದಿಂದ ೧೫೦ ಜನರು ಸತ್ತರು.

ಅಲ್ಲಿಯ ಮ್ಯುನಿಸಿಪಾಲಿಟಿಯ ಉಪ ಚುನಾವಣೆಯಲ್ಲಿ ಒಂದು ಸ್ಥಳದ ದೆಸೆಯಿಂದ ರಾ. ಬಿ. ಮಲ್ಲನಾಯಕ, ಮೆಸರ್ಸ ರಾಮಚಂದ್ರಪ್ಪಾ ಜಮಖೇಡ ಮತ್ತು ಶಿವಪ್ಪಾ ಸರನಾಡ ಈ ಪ್ರಕಾರ ಮೂವರು ಉಮೇದವಾರರು. ಇವರಲ್ಲಿ ರಾ. ಬಿ ಮಲ್ಲನಾಯಕ ಮತ್ತು ರಾಮಚಂದ್ರಪ್ಪನವರು ತಮ್ಮ ಗೆಲುವಿನ ಬ್ಯಾಲಟುಗಳನ್ನು ಯೋಗ್ಯ ವೇಳೆಗೆ ಕೊಡದ್ದರಿಂದ ಅಧ್ಯಕ್ಷರು ಇವರ ಅರ್ಜಿಗಳನ್ನು ನಾಮಂಜೂರ ಮಾಡಿದರು. ಇದರ ಮೇಲೆ ಇವರು ಅಪೀಲು ಮಾಡಿ ತಹಕೂಬಿ ಹುಕುಮು ಪಡೆಯುತ್ತಲಿದ್ದಾರೆ.

ಮದನಪಲ್ಲಿಯಿಂದ ಬೆಂಗಳೂರಿಗೆ ಮೋಟಾರದಲ್ಲಿ ಕೂತು ಹೋಗುತ್ತಿದ್ದಾಗ, ಮೋಟಾರಿನ ಅಪಘಾತವಾಗಿ, ಅನೇಕರು ಘಾಯವಾದರು. ಮತ್ತು ಪಂಡಿತ ನರಸಿಂಹಾಚಾರ್ಯರು ಮೃತ್ಯುಮುಖದಲ್ಲಿ ಬಿದ್ದರೆಂದು ಬರುವದಕ್ಕೆ ವಿಷಾದಿಸುತ್ತೇವೆ.

ಬರೋಡೆ ರಾಜ್ಯಕ್ಕೆ ಸೇರಿದ ಅಮರೇಲಿ ಪ್ರಾಂತದಲ್ಲಿ ಶರೆಯ ವ್ಯಾಪಾರವನ್ನು ಬಂದು ಮಾಡಬೇಕೆಂಬ ಠರಾವು ಅಲ್ಲಿಯ ಕೌನ್ಸಿಲ ಸಭೆಯಲ್ಲಿ ಪಾಸಾಯಿತು.

ಶ್ರೀ ರಾಜಗೋಪಾಲಾಚಾರ್ಯರು ಮುಂದೆ ಬರೆಯುವ ಪ್ರಸಿದ್ಧ ಮಾಡಿದ್ದಾರೆ—

" ಮಹಾತ್ಮರಿಗೆ ಸಂಬಂಧಿಸಿದಲ್ಲಿ ಆರೋಗ್ಯವೆನಿಸಿದೆ ಆದರೆ ಪರೆಯು ಅವರ ಮೈಗೆ ಹತ್ತಿದೆ. ಡಾಕ್ಟರರು ಅವರ ಪ್ರಕೃತಿಯ ಪರೀಕ್ಷೆ ಮಾಡಿದ್ದಾರೆ [illegible] ಗುಣವಾಗುವ ತನಕ ಇವರು ಜೈಲು ಬಿಟ್ಟು ಬೇರೆ ಕಡೆಗೆ ಹೋಗುವ ವಿಚಾರವಿಲ್ಲ. ಪರಸ್ಥಳದಿಂದ ಜನರು ಬಂದು, ಇವರಿಗೆ ತ್ರಾಸ ಕೊಡಬಾರದು "

ಧಾರವಾಡ-

ಹುಬ್ಬಳ್ಳಿಯಲ್ಲಿ ಸಬ್ ಇನ್ಸಪೆಕ್ಟರರಾಗಿದ್ದ ಮ. ಶಿವಲಿಂಗ ಭಾಗಪ್ಪಾ ಇವರಿಗೆ ರೋಣಕ್ಕೆ ವರ್ಗವಾಗಿದೆ.

ನಿನ್ನಿನ ದಿವಸ ಈ ಊರಲ್ಲಿ ಮರಾಠಾ ಜನರು ಶ್ರೀ ಶಿವಜಯಂತ್ಯುತ್ಸವವನ್ನು ಸಮಾರಂಭದಿಂದ ನೆರವೇರಿಸಿದರು.

ಇಂದು ಶ್ರೀ. ಬಸವಜಯಂತ್ಯುತ್ಸವಕ್ಕೆ [illegible] ಬರುವದು.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಅಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗರುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡುವ ಈಶ್ವರಪ್ಪಾ ತಂದಿ ಕಲ್ಲಪ್ಪಾ ಬಡಿಗೇರ ಸಾಕೀನ ಅಮರಗೋಳ ಇವನು ಯಾವತ್ತು ಜನರಿಗೆ ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡಿ ತಿಳಿಸುವದೇನಂದರೆ-

ಹುಬ್ಬಳ್ಳಿ ತಾಲೂಕ ಅಮರಗೋಳ ಗ್ರಾಮದಲ್ಲಿ ನನ್ನ ಮನೆಯು ಒಂದು ಭಾಗವಾದ ಹಿತ್ತಲ ಅಜಮಾಸ ಅಗಲ ೨೦ ಮೊಳಾ, ಉದ್ದ ೩೦ ಮೊಳಾ ಇದರಲ್ಲಿ ನನ್ನ ಅಕ್ಕನ ಮಗನಾದ ಮಾನಪ್ಪಾ ತಂದಿ ಫಕೀರಪ್ಪಾ ಬಡಿಗೇರ ಈತನ ಅರ್ಧ ಹಿಸೆಯುಂಟು ಆದರೆ ಸದರೀ ಮಾನಪ್ಪಾ ಈತನು ನನ್ನನ್ನು ಮುಣಗಿಸುವ ಮತ್ತು ನನ್ನ ಮಾಲಕಿ ಮತ್ತು ವಹಿವಾಟ ತಪ್ಪಿಸುವ ದುರುದ್ದೇಶದಿಂದ ಹುಲ್ಲಂಬಿಯಲ್ಲಿರುವ ಈಳಪ್ಪಾ ತಂದಿ ದ್ಯಾಮಪ್ಪಾ ಮತ್ತು ಕಾಳಪ್ಪಾ ತಂದಿ ನಿಂಗಪ್ಪಾ ಇವರಿಂದ ಸದರ ನನ್ನ ಹಿಂದಿನ ಅರ್ಧ ಭಾಗವನ್ನು ತನ್ನದೆಂದು ಸಾಧಿಸಲಿಕ್ಕೆ ಹಚ್ಚಿ, ಅವರಿಂದ ಸದರ ಜಾಗೆಯನ್ನು ಖರೀದಿ ಬರಿಸಿಕೊಂಡು ನನ್ನ ನುಕಸಾನ ಮಾಡುವೇಕೆಂದಿರುತ್ತಾನೆ ಈತನಿಂದ ಈ ಜಾಗೆಯನ್ನು ಬರಿಸಿಕೊಳ್ಳಬಾರದು ಮತ್ತು ಸದರಿಯವರು ಬರೆದುಕೊಡಬಾರದು ಇದೇ ಪ್ರಕಾರ ಭೀಮಪ್ಪಾ ತಂದಿ ಕಲ್ಲಪ್ಪಾ ಬಡಿಗೇರ ಈತನ ಹೆಸರಿಲೆ ಖಾತೆಯಿದ್ದು, ಅದರಲ್ಲಿಯೂ ನಮ್ಮ ಪೋಟ ಖಾತೆ ಇರುವ ಜಮೀನೂ ಸದರಿಯವರಿಂದ ಬರಿಸಿಕೊಳ್ಳಬೇಕೆಂದು ಸದರೀ ಮಾನಪ್ಪನು ಮಸಲತ್ತು ಮಾಡಿದ್ದಾನೆ ಈ ವ್ಯವಹಾರವು ಬೇಕಾಯದೇಶೀರವಾಗುವದು ಇವರಿಬ್ಬರೂ ಮಾಡುವ ವ್ಯವಹಾರವು ಬೇಕಾಯದೇಶೀರ ಮತ್ತು ರದ್ದಬಾತಲ ಆಗುವದು ಈ ಜಾಗೆ ಮತ್ತು ಹೊಲ ಖರೀದಿ ಬರಿಸಿಕೊಂಡು, ಸದರ ಮಾನಪ್ಪನು ತನ್ನದೆಂದು ಸಾಧಣೂಕಿ ಮಾಡಿಕೊಂಡು ಬಂದರೆ ಅತನ ಮೇಲೆ ಅಗಳೀಕ ಮಾಡಿದ ಬಗ್ಗೆ ಕಾಯದೆಶೀರ ಇಲಾಜ ಮಾಡುವೆನು ಈ ತರ್ಹ ವ್ಯವಹಾರವು ನೋಂದಾಯಿಸಿ ಮುಂದೆ ಫಿರ್ಯಾದಿಗೆ ಕಾರಣವಾಗಬಾರದೆಂದು ಮುಂದಾಗಿ ಎಚ್ಚರಿಕೆಯು ನೋಟೀಸನ್ನು ಪ್ರಸಿದ್ಧ ಮಾಡಿದ್ದೇನೆ. ತಿಳಿಯುವದು ತಾ|| ೪ನೇ ಮೇ ೧೯೩೭ ನೇ ಇಸವಿ

ಸಹಿ- ಈಶ್ವರಪ್ಪಾ ತಂದಿ ಕಲ್ಲಪ್ಪಾ ಬಡಿಗೇರ

ನೋಟೀಸು

ಯಲ್ಲಪ್ಪಾ ಬಿನ್ನ ಶಿವಪ್ಪಾ ಅಡಿನವರ ಸಾ|| ಶಿರಗೇರಿ ತಾಲ್ಲೂಕ ಕೋಡ ಇವರಿಗೆ-

ಹಿರಿಯವ್ವಾ ಕೋಂ ಸಿದ್ದಪ್ಪಾ ಅಡಿನವರ ಸಾಕೀನ ಶಿರಗೇರಿ ತಾ|| ಕೋಡ ಈ ನೋಟೀಸಿನಿಂದ ತಿಳಿಸುವದೇನಂದರೆ ನನ್ನ ಗಂಡಾ ವ ನೀನು ಖಾಸ ಅಣತಮ್ಮರಾಗಬೇಕು ನನ್ನ ಗಂಡಾ ನೀನು ಪುಷ್ಕಳ ದಿವಸದಿಂದ ಬೇರೆ ಬೇರೆ ಬಾಳು ಮಾಡಿಕೊಂಡು ಇರತಿದ್ದಿ ನನ್ನ ಗಂಡಾ ಸತ್ತು ಎಳೆಂಟು ವರ್ಷ ಆಯಿತು ನನ್ನ ಗಂಡನ ದೀಪಾ ಬೆಳಿಯೋದರ ದಸಿಂದ ದತ್ತಕ ಮಗನ್ನ ಮಾಡಿಕೊಂಡಿನಿ ನನ್ನ ಗಂಡನ ಹಿಸೇದ ಜಮೀನು ಹೋದ ವರುಷ ನೀನೇ ಸ್ವಥಾ ೩೦೦ ರೂಪಾಯಿಗಳಿಗೆ ಲಾವಣಿಗೆ ಮಾಡಿಕೊಂಡೀದಿ ಇದರಂತೆ ಲೇಖದಲ್ಲಿ ದಾಖಲ ಅದೆ ಆ ಲಾವಣಿ ರಕಂ ರೀತಿಪ್ರಕಾರ ನನಗೆ ಕೊಟ್ಟು ಪಾವತಿ ತಗೋಬೇಕು ತಪ್ಪಿದರೆ ೧/೪ ದಂಡ ಸಮೂದ ಮಾಡಿ ನಿನ್ನ ಮೇಲೆ ದಾವಾ ಮಾಡತೇನೆ

ನನ್ನ ಗೈರಹಾಜರಿಯಲ್ಲಿ ಈಗ ೮-೧೦ ದಿವಸದ ಕೆಳಗೆ ನನ್ನ ಮನಿಗೆ ಕೀಲಿ ಹಾಕಿ ನನಗೆ ಒಳಗೆ ಹೋಗದಂತೆ ಪ್ರತಿಬಂಧ ಮಾಡಿದಿ ನನ್ನ ಬಾ|| ಯಾವತ್ತು ಸಾಮಾನು ೭-೮ ನೂರು ರೂಪಾಯಿ ಕಿಮ್ಮತ್ತಿನವು ಇರುತ್ತವೆ. ರೀತಿಪ್ರಕಾರ ನನ್ನ ಮನಿಗೆ ಹಾಕಿದ ಕೀಲಿ ತಗದು ಖುಲ್ಲಾ ಮಾಡಿಕೊಟ್ಟೆ ಒಳ್ಳೇದು ತಪ್ಪಿದರೆ ಫವಜದಾರಿಯಲ್ಲಿ ಫಿ|| ಮಾಡತೇನೆ ನೀನು ಕೀಲಿಹಾಕಿದ್ದು ಕಂಡಬಲ್ಲ ಸಾಕ್ಷಿದಾರರು ಮ್ಯಂಮಂಸಾಬ ಉಸ್ಮಾನಸಾಬ ತುಂಮಿನಕಟ್ಟಿ ಮೋದಿನಸಾಬ ಬಡೆಸಾಬ ಕೇಸನದಿ ಅಡಿವೆಪ್ಪಾ ಬಿನ ಸತ್ಯಪ್ಪಾ ಅಡಿನ ಈಸನಗವಡಾ ಕೆಂಚಂಡೆಪ್ಪಾ ಗವಡರ ಇವರು ಇರತಾರೆ ಇವರ ಸಾಕ್ಷಿ ಇಟ್ಟು ಫಿ|| ಮಾಡತೇನೆ ತಿಳಿಯುವದು ಯಾವತ್ತು ಖರ್ಚು ನಿಂನ ತಲಿಮೇಲೆ ಅದೆ.

ತಾ|| ೨೩-೪-೩೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಹಿರಿಯವ್ವಾ ಕೋಂ ಸಿದ್ದಪ್ಪಾ ಇಳಿದು ಅದೆ.

ನೋಟೀಸು.

—o—

ನಾಗಪ್ಪಾ ಶಿವಪ್ಪಾ ಗಂಟೆಣ್ಣನವ ಸಾಕೀನ ನವಲೂರ ಈತನಿಗೆ-

ಕೆಳಗೆ ಸಹೀ ಮಾಡುವ ಇಮಾಮಸಾಹೇಬ ಧನ್ನಸಾಹೇಬ ಧನ್ನಸಾಬನವರ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನಾನು ನಿನಗೆ ನನ್ನ ಖಾಸಗತ ಜಮೀನ ಆಗಾವು ಲಾವಣಿ ಕರಾರಿನಿಂದ ಮತ್ತು ನನಗೆ ಬೇರೆ ಬೇರೆ ಕಡಿಗಿರುವ ಸಾಲ ತೀರಿಸುವ ಕರಾರಿನಿಂದ ಮತ್ತು ನಿನಗೆ ಕೊಡತಕ್ಕ ಸಾಲಾ ಫೇಡ ಮಾಡಿಕೊಳ್ಳುವ ಶರ್ತಿನಿಂದ ಮೂರು ವರ್ಷದ ಮುಟ್ಟಿಗೆ ನಿನಗೆ ಕೊಡುವ ಮಾತು ಮಾಡಿಕೊಂಡೆನು. ಆದರೆ ನೀನು ಬ್ಯಾಂಕಿನ ಒಂದು ಸಾಲ ಮಾತ್ರ ಮುಟ್ಟಿಸಿರುತ್ತೀದಿ ಉಳಿದವರ ಸಾಲ ಕೊಟ್ಟಿಲ್ಲ ಅವರ ತಗಾದಿಯಾದ್ದರಿಂದ ನಾನು ಪರಭಾರೆ ಅವರ ಸಾಲಾ ಕೊಟ್ಟು ಕೊಂಡಿರುತ್ತೇನೆ. ಕಾರಣ ಅವರ ಸಾಲಾ ನೀನು ಕೊಡಬಾರದು ಮತ್ತು ನಾನು ನಿನಗೆ ಕೊಡತಕ್ಕ ರಕಮನ್ನು ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ಪಂಚರ ಸಮಕ್ಷಮ ತಕ್ಕೊಂಡು ಪಾವತಿ ಕೊಡಬೇಕು. ಇದಕ್ಕೆ ತಪ್ಪಿದರೆ ಸದರ ರಕಮನ್ನು ನಾನು ಕೋರ್ಟ ಸುರುವಿಗೆ ಕೋರ್ಟಿನಲ್ಲಿ ಹಾಜರ ಮಾಡವೆನು ನಿನ್ನ ಕಡಿಗೆ ನನ್ನದೊಂದು ಪ್ರಾಮಿಸರೀ ನೋಟು ೫ವತ್ತು ರೂಪಾಯದ್ದು ಪೋಕಳ ಉಳಿದದೆ ಅದನ್ನು ದಸ್ತಾಯಿಜದಲ್ಲಿ ಹವಾಲಿ ಕೊಟ್ಟಿರುತ್ತದೆ. ಅದನ್ನು ನನಗೆ ಪರತ ಕೊಡಬೇಕು ಇಲ್ಲವಾದರೆ ರದ್ದೇಕಾ ತಿಳಿಯಬೇಕು ನೀನು ಕರಾರ ಪ್ರಕಾರ ನಡಿಯದರಿಂದ ನಿನಗೆ ನನ್ನ ಜಮೀನು ಕೊಡಲಿಕ್ಕೆ ಇಚ್ಛಿಸುವದಿಲ್ಲ ನೀನು ನನ್ನ ಜಮೀನದಲ್ಲಿ ಬರಬಾರದು ಬಂದರೆ ನಿನ್ನ ಮೇಲೆ ಕಾಯದೆಶೀರ ಇಲಾಜ ಮಾಡುವೆನು ಸದರ ಜಮೀನು ಸಾಗವಳಿ ದಸೆಯಿಂದ ನಿನ್ನ ಕಬಜಾ ಕೊಟ್ಟಿರುವದಿಲ್ಲ ತಿಳಿಯುವದು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲುಂಟು. ತಿಳಿಯುವದು.

ತಾ|| ೩ ಮೇ ೧೯೩೭ ನೇ ಇಸವಿ

ಸಹಿ ಇಮಾಮಸಾಬ ದನ್ನಸಾಬ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ಗುರುವಾರ ತಾರೀಖು ೬ ನೇ ಮೇ ೧೯೩೭ ಸಂಚಿಕೆ ೧೦೮

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಜಾಹೀರ ನೋಟೀಸು.

ಕೆಳಗೆ ಹೆಬ್ಬಟ್ಟಿನ ಗುರತಾ ಮಾಡುವ ಕಾಳವ್ವಾ ಕೋಮ ದಾದಪ್ಪಾ ನಿಪ್ಪಾಣಿ ಸಾಕೀನ ಧಾರವಾಡ ದರೋಗಾಗಲ್ಲಿ ಈಕೆಯು ಈ ಜಾಹೀರ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ-

ನಾನು ಮತ್ತು ಮಯತ ಹಾಲಪ್ಪಾ ತಂದಿ ರಾಮಪ್ಪಾ ಕುಂದಗೋಳ ಉರ್ಫ ಕರಾಟಿ ಏಕೋದರರು ಇದ್ದು ಸದರ ನನ್ನ ಅಣ್ಣ ಹಾಲಪ್ಪನಿಗೆ ಈರಪ್ಪಾ ಎಂಬವನು ಅಜಮಾಸ ೪೦-೪೫ ವರ್ಷದ ಮಗನಿದ್ದಾನೆ. ಈತನಿಗೆ ಹೆಂಡರು ಮಕ್ಕಳಾರೂ ಇಲ್ಲ. ಅವರೆಲ್ಲರು ಸತ್ತಿರುತಾರೆ ಈತನಿಗೆ ಸರಳ ವಾರಸದಾರರು ಮತ್ತು ಹಿತಕರ್ತರು ನಾನು ಅಂದರೆ ಆತನ ಸೋದರತ್ತೆಯಾಗಿಂತೇನೆ ಸದರ ನನ್ನ ಸೋದರಳಿಯ ಈರಪ್ಪನಿಗೆ ಈಗೊಂದು ವರ್ಷದಿಂದ ಹುಚ್ಚು ಹಿಡಿದು ಭ್ರಮಿಷ್ಟನಾಗಿದ್ದಾನೆ. ಆತನ ಬುದ್ಧಿಯು ಸ್ಥಿರವಾಗಿರುವದಿಲ್ಲ. ಮನಸ್ಸಿಗೆ ಬಂದಂತೆ ಮಾತಾಡತಾನೆ ಕೃತಿ ಮಾಡತಾನೆ, ಈತನ ಹುಚ್ಚತನದ ಫಾಯದೆ ತಕ್ಕೊಂಡು, ನನಗೆ ಆಗಲಾರದವರು ಈತನಿಂದ ಕಾಗದಪತ್ರ ಮಾಡಿಸಿಕೊಂಡು, ನಮ್ಮ ಪಿತ್ರಾರ್ಜಿತ ಅಂದರೆ- ಸದರ ಹಾಲಪ್ಪನ ಸ್ಥಾವರ ಜಂಗಮ ಆಸ್ತಿಯನ್ನು ಪರಾಧೀನ ಮಾಡಿಕೊಳ್ಳುವ ಮಸಲತ್ತಿನಲ್ಲಿದ್ದಾರೆಂದು ಬಾತಮಿ ಕೇಳತೇನೆ. ಆದುದರಿಂದ ಈ ಜಾಹೀರ ನೋಟೀಸು ಕೊಡುವ ಅಗತ್ಯವುಂಟಾಯಿತು. ಸದರ ಈರಪ್ಪಾ ಈತನಿಂದ ಯಾರೂ ಯಾವ ಪ್ರಕಾರದ ಆಸ್ತಿಯನ್ನು ಪತ್ರಿ, ಕೋರಪತ್ರಿ, ಬಕ್ಷೀಸ, ಖರೀದಿ, ದಾನಪತ್ರ ವಗೈರೆ ಮುಂತಾದ ಯಾವದೇ ರೀತಿಯಿಂದ ಲಿಹಿ ಬರಿಸಿಕೊಳ್ಳಬಾರದು. ಬರ ಬರಿಸಿಕೊಂಡರೆ- ಅದು ಬೇಕಾಯದೇಶೀರ ಆಗಿ ರದ್ದ ಬಾತಲ ಆಗುವದು. ಸದರ ಈರಪ್ಪನಿಗೆ ಈ ಆಸ್ತಿಯನ್ನು ಪರಾಧೀನ ಮಾಡುವದಕ್ಕೆ ಯಾವ ಕಾರಣವೂ ಇಲ್ಲ. ಪ್ರಪಂಚದ ವಿಚಾರವೇ ಇರುವದೇ ಇಲ್ಲ. ಆದ್ದರಿಂದ ಈತನ ಕೈಯಿಂದ ಮಾಡಿಸುವ ಯಾವತ್ತು ವ್ಯವಹಾರವು ಬೇಕಾಯದೇಶೀರವಾಗುವದು. ಮತ್ತು ಈ ನೋಟೀಸಿನ ವಿರುದ್ಧ ಯಾರಾದರೂ ನಡೆದರೆ- ನಾನು ಅವರ ಮೇಲೆ ಕಾಯದೇಶೀರ ಇಲಾಜ ಮಾಡಿ, ಲುಕಸಾನ ಸಹಿತವಾಗಿ ಅವರಿಂದ ನನಗೆ ಬರತಕ್ಕ ಆಸ್ತಿಯು ಕಬಜಾ ಸಹಾ ತಕ್ಕೊಳ್ಳುವೆನು. ಆ ಸಂಬಂಧಿ ಹತ್ತುವ ಯಾವತ್ತು ಖರ್ಚಿನ ಬೋಜಾ ಈ ವ್ಯವಹಾರ ಮಾಡುವಂಥವರ ಮೇಲೆ ಬೀಳುವದು. ಅಂತಾ ಜಾಹೀರ ಮಾಡಿದ ನೋಟೀಸು.

ತಾರೀಖು ೪ ಮೇ ೧೯೩೭ ನೆಯ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಕಾಳವ್ವಾ ಕೋಮ ದಾದಪ್ಪಾ ನಿಪ್ಪಾಣಿಯವರ ಈಕಿಯದು ಇರುತ್ತದೆ.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ ”	೬—೦—೦ ರೂ
೪ ”	೪—೧—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೫-೫-೨೭ ನೇ ಇಸ್ವಿ

ಸ್ಥಾನಿಕ ಸ್ವರಾಜ್ಯದ ಪರಿಷತ್ತಿನಲ್ಲಿ ಶ್ರೀ ಹೊಸ್ಮಾನೂರವರ ವಕೀಲರು ಮಾಡಿದ ಭಾಷಣವು.

ನಂಬರ ೨

ಸ್ಥಾನಿಕ ಸ್ವರಾಜ್ಯಗಳು ಪ್ರಜಾಹಿತವಾಗುವಂಥ ಕೆಲಸಗಳಿಗಾಗಿ ಕರ-ಪಟ್ಟಿಗಳನ್ನು ಕೂಡಿಸುವಾಗ, ಜನರು ಅವುಗಳ ಕೂಡ ಸಹಕಾರ ಮಾಡುವದು ಒಂದು ಕರ್ತವ್ಯವಾಗಿರುತ್ತದೆ. ಲೋಕಲ ಬೋರ್ಡು ಒತ್ತಾಯದ ಶಿಕ್ಷಣಕ್ಕಾಗಿಯೂ ಮ್ಯುನಿಸಿಪಾಲಿಟಿಯು ನೀರಿನ ಸಂಗ್ರಹಕ್ಕಾಗಿಯೂ ಹೆಚ್ಚಿಗೆ ಕರ ಕೂಡಿಸುವದಾದರೆ, ಇದಕ್ಕೆ ಸಹಾಯ ಮಾಡುವದು ಪ್ರಜೆಗೆ ಅವಶ್ಯವಾದ ಕೆಲಸವಾಗುತ್ತದೆ. ಸ್ಥಾನಿಕ ಸ್ವರಾಜ್ಯಗಳು ವಿಕಿಧಿಯಿಂದಲೂ ಜಾಣತನದಿಂದಲೂ ದ್ರವ್ಯದ ವ್ಯಯ ಮಾಡುತ್ತವೆಂದು ಕಂಡು ಬಂದಾಗ, ಸುಶಿಕ್ಷಿತರಾದರೂ ಹೆಚ್ಚಿನ ಕರದ ದಸೆಯಿಂದ ತಕರಾರು ಮಾಡತಕ್ಕದ್ದಿಲ್ಲ. ಜನರನ್ನು ತಮ್ಮ ವಿಶ್ವಾಸದಲ್ಲಿ ತಕ್ಕೊಂಡು, ನಿಜ ಸಂಗತಿಯನ್ನು ಅವರಿಗೆ ತಿಳಿಸಿ ಹೇಳುವದೂ ಸ್ಥಾನಿಕ ಸ್ವರಾಜ್ಯಗಳ ಕರ್ತವ್ಯವಾಗಿರುತ್ತದೆ. ಸ್ಥಾನಿಕ ಸ್ವರಾಜ್ಯಗಳು ತಮ್ಮ ಲೆಖ್ಖ ಪತ್ರಗಳನ್ನು ಸರಿಯಾಗಿಟ್ಟು ತಮ್ಮ ಠರಾವುಗಳನ್ನು ಸರಿಯಾಗಿ ಬರೆದು, ಅವುಗಳನ್ನು ಆಗಾಗ್ಗೆ ಪ್ರಸಿದ್ಧ ಮಾಡಬೇಕು. ಮಹತ್ವದ ವಿಷಯಗಳ ಚರ್ಚೆ ನಡೆದಾಗ ಜನರನ್ನು ವಿಶೇಷವಾಗಿ ಸುಶಿಕ್ಷಿತರನ್ನು ಕರೆಸಿ, ಅವರು ಅವುಗಳ ಚರ್ಚೆಯಲ್ಲಿ ಲಕ್ಷ್ಯವನ್ನು ಹಾಕುವಂತೆ ವ್ಯವಸ್ಥೆ ಮಾಡಬೇಕು. ಯಾವದೊಂದು ಬಜೆಟ್ಟನ್ನು ಅವಸರದಿಂದ ಪಾಸ ಮಾಡಬಾರದು. ಬಜೆಟ್ಟನ್ನು ಜನರಲ ಕಮಿಟಿಯಲ್ಲಿ ಪಾಸ ಮಾಡುವ ಮುಂಚಿತವಾಗಿ ಅದನ್ನು ವರ್ತಮಾನಪತ್ರಗಳಲ್ಲಿ ಪ್ರಸಿದ್ಧ ಮಾಡಿ, ಅದರ ಮೇಲೆ ಲೋಕ ಚರ್ಚೆಯಾಗುವಂತೆ ವ್ಯವಸ್ಥೆ ಮಾಡಬೇಕು. ಇದೇ ಪ್ರಕಾರ ಊರೊಳಗಿನ ಕೆಲ ಪ್ರಮುಖರನ್ನು ಕರಕೊಂಡು ಹೋಗಿ, ಸ್ಥಾನಿಕ ಸ್ವರಾಜ್ಯಗಳು ಮಾಡಿದ ಕಾಮಗಾರಿಗಳನ್ನು ಅವರಿಗೆ ತೋರಿಸಬೇಕು. ಇದರಿಂದ ಸಾರ್ವಜನಿಕರ ಮೇಲೆ ಒಳ್ಳೇ ಪರಿಣಾಮವಾಗುವದಲ್ಲದೆ, ಸ್ಥಾನಿಕ ಸ್ವರಾಜ್ಯದ ಗೌರವ ಪ್ರತಿಷ್ಠೆಯೂ ಬೆಳೆಯುವದು.

ಚೀಫ ಆಫೀಸರ, ಪ್ರೆಸಿಡೆಂಟ ಮತ್ತು ಚೇರಮನ್ನರು ಚಟುವಟಿಕೆಯುಳ್ಳವರೂ, ಪ್ರಾಮಾಣಿಕರೂ ಕೆಲಸದಲ್ಲಿ ನಿಯಮಿತತನವುಳ್ಳವರೂ ಇದ್ದು, ಆಳುಗಳು ಮತ್ತು ಬೇರೆ ಕಾಮದಾರರು ಮಾಡುವ ಕೆಲಸಗಳ ಮೇಲೆ ದಕ್ಷತಾಪೂರ್ವಕವಾದ ದೃಷ್ಟಿ ಇಟ್ಟ ಹೊರತು, ಜನರು ಸ್ಥಾನಿಕ ಸ್ವರಾಜ್ಯದ ಆಡಳಿತೆಯನ್ನು ಮೆಚ್ಚರು ಮತ್ತು ಸ್ಥಾನಿಕ ಸ್ವರಾಜ್ಯಗಳ ಕೂಡ ಸಹಕಾರ ಮಾಡಲಾರರು. ಇದರ ಹೊರತು ಮೆಂಬರರಲ್ಲಿ ಐಕ್ಯಮತ್ಯವೂ ಬಂಧುಪ್ರೀತಿಯೂ ಅವಶ್ಯವಾಗಿರಬೇಕೆಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಪಕ್ಷ ಪರಪಕ್ಷಗಳು ಈ ಸಂಸ್ಥೆಗಳ ಪ್ರಗತಿಗೆ ವಿಘ್ನ ಮಾತ್ರ ತರುತ್ತವೆ. ಪ್ರೆಸಿಡೆಂಟ, ಚೇರಮನ್ನ ಮೊದಲಾದವರ ಚುನಾವಣೆಯ ವೇಳೆಯಲ್ಲಿ ಪಕ್ಷಗಳಾದರೆ ಅಡ್ಡಿಯಿಲ್ಲ; ಆದರೆ ಚುನಾವಣೆಯಾದ ಕೂಡಲೆ ಒಬ್ಬರಕೂಡ ಒಬ್ಬರು ತಮ್ಮ ವಿರುದ್ಧ ಪಕ್ಷದವರು ಮುಖ್ಯಸ್ಥರನ್ನು ಆಕ್ರಮಿಸಿದರೂ, ಅವರ ಕೂಡ ಸಹಕಾರದಿಂದ ನಡೆಯತಕ್ಕದ್ದು. ವ್ಯಕ್ತಿಯಲ್ಲ; ಕೃತಿಯು ಎಂಬ ತತ್ವವಿರಬೇಕು. ಪಾರ್ಲಮೆಂಟ ಸಭೆಯಲ್ಲಿ ಪಕ್ಷಭೇದದಿಂದಲೇ ಕೆಲಸ ನಡೆಯುವದು ಅದೇ ಪ್ರಕಾರ ಇಲ್ಲಿಯೂ ನಡೆದರೆ ಅಧಿಕಾರಾರೂಢ ಪಕ್ಷದ ಮೇಲೆ ವಚಕು ಕೂಡುವದೆಂದು ಕೆಲವರು ಹೇಳುತ್ತಾರೆ. ನಮ್ಮ ದೇಶದಲ್ಲಿನ ಶಿಕ್ಷಣದ ಪರಿಸ್ಥಿತಿಯನ್ನು ನೋಡಲಾಗಿ ಪಕ್ಷಭೇದದಿಂದ ಸ್ಥಾನಿಕ ಸ್ವರಾಜ್ಯದ ಕೆಲಸವು ಹಿಂದೆ ಬಿದ್ದು ಸಾರ್ವಜನಿಕ ಹಿತಕ್ಕೆ ಬಾಧೆ ತಟ್ಟುವದು. ಈ ವಿಷಯವಾಗಿ ಶ್ರೀ. ಕೇಳಕರವಾಲಾ ಮತ್ತು ಮಹಾತ್ಮಾ ಗಾಂಧಿಯವರು ವ್ಯಕ್ತಪಡಿಸಿದ ವಿಚಾರಗಳನ್ನು ಹೇಳುತ್ತೇನೆ. ಮದ್ರಾಸ ಮ್ಯುನಿಸಿಪಾಲಿಟಿಯು ಕೊಟ್ಟ ಮಾನಪತ್ರಕ್ಕೆ ಶ್ರೀ. ಕೇಳಕರವಾಲಾ ಅಂದದ್ದು:-

ಊರು ಮತ್ತು ಪಟ್ಟಣಗಳ ಮ್ಯುನಿಸಿಪಾಲಿಟಿಗಳಿಗೆ ದಿನಪ್ರೊಂದರಲ್ಲಿಯೂ ಮಾನವ ಜಾತಿಯ ಸಂಬಂಧವುಂಟು. ಮತ್ತು ದಿನಾಲು ಅನೇಕ ಬಗೆಯಾಗಿ ಮಾನವ ಜಾತಿಯ ಹಿತಕ್ಕಾಗಿ ಕೆಲಸ ಮಾಡಬೇಕಾಗುತ್ತದೆ. ಈ ಕರ್ತವ್ಯಗಳು ಪಟ್ಟಣಗಳಿಗೆ ಬಲುಕಟ್ಟಾದ ಮತ್ತು ಧಷ್ಟಪುಷ್ಟರಾದ ಗಂಡಸರನ್ನೂ, ಆರೋಗ್ಯಸ್ಥಿತಿಯುಳ್ಳಂಥ ಮತ್ತು ರೂಪವತಿಯರಾದಂಥ ಸ್ತ್ರೀಯರನ್ನೂ ಕೊಡುವದಲ್ಲದೆ, ಅಲ್ಪಾಯುಷಿಯಾಗದೆ ದೀರ್ಘಾಯುಷಿಯಾದಂಥ ಜನನಿಜನಕರನ್ನು ಕೊಡುತ್ತವೆ.

ಮಹಾತ್ಮರು ಅನ್ನುವದು-

ಯಾವದೊಂದು ಮ್ಯುನಿಸಿಪಾಲಿಟಿಯು ಜನರಿಗೆ ಸಂಶಯ ಬರದಂತೆ ತನ್ನ ಲೆಖ್ಖ ಪತ್ರಗಳನ್ನಿಡುವಂತೆ ಸಂಶಯ ಬರದಂತೆ ಊರುಗಳನ್ನು ಸ್ವಚ್ಛವಾಗಿಡುವದೂ ಮ್ಯುನಿಸಿಪಾಲಿಟಿಯ ಕರ್ತವ್ಯಕರ್ಮವಾಗಿರುತ್ತದೆ. ಅನೇಕ ಪ್ರಸಂಗಗಳಲ್ಲಿ ಮೆಂಬರರು ಚೇರಮನ್ನರನ್ನೇ ವಿರೋಧಿಸುತ್ತಾರೆ. ಇದು ಸರಿಯಲ್ಲ. ಆರೋಗ್ಯ ರಕ್ಷಣೆಯೇ ಮ್ಯುನಿಸಿಪಾಲಿಟಿಗಳ ಮುಖ್ಯ ಕರ್ತವ್ಯವು. ದೇವತ್ವದ ತರುವಾಯ ಶುಚಿರ್ಭೂತತ್ವವೆಂದು ಒಂದು ಗಾದೆಯು ಮಾತುಂಟು. ತಂತಮ್ಮ ಜಾತಿಗಳಿಗೆ ಯೋಗ್ಯವೆನಿಸುವಂತೆ ಮನು, ಮೋಸೆಸ ಮತ್ತು ಮಹಮ್ಮೈಗಂಬರರು ಆರೋಗ್ಯದ ನಿಯಮಗಳನ್ನು ಹಾಕಿದ್ದಾರೆ. ಪ್ರಾಚೀನ ಧರ್ಮಶಾಸ್ತ್ರಕಾರರು ಸ್ವಚ್ಛತೆ ಮತ್ತು ಆರೋಗ್ಯತೆಯನ್ನು ಧರ್ಮದ ಒಂದು ಸೂತ್ರವಾಗಿ ತಿಳಿದಿದ್ದಾರೆಂಬದನ್ನು ತಿಳಕೊಂಡರೆ ಸಾಕು.

ಶ್ರೀ ಶಿವಾಜಿಮಹಾರಾಜರ ಮುನ್ನೂರು ವರ್ಷಗಳ ಜಯಂತಿಯು-

ಈ ಉತ್ಸವವು ಮೇ ೩ನೇ ದಿನದಿಂದ ಪ್ರಾರಂಭವಾಗಿದೆ. ಹತ್ತು ದಿವಸಗಳ ಪರ್ಯಂತರ ನಡೆಯುವಂತೆ ಮುಂಬಯಿ ಪುಣೆ ಪಟ್ಟಣಗಳಲ್ಲಿ ಕಾರ್ಯಕ್ರಮಗಳು ಗೊತ್ತು ಮಾಡಲ್ಪಟ್ಟಿವೆ. ಮದ್ರಾಸು, ಕಲಕತ್ತೆ ಮುಂತಾದ ದೂರ ದೂರಿನ ಪಟ್ಟಣಗಳಲ್ಲಿಯೂ ಉತ್ಸವಗಳು ನಡೆದಿವೆ. ಕರ್ನಾಟಕದಲ್ಲಿ ಮಾತ್ರ ಹುಚ್ಚೇ [illegible] ದೀಪದಂತೆ ಉತ್ಸವದ ಬೆಳಕು [illegible]ತ್ತಿರುವದು.

೨೦ ೪೦ ವರ್ಷಗಳ ಕೆಳಗೆ ಶ್ರೀ ಶಿವಾಜಿ ಮಹಾರಾಜನು ಕಳ್ಳನು, ದರೋಡೆಗಾರನು ಕೊಳ್ಳೆಕೋರತಕ್ಕವನೆಂದು ವಿದ್ಯಾರ್ಥಿಗಳಿಂದ ಶಾಲೆಗಳಲ್ಲಿ ಮುಖಪಾಠ ಮಾಡಿಸುತ್ತಿದ್ದರು. ಆದರೆ ಅದೇ ಶ್ರೀ ಶಿವಾಜಿ ಮಹಾರಾಜನು ಇಂದು ಸಾಮ್ರಾಜ್ಯಾಧಿಪತಿಯೆಂದು ಕೀರ್ತನೆ ನಡೆದಿರುತ್ತದೆ.

ಶ್ರೀ ಶಿವಾಜಿ ಮಹಾರಾಜನ ನಿಜವಾದ ಯೋಗ್ಯತೆಯನ್ನು ಜಗತ್ತಿನ ನಿದರ್ಶನಕ್ಕೆ ತಂದು ಕೊಡುವದಕ್ಕಾಗಿ ಪ್ರಾರಂಭಿಸಿದ ಉತ್ಸವದಲ್ಲಿ ಸರಕಾರಕ್ಕೆ ರಾಜದ್ರೋಹ ಕಂಡಿತು. ಈ ಉತ್ಸವದ ಮೇಲೆ ಅಧಿಕಾರಿಗಳ ಹಾಗು ಗುಪ್ತ ಪೋಲಿಸರ ಸುದರ್ಶನ ಚಕ್ರವು ಒಂದೇ ಸಮನೆ ತಿರುಗುತ್ತಾ ಇಂತು.

ಅಸಹಕಾರ ಚಳವಳಿ ಪ್ರಾರಂಭವಾದ ಕೂಡಲೆ ಮರಾಠಾ ಜನರ ಪ್ರೀತಿಯನ್ನು ಗಳಿಸುವದಕ್ಕಾಗಿ ಅಳರಸರು ಈ [illegible] ಹಿತಕರ್ತರಾದರು [illegible] ...ಬೇ ಪುಣೆ [illegible] ಹಡಿಸುವ ಸಮಾರಂ

ಭವಾಡಿಸಿ ಶಿವಾಜಿ ರಾಜ್ಯ ಸ್ಥಾಪಕ ನಾತ್ರನಲ್ಲದೆ, ರಾಷ್ಟ್ರನಿರ್ಮಾಣ ಮಾಡಿದವನೆಂದು ಇವರ ಬಾಯಿಯಿಂದ ನುಡಿಸಿದರು. ಈಗಂತೂ ಇದೊಂದು ಸಾರ್ವಜನಿಕ ಹಬ್ಬವೆಂದು ಜಾ[illegible]ರ ಮಾಡಿದ್ದಾರೆ.

ಇಂಗ್ಲಿಷ ಜನರಂತೆ ಮುಸಲಮಾನರೂ ಶ್ರೀ ಶಿವಾಜಿ ಮಹಾರಾಜನಲ್ಲಿ ಅದಾವೃಳ್ಳವರಾಗಿದ್ದಾರೆ. ಶ್ರೀ ಶಿವಾಜಿಯು ಔರಂಗಜೇಬನ ವಿರುದ್ಧ ಬಂಡಾಯ ಮಾಡಿ, ಹಿಂದೂ ರಾಜ್ಯಸ್ಥಾಪಿಸಿದರೂ, ಆತನು ಆ ಕಾಲಕ್ಕೆ ಯೋಗ್ಯ ಕರ್ತವ್ಯ ಮಾಡಿದನೆಂದೇ ಮುಸಲಮಾನರು ಅನ್ನುತ್ತಿದ್ದಾರೆ. ಶಿವಾಜಿಯು ಜುಲುಮಿಯ ಆಡಳಿತೆಯನ್ನು ಮುರಿದು ಸ್ವಾತಂತ್ರ್ಯಕ್ಕಾಗಿ ಹೋರಾಡಿದನು. ಆದ್ದರಿಂದ ಆತನು ಧನ್ಯನು. ಆತನಂತೆ ಎಲ್ಲರೂ ಸ್ವಾತಂತ್ರ್ಯಪ್ರಿಯರಾಗಿ ಪ್ರಕೃತಿಯಲ್ಲಿ ಒಗ್ಗಟ್ಟಿನಿಂದ ನಡೆಯಬೇಕೆಂದು ವೈಲಿಯನ್ನು ಶೌಕತಲ್ಲಿ ಮೊದಲಾದವರು ಈ ಉತ್ಸವದಲ್ಲಿ ಸೇರಿದ್ದಾರೆ.

ಒಟ್ಟು ಕಳ್ಳ ಕೂಡುಗರಿದ್ದವರು ಸಮ್ರಾಟರಾದದ್ದು ಇಂಗ್ಲಿಷ ಇತಿಹಾಸ ಲೇಖಕರಲ್ಲಿ ಕಂಡು ಬಂದ ಅಂತರವು ಕಾಲಕ್ಕೆ ನನುಸ್ಕಾರ ಸಾಹುಕಾರಿಂತಾಗಿರುತ್ತದೆ. ಅಕಬರನ ಮತ್ತು ಜೀತೆ ಪ್ರಸಂಗಗಳಲ್ಲಿ ಅನೇಕ ಜನ ಭಾರತೀಯರು ಆತ್ಮಾರ್ಪಣ ಮಾಡಿದ್ದಾರೆ. ಕೆಲವು ವರ್ಷಗಳನಂತರ ಇವರೂ ಉಜ್ವಲ ದೇಶಭಕ್ತರೆಂದು ಮೆರೆಯಿಸಿಯನ್ನು ಕಾಣಮಾರರೇ ಹೋಗುವಂಥ ದಿವಸಗಳನ್ನು ಕಾಣಬಹುದೆಂದು ಅನಿಸುತ್ತದೆ.

ಮುಂಬಯಿಯಲ್ಲಿ ಶ್ರೀ ಶಿವಾಜಿ ಉತ್ಸವಕ್ಕೆ ವಿಘ್ನ

—o—

ಪೋಲೀಸ ಕಮೀಶನರ ಜೊಳ್ಳು ವಿಚಾರ.

—o—

ಮುಂಬಯಿಯಲ್ಲಿ ಶ್ರೀ ಶಿವಾಜಿಯ ಉತ್ಸವ ಕಮೀಟಿಯವರು ಆನೆಯ ಮೇಲೆ ಮಹಾರಾಜರ ಭಾವ ಚಿತ್ರ ಮೆರಿಸತಕ್ಕವರಿದ್ದರು. ಮೆರವಣಿಗೆಯಲ್ಲಿ ದಾಂಡಪಟ್ಟಾ, ಆಟ ನಡೆಯತಕ್ಕದ್ದಿತ್ತು. ಘಟಸಿಯ ಮಂಡಳಿಗಳೂ ಇರುತ್ತಿದ್ದವು. ಮೆರವಣಿಗೆಯಲ್ಲಿ ಆನೆಗಳಿರುವದರಿಂದ ದಾರಿ ಕಟ್ಟಾಗುವದು. ರಾಜಾ ಕುದುರೆಗಳನ್ನು ಮಾತ್ರ ಸೇರಿಸಿರಿ. ದಾಂಡಪಟ್ಟೆ ಆಡುವದಿರಿ ಮತ್ತು ಘಟಸಿಯ ಜನರ ಹಾಡುವದಗಳ ವಿವರವನ್ನು ಮುಂದಾಗಿ ತಿಳಿಸಿರೆಂದು ಪೋಲೀಸ ಕಮೀಶನರರು ಕಮಿಟಿಗೆ [illegible] ಸಾಹೇಬರು [illegible] [illegible] ಅಭಿಮಾನವನ್ನು ಅವಮಾನಿಸುವ ಧಾರ[illegible] [illegible]

ದ್ದು ಆಗರುತ್ತದೆಂದು ಉತ್ಸವ ಕಮೀಟಿಯವರು ನಿರ್ಣಯಿಸಿ, ಮೆರವಣಿಗೆಯ ವಿಚಾರವನ್ನೇ ರಹಿತ ಪಡಿಸಿದರು.

ಬಡೋದೆಯಲ್ಲಿ ಹಿಂದೂ ಮುಸಲಮಾನರ ದಂಗೆ.

—o—

ಬಡೋದೆಯಲ್ಲಿ ಶ್ರೀ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆಯು [illegible] ಗೋಪುರದ ಹತ್ತರ ಹೋಗುತ್ತಿದ್ದಾಗ, ಹತ್ತಿರ ಇದ್ದ ಜುಮ್ಮಾ ಮಸೀದೆಯಲ್ಲಿ ಕೂತಿದ್ದ ಮುಸಲಮಾನರು [illegible] ಸಿಟ್ಟಿಗೆದ್ದು ದಂಗೆ ಮಾಡಿ, ಹಿಂದೂ ಜನರನ್ನು [illegible] [illegible] ಒಬ್ಬನಿಗೆ [illegible] [illegible]. ಇವತ್ತು ಸರದಾರ [illegible]ಗಿದ್ದಾರೆ

ಮೆರವಣಿಗೆಯಲ್ಲಿ ಪೋಲೀಸ ಕಮೀಶನರ ಮೊದಲಾಗಿ [illegible] ದೊಡ್ಡ ಸರದಾರ ಮಾನಕರಿಗ ಳಿದ್ದರು. ಆದರೂ ಮುಸಲಮಾನರು ದಂಗೆ ಮಾಡಿದರು. ದಂಗೆಯಾದರೂ, ಉತ್ಸವವು [illegible] [illegible]ಗೆ ಹೋಯಿತು. ಪಟ್ಟಣದ ತುಂಬ ಪೋಲೀಸ ಕಾ[illegible] ಲಿಟ್ಟಿದ್ದಾರೆ.

ಹುಟಗಿ ಸೊಲ್ಲಾಪೂರ ರೇಲ್ವೆ-

[illegible] ತಿಂಗಳ [illegible] ತಾರೀಖಿನಿಂದ ಹುಟಗಿಯಿಂದ ಸೊಲ್ಲಾಪೂರದ [illegible] [illegible] ರೇಲ್ವೆಯು [illegible] [illegible] ಈ ಒಂಡಿಸ ರುವಂದ [illegible], [illegible] ರದಿಂದ ಸೊಲ್ಲಾಪೂರದ [illegible] [illegible] [illegible] ಒಂದೇ [illegible]. [illegible] ಗದಗಿನ [illegible] ಬಂಡಿಗಳು [illegible] ವಿಜಾಪೂರ ಮತ್ತು ಬಾಗಲಕೋಟೆಯ ಮಧ್ಯದಲ್ಲಿ ಮಾತ್ರ [illegible] ಬಂಡಿಗಳಾಗುವವು. ಈ ನಡುವಿನ ಸ್ಟೇಶನಗಳ [illegible] [illegible] ಡಿದ [illegible]ವೆಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ. ಕಂಪನಿಗೆ ಲಾಭ ಕಂಡು ಬಂದಿರಬಹುದಲ್ಲವೇ ಉತ್ತರವು.

ಮುಹಂತ ಮತ್ತು ಅರ್ಚಕರ ಜಗಳ-

ತಿರುಪತಿಯಲ್ಲಿನ ಶ್ರೀರಾಮದೇವರ ಅರ್ಚಕರಿಗೂ ಮುಹಂತರಿಗೂ ಕಲಹ ಬಂದಿದೆ. ಮುಹಂತರು ಸಿಸ್ತಿನ ಸಮ್ಮತಿ ಮಾಡಿ, ಒಬ್ಬ ಅರ್ಚಕರನ್ನು ಬರ್ತರ್ಫ ಮಾಡಿದರು. ಮುಂದೆ ದಂಗೆಯಾಗುವದೆಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಶಾಂತತಾಭಂಗದ [illegible] ಕಲಮಿನ ಜಾಹೀರನಾಮೆ ಹಚ್ಚಿದರು. ಇದರ ಮೇಲೆ [illegible] [illegible] [illegible] ಯಿತು. [illegible] [illegible] [illegible]

ದಿಯ ಹುಕುಮನ್ನು ರದ್ದು ಪಡಿಸಿ, ಪ್ರಕರಣವನ್ನು ಕೊನೆಯ ತೀರ್ಪಿಗಾಗಿ ಹಾಯಕೋರ್ಟಿಗೆ ಕಳಿಸಿದ್ದಾರೆ.

ಮಾಂಸಾಹಾರದ ಮೇಲೆ ಶಾಕಾಹಾರದ ಜಯ-

ಮಹಾತ್ಮರ ಚಿರಂಜೀವನಾದ ಮಣಿಲಾಲನಿಗೆ ಜ್ವರ ಬಂದು, ಅಶಕ್ತತೆಯುಂಟಾಯಿತು. ಡಾಕ್ಟರರು ಬಂದು, ಪ್ರಕೃತಿಯ ನಿದಾನ ಮಾಡಿ, ಶಕ್ತಿ[illegible]ನ್ನು ತಿನ್ನಲಿಕ್ಕೆ ಹೇಳಿದರು. ಮಹಾತ್ಮರು ಶಾಕಾಹಾರಿಗಳಾದ್ದರಿಂದ ಮಾಂಸಾಹಾರಕ್ಕೆ ಒಪ್ಪಲಿಲ್ಲ. [illegible] ದಲೇ ಗುಣವಾಗಬೇಕೆಂಬ ಭಾವನೆಯುಳ್ಳವರಾಗಿದ್ದರು. ಆ ಪ್ರಕಾರ ಮಗನಿಗೆ ನೀರು ಕೊಟ್ಟಿಲ್ಲದೆ, [illegible] ಒಪ್ಪುವಾದ ಆಹಾರ ಕೊಟ್ಟರು. ಇದರಿಂದಲೇ ಜ್ವರ ಸರಿದು ಬಿಟ್ಟಿತು. ಮಗನಿಗೆ ಗುಣವಾಯಿತು. ಮಾಂಸಾಹಾರದ ಮೇಲೆ ಶಾಕಾಹಾರದ ಜಯವಾಯಿತೆಂದು ಮಹಾತ್ಮರು ತಮ್ಮ ಜೀವನ ಚರಿತ್ರೆಯ [illegible] ಗವನ್ನು ನವಜೀವನದಲ್ಲಿ ಪ್ರಸಿದ್ಧ ಮಾಡಿದ್ದಾರೆ.

ಸುಸ್ವಾಗತ ಅಭಿನಂದನ-

[illegible] ದೇಶಾಯರು [illegible] [illegible] [illegible] ಶಕ್ತಿಯಿಂದ [illegible] ಆಗಿದ್ದಾರೆ [illegible] [illegible] [illegible] [illegible] ರಕಮನ್ನು ಗೊತ್ತು [illegible] ಆದದ್ದರಿಂದ [illegible] [illegible] [illegible] [illegible] [illegible] [illegible] ಉಪಯೋಗಿಸಬೇಕೆಂಬದೇ ಇವರ [illegible] ಇಚ್ಛೆ. ಸುಸ್ವಾಗತವು!!

ಶ್ರೀ ಶಿವಾಜಿ ಮಹಾರಾಜರ ಜಯಂತ್ಯುತ್ಸವದಲ್ಲಿ ಹಿಂದೂ ಜನರು ಮಸೀದೆಗಳ ಮುಂದೆ ವಾದ್ಯ ಬಾರಿಸುವ ಹಕ್ಕು ಸ್ಥಾಪಿಸುವ ಹಟ ಹಿಡಿಯುವದು ಮುಸಲಮಾನರಲ್ಲಿ ಹುಟ್ಟಿದ ಸುದ್ದಿಯು ನಿರಾಧಾರವಾದದ್ದಿರುತ್ತದೆಂದು ಮುಂಬಯಿಯ ಉತ್ಸವ ಕಮೀಟಿಯವರು ಪ್ರಸಿದ್ಧ ಮಾಡಿದ್ದಾರೆ.

ಪ್ರಕೃತಿಯ ಅಸ್ವಾಸ್ಥ್ಯತೆಯ ಮೂಲಕ ಲಾಲಾ ಲಜಪತರಾಯರು ಮೂರು [illegible]ಂಗಳು ವಿಲಾಯತಿಗೆ ಹೋಗುವರು. ರಾಜಕಾರಣ ಪಟುಗಳಾದ ಶ್ರೀ ಪಟೇಲ, ಜಮುನಾದಾಸ ಮೆಹ್ತಾ, ಲಜಪತರಾಯರಿಗಲ್ಲ ವಿಲಾಯತಿಯ ಹವೆಯು [illegible] [illegible] ಜೊತೆ ಸೇರಿದಂಥ ಪರಿಣಾಮವು [illegible] [illegible].

ಸ್ವಾಮಿ ರಹಿತನೆನಿಸಗೆ ಮಂಗಲಂ।
ಸೋಮಲಿಂಗನೆ ಸನ್ನೆಸೂಚಲ ಜಯತು ಮಂ
ಗಲವು ॥

ಸುಂದರಾಂಗದ ದೇವಿ ಸಾರ್ವತಿ।
ಮುಂದ ಪಾದದ ಸೋಮಲಿಂಗನ।
ಚಂದ ಮದುವೆಯು ಹರುಷ ಕಾಲದಿ ಮಂಗಲಾ
ಕ್ಷತೆಯು॥

ಬಂದು ಭಗಿನಿಯು ರಾಗ ಚೆಲ್ಲುತೆ।
ಚಂದದಿಂದಲಿ ಚಪ್ಪಳಿಕ್ಕುತ।
ಇಂದು ಶೇಖರ "ಹರ ಹರಾ ಮಹಾದೇವ" ಎನು
ವರು ॥

ಭಾರ್‍ದ ಮುರಗೋಡದ ಸಾಯ್ಕರ।
ಸಾರ ಸುಂದರ ಬಾಳೆ ತೋಟದಿ।
ಧೀರ ಮಿತ್ರರ ಭೋಜನದ ಸಾಂತ ಚನ್ನೆಸರಿ॥
ಸೂರೆಯಾಯಿತು ತುಪ್ಪ ಹೋಳಿಗೆ।
ಸ್ವಾರ ಬುರಬುರಿ ಚಟ್ನಿಯನ್ನವ।
ಮಿರಿ ಮೆಲ್ಲುತ ಧರಣೆ ಕೂಡಿದರು ಪರಮ ಹರು
ಷದಲಿ॥

ಶ್ರೀ ಕ್ಷೇತ್ರ ಸೊಗಲ

ಗುಡ್ಡದಲ್ಲಿದ್ದ ಬೆಟ್ಟ ಬೆಟ್ಟದಾವರೆಯ ಗಿಡದವರ್ಣನೆ.

ಬೆಟ್ಟ ಬಿರಿಸ್ಯಾಯಿಂದ ಗಿರಿಯೊಳು।
ಬಟ್ಟಿಯಿಂದದಿ ತಪವ ಮಾಡುತ।
ಬೆಟ್ಟದೊಡೆಯನ ನಾಮಸ್ಮರಣೆಯು ಮುದದಿ ನಗು
ತಿರುವ॥

ದಿಟ್ಟ ಗಿಡವನ್ನೇರಿ ಬಾಲರು।
ತುಟ್ಟ ತುದಿಯಿಂ ತೆಗೆದು ತಂದರು।
ಬೆಟ್ಟದಾವರೆ ಹೂವು ಮಿತ್ರಾ! ಏನು ಸುಂದರ
ಪ್ರೋಕ್ತ॥

ಸರಸ ನಾಲ್ವತ್ತೈದು ಹೂಗಳ।
ಸರಿಯ ಮಯಿನನಾಲ್ಕುಬಾಕುರು।
ಭರದಿ ತೊಯ್ಯುತ ತಮತಮೊಳಗೆಣಿಸಿ ನೋ
ಡಲ್ಕೆ॥

ಎರಡು ಕೊಡಿಸುತಿರಲು ಕೇಳಿಯಲು।
ಎರಡದಿಂ ಸಹೆ ಸೂಸಿ ಪೋಗಿಸಿ।
ಅರ್‍ರೆ! ಸರಿಸರಿ ಓರ್ವರೋರ್ವರ ಹೂಗಳಿಷ್ಟೆಂದ॥
ಬಾಲಸೋರ್ವನು ಕ್ರಾಂದಿಪ್ಪನು।
ಲೀಲೆಯಿಂ ತಡಸಲದೆ ಕೇಳಿಯು।
ಸೀಯತಂತನ ಬಯದಿ ಸುಮ್ಮದಿಯಾಗೆ ಮುದ
ದಿಂದ ॥

ಶಾಂತನೇತ್ರಗೆ! ಶೈಲಪುತ್ರಗೆ।
ಬಾಲಗಣಪಗೆ ಲೋಲನೃಪಭಗೆ।
ನೀಲ ಯೆಂಬತ್ತೊಂದು ಧರಿಸಲು ಪೊನ್ನವು
ಗ್ಗೊಂದ ॥

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.
೨—೪ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವರು.
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅರೋಗ್ಯ ಶಾಲಿಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಜಾಹೀರಾತು.

ಪ್ರಿಯ ಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಚಿನ್ನ ಚಹಾ ಮತ್ತು ಕಾಫೀ ಸೊವೀ ದರದಿಂದ ಸಿಗುವದಲ್ಲದೆ, ಕೇವಲ ವ್ಯಾಪಾರಸ್ಥರಿಗೆ "ಅಮೋರಿನ್" ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ಕೊಂಡುಕೊಳ್ಳಿರಿ. ಯಾಕಂದರೆ ಈಗಲ್ಲಿ ಎಲ್ಲ ತರದ ಚಹಾ ನಾಲ್ಕು ಕಡೆಗೆ ಸಾರ್ವಜನಿಕವಾಗಿದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಹೆಚ್ಚಿನವರು ತಮಗೆ ಬೇಕಾದಲ್ಲಿ ಈ ಪತ್ರಿಕೆಗೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಕಿರಾಣಿ ಪತ್ರೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,
ಮಾಜ ರಜಿಸ್ಟರ ಮ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೋರ್ಟ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ... ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜ. ಕಾಯ್ಮಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರಪತ್ರಕ್ಕೆ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿಗಳಿಗಾಗಿ ಬರೆಯತಕ್ಕದ್ದು

ಮ್ಯಾನೇಜ ವಿಜಯ ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಉಳಿತಾಯವನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನಡದು ಆಣೆಯಿಂದಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಆಲ್ಲೂರು ... ಬೆಳಗಾವ ಯಾರ ಹೊಸಕೇರಿ ಇವರು ಧಾರವಾಡದಲ್ಲಿರುವ ಅಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B-1143

ಸಾಪ್ತಾಹಿಕ ಪತ್ರ

ಬಿಡಿ ಪ್ರತಿ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಮೊಸಳೇರಿ.

ವರ್ಷ ೫: ಧಾರವಾಡ ಶುಕ್ರವಾರ ತಾರೀಖು ೬ ನೇ ಮೇ ೧೯೩೭ ಸಂಚಿಕೆ ೧೩

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಸೊಸೈಟಿ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಪಟ್ಟಿನ ಸ್ಪರ್ಧಿಗಳಿಗೆ ಕೇಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಚಿಂಚಲಿಯ ಜಾತ್ರೆ ನಿಂತಿತು.

ಯಾವತ್ತೂ ಜನರಿಗೆ ಈ ಜಾಹೀರ ಪತ್ರಿಕೆಯಿಂದ ತಿಳಿಸುವದೇನಂದರೆ—

ಪ್ರತಿ ವರ್ಷ ಗದಗ ತಾಲೂಕ ಚಿಂಚಲಿ ಗ್ರಾಮದಲ್ಲಿ ಜರುಗುತ್ತಿರುವಂತೆ ಈ ವರ್ಷ ತಾರೀಖು —೫—೧೯೩೭ ನೇದು ದಿವಸ ಆಗಬೇಕಾಗಿದ್ದ ಶ್ರೀ. ಬಸವೇಶ್ವರರ ಜಾತ್ರೆ ಮತ್ತು ಅದರ ಕೂಡ ಜರುಗುತ್ತಿರುವ ಪ್ರಸಿದ್ಧ ಜನರ ದನಗಳ ಪ್ರದರ್ಶನವನ್ನು ಸಾಲ್ಮಾ ಕಡಿಗೆ ವಾಲಿಕಾ ಬೇನೆಯು ಹಬ್ಬಿರುವದರಿಂದ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟಸಾಹೇಬ ಬಹಾದ್ದೂರ ಧಾರವಾಡ ಇವರ ಪತ್ರಪ್ರಕಾರ ನಿಲ್ಲಿಸಲ್ಪಟ್ಟಿದೆ. ಆದ್ದರಿಂದ ಯಾರೂ ಜಾತ್ರೆ ಅಥವಾ ಪ್ರದರ್ಶನಕ್ಕೆ ಬರಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಬೇನೆಯಾದನಂತರ ಜಾತ್ರೆ ಪ್ರದರ್ಶನಗಳ ಕಾರ್ಯವಿದ್ದು, ಆ ದಿವಸವನ್ನು ಯೋಗ್ಯ ವೇಳೆಯಲ್ಲಿ ಜಾಹೀರ ಮಾಡುವೆನು.

ಮಹಾದೇವಪ್ಪಾ ಬಸಪ್ಪಾ ಕತ್ತಿ,
ಚೇರಮನ ಸಾ ಗದ ಕಮಿಟಿ.

ದಿ ಧಾರವಾಡ ಅರ್ಬನ ಕೋ. ಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿನ ಭಾಗ ಲಕ್ಷದ ಮೇಲಿದೆ. ಚಾಲು ಮುದ್ದತಿ ಠೇವುಗಳಿಗೆ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡುವದು. ಠೇವುಗಳನ್ನು ಸ್ವೀಕರಿಸುವ ಠೇವಣಿದಾರರಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಪ್ಪ ಪದಕಿ ವಿ. ಜಡಿಯವರ,
ಮ್ಯಾನೇಜಿಂಗ ಡಾಯರೆಕ್ಟರ

ಕಾಲಗಾ ಪಿಲ್ಸ.

—೦—

ಬೇನೆ ಬಂದ ಮೇಲೆ ಉಪಯೋಗಿಸಿದರೆ ತಪ್ಪದೆ ಗುಣ.

—೦—

ನಾನು ಕಾಲರಾ ಬೇನೆಯ ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ಇನ್ನು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಮೊರಬ, ತಿರ್ಲಾಪುರ, ಹೊಳೆಮಾಡೆ ಮುಂತಾದ ಊರುಗಳಲ್ಲಿ ಗುಣ ಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತಿವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ವ್ಹಿ. ಪಿ ಖರ್ಚ ಅನುಮಾನ ಕಳಿಸುವೆನು,

ಹೆಂಡಕಟ್ಟಿನ ಶ್ರೀನಿವಾಸನ ಹೋತ್ತೂರು, ಮಾಳಮಡ್ಡಿ ಧಾರವಾಡ.

ವಿಜಯ.

ಧಾರವಾಡ ತಾ- ೬-೫-೨೭ ನೇ ಇಸ್ವಿ

ಉತ್ತರಾದಿಮಠ ಮತ್ತು ಉಡುಪಿಯವರು.

ಉಡುಪಿಯವರೆಂಬ ಈ ಪ್ರಾಂತಕ್ಕೆ ಬಂದವರಲ್ಲಿ ಎರಡು ಕುಲಗಳುಂಟು. ಒಂದು ಕುಲದವರು ಬ್ರಾಹ್ಮಣರ ವರ್ಗಕ್ಕೆ ಸೇರಿದವರಿದ್ದು, ಇನ್ನೊಬ್ಬರು ಕೋಟಿಗರಂತೆ!! ಈ ಕೋಟಿಗರು ಬ್ರಾಹ್ಮಣರಲ್ಲ; ಅವರಿಂದ ಅನ್ನೋದಕ ತಕ್ಕೊಳ್ಳಬಾರದೆಂದು. ಧಾರವಾಡದಲ್ಲಿ ಹತ್ತು ವರ್ಷಗಳ ಹಿಂದೆ ಹವಾಳಿ ನಡೆದು, ಪ್ರಕರಣವು ಮ್ಯಾಜಿಸ್ಟ್ರೇಟ ಕೋರ್ಟಿನ ಕಟ್ಟೆಯನ್ನೇರಿತ್ತು. ಯಾವಾಗಲೂ ಸಮಾಧಾನವಾಗದಂತೆ ಅದರ ಪರ್ಯವಸಾನವಾಯಿತು. ಆಗಿನಿಂದ ಎಷ್ಟೋ ಜನರು ಕೋಟಿಗರೆಂಬವರನ್ನು ಅಡಿಗೆ ನೀರಿಗೆ ಕರೆಯುವದಿಲ್ಲ. ಆದರೂ ಇವರ ಊಟದ ಮನೆಗಳೂ, ಉಪಹಾರದ ಅಂಗಡಿಗಳೂ ಭರಭರಾಟಿಯುಳ್ಳವಿರುವವು.

ಶ್ರೀ ಸತ್ಯಧ್ಯಾನತೀರ್ಥ ಶ್ರೀಪಾದಂಗಳವರು ಇಲ್ಲಿಗೆ ದಯಮಾಡಿಸಿದ ಬಳಿಕ, ಕೋಟಿಗರೆಂಬ ಉಡುಪಿಯವರಿಂದ ಮಠದಲ್ಲಿ ನೀರು ತಕ್ಕೊಳ್ಳುವದು ಬಂದಾಗಿದೆ. ಇಷ್ಟರಿಂದ ಅವರು ಧರ್ಮ ಬಹಿಷ್ಕೃತರಾಗಲಿಲ್ಲ, ಧರ್ಮಬಾಹ್ಯರಾಗಲಿಲ್ಲ. ಮುಖ್ಯವಾಗಿ ಇವರನ್ನು ಅಡಿಗೆ ನೀರಿಗೆ ಕರೆಯಬೇಕೆ? ಕರೆಯಬಾರದೇ? ಎಂಬುದು ಸಂಶಯಾಸ್ಪದವಾಗಿ ಉಳಿದಿರುತ್ತದೆ. ಶ್ರೀಗಳವರು ಇಲ್ಲಿಗೆ ಬಂದು ೨೦ ದಿವಸವಾಯಿತು. ಅವರ ಮುಂದೆ ಅನೇಕ ವಿಷಯಗಳ ಊಹಾಪೋಹವಾಗಿದೆ. ಸಂಶಯ ಕೇಳುವದೂ, ಸಂಶಯನಿವೃತ್ತಿ ಮಾಡಿಕೊಳ್ಳುವದೂ ನಿತ್ಯ ನಡೆದಿದೆ. ಆದರೆ ಯಾರೂ ಕೋಟಿಗರ ಪ್ರಶ್ನವನ್ನು ತೆಗೆದಿಲ್ಲ.

ಮೇಲೆ ಹೇಳಿದ ಫೌಜದಾರಿ ಪ್ರಕರಣದ ವಿಚಾರಣೆಯಲ್ಲಿ ಮಠದ ಪ್ರತಿನಿಧಿಯೋ ಆರೋಪಿಯಾಗಿದ್ದರು. ಮಠದಿಂದಲೇ ವಕೀಲರ ಫೀ ಮುಂತಾದದ್ದು ವೆಚ್ಚಕ್ಕಾಗಿ ಬಂತು. ಉಡುಪಿಯ ಸ್ವಾಮಿಗಳು ಈ ವಿಷಯವಾಗಿ ಸ್ಪಷ್ಟವಾಗಿ, ಪುರಾವೆಯ ಕಾಗದ ಪತ್ರಗಳನ್ನು ಕಳಿಸಿದ್ದಾರೆ. ಹೇಗೋ ಸ್ವಾಮಿಗಳು ಇವರನ್ನು ತಮ್ಮೊಳಗೆ ಸೇರಿಸಿಕೊಂಡಿದ್ದಾರೆ. ಆದರೆ ಮಾಧ್ವರು ಹಾಗೆ ಇವರನ್ನು ಅಪಾಂಕ್ತ ಮಾಡಿದ್ದಾರೆ. ಎಲ್ಲ ಮಾಧ್ವರು ಹೀಗೆ ಮಾಡಿದ್ದರೆ ಈ ವಿಷಯ ವಿಚಾರವೇ ಹೊರಡುತ್ತಿದ್ದಿಲ್ಲ. ಕೆಲವರು ಇವರಿಗೆ ಅನುಕೂಲರಾಗಿದ್ದಾರೆ. ವಿಲಾಯತಿಯವರ ಸಂಸರ್ಗ ಸಂಪರ್ಕಕ್ಕಿಂತ ಕೋಟಿಗರೆಂಬವರ ಸಂಸರ್ಗವು ಹೆಚ್ಚಾಗಿರುತ್ತದೆ. ಕಾರಣ ಶ್ರೀಗಳವರು ಇದರ ನಿರ್ಣಯವನ್ನು ಅಧಿಕಾರವಾಣಿಯಿಂದ ಹೇಳುವದು ತೀರ ಅವಶ್ಯವಾಗಿರುತ್ತದೆಂದು ನಾವು ಭಾವಿಸುತ್ತೇವೆ.

ಬೇಡಾದ ಗಂಡನಿಗೆ ಬೆಣ್ಣೆಯಲ್ಲಿ ಕೂದಲು!!

ಮುಂಬಯಿಯ ಪೋಲೀಸ ಕಮಿಶನರಸಾಹೇಬರು ದಾರಿ ಕಟ್ಟಾಗುತ್ತದೆಂಬ ನೆವನ ಮಾಡಿಕೊಂಡು ಆನೆಯ ಮೇಲೆ ಶ್ರೀ ಶಿವಾಜಿ ಮಹಾರಾಜರ ಭಾವಪಠವನ್ನು ಮೆರೆಸಬಾರದೆಂದೂ ದಾಂಡಪಟ್ಟಿಯನ್ನಾಡಬಾರದೆಂದೂ ಉತ್ಸವ ಕಮೀಟಿಯವರಿಗೆ ಬರೆದ ಪತ್ರದ ಮರ್ಮವನ್ನು ಧ್ಯಾನಕ್ಕೆ ತಂದರೆ ಬೇಡಾದ ಗಂಡನಿಗೆ ಬೆಣ್ಣೆಯಲ್ಲಿ ಕೂದಲೆಂದು ಹೇಳುವಂತಾಗುತ್ತದೆ. ಮುಂಬಯಿ ಇಲಾಖೆಯಂತೆ ಬಡೋದೆಯೂ ಒಂದು ರಾಜ್ಯವಾಗಿರುವದು. ಇದರ ಕ್ಷೇತ್ರಫಲವು ಇಂಗ್ಲಂಡಕ್ಕಿಂತ ದೊಡ್ಡದಿರುವದು. ಈ ರಾಜ್ಯದ ರಾಜಧಾನಿಯಲ್ಲಿ ತೆಗೆದ ಇಂಥ ಉತ್ಸವದಲ್ಲಿ ಅಲ್ಲಿಯ ಪೋಲೀಸ ಕಮೀಶನರರು ಸ್ವತಃ ಹಾಜರಿದ್ದರು. ಮುಂಬಯಿಯಲ್ಲಿಯೂ ವಿಲಾಯತಿಯರು ಪೋಲೀಸ ಕಮಿಶನರರಿದ್ದರೆ ಅವರೂ ಉತ್ಸವದಲ್ಲಿ ಭಾಗ ತಕ್ಕೊಳ್ಳುತ್ತಿದ್ದರು.

ಆನೆಯ ಮೇಲೆ ಅಂಬಾರಿ ಹಾಕಿ, ಶ್ರೀ ಶಿವಾಜಿ ಮಹಾರಾಜರ ಭಾವಪಠವನ್ನು ಮೆರೆಸುವದರಿಂದ, ದಾರಿ ಕಟ್ಟಾಗಿ, ಲೋಕವ್ಯವಹಾರ ಬಂದಾಗುತ್ತದೆಂದು ಸಾಹೇಬರು ಹೇಳುವದು ತೀರ ಹಾಸ್ಯಾಸ್ಪದವಾಗುತ್ತದೆ. ಯಾವದೇ ಒಂದು ದೊಡ್ಡ ಉತ್ಸವದಲ್ಲಿ ಪ್ರತಿಯೊಂದು ಪಟ್ಟಣದಲ್ಲಿ ಕೂಡುವ ಜನಸಂಮರ್ದನದಿಂದ ಕೆಲಕಾಲ ದಾರಿ ಕಟ್ಟಾಗುವದು ಸಹಜವಿದೆ. ಗವರ್ನರಸಾಹೇಬರು ಒಂದಾಗ ನೋಡಬೇಕು. ಪೋಲೀಸರು ಎರಡು ತಾಸು ದಾರಿಯನ್ನು ಬಂದು ಮಾಡಿ, ಎಳೆಯರಿಗೆ ಹಾಲು ಸಹ ಸಿಗದಂತೆ ಮಾಡುತ್ತಾರೆ. ಪೋಲೀಸರು ಈ ಪ್ರಕಾರ ದಾರಿಯನ್ನು ಜಿಲ್ಹೆಯ ಸ್ಥಳಗಳಲ್ಲಿ ಮಾತ್ರ ಬಂದು ಮಾಡುವದಿಲ್ಲ. ಮುಂಬಯಿಯಲ್ಲಿಯೂ ಮಾಡುವರು. ಇಷ್ಟೇ ಅಲ್ಲ; ಮುಂದಾಗಿ ವರ್ತಮಾನಪತ್ರಗಳಲ್ಲಿ ಸ್ವಂತ ಸಹಿಯಿಂದ ಜಾಹೀರನಾಮೆಯನ್ನು ಪ್ರಸಿದ್ಧ ಮಾಡುತ್ತಾರೆ. ಗವರ್ನರಸಾಹೇಬರಿಗಿಂತ ಲಕ್ಷ್ಯಾವಧಿ ಪಾಲು ಘನವಂತರಾಗಿರುವ ಶ್ರೀ ಶಿವಾಜಿ ಮಹಾರಾಜರ ದೆಸೆಯಿಂದ ದಾರಿ ಕಟ್ಟಾಗುವದೆಂದು ಹೇಳುವದು ತೀರ ನಗೆಗೇಡಾಗುತ್ತದಲ್ಲವೆ?

ಶ್ರೀ ಶಿವಾಜಿ ಮಹಾರಾಜರಿಂದಲೇ; ಗತಿಸಿದ ಸಪ್ತಮ ಎಡ್ವರ್ಡ ಬಾದಶಹರ ಭಾವಪಠವನ್ನು ಆನೆಯ ಮೇಲೆ ಮೆರೆಸುವ ಪ್ರಸಂಗ ಬಂದಿದ್ದರೆ ಕಮೀಶನರಸಾಹೇಬರು ಇಂಥ ಅವಿವೇಕ ಹುಕುಮನ್ನು ಕೊಡುತ್ತಿದ್ದರೇ? ಮಹಾರಾಷ್ಟ್ರೀಯರ ರಾಷ್ಟ್ರೀಯ ಆಟವಾದ ದಾಂಡಪಟ್ಟಿಯಾಡಬಾರದು. ಭಜನೆಯ ಪದಗಳನ್ನು ಮುಂದಾಗಿ ತೋರಿಸಬೇಕು. ಭಜನೆ ಮಾಡುವಂಥವರ ಹೆಸರುಗಳನ್ನು ಮುಂದಾಗಿ ತಿಳಿಸಬೇಕೆಂದು ಹೇಳಿದ ಕರ್ಣಕಠೋರ ಸಂಗತಿಗಳಿಂದ ಸಾಹೇಬರ ಮನಸ್ಸಿನಲ್ಲಿ ಸಿಟ್ಟಿನ ಮತ್ತು ಶಾಂತತಾಭಂಗದ ನಿಮಿತ್ಯದಿಂದ ಉತ್ಸವಕ್ಕೆ ಇದಷ್ಟು ವಿಘ್ನ ತರಬೇಕೆಂದಿತ್ತೆಂದು ಯಾರಾದರೂ ಊಹಿಸಿದರೆ ಅದೇನೂ ತಪ್ಪಾಗಲಾರದು.

ಗವರ್ನರರಾದ ಸರ ವಿಲ್ಸನಸಾಹೇಬರು ಉತ್ಸವದ ಮಹತ್ವವೆಣಿಸಿ, ಸಾರ್ವಜನಿಕ ಹಬ್ಬದಂತೆ ಆ ದಿನ ರಜೆ ಕೊಟ್ಟರು. ಈ ರಜೆಯಿಂದ ಹಾಲಿನಲ್ಲಿ ಕಮಿಶನರಸಾಹೇಬರ ಹುಕುಮು ಉಪ್ಪು ಹಾಕಿದಂತಾಯಿತೆಂದು ಧಾರಾಳವಾಗಿ ಹೇಳಬೇಕಾಗುತ್ತದೆ.

ಸೂರತದಲ್ಲಿ ಹಿಂದೂ ಮುಸಲಮಾನ ದಂಗೆ.

ಮಂಗಳವಾರದ ದಿವಸ ಪ್ರಾತಃಕಾಲದಲ್ಲಿ ಸೂರತ ಪಟ್ಟಣದಲ್ಲಿ ಶ್ರೀ ಶಿವಾಜಿ ಮಹಾರಾಜರ ಭಾವಪಠದ ಮೆರವಣಿಗೆ ಹೋಗುತ್ತಿದ್ದಾಗ, ಮುಸಲಮಾನರು ಮೆರವಣಿಗೆಯ ಮೇಲೆ ಕಲ್ಲಿನ ಮಳೆ ಸುರಿಸಲಾರಂಭಿಸಿದರು. ಹಿಂದೂ ಜನರು ಬಿರಗೆಯಿಂದಿದ್ದರು. ಪೋಲೀಸರು ಅಪರಾಧಿಗಳಾದ ಮುಸಲಮಾನರನ್ನು ಚಟೋಪಿನಲ್ಲಿ ತರಲು ಮಾಡಿದ ಪ್ರಯತ್ನವು ವ್ಯರ್ಥವಾದದ್ದನ್ನು ಕಂಡು, ಫಾಯರ ಮಾಡಿದರು. ಈ ಗೋಳಿಬಾರಿನಲ್ಲಿ ಮುಸಲಮಾನರಿಗಿಂತ ಹೆಚ್ಚಾಗಿ ಹಿಂದೂ ಜನರೇ ಘಾಯವಾಗಿದ್ದಾರೆ. ಈ ಬಗ್ಗೆ ಹಿಂದೂ ಜನರು ಸಂತಪ್ತರಾಗಿದ್ದಾರೆ. ದಂಗೆಯಾದ್ದರಿಂದ ಅಂದು ಸಾಯಂಕಾಲದಲ್ಲಿ ಆಗಬೇಕಾಗಿದ್ದ ಸಭೆಯನ್ನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಬಂದು ಮಾಡಿಸಿದರು.

ಧಾರವಾಡದವರಾಗಿ ವಿಜಾಪೂರದ ಹಾಯಸ್ಕೂಲಿನಲ್ಲಿ ಮಾಸ್ತರರಾಗಿರುವ ಮಿ. ಉಮದಿಯವರ ಮನೆಯಲ್ಲಿ ಕಳವಾಗಿ ನಾಲ್ಕು ಸಾವಿರದ ವಸ್ತ ಹೋಯಿತು, ಕಳ್ಳರು [illegible] ಪೋಲೀಸಕ್ಕೆ ತಿಳಿಸಿದ್ದಾರೆ.

ನೂರು ಜನರ ದಸ್ತಗಿರಿಯು.

—o—

ಬಡೋದೆಯಲ್ಲಿ ಮುಖ್ಯ ಮುಖ್ಯ ೧೧ಮುಲದಾರರೂ ನಾಗರಿಕರೂ ಸೇರಿ ಮುಸಲಮಾನರ ಕೂಡ ಒಡಂಬಡಿಕೆ ಮಾಡಿಕೊಂಡು, ಮೆರವಣಿಗೆ ತೆಗೆದಿದ್ದರು. ಆದರೂ ಮುಸಲಮಾನರಲ್ಲಿ ಕೆಲವರು ಮಸೀದೆಯಲ್ಲಿ ಸೇರಿಕೊಂಡು, ಶ್ರೀ ಶಿವಾಜಿ ಮಹಾರಾಜರ ಮೂರ್ತಿಯನ್ನೇ ಒಡೆಯಬೇಕೆಂದು ಮಸಲತ್ತು ಮಾಡಿದ್ದರು. ಆದರೆ ಜ್ವಾಲಂಟಿಯರರೂ ಬಾಯಸ್ಕ್ಯಾಟಿನವರೂ ಇವರ ಆಟ ನಡೆಯಗೊಡಲಿಲ್ಲ. ಕೂಡಲೆ ಪೋಲೀಸರು ಬಂದು ಧಡ್ತೀ ಸಾಯಗಳನ್ನು ಮಾಡಿ, ಮಸೀದೆಯಲ್ಲಿದ್ದ ನೂರು ಜನ ಮುಸಲಮಾನರನ್ನೂ ದಸ್ತಗಿರಿ ಮಾಡಿದ್ದಾರೆ.

ಮುಂಬಯಿಯಲ್ಲಿ ಇಬ್ಬಣ

—o—

ಮುಂಬಯಿಯ ಉತ್ಸವಕ್ಕೆ ಪೋಲೀಸ ಕಮಿಶನರಸಾಹೇಬರ ಅಪ್ಪಣೆಯಿಂದ ಆತಂಕವಾಯಿತು. ಅನಂತರ ಕೂಡಿದ ಸಭೆಯಲ್ಲಿ ಸರ್ವ ಪಕ್ಷ ಕಾಂಗ್ರೆಸ ಪಕ್ಷದವರ ನಡುವೆ ಮತಭೇದವಾಯಿತು. ಕಾಂಗ್ರೆಸ ಪಕ್ಷದವರು ಮೆರವಣಿಗೆಯು ಕಾಂಗ್ರೆಸ ಆಫೀಸಿಗೆ ಹೋಗಬೇಕೆಂದರು. ಹಿಂದೂ ಸಭೆಯವರು ಇದಕ್ಕೆ ಒಪ್ಪದೆ, ಮರಾಠಾ ಹಾಯಸ್ಕೂಲಿಗೆ ಹೋಗಬೇಕೆಂದರು. ಈ ಪ್ರಕಾರ ಮೆರವಣಿಗೆ ಒಡೆದು, ಎರಡು ಕಟ್ಟಾಗಿ, ಮೇಲೆ ಹೇಳಿದಂತೆ ಆಯಾ ಸ್ಥಳಗಳಿಗೆ ಹೋದವು.

ನಾಗಪೂರದ ಸಭೆ ಮುರಿಯಿತು.

—o:o—

ಇದೇ ಉತ್ಸವದ ಸಲುವಾಗಿ ನಾಗಪೂರದಲ್ಲಾದ ಸಭೆಯ ಅಧ್ಯಕ್ಷಸ್ಥಾನವನ್ನು ಡಾಕ್ಟರ ಮುಂಜೆಯವರು ಸ್ವೀಕರಿಸಿದ್ದರು. ಕಾಯದೆಭಂಗದ ಚಳವಳಿ, ನೂತನ ಪ್ರಜಾಸತ್ತಾತ್ಮಕ ರಾಜ್ಯಸ್ಥಾಪನೆಯ ಸ್ವಪ್ನದ ಸೋಂಕು ಹಿಡಿದವರೂ ಆಗಿರುವ ಮಿ ಅವರುಯವರು ಬಗೆಯನ್ನೂ ಶಕ್ತಿಯನ್ನೂ ತಿಳಿಸುತ್ತ, ನಮ್ಮ ಹಿಂದಿನ ಜನಗಳು ಕಲ್ಪಿಸಿದ ಮನೆಗಳಿಂದ ಇಂಗ್ಲಿಷರಾಗಿದ್ದಾರೆ. ಇವರನ್ನು ಮೊದಲು ಹೊರಗೆ ಹಾಕಬೇಕೆಂದು ಭಾಷಣ ಮಾಡಿದರು. ಈ ಭಾಷಣವು ಅಧ್ಯಕ್ಷರಿಗೆ ಒಪ್ಪಿಗೆಯಾಗಲಿಲ್ಲ. ಅವರು ಅಧ್ಯಕ್ಷಸ್ಥಾನವನ್ನು ಬಿಟ್ಟು ಎದ್ದರು. ರಂಜಿಸು ಸಂಘಟನೆ ನಡೆಯಿತು. ಕೊನೆಗೂ ಪರಿಣಾಮ ನಟ್ಟಗೆ ಕ್ಷೋಭದ್ದರಿಂದ ಸ್ಥಿತಿ ಸಭೆಯು ವಿಸರ್ಜನವಾಯಿತು.

ಅತ್ಯದ್ಭುತ ಜಲಪ್ರಳಯ.

ನೂರಾರು ಪಟ್ಟಣಗಳು ನೀರಲ್ಲಿ ನಿಂತಿವೆ.

—o—

ಎರಡು ಲಕ್ಷ ಜನರು ನಿರಾಶ್ರಿತರಾದರು.

—o—

ಅಮೇರಿಕೆಯಲ್ಲಿ ಅದ್ಭುತ ವೃಷ್ಟಿಯಾಗಿ ಮಿಸಿಸಿಪಿ ಹೊಳೆಗೆ ಅಭೂತಪೂರ್ವವಾದ ನೆರೆಬಂದಿದೆ. ಇದರ ನೀರು ಹೊರಚಲ್ಲಿ ಇಪ್ಪತ್ತಿಯಲ್ಲಿ ಹತ್ತಿ ಪ್ಪತ್ತು ಮೈಲು ಪಸರಿಸಿದೆ. ಇದರಿಂದ ಸಾವಿರಾರು ಗ್ರಾಮಗಳೂ, ನೂರಾರು ದೊಡ್ಡ ದೊಡ್ಡ ಪಟ್ಟಣಗಳೂ ನೀರಿನಲ್ಲಿ ಸಿಕ್ಕಿವೆ. ಒಂದೇ ಸವನೆ ನೀರಿನ ಕಳವು ಹೆಚ್ಚಾಗಿ ಅನರ್ಥವಾಗಬಾರದೆಂದು ಇಂಜನಿಯರರು ಸುರಂಗ ಹಚ್ಚಿ, ಒಡ್ಡುಗಳನ್ನೂ ದಿನ್ನೆಗಳನ್ನೂ ಸಲಸ ಮಾಡುತ್ತಿದ್ದಾರೆ. ಇಪ್ಪತ್ತು ಲಕ್ಷ ಎಕರೆ ಭೂಮಿಯಲ್ಲಿದ್ದ ಬೆಳೆಯು ನಷ್ಟವಾಗಿದ್ದು, ಎರಡು ಲಕ್ಷ ಜನರು ಮನೆಗಳನ್ನು ಕಳಕೊಂಡು, ನಿರಾಶ್ರಿತರಾಗಿದ್ದಾರೆ. ಅಮೇರಿಕೆಯದು ಎಲ್ಲವೂ ಅದ್ಭುತವೇ!!

ಮದ್ರಾಸ ಸರಕಾರದವರು ಕಾರ್ನಿಸರೆಂಬ ಬ್ಯಾರಿಸ್ಟರರನ್ನು ಹಾಯಕೋರ್ಟಿನ ಅಕ್ಟಿಂಗ ಜಡ್ಜರಾಗಿ ನೇಮಿಸಿದ್ದಾರೆ. ಇವರಿಗೆ ಕಿವಿಯೇ ಕೇಳಿಸುವದಿಲ್ಲ? ಇವರು ಹೇಗೆ ಜಡ್ಜಿಯ ಕೆಲಸ ಮಾಡುವರೆಂದು ಲೋಕಚರ್ಚೆ ನಡೆದಿದೆ.

ಒಬ್ಬ ಫ್ರೆಂಚ ಮತ್ತು ಒಬ್ಬ ಇಟಾಲಿಯನ್ನ ಗೃಹಸ್ಥರು ಸೇರಿ, ಕಳವಿನ ಉದ್ಯೋಗಕ್ಕಾಗಿ ಬ್ರಿಟಾಯತಿಯಿಂದ ಆರು ಜನ ತರುಣಿಯರನ್ನು ಕಲಕತ್ತೆಗೆ ತಂದಿದ್ದಾರೆ. ಪೋಲೀಸರು ಇವರ ಮೇಲೆ ಖಟ್ಲೆ ಹಾಕಿದ್ದಾರೆ.

ಸಿಂಧ ಪ್ರಾಂತದಲ್ಲಿ ಹಿಂದೂ ಮಹಾಸಭೆಯ ಉಪಸಭೆಗಳು ಕೂಡುತ್ತಿರುವವು. ಲಾಲಾ ಲಜಪತರಾಯರು ಈ ಸಭೆಗಳಿಗೆ ಹೋಗಿ, ನೀವು ಸಪ್ಪಗೆ ಕೂಡಬೇಡಿರಿ. ನಿಮ್ಮ ಮೇಲೇರಿ ಬರುವಂಥವರನ್ನು ತಡೆಯುವಂಥ ಸಾಮರ್ಥ್ಯ ತಂದುಕೊಳ್ಳಿರೆಂದು ಉಪದೇಶ ಮಾಡುತ್ತಿದ್ದಾರೆ

ಧಾರವಾಡ-

ಮೊನ್ನೆ ಸಾಯಂಕಾಲದಲ್ಲಿ ನೆಲತೊಯ್ಯುವಷ್ಟು ಮಳೆ ಬಿತ್ತು.

ಕಳೆದ ೧೫ ದಿವಸಗಳಲ್ಲಿ ಹಾಲಗೇರಿಯಲ್ಲಿ ಇಬ್ಬರು ಬಿದ್ದು ಪ್ರಾಣಕೊಟ್ಟರು. ಇಬ್ಬರೂ ಜೀವ [illegible]!

ಮಿತ್ರ ಮಂಡಳಿಯ ಶ್ರೀಕ್ಷೇತ್ರ ಸೊಗಲ ಪ್ರವಾಸವು.

—(o)(o)(o)—

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

(ಲೇಖಕ — ಮಡಿವಾಳೇಶ್ವರಸುತ ಕುರಗುಂದ)

ಪ್ರೇಮದಿಂದಲಿ ಸಕಲ ಮಂಡಳಿ |
ನಾಮಸನೆಯುತ ಸಾಮಗಾನದಿ |
ಕೋಮಲಾಂಗನ ಸೋಮಲಿಂಗನ ಭರದಿ ನೋಡಲ್ಕೆ ||

ಕಾಮಿತಾರ್ಥವ ನೀವದೇವನು |
ಕಾಮ ಸಂಹರ ಪಾರ್ವತೀಶನು |
ಪ್ರೇಮಪತ್ನಿಯ ಭುಜದ ಮೇಲ್ಕೈಯಿಟ್ಟು ನಗುತಿಹನು ||

ಸೋಮ ನಂದದಿ ಶಾಂತನಾಗಿಹ |
ಸೋಮಲಿಂಗನೆ ನಿನ್ನ ನೋಡಲು |
ಪ್ರೇಮವೆಂಬುದು ತುಂಬಿ ತುಳುಕಿತು ನನ್ನ ಮನದೊಳು ||

ವ್ಯೋಮಕೇಶನೆ ಪಾರ್ವತೀಶನೆ |
ರಾಮನಾಥನೆ ನಿನ್ನ ನುತಿಪೆನು |
ಕಾಮಿತಾರ್ಥವ ನಿತ್ಯ ಪಾಲಿಸು ಹಿಂದುದೇಶಕ್ಕೆ ||
ಒಂದೆ ಮನದೊಳು ಭಕ್ತಿ ಬಿಡಿಸುತ |
ಸಿಂಧುವಿಂದಲಿ ಸಕಲು ತೆಗೆಯುತ |
ಬಂದವಾಗಿಸ ಶಕ್ತಿಪತ್ತಳ ನಮ್ಮ ಮುದದಿಂದ ||
ತಂದು ತೊಡಿಗೆಯ ಮಾಡಿ ನಮಿಸುವ |

ಹಿಂದ ಪಾರ್ವತಿ ಸೋಮಲಿಂಗ |
ಸುಂದರಾಂಗನ ಪರಮ ಭಕ್ತರು ಅಗ್ರಪೂಜೆಗಳಿ ||
ಲಿಂಗರೂಪನೆ ನಿನಗೆ ಮಂಗಲ |
ಮಂಗಲಾತ್ಮನೆ ನಿನಗೆ ಮಂಗಲ |
ಸಂಗಮೇಶ್ವರ ನಿನಗೆ ಮಂಗಲ ಜಯತು ಮಂಗಲವು ||

ಅಂಗರಹಿತನೆ ನಿನಗೆ ಮಂಗಲ |
ಅಂಗಜಾರಿಯೆ ನಿನಗೆ ಮಂಗಲ |
ತುಂಗ ಸೊಗಲದ ಸೋಮಲಿಂಗನೆ ಜಯತು ಮಂಗಲವು ||

ಲೀಲೆಯಿಂದಲಿ ನಿನಗೆ ಮಂಗಲ |
ನೀಲಕಂಠನೆ ನಿನಗೆ ಮಂಗಲ |
ಬಾಲಲಿಂಗನೆ ನಿನಗೆ ಮಂಗಲ ಜಯತು ಮಂಗಲವು ||

ಫಾಲನೇತ್ರನೆ ನಿನಗೆ ಮಂಗಲ |
ಬಾಲ ದಹಿತನೆ ನಿನಗೆ ಮಂಗಲ |
ಲೋಲ ಸೊಗಲದ ಸೋಮಲಿಂಗನೆ ಜಯತು ಮಂಗಲವು ||

ಪ್ರೇಮದಿಂದಲಿ ನಿನಗೆ ಮಂಗಲ |
ಸಾಮಗಾನದಿ ನಿನಗೆ ಮಂಗಲ |
ಸೋಮಶೇಖರ ನಿನಗೆ ಮಂಗಲ ಜಯತು ಮಂಗಲವು ||

ಕಾಮ ಸಂಹರ ನಿನಗೆ ಮಂಗಲ |

ಜಾಹೀರ ನೋಟೀಸು

—೦—

ಯಾವತ್ತು ಜನರಿಗೆ ಕೆಳಗೆ ಸಹೀ ಮಾಡುವ ಹನಮಂತ ಕೃಷ್ಣ ಪೋತನೀಸ ಇವರು ಅಲ್ಪವಯ ಶ್ರೀನಿವಾಸ ದತ್ತಕ ತಂದಿ ರಾಮರಾವ ಸಾಂಬ್ರಾಣಿ ಇವರ ಸಂರಕ್ಷಣಕರ್ತರಿದ್ದಾರೆ. ಸದರ ಅಲ್ಪವಯ ದತ್ತಕ ತಂದೆಯಾದ ರಾಮರಾಯರು ಧಾರವಾಡ ಶಹರ ಶುಕ್ರವಾರಪೇಟೆ ಹೆಂಬಲಿ ಗಲ್ಲಿಯಲ್ಲಿರುವ ಮನಿ ಮ್ಯುನಿಸಿಪಾಲಿಟಿ ನಂಬರ ೯೩೭ ಇದನ್ನು ಮಾರಬೇಕೆಂಬ ವಿಚಾರದಲ್ಲಿದ್ದಾರೆಂದು ತಿಳಿಯುತ್ತದೆ ಇವರಿಗೆ ಈ ಪ್ರಕಾರ ಮಾರಾಟ ಮಾಡಲಿಕ್ಕೆ ಯಾವ ಕಾರಣವೂ ಇರುವದಿಲ್ಲ ಸದರ ಮನೆಯ ಮೇಲೆ ಅಲ್ಪವಯಯ ಸಂಪೂರ್ಣ ಮಾಲಕಿ ಹಕ್ಕು ವ ವಾರಸಾ ಇರುತ್ತದೆ ಸದರ ರಾಮರಾಯರಿಗೆ ಗೃಹಕೃತ್ಯದ ಅಡಚಣೆಯು ಎಷ್ಟೂ ಇರುವದಿಲ್ಲ ಈ ವ್ಯವಹಾರವು ಗೃಹಕೃತ್ಯಕ್ಕಾಗಿರುವದಿಲ್ಲ ಆದುದರಿಂದ ಇವರಿಂದ ಸದರ ೯೩೭ ನೆಯ ನಂಬರಿನ ಮನೆಯನ್ನು ಯಾರೂ ಖರೀದಿ, ವಕ್ತಿ ಅಗರ ಎರಡನೆಯ ರೀತಿಯಿಂದ ಬರಿಸಿಕೊಳ್ಳಬಾರದು ಬರಿಸಿಕೊಂಡರೆ- ಅದು ಕಾಯದೆಶೀರ ಆಗಲಾರದು ಮತ್ತು ಈ ವ್ಯವಹಾರದಿಂದ ಅಲ್ಪವಯಿಯ ಹಕ್ಕು ಬಾಧ್ಯತೆಗೆ ಯಾವ ಪ್ರಕಾರದಿಂದಲೂ ಹಂಕತು ಉಂಟಾಗಲಾರದು ಈ ವ್ಯವಹಾರಕ್ಕೆ ಅಲ್ಪವಯಿಯು ಎಷ್ಟೂ ಬಾಂಧಾಯಿಸಲಾರನು. ಅಂತಾ ಜಾಹೀರ ಮಾಡಿದ ನೋಟೀಸು

ತಾ॥ ೬-೫-೧೯೩೭ ನೇ ಇಸ್ವಿ

ಸಹಿ ಹನಮಂತ ಕೃಷ್ಣ ಪೋತನೀಸ ಸಂರಕ್ಷಣದಾರ ಅಜ್ಞಾನ ಶ್ರೀನಿವಾಸ ದತ್ತಕ ತಂದಿ ರಾಮರಾವ ಸಾಂಬ್ರಾಣಿ, ಧಾರವಾಡ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವೇ ಆ ಸೆರ್ಥೆಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವರು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೂಕ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕಿರಕೋಳ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಾಕ ಕಡೆಗೆ ಪಸಾರವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ತೆಗಿಕ ಪತ್ರಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾರ್ಜ ಪೂರ್ವಕ ಕಳಿಸಿ ಕೊಡುತ್ತೇವೆ, ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ನೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಳಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ನೋಟೀಸು

—೦—

ರಾ॥ ರಾ॥ ನಿಂಗಪ್ಪಾ ಬಾಳಪ್ಪಾ ಚೌಡಣ್ಣವರ ಸಾಕೀನ ದಡವಾಡ ಈತನಿಗೆ—

ಕೆಳಗೆ ನಿಶಾಣಿ ಮಾಡುವವಳ ಕಡಿಂದ ತಿಳಿಸುವದೇನಂದರೆ—

ನಾನು ನಿನ್ನ ಲಗ್ನದ ಹೆಂಡತಿ ನನ್ನ ಹೊಟ್ಟೀಲೆ ಬಂದು ಹುಡಿಗಿ ಬಾಳವ್ವಾ ಅಂತ ೫-೬ ವರ್ಷದವಳಿರುವಳು ನಾನು ಕಾಲಿನಿಂದ ಅದವು ಇದ್ದ ಕಾರಣ ನೀನು ಇನ್ನೊಬ್ಬಳನ್ನು ಮದ್ವಿ ಆದಿ ಮತ್ತು ನನ್ನ ಮೇಲೆ ಗೈರ ಮರ್ಜಿ ಮಾಡಿ ಬೇಕಂತ ನಿನ್ನನ್ನು ಹುಡಿಗೀ ಸಹಿತ ಈಗ ಮೂರು ವರ್ಷಗಳ ಹಿಂದೆ ಹೊರಗೆ ಹಾಕಿದಿ ಅಂದಿನಿಂದ ನಾನು ನನ್ನ ತವರ ಮನಿಯಲ್ಲಿ ಹುಡಗಿ ಸಹಿತ ಸೌರಕ್ಷಣೆ ಆಡುತ್ತಿರುವೆನು ಅನ್ನವಸ್ತ್ರ ವಗೈರೆ ನೀನು ಕೊಡಲಿಲ್ಲ ಹೀಗಿದ್ದು ನವರೀ ಬಾಳವ್ವನ ಲಗ್ನ ಮಾಡುವದು ಗೊತ್ತುಪಡಿಸಿ ನನ್ನ ಮರ್ಜಿ ವಿರುದ್ಧ ಬಹಳ ಜಲ್ದಿಯಿಂದ ಮಾಡುವ ಪ್ರಯತ್ನ ನಡಿಸಿರುತ್ತಿ ಕಾರಣ ನಿನಗೆ ನೋಟೀಸು ಕೊಡುವ ಬಾಗ ಬಿತ್ತು.

ನೀನು ನನ್ನನ್ನು ತೀರಾ ಬಿಟ್ಟು ಕೊಟ್ಟದ್ದರಿಂದ ಬಾಳವ್ವನ ಲಗ್ನ ಮಾಡುವ ಹಕ್ಕು ನಿನ್ನದು ಕಾಯದೆಯಿಂದ ನಷ್ಟವಾಗಿದೆ ಕೇವಲ ನಮ್ಮ ಜಾತಿ ರಿವಾಜದಂತೆ ಬರುವ ಫಾಯದೇ ತೊಗೊಂಬುವ ಉದ್ದೇಶದ ಹೊರ್ತು ಹುಡಗೀ ಕಲ್ಯಾಣದ ಕಡಿಗೆ ನಿನ್ನ ಚಿತ್ತವಿಲ್ಲ ಈ ನೋಟೀಸು ಪ್ರತಿಷ್ಠವಾದ ೧೫ ದಿವಸಗಳಲ್ಲಿ ನಾಳ ಪಂಚಮಿಗೆ ಆಗುವ ಮೂರು ವರ್ಷಗಳ ಬಾಬತ್ತು ವರ್ಷ ೫೦ ರೂಪಾಯಿದಂತೆ ೧೫೦ ರೂಪಾಯಿ ಪೋಟಗಿ ಕೊಟ್ಟು ಮುಂದಿನ ಪೋಟಗಿ ಬಗ್ಗೆ ಕಾಯದೆಶೀರ ಲೇಖಿ ಮಾಡಬೇಕು ಹಾಗೆ ಮಾಡದೇ ಹೋದರೆ ಪೋಟಗಿ ದಾವೆ ಅಂತಾ ಮಾಡಿ ಮಾಡುತ್ತದೆ ಹುಡಗೀ ಲಗ್ನ ಮಾಡುವ ಅಧಿಕಾರ ನಿನಗಿಲ್ಲದ ಮೂಲಕ ಗೈರ ಕಾಯದೆಶೀರ ವರ್ತನ ಮಾಡಿದಲ್ಲಿ ರೀತೀ ಪ್ರಕಾರ ವ್ಯವಸ್ಥೆ ಮಾಡುವದರಲ್ಲಿ ಬಂದೀತು ಅಥವಾ ನಿನ್ನ ಹಕ್ಕು ಸ್ಥಾಪನೆ ಮಾಡಿ ಯೋಗ್ಯ ಕೋರ್ಟಿನ ಹುಕುಮನಾಮ ಪಡೆದ ನಂತರ ಮುಂದಿನ ತಜವೀಜ ಮಾಡಬೇಕು ತಿಳಿಯೋದು.

ತಾ॥ ೪ ನೇ ಮೇ ೧೯೩೭ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಸಿದ್ದವ್ವಾ ನಿಂಗಪ್ಪಾ ಚವಡಣ್ಣವರ ಈಕೀದು ಅದೆ.

ನನ್ನ ಮಗಳು ಕೊಟ್ಟ ನೋಟೀಸಿನಂತೆ ತಜವೀಜ ಮಾಡಬೇಕು ಮಾಡದೇ ಹೋದರೆ ಲಗ್ನದ ಹಕ್ಕು ಅಮಲಿನಲ್ಲಿ ತರುವ ಹುಕುಂನಾಮೆ ಪಡೆದ ನಂತರ ನಿನ್ನ ಮರ್ಜಿ ಪ್ರಕಾರ ಮಾಡಬೇಕು ಹಾಗೆ ಮಾಡದಿದ್ದರೆ ಗೈರ ಕಾಯದೆಶೀರ ವರ್ತನ ಮಾಡಿದಲ್ಲಿ ರೀತಿಪ್ರಕಾರ ವ್ಯವಸ್ಥೆ ಮಾಡಲಾದೀತು ವ ಹಿಂದಿನ ಮೂರು ವರ್ಷದ ಪೋಟಗಿ ಸಿಗುವ ಬಗ್ಗೆ ವ ಮುಂದಿನ ಪೋಟಗಿ ದಸಿಂದ ಇಲಾಜು ಮಾಡಬೇಕಾಗುತ್ತದೆ ತಿಳಿಯುವದು.

ತಾ॥ ೪-೫-೩೭

ಈ ಎಡಗೈ ಹೆಬ್ಬೆಟ್ಟಿನ ಗುರ್ತು ನಿಂಗಂಗವ್ವಾ ಕೋಮ ಇರಬಸಪ್ಪಾ ಬಾಗಲಕೋಟಿ ಇಕಿದು ಅದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 144

ವಿಜಯ

ನಿತ್ಯ ಪತ್ರ | ಬಿಡಿ ಪ್ರತಿಗೆ ಕಾಣಿ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶನಿವಾರ ತಾರೀಖು ೭ ನೇ ಮೇ ೧೯೩೭ | ಸಂಚಿಕೆ ೯೩

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗೆಯು ಆರು ಲಕ್ಷದ ಮೇಲುಂಟು. ಚಾಲ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವವು. ಕಾಯಿಮುಮುತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವವರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ... ಅಣೆಯಿಂತಿರುತ್ತದೆ.

ಎ. ಬಿ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸ್ವಸ್ತಿಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೋ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ್ಲಿ ಷ ದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡತಕ್ಕವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ಕಾಲರಾ ಪಿಲ್ಸ-

—೦—

ಬೇನೆ ಬಂದ ಮೇಲು ತಾಸಿನೊಳಗಾಗಿ ತಪ್ಪದ ಗುಣ.

—೦—

ನಾನು ಕಾಲರಾ ಬೇನೆಯ ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಮರೇವಾಡಿ, ಶಿವಳ್ಳಿ, ಕರಡಿಗುಡ್ಡ, ಮರೇವಾಡ ಮುಂತಾದ ಊರುಗಳಲ್ಲಿ ಗುಣ ಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತಿವೆ. ವರ್ತಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ವ್ಹಿ. ಪಿ. ಸಂಗಡ ಅನುಪಾನ ತಿಳಿಸುವೆನು.

ಗೋಪಾಸಾಹೇಬ ಎಲಿಗಾರ,
ಮಾರ್ಕೆಟ ಧಾರವಾಡ.

ವಿಜಯ.

ಧಾರವಾಡ ತಾ- ೭-೫-೨೭ ನೇ ಇಸ್ವಿ

ಸ್ಥಾನಿಕ ಸ್ವರಾಜ್ಯಗಳ ಸುಧಾರಣೆಯು.

ಹುಜೂರ ಡಿಪುಟಿ ಕಲೆಕ್ಟರರಾದ ಶ್ರೀ. ಕೃಷ್ಣರಾವ ಗುಂಜೀಕರರ ನಿಬಂಧವು.

ಈ ಊರಲ್ಲಿ ಕೂಡಿದ್ದ ಸ್ಥಾನಿಕ ಸ್ವರಾಜ್ಯದ ಪರಿಷತ್ತಿನಲ್ಲಿ ಶ್ರೀ. ಗುಂಜೀಕರರು ಓದಿದ ನಿಬಂಧದ ಸಂಗ್ರಹವು ಮುಂದೆ ಕೊಟ್ಟಂತಿರುತ್ತದೆ.

ಸ್ಥಾನಿಕ ಸ್ವರಾಜ್ಯದ ಆಡಳಿತವು ಮೇಲೆ ಕೆಳಗೆ ಹೇಳಿದ ಪ್ರಕಾರ ಪ್ರತಿಕೂಲ ಟೀಕೆಗಳ ಗುರಿಯಾಗಿದೆ.

೧ ಯೋಗ್ಯವಾಗಿ ಮತ್ತು ಸಾಕಷ್ಟು ಕರ ಕೂಡಿಸುವದಿಲ್ಲ.

೨ ಕರದ ಭಾರವು ಹೆಚ್ಚಾಗಿ ಬಡಜನರ ಮೇಲೆ ಬೀಳುತ್ತದೆ.

೩ ಕರವನ್ನು ಸರಿಯಾಗಿ ವಸೂಲ ಮಾಡುವದಿಲ್ಲ. ಒಡವೆಗಳನ್ನು ಹಿಂಸಿಸುವರು. ದೈವ್ಯರನ್ನು ದಾಕ್ಷಿಣ್ಯದಿಂದ ನಡಿಸಿಕೊಳ್ಳುವರು.

೪ ದ್ರವ್ಯವನ್ನು ಯೋಗ್ಯರೀತಿಯಿಂದ ಉಪಯೋಗಿಸುವದಿಲ್ಲ.

೫ ಕಾಮಗಾರಿಗಳ ಯೋಜನೆಯನ್ನು ವ್ಯವಸ್ಥೆಯಿಂದ ಮಾಡುವದಿಲ್ಲ ಮತ್ತು ವ್ಯವಸ್ಥೆಯಿಂದ ಕೆಲಸ ಮಾಡಿಸುವದಿಲ್ಲ.

೬ ವೆಚ್ಚವನ್ನು ಸರಿಯಾಗಿ [illegible] ಮಾಡುವದಿಲ್ಲ.

೭ ಶ್ರೀಮಂತರಂತೆ ಕರಪಟ್ಟಿ ಕೊಡುವ ಬಡವರಿಗಾಗಿ ದೀಪದ ವ್ಯವಸ್ಥೆ, ಬೀದಿಗಳ ಸ್ವಚ್ಛತೆ, ಕಸ ತೆಗೆಯುವದು, ಬೀದಿಗಳ ದುರಸ್ತಿ, ನೀರಿನ ಪೂರೈಕೆ ಆಗುವದಿಲ್ಲ.

೮ ಒಟ್ಟಿನಿಂದ ಕರಪಟ್ಟಿ ಕೊಡುವವರು ತಾವು ಕೊಡುವ ಕರಕ್ಕೆ ಸರಿಯಾಗಿ ಪ್ರತಿಫಲ ಪಡೆಯುವದಿಲ್ಲ.

ಈ ಕೊರತೆಗಳು ದೋಷಪೂರ್ಣ ಕಾರ್ಯಪದ್ಧತಿ ಮತ್ತು ದೋಷಪೂರ್ಣ ಅಮಲಬಜಾವಣೆಯಿಂದ ಉಂಟಾಗುತ್ತವೆ. ಸ್ಥಾನಿಕ ಸ್ವರಾಜ್ಯಗಳು ಬಾಲ್ಯಾವಸ್ಥೆಯಲ್ಲಿದ್ದಾಗ ಅವುಗಳ ಕಾರಭಾರವು ನಾನ್-ಅಫೀಸಿಯಲ ಜನ [illegible] ಕಮಿಟಿಗಳ ವಶದಲ್ಲಿತ್ತು; ಬರುತ್ತಾ ಈ ಅಧಿಕಾರವು ಸ್ಥಾನಿಕ ಸ್ವರಾಜ್ಯಕ್ಕೇ ದೊರೆಯುತ್ತಾ ಬಂದಿದೆ. ಮೇಲೆ ಹೇಳಿದ ದೋಷಗಳ ಸಂಬಂಧವನ್ನು ಅಮಲಬಜಾವಣೆ ಮಾಡುವಂಥವರ ಬಾಗಿಲಕ್ಕೆ ವೈದು ಹಚ್ಚುವಂತಿರುತ್ತದೆ. ಕೆಲಸಗಳ ಯೋಜನೆ ಮತ್ತು ಅವುಗಳ ಅಮಲ ಬಜಾವಣೆಯಲ್ಲಿ ಪುಷ್ಕಳವಾಗಿ ಸುಧಾರಣೆಯಾಗಬೇಕಾಗುತ್ತದೆ.

ಸ್ಥಾನಿಕ ಸ್ವರಾಜ್ಯದ ಆಡಳಿತೆಯಲ್ಲಿ ಕೆಳಗಿನ ಜನರು ಸೇರುತ್ತಾರೆ.

೧ ಚೀಫ ಆಫೀಸರ

೨ ಇಂಜನಿಯರ

೩ ಅಕೌಂಟಂಟ

೪ ಹೆಲ್ಥ ಆಫೀಸರ

೫ ಸ್ಯಾನಿಟರೀ ಇನ್ಸಪೆಕ್ಟರ

೬ ಕಾರಕೂನ, ವಸೂಲಿಕಾರಕೂನ, ಸ್ಯಾನಿಟರಿ ಇನ್ಸಪೇಕ್ಟರ ಮೊದಲಾಗಿ ಸಿಪಾಯಿ ಮುಂತಾದವರು.

ಸದ್ಯದಲ್ಲಿ ದೊಡ್ಡ ದೊಡ್ಡ ಕಾಮದಾರರ ಸುಧಾರಣೆಯು ವಿಷಯವಾಗಿಯೇ ವಿಚಾರ ಮಾಡುವಾ. ಸರಕಾರದವರು ಮಾಮಲೇದಾರ, ಅಸಿಸ್ಟಂಟ ಇಂಜನಿಯರ, ಹೆಡ್ಡಕ್ಲಾರ್ಕ, ಹೆಡ್ಡ ಅಕೌಂಟಂಟ, ಡಿಪುಟಿ ಎಜ್ಯುಕೇಶನಲ ಇನ್ಸಪೇಕ್ಟರ ಇವರಿಂದ ತಕ್ಕೊಳ್ಳುವಂಥ ಕೆಲಸವನ್ನು ಸ್ಥಾನಿಕ ಸ್ವರಾಜ್ಯಗಳಲ್ಲಿ ಚೀಫ ಆಫೀಸರ ಮುಂತಾದವರಿಂದ ದೊರಕಿಸುವದಿಲ್ಲೆಂದು ಹೇಳಿದರೆ- ಆ ಬಗ್ಗೆ ಯಾರೂ ವಿಶೇಷವಾಗಿ ವಾದ ಬೆಳೆಸಲಾರರೆಂದು ತಿಳಿಯುತ್ತೇನೆ. ಸರಕಾರ ಮತ್ತು ಸ್ಥಾನಿಕ ಸ್ವರಾಜ್ಯಗಳು ಒಂದೇ ವರ್ಗದ ಸುಶಿಕ್ಷಿತ ಜನರನ್ನು ತಮ್ಮ ಕೆಲಸಕ್ಕಾಗಿ ತಕ್ಕೊಳ್ಳುತ್ತವೆ. ಆದರೆ ನೇಮಣೂಕಿಯ ಪದ್ಧತಿಯೂ ಕೆಲಸದ ಕಾರಣಗಳೂ ಇವೆರಡರಲ್ಲಿ ಹೆಚ್ಚು ಕಡಿಮೆಯನ್ನುಂಟು ಮಾಡುತ್ತವೆ.

ಪ್ರತಿಯೊಂದು ಲೋಕಲಬೋರ್ಡ ಅಥವಾ ಮ್ಯುನಿಸಿಪಾಲಿಟಿಯು ಸ್ವತಂತ್ರವಾಗಿರುವದರಿಂದ ಇವುಗಳ ಕಾಮದಾರರು ಪೆನಶನ ತಕ್ಕೊಳ್ಳುವ ತನಕ ಒಂದೇ ಸ್ಥಳದಲ್ಲಿ ಕೆಲಸ ಮಾಡಬೇಕಾಗುತ್ತದೆ. ಯಾವನೊಬ್ಬ ಕಾಮದಾರನು ೩ ಅಥವಾ ಐದು ವರ್ಷ ಕೆಲಸ ಮಾಡುವಷ್ಟರಲ್ಲಿ ಆತನಿಗೆ ಬಡತಿಯಿಂದ ದೊರೆಯತಕ್ಕ ಸಂಬಳ ಮುಟ್ಟಿ ಹೋಗುತ್ತದೆ. ಮುಂದೆ ಹೆಚ್ಚಿಗೆ ಸಂಬಳ ಕೊಡಲು ಸ್ಥಾನಿಕ ಸಂಸ್ಥೆಗಳಿಗೆ ಶಕ್ತಿ ಇರುವದಿಲ್ಲ. ಮುಂದೆ ಇಲ್ಲಿಯೇ ಕೆಲಸ ಮಾಡುವಾಗ ಆತನು ಅಸಂತುಷ್ಟನಾಗುವನು. ಇಲ್ಲವಾದರೆ- ಹೆಚ್ಚಿನ ಆಶೆಯಿಂದ ನೌಕರಿಯನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುವನು. ಈತನು ಬಿಟ್ಟು ಹೋದನೆಂದರೆ- ಈತನ ಅನುಭವದ ಲಾಭ ಹೋಗಿ, ಹೊಸಬರನ್ನು ತಂದು ಅವರಿಗೆ ಮೊದಲಿನಿಂದ ಶಿಕ್ಷಣ ಕೊಡಬೇಕಾಗುತ್ತದೆ. ಸರಕಾರೀ ಕಾಮದಾರರ ಸಹಾಯ ತಕ್ಕೊಳ್ಳುವದರಿಂದ ಈ ದೋಷ ಹೋಗುವದು ನಿಜ. ಆದರೆ- ತಾವೇ ತಮ್ಮ ಜನರನ್ನು ನೇಮಿಸಿಕೊಳ್ಳಬೇಕೆಂಬ ಪ್ರವೃತ್ತಿಯು ಹೆಚ್ಚಿರುತ್ತದೆ.

ಯಾವನೊಬ್ಬ ಕಾಮದಾರನು ಕಡೆತನಕ ಒಂದೇ ಸ್ಥಳದಲ್ಲಿ ಕೆಲಸ ಮಾಡಬೇಕಾಗುವದರಿಂದ ಇವನು ಯಾವ ಪಕ್ಷದ ಮನಸ್ಸನ್ನೂ ನೋಯಿಸನು. ಯಾವದೊಂದು ಪಕ್ಷವು ಅಧಿಕಾರಾರೂಢವಾಗಿ ತನಗೆ ಅಹಿತ ಮಾಡಬಹುದೆಂಬ ಹೆದರಿಕೆಯುಳ್ಳವನಾಗುವನು. ಈ ಕಾರಣದಿಂದ ಸರ್ವಸಾಧಾರಣವಾದ ಆಡಳಿತೆಯು ಶಿಥಿಲವಾಗುತ್ತದೆ.

ಯಾವನೊಬ್ಬನು ಕೆಲಸದಲ್ಲಿ ಉದಾಸೀನನಾದರೆ- ಅವನಿಗೆ ತಕ್ಕ ಶಾಸನ ಮಾಡುವದಕ್ಕೆ ಸ್ಥಾನಿಕ ಸಂಸ್ಥೆಗೆ ಬಹಳ ಜೋಗುತ್ತದೆ. ಬರತರ್ಫನನ್ನು [illegible]. ಮತ್ತು [illegible] ಕಠಿಣ ಶಿಕ್ಷೆಯಾಗುವದು. ಹಿ ಬಡತಿ ಕೊಟ್ಟರೆ- ಅವನು ಜನರಲ್ಲಿರುವ ಮರ್ಯಾದೆ ಕಳಕೊಳ್ಳುವನು. ಮತ್ತು [illegible] ಸರಕಾರದವರು ಯಾವನೊಬ್ಬ ಅಧಿಕಾರಿಯನ್ನು ಒಂದು ಜಿಲ್ಲೆಯಲ್ಲಿ ಐದು ವರ್ಷಕ್ಕಿಂತ ಹೆಚ್ಚು ಇಡುವದಿಲ್ಲ. ಅದಕ್ಕೆ [illegible] ಕಾರಣಗಳೂ ಇರುತ್ತವೆ. ಈ ಸುವಾಥದಲ್ಲಿ ಆ ಕಾಮದಾರನು ಸ್ನೇಹಿತರನ್ನೂ ದ್ವೇಷಿತರನ್ನೂ ಮಾಡಿ ಕೊಳ್ಳಬಹುದಾಗಿದೆ, ಆದುದರಿಂದ ಆತನ ಹಿತಕ್ಕಾಗಿಯೇ ಆತನನ್ನು ಬೇರೆ ಕಡೆಗೆ ವರ್ಗ ಮಾಡುವದು ಲೇಸು. ಈ ಮೇಲಿನ ವಿಚಾರಗಳಿಂದ ಸ್ಥಾನಿಕ ಸ್ವರಾಜ್ಯಗಳ ದೆಸೆಯಿಂದ ಕಾಮದಾರರನ್ನು ನೇಮಿಸುವದಕ್ಕೂ, ಬಡತಿ ಕೊಡುವದಕ್ಕೂ, ವರ್ಗ ಮಾಡುವದಕ್ಕೂ ಶಿಕ್ಷೆ ಮಾಡುವದಕ್ಕೂ ಒಂದು ಮಧ್ಯವರ್ತಿ ಕಮಿಟಿ ಇರಬೇಕೆಂದೆನಿಸುತ್ತದೆ. ಇಂಥದೊಂದು ಕಮಿಟಿ ಮಾಡಿದರೆ- ಇದು ನೇಮಣೂಕಿಗಳನ್ನು ವಿಚಾರದಿಂದ ಮಾಡುವದು. ಮತ್ತು ಆಯಾ ಸ್ಥಾನಿಕ ಸಂಸ್ಥೆಗಳಿಗೆ, ಅದಕ್ಕೆ ತಕ್ಕಂಥ ಕಾಮದಾರರನ್ನೇ ಒದಗಿಸಿ ಕೊಡುವದು.

ಕೆಲವು ವರ್ಷಗಳ ಹಿಂದೆ ಮ್ಯುನಿಸಿಪಾಲಿಟಿಯು ಚೀಫ ಆಫೀಸರರು ಇಂಜನಿಯರರೇ ಇರಬೇಕು? ಆಡಳಿತೆ ನೋಡಲು ಸಮರ್ಥನಾದಂಥ ಕಾ[illegible] ನಡೆಯಿತು [illegible] ಪಕ್ಷಗಳೂ [illegible] ಥರನ ಮಾಡಿದವು. ಇಂಜನಿಯರನಾದಂಥ ಚೀಫ ಆಫೀಸರರ ಪ್ರಾಶಸ್ತ್ಯ ಇದ್ದದೆ, ಕೆಲ ಪ್ರಸಂಗಗಳಲ್ಲಿ ಮುಖ್ಯ ಕಾಮದಾರನೇ ಉಪಯೋಗಿ ಎಂದು

...ಂಡು ಬರುವದು. ಇಂಥ ಕಾಮದಾರನನ್ನು ಮಧ್ಯವರ್ತಿ ಕಮಿಟಿಯು ಪ್ರಾಪ್ತಿಸಿ ಕೊಡುವದು.

ಮ್ಯುನಿಸಿಪಾಲಿಟಿ ಅಥವಾ ಲೋಕಲಬೋರ್ಡಗಳಿಗೆ ಚಲೋ ಕಾಮದಾರರು ಬೇಕಾದರೆ– ಸರಕಾರದಿಂದ ಕಡವಾದರೂ ತಕ್ಕೊಳ್ಳಬೇಕು; ಅಥವಾ ಮಧ್ಯವರ್ತಿ ಕಮಿಟಿಯನ್ನು ಸ್ಥಾಪಿಸಲಿಕ್ಕೆ ತಳೆದೂಗಬೇಕು. ಅಂದರೆ ಪ್ರತಿಯೊಂದು ಸಂಸ್ಥೆಯು ಶಿಕ್ಷಣ ಹೊಂದಿ ಅನುಭವಿಕರಾದಂಥ ಕಾಮದಾರರನ್ನು ದೊರಕಿಸುವದು. ಮುಂಬಯಿ ಇಲಾಖೆಯಲ್ಲಿ ೨೦ ಜಿಲ್ಲಾ ಬೋರ್ಡುಗಳೂ ೫೫ ದೊಡ್ಡ ಮ್ಯುನಿಸಿಪಾಲಿಟಿಗಳೂ ಉಂಟು. ಇವುಗಳಲ್ಲಿ ಪ್ರತಿಯೊಂದಕ್ಕೆ ಚೀಫ ಆಫೀಸರ, ಅಕೌಂಟಂಟ ಮತ್ತು ಲೋಕಲಬೋರ್ಡಿನ ಅ್ಯಾಡಮಿನಿಸ್ಟ್ರೇಟಿವ್ಹ ಆಫೀಸರನು ಬೇಕಾಗುತ್ತಾನೆ. ಇವರಲ್ಲಿ ಪ್ರತಿಯೊಬ್ಬರ ಸಂಬಳವು [illegible] ಆಗುತ್ತದೆ

ಅಕೌಂಟಂಟನ ಸ್ಥಳವು ಬಹಳ ಮಹತ್ವದ್ದಾಗಿರುತ್ತದೆ. ಈತನು ಸ್ಥಾನಿಕ ಸಂಸ್ಥೆಯ ಹಣದ ಕಾವಲುಗಾರನಿರುತ್ತಾನೆ. ಈತನು ಶಿಕ್ಷಣ ಹೊಂದಿದವನು ಇರುವದೇ ಅಗತ್ಯವು. ಚೀಫ ಆಫೀಸರ ಮತ್ತು ಅಕೌಂಟಂಟರು ದೇಸಿಯಿಂದ ಡಿಪಾರ್ಟಮೆಂಟ ಪರೀಕ್ಷೆ ಇತ್ತಕ್ಕದ್ದು. ಸದ್ಯ ಲೋಕಲಬೋರ್ಡಿನ ಅ್ಯಾಡಮಿನಿಸ್ಟ್ರೇಟಿವ್ಹ ಆಫೀಸರನನ್ನು ಡಿಪ್ಯುಟಿ ಅಥವಾ ಅಸಿಸ್ಟಂಟ ಕಲೆಕ್ಟರರೊಳಗಿಂದಲೇ ತಕ್ಕೊಳ್ಳಬೇಕು. ಏಕೆಂದರೆ– ಇವರಿಗೆ ಪದ್ಧತಿ ಪ್ರಕಾರ ಕೆಲಸದ ಅನುಭವವಿರುತ್ತದೆ.

ಸ್ಥಾನಿಕ ಸಂಸ್ಥೆಗಳ ಕಾಮದಾರರಿಗೆ ಪೆನ್ಶನ ಕೊಡುವದು ಬಹಳ [illegible]ದೆ. ಆದ್ದರಿಂದ ಪ್ರಾವಿಡೆಂಟ ಫಂಡಿನ ವ್ಯವಸ್ಥೆ ಮಾಡಬೇಕು. ಕಾಯಮ ಕೆಲಸ ಮತ್ತು ಪ್ರಾವಿಡೆಂಟ ಫಂಡಿನ ವ್ಯವಸ್ಥೆಯಿಂದ ಕೆಲಸಗಾರರ ಸಂಬಳವು [illegible] ಕಡಿಮೆಯಾಗವದು. ಆದರೂ ಅಡ್ಡಿಯಿಲ್ಲ.

ಸದ್ಯದಲ್ಲಿ ಸ್ಥಾನಿಕ ಮಧ್ಯವರ್ತಿ ಕಮಿಟಿಯ ವಿಚಾರವಿರುವದಿಲ್ಲ. ಆದರೆ ನಾನು ಸೂಚನೆ ರೂಪವಾಗಿ ಒಂದು ಯೋಜನೆ ಹೇಳುತ್ತೇನೆ. ಈ ಕಮಿಟಿಯ ಮೆಂಬರರು ಏಳು ಜನರಿರಬೇಕು. ಸ್ಥಾನಿಕ ಸ್ವರಾಜ್ಯದ ಅಧಿಕಾರ ಪಡೆದ ಮಂತ್ರಿಯು ಚೇರಮನ್ನನಾಗಬೇಕು. ಪ್ರೆಸಿಡೆಂಟ, ಹ್ಯಾಯಿಸ ಪ್ರೆಸಿಡೆಂಟರು ಸೇರಿ, ಕಮಿಟಿಯ ಮೆಂಬರರನ್ನು ಆರಿಸಬೇಕು. [illegible] [illegible] ಮ್ಯುನಿಸಿಪಾಲಿಟಿಗಳು ಮಹತ್ವವನ್ನು ಅರಿಸತಕ್ಕದ್ದು. ಸಂಬಳ ಕೊಟ್ಟಂಥ ಒಬ್ಬ ಸೇಕ್ರೆಟರಿ ಇರಬೇಕು. [illegible] ಮೊದಲಾದವರು ಇವನ ನೇಮಿಸಿಗಿರಬೇಕು.

ನಾನು ಎರಡು ಮ್ಯುನಿಸಿಪಾಲಿಟಿಗಳ ಚೀಫ ಆಫೀಸರನಿದ್ದೆನು. ಆಗ ಬಂಧ ಅನುಭವದಿಂದ ಒಂದು ಸಂಗತಿಯನ್ನು ಹೇಳುತ್ತೇನೆ. ಮನೆ ಪಟ್ಟಿ ವಸೂಲಿಗಾಗಿ ಕಾರಕೂನರು ಮನೆಮನೆಗೆ ಹೋಗುತ್ತಾರೆ. ಇದನ್ನು ರಹಿತ ಪಡಿಸಿ ಮನೆಯ ಮಾಲೀಕರೇ ಮ್ಯುನಿಸಿಪಾಲಿಟಿಗೆ ಬಂದು ವಸೂಲ ಕೊಡುವಂತೆ ವ್ಯವಸ್ಥೆ ಮಾಡಬೇಕು. ಅಂದರೆ ಕಾರಕೂನ ಸಿಪಾಯರ ವೆಚ್ಚ ಕಡಿಮೆಯಾಗಿ, ವಸೂಲಿಯು ಮಾ[illegible]ದಗಿಯೂ ತಪ್ಪುವದು.

ಸೆಂಟ್ರಲ ಬೋರ್ಡಿನಿಂದ ಚೀಫ ಆಫೀಸರ, ಇಂಜಿನಿಯರ, ಅಕೌಂಟಂಟ ಮೊದಲಾದವರ ನೇಮಣೂಕಿ, ವರ್ಗಾವರ್ಗಿಯು ಮೇಲಾಗುತ್ತದೆಂಬದನ್ನು ಕೆಲಕಾಲ ನೋಡಿದ ನಂತರ ಹೆಲ್ತ ಆಫೀಸರ ಸಬ್ಬ ಓವ್ಹರಶಿಯರ, ಸ್ಯಾನಿಟರಿ ಇನ್ಸಪೇಕ್ಟರ ಮೊದಲಾದ ಕೆಳಸ್ತರದ ಕಾಮದಾರರ ವಿಷಯವಾಗಿಯೂ ಇದೇ ಪ್ರಕಾರ ವ್ಯವಸ್ಥೆ ಮಾಡಬಹುದು.

ಲಾಹೋರಿನಲ್ಲಿ ಮುಸಲಮಾನ ಶೀಖ ದಂಗೆ.

—o—

ಲಾಹೋರ ಪಟ್ಟಣದಲ್ಲಿ ಒಬ್ಬ ಮುಸಲಮಾನನು ಶೀಖರ ಮಡಿಗೆಯ ಅಪಮಾನವಾಗುವಂಥ ಕೃತ್ಯ ಮಾಡಿದನು. ಇವನನ್ನು ಕೆಲ ಶೀಖರು ದೂಷಿಸಿದರು. ಶೀಖ ಮುಸಲಮಾನರು ಗುಂಪು ಗೂಡಿದರು. ದಂಗೆಯಾಯಿತು. ದಂಗೆಯ ಕಿಚ್ಚು ಪಟ್ಟಣದ ತುಂಬ ಹಬ್ಬಿತು. ಪೋಲೀಸ ಮತ್ತು ದಂಡು ಬಂದು, ಊರ ತುಂಬ ಬಂದೋಬಸ್ತ ಮಾಡಿರುವದು. ಆದರೂ ಸಂದಿಗೊಂದಿಗಳಲ್ಲಿ ಹೊಡೆದಾಟಗಳು ನಡೆದಿವೆ. ಸತ್ತವರನ್ನೂ ಗಾಯವಾದವರನ್ನೂ ಕಂಡೇ ಕರುತ್ತಿರುವರು. ಪೇಟೆ ಬಂದಾಗಿದೆ. ಪೋಲಿಸ ಮತ್ತು ದಂಡು ಸರಕಾರಕ್ಕೆ ಬಂದಿದ್ದರೆ– ಲಾಹೋರ ಪಟ್ಟಣವು ಎರಡನೆಯ ಕೊಹಟ ಮತ್ತು ಕಲಕತ್ತೆಯಾಗುತ್ತಿತ್ತು.

ಕಾಂಗ್ರೆಸದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರರು ಪುಣೆಗೆ ಬಂದಿದ್ದಾರೆ. ಶ್ರೀ ಕೇಳಕರ ಅಧ್ಯಕ್ಷತೆಯಲ್ಲಿ ವ್ಯಾಖ್ಯಾನವಾಯಿತು. ಕಾಂಗ್ರೆಸದಲ್ಲಿ ಐಕ್ಯವೇ ಇವರ ಸೂತ್ರವಾಗಿದೆ. ಇದೇ ಉದ್ದಿಶ್ಯವಾಗಿ ಇವರು ಮಹಾರಾಷ್ಟ್ರ ಪ್ರಾಂ[illegible] ಸಂಚಾರ ಮಾಡುವರು.

ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಅರ್ಥವಿಲ್ಲ. ನಾನ– ಕೋ– ಆಪರೇಶನದ ಹೊರತು ಸ್ವರಾಜ್ಯ ದೊರೆಯಲಾರದೆಂಬ ಠರಾವು ಬಿಜಾಪುರದಲ್ಲಿ ಕೂಡಿದ್ದ [illegible] ಪರಿಷತ್ತಿನಲ್ಲಿ ಪಾಸಾಯಿತು.

ವಿವಿಧ ವರ್ತಮಾನಗಳು.

—o೦o—

ಸುರತದಲ್ಲಿ ಮುಸಲಮಾನರು ಮಾಡಿದ ದಂಗೆಯಲ್ಲಿ ಮ್ಯಾಜಿಸ್ಟ್ರೇಟರಿಗೂ ಬಲವಾದ ಪೆಟ್ಟು ಕೂತಿದೆ. ದಂಗೆಯಲ್ಲಿ ಒಬ್ಬ ಮುಸಲಮಾನನು ಸತ್ತನು. ಐವರು ಭಯಂಕರ ಗಾಯ ಹೊಂದಿದ್ದಾರೆ.

ಕಾಕೋರಿಯ ದರೋಡೆಯಲ್ಲಿ ಶಿಕ್ಷೆ ಹೊಂದಿದ ಕೈದಿಗಳು ಅನ್ನ ವರ್ಜ ಮಾಡಿ, ೨೭ ದಿವಸವಾಯಿತು. ಇವರಲ್ಲಿ ಒಂಭತ್ತು ಜನರು [illegible] ಪ್ರಾಣಗುಂದಿ ಆಸ್ಪತ್ರಿಯಲ್ಲಿ ಹಾಸಿಗೆ ಹಿಡಿದು ಬಿದ್ದುಕೊಂಡಿದ್ದಾರೆ.

ಬಂಗಾಲ ಇಲಾಖೆಗೆ ಸೇರಿದ ಬ್ಯಾರಿಸಾಲ ಪಟ್ಟಣದಲ್ಲಿ ದರೋಡೆಗಾರರು ಒಂದು ಮನೆಯನ್ನು ಹೊಕ್ಕರು. ಆ ಮನೆಯಲ್ಲಿ ಐವರಿದ್ದರು. ಒಬ್ಬನನ್ನು ಮಾತ್ರ ಬಿಟ್ಟು, ಉಳಿದವರನ್ನು ಕೊಂದು ಸುಲಿಗೆ ಮಾಡಿಕೊಂಡು ಹೋದರು.

ಕಲಕತ್ತೆಯಲ್ಲಿ ಹತ್ತು ಸಾವಿರ ಹೆಂಗಸರು ದೇಹವಿಕ್ರಯ ಮಾಡಿಕೊಂಡು ಜೀವಿಸುತ್ತಾರೆ. ಇವರಲ್ಲಿ ಎರಡು ಸಾವಿರ ತರುಣಿಯರನ್ನು ಈ ಅನೀತಿ ವ್ಯವಹಾರದಿಂದ ಬಿಡಿಸಲು– ಅಲ್ಲಿಯ ಸಮಾಜ ಸುಧಾರಕರು ಪ್ರಯತ್ನಿಸುತ್ತಿದ್ದಾರೆ.

ಇಂಗ್ಲಿಷ ಲೇಖಕರು ಶಿವಾಜಿಯಂಥ ವಿಭೂತಿಗೆ ಗುಡ್ಡದೊಳಗಿನ ಇಲಿಯೆಂದು ಕುಚೇಷ್ಟಿಸಿದ್ದಾರೆ. ಇವರ ಅಜ್ಞಾನವನ್ನು ತೆಗೆದು ಹಾಕಬೇಕೆಂದು ಬಿಪಿನಚಂದ್ರ ಪಾಲರು ಈ ಉತ್ಸವ ಪ್ರಸಂಗದಲ್ಲಿ ಭಾಷಣ ಮಾಡಿದ್ದಾರೆ.

[illegible] ದಂಗೆಯಲ್ಲಿ ಹಿಡಿಯಲ್ಪಟ್ಟ ಮುಸಲಮಾನರ ಸಂಖ್ಯೆಯು ಇನ್ನೂರಾಗಿದೆ.

ನಾಗಪೂರದಲ್ಲಿ ಕಾಯದೆಭಂಗ ಮಾಡಿದಂಥ ರಾಮಲಾಲ ಮೊದಲಾದವರನ್ನು ಪುನಃ ದಸ್ತಗಿರ ಮಾಡಿ, ಅವರಿಗೆ ಒಂದೊಂದು ತಿಂಗಳ ಸಾದಾ ಕೈದಿನ ಶಿಕ್ಷೆ ವಿಧಿಸಿದರು. ಗೃಹಮಂತ್ರಿಯು ಬಂದು, ವಿಚಾರ ಮಾಡಿದ ನಂತರ ಆದ ಪರಿಣಾಮವು''

ಪಂಡಿತ ಶಾಮಲಾಲ ನೆಹರು ಇವರ ಕುಮಾರಿಯು ಎಮ್. ಎ. ಪರೀಕ್ಷೆಯಲ್ಲಿ [illegible] ನಂಬರು ಪಾಸಾಗಿದ್ದಾಳೆ.

ಜೆಗಿ ಮತ್ತು ಸವದತ್ತಿ ಮೂಗಪ್ಪನವರು ಬಸವೇಶ್ವರರನ್ನು ಮಹಾತ್ಮರಿಗೆ ಹೋಲಿಸಿದ ಭಾಷಣ ಮಾಡಿದ್ದಾರೆ.

———

ಇಲ್ಲಿಯ ಮ್ಯುನಿಸಿಪಾಲಿಟಿಯುವರು ಸ್ವಚ್ಛ ನೀರಿನ ಪೂರೈಕೆಗಾಗಿ ಬಾವಿಗಳನ್ನೂ, ಕಾಲರಾ ಪ್ರತಿಬಂಧಕಗಳನ್ನೂ, ವ್ಯಾಯಾಮ ಶಾಲೆ ಕಟ್ಟಲಿಕ್ಕೂ, ಸ್ಮಶಾನ ದುರಸ್ತಿಗೂ ಫಂಡಿನ ಏರ್ಪಾಡು ಮಾಡಿದ್ದಾರೆ. ಬೇರೆ ಸಾರ್ವಜನಿಕ ಸಂಸ್ಥೆಗಳಂತೆ ಮಹಿಳಾ ವಿದ್ಯಾಲಯಕ್ಕೂ ೫೦ ರೂಪಾಯಿಯ ಮಂಜೂರಾತಿ ಮಾಡಿಕೊಟ್ಟಿದ್ದಾರೆ.

———

ಸರಕಾರೀ ವಕೀಲರಾದ ಶ್ರೀ ಹುಲಕೋಟಿಯವರು ಡಿಸ್ಟ್ರಿಕ್ಟ ಜಡ್ಜರಾಗುವರೆಂದು ಊರೊಳಗೆ ದಟ್ಟ ವರ್ತಮಾನವುಂಟು. ತಾತ್ಪೂರ್ತಿಕವಾಗಿ ಕೊಟ್ಟರೇ ಇವರು ಈ ಕೆಲಸವನ್ನು ಅಂಗೀಕರಿಸುವರು.

———

ಈ ಊರಲ್ಲಿ ಬೆಂಚ ಮ್ಯಾಜಿಸ್ಟ್ರೇಟರಾಗಿದ್ದ ಮಿ. ಶಿವಸಂಗಪ್ಪಾ ಖುದಾನಪೂರ ಇವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

———

ನೋಟೀಸು

—o—

ಉಜ್ಜಿನಪ್ಪಾ ಚಿನ್ನ ಮಲ್ಲನಗೌಡಾ ಶಿದ್ದನಗವಡರ ಸಾ|| ಅಂಕಲಗಿ ತಾ. ಗೋಕ ಇವನಿಗೆ– ರುದ್ರಪ್ಪಾ ಚಿನ್ನ ಶಿದ್ದಪ್ಪಾ ಅಂ| ಸಂ| ದಾರ ತಾಯಿ ಹಿರಿಯವ್ವಾ ಕೋಂ ಶಿದ್ದಪ್ಪಾ ಸಾ|| ಅರಿಕಟ್ಟ ತಾಲೂಕ ಗೋಕ ಈ ನೋಟೀಸಿನ ಮೇಲಿಂದಾ ತಿಳಿಸೋದೇನಂದರೆ ನನ್ನ ಗಂಡಾ ಶಿದ್ದಗವಡರು ವರ್ತನು ಖಾಸ ಅಂಣ ತಮ್ಮಂದಿರಾಗಬೇಕು ನನ್ನ ಗಂಡಾ ಸತ್ತು ೩-೪ ವರ್ಷ ಆಯಿತು ನನ್ನ ಹೊಟ್ಟೆಯಲ್ಲಿ ಅಲ್ಪವಯಿ ರುದ್ರಪ್ಪಾ ಅಂತಾ ಒಬ್ಬ ಮಗಾ ಇದ್ದಾನೆ ನಮ್ಮ ಮನಿತನದ ಜಂಗಮ ಆಸ್ತಿ ಬೆಳ್ಳಿಬಂಗಾರದವು ೧ ಬಂಗಾರದ ಸರಿಗೆ ೨೦೦ರೂ. ಬಂಗಾರದ ಬಳಿ ಜತ್ತಿ ೧೦೦ರೂ. ಗೆಜ್ಜೆ ಟೀಕಿ ೧೨೦ರೂ. ಬಂಗಾರದ ಗೋಲು ೩೨ರೂ ಬೆಳ್ಳಿ ಸರಾಳಿ ಜತ ೫೦ರೂ. ೨ ಬಂಡಗ ಭತ್ತಾ ೪೦೦ರೂ. ಮಣಶಿನಕಾಯಿ ಮೂರು ದ್ದು ೪೦ರೂ. ೨ ಯತ್ತು ಮಾರಿದ್ದು ೨೦೦ರೂ. ಜಕ್ಕಡಿ ಕಿಂ|| ೬೦ ಇತರ ಬಿಲ್ಲಾರ ಸಾಮಾನಗಳು ಕಿಂ|| ರೂ|| ೪೦೦ ಈ ಪ್ರಕಾರ ಸಾಮಾನಗಳು ಇದ್ದು ಇಷ್ಟಗಳನ್ನು ನೀನು ಅಲ್ಪವಯಿಗೆ ಲುಕ್ಸಾನ ಮಾಡಬೇಕೆಂಬ ಒರಾದೆಯಿಂದ ವ್ಯವಸ್ಥ ಮಾಡಿಕೊಳ್ಳಕ್ಕೆ ಸಬ ಮಾಡಿ ಗಂಟು ಮಾಡಿಕೊಂಡಿ ಇದು ಕಂಡು ನಾನು ಬುದ್ಧಿವಂತರಿಗೆ ತಿಳಿಸಲು ಬುದ್ಧಿವಂತರ ಮಾತು ಲಕ್ಷ್ಯಕ್ಕೆ ತಾರದೆ ನಿನ್ನ ಮನಸಿಗೆ ಬಂದಂತೆ ನಡಿಲಿಕ್ಕೆ ಹತ್ತಿರುತ್ತಿ ವಿ ಅಲ್ಪವಯಿ ಆಸ್ತಿ ವ್ಯವಸ್ಥಾ ಮಾಡತಕ್ಕದಕ್ಕೆ ಸರಕಾರವು ಮಾಲೀಕರು ಇದ್ದು ಈ ಬಗ್ಗೆ ನಿನ್ನ ಮೇಲೆ ಫಿ|| ವಿ ಮಾಡಿರತನ ನನಗೆ ಹೊಡಿತನೆ ಕಡಿತನೆ ಅಂತಾ ಧಮಕಿ ಹಾಕತೀದಿ ಈ ಬಗ್ಗೆ ಅರ್ಜಿ ಮಾಡಿನಿ ೭.ವಿ.ನಿ ಖಾತೆ ನನ್ನ ಮಗನ ಹೆಸರಿಗೆ ಆಗೊ ಬಗ್ಗೆ ಕೆಲ ವಕೀಲರ ಮಾರಿಫತ ನಡಶಿಂತೆನೆ ಇದು ಮುಟ್ಟಿದ ೮ ದಿವಸದಲ್ಲಿ ಪಂಚರ ಸಮಕ್ಷಮಾ ಯಾವತ್ತು ಆಸ್ತಿಯಲ್ಲಿ ಸರಿಯಾಗಿ ಹಿಸೆ ಮಾಡಿ ಕೊಡಬೇಕು ತಪ್ಪಿದರೆ ನಿನ್ನ ಕಡಿಂದಾ ನಾನು ಒಂದದ್ದು ಮಾಡಿಕೊಳ್ಳಲಿಕ್ಕೆ ತಯಾರ ಇದ್ದೇನೆ ತಿಳಿಯುವದು ತಾ. ೩-೫-೨೭ ಇಸ್ವಿ

ಈ ಯಡಗೈ ಹೆಬ್ಬೆಟ್ಟು ರುದ್ರಪ್ಪಾ ಅ| ಸಂ| ದಾರ ತಾಯಿ ಹಿರಿಯವ್ವಾ ಈಕೆ ಮಾಡಿದ್ದು ಇದೆ.

———

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಚಿತ್ತಪ್ಪೂರ, ಜಿಲ್ಲಾ ಬೆಳಗಾವ

———

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೆನ್ನ ಚಹಾ ಮತ್ತು ಕಾಪೀ ಸೋವೀ ದರದಿಂದ ಸಿಗುವದಲ್ಲದೆ, ಚಿಲ್ಲರೆ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ಕೊಂಡುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ಕೊಂಡುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲ್ಕು ಆಣೆಗೆ ಪೌಂಡಿನಂತೆ ಮಾರಾಟವಾಗುತ್ತದೆ. ಆದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಕೂಡಲೆ ವ್ಹಿ. ಪಿ. ದಿಂದ ಪ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಶಿಗುಪ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

———

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ ಪಿ ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

———

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜ ವಿಜಯ ಧಾರವಾಡ.

———

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸೂರ ಇವರು ಧಾರವಾಡದಲ್ಲಿಯ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ೧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ರವಿವಾರ ತಾರೀಖು ೮ ನೇ ಮೇ ೧೯೨೭ (ಸಂಚಿಕೆ ೫೨

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದ ಬೆಟ್ಟ ನ ಸಂಗತಿ ಬಗ್ಗೆ ಕೇಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಗಲು ಆರು ಲಕ್ಷದ ಮೇಲುಂಟು. ಚೆಕ ಗುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಯಮುಮುತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಂಡ್ಲವರಾವ ಬಿ. ಜಹಾಗೀ,
ಮ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ

—೦—

ಬೇನೆ ಬಂದ ಮೂರು ತಾಸಿನೊಳಗಾಗಿ ತಪ್ಪದೆ ಗುಣ.

—೦—

ನಾನು ಕಾಲರಾ ಬೇನೆಯ ಮೇಲೆ ರಾಮ ಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ. ಧಾರವಾಡ, ಮುಂಡಗಿ, ಶಿವಳ್ಳಿ, ಕರಡಿಗುಡ್ಡ, ನರೇಂದ್ರ ಮುಂತಾದ ಗ್ರಾಮಗಳಲ್ಲಿ ಗುಣ ಹೊಂದಿದವರಿಂದ ಸರ್ಟಿಫಿಕೇಟುಗಳು ಬಂದಿವೆ. ಪತ್ರ ಬರೆದವರಿಗೆ ವ್ಹಿ. ಪಿ. ಯಿಂದ ಕಳಿಸುವೆವು. ವ್ಹಿ. ಪಿ. ಖರ್ಚ ಅನುಪಾನ ತಿಳಿಸುವೆನು.

ಗೋಪಾಲಸಾಹೇಬ ಎಲಿಗಾರ,
ಮಾರ್ಕೆಟ ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಳ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸ್ವಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೋ ಬ್ಯಾಂಕ ಮುಂತಾದ ಸಾರ್ವಜನಿಕ ಸೊಸಾಯಟಿಗಳಿಗೆ ಸಾ ರಿ ಗೆ ಮೂ ರಾ ಣೆ— ಇಂ ಗ್ಲಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ದರ. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೮-೫-೨೮ ನೇ ಇಸ್ವಿ

ಪಟೇಲರ ವಿಲಾಯತಿಯ ಯಾತ್ರೆ.

ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ. ಪಟೇಲರು ಲಂಡನದಲ್ಲಿ ಅನೇಕ ಸಾರ್ವಜನಿಕ ಸಂಸ್ಥೆಗಳನ್ನು ನೋಡಲಿಕ್ಕೆ ಹೋಗಿದ್ದರು. ಪಾರ್ಲಮೆಂಟದಲ್ಲಿ ನಡೆಯುವ ಕೆಲಸವನ್ನೂ ನೋಡಿದರು. ಅದರ ಅಧ್ಯಕ್ಷರು ಇವರಿಗೆ ಅಲ್ಲಿಯ ಕೆಲಸದ ಪದ್ಧತಿಯನ್ನು ತೋರಿಸಿಕೊಟ್ಟರು. ಪಾರ್ಲಮೆಂಟದಲ್ಲಿಯ ಮೆಂಬರನು ಎಂಥ ಸಜ್ಜನನಿದ್ದರೂ, ಅವನಲ್ಲಿ ತಾಮಸ ಗುಣ ಪ್ರಕಟವಾಗಿ ಆತನು ರಾಜಾಧಿರಾಜ ರಾವ ಣಮಹಾರಾಜನಾಗಲಿಕ್ಕೆ ಅವಕಾಶ ಹತ್ತುವದಿಲ್ಲ. ಇದನ್ನು ಕಂಡು, ಪಾರ್ಲಮೆಂಟಕ್ಕಿಂತ ಹಿಂದುಸ್ತಾನದ ಅಸೆಂಬ್ಲಿಯು ಎಷ್ಟೋ ಮಟ್ಟಿಗೆ ಶಾಂತ ಮತ್ತು ಮೃದುವಾಗಿರುತ್ತದೆಂದು ಇವರು ಅಭಿಪ್ರಾಯ ಪಟ್ಟಿದ್ದಾರೆ. ಐರ್ಲಂಡ ಮತ್ತು ಜರ್ಮನಿಯ ಸಭೆಗಳನ್ನು ನೋಡಿದ ಬಳಿಕ ಇವರ ಮತ ಹೇಗಾಗುವದೆಂಬದು ಈ ನಂತರ ತಿಳಿಯುವದು.

ಶ್ರೀ. ಪಟೇಲರು ಇಂಗ್ಲಂಡದಲ್ಲಿಯ ಎಲ್ಲ ಪಕ್ಷಗಳ ಪ್ರಮುಖ ಜನರನ್ನು ಕಂಡು ಬಂದರು. ಕಾಲಿಕಾಂದರ ಮೆಂಬರರೊಂದಿಗೆ ಸಂಭಾಷಣೆ ಮಾಡಿದರು. ಹಿಂದುಸ್ಥಾನದ ಹಳೇ ಭಾರತ ಮಂತ್ರಿಯಾಗಿದ್ದ ಲಾರ್ಡ ಆಲಿವ್ಹರ ಕೂಡ ಮಾತಾಡಿದರು. ಈಗಿನ ಭಾರತ ಮಂತ್ರಿಯಾದ ಲಾರ್ಡ ಬರ್ಕನಹೆಡ್ಡರ ಕೂಡ ಸ್ನೇಹಿಲ ಸಂಭಾಷಣೆ ನಡೆಯಿತು. ಲಂಡನ ಸೇಕ್ರೆಟರಿಯಾದ ಅರ್ಲ ವಿಂಟರ್ಟನ್ನ ಸಾಹೇಬರು ಇವರನ್ನು ಉಪಹಾರದಿಂದ ಸತ್ಕರಿಸುವರು. ಉಪಹಾರಕ್ಕೆ ಮಂತ್ರಿಗಳೂ ಬರುವರು. ಆಗ ಇವರ ಕೂಡ ಸಂಭಾಷಣೆ ಮಾಡುವ ಯೋಗ ಒದಗುವದು.

ಲಂಡನಕ್ಕೆ ಹೋದ ಬಳಿಕ ತಮಗೆ ಅನೇಕ ವಿಷಯಗಳ ಉಪಯುಕ್ತ ಸಂಗತಿಗಳು ತಿಳಿದವೆಂದು ಶ್ರೀ ಪಟೇಲರು ಬಬ್ಬ ವಾರ್ತಾಪತ್ರಕನ ಮುಂದೆ ಅಂದಿದ್ದಾರೆ. ಇವುಗಳ ಉಪಯೋಗವನ್ನು ಇವರು ಅಸೆಂಬ್ಲಿಯಲ್ಲಿ ಮಾಡಿಕೊಳ್ಳಬಹುದು. ಆದರೆ ಇವರು ಮಂತ್ರಿ ಮತ್ತು ಬೇರೆ ಬೇರೆ ಪ್ರಮುಖ ಜನರ ಕೂಡ ಹಿಂದುಸ್ಥಾನದ ರಾಜಕಾರಣದ ಬಗ್ಗೆ ಮಾಡಿದ ಸಂಭಾಷಣೆಯ ವಿಷಯವಾಗಿ ಮಾತ್ರ ಬಹಳ ಆಶೆ ಮಾಡುವದು ತಪ್ಪು. ಏಕೆಂದರೆ- ಇವು ಪರಸ್ಪರ ಸೌಜನ್ಯಕ್ಕನುಸರಿಸಿ ನಡಿಯುವ ವಿಚಾರಗಳಿದ್ದು, ಇವುಗಳಿಂದ ಹಿಂದುಸ್ತಾನದ ರಾಜಕೀಯ ಪರಿಸ್ಥಿತಿಯ ಮೇಲೆ ಇಷ್ಟು ಪರಿಣಾಮವಾಗಲಾರದು. ಮಹಾತ್ಮಾ ಗಾಂಧಿಯವರು ಆರು ದಿವಸ ಲಾರ್ಡ ರೀಡಿಂಗಸಾಹೇಬರ ಕೂಡ ಪ್ರಸ್ತಾಪ ಮಾಡಿದರು. ಲೋಕಮಾನ್ಯರು ವಿಲಾಯತಿಗೆ ಹೋಗಿ ಬಂದರು. ದೇಶಬಂಧು ದಾಸರು ಒಡಂಬಡಿಕೆಯ ಶರ್ತ ಹೇಳಿದರು. ಇವೆಲ್ಲ ಗುಡ್ಡಕ್ಕೆ ಕಲ್ಲು ಹೊತ್ತಂತಾಗಿರುತ್ತವೆ. ನಾವೂ ನೀವೂ ನೆಂಟರು ನಿಜ. ಕಂಟಲಿಗೆ ಮಾತ್ರ ಕೈ ಹಾಕಬೇಡಿರಿ ಹತ್ತತ್ತು ವರ್ಷಗಳ ಅಂತರದಿಂದ ದೊರೆಯುವ ಅಷ್ಟಕಷ್ಟೇ ಹಕ್ಕುಗಳಿಂದ ತೃಪ್ತರಾಗಿರೆಂದು ಹೇಳುವದೇ ಬ್ರಿಟಿಶ ಮುತ್ಸದ್ದಿಗಳ ರಾಜಧರ್ಮವಾಗಿರುತ್ತದೆ

ಪರದೇಶದ ವರ್ತಕರ ಮದಾಂಧತನವು

ಹಿಂದುಸ್ಥಾನದಲ್ಲಿ ಹೊಟ್ಟೆ ಹೊರಕೊಳ್ಳುವದಕ್ಕಾಗಿ ಬಂದಿರುವ ಬಿಳೇ ಬಣ್ಣದ ವ್ಯಾಪಾರಸ್ಥರು ಈ ದೇಶದಲ್ಲಿ ಎಷ್ಟು ಗರ್ವ ಮತ್ತು ಅಹಂಕಾರದಿಂದ ನಡೆಯುತ್ತಾರೆಂಬದು ಜಗತ್ತಿಗೇ ತಿಳಿದ ಸಂಗತಿಯು. ಒಂದುವಲದ ಬಲದಿಂದ ಇವರು ಹಿಂದುಸ್ಥಾನದ ಉದ್ಯೋಗ ವ್ಯವಸಾಯಗಳು ತಲೆಯತ್ತಿ ನಡಿಯಬಾರದೆಂದು ತಮ್ಮಿಂದ ಶಕ್ಯವಾದಷ್ಟು ಪ್ರಯತ್ನ ಮಾಡುತ್ತಾರೆ. ಸರಕನ್ನು ಬೇಕಾದಷ್ಟು ಅಗ್ಗ ಮಾರಿ, ಹಿಂದೀ ಸರಕನ್ನು ಹಿಂದೆ ಹಾಕುತ್ತಾರೆ. ಹೀಗಾಗಬಾರದು. ಹಿಂದೀ ಸರಕಿಗೆ ನಷ್ಟ ತಗಲುವಂಥಲ್ಲಿ ಅವರಿಗೆ ದ್ರವ್ಯ ಸಹಾಯ ದೊರೆಯಬೇಕೆಂದು ಇತ್ತಲಾಗಿ ಉದ್ಯೋಗ ನಡೆದದೆ. ಈ ವಿಷಯವಾಗಿ ವಿಚಾರ ಮಾಡಲು ಒಂದು ಕಮಿಟಿ ಕೂತಿದೆ. ಇದಕ್ಕೆ ಟಾರಿಫ ಬೋರ್ಡವೆಂಬ ಹೆಸರು.

ಸ್ವೀಡನದ ದೀಪದ ಪೆಟ್ಟಿಗೆಗಳು ಹಿಂದುಸ್ಥಾನದ ಮೂರು ಮನೆಯ ಹಳ್ಳಿಯಲ್ಲಿ ಸಹ ಹೊಕ್ಕಿವೆ. ಸ್ವೀಡನದವರು ಇಷ್ಟರಿಂದ ತೃಪ್ತರಾಗದೆ, ಹಿಂದುಸ್ಥಾನದಲ್ಲಿ ತಮ್ಮ ಕಾರಖಾನೆಗಳನ್ನು ಹಾಕಿದ್ದಾರೆ. ಸ್ವದೇಶಿ ದೀಪದ ಪೆಟ್ಟಿಗೆಗಳಿಗೆ ಉತ್ತೇಜನ ದೊರೆಯದೆ, ಅವು ಮಣ್ಣು ಮುಕ್ಕಬೇಕೆಂದೇ ಇವರ ದುರಿಚ್ಛೆಯು. ಈ ಇಚ್ಛೆಗೆ ಆತಂಕ ತಾಳಿ ಹಿಂದೀ ಕಾರಖಾನೆಗಳು ಬಾಳಬೇಕೆಂದು ಟಾರೀಫ ಬೋರ್ಡಿನವರು ಇವರನ್ನು ಸಾಕ್ಷಿಗೆ ಕರೆದು, ನಿಮಗೆ ಎಷ್ಟು ವೆಚ್ಚ ಬರುತ್ತದೆಂಬದನ್ನು ಹೇಳಿರೆಂದು ಸವಾಲು ಹಾಕಿದರು, ಈ ಸವಾಲಿಗೆ ಉತ್ತರ ಕೊಡಲಿಲ್ಲ. ಸಾರ್ವಜನಿಕವಾಗಿ ಕೊಡಲೊಪ್ಪದಿದ್ದರೆ- ನಮಗೆ ಗುಪ್ತವಾಗಿ ತಿಳಿಸಿರೆಂದು ಕೇಳಿದರೂ ಅದಕ್ಕೂ ನಕಾರದ ಉತ್ತರ ಹೇಳಿದ್ದಾರೆ. ದೀಪದ ಪೆಟ್ಟಿಗೆಯ ವ್ಯಾಪಾರದಲ್ಲಿ ವೆಚ್ಚ ಕಾಸು ಪ್ರಾಪ್ತಿ ರೂಪಾಯಿಯಂತಿರುವದರಿಂದ ಅವರು ತಮ್ಮ ಗುಟ್ಟನ್ನು ಹೇಳಲಿಕ್ಕೆ ಒಡಂಬಡಲಿಲ್ಲ. ಈ ಪ್ರಕಾರ ಇವರು ಟಾರೀಫ ಬೋರ್ಡಿನ ಅಪಮಾನ ಮಾಡಿದ್ದು ಗರ್ಹಣೀಯವೇ ಸರಿ. ಇವರು ಹೀಗೆ ಉದ್ಧಾಮತನದ ಉತ್ತರ ಕೊಡಬಹುದೇ ಎಂಬದಾಗಿ ಸರ ಪುರುಷೋತ್ತಮದಾಸ ಠಾಕೂರರು ಅಸೆಂಬ್ಲಿಗೆ ಪ್ರಶ್ನೆ ಬರೆದು ಕಳಿಸಿದ್ದಾರೆ.

ತುರಂಗಗಳಲ್ಲಿ ಸುಧಾರಣೆ.

—ooO—

ಬಂಗಾಲ ಸರಕಾರದವರು ತುರಂಗಗಳಲ್ಲಿ ಯಾವ ಪ್ರಕಾರದ ಸುಧಾರಣೆ ಮಾಡಬೇಕೆಂದು ವಿಚಾರ ಮಾಡುವ ಕುರಿತು ಒಂದು ಕಮಿಟಿ ನೇಮಿಸಿದ್ದರು. ಕಮಿಟಿಯವರು ಕೆಳಗೆ ಹೇಳಿದ ಪ್ರಕಾರ ಶಿಫಾರಸ್ಸು ಮಾಡಿದ್ದಾರೆ.

೧ ಈಗಿದ್ದದ್ದಕ್ಕಿಂತ ಹೆಚ್ಚಿಗೆ ಸೆಂಟ್ರಲ ಜೇಲುಗಳನ್ನು ಕಟ್ಟಬೇಕು

೨ ಬೇರೆ ಬೇರೆ ತುರಂಗಗಳಲ್ಲಿ ಬೇರೆ ಬೇರೆ ಅಪರಾಧ ಮಾಡಿದಂಥ ಕೈದಿಗಳನ್ನಿಡಬೇಕು. ಅಂದರೆ ಜೇಲಿನ ಕಾರಭಾರವು ಸುರಳಿತವಾಗಿ ನಡೆಯುವದು.

೩ ಹುಡುಗರ ದೆಸೆಯಿಂದ ಸ್ವತಂತ್ರವಾಗಿ ಬೊರ್ಸ್ಟಲ ಪದ್ಧತಿಯ ತುರಂಗಗಳನ್ನು ಕಟ್ಟಬೇಕು.

೪ ಕೈದಿಗಳು ಬಿಡುಗಡೆಯಾದ ನಂತರ ತಮ್ಮ ಹೊಟ್ಟೆ ಸಾಗಿಸಲಿಕ್ಕೆ ಬರುವಂಥ ಉದ್ಯೋಗವನ್ನು ಕಲಿಸಬೇಕು.

೫ ಓದಲಿಕ್ಕೆ ವರ್ತಮಾನಪತ್ರ ಕೊಡಬೇಕು. ಸಾಕಷ್ಟು ದೀಪಗಳ ವ್ಯವಸ್ಥೆ ಇರಬೇಕು. ಆಟಗಳಾಡಲು ಅನುಕೂಲವಿರಬೇಕು

೬ ಪರದೇಶಿಯ ವಾರ್ಡರರನ್ನು ತೆಗೆದು ಬಂಗಾಲಿ ವಾರ್ಡರರನ್ನೇ ನೇಮಿಸಬೇಕು.

ಧರ್ಮಾಂತರಕ್ಕೆ ಯಾವಾಗ ಒಪ್ಪಿಗೆ.

—o—

ಯಾವನೊಬ್ಬನು ಪ್ರಬುದ್ಧ ಅಂದರೆ ೨೧ ವರ್ಷದವನಾದಬಳಿಕ ಹುಟ್ಟಿದ ಧರ್ಮಬಿಟ್ಟು ಅನ್ಯ ಧರ್ಮ ಸ್ವೀಕಾರ ಮಾಡಬಹುದು. ಆತನು ಮ್ಯಾಜಿಸ್ಟ್ರೇಟ ಕೋರ್ಟಿಗೆ ಹೋಗಿ, ಅನ್ಯರ ಬಲವಂತಿಕೆ ಇಲ್ಲದೆ, ಆತ್ಮಸಂತೋಷದಿಂದ ನೂತನ ಧರ್ಮ ಸ್ವೀಕಾರ ಮಾಡುತ್ತೇನೆಂದು ಪ್ರತಿಜ್ಞಾ ಪತ್ರವನ್ನು ಬರೆದುಕೊಡಬೇಕು, ಅಂದರೆ ಒಂದು ಧರ್ಮದವರು

ಮತ್ತೊಂದು ಧರ್ಮವನ್ನು ಕಲುಗೆಡಿಸುವದು ಕಡಿಮೆಯಾಗಿ, ಈಗಿನ ಧರ್ಮದ್ವೇಷವು ಬಹುವಾಗಿ ಕಡಿಮೆಯಾಗುವದೆಂದು ಅಸೆಂಬ್ಲಿಯ ಮೆಂಬರರಾದ ಎ. ಹುಶೀನಳ್ಳಿಯವರು ಅಭಿಪ್ರಾಯಪಟ್ಟು ಈ ಪ್ರಕಾರ ಕಾಯದೆಯಾಗಬೇಕೆಂದಿದ್ದಾರೆ.

ಮುಲಕೀ ಪರೀಕ್ಷೆಯ ಪರಿಣಾಮ.

ನಿನ್ನಿನ ದಿವಸ ಈ ಪರೀಕ್ಷೆಯ ಪರಿಣಾಮ ಪ್ರಸಿದ್ಧ ಮಾಡಲ್ಪಟ್ಟಿತು. ಕೆಳಗಿನ ನಂಬರಿನವರು ಪಾಸಾಗಿದ್ದಾರೆ.

ನಂಬರು ೩ ೫ ೧೧ ೧೩ ೧೪
೧೬ ೧೯ ೨೪ ೨೯ ೩೦ ೩೧ ೩೫
೩೮ ೪೦ ೪೯ ೫೦ ೫೨ ೫೮ ೫೯
೬೧ ೬೨ ೬೪ ೬೫ ೬೬ ೬೭ ೬೯
೭೨ ೭೩ ೭೪ ೭೬ ೭೯ ೮೪ ೮೫
೮೬ ೯೪ ೯೫ ೯೮
೧೦೩ ೧೦೫ ೧೦೬ ೧೦೭
೧೦೮ ೧೧೧ ೧೧೮ ೧೨೦ ೧೨೨
೧೨೮ ೧೩೧ ೧೩೪ ೧೩೬ ೧೪೩
೧೪೪ ೧೫೧ ೧೫೪ ೧೫೬ ೧೫೮
೧೫೯ ೧೬೦ ೧೬೨ ೧೬೪
೧೬೭ ೧೭೭ ೧೭೯ ೧೮೧ ೧೮೩
೧೮೫ ೧೮೭ ೧೮೮ ೧೯೨ ೧೯೪
೧೯೫ ೧೯೭
೨೦೬ ೨೦೯ ೨೧೩ ೨೨೧
೨೨೮ ೨೩೦ ೨೩೧ ೨೩೨ ೨೩೩
೨೩೬ ೨೪೦ ೨೪೪ ೨೪೫ ೨೪೭ ೨೪೮
೨೫೧ ೨೫೨ ೨೫೩ ೨೫೪ ೨೫೫ ೨೬೦
೨೬೫ ೨೬೬ ೨೬೭ ೨೬೧ ೨೬೪
೨೬೬ ೨೮೦ ೨೮೬ ೨೮೮ ೨೯೦
೨೯೩ ೨೯೪ ೨೯೬
೩೦೨ ೩೦೩ ೩೦೬ ೩೦೯
೩೧೩ ೩೧೬ ೩೧೮ ೩೧೯ ೩೨೦
೩೨೮ ೩೩೦ ೩೩೨ ೩೩೪ ೩೪೧
೩೪೨ ೩೪೫ ೩೪೬ ೩೪೯ ೩೫೬
೩೫೭ ೩೬೨ ೩೬೬ ೩೬೯ ೩೭೦
೩೭೨ ೩೭೬ ೩೭೭ ೩೮೦ ೩೮೪
೩೮೬ ೩೮೮ ೩೮೯ ೩೯೫ ೩೯೬
೪೦೧ ೪೦೫ ೪೦೬ ೪೦೯
೪೧೦ ೪೧೧ ೪೧೨ ೪೧೫ ೪೧೬
೪೨೦ ೪೨೧ ೪೨೨ ೪೨೬ ೪೨೮
೪೩೦ ೪೩೨ ೪೩೩ ೪೩೫ ೪೩೭
೪೩೮ ೪೪೦ ೪೪೩ ೪೪೪ ೪೪೮
೪೫೦ ೪೫೨ ೪೫೪ ೪೫೬ ೪೬೦
೪೬೭ ೪೭೧ ೪೭೩ ೪೭೮ ೪೮೧
೪೮೯ ೪೯೦ ೪೯೩
೫೦೪ ೫೦೫ ೫೦೮ ೫೦೯
೫೧೦ ೫೧೩ ೫೧೪ ೫೧೬ ೫೨೧
೫೨೨ ೫೨೫ ೫೨೮ ೫೩೧ ೫೩೩
೫೩೯ ೫೪೦ ೫೪೧ ೫೪೪ ೫೪೬
೫೪೯ ೫೫೦ ೫೫೨ ೫೫೬ ೫೫೮
೫೬೨ ೫೬೩ ೫೬೫ ೫೬೭
೫೭೪ ೫೭೬ ೫೭೮ ೫೮೨ ೫೯೧
೫೯೩ ೫೯೬ ೫೯೭
೬೦೨ ೬೦೩ ೬೦೬ ೬೧೧
೬೧೬ ೬೨೦ ೬೨೧ ೬೨೬ ೬೨೮
೬೩೧ ೬೩೫ ೬೩೬ ೬೩೯ ೬೪೨
೬೪೪ ೬೪೬ ೬೫೦ ೬೫೨ ೬೫೬
೬೫೭ ೬೫೯ ೬೬೦ ೬೬೨ ೬೬೫
೬೬೭ ೬೬೮ ೬೬೯ ೬೮೦ ೬೮೧
೬೮೫ ೬೯೨ ೬೯೩ ೬೯೪
೭೦೧ ೭೦೨ ೭೦೪ ೭೦೫
೭೦೬ ೭೦೮ ೭೧೪ ೭೧೬ ೭೧೯
೭೨೦ ೭೨೫ ೭೨೭ ೭೩೨
೭೩೬ ೭೪೦ ೭೪೩ ೭೫೩ ೭೫೪
೭೬೦ ೭೬೨ ೭೬೬ ೭೬೮ ೭೬೪
೭೭೫ ೭೭೯ ೭೮೦ ೭೮೪ ೭೮೫
೭೮೬ ೭೮೭ ೭೯೧ ೭೯೨ ೭೯೩
೭೯೭ ೭೯೯
೮೦೦ ೮೦೧ ೮೦೨ ೮೦೪
೮೦೭ ೮೧೦ ೮೧೨ ೮೧೫ ೮೨೨
೮೨೫ ೮೨೬ ೮೨೭ ೮೨೮ ೮೩೨
೮೩೫ ೮೩೭ ೮೪೦ ೮೪೧ ೮೪೩
೮೪೪ ೮೪೫ ೮೪೮ ೮೫೧ ೮೫೨
೮೫೩ ೮೫೫ ೮೫೭

ಪ್ರತಿಯೊಂದು ನೂರಕ್ಕೆ ಬೇರೆ ಪ್ಯಾರಾ ಮಾಡಿದ್ದೇವೆ. ನಡುವಿನ ಸ್ಥಳದಲ್ಲಿ ಸಂಖ್ಯೆಯ ಪಂಕ್ತಿ ಸರುಗಳಿರುತ್ತವೆಂದು ತಿಳಕೊಳ್ಳಬಾರದು.

ಕಲಕತ್ತೆಯ ಹತ್ತರಿರುವ ಹುಗಳಿಯ ಮ್ಯುನಿಸಿಪಾಲಿಟಿಯವರು ತಮ್ಮ ಕೆಲಸಗಾರರಿಗೆ - ಬಾಡಿಯು ಒಟ್ಟು ಕೊಡಬೇಕೆಂಬ ಠರಾವು ಮಾಡಿದ್ದಾರೆ.

ಜೈನ ಜೈನರೊಳಗೆ ದಂಗೆ.

—(೦)—

ಐವರು ಸತ್ತರು; ಅನೇಕರು ಘಾಯವಾದರು.

—[೦][೦]—

ಉದೇಪೂರ ಸಂಸ್ಥಾನದಲ್ಲಿರುವ ರಿಖಾಬದೇವವೆಂಬ ಜೈನ ಮಂದಿರದಲ್ಲಿ ಶ್ವೇತಾಂಬರ ಮತ್ತು ದಿಗಂಬರರ ನಡುವೆ ಧ್ವಜಾರೋಪಣದ ದೆಸೆಯಿಂದ ಹೊಡಬಾಟವಾಗಿ ಐವರು ಸತ್ತರು. ೧೫ ಜನರು ಘಾಯವಾದರು. ೫೦ ಜನರಿಗೆ ಸಾಧಾರಣ ಘಾಯಗಳಾಗಿರುತ್ತವೆ.

ಕ್ರಿಶ್ಚನ ಹಿಂದೂ ವಿಶ್ರ ವಿವಾಹ.

ತಂಜಾವರದ ಹತ್ತರಿರುವ ಮೋಶಿರಾಪುರಿ ಎಂಬ ಗ್ರಾಮದಲ್ಲಿ ಶಿಕ್ಷಕಳಾಗಿರುವ ಕ್ರಿಶ್ಚನ್ನ ಯುವತಿಯು ಅರುಣಗಿರಿ ಎಂಬ ಹೆಸರಿನ ಬ್ರಾಹ್ಮಣ ಗೃಹಸ್ಥನ ಕೂಡ ಮದುವೆ ಮಾಡಿಕೊಂಡಳು. ಈ ಪರಿಣಯಕ್ಕೆ ವರನ ಪಕ್ಷದಿಂದ ವಿಘ್ನ ಬರುವದೆಂಬ ಹೆದರಿಕೆಯಿಂದ ಪೋಲೀಸ ಬಂದೋಬಸ್ತಿನಲ್ಲಿ ಬೆಳಗ ಮುಂಜಾನೆ ಮೂರು ಹೊಡೆಯುವಾಗ ಲಗ್ನ ವಿಧಿಯನ್ನು ತೀರಿಸಿದರು.

ಲಾಹೋರಿನಲ್ಲಿ ಜಾಹೀರನಾಮೆ-

ರಾತ್ರಿ ೮ ಹೊಡೆದ ಬಳಿಕ, ಬೆಳಗಿನ ೫ ರ ತನಕ ಯಾರೂ ಮನೆ ಬಿಟ್ಟು ಹೊರಬೀಳಬಾರದು. ಮತ್ತು ಪ್ರೇತಗಳ ಮೆರವಣಿಗೆ ತೆಗೆಯಬೇಕಾದರೆ ಕೊತವಾಲರಿಂದ ಅಪ್ಪಣೆ ಪಡಕೊಳ್ಳಬೇಕೆಂದು ಅಧಿಕಾರಿಗಳು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಧಾರವಾಡ-

ಬಂಕಾಪೂರ ತಾಲೂಕ ಕಳಸ ಗ್ರಾಮದಲ್ಲಿರುವ ಮಾದರು ಲಗ್ನ ಕಾರ್ಯದಲ್ಲಿ ಆರತಿ ಮತ್ತು ತಳಗೆ ತಕ್ಕೊಂಡು, ಊರೊಳಗೆ ಹಾದು ದೇವರ ಗುಡಿಗೆ ಹೋದರು. ಇದು ಗೈರ ಕಾಯದೆಶೀರವಾಗಿರುತ್ತದೆಂದು ಹಲವಾದಿಯರು ಮಾದರ ಮೇಲೆ ಹುಬ್ಬಳ್ಳಿಯ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ.

ಹಳ್ಳಿಗೆ ತುರಂಗ ಖಾತೆಯ ಇನ್ಸಪೆಕ್ಟರ ಜನರಲರು ಬಂದಿದ್ದಾರೆ ನಾಲ್ಕು ಲಕ್ಷ ರೂಪಾಯಿ ವೆಚ್ಚ ಮಾಡಿ, ಹೊಸದೊಂದು ತುರಂಗ ಕಟ್ಟುವರೆಂದು ವರ್ತಮಾನವುಂಟು.

ಶ್ರೀ ಬಸವಜಯಂತಿಯ ದಿವಸ ಈ ಊರಲ್ಲಿ ವೀರಶೈವರ ಸಭೆಯಾಯಿತು. ಮೆಸರ್ಸ ಮಣ

ವಿವಿಧ ವರ್ತಮಾನಗಳು

—(೦)—

ಕಾಲಿನದಿ ಮತ್ತು ಕಾರವಾರದ ಅರಣ್ಯದಲ್ಲಿ ಕಾಗದ ಮಾಡುವಂಥ ಬಿದುರಿನ ಪೂರೈಕೆಯಾಗುವದೇ ಎಂಬ ಶೋಧ ಮಾಡಲಿಕ್ಕೆ ನೇಮಿಸಲ್ಪಟ್ಟ ಸಾಹೇಬರು- ಇಲ್ಲಿ ಸಾಕಷ್ಟು ಬಿದರು ದೊರಕುವದಿಲ್ಲೆಂದು ಅಭಿಪ್ರಾಯ ಪಟ್ಟಿದ್ದಾರೆ.

ಸಾಂಗಲಿಯ ಯುಜಮಾನರಾದ ಶ್ರೀ. ಚಿಂತಾಮಣ ಅಪ್ಪಾಸಾಹೇಬರ ಹಿರಿಯ ಮಗಳನ್ನು ಗ್ವಾಲೇರದ ಸೇನಾಧಿಪತಿಯಾಗಿರುವ ರಾಜವಾಡೆಯವರ ಹಿರಿಯ ಮಗನಿಗೆ ಕೊಟ್ಟು, ಸಾಂಗಲಿಯಲ್ಲಿ ವಿವಾಹೋತ್ಸವವು ಬಹು ಸಡಗರದಿಂದ ನೆರವೇರಿತು

ಲಂಕೆಯಲ್ಲಿ ತ್ರಿಂಕೋಮಾಲಿಯ ಜಿಲ್ಹೆಯಲ್ಲಿ ಅದ್ಭುತ ಮಳೆಯಾಗಿ, ರೇಲ್ವೆ ದಾರಿಯು ಹರಿದು ಹೋಯಿತು. ಗಿಡಗಳು ಮುರಿದು ದಾರಿಗುಂಟ ಬಿದ್ದದ್ದರಿಂದ ಉಗಿಬಂಡಿಗಳ ಪ್ರವಾಸವು ತಡೆಯಿತು. ಬೆಳೆಗಳಿಗೆ ಹಾನಿತಟ್ಟಿತು. ನದಿಗಳಿಗೆ ಮಹಾಪೂರ ಬಂದಿರುತ್ತದೆ.

ಮಾಸ್ಕೋ ಪಟ್ಟಣದಲ್ಲಿ ಬೊಲ್ಶೆವಿಕರು ಹಿಂದೀ ತರುಣರಿಗೆ ಹಿಂದುಸ್ಥಾನದಲ್ಲಿ ರಾಜ್ಯಕ್ರಾಂತಿಯನ್ನು ಹೇಗೆ ಮಾಡಬೇಕೆಂಬ ಶಿಕ್ಷಣ ಕೊಡುವ ಒಂದು ಶಾಲೆಯನ್ನು ಹಾಕಿದ್ದಾರೆ.

ಶ್ರೀ. ಪಟೇಲರು ಲಂಡನದಲ್ಲಿ ಲಾರ್ಡ ಬರ್ಕನಹೆಡ್ಡ ಸಾಹೇಬರನ್ನು ಕಂಡಾಗ ಹಿಂದೀ ಜನರಿಗೆ ದಂಡಿನ ಹೊರತು ಮಿಕ್ಕ ಖಾತೆಗಳ ಅಧಿಕಾರವನ್ನು ಒಪ್ಪಿಸಿ, ಬ್ರಿಟಿಶ ಸರಕಾರವು ಹಿಂದೀ ಮಹತ್ವಾಕಾಂಕ್ಷೆಯನ್ನು ಪೂರ್ಣ ಮಾಡಲು ಸಿದ್ಧವಿಯುವುಳ್ಳದ್ದಾಗಿದೆಂಬದನ್ನು ತೋರಿಸಿಕೊಡಿರೆಂದು ಸೂಚಿಸುತ್ತಿದ್ದಾರೆ.

ಧಾರವಾಡ—

ಅದವಾನಿಯ ಆಚಾರ್ಯರೆಂದು ಮತ್ತು ಅಕ್ಷೋಭ್ಯ ತೀರ್ಥರೆಂದು ಪ್ರಸಿದ್ಧರಾಗಿರುವ ಶ್ರೀಗಳವರು ಇಲ್ಲಿಗೆ ಬಂದಿದ್ದಾರೆ. ಇವರು ತಮಗೆ ಶಿಷ್ಯರಿಗೆ ತಪ್ತಮುದ್ರೆ ಹಾಕುವ ಅಧಿಕಾರವುಂಟೆಂದು ಅವರಿಗೆ ಹೇಳಿಕೊಳ್ಳುತ್ತಾ ಮತ್ತು ಅಪ್ರಕಾರ ಕೆಲವರಿಗೆ ಮುದ್ರೆ ಹಾಕುತ್ತಾ ಬಂದರು. ಈ ತರದ ಅಧಿಕಾರವು ಇವರಿಗೆ ಇರುವದಿಲ್ಲೆಂದು ಮೂರು ಮಠದವರು ಇವರ ಮೇಲೆ ಮುನಿಸುಗೊಂಡರು. ಅಕ್ಷೋಭ್ಯತೀರ್ಥರು ಈ ವರೆಗೆ ತಾವು ವರ್ತಿಸುತ್ತಾ ಬಂದದ್ದು ತಪ್ಪೆಂದು ಶ್ರೀ ಸತ್ಯಧ್ಯಾನತೀರ್ಥಸ್ವಾಮಿಗಳವರ ಮುಂದೆ ಒಪ್ಪಿಕೊಂಡು, ನಿನ್ನಿನ ದಿವಸ ಶ್ರೀಗಳವರಿಂದ ಅನುಗ್ರಹಿತರಾದರು.

ಶಿರಹಟ್ಟಿಯ ಮಾಮಲೇದಾರರಾದ ಶ್ರೀ. ಕೆ. ಎನ್. ದೇಸಾಯಿಯವರು ಮಾರಿಕಾ ಬೇನೆಯಿಂದ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಚಾನ್ನ ಚಹಾ ಮತ್ತು ಕಾಫೀ ಸೊವೀ ದರದಿಂದ ಸಿಗುವದಲ್ಲದೆ, ಕಿರಕೋಳ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕೆಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಕು ಕಡೆಗೆ ಸಿಗುವಂಥಾದ್ದಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ನಮಗೆ ಪತ್ರಕ್ಕೆ ಬರೆದು ವಿಚಾರಿಸಬಹುದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಶಿಕಾರೆ,

ಮಾಡ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ಶಿಗನ್ನಡ **ನವನೀತ** ಮಾಸ ಪತ್ರಿಕೆ

ಸಂಪಾದಕ- ಪಂಡಿತ ಚನ್ನಬಸವಪ್ಪ ಕವಲಿ.

ಸಮಾಜದ ಸರ್ವಾಂಗ ಸುಂದರ ಉನ್ನತಿಗೆ ತಕ್ಕನಾದ ಎಲ್ಲ ಬಗೆಯ ಲೇಖಗಳೂ ಬರುವವು. ವರ್ಷಕ್ಕೆ ೨ ಸಾಮಾಜಿಕ ನಾಟಕ ಕಾದಂಬರಿಗಳು ಪೂರ್ಣವಾಗುವವು. ವಾ. ವ. ಮೂರು ರೂಪಾಯಿ.

ಪತ್ತೆ
ನವನೀತ ಕಾರ್ಯಾಲಯ ಬ್ಯಾಡಗಿ

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭನಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೩ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ೧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮। ಧಾರವಾಡ ಸೋಮವಾರ ತಾರೀಖು ೯ ನೇ ಮೇ ೧೯೩೭ (ಸಂಚಿಕೆ ೧೩

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಪಾಲ ಗಾಣಕ್ಕೆ ಪದಕವು ದೊರಕಿದೆ ಹೆಚ್ಚಿನ ಸಂಗತಿ ಬಗ್ಗೆ ಕೇಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬೆಂದಿಗೆಯು ಆರು ಲಕ್ಷದ ಮೇಲುಂಟು, ಚೆಕ ಸಂಬಂಧ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು, ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಜಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ.

—೦—

ಬೇನೆ ಬಂದ ಮೂರು ತಾಸಿನೊಳಗಾಗಿ ತಪ್ಪದೆ ಗುಣ.

—೦—

ನಾನು ಕಾಲರಾ ಬೇನೆಯ ಮೇಲೆ ರಾಮಬಾಣ ಔಷಧವನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಮಾಸರಡಗಿ, ಶಿವಳ್ಳಿ, ಕರಡಿಗುಡ್ಡ, ಮರೆವಾಡ ಮುಂತಾದ ಊರುಗಳಲ್ಲಿ ಗುಣಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ವ್ಹಿ. ಪಿ. ಸಂಗಡ ಅನುಪಾನ ತಿಳಿಸುವೆನು.

ಗಣೇಶಸಾಹೇಬ ಎಳಿಗಾರ,
ನಾರ್ಕೆಟ ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿಂತಿರುತ್ತದೆ.

ಎ. ಕೆ. ಶೆಟ್ಟಿ
೧।೪।೬। ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ವಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಇಲ್ಲವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ೦ ಗೆ ಮೂ ರಾ ಣೆ— ಇಂ ಗ್ಲಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೯-೫-೨೭ ನೇ ಇಸ್ವಿ

ಲಾಹೋರಿನ ದಂಗೆಯು ಮತ್ತು ಅದರಿಂದ ಸೂಚಿಸಿದ ವಿಚಾರಗಳು.

ವಸಂತ ಋತುವಿನಲ್ಲಿ ಒಂದಾನೊಂದು ದಿವಸ ಮಧ್ಯಾಹ್ನದಲ್ಲಿ ಶ್ರೀ ಕೃಷ್ಣ ಪರಮಾತ್ಮನು ರುಕ್ಮಿಣಿ ಸತ್ಯಭಾಮೆಯರ ಕೂಡ ಭೋಜನ ಮಾಡಿ, ತಕ್ತ್ಯ ಮಗಡಿಯನ್ನಾಡುತ್ತಾ ಕೂತಾಗ ನಾರದರು ಉದಯವಾಣಿಸಿದರು. ನಸುನಗೆಯಿಂದ ಉಭಯತರ ಆಗತ ಸ್ವಾಗತವಾದ ಬಳಿಕ, ನಗನಗುತ್ತಾ ಶ್ರೀ ಕೃಷ್ಣಪರಮಾತ್ಮನು ಏನೈ ನಾರದರೇ ನೀವು ಕಲಹ ಪಚ್ಚುವದರಲ್ಲಿ ನಿಮಗೆ ಸರಿಯಾದವರಿಲ್ಲೆಂದು ಹೇಳಿಕೊಳ್ಳುತ್ತೀರಿ. ಈಗ ದ್ವಾರಕೆಯಲ್ಲಿ ತಲೆ ತಲೆ ಹೋಗುವಂಥ ಜಗಳವೆಬ್ಬಿಸಿರಿ ನೋಡುವಾ ಎಂದು ಅಣಗಿಸುವಂಥ ಪ್ರಶ್ನೆ ಮಾಡಿದನು. ನಾರದರು ಆಗ ಏನೂ ಉತ್ತರ ಕೊಡದೆ, ಸುಮ್ಮನೆ ಕೂತರು. ಕೆಲ ಹೊತ್ತು ಮಾತು ಕಥೆಯಾದ ಬಳಿಕ, ನಾರದರು ಪತಿಸತಿಯರ ಅಪ್ಪಣೆ ಪಡೆದುಕೊಂಡವರೇ ಪೇಟೆಗೆ ಬಂದು ಒಂದು ಅಂಗಡಿಯಲ್ಲಿ ಜೇನತುಪ್ಪ ಕೇಳಿದರು. ಅಂಗಡಿಕಾರನು ಅದರ ಬುದ್ದಲಿಕೆಯನ್ನು ಅವರ ಮುಂದಿಟ್ಟನು. ನಾರದರು ಅದರಲ್ಲಿ [illegible] ಹಾಕಿ; ಹೊರಗೆ ತೆಗೆದು ಇದೇ ತುಪ್ಪ [illegible] ಒರಸಿದರು. ಕೂಡಲೆ ಗುಣ ಧರ್ಮ ಪ್ರಕಾರ ನೊಣಗಳು ಕೂಡಿದವು. ಬೆಕ್ಕು ಬಂತು. ಬೆಕ್ಕನ್ನು ಹಿಡಿಯಲು ನಾಯಿ ಬಂತು. ಬೆಕ್ಕು ಬೇರಿತು, ನಾಯಿ ಮೇಲೇರಿ ಹೋಯಿತು. ಬೆಕ್ಕಿನವನು ನಾಯಿಯವನನ್ನು ಹೊಡೆದನು. ಇಬ್ಬರ ಕಡೆಯ ಜನರು ಕೂಡಿದರು. ಕಯ್ಯಲ್ಲಿ ಸಿಕ್ಕದ್ದನ್ನು ತಂದರು. ಹೊಡೆದಾಟ ಪ್ರಾರಂಭವಾಯಿತು. ಊರೇ ಕಂಪಿಸಿತು. ಅಂಕ್ಷಣದಲ್ಲಿ ಸಾವಿರಾರು ಜನರ ತಲೆಗಳೊಡೆದವು. ಮಧ್ಯಾಹ್ನವಾದ್ದರಿಂದ ನಾರದರು ಹೋದ ಕೂಡಲೆ ಪರಮಾತ್ಮನು ವಾಮಕುಕ್ಷಿ ಮಾಡಿದ್ದನು. ದ್ವಾರಪಾಲಕನು ಎಬ್ಬಿಸಿ, ಊರು ಹಾಳಾಗುತ್ತಿರುವದನ್ನು ನಿವೇದಿಸಿದನು. ಮಧ್ಯಾಹ್ನ; ಮೇಲೆ ಬಿಸಿಲು; ಎಲ್ಲರೂ ಉಂಡು ವಾಮಕುಕ್ಷಿ ಮಾಡಿ ಮಲಗುವ ಸಮಯ; ನಾರದರ ಕಿಡಿಗೇಡಿತನ ಸಾಗಲಾರದೆಂದು ಶ್ರೀ ಕೃಷ್ಣನು ತಿಳಿದಿದ್ದನು. ಆದರೆ ಊರೊಳಗೆ ನಡೆದ ಹೃದಯಭೇದಕ ವರ್ತಮಾನ ಕೇಳಿ, ಇದೆಲ್ಲ ನಾರದರ ಪ್ರತಾಪವೇ ಎಂದು ಬಗೆದು, ಸುದರ್ಶನ ಚಕ್ರಕ್ಕೆ ಅಪ್ಪಣೆ ಮಾಡಿ, ರಕ್ತಪಾತವನ್ನು ನಿಲ್ಲಿಸಿದನು. ಈ ಕಲಹಕ್ಕೆ ಮಧುಬಿಂದು ಕಲಹವೆಂದು ಇಂದಿಗೂ ನಾಣ್ಣುಡಿಯುಂಟು.

ಲಾಹೋರಿನ ದಂಗೆಯು ಇದೇ ಮಾದರಿಯದಾಯಿತು. ಒಬ್ಬ ಮುಸಲಮಾನನು ಶೀಖ ಹುಡಿಗೆಯ ಅಪಮಾನ ಮಾಡಿದನು. ಹುಡಿಗೆಯ ಅಮರ್ಯಾದೆ ಮಾಡುವಾಗ ತನ್ನ ದುಷ್ಕರ್ಮದಿಂದ ಊರಿಗೇ ಬೆಂಕಿ ಹತ್ತುವದೆಂದು ಆತನು ಸ್ವಪ್ನದಲ್ಲಿ ಸಹ ಒಲುವದು ಶಕ್ಯವಿದ್ದಿಲ್ಲ. ಮುಸಲಮಾನನು ಮಾಡಿದ ಪಾಪಕರ್ಮಕ್ಕಾಗಿ ಯಾವನೊಬ್ಬನು ಶೀಖನು ಮುಯ್ಯಕ್ಕೆ ಮುಯ್ಯನೆಂದರೆ ಊರಿಗೇ ಬೆಂಕಿ ಹತ್ತುವ ಕಾರಣವೇನು? ಹಿಂದೂ ಮುಸಲಮಾನರಲ್ಲಿ ಬೂದಿ ಮುಚ್ಚಿದ ಕೆಂಡವಾಗಿರುವ ದ್ವೇಷವೇ ಕಾರಣವು. ಶೀಖ ಮತ್ತು ಮುಸಲಮಾನನಿಗೆ ಹೊಡೆದಾಟ ಹತ್ತಿದ ಸುದ್ದಿಯು ಇಲಿಯು ಹರಿಯಿತೆಂಬದು ಹುಲಿಯು ಹರಿಯಿತೆನ್ನುವಂತೆ ಪಟ್ಟಣದ ತುಂಬ ಹಬ್ಬಿತು. ಮುಸಲಮಾನರೂ, ಹಿಂದೂ ಜನರೂ ಹಿಂದುಮುಂದಿನ ವಿಚಾರವಿಲ್ಲದೆ ಆತ್ಮರಕ್ಷಣೆಯ ಹಾಗು ಸೇಡು ತೀರಿಸಿಕೊಳ್ಳುವ ದೀರ್ಘ ಉದ್ಯೋಗ ನಡೆಸಿದರು. ಎಲ್ಲಿ ನೋಡಿದಲ್ಲಿ ದೊಣ್ಣೆಗಳನ್ನು ಹಿಡಿದ ಜನರೇ ಜನರು. ದೊಡ್ಡ ದೊಡ್ಡ ದೊಣ್ಣೆಗಳಿಂದ ಬಿದ್ದ ಹೊಡತದಿಂದ ಭಯಂಕರ ಘಾಯವಾಗುವದೂ, ಆ ಘಾಯಗಳಿಂದ ಸಾಯುವದೂ ನಡೆಯಿತು. ಆ ಊರಲ್ಲಿ ನಾಲ್ಕು ಅಂತಸ್ಥಿನ ಮನೆಗಳುಂಟು. ಈ ಮನೆಗಳಲ್ಲಿ ವಾಸವಾಗಿರುವ ಹಿಂದೂ ಮುಸಲಮಾನರು ವಿರುದ್ಧ ಪಕ್ಷದ ಗುಂಪುಗಳು ಒಂದುಗೂಡಲು, ಇವುಗಳ ಮೇಲೆ ಕಲ್ಲು, ದುಂಡಿ, ಸೋಡಾವಾಟರದ ಬಾಟ್ಲಿ, ಕಾಜು ಮುಂತಾದ್ದನ್ನು ಚೆಲ್ಲುವರು. ಈ ಪ್ರಕಾರ ಒಂದು ತಾಸಿನಲ್ಲಿ ಲಾಹೋರ ಪಟ್ಟಣದ ತುಂಬ ಅನಾಯಕತನ ಮಾಜಿತು.

ದಂಗೆಯ ವರ್ತಮಾನ ಕೇಳಿದ ಕೂಡಲೆ ಪೋಲಿಸ ಕಮಿಶನರ ಮೊದಲ್ಗೊಂಡು- ಗವರ್ನರ ಸಾಹೇಬರ ತನಕ ಎಲ್ಲರೂ ತತ್ಪರಿಸಿದರು. ಪೋಲಿಸರು ಕಾವಲಿಟ್ಟ ಸಿಪಾಯಿಯರನ್ನು ಬೀದಿ ಬೀದಿಗೆ ಕಳಿಸಿದ್ದಲ್ಲದೆ, ದಂಡು ಕರಿಸಿ, ಮುಖ್ಯ ಮುಖ್ಯ ಕೂಟಿಗೂ ಕೋಟೆಯ ನಾಲ್ಕು ಅಗಸೀಬಾಗಿಲಗಳಲ್ಲಿಯೂ ನಿಲ್ಲಿಸಿದರು. ಮತ್ತು ಪ್ರತಿಯೊಂದು ಆಯಕಟ್ಟಿನ ಸ್ಥಳದಲ್ಲಿ ಪ್ರಸಂಗ ಬಿದ್ದರೆ- ಗುಂಡು ಹಾರಿಸಲಿಕ್ಕೆ ಅಪ್ಪಣೆ ಕೊಡುವಂತೆ ಮ್ಯಾಜಿಸ್ಟ್ರೇಟರನ್ನು ಕರೆತಂದರು. ಈ ಪ್ರಕಾರ ದೊಡ್ಡ ದೊಡ್ಡ ಬೀದಿಗಳ ದಿಗ್ಬಂಧನೆ ಮಾಡಿದಂತಾಯಿತು. ಆದರೆ ಸಂದಿಗೊಂದಿಗಳಲ್ಲಿ ಬಂದೋಬಸ್ತು ಮಾಡುವದು ದುಸ್ತರವಾಯಿತು. ಅಲ್ಲಿ ಯಾವನೊಬ್ಬನು ಒಂಟಿಗನಾಗಿ ಸಿಕ್ಕರಾಯಿತು. ಆತನ ನೂರು ವರ್ಷಗಳು ತುಂಬಿದವೆಂದೇ ತಿಳಿಯುವಂತಾಯಿತು. ಪೋಲಿಸರು ಇಂಥ ಇಕ್ಕಟ್ಟಿನ ಬೀದಿಗಳಲ್ಲಿ ಬಂದೋಬಸ್ತಿಗಾಗಿ ತಿರುಗಾಡುತ್ತಿದ್ದಾಗ, ಅಲ್ಲಲ್ಲಿ ಹೊಡತತಿಂದು ನರಳುತ್ತಾ ಬಿದ್ದವರೂ, ಸಾಯುವಂಥ ಸ್ಥಿತಿಯಲ್ಲಿದ್ದವರೂ, ಸತ್ತವರೂ ಕಂಡುಬರುವರು. ಇವರ ವ್ಯವಸ್ಥೆಯನ್ನು ಮಾಡುತ್ತಾ ಮುಂದೆ ಸಾಗುವರು. ಮಧ್ಯಾಹ್ನ ೧ ಗಂಟೆಗೆ ಪ್ರಾರಂಭವಾದ ದಂಗೆಯು ಮರುದಿವಸ ಉದಯ ಕಾಲದ ತನಕ ಒಂದೇ ಸವನೆ ನಡೆಯಿತು. ಪೋಲೀಸ ಮತ್ತು ದಂಡಿನವರಿಗೆ ನಿಂತ ನವಕರಿಯಾಗಿತ್ತು. ಅವರಿಗೆಷ್ಟೂ ವಿರಾಮವಿರಲಿಲ್ಲ.

ಊರಲ್ಲಿ ಅನಾಯಕತನ ಮಾಜಿದ್ದನ್ನು ಕಂಡು, ಗವರ್ನರಸಾಹೇಬರು ತಮ್ಮ ಪ್ರವಾಸವನ್ನು ನಿಲ್ಲಿಸಿದರು. ಜಾಹೀರನಾಮೆ ತೆಗೆದು ರಾತ್ರಿ ಎಂಟರಿಂದ ಬೆಳಗಿನ ಐದರ ತನಕ ಯಾರೂ ಮನೆ ಬಿಟ್ಟು ಹೊರಬೀಳಬಾರದು; ಹೊರಬಿದ್ದರೆ- ದಸ್ತಗಿರ ಮಾಡಲ್ಪಡುವನು. ಮತ್ತು ಐದರಕಿಂತ ಹೆಚ್ಚು ಜನರು ಒಂದೆಡೆಯಲ್ಲಿ ಒಂದು ತಿಂಗಳ ತನಕ ಸೇರಬಾರದೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಇಲ್ಲಿಯ ಶೀಖರಿಗೆ ಸಹಾಯವಾಗಿ ಅಮೃತಸರದಿಂದ ಶೀಖ ಜೇರಾ ಹೊರಟಿತ್ತೆಂಬ ವರ್ತಮಾನ ಕೇಳಿ, ನಡುದಾರಿಯಲ್ಲಿಯೇ ಅದನ್ನು ತಡೆಯುವದಕ್ಕಾಗಿ ಸೋಲ್ಜರರ ಒಂದು ಕಂಪನಿ ಕಳಿಸಿದ್ದಾರೆ.

ದಂಗೆಯಲ್ಲಿ ೧೪ ಜನರು ಸತ್ತರು. ೧೫೦ ಜನರು ಆಸ್ಪತ್ರೆಯಲ್ಲಿ ನರಳುತ್ತಿದ್ದಾರೆ. ಇವರ ಹೊರತು ತಂತಮ್ಮ ಮನೆಗಳಲ್ಲಿ ಗುಪ್ತವಾಗಿ ಆರೈಕೆ ಹೊಂದುತ್ತಿದ್ದವರು ನೂರಾರು ಜನರು ಇರಬಹುದು. ದಂಗೆಯ ಕಥೆಯನ್ನು ಓದಿದರೆ- ನಾರದರ ಮಧುಬಿಂದು ಕಲಹವೆಂದೇ ಕಂಡು ಬರುವದು. ಹಿಂದೂ ಮುಸಲಮಾನ ದ್ವೇಷವು ಇಷ್ಟು ಸೂಕ್ಷ್ಮವಾಗಿರುವಾಗ, ಅದರ ಮೂಲೋತ್ಪಾಟನೆ ಮಾಡುವದಕ್ಕಾಗಿ ಪ್ರಯತ್ನಿಸುವದು ವ್ಯರ್ಥವೇ ಸರಿ. ಲಾರಕಾನಾ, ಸುರತ, ಲಾಹೋರ ಮುಂತಾದ ಪಟ್ಟಣಗಳಲ್ಲಿ ನಡೆದ ಅತ್ಯಾಚಾರಗಳನ್ನು ಲಕ್ಷ್ಯಕ್ಕೆ ತಂದರೆ- ಮುಸಲಮಾನ ಮುಖಂಡರು ತಮ್ಮ ಜಾತಿಯ ಉಡಾಳರಿಗೆ ಮುಗದಾಣ ಹಾಕಿ ಅವರನ್ನು ಅಂಕಿತವಾಗಿಟ್ಟುಕೊಳ್ಳಬೇಕಾಗುತ್ತದೆಂದು ಸ್ಪಷ್ಟವಾಗುತ್ತದೆ.

ಮ್ಯುನಿಸಿಪಾಲಿಟಿಯು ಮಂತ್ರಿಗೆ ನೋಟೀಸು.

—[o][o]—

ಅಹಮದಾಬಾದ ಮ್ಯುನಿಸಿಪಾಲಿಟಿಯ ಚುನಾವಣೆಯನ್ನು ಸ್ಥಾನಿಕ ಸ್ವರಾಜ್ಯಗಳ ಮಂತ್ರಿಯಾದ ಸರ ಗುಲಾಮ ಹುಸೇನರು ನಾಲ್ಕು ತಿಂಗಳು ಮುಂದೆ ಹಾಕಿದರು. ಈ ಪ್ರಕಾರ ಚುನಾವಣೆಯನ್ನು ಮುಂದೆ ಹಾಕುವ ಅಧಿಕಾರವು ಇವರಿಗಿರುವದಿಲ್ಲ. ಈ ವಿಷಯದಲ್ಲಿ ಮುಖ್ಯವಾಗಿ ಕರಕೊಡುವವರ ಮತ ಕೇಳಬೇಕು. ಆ ಪ್ರಕಾರ ಮತ ಕೇಳಿಲ್ಲ. ರೇಟ ಪೇಯರರ ಮತ ಕೇಳದೆ, ತಮ್ಮ ಅಧಿಕಾರದಿಂದ ಚುನಾವಣೆಯನ್ನು ಮುಂದೆ ಹಾಕಿದ್ದು ಅಕ್ರಮವಾದದ್ದು. ಆದಕಾರಣ ಸರ ಗುಲಾಮಸಾಹೇಬರು ತಮ್ಮ ಹುಕುಮವನ್ನು ೪೮ ತಾಸುಗಳಲ್ಲಿ ರದ್ದುಪಡಿಸಬೇಕು. ಇಲ್ಲವಾದರೆ- ದಾವೇ ಹೂಡಬೇಕಾಗುತ್ತದೆ. ಆ ಸಂಬಂಧ ಖರ್ಚಿನ ಯಾವತ್ತು ವೆಚ್ಚದ ಜವಾಬದಾರಿಯು ನಿಮ್ಮ ಮೇಲೆಂದು ಮಿ. ಸಂಘವಿ ಎಂಬವರು ಸರ ಸಾಹೇಬರಿಗೆ ನೋಟೀಸು ಕೊಟ್ಟಿದ್ದಾರೆ.

ನಾಗಪೂರದ ಕಾಯದೆಭಂಗ

—ooO—

ಗೃಹಮಂತ್ರಿಯಾದ ಮಿ. ತಾಂಬೆಯವರು ಪಾಚಮಾರಿಯಿಂದ ನಾಗಪೂರಕ್ಕೆ ಬಂದ ಬಳಿಕ, ಎಂಟೆರಡು ದಿವಸ ಶಿಕ್ಷೆಯಾಗಿದ್ದಂಥವರನ್ನು ಪುನಃ ಹಿಡಿಸಿ, ಅವರಿಗೆ ತಿಂಗಳು ತಿಂಗಳ ಶಿಕ್ಷೆ ವಿಧಿಸಿದರು. ಈ ಶಿಕ್ಷೆಯನ್ನು ನಿಷೇಧಿಸುವದಕ್ಕಾಗಿ ಕಾಯದೆಭಂಗಕ್ಕೆ ಉತ್ತೇಜನ ಕೊಡುವದಕ್ಕಾಗಿ ನಾಗರಿಕರ ಸಭೆಯು ಕೂಡಿತ್ತು. ಈ ಸಭೆಯಾದ ನಂತರ ಇಬ್ಬರು ಸ್ತ್ರೀಯರ ಕೈಯಲ್ಲಿ ಬಿಚ್ಚುಗತ್ತಿ ಕೊಟ್ಟು, ಅವರನ್ನು ಊರತುಂಬ ಮೆರೆಸಿದರು. ನಾಲ್ಕೈದು ಸಾವಿರ ಜನವು ಮೆರವಣಿಗೆಯಲ್ಲಿತ್ತು. ಪೋಲೀಸರು ಇವರನ್ನು ಹಿಡಿದಿರುವದಿಲ್ಲ

ನಾಗಪೂರದವರಂತೆ ತಾಮಿಳ ನಾಡಿನ ಸ್ವಯಂಸೇವಕರು ಸತ್ಯಾಗ್ರಹ ಮತ್ತು ಕಾಯದೆಭಂಗ ಮಾಡಿ, ಸರ್ಕಾರದ ಕಟ್ಟಳೆಯನ್ನು ಮುರಿಯಬೇಕೆಂಬ ಠರಾವು ಮಾಡಿದ್ದಾರೆ. ಇವರು ಮುಂದಾಗಿ ಘೋಷಣೆ ಮಾಡಿಕೊಂಡು, ಜೂನ ತಿಂಗಳಿಂದ ಕಾಯದೆ ಭಂಗವನ್ನು ಪ್ರಾರಂಭಿಸುವರು.

ಸುರತದಲ್ಲಾದ ದಂಗೆಯ ಬಗ್ಗೆ ಮುಸಲಮಾನ ಪ್ರಮುಖರು ಖೇದಪ್ರದರ್ಶನ ಮಾಡಿದರು. ಉಭಯತರ ನಡುವೆ ಒಪ್ಪಂದವಾಯಿತು. ಶ್ರೀ. ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆಯು ಪುನಃ ಹೊರಡುವದು.

ಶ್ರೀ ಸುಭಾಷಚಂದ್ರರ ಪ್ರಕೃತಿಯು,

—o—

ಶ್ರೀ ಸುಭಾಷಚಂದ್ರ ಬೋಸರು ಸ್ವಂತ ಸಹಿಯ ಒಂದು ಲೇಖನವನ್ನು ಪ್ರಸಿದ್ಧ ಮಾಡಿದ್ದಾರೆ. ಅದರಲ್ಲಿ ಅವರು ತಮ್ಮ ತೂಕ ಇಳಿದದ್ದನ್ನೂ ದಿನ ದಿನಕ್ಕೆ ಪ್ರಕೃತಿಯು ಕೆಡುತ್ತಿದ್ದದನ್ನೂ [illegible], ನೆಟ್ಟಗಾಗಲಿಕ್ಕೆ ಯೋಗಾಭ್ಯಾಸವೊಂದೇ ಮಾ[illegible] ಉಳಿದದೆಂದು ಬರೆದಿರುತ್ತಾರೆ. ಯೋ[illegible] ಪ್ರಾರಂಭದಲ್ಲಿ ಬೇಕಾಗುವಷ್ಟು ಶಕ್ತಿ [illegible]ರಿಂದ ಅವರಿಗೆ ಅದರಿಂದ ಅಸಿಸ್ [illegible]ಗುವ ಹೆದರಿಕೆಯೂ ಉಂ[illegible]. [illegible] ಅವರು ಕೊನೆಯ ಉಪಾಯವೆಂದು ದೇವರನ್ನು ನಂಬಿ ಯೋಗ ಪ್ರಾರಂಭಿಸುವರು.

ಯುರೋಪಿಯನನು ಮಹಂತನಾದನು.

ಚಾರ್ಲಸ ಉಮಿಲೆನ್ಬ ರಸೆಲಿ ಎಂಬ ನಾರ್ವೇಜಿಯನನು ಹಿಮಾಲಯಕ್ಕೆ ಹೋಗಿ, ಅಲ್ಲಿ ಮಹಂತ ಪ್ರೇಮದಾಸ ಎಂಬವರ ಶಿಷ್ಯನಾದನು. ಇವನು ವೈರಾಗಿಯಂತೆ ಭಸ್ಮ ಬಳಕೊಳ್ಳುವನು. ಜಟಾಬಿಟ್ಟಿರುವನು ಲಂಗೋಟಿ ಹಾಕುವನು. ಗೀತಾಧ್ಯಾಯನ ಮಾಡಿ, ಯೋಗಾಭ್ಯಾಸ ಮಾಡುವನು. ದ್ವಾರಕಾಕ್ಕೆ ಹೋಗಿ, ವೈಷ್ಣವ ಗುರುಗಳಿಂದ ತಪ್ತಮುದ್ರೆ ತಳೆದುಕೊಂಡನು. ಈಗ ಗುರುವು ಸಮಾಧಿ ಹೊಂದಲು- ಅವರ ಸ್ಥಳದಲ್ಲಿ ಸ್ವತಃ ಮಹಂತನಾಗಿದ್ದಾನೆ.

ಪ್ರೀತಿಯಿಂದಲೇ ಸರ್ವ ಲಾಭ-

ಲಾರ್ಡ ಬರ್ಕನಹೆಡ್ಡ ಸಾಹೇಬರು ಕೂಲಿಕಾರರಿಗೆ ಹಂಗಿಸಿ, ಹೀಕಿಸಿ ಮಾತಾಡಿದ್ದನ್ನು ಈ ಮೊದಲು ಬರೆದಿರುತ್ತೇವೆ. ಇವರಿಗೆ ಉತ್ತರವಾಗಿ ಒಮ್ಮೆ ಮುಖ್ಯ ಮಂತ್ರಿಯಾಗಿದ್ದ ಮಿ. ಲಾಯಿಡ ಜಾರ್ಜಸಾಹೇಬರು ಹೀಗೆಂದಿದ್ದಾರೆ.

ನೀವು ಕೂಲಿಕಾರರ ಎಲ್ಲ ಸಂಘಗಳನ್ನು ಜಪ್ತ ಮಾಡಬಹುದು. ಅದರ ಚಾಲಕ, ಉತ್ತೇಜಕರನ್ನು ತುರಂಗದಲ್ಲಿ ಹಾಕಬಹುದು. ಅವರ ರಾಜಕೀಯ ಚಳವಳಿಯ ದ್ರವ್ಯವನ್ನು ಕೊರಗಿಸಬಹುದು ಅಥವಾ ಇದಕ್ಕೂ ಹೆಚ್ಚು ಅಧಿಕಾರಬಲದಿಂದ ಏನು ಬೇಕಾದದ್ದು ಮಾಡಬಹುದು. ಆದರೆ- ನೀವು ಪಾರ್ಲಮೆಂಟಿನ ಕಾಯದೆಯಿಂದ ಕೂಲಿಕಾರರು ಚನ್ನಾಗಿ ಕೆಲಸ ಮಾಡಲೇಬೇಕೆಂದು ಬಲವಂತಿಕೆ ಮಾಡಲಾರಿರಿ. ಅದು ಒಂದೇ ವಸ್ತುವನ್ನು ಅವಲಂಬಿಸಿರುತ್ತದೆ, ಅದಕ್ಕೆ ಪ್ರೀತಿಯೆನ್ನುತ್ತಾರೆ.

ಅಧಿಕಾರದ ಉದ್ದಾಮತನ-

ಲಾರಖಾನಾದಲ್ಲಿ ಹಿಂದೂ ಮುಸಲಮಾನರ ದಂಗೆಯಾಯಿತಷ್ಟೇ; ಅಲ್ಲಿ ಮುಸಲಮಾನ ಪೋಲೀಸ ಇನ್ಸ್‌ಪೆಕ್ಟರನಿರುವನು. ಈತನು ದಂಗೆಯ ಆರೋಪಿಗಳೆಂದು ಪ್ರತಿಷ್ಠಿತ ಹಿಂದೂ ಜನರನ್ನು ದಸ್ತಗಿರ ಮಾಡಿ, ಅವರಿಗೆ ಕೈಬೇಡಿ ಹಾಕಿ, ರಟ್ಟೆಗೆ ಹಗ್ಗ ಹಚ್ಚಿ, ಊರತುಂಬ ಮೆರೆಸುತ್ತಾಯಿದ್ದನು. ಸಿಂಧದಲ್ಲಿ ಕೂಡಿದ್ದ ಪ್ರಾಂತಿಕ ಪರಿಷತ್ತಿನಲ್ಲಿ ಈ ಇನ್ಸ್‌ಪೆಕ್ಟರಸಾಹೇಬನ ಕೃತ್ಯವನ್ನು ನಿಷೇಧಿಸಿದರು.

ಮಾಳವೀಯರವರ ಮೇಲೆ ಕುತ್ತು-

ಸ್ವಾಮಿ ಶ್ರದ್ಧಾನಂದರ ಕೂಡ ಶುದ್ಧಿ ಸಂಘಟನೆಯನ್ನು ಕುರಿತು ಪ್ರಸ್ತಾಪ ಮಾಡುವದಕ್ಕಾಗಿ ಅಬ್ದುಲ ರಶೀದನು ಹೋಗಿ ಅವರ ಕೊಲೆ ಮಾಡಿದನಷ್ಟೇ; ಅದೇ ದುಷ್ಟಬುದ್ಧಿಯಿಂದಲೋ? ಹೇಗೋ? ಇಬ್ಬರು ಮುಸಲಮಾನರು ಈಗ ಕಾಶಿಯಲ್ಲಿರುವ ಪಂಡಿತ ಮಾಲವೀಯರವರ ಬಿಡಾರಕ್ಕೆ ಹೋಗಿ, ಅವರ ಕೂಡ ಶುದ್ಧಿ ಮತ್ತು ಸಂಘಟನದ ಬಗ್ಗೆ ಚರ್ಚೆ ಮಾಡುವವರೆಂದು ದ್ವಾರಪಾಲಕನಿಗೆ ಹೇಳಿದರು. ಪಂಡಿತರು ಮಲಗಿದ್ದಾರೆಂದು ಹೇಳಿದರೂ, ಇವರು ಬಲಾತ್ಕಾರದಿಂದ ಒಳಗೆ ಹೋಗಯತ್ನಿಸಿದರು. [illegible] ಇವರನ್ನು ಹಿಂದಕೆಳೆದನು. ಹೀಗಾಗಿ ತಮ್ಮ ಆಟ ಸಾಗದೆ, ಮುಸಲಮಾನರು ಹಿಂತಿರುಗಿ ಹೋದರೆಂದು ಕಾಶಿಯ ವರ್ತಮಾನ ಪ್ರಸಿದ್ಧವಾಗಿದೆ.

[illegible] ದಾವೆ-

ಕಲಕತ್ತೆಯ ಮ್ಯುನಿಸಿಪಾಲಿಟಿಯವರು ತಮ್ಮ ಕ್ಲ[illegible] ದಿವಾಣಖಾನೆಯಲ್ಲಿ ಮೇಣ ಮತ್ತು ಟರಪೆಂಟಾಯಿನ ಎಣ್ಣೆ ಹಚ್ಚಿ, ನೆಲ ಮಾಡಿಸುತ್ತಿದ್ದರು. ಮಿ. ನರೇಂದ್ರನಾಥ ಶೇಟರೆಂಬವರು ಇದರ ಮೇಲಿಂದ ಹಾದು ಹೋಗುವಾಗ ಜಾರಿ ಬಿದ್ದು ಕಾಲು ಮುರಕೊಂಡರು. ಮ್ಯುನಿಸಿಪಾಲಿಟಿಯ ದುರ್ಲಕ್ಷ್ಯದಿಂದಲೇ ತಮಗೆ ಅಪಘಾತವಾಯಿತೆಂದು ಶೇಟರು ಹತ್ತು ಸಾವಿರದ ದಾವೇ ತಂದರು. ಕ್ಲ[illegible]ರೂಮನ್ನು ಜಾರುವಂತೆ ಸಾರಿಸಿದ್ದು ನಿಜ. ಅದಕ್ಕೆ ಕ್ಷಮೆ ಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ಒಪ್ಪಿಕೊಂಡು ರಾಜಿಯಾಗಿ ಶೇಟರಿಗೆ ೧೩೫೦ ರೂಪಾಯಿ ನಷ್ಟಕೊಟ್ಟಿರುತ್ತಾರೆ.

ಚೀನ ದೇಶದಲ್ಲಿ ರಾಜಕೀಯ ಕೋಲಾಹಲವೆದ್ದಿದ್ದರೂ, ಜನರು ೪೧ ಲಕ್ಷ [illegible]ಯುಳ್ಳದ ಪುಸ್ತಕಗಳನ್ನು ಕೊಂಡರೆಂದು ಮಿಶನರಿಗಳ ಸೊಸಾಯಿಟಿಯವರು ಪ್ರಸಿದ್ಧ ಮಾಡಿದ್ದಾರೆ.

ನೋಟೀಸು.

ಯಲ್ಲಿ ಕೋಮು ನಿಂಗವ್ವಾ ತಳವಾರ ಸಾಕೀ ನ ಅತ್ತಿಗೇರಿ ತಾಲೂಕ ಶಿಗ್ಗಾವಿ ಇಆಕಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡುವ ನಿಂಗಪ್ಪಾ ತಂದಿ ಮಲ್ಲಪ್ಪಾ ತಳವಾರ ಸಾಕೀನ ಅಲ್ಲಾಪೂರ ತಾಲೂಕ ಗುಡಗೇರಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದಿವೆಯ ಹೆಂಡತಿಯಾಗಬೇಕು. ನೆರೆತ ನಂತರ ನೀನು ಪುಷ್ಕಳ ವರ್ಷಗಳ ತನಕ ನನ್ನ ಕೂಡ ಸುರಳಿತ ರೀತಿಯಿಂದ ಬಾಳ್ವೆ ಮಾಡಿದಿ ನಿನಗೆ ನನ್ನಿಂದ ಎರಡು ಹೆಣ್ಣು ಮಕ್ಕಳಾಗಿವೆ ಏಲಿ ಕಡಿಗೆ ನಿನಗೂ ನನ್ನ ತಾಯಿಗೂ ಕೂಡಿ ನಡೆಯದ್ದರಿಂದ, ನಾನಾಗಿ ನಿಪ್ಪಟ್ಟರ ಜಗಳ ತಪ್ಪಿಸುವದಕ್ಕಾಗಿ ನಿನ್ನನ್ನು ನಿನ್ನ ತವರ ಮನಿಗೆ ಕಳಿಸಿದೆನು. ಮತ್ತು ಈ ವರೆಗೆ ನಿನ್ನ ಹಾಗು ಮಕ್ಕಳ ಸಂರಕ್ಷಣೆಗಾಗಿ ಖರ್ಚಿಗೆ ಕೊಡುತ್ತಾ ಬಂದೆನು ಮತ್ತು ನಾನು ಹೋಗಿ ಬರುತ್ತಾ ಇದ್ದೆನು ಆದರೆ ನೀನು ಈಗ ತವರ ಮನಿಯವರ ಮಾತು ಕೇಳಿ, ನನ್ನ ಎರಡೂ ಹೆಣ್ಣು ಮಕ್ಕಳನ್ನು ನನ್ನ ಸಮ್ಮತಿ ಇಲ್ಲದೆ, ಎರಡನೆಯವರಿಗೆ ಮದಿವೆ ಮಾಡಿಕೊಡಬೇಕೆಂಬ ವಿಚಾರದಲ್ಲಿದ್ದಂತೆ ಕೇಳತೇನೆ ಇದು ಖರೇನೇ ಎಂದು ನಾನು ನಮಕ್ಷಮ ಕೇಳಿದರೆ- ನಿನ್ನಿಂದ ಮತ್ತು ನಿನ್ನ ತವರ ಮನೆಯಿಂದ ಸರಿಯಾಗಿ ಉತ್ತರ ದೊರೆಯಲಿಲ್ಲ. ಹಾರಿಸಿಕೊಳ್ಳುವ ಉತ್ತರ ಕೊಟ್ಟರಿ. ಕಾರಣ ಮನಸ್ಸಿನಲ್ಲಿ ಸಂಶಯ ಬಂದು, ಕಾಯದೆಶೀರ ನೋಟೀಸು ಕೊಟ್ಟಿರುತ್ತೇನೆ ಮಕ್ಕಳ ಮೇಲೆ ನನ್ನ ಸಂಪೂರ್ಣ ಮಾಲಕಿಯುಂಟು. ಅವರ ಪಾಲನಕರ್ತನೂ ನಾನೇ ಆಗಿರತ್ತೇನೆ ಅವರ ಲಗ್ನದ ಜವಾಬದಾರಿ ನನ್ನ ಮೇಲುಂಟು ನಿನಗೆ ಅಥವಾ ನಿನ್ನ ತವರ ಮನಿಯವರಿಗೆ ಕಾಯದೆಶೀರ ಯಾವ ಹಕ್ಕು ಇರುವದಿಲ್ಲ. ಮತ್ತು ಈಗ ಮನೆಯಲ್ಲಿ ನನ್ನ ತಾಯಿ ಸತ್ತಿರತಾಳೆ ನೀನು ನನ್ನ ಮನೆಗೆ ಬಂದು ಪ್ರಪಂಚ ಮಾಡಿಕೊಂಡಿರಲಿಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಆದ್ದರಿಂದ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮನೆಗೆ ಬಂದು ಸುರಳಿತ ಬಾಳ್ವೆ ಮಾಡಿಕೊಂಡಿರಬೇಕು ಮತ್ತು ಬರುವಾಗ ನನ್ನ ಮಾಲಕಿಯ ದಾಗೀನೆ ಐದು ತೊಲಿ ಬಂಗಾರದ ಬಳಿ ಜೋಡು, ಬೆಳ್ಳಿ ತೋಳಬಂದಿ ಎರಡು ತೊಲಿ ೨ಳ, ಬರಡೂವರೀ ತೊಲಿಯ ಒಂದು ಗುಂಡಿನ ಟೀಕಿ. ಒಟ್ಟು ಮಾರುಗತಿ ನೂರಳತಲ್ಲಿನದು ಇಷ್ಟು ಸಾಮಾನು ತಕ್ಕೊಂಡು ಬರಬೇಕು ಇದಕ್ಕೆ ತಪ್ಪಿದರೆ- ನನ್ನ ಮಕ್ಕಳ ಹಾಗು ದಾಗೀನೆಗಳ ದೆಸೆಯಿಂದ ಕಾಯದೆಶೀರ ಇಲಾಜ ಮಾಡುವೆನು ಮತ್ತು ಈ ನೋಟೀಸಿನ ವಿರುದ್ಧ ಯಾರಾದರೂ ನನ್ನ ಮಕ್ಕಳನ್ನು ಮದಿವೆ ಮಾಡಿಕೊಂಡರೆ- ಅವರ ಮೇಲೆ ಫೌಜದಾರಿ ಮಾಡಿ, ಲಗ್ನವನ್ನು ರದ್ದು ಪಡಿಸಿಕೊಳ್ಳುವೆನು ನೀನು ನನ್ನ ಮನೆಗೆ ಬರದಿದ್ದರೆ- ಇದೇ ನೋಟೀಸೇ ಸೋಡಪತ್ರವೇದು ತಿಳಿಯಬೇಕು ಈ ನೋಟೀಸು ಪ್ರಸಿದ್ಧವಾದ ತಾರೀಖಿನಿಂದ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯಲಾರದು ಅಂತಾ ಕೊಟ್ಟ ನೋಟೀಸು ತಾ॥ ೪ನೇ ಮೇ ೧೯೨೭ ಇಸ್ವಿ-

ಈ ಎಡಗೈ ಹೆಬ್ಬಟ್ಟಿನ ಗುರ್ತು ನಿಂಗಪ್ಪಾ ತಂದಿ ಮಲ್ಲಪ್ಪಾ ತಳವಾರ ಈತನ ಕೈದು ಇರುತ್ತದೆ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೪ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವವು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವವಲ್ಲದೆ, ಠೋಕ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಕು ಆಣೆಗೆ ಪಾವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ನಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ, ಆರ್ಡರ ಕೊಡುವವರಾದರೆ ೧।೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,

ವಾಚ ರಿಪೇರರ ವಕೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ನೋಟೇಸಿನ ಉತ್ತರಾ

ಸಾ॥ ಕೋಂ ರಾಮವ್ವಾ ಕಲಘಟಕರ ಸಾ. ಸಂಗಮೇಶ್ವರ ತಾ. ಕಲಘಟಗಿ ಇವರಿಗೆ

ಕೆಳಗೆ ಸಹಿ ಮಾಡಿದವನಿಂದ ಉತ್ತರ ಕೊಡುವದೇನಂದರೆ ನೀನು ಧಾರವಾಡ ವಿಜಯ ಪತ್ರದಲ್ಲಿ ತಾ. ೧೯-೪-೨೭ನೇ ದಿವಸ ಬರೆದ ಮಜಕೂರು ತಿಳಿತು ಅದರಲ್ಲಿ ನೀನು ನಿನ್ನ ದೋಷಗಳನ್ನು ಮುಚ್ಚಿಟ್ಟು ನನ್ನ ಮೇಲೆ ಇಲಾಜ ಮಾಡುತ್ತೇನೆಂತಾ ಬರೆದಿದ್ದಿ ನೀನು ನನ್ನ ಮನೆಯಲ್ಲಿ ವ್ಯಭಿಚಾರದಲ್ಲಿ ನನ್ನ ಕೈಯಲ್ಲಿ ಶಿಕ್ಕಿದ್ದರಿಂದ ನಿನ್ನನ್ನು ನಿನ್ನ ಮಿಂಡನನ್ನು ಹಿಡದು ನಮ್ಮಲ್ಲಿ ಪಂಚರಿಗೆ ತೋರಿಸಿ ನಿನ್ನನ್ನು ನಿಮ್ಮ ತಂದಿಗೆ ಒಪ್ಪಿಸಿದ್ದೇನೆ ನಿನ್ನ ಇಲಾಜು ನನ್ನ ಮೇಲೆ ಯಾವದೂ ನಡಿಯಲಾರದು ನಿನ್ನ ಮೈ ಮೇಲೆ ಇಟ್ಟ ದಾಗೀನೆಗಳು ಲಗ್ನದ ಕಾಲಕ್ಕೆ ಇಟ್ಟ ದಾಗೀನೆಗಳು ಅಲ್ಲಾ ಶೋಭಾ ದಿಂದಾ ಇಟ್ಟುಕೊಳ್ಳಲಿಕ್ಕೆ ಕೊಟ್ಟಿದ್ದರಿಂದ ಅವನ್ನು ನೀನು ನನಗೆ ಮರತ ಕೊಟ್ಟಿದಿ ನಿನ್ನ ಲಗ್ನ ಕಾಲಕ್ಕೆ ಇಟ್ಟ ದಾಗೀನು ಶೀರವಗೈರೆ ನಿನ್ನ ಕಡಿಗೆ ಅವೆ ನೀನು ವ್ಯಭಿಚಾರಿ ಆದ್ದರಿಂದ ನೀನು ಸಾಲಾ ಮಾಡಿ ಹೊಟ್ಟಿಗೆ ತಿಂದ ಹಣಕ್ಕೆ ನಾನು ಜವಾಬದಾರನಲ್ಲಾ ನಿನ್ನ ನೋಟೇಸಿನ ಖರ್ಚಿಗೆ ನಾನು ಬಾಧ್ಯಸ್ಥನಲ್ಲಾ ಈ ನೋಟೇಸಿನ ಖರ್ಚು ನಿನ್ನ ತಲಿಮೇಲೆ ಅದೆ. ತಿಳಿಯೋದು ತಾ. ೨೯-೪-೨೭ ಇಸ್ವಿ

ರಾಮಾ ಬಿನ್ನ ನಿಂಗಪ್ಪಾ ಕಲಘಟಕರ ಈತನದು ಅದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ   ಬಿಡಿ ಪ್ರತಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮   ಧಾರವಾಡ ಬುಧವಾರ ತಾರೀಖು ೧೧ ನೇ ಮೇ ೧೯೨೭   ಸಂಚಿಕೆ ೯೭

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಪೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಬಡ್ಡಿ ಲಕ್ಷದ ಮೇಲುಂಟು. ಚೆಕ ಮುಂತಾದವುಗಳಿಂದ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸುವದು. ಕಾಯಮವುಕ್ಕು ಬೇರೆ ಕರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜತಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಕೌಲಗಾ ಪಿಲ್ಸ್

—o—

ಜೇನೆ ಬಂದ ಮೂರು ತಾಸಿನೊಳಗಾಗಿ ತಪ್ಪದ ಗುಣ.

—o—

ನಾನು ಕೌಲಗಾ ಜೇನಿಯ ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ, ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಹುಬ್ಬಳ್ಳಿ, ಶಿವಳ್ಳಿ, ಕಡಬಿಗುಡ್ಡ, ವಗೈರಾತ ಮುಂತಾದ ಊರುಗಳಲ್ಲಿ ಗುಣಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತಿದೆ. ಪರಸ್ಥಳದವರಿಗೆ ವ್ಹಿ. ಪಿ. ಮುಂದಲಾಗಿ ಕಳಿಸುವೆವು. ವ್ಹಿ. ಪಿ. ಸಂಗಡ ಅನುಪಾನ ತಿಳಿಸುವೆನು.

ಗೋಪಾಲಸಾಹೇಬ ಎಲಿಗಾರ,
ದುರ್ಗದಬೈಲ ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ವಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಪೈ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೧-೫-೨೭ ನೇ ಇಸ್ವಿ

ಪರೀಕ್ಷಕರ ಚಲ್ಲಾಟ.

ಬಡವಿದ್ಯಾರ್ಥಿಗಳ ಗೋಳ್ಯಾಟ

ನಂಬರ ೧

ಈ ಸಾರಿನ ಮುಲ್ಕಿ ಪರೀಕ್ಷೆಯ ಪರಿಣಾಮವನ್ನು ಈ ಮೊದಲು ಪ್ರಸಿದ್ಧಿಸಿರುವೆವು. ಪರೀಕ್ಷೆಗೆ ಕೂತ ಒಟ್ಟು ೮೫೯ ವಿದ್ಯಾರ್ಥಿಗಳಲ್ಲಿ ೩೧೬ ಜನರು ಪಾಸಾಗಿರುವರು. ಒಟ್ಟಿನ ಮೇಲೆ ಪರೀಕ್ಷೆಯು ಪರಿಣಾಮವು ಸಮಾಧಾನಕರವಾಗಿ ತೋರಿದರೂ ಈ ಸಾರಿನ ಪ್ರಶ್ನೆಗಳು ಸಮರ್ಪಕವಾಗಿರಲಿಲ್ಲ. ಕನ್ನಡವನ್ನು ಚನ್ನಾಗಿ ಬಲ್ಲವರೇ ಪರೀಕ್ಷಕರಾಗಬೇಕೆಂದಾಗಲಿ ಅಂಥವರನ್ನೇ ಪರೀಕ್ಷೆಯ ಪ್ರಶ್ನೆಗಳನ್ನು ತೆಗೆಯುವಲಿಕ್ಕೆ ನಿಯಮಿಸಬೇಕೆಂದಾಗಲಿ ನಿರ್ಬಂಧವಿರುವಂತೆ ಕಂಡು ಬರುವದಿಲ್ಲ. ಈ ಸಾರಿನ ಪ್ರಶ್ನೆಗಳಲ್ಲಿ ಭಾಷೆಯ ಸಂಬಂಧದ ದೋಷಗಳಿವೇ ಹುಟ್ಟಿರುವವು. ವಿದ್ಯಾರ್ಥಿಗಳಿಗೆ ನಿಯಮಿಸಿ ಕೊಟ್ಟ ವಿಷಯ ವಿಭಾಗದ ಹೊರಗಿನ ಪ್ರಶ್ನೆಗಳು ಬಂದಿರುವವು. ಕೆಲ ಕೆಲವು ಪ್ರಶ್ನೆಗಳು ಅಬದ್ಧವೂ ಆಗಿರುವವು. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿ ಗೋಳಾಡಿದರು. ಯೋಗ್ಯ ಅಧಿಕಾರಿಗಳು ಈ ವಿಷಯದ ಕಡೆಗೆ ಲಕ್ಷ್ಯಪುರ್ವಿಸುವದು ಅತ್ಯವಶ್ಯವಾಗಿದೆ. ಈ ಸಾರೆಯು ಬೇರೆ ಬೇರೆ ವಿಷಯಗಳ ಪ್ರಶ್ನೆಗಳನ್ನು ಕ್ರಮವಾಗಿ ಪರೀಕ್ಷಿಸುವೆವು.

೧ ಗಣಿತ- ಎರಡನೇ ಪ್ರಶ್ನೆಯನ್ನು ನೋಡಿರಿ " ಮೂಲ ಕಿಮ್ಮತ್ತಿನಲ್ಲಿ ೧೧೦ಕ್ಕೆ ೫ರಂತೆ ಕಡಿಮೆ ಮಾಡಿಕೊಂಡು ಆಣೆ ಕಡಿಮೆ. ಮಾರಿದ್ದರೆ ಅವನಿಗೆ ೧೧೦ಕ್ಕೆ .... ಇತ್ಯಾದಿ ' ಇಲ್ಲಿ ಕೊಂಡ ಬೆಲೆ ಮಾರಾಟದ ಬೆಲೆ ಈ ಶಬ್ದಗಳು ಬಹಳ ಮಹತ್ವದವು ಆದ್ದರಿಂದ " ನೂರಕ್ಕೆ ೫ರಂತೆ ಕಡಿಮೆ ಬೆಲೆಗೆ ಕೊಂಡು ೮ ಆಣೆ ಕಡಿಮೆ ಬೆಲೆಗೆ ಮಾರಿದ್ದರೆ ' ಎಂದು ಹೇಳಿದ್ದರೆ ಪರೀಕ್ಷಕರಿಗೆ ಏನು ತೊಂದರೆಯಾಗುತ್ತಿತ್ತೋ ತಿಳಿಯಲಿಲ್ಲ "ಕೊಂಡು' ಎಂಬ ಮಹತ್ವದ ಪದದ ಹಿಂದೆ ಮತ್ತೊಂದು ಉಪ ಕ್ರಿಯಾಪದವನ್ನು ಜೋಡಿಸಿ ಅದರ ಮಹತ್ವವನ್ನು ಇಳಿಸಿ ಮಾಡಿ ಬಿಟ್ಟದ್ದರಿಂದ ವಿದ್ಯಾರ್ಥಿಗಳಿಗೆ ತೀರ ಅರ್ಥ ವಿಪರ್ಯಾಸವಾಗಿ ಹೋಯಿತು. ಗಣಿತದ ಪ್ರಶ್ನೆಗಳಲ್ಲಿ ಭಾಷೆಯ ಸಂಬಂಧದ ಸಂಶಯವುಂಟಾಗುವಂತೆ ಮಾಡುವದು ಎಷ್ಟು ಮಾತ್ರವೂ ಸರಿಯಲ್ಲ. ಇದೇ ತರದ ಇನ್ನೊಂದು ಮಾತಿರುವದು. ೭ನೆಯ ಪ್ರಶ್ನೆಯನ್ನು ನೋಡಿರಿ.

(ಎರಡನೇ ವಾಕ್ಯ) "ಅದರ ಗೋಡೆಗಳಿಗೆ ೨೧ ಇಂಚು ಅಗಲಾದ ಕಾಗದದ ಸುರುಳಿಗಳನ್ನು ಹಚ್ಚಲಿಕ್ಕೆ ೧೨ ಯಾರ್ಡು ಉದ್ದವಾದ ಸುರಳಿಗೆ ೨೮೮ ೧೦ ಆಣೆಯಂತೆ ಎಷ್ಟು ಖರ್ಚು ಬರುವದು? " ಈ ವಾಕ್ಯದಿಂದ ಪರೀಕ್ಷಕರ ಮನಸ್ಸಿನಲ್ಲಿದ್ದಂತೆ ಆ ಕೋಣೆಯ ಎಲ್ಲ ಗೋಡೆಗಳಿಗೆ ಕಾಗದ ಹಚ್ಚಬೇಕೆಂಬದಾಗ, ಎಲ್ಲ ಗೋಡೆಗಳಿಗೆ ತುಂಬಾ ಕಾಗದ ಹಚ್ಚಬೇಕೆಂಬದಾಗಲಿ ಸ್ಪಷ್ಟವಾಗಿಲ್ಲ.

ಗೋಡೆಗಳಿಗೆ ಎಂಬ ಬಹು ವಚನಾಂತಪದದಿಂದ ಎಲ್ಲ ಗೋಡೆಗಳಿಗೆ ಎಂದು ಒಂದು ವೇಳೆ ಅರ್ಥ ಮಾಡಿಕೊಂಡರೂ " ೨೧ ಇಂಚು ಅಗಲಾದ ಕಾಗದ...." ಎಂದು ಹೇಳುವದರಿಂದ ಒಂದೇ ಪಟ್ಟಿಯನ್ನು ಹಚ್ಚಬೇಕೆಂಬ ಆಭಾಸವು ತಾನಾಗಿ ಹುಟ್ಟುವದು. ಕಾಗದದ ಸುರಳಿಗಳನ್ನು ಹಚ್ಚಲಿಕ್ಕೆ ಬಂದಿರುವದರಿಂದ ೨೮೮. ೧೦ ಆಣೆಯು ಕಾಗದದ ಬೆಲೆಯೋ ಅಥವಾ ಅದನ್ನು ಹಚ್ಚುವ ಕೂಲಿಯೋ ಎಂಬದು ಸ್ಪಷ್ಟವಾಗುವದಿಲ್ಲ. ಇಷ್ಟೆಲ್ಲ ಸಂಶಯಗಳಿಗೆ ಆಸ್ಪದವಿರುವಂತೆ ಪ್ರಶ್ನೆಯ ಯೋಜನೆಯನ್ನು ಮಾಡಿಕೊಂಡು ಬಡ ವಿದ್ಯಾರ್ಥಿಗಳನ್ನು ಗೋಳಾಡಿಸುವದರಲ್ಲಿ ಪರೀಕ್ಷಕರಿಗೆ ಯಾವ ಪುರುಷಾರ್ಥವಿರುವದೋ ನಾವು ಹೇಳಲಾರೆವು.

ಇದು ಭಾಷೆಯ ಮಾತಾಯಿತು. ೫ನೇ ವಿಷಯವನ್ನೇ ನೋಡೋಣ- ಮೇಲೆ ಹೇಳಿದ ಎರಡನೆಯ ಪ್ರಶ್ನೆಯಲ್ಲಿ ಉತ್ತರವು ೧೧೦ರೂ. ಬರುವದು ಮೂಲ ಬೆಲೆಯನ್ನು ತೆಗೆಯಬೇಕಾಗಿರುವದರಿಂದ ಅದನ್ನು ೧ ಅಥವಾ ೧೦೦ರೂ. ಎಂದು ಕಲ್ಪಿಸಿ ಲೆಕ್ಕ ಮಾಡಬೇಕಾಗುವದು (ಕ್ಷ, ಯ, ಇತ್ಯಾದಿಗಳನ್ನು ಮೂಲ ಬೆಲೆಯೆಂದು ಕಲ್ಪಿಸಿ ಲೆಕ್ಕ ಮಾಡುವ ಬೀಜಗಣಿತದ ಕ್ರಮವು ಈ ವಿದ್ಯಾರ್ಥಿಗಳಿಗೆ ಸಾಧ್ಯವಿಲ್ಲ. ೧೦೦ರೂ. ಮೂಲ ಬೆಲೆಯೆಂದು ಕಲ್ಪಿಸಿದರೆ ಅಪೂರ್ಣಾಂಕಿಗಳು ಹೆಚ್ಚು ಬರುವದರಿಂದ ಬಹುತರವಾಗಿ ಇಂಥ ಲೆಕ್ಕಗಳಲ್ಲಿ ವಿದ್ಯಾರ್ಥಿಗಳು ೧೦೦ರೂ. ಯನ್ನೆ ಇಷ್ಟು ಸಂಖ್ಯೆಯೆಂದು ಕಲ್ಪಿಸಿ ಲೆಕ್ಕ ಮಾಡುತ್ತಿರುವರು ಈ ಲೆಕ್ಕದಲ್ಲಿ ಹೀಗೆ ಮಾಡ ಹೋದರೆ (ಉತ್ತರವೇ ೧೧೦ರೂ. ಆಗುವದರಿಂದ) ರೀತಿಯು ಬದಲಾಗಿ ತಾಳೆಯನ್ನು ತೆಗೆದಂತಾಗಿ ಬಿಡುವದು ಇದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿ ಬೀಳುವದು ಸಹಜವು ಮೇಲಾಗಿ ೧೧೦ರೂ. ಉತ್ತರ ಬರುವದೆಂದು ಎರಡನೆಯವರಿಂದ ಕೇಳಿಕೊಂಡು ತಾಳೆ ನೋಡಿದ ವಿದ್ಯಾರ್ಥಿಯು ಯಾರು? ನೂರು ರೂಪಾಯಿಗಳ ಇಷ್ಟು ಸಂಖ್ಯೆಯೆಂದು ಕಲ್ಪಿಸಿ ಲೆಕ್ಕ ಮಾಡಿದ ವಿದ್ಯಾರ್ಥಿಯು ಯಾರು ಎಂಬದನ್ನು ವಿಂಗಡಿಸುವದು ದುಸ್ತರವಾಗುವದು.

ಇಷ್ಟೆಲ್ಲಾ ಆಗಿ ಈ ಲೆಕ್ಕಕ್ಕೆ ಹದಿನಾಲ್ಕು ಗುಣಗಳು! ಪರೀಕ್ಷಕರು ಇಂಗ್ಲಿಷಿನಿಂದ ಭಾಷಾಂತರ ಮಾಡುವಾಗಲೋ ಇನ್ನಾವ ಕಾರಣದಿಂದಲೋ ಲೆಕ್ಕದ ಭಾಷೆಯಲ್ಲಿ ಇಲ್ಲದ ಗೊಂದಲ ಹಾಕಿಕೊಂಡು ಕ್ಷ, ಯ, ಇತ್ಯಾದಿ ಹಾಕಿಕೊಂಡು ತೊಂದರೆ ಮಾಡಿಕೊಂಡದ್ದರಿಂದಲೇ ಈ ಉದಾಹರಣೆಯು ಮಿಕ್ಕ ಉದಾಹರಣೆಗಳಿಗಿಂತ ಬಿಗಿಯಾಗಿ ತೋರಿರಬೇಕಲ್ಲದೆ ಅದಕ್ಕೆ ಮಿಕ್ಕ ಉದಾಹರಣೆಗಳಿಗಿರತಕ್ಕ ಹೆಚ್ಚಿನ ಮಹತ್ವವು ಎಷ್ಟು ಮಾತ್ರವೂ ಇರುವದಿಲ್ಲ.

ಇನ್ನೊಂದು ಮಾತೇನಂದರೆ ಗಣಿತದಲ್ಲಿ ವ್ಯವಸ್ಥೆಯ ಸಲುವಾಗಿ ೫ ಗುಣಗಳು ಲೋಪವಾಗಿ ಹೋಗಿರುವವು. ಈ ಐದು ಗುಣಗಳು ಪರೀಕ್ಷಕರ ಸ್ವವೇದ್ಯಕ್ಕೋ ಅಥವಾ ತಮ್ಮ ಮನಸ್ಸಿಗೆ ಬಂದವರಿಗೆ ಕೊಡುವದಕ್ಕೂ ಬೇಕಾದವರಿಗೆ ಏಶವದಕ್ಕೂ ಅನುಕೂಲವಾಗಬೇಕೆಂದೋ ಐದು ಗುಣಗಳನ್ನು ತೆಗೆದಿಟ್ಟಂತೆ ತೋರುವದು.

ಗಣಿತಕ್ಕಷ್ಟೇ ಅಚ್ಚುಕಟ್ಟುತನವು ಅವಶ್ಯವೆಂದೂ ಮಿಕ್ಕ ವಿಷಯಗಳಿಗೆ ಬೇಕಾಗಿಲ್ಲವೆಂದೂ ಯಾರೂ ಹೇಳರು.

ಚೀನರ ಮನೆಮುರಕ ಕಲಹ.

ಕಂತಾನದ ಬೊಲ್ಶೆವಿಕ ಪಂಥದವರಿಗೂ, ಶಾಂಘಾಯಿಯ ಬೊಲ್ಶೆವಿಕಪಂಥ ದ್ವೇಷಿಗಳಿಗೂ ಮನಸ್ತಾಪವಾಗಿ ಉಭಯತರ ನಡುವೆ ಯುದ್ಧ ಹತ್ತಿದ ವರ್ತಮಾನವನ್ನು ಈ ಮೊದಲು ಬರೆದಿದ್ದೇವೆ. ಹಾಂಕಾವಿನ ವಾಯುವ್ಯ ಮೇರೆಯಲ್ಲಿ ೧೨೫ ಮೈಲುಗಳ ಮೇಲೆ ಎರಡೂ ಪಡೆಗಳಿಗೆ ತುಮುಲ ಕಾಳಗ ಪ್ರಾರಂಭವಾಗಿ, ಎರಡೂ ಪಕ್ಷದ ಜನಲಯವಾಗುತ್ತಿರುವದೆಂದು ವರ್ತಮಾನ ಬಂದಿದೆ.

ಈ ಕಾಳಗವಲ್ಲದೆ, ಕಂತಾನದ ಬೊಲ್ಶೆವಿಕರು ಸ್ವಾಟೌನ ಪಟ್ಟಣದ ಮೇಲೆ ದಾಳಿಯಿಟ್ಟಿದ್ದಾರೆ. ಈ ಪಟ್ಟಣದ ಹಲವು ಭಾಗಗಳನ್ನು ಸುಡುವದೇ ಇವರ ಉದ್ದೇಶವಾಗಿದೆ. ಇವರು ಈಗ ಪಟ್ಟಣದಿಂದ ೧೭ ಮೈಲುಗಳ ಮೇಲಿದ್ದಾರೆ. ಇಂಗ್ಲಿಷ ಜನರು ಅಲ್ಲಿರುವ ತಮ್ಮ ಜನರ ಸಂರಕ್ಷಣೆಗಾಗಿ ದಂಡು ಕಳಿಸಿದ್ದಾರೆ.

ನಾನಕಿಂಗದ ಅನ್ಯಾಯ ಅತ್ಯಾಚಾರಗಳ ಬಗ್ಗೆಯಿಂದ ಇಂಗ್ಲಿಷರು ಕಂತಾನ ಸರಕಾರದವರಿಗೆ ಖಂಡಿತವಾದಿನ ಪತ್ರ ಬರೆದು ತಿಂಗಳವೇಳಾಯಿತು. ಇಂಗ್ಲಿಷ ಅಥವಾ ಚೀನದಲ್ಲಿ ಕಾಲು ಚಾಚಿದವ [illegible]
[illegible]

ಅವರು ಯಾರ ಮೇಲೆ ಎಂಥ ತಪ್ಪು ಹೊರಿಸುತ್ತಾರೆ ಅದನ್ನು ಅವರು ಒಪ್ಪಬೇಕೆಂದು ಕಂತಾನರು ಬರೆದ ಉತ್ತರದಿಂದ ಇಂಗ್ಲಿಷ ಜನರನ್ನು ಎರೆದು, ಹಾಸಿ, ಜೊಜ್ಜು ಮಲಗಿಸಿದಂತಾಗಿರುತ್ತದೆ.

ಮೊದಲಿನಂತೆ ಫ್ರಾನ್ಸ, ಅಮೇರಿಕಾ, ಇಟಲಿ ಜಪಾನ ದೇಶಗಳ ಏಕವಾಕ್ಯತೆ ಮಾಡಿಕೊಂಡು ಕಂತಾನನಿಗೆ ಮತ್ತೊಂದು ಪತ್ರ ಬರಿಯಬೇಕೆಂದು ಇಂಗ್ಲಿಷರು ಸಂಧಾನ ಹಚ್ಚಿದ್ದಾರೆ. ಆದರೆ ಈ ವಿಚಾರವು ತಪ್ಪೆಯನ್ನು ತೂಕ ಮಾಡುವಂತಾಗುತ್ತಿರುವದು.

ಚೀನ ಪ್ರಕರಣವು ಈ ಪ್ರಕಾರ ಸೆಸೆಗುದಿಗೆ ಬಿದ್ದುದರಿಂದ ಇಂಗ್ಲಿಷ ಸರಕಾರಕ್ಕೆ ದಂಡಿನ ವೆಚ್ಚ ಮಾತ್ರ ದಿನಾಲು ಭೂದಂಡದಂತೆ ಬಾಧಿಸುತ್ತಿರುವದು ಈ ವೆಚ್ಚ ನೋಡಲಾರದೆ, ಕೂಲಿಕಾರರು ಲುಂಡನದಲ್ಲಿ ಸಭೆ ಕೂಡಿ. ಚೀನದ ದಂಡನ್ನು ಮರಳಿ ಕರಿಸಿಕೊಂಡು, ಕಂತಾನ ಸರಕಾರದ ಸ್ವಾತಂತ್ರ್ಯವನ್ನು ಒಪ್ಪಬೇಕೆಂದು ಮಂತ್ರಿಗಳಿಗೆ ತಿಳಿಸಿದ್ದಾರೆ.

ಭಯಂಕರ ಪ್ರಾಣಹಾನಿ.

—೦—

ದಕ್ಷಿಣ ಅಫ್ರಿಕೆಯಲ್ಲಿ ನಾತಾಳದ ೧೩ ಯಲ್ಲಿರುವ ಚಾರ್ಲ್ಸಟಾವ್ನ ಎಂಬಲ್ಲಿ ವರ್ ಸಾಹೇಬನು ಬಲು ಪುಂಡನಾಗಿದ್ದನು. ಈತನನ್ನು ಹಿಡಿಯುವದಕ್ಕಾಗಿ ಪೋಲೀಸರು ಹೋದರು. ಪುಂಡನಾದ ಸ್ವಾರ್ಟಸಾಹೇಬನು ಇವರ ಮೇಲೆ ಗುಂಡು ಹಾಕಿ, ಹತ್ತು ಜನರನ್ನು ಕೊಂದನು. ಸತ್ತವರಲ್ಲಿ ಪೋಲೀಸ ಸುಪರಿಂಟೆಂಡೆಂಟರೂ, ಎವರು ಸಿಪಾಯರೂ ಆಗಿದ್ದಾರೆ. ಈ ಜನ ಸಂಹಾರ ಕಂಡು, ಊರವರು ಸ್ವಾರ್ಟನನ್ನು ಗುಂಡು ಹಾಕಿ, ಕೊಂದರು.

ಹಳೇ ಎತ್ತಿನ ಅನುಭವ-

ಕರ್ನಾಟಕ ಕಾಲೇಜದಲ್ಲಿ ನೇಮಿಸಬೇಕಾಗಿರುವ ಕನ್ನಡ ಪಂಡಿತರ ನೇಮಣೂಕಿಯಲ್ಲಿ ಏಕೀಕರಣದ ಬಾದರಾಯಣ ಸಂಬಂಧ ಹಚ್ಚಬಾರದೆಂದು ವಿಜಯದಲ್ಲಿ ಬಂದ ಲೇಖಕ್ಕೆ ಬಾಗಲಕೋಟೆಯ ಕನ್ನಡೀ ಪ್ರ ವಿಜಯವು ಹಳೇ ವಿಚಾರದ ಪತ್ರವೆಂದು ಹೇಳಿಕೊಂಡಿರುತ್ತದೆ. ಹಳೇ ಎತ್ತನ್ನು ಹೂಳೆಯಲ್ಲಿ ಹೂಡಬೇಕೆಂಬ ನುಡಿಯು ಮೊಕರಾಟೆಯ ಬಾಗಲಕೋಟೆಯ ಹೊರಿಗೆ ಹೇಗೆ ತಿಳಿಯುವದು? ಹೊಸಬಿತಾರದ ಆಪ್ಪಂದದಲ್ಲಿಯೇ ಹೇಗಾದರೂ ಮಾಡಿ ಕನ್ನಡಿಗರನ್ನು ಉಳಿಸಿಕೊಳ್ಳಿರೆಂದು ದೀನವಾಣಿಯಿಂದ ಊರೂರು ಹೇಳಿಕೊಳ್ಳುತ್ತ ತಿರುಗುತ್ತಿರುವನು. ವರ್ತಮಾನಪತ್ರ ತೆಗೆಯುವ ಅನುಭವವಿಲ್ಲದ್ದರಿಂದ ಅದು ಹೀಗೆ ನಡೆನುಡಿಗಳಲ್ಲಿ [illegible] [illegible] ಸುವದು.

ಮೂರ್ಖ ಬರಹ-

ಇಲ್ಲಾಂಡ ಸ್ಥಾನಿಕ ಸ್ವರಾಜ್ಯದ ಪರಿಷತ್ತಿನಲ್ಲಿ ಮುಂದೊರೆದವರಾದ ಮೆಸರ್ಸ ಹುಲಕೋಟಿ, ಪಠಾಣ ಮತ್ತು ಹೆನ್ನಾಪೂರಮಠರವರಿಗೆ ಸರಕಾರದಿಂದ ದಿವಾನ ಬಹಾದ್ದೂರ, ರಾವಸಾಹೇಬ ಪದವಿ ದೊರೆಯುವದೆಂದು ಒಂದು ಮಂಡಬಂಡ ಪತ್ರವು ಉತ್ಪ್ರೇಕ್ಷಮಾಡಿರುತ್ತದೆ. ತಮಗೆ ಪದವಿ ದೊರೆಯಬೇಕೆಂದು ಇವರು ಆ ಪರಿಷ್ಯನಲ್ಲಿ ಭಾಗ ತಕ್ಕೊಳ್ಳಲಿಲ್ಲ. ಕರ್ತವ್ಯವೆಂದು ಮಾಡಿದ್ದಾರೆ. ಒಂದಾನೊಂದು ಪರಿಷತ್ತಿನಲ್ಲಿ ಒಂದೆರಡು ದಿವಸ ದುಡಿದ ಮಾತ್ರದಿಂದ ದೊಡ್ಡ ದೊಡ್ಡ ಪದವಿಗಳು ದೊರೆಯುತ್ತಾರವು. ಅವಕ್ಕೆ ಸಾರ್ವಜನಿಕ ಹಿತ ಕರ್ತವ್ಯಗಳ ಅನೇಕ ಸಂಚಿತಗಳು ಬೇಕಾಗುತ್ತವೆ. ದೋಷದೃಷ್ಟಿಯಿಂದಲೇ ನೋಡುವವರಿಗೆ ಈ ಸುಬುದ್ಧಿ ಹುಟ್ಟುವದೆಂತು?

ಮೃತ್ಯು—

ವಿಜಾಪೂರ ಮತ್ತು ಬಾಗಲಕೋಟೆಯಲ್ಲಿ ಪ್ರಸಿದ್ಧ ಸಾಹುಕಾರರಾಗಿದ್ದ ಶ್ರೀ. ರಾಮದಾಸ ಶೇಟಜೀಯವರು ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ. ಇವರು ಹುಟ್ಟು ಸ್ವದೇಶಾಭಿಮಾನಿಗಳು. ಸರಕಾರದವರು ಇವರಿಗೆ ರಾವಸಾಹೇಬ ಪದವಿಯನ್ನು ಕೊಟ್ಟದ್ದಲ್ಲದೆ, ಬೆಂಚ ಮ್ಯಾಜಿಸ್ಟ್ರೇಟ್ರ ಮಾಡಿದ್ದರು. ಅಸಹಕಾರದ ಚಳವಳಿಯಲ್ಲಿ ಇವರು ಇವೆರಡನ್ನು ರಾಜೀನಾಮೆ ಕೊಟ್ಟು ದೇಶಸೇವಾನಿರತರಾಗಿದ್ದರು.

ಮುದ್ದೇಬಿಹಾಳದ ಮಾಮಲೇದಾರರಾದ ಮಿ. ವಾಲಿ ಮತ್ತು ಬಾಗಲಕೋಟೆಯಲ್ಲಿ ವಕೀಲರಾಗಿದ್ದ ಮಿ. ಬಾಳಾಚಾರ್ಯ ಕರೂರ ಇವರು ಮೃತಪಟ್ಟರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಶ್ರೀ ಗದಗ ದತ್ತಾತ್ರಯ ನಾಟಕ ಕಂಪನಿಯವರು ವಿಜಾಪೂರದಲ್ಲಿದ್ದಾರೆ ಚಮತ್ಕಾರ ಚಂದ್ರ ವೆಂಬ ಹೊಸ ಪ್ರಯೋಗ ರಚಿಸಿದ್ದಾರೆ. ಸೊಲ್ಲಾಪೂರಕ್ಕೆ ಹೋಗಿ ಕನ್ನಡಿಗರಲ್ಲಿ ಜಾಗ್ರತೆಯನ್ನುಂಟು ಮಾಡುವ ವಿಚಾರವುಂಟು.

ಶ್ರೀಮನ್ಮಹೀಸೂರ ಮಹಾರಾಜರ ಸಿಲ್ವರ ಜ್ಯುಬಿಲಿ ಉತ್ಸವಕ್ಕಾಗಿ ಬೆಂಗಳೂರಿನ ಸಾಹುಕಾರರು ಐವತ್ತು ಸಾವಿರದ ಫಂಡು ಕೊಟ್ಟಿದ್ದಾರೆ. ದಿವಾನರು ಎರಡು ಸಾವಿರ ಮತ್ತು ಶ್ರೀ. ವಿಶ್ವೇಶ್ವರಯ್ಯನವರು ೧೫೦೦ ರೂಪಾಯಿ ಕೊಟ್ಟಿದ್ದಾರೆ.

" ದುಃಖಪ್ರದರ್ಶನ "

—೦—

(ಬರೆದು ಬಂದದ್ದು)

ಸಾಂಗಲಿ ಸಂಸ್ಥಾನ ಶೈಕ ಶಿರಹಟ್ಟಿ ತಾಲೂಕಿನ ಮಾಮಲೇದಾರರಾಗಿದ್ದ ಮಿ. ಕೇ. ಎಸ್ ದೇಸಾಯಿಯವರು ತಾ|| ೫-೫-೧೯೨೭ ನೇ ದಿನ ಕಾಲರಾ ಬೇನೆಯಿಂದ ಸಾಂಗಲಿ ಮುಕಾಮಿನಲ್ಲಿ ಪರಲೋಕವಾಸಿಯಾದರೆಂಬ ಸಂಗತಿಯನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಮೇಲಿನ ಸಂಗತಿಯು ಶಿರಹಟ್ಟಿಯ ಜನರಿಗೆ ತಿಳಿಯುತ್ತಲೇ ಊರಲ್ಲಿನ ಯಾವತ್ತು ಜನರು ಬಹಳವಾಗಿ ಮರುಗಿದರು. ಕೈ. ವಾ. ಮಿ. ದೇಸಾಯಿಯವರು ಒಳ್ಳೇ ಸಾತ್ವಿಕರೂ, ಉದಾರ ಮತದವರೂ, ಹಾಗೂ ಸರಳಸ್ವಭಾವದವರಾಗಿದ್ದರಲ್ಲದೇ ತಮ್ಮ ಸರಕಾರೀ ಕೆಲಸಗಳನ್ನು ಕೂಡಾ ಅತಿ ನಿಸ್ಪೃಹತೆಯಿಂದ ಮಾಡುತ್ತಿದ್ದರು. ಅದ್ದರಿಂದಲೇ ಅವರು ಇಡೀ ತಾಲೂಕಿನಲ್ಲಿಯೇ ಲೋಕಪ್ರಿಯರಾಗಿದ್ದರು. ಸ್ವಲ್ಪ ದಿನಗಳ ಹಿಂದೆ ಇವರು ಬೇನೆ ಬಿದ್ದ ಮೂಲಕ ಇವರ ಪ್ರಕೃತಿಯು ಅಷ್ಟು ಸುಧಾರಿಸಿರಲಿಲ್ಲ. ಆದ್ದರಿಂದ ಹವೆ ಬದಲಾಯಿಸಲಿಕ್ಕೆಂದು ಅವರು ಕೊಲ್ಹಾಪೂರದ ಕಡೆಗೆ ಹೋಗಿದ್ದರು. ಇಷ್ಟರಲ್ಲಿ ಸಾಂಗಲಿ ಸಂಸ್ಥಾನದ ಅಧಿಪತಿಗಳಾದ ಶ್ರೀಮಂತ ಅಪ್ಪಾಸಾಹೇಬ ಇವರ ಮಗಳ ವಿವಾಹ ಕಾರ್ಯವು ಸಮೀಪಿಸಿತು. ಈ ಕಾರ್ಯಕ್ಕಾಗಿ ಮಿ. ದೇಸಾಯಿಯವರು ರಜೆಯ ಮೇಲಿದ್ದರೂ ಕೂಡಾ ಸಾಂಗಲಿಗೆ ಹೋದರು. ಮತ್ತು ಕಾರಭಾರಿಗಳ ಪಕರಲ್ಲಿ ಒಬ್ಬರಾಗಿ ವಿವಾಹ ಸಮಾರಂಭದಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿರುವಾಗ್ಗೆ ಮೃತ್ಯುವಿನ ಬಾಯಿಗೆ ತುತ್ತಾದರು ಈ ಸಂಗತಿಯಿಂದ ಇವರು ಎಷ್ಟು ರಾಜನಿಷ್ಠ ಸೇವಕರಾಗಿದ್ದರೆಂಬುದು ಚನ್ನಾಗಿ ವ್ಯಕ್ತವಾಗುವಂತಿದೆ.

ಧಾರವಾಡ-

ನವಲಗುಂದ ತಾಲೂಕ ಕಾಲವಾಡದಲ್ಲಿ ಟಿ. ಎಲ್. ಬಿ. ಮೇಟರ ನಾಗನಗೌಡರ ಅಧ್ಯಕ್ಷತೆಯಲ್ಲಿ ತಾ ೨೭-೪-೨೭ನೇ ದಿವಸ ಸಭೆಯಾಗಿ ಶ್ರೀ " ಗಜಾನನ ವಾಚನಾಲಯವು" ಸ್ಥಾಪಿಸಲ್ಪಟ್ಟಿತು. ಶ್ರೀ. ತಿಮ್ಮಾಜಿ ಲಿಂಗೋ ಕುಲಕರ್ಣಿಯವರು ಚೇರಮನರಾಗಿಯೂ ಚಂದ್ರಪ್ಪಾ ಅಡಕಾವ ಇವರು ಸೆಕ್ರೆಟರಿಯಾಗಿಯೂ ಆರಿಸಲ್ಪಟ್ಟಿದ್ದಾರೆ. ಸದ್ಯಕ್ಕೆ ವಾಚನಾಲಯದಲ್ಲಿ ಕನ್ನಡ ಮರಾಠಿ ಇಂಗ್ಲಿಷ ಸೇರಿ, ೨೦೦ ಪುಸ್ತಕಗಳಿವೆ ಹೊರತಾಗಿ ವರ್ತಮಾನಪತ್ರಗಳೂ ಮಾಸಿಕ ಪುಸ್ತಕಗಳೂ ಬರುತ್ತವೆ ಎಂದು [illegible] [illegible] ಚೇರಮನ್‌ರು ತಿಳಿಸುತ್ತಾರೆ.

ನೋಟೀಸು.

ಶಾ. ೧೩. ಫಕೀರಪ್ಪಾ ತಂದಿ ಶಿವಬಸಪ್ಪಾ ಹಂಚಿನಾಳ ಸಾ. ರಾಯಾಪೂರ ತಾ. ಶಿಗ್ಗಾವಿ ಇವರಿಗೆ-

ಕೆಳಗೆ ಸಹಿ ಮಾಡಿದವಳು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ಮೊದಲನೇ ಸಾರೆ ನಾನು ನಿಮ್ಮಲ್ಲಿಗೆ ನಡೆಸುಡಿಯಲಿಕ್ಕೆ ಬಂದೆನು ಆಗ್ಗೆ ನೀನು ಘಟಿಂಗತನಕ್ಕೆ ಬಿದ್ದು ನನ್ನ ಮೈಮೇಲಿನ ತವರ ಮನೆಯವರು ಕೊಟ್ಟ ದಾಗೀನೆ ಸಹ ಸುಲಕೊಂಡು ನನಗೆ ಅನ್ನ ನೀರಿಗೆ ಸಹ ಕೊರತೆ ಮಾಡಿದಿ ಈ ವರ್ತಮಾನ ಕೇಳಿ ನಮ್ಮ ತವರ ಮನೆಯವರು ನಿನಗೆ ಬುದ್ಧೀ ಹೇಳಿದರೂ ಕೇಳದೆ, ನನ್ನನ್ನು ಹೊರಗೆ ಹಾಕಿದಿ ನಾನು ಎರಡು ಮೂರು ಸಾರೆ ಹಿರಿಯರನ್ನು ಕರಕೊಂಡು ಬಾಳ್ವೆ ಮಾಡಬೇಕಂತಾ ನಿಮ್ಮಲ್ಲಿಗೆ ಬಂದರೆ ನೀವು ಯಾರ ಮಾತನ್ನೂ ಕೇಳದೆ ನನ್ನನ್ನು ಮನೆಗೆ ಬರಗೊಡದೆ ನಿನ್ನ ದುರ್ಬುದ್ಧಿಯನ್ನೇ ತೋರಿಸಿದಿ ಮುಂದಾದರೂ ಬುದ್ಧಿ ಬರಬಹುದೆಂದು ೬-೭ ವರ್ಷ ನಿನ್ನ ದಾರೀ ನೋಡಿದರೂ ನೀನು ದಾದು ಮಾಡಲಿಲ್ಲಾ. ಕಾರಣ ಈ ನೋಟೀಸ ಕೊಡುವ ಪ್ರಸಂಗ ಬಂತು ನಾನು ನನ್ನ ಹೊಟ್ಟೆ ಬಟ್ಟೆ ಸಲುವಾಗಿ ಇಲ್ಲಿ ಎರಡು ನೂರು ರೂಪಾಯಿ ದೇಣೆ ಮಾಡಿದ್ದೇನೆ ಈ ನೋಟೀಸ ಮುಟ್ಟಿದ ಎಂಟು ದಿವಸಗಳಲ್ಲಿ ಒಂದು ನನ್ನ ದೇಣೆ ತೀರಿಸಿ ಕರಕೊಂಡು ಹೋಗಿ ಸುರಕ್ಷಿತ ಬಾಳ್ವೆ ಮಾಡಬೇಕು ಆ ನೀನು ಬಂದು ವ್ಯವಸ್ಥಾ ಮಾಡದಿದ್ದರೆ ಇದೇ ನೋಡಪತ್ರವೆಂದು ತಿಳಕೊಂಡು ನಾನು ಉಡಕೀ ಮಾಡಿಕೊಳ್ಳುತ್ತೇನೆ ಆ ಮೇಲೆ ನಿನ್ನ ಹಕ್ಕು ನನ್ನ ಮೇಲೆ ಹಾಗು ಉಡಿಕಿ ಆದವನ ಮೇಲೆ ಉಳಿಯಲಿಕ್ಕಿಲ್ಲಾ ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ಈ ನೋಟೀಸಿಗೆ ಏನಾದರೊಂದು ಸುಳ್ಳು ಉತ್ತರ ಕೊಟ್ಟರೆ ನಾನು ಸ್ವೀಕರಿಸುಕೊಳ್ಳುವದಿಲ್ಲಾ ತಾ. ೮ನೇ ಮೇ ಸನ್ನ ೧೯೩೭ ಇಸ್ವಿ

ಈ ಎಡಗೈ ಹೆಬ್ಬೆರಳಿನ ಗುರ್ತಾ ಬಸವಣೆವ್ವಾ ಕೋಂ ಫಕೀರಪ್ಪಾ ಹಂಚಿನಾಳ ಸಾಕೀನ ನೂಲ್ವಿ ಈಕಿದು ಅದೆ.

ನೋಟೀಸು

ಸಯ್ಯದ ಮುಸ್ತುಮಶಾ ವ|| ದಾವೂದಸಾಹೇಬ ಹವಾಲದಾರ ಜುಮ್ಮಾಮಸೀದಿಗಲ್ಲಿ ಧಾರವಾಡ ಈತನಿಗೆ-

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವವಳಾದ ಮುಸ್ತುಮಿ ಕೋಂ ಸಯ್ಯದ ಮುಸ್ತುಮಶಾ ಹವಾಲದಾರ ಈಕೆಯು ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದವಿಯ ಗಂಡನಾಗಬೇಕು ಮದವೆಯಾದ ನಂತರ ಸರಾಸರಿ ಒಂದು ವರ್ಷ ಆರು ತಿಂಗಳು ಯಾಕು ನನ್ನ ತವರ ಮನೆಗೆ ಕಳಿಸೀದಿ. ಮತ್ತು ನಿನ್ನ ಮನೆಯಲ್ಲಿ ಇರುವ ವರೆಗೆ ನನ್ನ ಕೂಡ ಬಾಳವೆ ಮಾಡಲಿಲ್ಲಾ, ನನ್ನನ್ನು ಸೇರದೆ, ಹೊಡದು ಬಡದು ಮಾಡಲಿಕ್ಕೆ ಹತ್ತಿದಿ ನಿನಗೆ, ಮುಲರೋಗ ಬರುತ್ತದೆ. ಮತ್ತು ನಿನ್ನ ಮಯ್ಯಲ್ಲಿ ಹಮೇಶಾ ಅಜಾರಿ ಇರುವದು ಆದ್ದರಿಂದ ನೀನು ಪ್ರಪಂಚ ಮಾಡಲಿಕ್ಕೆ ನಾಲಾಯಖನಿರುತ್ತೀದಿ ಘರಂಣೆದಿಂದ ನನ್ನನ್ನು ಮನೀಬಿಟ್ಟು ಉಟ್ಟ ಸೀರಿಯ ಮೇಲೆ ಕಳಿಸಿಕೊಟ್ಟಿ ಆಗಿನಿಂದ ನಾನು ನಿನಗೆ ಪೋಟಗಿ ವ್ಯವಸ್ಥಾ ಮಾಡಿಸಿ ಕೊಡಬೇಕೆಂದು ಬಹಳ ಸಾರೆ ಹೇಳಿದೆ ಆದರೆ ನೀನು ಯಾವದೇ ಪ್ರಕಾರದಿಂದ ಅನ್ನ ವಸ್ತ್ರದ ವ್ಯವಸ್ಥಾ ಮಾಡಲಿಲ್ಲಾ ಈಗ ನನಗೆ ಹೊಟ್ಟೆಯ ದೆಸೆಯಿಂದ ನೂರು ರೂಪಾಯಿ ಸಾಲವಾಗಿರುತ್ತದೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗೆ ಈ ಪರ್ಯಂತರ ಆದಂಥ ಸಾಲದ ರಕಮು ಒಂದು ನೂರು ರೂಪಾಯಿ ಮತ್ತು ಮಹಾರದ ಹಣಾ ವ ನನ್ನ ದಾಗೀನೆಗಳನ್ನು ಕಸಕೊಂಡದ್ದು ತಿರುಗಿ ಕೊಡಬೇಕು ದಾಗೀನೆ ಕಸಕೊಂಡ ಹಕೀಕತು ಪಂಚ ಜನರಿಗೆ ಸಹ ಗೊತ್ತುಂಟು ನನ್ನ ಮಹಾರ ಕೊಟ್ಟು, ನನಗೆ ನೋಡಪತ್ರ ಕೊಡಬೇಕು ಅದಕ್ಕೆ ತಪ್ಪಿದರೆ ನಾನು ನನ್ನ ಉಪಜೀವನದ ಸಲುವಾಗಿ ಎರಡನೆಯವರನ್ನು ಉಡಕಿ ಮಾಡಿಕೊಳ್ಳುವೆನು ಆ ನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕಿಯ ಗಂಡನ ಮೇಲೆ ಬಿಲಕೂಲ ನಡಿಯಲಾರದು ಮತ್ತು ಈ ಪರ್ಯಂತರ ಆದ ಸಾಲದ ಬಾಬತು ಮತ್ತು ಮಹಾರಿನ ಹಣದ ಬಾ|| ಕಾಯದೇ ಪ್ರಕಾರ ಇಲಾಜ ಮಾಡಿಕೊಳ್ಳುವೆನು ಆ ಬಾಬತು ಹತ್ತುವ ಖರ್ಚು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲುಂಟು ಅಂತಾ ಬರಕೊಟ್ಟ ನೋಡಪತ್ರ ತಾರೀಖು ೧೦ ಮೇ ೩೭

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಮುಸ್ತುಮಿ ಕೋಂ ಸೈಯ್ಯದ ಮುಸ್ತುಮಶ್ಯಾ ಈಕಿ ಕೈದು ಇರುತ್ತದೆ.

ನೋಟೀಸು

ರಾ|| ಬಸಪ್ಪಾ ಯಲ್ಲಪ್ಪಾ ಹಡಪದ ಸಾ|| ಹಂಚಿನಾಳ ತಾ| ಪಂಸಗಣ ಇವರಿಗೆ-

ಕೆಳಗೆ ಸಹಿ ಮಾಡುವವಳ ಕಡಿಂದ ತಿಳಸೋದೇನಂದರೆ- ನೀನು ನನ್ನ ಲಗ್ನದ ಗಂಡನಿರುತ್ತಿ ಅಜಮಾಸ ೪ ವರ್ಷದ ಹಿಂದೆ ಒಬ್ಬ ರಂಡಿ ಇಟಗೊಂಡು ನನ್ನ ಕೂಡ ಬಾಳ್ವೆ ಮಾಡದೆ ರಂಡಿ ಮಾತು ಕೇಳಿ ನನಗೆ ಹೊಡದು ಉಟ್ಟ ಸೀರಿಯ ಮೇಲೆ ಹೊರಗೆ ಹಾಕಿದಿ ಪುನಃ ಕರಕೊಂಡು ಹೋಗಲಿಲ್ಲ ನನ್ನ ಗರಜು ನಿನಗೆ ಇದ್ದಂತೆ ತೋರುವದಿಲ್ಲ ನಾನು ತವರ ಮನೆಯಲ್ಲಿ ಇದ್ದೆ ಅವರು ಇಟಗೊಳ್ಳದ್ದರಿಂದ ಎರಡನೇ ಕಡೆ ಇದ್ದು ಸಾಲ ಮಾಡಿ ಹೊಟ್ಟೆ ತುಂಬಿಕೊಂಡೆ ಈಗ ೩೦೦ ರೂಪಾಯಿ ಸಾಲ ಆಗಿದೆ ಮುಂದೆ ಸಾಲ ಹುಟ್ಟುವದಿಲ್ಲ ಸಾಲಗಾರರ ತಗಾದಿ ಆದ ಕಾರಣ ಈ ನೋಟೀಸು ಕೊಡೋ ಭಾಗಬಿತ್ತು ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ನೀನು ಬಂದು ನಾನು ಮಾಡಿದ ಸಾಲಾ ತೀರಿಸಿ ನನ್ನನ್ನು ಒಡಿಯದೆ ಚನ್ನಾಗಿ ಇಟಗೊಂಡು ಬಾಳ್ವೆ ಮಾಡತಕ್ಕನೆ ಅಂತ ಯೋಗ್ಯ ಜಾಮೀನ ಕೊಟ್ಟು ಕರಕೊಂಡು ಹೋಗಬೇಕು ಹಾಗೆ ಮಾಡದೆ ಇದ್ರೆ ಇದೇ ನೋಡಪತ್ರ ಅಂತ ತಿಳಿದು ಯಾರದನ್ನೇಯವನನ್ನು ಉಡಿಕೀ ಆಗುವೆನು ನನ್ನ ಮೇಲೆ ಹೆಂಡತಿಯೆಂಬೋ ಹಕ್ಕು ಉಳಿಯಲಿಕ್ಕಿಲ ನನ್ನ ಮರ್ಜಿ ಬಂದಂತೆ ಇರುವೆನು ನನ್ನ ಸಾಲಾ ನಿನ್ನ ಮೇಲೆ ದಾವೆ ಮಾಡಿ ವಸೂಲ ಮಾಡತಕ್ಕವಳಿದ್ದೇನೆ. ಈ ಖರ್ಚು ನಿನ್ನ ಮೇಲೆ ಅದೆ ತಿಳಿಯೋಣು ತಾ|| ೭ ೫ ೩೭ ನೇ ಇಸ್ವಿ

ರು ಎಡಗೈ ಹೆಬ್ಬೆಟ್ಟಿನ ಗುರ್ತಾ ಕಲ್ಲವ್ವಾ ಕೋಂ ಬಸಪ್ಪಾ ಹಡಪದ ಈಕಿ ಕೈದು ಅದೆ

ಜಾಹೀರ ನೋಟೀಸು

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಗದಿಗೆವ್ವಾ ಕೋಂ ನಾಗನಗೌಡಾ ಹಿರೇಗೌಡರ ಸಾಕೀನ ಅಲ್ಲಾಪೂರ ಉರ್ಫ ಸೋಮಾಪೂರ ತಾಲೂಕ ಧಾರವಾಡ ಈಕೆಯು ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ ನಾನು ಧಾರವಾಡ ವಿಜಯ ಪತ್ರದ ತಾರೀಖು ೧೪ ಅಪ್ರೀಲ ೧೯೩೭ ನೇ ಇಸವಿಯ ಪತ್ರದಲ್ಲಿ ನೋಟೀಸು ಕೊಟ್ಟು ರಜಿಸ್ಟರ ಮಾಡಿಸಿದ್ದೆ ಸದರ ನನ್ನ ಗಂಡನು ಅಂದರೆ ಗಂಡನ ಹೆಸರಿದ್ದವರು ಸೋಮಾಪೂರ ಗ್ರಾಮದಲ್ಲಿಯೇ ಇರುವದಿಲ್ಲೆಂದು ಪೋಸ್ಟಿನ ಶಿಕ್ಕ ನನಗೆ ದೊರಕದೆ ಅದ್ದರಿಂದ ಈ ಜಾಹೀರ ನೋಟೀಸು ಕೊಡುತ್ತೇನೆ ಸದರ ನನ್ನ ಗಂಡ ನಾಗನಗೌಡನು ಸೋಮಾಪೂರದಲ್ಲಿಯೇ ಇವನಾನೆ ಅಲ್ಲಿರುವದಿಲ್ಲೆಂದು ಮತಲಬಿ ಜನರ ಸಲ್ಲಾದಿಂದ ತಿರಾಯಿಸಿ ಕಳಿಯಿಸಿದಾ ಬರಿಸಿದಂತೆ ತೋರುತ್ತದೆ. ಈತನು ಸೋಮಾಪೂರದಲ್ಲಿಯೇ ಇದ್ದು; ಇನ್ನಾವ ಗ್ರಾಮದಲ್ಲಿದ್ದು; ತಾನು ಈ ನೋಟೀಸು ಜಾಹೀರಾದ ೧೫ ದಿವಸಗಳಲ್ಲಿ ನಾನಿದ್ದ ಊರಿಗೆ ಬಂದು ಮೊದಲಿನ ನೋಟೀಸಿನಲ್ಲಿ ಬರೆದ ಶರ್ತುಗಳನ್ನು ಪೂರ್ಣ ಮಾಡಿ, ನನ್ನನ್ನು ಕರಕೊಂಡು ಹೋಗಿ ಬಾಳ್ವೆ ಮಾಡಬೇಕು. ಈ ಇದಕ್ಕೆ ತಪ್ಪಿದರೆ- ನಾನು ಎರಡನೆಯವನನ್ನು ಖಂಡಿತವಾಗಿ ಉಡಿಕಿ ಮಾಡಿಕೊಳ್ಳುವೆನು ಅನಂತರ ನನ್ನ ಮೇಲೆ ಮತ್ತು ನನ್ನ ಗಂಡನ ಮೇಲೆ ಈತನ ಹಕ್ಕು ಬಾಧ್ಯತೆ ಯಾವದೂ ನಡಿಯಲಾರದು. ಮೊದಲನೇ ನೋಟೀಸಿನಲ್ಲಿಯೇ ಉಡಿಕೆಯನ್ನು ಜಾಹೀರ ಮಾಡಿದ್ದೇನೆ. ಈ ಎರಡನೇ ನೋಟೀಸನ್ನು ನನ್ನ ಉಡಕಿ ಗಂಡನಿಗೆ ಯಾವದೇ ಪ್ರಕಾರದ ಬಾಧೆ ಬರಬಾರದೆಂದು ಕೊಟ್ಟಿದ್ದೇನೆ ಅಂತಾ ಜಾಹೀರ ಮಾಡಿದ ನೋಟೀಸು.

ತಾ|| ೧೧ ಮೇ ೧೯೩೭ ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಗದಿಗೆವ್ವಾ ಕೋಂ ನಾಗನಗೌಡಾ ಹಿರೇಗೌಡರ ಈಕಿ ಕೈದು ಇರುತ್ತದೆ.

ಈ ಪತ್ರದಲ್ಲಿನ್ನ ಅಗ್ರಲೇಖ ಧಾರವಾಡ ಚಿಕ್ಕಪೊಸರ್ಲಾ ಇವರು ಧಾರವಾಡದಲ್ಲಿರುವ ತಮ್ಮ ಪಾರ್ಥಿವ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ | ಧಾರವಾಡ ಗುರುವಾರ ತಾರೀಖು ೧೨ ನೇ ಮೇ ೧೯೨೭ | ಸಂಚಿಕೆ ೯೭

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕವಾಲಿ ಗಾಣಕ್ಕೆ ಪದಕವು ದೊರೆಕಿದೆ ಪೆಟ್ಟಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟಿಡ

ಮಂಗಳವಾರ ಪೇಟೆ ಧಾರವಾಡ.

೧೯೦೪ ಕೋ ಅಪರೇಟಿವ್ಹ ಕ್ರೆಡಿಟ ಸೋಸಾಯಟೀಸ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ್ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸ್ಯಡುವದು. ಕಾಯಮಿನವುತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ವಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ

ಜೇನೆ ಬಂದ ಮೂಡು ತಿಂಗಳೊಳಗಾಗಿ ತಪ್ಪದ ಗುಣ.

ನಾನು ಕಾಲರಾ ಬೇನೆಯ ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಮಾಂಡಗಿ, ಶಿವಳ್ಳಿ, ಕರಡಿಗುದ್ದ, ಮರೇವಾಡ ಮುಂತಾದ ಊರುಗಳಲ್ಲಿ ಗುಣಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತಿವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ವ್ಹಿ. ಪಿ. ಖರ್ಚ ಅನುಮಾನ ತಿಳಿಸುವೆನು.

ಗೋಪಿನಾಥ ಎಲಿಗಾರ,
ಮಾರ್ಕೆಟ ಧಾರವಾಡ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ನಾಗರಿಕರನ್ನು ಪತ್ರೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ಪೆಶಿಯಲ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೌಂಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ದರ. ಖಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೨-೫-೨೭ ನೇ ಇಸ್ವಿ

ಡಿಸ್ಟ್ರಿಕ್ಟ ಲೋಕಲಬೋರ್ಡಿನ ಶಿಕ್ಷಕರ ಸಂಬಳ ಕೊಡುವ ಹೊಸ ಪದ್ಧತಿ.

ಪೋಸ್ಟಖಾತೆ ತುಂಬುವ ಇಚ್ಛೆ.

ಶಾಲಾಖಾತೆಯು ಲೋಕಲಬೋರ್ಡಿಗೆ ಒಂದಂದಿನಿಂದ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಬಳವು ವೇಳೆ ವೇಳೆಗೆ ಹೇಗೆ ಮುಟ್ಟುವದೆಂಬುದು ಗಹನ ವಿಚಾರವಾಗಿರುತ್ತದೆ. ಸಂಬಳವು ಬೊಬ್ಬಾಟವಿಲ್ಲದೆ ಮುಟ್ಟಬೇಕೆಂದು ಹೊಸ ಹೊಸ ಯುಕ್ತಿಗಳನ್ನು ಮಾಡುತ್ತಾರೆ. ಆದರೆ ಆದಾವದೂ ಬಗೀ ಹರಿಯುವಿಲ್ಲ. ಮೂರು ಮೂರು ತಿಂಗಳಾದರೂ ಶಿಕ್ಷಕರಿಗೆ ಸಂಬಳ ದೊರೆಯುವದಿಲ್ಲ. ಹೊತ್ತು ಹೊತ್ತಿಗೆ ಸಂಬಳ ದೊರೆಯದ ಮೂಲಕ ಶಿಕ್ಷಕರು ಉದ್ರಿಯು ಅಂಗಡಿಗೆ ಹೋದ ಹೊರತು ಗತ್ಯಂತರವಿಲ್ಲ. ಮತ್ತು ಅಂಗಡಿಕಾರರು ಹೇಳಿದ ಬೆಲೆಗೊಟ್ಟ ಹೊರತು ಗತ್ಯಂತರವಿರುವದಿಲ್ಲ. ಶಿಕ್ಷಕರು ದುಡ್ಡಿನ ಪದಾರ್ಥಕ್ಕೆ ಎರಡು ದುಡ್ಡು ಕೇಳಕೊಳ್ಳುವರು. ಒಂದು ತಿಂಗಳ ಸಂಬಳವು ಮತ್ತೊಂದು ತಿಂಗಳಿಗೆ ಬರಹತ್ತಿದ್ದರಿಂದ, ಶಿಕ್ಷಕರ ದುಡ್ಡಿನ ಅಡಚಣೆಯು ಎಂದೂ ತಪ್ಪುವದಿಲ್ಲ.

ಶಿಕ್ಷಕರು ೨೫ನೆಯ ತಾರೀಖಿಗೆ ಪಗಾರ ಬಿಲ್ ಮಾಡಿಕಳಿಸಿರುತ್ತಾರೆ. ಇವರ ಪಗಾರಪತ್ರಕಗಳು ಅ್ಯಡಮಿನಿಸ್ಟ್ರೇಟರರ ಆಫೀಸಿನಲ್ಲಾಗಿ, ಸಂಬಳದ ವರಾತು ತಯಾರಾಗಿ, ತಾಲೂಕ ಮಾಸ್ತರರ ಕಡೆಗೆ ಹೋಗಲಿಕ್ಕೇ ಬಹಳ ದಿವಸಗಳು ಹತ್ತುತ್ತವೆಂದು ಶಿಕ್ಷಕರ ದೂರು ಇರುತ್ತದೆ. ಲೋಕಲ ಬೋರ್ಡಿನವರು ತಿಳಿಯಾಗುವ ತೊಡಕನ್ನು ತಪ್ಪಿಸುವದೇ ಒಂದು ಕರ್ತವ್ಯವೆಂದು ಖಂಡಿತವಾಗಿ ತಿಳಕೊಂಡರೆ ಶಿಕ್ಷಕರಿಗೆ ಸಂಬಳ ದೊರೆಯುವದಕ್ಕೆ ಅವಕಾಶ ಹತ್ತದು. ತಾಲೂಕಿನ ಮಾಸ್ತರರಿಗೆ ವರಾತು ಕಳಿಸಿದ ಬಳಿಕ ೨೧ ದಿವಸಗಳಲ್ಲಿ ಸಂಬಳ ಮುಟ್ಟುವದೆಂದು ಹೇಳುತ್ತಾರೆ. ತಾಲೂಕಿನಲ್ಲಿ ಸಂಬಳ ಭಾಗ ಮಾಡಿ, ಒಂದೊಂದು ವಾರದಲ್ಲಿ ಆ ಭಾಗದವರಿಗೆಲ್ಲ ಸಂಬಳ ಮುಟ್ಟಬೇಕೆಂಬ ಒಂದು ಕಟ್ಟು ಮಾಡಿದರೆ ಎಲ್ಲರಿಗೂ ಸಂಬಳ ಮುಟ್ಟುವದು; ಮತ್ತು ಆಯಾ ಭಾಗದ ಶಿಕ್ಷಕರು ತಮ್ಮ ತಿಂಗಳ ೧ನೇ ತಾರೀಖು ಇಂಥ ವಾರವೆಂದು ಗೊತ್ತು ಮಾಡಿಕೊಂಡು ಅಲ್ಲಿಯ ತನಕ ಶಾಂತವೃತ್ತಿಯಿಂದಿರುವರು. ಹುಬ್ಬಳ್ಳಿಯ ವರ್ಕಶಾಪಿನವರು ಪ್ರತಿ ತಿಂಗಳ ೧೫ನೇ ತಾರೀಖು ತಮ್ಮ ೧ನೇ ತಾರೀಖೆಂದು ತಿಳಕೊಂಡಿದ್ದಾರೆ. ಅದೇ ಪ್ರಕಾರ ಶಿಕ್ಷಕರೂ ಭಾವಿಸುವರು.

ಶಾಲಾಖಾತೆಯವರು ಈ ತರವಾಗಿ ಅಚ್ಚುಕಟ್ಟಿನ ವ್ಯವಸ್ಥೆ ಮಾಡದೆ, ಪೋಸ್ಟಖಾತೆಯ ಮುಖಾಂತರವಾಗಿ ಅಂದರೆ ಮನಿಯಾರ್ಡರದಿಂದ ಸಂಬಳ ಮುಟ್ಟಿಸುವ ವ್ಯವಸ್ಥೆ ಮಾಡುವ ಹಾಗೆ, ಸರಕ್ಯುಲರ ತೆಗೆದಂತೆ ತಿಳಿಯುತ್ತದೆ. ಲೋಕಲಬೋರ್ಡಿನವರೇ ತಮ್ಮ ವೆಚ್ಚದಿಂದ ಸಂಬಳ ಕಳಿಸುತ್ತಿದ್ದರೆ ಶಿಕ್ಷಕರು ತಕರಾರು ಮಾಡುತ್ತಿದ್ದಿಲ್ಲ. ಆದರೆ ಇವರ ಸಂಬಳದಲ್ಲಿ ಪ್ರತಿ ತಿಂಗಳಿಗೂ ಮನಿಯಾರ್ಡರದ ವೆಚ್ಚದ ಕತ್ತರಿ ಹಾಕುವರಾದ್ದರಿಂದ, ಶಿಕ್ಷಕರಿಗೆ ಈ ವ್ಯವಸ್ಥೆಯು ಬೇಡಾಗಿರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಕನಿಷ್ಠ ಒಂದು ಸಾವಿರ ಶಿಕ್ಷಕರಿದ್ದಾರೆ ಸಕ್ತಿಯ ಶಿಕ್ಷಣ ಪ್ರಾರಂಭವಾಯಿತೆಂದರೆ ಈ ಸಂಖ್ಯೆಯು ಇಮ್ಮಡಿಸುವದು. ನಾಲ್ಕಾಣೆಯಿಂದ ಒಂದು ರೂಪಾಯಿ ತನಕ ಮನಿಆರ್ಡರ ರೂಪದಿಂದ ಪ್ರತಿಯೊಬ್ಬ ಶಿಕ್ಷಕನ ಸಂಬಳದಲ್ಲಿ ಮುರಿ ಹಾಕುವದು ಯಾರಿಗೂ ನ್ಯಾಯವೆನಿಸದು. ಮತ್ತು ಲೋಕಲಬೋರ್ಡೇ ಈ ವೆಚ್ಚ ನೋಡಿಕೊಳ್ಳುವದಾದರೆ ಸಾರ್ವಜನಿಕ ದ್ರವ್ಯದ ದುರುಪಯೋಗವಾಗುವದು. ವ್ಯಕ್ತಿಶಃ ಒಬ್ಬೊಬ್ಬ ಶಿಕ್ಷಕನು ವರ್ಷದಲ್ಲಿ ನಾಲ್ಕಾರು ರೂಪಾಯಿ ಕಳಕೊಂಡರೆ ಲೋಕಲಬೋರ್ಡು ಹತ್ತಾರು ಸಾವಿರ ರೂಪಾಯಿ ಕಳಕೊಳ್ಳುವದು. ತನ್ನ ದುಡ್ಡಿಗೆ ಜಿಗಳಿ ಹತ್ತಬಾರದೆಂದೇ ಶಿಕ್ಷಕರ ಮೇಲೆ ಈ ಭಾರ ಹಾಕಬೇಕೆಂದಿರುವದೆಂದು ಧ್ವನಿತವಾಗುತ್ತದೆ.

ಇನ್ನೊಂದು ಸೂಚನೆ.

ಲೋಕಲಬೋರ್ಡಿನವರು ಮಾಸ್ತರರ ಸಂಬಳದೊಳಗಿಂದ ಪೋಸ್ಟ ಖಾತೆಯ ಟ್ರೇಜರಿಯನ್ನು ತುಂಬುವ ವಿಚಾರ ರಹಿತ ಮಾಡಿ, ತಾಲೂಕ ಮಾಸ್ತರರ ಬದಲಾಗಿ ತಾಲೂಕಿನ ಪ್ರೆಸಿಡೆಂಟರಿಗೆ ಸಂಬಳ ಕೊಡುವ ಅಧಿಕಾರವನ್ನು ಒಪ್ಪಿಸಬೇಕು. ತಾಲೂಕ ಮಾಸ್ತರರಿಗೆ ವರಾತ ಕಳಿಸುವಂತೆ ಪ್ರೆಸಿಡೆಂಟರ ಹೆಸರಿನಿಂದ ಕಳಿಸಬೇಕು. ಪ್ರೆಸಿಡೆಂಟರು ಬೊಬ್ಬಾಟವಾಗದಂತೆ ಸಹಜವಾಗಿ ಸಂಬಳ ಮುಟ್ಟಿಸುವರು. ತಾಲೂಕಿಗೆ ಇಂಥ ದಿವಸ ವರಾತು ಹೋಗಲಿಕ್ಕೇ ಬೇಕೆಂದು ನಿಯಮ ಮಾಡಿದರೆ ಸಮೀಪದ ಗ್ರಾಮಗಳ ಶಿಕ್ಷಕರು ಅಲ್ಲಿಗೆ ಹೋಗಿ ತಂ ತಮ್ಮ ಸಂಬಳ ತಕ್ಕೊಳ್ಳುವರು. ಹೀಗಾಗಿ ದೂರ ದೂರಿನ ಶಿಕ್ಷಕರಿಗೆ ಬೇಗನೆ ಸಂಬಳ ಮುಟ್ಟುವದಕ್ಕೆ ಬಹಳ ಸೋಯಿಯಾಗುವದು. ಈ ತರದ ಪ್ರಯತ್ನ ಮಾಡಿ, ಅನುಭವ ತಕ್ಕೊಳ್ಳಬೇಕೆಂದು ನಾವು ಆಗತ್ಯಪೂರ್ವಕವಾಗಿ ಸೂಚಿಸುತ್ತೇವೆ.

ಪರೀಕ್ಷಕರ ಚಲ್ಲಾಟ.

ಬಡವಿದ್ಯಾರ್ಥಿಗಳ ಗೋಳ್ಯಾಟ

ಭೂಮಿತಿ ಜಮಾಖರ್ಚ.

ನಂಬರು ೨

ಭೂಮಿತಿಯ ಮೊದಲನೆಯ ಪ್ರಶ್ನವನ್ನೇ ನೋಡಿರಿ. ತ್ರಿಕೋಣದ ಏಕರೂಪತೆಯನ್ನು ಸಿದ್ಧ ಮಾಡಲಿಕ್ಕೆ ಯಾವ ಸಂಗತಿಗಳು ಅವಶ್ಯವಾಗಿ ಬೇಕು? ಒಂದೇ ತ್ರಿಕೋಣಕ್ಕೆ ಏಕರೂಪತೆಯುಳ್ಳದು? ಮೋಲಿ ವಿದ್ಯಾರ್ಥಿಗಳು ತ್ರಿಕೋಣಗಳ ಎಂದು ಕಲ್ಪಿಸಿಕೊಳ್ಳುವರೆಂದು ಪರೀಕ್ಷಕರು ಕಲ್ಪಿಸಿರುವದೆಂದು ಹೇಳಿದರೂ ಮುಂದಿನ ಮಾತಿಗೆ ಯಾವ ಸಮಾಧಾನವನ್ನು ಹ್ಯಾಗೆ ಹೇಳಬೇಕು. ತ್ರಿಕೋಣಗಳ ಏಕರೂಪತೆಯನ್ನು ಸಿದ್ಧ ಮಾಡಲಿಕ್ಕೆ ನಾಲ್ಕು ಬೇರೆ ಬೇರೆ ಪಕ್ಷಗಳು ಇರುವವು. ಒಂದರ ಎರಡು ಭುಜಗಳು ಅವುಗಳ ನಡುವಿನ ಕೋನವು ಅನುಕ್ರಮವಾಗಿ ಇನ್ನೊಂದರ ಎರಡೂ ಭುಜಗಳಿಗೂ ಅವುಗಳ ನಡುವಿನ ಕೋನಕ್ಕೂ ಸರಿಯಾಗಿದ್ದರೆ ಆವೆರಡೂ ತ್ರಿಕೋಣಗಳು ಏಕರೂಪವಾಗುವವು. ಇಷ್ಟೇ ಬರೆದವನಿಗೂ ಈ ಪ್ರಶ್ನೆಗೆ ಸಂಬಂಧಿಸಿದ ೨-೩-೪ ಪಕ್ಷಗಳನ್ನು ಬರೆದವನಿಗೂ ಈಗಿರುವ ಪ್ರಶ್ನೆಯ ಸ್ವರೂಪದ ಮೇಲಿಂದ ಪೂರ್ಣ ಗುಣಗಳನ್ನು ಕೊಡಬೇಕಾಗುವದು. ಹೀಗೆ ಅನೇಕ ಅಥವಾ ಅನಿಶ್ಚಿತ ಉತ್ತರಗಳು ಬರುವಂತೆ ಪ್ರಶ್ನೆಯು ಹಾಕಿರುವದು ಪರೀಕ್ಷಕರ ಭಾಷಾ ಜ್ಞಾನವೋ? ಅಥವಾ ಬಡ ವಿದ್ಯಾರ್ಥಿಗಳನ್ನು ಗೋಳಾಡಿಸುವ ಹೊಸದೊಂದು ಯುಕ್ತಿಯೋ ಅಂದೇ ಹೇಳಬೇಕು. ೬ ನೆಯ ಪ್ರಶ್ನೆಯಲ್ಲಿ "ಬಹಿರ್ವಕ್ರ ಬಹುಕೋಣಾಕೃತಿಯು ....' ಎಂದಿರುವದು ಸಮಂಜಸವಲ್ಲದೆ ಬಹಿರ್ವಕ್ರ ಸರಳ ರೇಖಾಕೃತಿಯು ಎಂಬುದು ಅಷ್ಟು ಒಪ್ಪಲಾರದು.

ಜಮಾ ಖರ್ಚು— ೭ ನೆಯ ಪ್ರಶ್ನೆ ನೋಡಿರಿ. ಕೆಳಗಿನ ಶಬ್ದಗಳ ಭೇದವನ್ನು ಸ್ಪಷ್ಟೀಕರಿಸಿರಿ. ಎಂದರೇನು? ಶಬ್ದಗಳ ಭೇದವನ್ನು ಹೇಳುವ ಪ್ರಸಂಗವು ಯಾವಾಗ ಬರುವದ? ಬಾಕಿಗಳ ತಾಳೆಗೂ ಆಧಾವೆಗೂ ಏನು ಸಂಬಂಧವಿರುವದು? ಬಾಕಿ ಅಂದರೆ ಶಿಲಕು ಎಂದು ಅರ್ಥ ಮಾಡಿಕೊಂಡರೆ ಕೀರ್ದಿಯೊಳಗಿನ ಶಿಲಕಿಗೂ ರೋಖ ಶಿಲಕಿಗೂ ದಿನಾಲು (ಕೀರ್ದಿಯನ್ನು ಮುಗಿಸುವಾಗ) ತಾಳೆ ನೋ

ಪಡೆಕೊಳ್ಳಬೇಕಾಗುವದು. ಇದಕ್ಕೆ ಆಧಾರವೇನೂ ಏನೂ ಸಂಬಂಧವುಂಟೆ? ಈ ಶಬ್ದಗಳ ಭೇದವನ್ನು ಹೇಗೆ ಸ್ಪಷ್ಟೀಕರಿಸಬೇಕು? ಪರೀಕ್ಷಕರ ಭಾಷಾ ಪಾಂಡಿತ್ಯದ ಹೊಸದೊಂದು ಮಾದರಿಯದು ಇದಕ್ಕೂ ಮುಂದೆ ನೋಡಿರಿ. (೧೦ ನೆಯ ಪ್ರಶ್ನೆ) ಎಪ್ರಿಲ ೧ ನೆಯ ತಾರೀಖಿಗೆ ಕೆಳಗಿನಂತೆ ನಡೆದ ವ್ಯವಹಾರಗಳ ಜನಾಖರ್ಚ ಬರೆಯಿರಿ. ಇದರ ಮೇಲಿಂದ ಮುಂದೆ ಹೇಳುವ ವ್ಯವಹಾರಗಳೆಲ್ಲವು ಎಪ್ರಿಲ ೧ ನೇ ತಾರೀಖಿಗೆ ನಡೆದವುಗಳಂತಕ್ಕದ್ದು. ಆದರೆ (ಡ) ವಿಭಾಗದಲ್ಲಿಯ ನಾಲ್ಕನೆಯ ಮಾತು "ಕೆಲವು ದಿವಸಗಳಲ್ಲಿ ತಪ್ಪಿದ್ದದ್ದು...." ಎಂದಿರುವದರಿಂದ ಮೊದಲನೆಯ ತಾರೀಖಿನ ತರುವಾಯ ಕೆಲವು ದಿವಸಗಳ ಮೇಲೆ ತಪ್ಪು ತಿಳಿದು ೧೦೦ ರೂ ಕಡಿಮೆ ಬರತಕ್ಕದ್ದೆಂದು ತಿಳಿಯುತ್ತದೆ!! ಅಂದ ಮೇಲೆ ಈ ಮಾತು ಹೇಗೆ ಸಮಂಜಸವಾಗುವದೆಂಬದನ್ನ ಪಂಡಿತರಾದ ಪರೀಕ್ಷಕರೇ ಹೇಳಬೇಕಲ್ಲದೆ ಬಡವಿದ್ಯಾರ್ಥಿಗಳಿಗೆ ಸಾಧ್ಯವಿಲ್ಲ. ಮೇಲಾಗಿ ಎಪ್ರಿಲ ಮೊದಲನೆಯ ತಾರೀಖಿನ ಕೀರ್ದಿಯನ್ನು ಅಪೇಕ್ಷಿಸಿದ ವಿದ್ಯಾರ್ಥಿಯು ಮುಂದೆ ಕೆಲವು ದಿವಸಗಳ ಮೇಲೆ ನಡೆದ ವ್ಯವಹಾರದ ಕೀರ್ದಿಯನ್ನು ಹೇಗೆ ಬರೆಯಬೇಕು? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವು ಯಾವದೆಂಬದನ್ನು ಪರೀಕ್ಷಕರೇ ನಮ್ಮ ಕಡೆಗೆ ಕಳುಹಿದರೆ ಅದನ್ನು ಆಭಾರವಹಿಸಿ ನಮ್ಮ ಪತ್ರದಲ್ಲಿ ಪ್ರಕಟಿಸುವೆವು.

ರಾಜಮಾರ್ಗದ ಮೇಲೆ ಹಕ್ಕು-

ಮಸೀದಿಗಳ ಮುಂದೆ ವಾದ್ಯ ಬಾರಿಸುವ ಹಕ್ಕಿನ ನ್ಯಾಯದಲ್ಲಿ ಪಟನಾದ ಜಸ್ಟರು ಕೆಳಗೆ ಬರೆದಂತೆ ತೀರ್ಪು ಹೇಳಿದ್ದಾರೆ

"ಮುಸಲಮಾನರು ಕಲಹಕ್ಕೆ ಕಾರಣರಾಗಿದ್ದಾರೆ. ಹಿಂದೂ ಜನರ ಮೆರವಣಿಗೆಯಲ್ಲಿ ಅಡ್ಡ ಬರಲಿಕ್ಕೆ ಅವರಿಗೆ ಯಾವ ತರದ ಹಕ್ಕೂ ಇರುವದಿಲ್ಲ. ರಾಜಮಾರ್ಗದ ಮೇಲೆ ಹಾದು ಹೋಗಲು ಹಿಂದೂ ಜನರಿಗೆ ಪ್ರತಿಯೊಂದು ರೀತಿಯಿಂದಲೂ ಹಕ್ಕುಂಟು. ಹಿಂದೂ ಜನರು ಅತ್ಯಲ್ಪನೆಯ ವಿಷಯವಾಗಿ ಮಾತ್ರ ಕರ್ತವ್ಯದ ಅತಿಕ್ರಮಣ ಮಾಡಿಲ್ಲ."

ಹಾಯಕೋರ್ಟಿನವರು ಈ ತೀರ್ಪನ್ನು ಅಂಗೀಕರಿಸಿದರೆ- ಹಿಂದೂ ಮುಸಲಮಾನರೊಳಗಿನ ದೊಡ್ಡ ಕಲಹವು ನಿಂದುವದು.

ದಿಲ್ಲಿಯಲ್ಲಿ ಅನಾಹುತ-

ದಿಲ್ಲಿಯಲ್ಲಿಯ ಮುಸಲಮಾನರು ಹಿಂದೂ ಜನರ ಹಿಂಸೆಗೆ ಪ್ರವೃತ್ತರಾಗಿದ್ದಾರೆ, ದವಲತರಾಮನೆಂಬೋರ್ವ ವಿದ್ಯಾರ್ಥಿಯು ಕಾಲೇಜಕ್ಕೆ ಹೋಗುತ್ತಿದ್ದಾಗ ಅವನ ತಲೆ ಬುರುಡೆಯೊಡೆಯುವಂತೆ ಹೊಡೆದು, ಚೂರಿಯಿಂದ ಹೊಟ್ಟೆ ಇರಿದು ಕೊಂದು ಹಾಕಿದರು. ಕಾಯದೆಯ ಕಾಲೇಜದಲ್ಲಿರುವ ಒಬ್ಬ ವಿದ್ಯಾರ್ಥಿಯು ಟಾಂಗಾದಲ್ಲಿ ಕೂತು ಹೋಗುತ್ತಿದ್ದನು. ಇವನನ್ನು ಟಾಂಗಾದಿಂದ ಎಳೆದು, ಕೆಡವಿ, ಚೂರಿ ಚುಚ್ಚಿ, ಕೊಂದರು. ಮೂರನೆಯವನು ಬ್ಯಾಂಕಿನಿಂದ ಸಾವಿರ ರೂಪಾಯಿ ತಕ್ಕೊಂಡು ಹೋಗುತ್ತಿದ್ದನು. ಈತನನ್ನು ಥಳಿಸಿ, ಆ ರೂಪಾಯಿ ತಕ್ಕೊಂಡು ಪಲಾಯನ ಹೇಳಿಸಿದರು. ದವಲತರಾಮನ ಕೊಲೆಯ ಅಪರಾಧಿಗಳೆಂದು ಐವರನ್ನು ಹಿಡಿದಿದ್ದಾರೆ.

ಅವ್ವಟಲುಕ ಪತ್ರಕ್ಕೆ ತಾಕೀದಿ-

ಲಾಹೋರದಲ್ಲಿ ಅವುಟಲುಕವೆಂಬ ಹೆಸರಿನ ಮುಸಲಮಾನರ ವರ್ತಮಾನಪತ್ರವುಂಟು. ಆ ಪತ್ರವು ಹಿಂದೂ ಮುಸಲಮಾನ ದಂಗೆಯ ವಿಷಯವಾಗಿ ಅನೇಕವಾಗಿ ಸುಳ್ಳು ವಿಧಾನಗಳನ್ನು ಬರೆಯಿತು. ಸುಳ್ಳು ಬರೆಯಬೇಡಿರಿ. ಬರೆದರೆ- ಪತ್ರದ ಪ್ರತಿಗಳನ್ನು ಜಪ್ತ ಮಾಡುವೆವೆಂದು ಅಧಿಕಾರಿಗಳು ಇದಕ್ಕೆ ಭಯ ಹಾಕಿದ್ದಾರೆ. ಈಗ ಇದು ದಂಗೆಯ ವಿಷಯವಾಗಿ ಬರೆದ ಲೇಖಗಳನ್ನು ಅಧಿಕಾರಿಗಳಿಗೆ ಮುಂದಾಗಿ ತೋರಿಸಿ, ಅನಂತರ ಮುದ್ರಿಸುತ್ತಿರುವದು.

ರಶಿಯರು ಹೇಳುವ ಶರ್ತುಗಳು-

ಜಿನೇವ್ಹಾ ಪಟ್ಟಣದಲ್ಲಿ ಪಂಚಾಯತಿಯು ರಾಷ್ಟ್ರಗಳ ಸಂಪದಭ್ಯುದಯದ ಪರಿಷತ್ತು ಕೂಡಿದೆ. ಇದಕ್ಕೆ ಹಿಂದುಸ್ಥಾನ ಮೊದಲು ಮಾಡಿಕೊಂಡು, ಜಗತ್ತಿನಲ್ಲಿಯ ಎಲ್ಲ ದೇಶಗಳ ಪ್ರತಿನಿಧಿಗಳು ಹೋಗಿದ್ದಾರೆ. ರಶಿಯಾದ ಬೊಲ್ಶೆವಿಕ ಪ್ರತಿನಿಧಿಯೂ ಬಂದಿದ್ದಾನೆ ಈತನು ಅನ್ನುವದೇನಂದರೆ-

ಒಂದು ದೇಶದವರು ಮತ್ತೊಂದು ದೇಶಕ್ಕೆ ಕೊಡತಕ್ಕಂಥ ಸಾಲದ ಎಲ್ಲ ಬಾಂಡುಗಳನ್ನು ರದ್ದು ಮಾಡಬೇಕು. ಕೂಲಿಕಾರರ ಸಂಘಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ೩ ಒಂದು ದೇಶದವರು ಮತ್ತೊಂದು ದೇಶಕ್ಕೆ ಜೀವನಕ್ಕಾಗಿ ಹೋಗುವ ನಿರ್ಬಂಧಗಳನ್ನು ತೆಗೆದು ಹಾಕಬೇಕು. ೪ ಮಹಾಯುದ್ಧದಿಂದ ನಿರ್ಮಾಣವಾದಂಥ ಮ್ಯಾಂಡೇಟ ಮತ್ತು ಪ್ರೊಟೆಕ್ಟರೇಟಗಳನ್ನು ತೆಗೆದು ಹಾಕಿ, ಎಲ್ಲ ದೇಶಗಳನ್ನು ಸ್ವತಂತ್ರ ಮಾಡಬೇಕು. ೫ ಪರರಾಜರು ಚೀನದಲ್ಲಿ ಚಾಚಿದ ಕಾಲನ್ನು ಹಿಂದಕ್ಕೆ ತಕ್ಕೊಂಡು, ಅದು ತನ್ನ ಉತ್ಕರ್ಷವನ್ನು ಸಂಪೂರ್ಣ ಸ್ವಾತಂತ್ರ್ಯದಿಂದ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ರಶಿಯಾದ ಈ ಐದೂ ಶರ್ತುಗಳಿಗೆ ಸ್ವಾರ್ಥಪರಾಯಣವಾದ ಪ್ರಬಲ ದೇಶಗಳಾವವೂ ಒಪ್ಪಲಾರವು.

ಬಜೋದೆಯ ದಂಗೆಯಲ್ಲಿ ದಸ್ತಗಿರ ಮಾಡಲ್ಪಟ್ಟಂಥ ಮುಸಲಮಾನರ ಸಂಖ್ಯೆಯು ೨೨೯ ಆಗಿದೆ. ಇವರ ವಿಚಾರಣೆಯು ಒಬ್ಬ ಸ್ಪೇಶಲ ಜಜ್ಜರ ಮುಂದೆ ನಡೆಯುವದು.

ಲಾಹೋರದಲ್ಲಿ ಹಿಂದೂ, ಮುಸಲಮಾನ ಮತ್ತು ಶೀಖ ಪ್ರಮುಖರ ಕಮಿಟಿಯಾಗಿ, ಅಂಗಡಿಗಳನ್ನು ಪುನಃ ಪ್ರಾರಂಭಿಸುವಂತೆ ಪೇಟೆಗೆ ಹೋಗಿ ಹೇಳಬೇಕೆಂದು ಗೊತ್ತಾಗಿದೆ.

ಭಗವಾನ್ ಶ್ರೀ ಬಸವ ಜಯಂತ್ಯುತ್ಸವ
ಬ್ಯಾಡಗಿ.

ಕಳೆದ ಬುಧವಾರ ತಾ|| ೪-೫-೩೮ ನೇ ದಿವಸ ಪದ್ಧತಿಯಂತೆ ಶ್ರೀ ಬಸವ ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಕಾರ್ಯಕ್ರಮದ ಮೇರೆಗೆ ಆ ದಿವಸ ಪ್ರಾತಃಕಾಲ ೬ ರಿಂದ ೧೦ ಗಂಟೆಯ ವರೆಗೆ ಮುಡೇನೂರ ಶ್ರೀ ಪಟ್ಟದೇವರವರಿಂದ ಶ್ರೀ ಸ್ವಯಂಭೇಶ್ವರನಿಗೆ (ವೇದೋಕ್ತ) ರುದ್ರಾಭಿಷೇಕವು ಮಾಡಿಸಲ್ಪಟ್ಟು ಮಧ್ಯಾಹ್ನ ೧೨ ರ ವರೆಗೆ ಗಣಾರಾಧನೆಯ ಕಾರ್ಯವು ನಡೆಯಿತು.

ಸಾಯಂಕಾಲ ೫|| ಗಂಟೆಗೆ ಶ್ರೀ ಬಸವೇಶ್ವರನ ಪಲ್ಲಕ್ಕಿಯ ಉತ್ಸವವು, ಭಜನೆ ಹಾಗು ಬ್ಯಾಂಡ, ವಾಲಗ ಮೊದಲಾದ ವಾದ್ಯಗಳೊಡನೆ ಹೊರಟು ಪುರ ಪ್ರದಕ್ಷಿಣೆ ಮಾಡಿಕೊಂಡು ರಾತ್ರಿ ೮ ಗಂಟೆಗೆ ದೇವಾಲಯವನ್ನು ಸೇರಿತು. ಭಕ್ತ ಬಂಧುಗಳು ತಮ್ಮ ತಮ್ಮ ಬಾಗಿಲ್ಗಳನ್ನು ಬಹು ಭಕ್ತಿ ವಿಶ್ವಾಸದಿಂದ ಶೃಂಗರಿಸಿ ಪೂಜಿಸಿ ಮೆರವಣಿಗೆ ಹೊಂದಿಸಿದ್ದರು.

ಮೆರವಣಿಗೆಯ ಉತ್ಸವವು ಮುಗಿದ ಬಳಿಕ ಸಭೆಯು ಕೂಡುವದು ನಡೆಯತಕ್ಕದ್ದಿತ್ತು. ಆದರೆ ಮಳೆಯು ಬಂದದ್ದರಿಂದ ಅದು ನಿಂತುಹೋಯಿತು.

ಈ ಉತ್ಸವದ ಮೂಲಕವಾಗಿ, ಆ ದಿವಸ ಎಲ್ಲ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಅಲ್ಲದೆ ಬಸವಣ್ಣಗಳಿಗೆ ಸಂಪೂರ್ಣ ವಿಶ್ರಾಂತಿಯು ದೊರೆತಿತ್ತು.

ಎಸ್. ಸಿ. ಮುಚಡಿ,
ಸೆಕ್ರೆಟರಿ ಶ್ರೀ ಲಿಂಗರಾಜ ಲಾಯಬ್ರರಿ
ಬ್ಯಾಡಗಿ.

ನೋಟೀಸು.

—೦—

ಮ|| ರಾ|| ರಾ|| ನಾಗಪ್ಪಾ ಚಿನ್ನ ಬಸಪ್ಪಾ ಅಂಬ್ಲಿಯವರ ಜಾತಿ ಕುರುಬರ ಸಾ|| ರಾಣೇಬೆನ್ನೂರ ಇವರಿಗೆ–

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ. ಈಗ ೨-೩ ವರ್ಷದ ಕೆಳಗೆ ನಿಮ್ಮ ಖಾಸ ಮಗಳು ಲಕ್ಷ್ಮವ್ವ ಯೆಂಬುವಳನ್ನು ನನ್ನ ಖಾಸ ಮಗ ಮೂಕಬಸಪ್ಪಯೆಂಬುವನಿಗೆ ಕೊಡುವದು ನಿಶ್ಚಯ ಮಾಡಿ ನಮ್ಮ ಜಾತಿ ರಿವಾಜ ಪ್ರಕಾರ ನಮ್ಮ ದೈವಕ್ಕೆಲ್ಲಾ ಆಮಂತ್ರಣ ಕೊಟ್ಟು ಆರ ಸಮಕ್ಷಮ ಮತ್ತು ನಿಮ್ಮ ಊರ ಬುದ್ಧಿವಂತರ ಮತ್ತು ನಮ್ಮ ಊರ ಬುದ್ಧಿವಂತರ ಸಮಕ್ಷಮ ಹಸುರು ವೀಳ್ಯದ ಕಾರಣವನ್ನು ನೆರವೇರಿಸಿ ಯಲ್ಲರ ವಿದ್ಯಮಾನ ನಿಮ್ಮ ಚಿ|| ಲಕ್ಷ್ಮವ್ವನಿಗೆ ಹಾಕಿದ ಆಭರಣಗಳ ವಿವರ ಭಂಗಾರದ ಒಳಮೋಡು ೧ ತೊಲಿ ಸವರಿ ಜೊಕ್ಕ ಮತ್ತು ಭಂಗಾರದ ಸರಿಗೆ ೧ ತೊಲಿ ೮|| ಜೊಕ್ಕ ಭಂಗಾರದ ಉಗುತ್ರಿನ ಟೀಕಿ ೧ ತೊಲಿ ೨|| ಯಿಕ್ಕೇರಿ ಜೆಂಡವಾಲಿ ಜೋಡು ೧ ಭಂಗಾರದವು ತೊಲಿ || ವರಿ ಇಕ್ಕೇರಿ ಬೆಳ್ಳಿಯ ಪಟ್ಟಿ ತೋಣಿ ಜೋಡು ೧ ತೊಲಿ ೮೦ ಬೆಳ್ಳಿಯ ಒಂದಿ ೨ ತೊಲಿ ಅಜಮಾಸ ೨೦ ನಮಿನ ಪಾಟ ಬೆಳ್ಳಿಯವು ೧ ಅಜಮಾಸ ೧೨ ತೊಲಿ ಬೆಳ್ಳಿಯ ವಾಪಂಗ ಜೋಡು ೧ ಅಜಮಾಸ ತೊಲಿ ೧೭ ಮತ್ತು ಕಾರಣದ ಸಲುವಾಗಿ ತಂದ ಬಟ್ಟಿ ೧ ಮೊಳ ೧೪ ಕಿಮ್ಮತ್ತು ೧೦ ರೂಪಾಯಿ ೨ ಕುಪ್ಪಸಗಳು ಕಿಮ್ಮತ್ತು ೩ ರೂಪಾಯಿ ಈ ಪ್ರಕಾರ ಆಭರಣಗಳನ್ನು ನಮ್ಮ ಊರ ವ ನಿಮ್ಮ ಊರ ದೈವದರ ವಿದ್ಯಮಾನ ನಿಮ್ಮ ಮಗಳಿಗೆ ತೊಡಿಸಿ ಕಾರಣವನ್ನು ಸಾಂಗಗೊಳಿಸಿದದ್ದು ಅಂದಿನಿಂದಾ ನಮ್ಮ ನಿಮ್ಮ ಬಾಂಧವ್ಯವು ಸರಿಯಾಗಿ ಪರಸ್ಪರ ಹಿತಾಪೇಕ್ಷೆಯಿಂದ ಜರಗುತ್ತ ಬಂತು. ಆದರೆ ನಾವು ಈಗ ಅಜಮಾಸು ೨ ತಿಂಗಳ ಕೆಳಗೆ ಈ ವರ್ಷ ನಮಗೆ ಲಗ್ನ ಮಾಡಿಕೊಡಿರೆಂದು ಕೇಳಿದ್ದಕ್ಕೆ ನೀವು ಹೇಳಿದ್ದೇನಂದರೆ ಈಗ ಮನಿಯಲ್ಲಿ ಅನಾನುಕೂಲತೆ ಇರುವ ಮೂಲಕ, ಮುಂದಿನ ಕಾರ್ತಿಕ ಮಾಸಕ್ಕೆ ಮಾಡಿಕೊಡುತ್ತೇವೆ ಅಂತಾ ಹೇಳಿದಿರಿ ನಿಮ್ಮ ಅಡ್ಡಣೆಯು ಯೋಗ್ಯ ಅದೆ ಯೆಂದು ಕಂಡು ಬಂದದರಿಂದಾ ನಾವಾದರೂ ಹಾಗೇ ಆಗಲಿ ಯಂತಾ ಹೇಳಿದೆವು. ಆದರೆ ಈಗ ನೀವು ಸದರ ಕನ್ಯೆಯನ್ನು ಯೆರಡನೇ ಕಡಿಗೆ ಕೊಡುವ ಕೆಲಸದಲ್ಲಿ ಇದ್ದೀರಿ ಅಂತಾ ನಮಗೆ ತಿಳಿದು ಬಂದದ್ದು ಕಾರಣವೇನಿರೋ ನಮಗೆ ತಿಳಿಯಲಾರದು ಒಮ್ಮೆ ನಿಶ್ಚಯ ಮಾಡಿ ಹಸುರು ವೀಳ್ಯದ ಕಾರಣವನ್ನು ತೀರಿಸಿ ಮೇಲ್ಕಂಡ ದಾಗೀನೆಗಳನ್ನು ಹಾಕಿಸಿಕೊಂಡು ಈಗ ೨-೩ ವರ್ಷ ನಡೆಸಿಕೊಂಡು ಈ ಕನ್ಯೆಯನ್ನು ಯೆರಡನೇ ಕಡಿಗೆ ಕೊಡುವದೆಂದರೆ ನಮ್ಮ ಜಾತಿ ರಿವಾಜ ಮೀರಿ ನಡೆದಂತಾಗುತದಲ್ಲದೆ ನಮ್ಮ ಅಪಮಾನವನ್ನು ಕೂಡ ಮಾಡಿದಂತಾಗುವದು ಆದ ಕಾರಣಾ ಈ ನೋಟೀಸ ಮುಟ್ಟಿದ ೮ ದಿವಸದೊಳಗಾಗಿಯೇ ನಮ್ಮಲ್ಲಿಗೆ ಬಂದು ನಿಮ್ಮ ಮನಸ್ಸಿದ್ದರೆ ಲಗ್ನ ಮಾಡಿಕೊಡಬೇಕು ಇಲ್ಲವೇ ಏನೆಂಬದರ ಬಗ್ಗೆ ಬುದ್ಧಿವಂತರ ವ ದೈವದವರ ಸಮಕ್ಷಮ ಪೂರ್ಣ ಫೈಸಲಿ ಮಾಡಿಕೊಂಡು ಹೋಗುವವರೆಗೆ ಕನ್ಯೆಯನ್ನು ಎರಡನೇ ಕಡಿಗೆ ಕೊಡಲಿಕ್ಕೆ ಧರ್ಮದೃಷ್ಟಿಯಿಂದಲೂ ವ ವ್ಯಾವಹಾರಿಕ ದೃಷ್ಟಿಯಿಂದಲೂ ಬರುವಂತೆಯಿಲ್ಲಾ ಯಾಪೆಂಬುವದಕ್ಕಾಗಿ ತೀವ್ರ ನೋಟೀಸು ಮುದ್ದತ್ತಿನ ಒಳಗಾಗಿಯೇ ಒಂದು ಇತ್ಯರ್ಥಿಸಿಕೊಂಡು ಹೋಗಬೇಕು ಜರ ನೀವು ಬಾರದಿದ್ದರೆ ಅಪಮಾನ ಮಾಡಿದ ಬಗ್ಗೆ ವ ನಮ್ಮ ಆಭರಣಗಳ ಬಗ್ಗೆ ಮತ್ತು ಕಾರಣಕ್ಕಾಗಿ ಆದ ಖರ್ಚಿನ ಬಗ್ಗೆ ನಿಮ್ಮ ಮೇಲೆ ರೀತಿ ಪ್ರಕಾರ ಕೋರ್ಟಿನಲ್ಲಿ ದಾವಾ ಮಾಡುವವದಲ್ಲಿ ಬರುವದು ತಿಳಿಯುವದು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಅದೆ ತಿಳಿಯುವದು ತಾ|| ೧೦-೫- ೭ ಇಸ್ವಿ

ಭೀಮಪ್ಪ ಚಿನ್ನ ಹನುಮಪ್ಪ ಅಮಾತಿ ಸಾಕೀನ ಮಾಗೋಡು

ನೋಟೀಸು

—೦—

ಕರಬಸಪ್ಪಾ ತಂದಿ ಕರಿಯಪ್ಪಾ ನಾವಳ್ಳಿ ಸಾ|| ಶಿಲವಡಿ ಹಾಲಿವಸ್ತಿ ತಿರಲಾಪೂರ ಈತನಿಗೆ–

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಮಲ್ಲವ್ವ ಕೋಮ ಕರಬಸಪ್ಪಾ ನಾವಳ್ಳಿ ಸಾಕೀನ ಹಾಲಿವಸ್ತಿ ಅಣ್ಣಿಗೇರಿ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದವಿಯ ಗಂಡನಾಗಬೇಕು ಮದಿವೆಯಾಗಿ ಹತ್ತು ವರ್ಷವಾಯಿತು. ನನ್ನ ಹೊಟ್ಟೆಯಿಂದ ಒಂದು ಹುಡಿಗೆ ಹುಟ್ಟಿದೆ ಅದು ಈಗ ನಾಲ್ಕು ವರ್ಷದ್ದು ಇರುತ್ತದೆ ನನ್ನ ಹುಡಿಗೆಯು ಒಂದು ವರ್ಷದ್ದಿರುವಾಗ ನೀನು ದುರ್ವೆಸನಿಯಾಗಿ ವಿನಹಕಾರಣ ಜಗಳ ತೆಗೆದು ಹೊಡೆದು, ಪೀಡಿಸಿ, ಮನೆ ಬಿಟ್ಟು ಹೊರಗೆ ಹಾಕಿದಿ ಹೊರಗೆ ಹಾಕುವಾಗ ನ್ನ ಮೈಮೇಲಿನ ಯಾವತ್ತು ದಾಗೀನೆ ಕಸಕೊಂಡಿ ಹುಡಿಗೆಯ ಮೇಲಿನ ಬಾಳ್ಯಾಡಿಗೆಯ ವಸ್ತುಗಳನ್ನು ಸಹ ಬಿಡಲಿಲ್ಲ ಈ ಮಾತಿಗೆ ಮೂರು ವರ್ಷವಾಯಿತು ಆಗಿನಿಂದ ನಿನಗೆ ಬಂದೇ ನವನೆ ನನ್ನನ್ನು ಕರಕೊಂಡು ಹೋಗಿ ಸುರಳೀತ ರೀತಿಯಿಂದ ಪ್ರಪಂಚ ಮಾಡಿಕೊಂಡಿರಲಿಕ್ಕೆ ಹಕ್ಕಗಡೆಮುವವಿಂದಲೂ, ದೈವದವರಿಂದಲೂ ಹೇಳಿಸಿದೆ ಆದರೆ ನೀನು ದಿನಮೋಕ ಮಾಡಿದಿ ಮಗಳ ಮೇಲಿನ ಪ್ರೀತಿಯಿಂದ ಕರಕೊಂಡು ಹೋಗಿ ಎಂದು ಸಾಹುಕಾರರ ಹತ್ತರ ದೇಣಿ ಮಾಡುತಾ ಬಂದೆನು ನನ್ನ ಮತ್ತು ಕೂಸಿನ ಸಂರಕ್ಷಣೆಗಾಗಿ ಆದ ದೇಣೆಯು ಮೂರು ವರ್ಷಗಳಲ್ಲಿ ಮುನ್ನೂರು ರೂಪಾಯಿ ಆಗುತ್ತದೆ ಸಾಹುಕಾರರ ತಗಾದಿ ಹತ್ತಿರುತ್ತದೆ ಮುಂದೆ ಸಾಲ ಹುಟ್ಟಿವಲ್ಲದು ಕಾರಣ ನಿರ್ವಾಹವಾಗಿ ಈ ನೋಟೀಸು ಕೊಟ್ಟಿದ್ದೇನೆ ಇದು ಮುಟ್ಟಿದ ಎಂಟು ದಿವಸಗಳಲ್ಲಿ ಸದರ ದೇಣಿ ತೀರಿಸಿ ನನ್ನನ್ನು ಕರಕೊಂಡು ಹೋಗಿ, ಸುರಳೀತವಾಗಿ ಬಾಳ್ವೆ ಮಾಡಬೇಕೆಂದು. ಸಂಚಾರ ಚಾಪಿನ ಕೊಡಬೇಕು ಮತ್ತು ನನ್ನ ಮೈಮೇಲಿನ ದಾಗೀನೆ ಕೊಡಬೇಕು ಇದಕ್ಕೆ ತಪ್ಪಿದರೆ ನನ್ನ ಕೂಡ ಪ್ರಪಂಚ ಮಾಡುವದಕ್ಕೆ ನಿನಗೆ ಇಚ್ಛೆಯಿಲ್ಲೆಂದು ತಿಳಿದು ನಾನು ಎರಡನೆಯವನ ಉಚಿತ ಮಾಡಿಕೊಳ್ಳುವೆನು ಅಲ್ಲದೆ ನಿನ್ನ ಮೇಲೆ ನನ್ನ ಜೀವನ ಮತ್ತು ನನ್ನ ಮಗಳ ಜೀವನ ಮತ್ತು ಉಚಿತ ೧೦ ದಿನ ಮೇಲೆ ಬಾಕಿಯ ನಡಿಸಿಕೊಂಡು ಇದಲ್ಲದೆ ನಿನ್ನ ದೇಣಿಯಿಂದಾಗ ಸಾಲದ ಬಾಬತು ದಿವಾಣಿ ಕೋರ್ಟಿನಲ್ಲಿ ಯೋಗ್ಯ ದಾವಾ ಮಾಡುವೆನು ಅಂತಾ ಕೊಟ್ಟ ನೋಟೀಸು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿದೆ ತಿಳಿಯುವದು ತಾ|| ೧೧-೫ ೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಮಲ್ಲವ್ವಾ ಕೋಮ ಕರಬಸಪ್ಪಾ ನಾವಳ್ಳಿ ಇತಿ ಕೈದು ಇರುತ್ತದೆ.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಕಾಯ್ದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಗಲಗಲಿಯವರು ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ [illegible] ೧೯೩೭ | [illegible]

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಹನ್ನೆರಡಾ ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸು

—೦—

ಆಲಮಾ ಕೆಂದಿ ಶಂಕರೆವ್ವಾ ಬಂಗಿಯವರ ಸಾಕೀನ ನುಲಗುಂದ ಬಣಗಾರ ಓಣಿ ಇವನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡುವ ಶಂಕರೆವ್ವಾ ಕೋಂ ಆಲಮವ್ವಾ ಬಂಗಿಯವರ ಸಾಕೀನ ಅಣ್ಣಿಗೇರಿ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನೆಂದರೆ-

ನೀನು ನನ್ನ ಮದನಿಯ ಗಂಡನಾಗಬೇಕು. ಮದವೆಯಾಗಿ ಹತ್ತೆಂಟು ವರ್ಷವಾಯಿತು. ನೆರೆವು ನೂರು ನಾಲ್ಕು ವರ್ಷವಾಯಿತು ನನ್ನ ತವರ ಮನೆಯವರು ಕನ್ನನ್ನು ಜುಲುಮೆಯಿಂದ ನಿನ್ನ ಮ[illegible] ಕರಕೊಂಡು ಒಂದು ಬಟ್ಟ[illegible] [illegible] [illegible] [illegible] [illegible] [illegible] ಮಾಡಿ ಕರಕೊಂಡು [illegible] ಹೊರಗೆ [illegible] ನಾನು [illegible] ಈ [illegible] ಒಂದು ಕರಕೊಂಡು ಹೋಗಲಿಲ್ಲ. ತವರ ಮನಿಯವರು ನನ್ನ ಮನೆಯಿಂದ ಸಾಲ ಮಾಡಿ ಹೊಟ್ಟೆಗೆ ಹಾಕಿದ್ದಾರೆ ಆ [illegible] ರಕಮು ಎರಡು ನೂರು ರೂ ಸಾಲವಾಗಿರುತ್ತದೆ. ನೀನು ನನ್ನನ್ನು ಕರಕೊಂಡು ಹೋಗಬೇಕೆಂದು ಹೇಳಿ ಕಳಿಸಿದ್ದಕ್ಕೆ ದಿಗರುತ್ತರವಾದದ್ದರಿಂದ, ನಿನ್ನ ಮನಸ್ಸಿನಲ್ಲಿ ನನ್ನ ಜೋಪಾನವೆ ಮಾಡುವದು ಇರುವದಿಲ್ಲೆಂದು ತಿಳಿದು ಈ ನೋಟೀಸು ಕೊಟ್ಟಿರುತ್ತೇನೆ ನೀನು. ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಸಾಲಾತೀರಿಸಿ, ನನ್ನ ಯಾವತ್ತು ದಾಗೀನೆ ಮರತಕೊಟ್ಟು, ಆಸಾಡಕಾರ್ಯ ಮಾಡಿಕೊಂಡು ಯೋಗ್ಯ ರೀತಿಯಿಂದ ಬಾಳಿವೆ ಮಾಡಬೇಕು. ಹೀಗೆ ಇದಕ್ಕೆ ತಪ್ಪಿದರೆ- ನಾನು ಎಳೆದನೆಯವನನ್ನು ಉದಿಕೆ ಮಾಡಿಕೊಳ್ಳುವೆನು ಆನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕೆಯ ಗಂಡನ ಮೇಲೆ ಬಿಲಕೂಲ ನಡಿಯಲಾರದು ಮತ್ತು ಈ ನೋಟೀಸೇ ಸೋಡಪತ್ರವೆಂದು ತಿಳಿಯಬೇಕು ಮತ್ತು ಈ ವರೆಗೆ ನನ್ನ ತವರ ಮನಿಯವರಿಗೆ ದಸಾಲದ ಬಾಬತು ಇನ್ನೂರು ರೂಪಾಯಿಗಳ ದಸಿಯಿಂದ ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡಿ, ವಸೂಲ ಮಾಡುವೆನು ಈ ನೋಟೀಸಿನ [illegible] ನಿನ್ನ ಪಡಿಸು ಮೇಲಿಂದ [illegible] ಕೊಟ್ಟ ಸೋಡಪತ್ರದ ನೋಟೀಸು ತಿಳಿಯುವದು ತಾ|| ೧೧ ಮೇ ೧೯೩೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಶಂಕರೆವ್ವಾ ಕೋಂ ಆಲಮವ್ವಾ ಬಂಗಿಯವರ ಇಕಿ ಕೈಯು ಇರುತ್ತದೆ.

ವಿಜಯ.

ಧಾರವಾಡ ತಾ. ೧೩-೫-೨೭ ನೇ ಇಸ್ವಿ

ದೇವರ ಗುಡ್ಡದ ದೇವಸ್ಥಾನದಲ್ಲಿ ನೀರಿನ ಪೂರೈಕೆಯೂ, ಪಂಚರಪಾಂಡಿತ್ಯ ಪ್ರದರ್ಶನವೂ.

ಕರ್ನಾಟಕ ಪ್ರಾಂತದಲ್ಲಿ ದೇವರಗುಡ್ಡವು ಸುಪ್ರಸಿದ್ಧವಾದ ದೇವಸ್ಥಾನವು. ಈ ದೇವರಿಗೆ ನಡಕೊಳ್ಳುವ ಜನರು ಬಹಳ. ದೇವರಲ್ಲಿ ಅಂಥ ಮಹಾತ್ಮ್ಯವುಂಟು. ದೇವಾಲಯವು ಗುಡ್ಡದ ಮೇಲುಂಟು. ಅಂತೇ ಅದಕ್ಕೆ ದೇವರಗುಡ್ಡವೆಂಬ ಹೆಸರು ಬಂದಿದೆ. ದೇವರಿಗೆ ಸುಮಾರು ನಾಲ್ಕುವರೀ ಸಾವಿರದ ಉತ್ಪನ್ನವುಂಟು. ಮೂರೂವರೀ ಸಾವಿರದ ವೆಚ್ಚವುಂಟು. ದೇವಸ್ಥಾನದ ವ್ಯವಸ್ಥೆಯು ಧಾರವಾಡದ ಜಡ್ಜಸಾಹೇಬರ ಮೇಲ್ವಿಚಾರಣೆಯಲ್ಲುಂಟು. ಪಂಚರ ಕಮಿಟಿಯುಂಟು. ಮೇಲೆ ಹುದು ಹಗಾಮಿ ಮ್ಯುನಿಸಿಪಾಲಿಟಿಯುಂಟು. ಜಾತ್ರೆಯ ವೇಳೆಯಲ್ಲಿ ಮ್ಯುನಿಸಿಪಾಲಿಟಿಯು ಕಲೆಪಟ್ಟಿ ಕೂಡ್ರಿಸಿ, ತನ್ನ ವೆಚ್ಚ ನೋಡಿಕೊಳ್ಳುವದು. ಮ್ಯುನಿಸಿಪಾಲಿಟಿಗೂ, ದೇವಸ್ಥಾನದ ವ್ಯವಸ್ಥಾಪಕವಾದ ಪಂಚ ಕಮಿಟಿಗೂ ಏನೂ ಸಂಬಂಧವಿರುವದಿಲ್ಲ. ದೇವಸ್ಥಾನದಲ್ಲಿ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಶಿಲ್ಕುಂಟು. ಮ್ಯುನಿಸಿಪಾಲಿಟಿಯ ಉತ್ಪನ್ನಕ್ಕೂ ವೆಚ್ಚಕ್ಕೂ ಜಾಯಿಗೂಡಬೇಕಾದರೆ- ಸಾಕುಬೇಕಾಗುತ್ತದೆ.

ದೇವಾಲಯವು ಗುಡ್ಡದ ಮೇಲಿರುವದರಿಂದ ನೀರಿನ ಅನಾನುಕೂಲತೆಯಾಗಿರುವದು. ಎರಡು ಮೈಲುಗಳ ಮೇಲಿಂದ ನೀರು ತರಬೇಕಾಗುದೆ. ಸರಕಾರದ ಸ್ಯಾನಿಟರಿ ಖಾತೆಯವರು ನೀರಿನ ಅನಾನುಕೂಲತೆ ತಪ್ಪಿಸುವದಕ್ಕಾಗಿ ಹನ್ನೆರಡು ಸಾವಿರದ ಗ್ರಾಂಟು ಕೊಟ್ಟಿದ್ದಲ್ಲದೆ, ಹೂದೋಟ ಮಾಡುವದಕ್ಕಾಗಿ ಐದು ಎಕರೆ ಭೂಮಿಯನ್ನೂ ಕೊಟ್ಟಿದ್ದಾರೆ. ಗುಡ್ಡದ ಕೆಳಗೇ ಈ ತೋಟವಿದೆ. ಅಲ್ಲಿಯೇ ಪಂಚರು ಬಾವಿಯನ್ನು ತೆಗಿಸಿದ್ದಾರೆ. ಈ ಬಾವಿಗೆ ಇಂಜನ ಹಚ್ಚಿ ಪಂಪಿನಿಂದ ಮೇಲೆ ಧರ್ಮಶಾಲೆಗಳ ತನಕ ನೀರು ಒಯ್ಯುವ ಏರ್ಪಾಡಾಗತಕ್ಕದ್ದುಂಟು. ಇಲ್ಲಿಂದ ಗುಡಿಯು ಮುನ್ನೂರು ಫೂಟು ಎತ್ತರದ ಮೇಲಿದ್ದು, ಧರ್ಮಶಾಲೆಗಳು ನಡುವಿನಲ್ಲಿರುತ್ತವೆ. ಸರಕಾರದವರು ಕೊಟ್ಟ ಹನ್ನೆರಡು ಸಾವಿರ ರೂಪಾಯಿಗಳಲ್ಲಿ ಆರು ಸಾವಿರ ರೂಪಾಯಿಗಳು ಹೋದ ವರ್ಷ ಬಂದಿವೆ. ಈ ವರ್ಷ ಆರು ಸಾವಿರದ ಚಕ್ಕು ಬಂದಂತೆ ವರ್ತಮಾನವುಂಟು. ದೇವಸ್ಥಾನದ ಪಂಚರು ಹೋದ ವರ್ಷದ ರಕಮಿನಿಂದ ಬಾವೀ ಕಡಿಸಿದ್ದಾರೆ. ನೀರು ಬಿದ್ದಿದೆ. ಇಂಜನು ಮತ್ತು ಪಂಪು ತರಿಸಿದ್ದಾರೆ. ಆದರೆ ಈಗೇನೋ ಅವರಿಗೆ ನೂತನ ಸೀಕಂತಾಗಿ, ಇಂಜನು ಪಂಪು ಮುಂತಾದ ಹವ್ಯಾಸ ಬಿಟ್ಟು, ಇಂಜನು ಸಹ ಮಾರುವ ವಿಚಾರದಲ್ಲಿದ್ದಾರೆಂದು ನಮಗೆ ವಿಶ್ವಸನೀಯವಾಗಿ ತಿಳಿದಿದೆ. ಇಷ್ಟೇ ಅಲ್ಲದೆ ಈ ನೀರಿನ ಹವ್ಯಾಸವೂ ತಮಗೆ ಬೇಡ. ಚಕ್ಕು ಬಂದ ಗ್ರಾಂಟೂ ಬೇಡೆಂದು ತಮ್ಮ ಕಮಿಟಿಯಲ್ಲಿ ಠರಾವು ಮಾಡಿ, ಆ ಪ್ರಕಾರ ಮು. ಜಡ್ಜಸಾಹೇಬರಿಗೆ ತಿಳಿಸಿರುತ್ತಾರೆ. ಇವರಿಗೆ ವಿರುದ್ಧವಾಗಿ ದೇವರಗುಡ್ಡದ ಹಾಗು ಬೇರೆ ಭಾವಿಕ ಜನರು ನೀರು ಬೇಕು, ಪಂಚರ ಠರಾವನ್ನು ಅನುಮೋದಿಸಬಾರದೆಂದು ಇದೇ ಸಾಹೇಬರ ಕಡೆಗೆ ಅರ್ಜೀ ಮಾಡಿರುತ್ತಾರೆ.

ಪಂಚರು ಈ ತರದ ಪಾಂಡಿತ್ಯದ ಪ್ರದರ್ಶನವನ್ನೇಕೆ ಮಾಡಿಕೊಂಡರೆಂಬದು ತಿಳಿಯುವದಕ್ಕೆ ಮಾರ್ಗವಿಲ್ಲ. ಜಾತ್ರೆಯ ವೇಳೆಯಲ್ಲಿ ಸ್ವಚ್ಛ ಮತ್ತು ಆರೋಗ್ಯಕರವಾದ ನೀರಿನ ಸಮೃದ್ಧಿಯು ಪ್ರಸ್ತುತದಲ್ಲಂತೂ ದೊಡ್ಡ ಚಿಂತೆಯ ವಿಷಯವಾಗಿದೆ. ಸೊಗಲದ ಜಾತ್ರೆಯು ಪ್ರತಿಯೊಂದು ಜಾತ್ರೆಗೆ ಬುದ್ಧೀ ಕಲಿಸಿರುತ್ತದೆ. ಕೆರೆಯ ನೀರು ಕುಡಿದರೆ- ಬೇನೆ ಬರುವದು, ಬಾವಿಯ ನೀರು ಕುಡಿದರೆ ನೀರೋಗ್ಯವುಂಟಾಗುವದೆಂದು ಆರೋಗ್ಯ ಶಾಸ್ತ್ರದ ಸಿದ್ಧಾಂತವಾಗಿರುತ್ತದೆ. ಸರಕಾರದವರು ತಾವಾಗಿ ಹನ್ನೆರಡು ಸಾವಿರದ ಗ್ರಾಂಟು ಕೊಟ್ಟಿದ್ದಾರೆ. ಅದನ್ನು ಕಳಕೊಳ್ಳುವದು ಎತ್ತಣದ ನ್ಯಾಯ? ಇದು ಮ್ಯುನಿಸಿಪಾಲಿಟಿಯ ಕೆಲಸವೆಂದು ಒಂದು ವೇಳೆ ಪಂಚರ ಗ್ರಹಿಕೆಯಾಗಿರಬಹುದು. ಮ್ಯುನಿಸಿಪಾಲಿಟಿಯ ಯೋಗ್ಯತೆಯು ಎಷ್ಟುಂಟೆಂಬದನ್ನು ಮೇಲೆ ಹೇಳಿದ್ದೇವೆ. ಭಾವಿಕರು ದೇವಸ್ಥಾನಕ್ಕೆ ಬರುತ್ತಾರೆ. ಅವರಿಗಾಗಿ ನೀರು ನೆರಳು ಮಾಡಿಕೊಡುವದು ದೇವಸ್ಥಾನದ ಪಂಚರ ಕರ್ತವ್ಯವಾಗಿರುತ್ತದೆ. ಮೇಲಾಗಿ ಇದರಲ್ಲಿ ದೇವರ ಹಾನಿಯೇನೂ ಇರುವದಿಲ್ಲ. ದೇವರಿಗಾಗಿ ಬರುವಂಥವರಿಗೆ ಅತ್ಯುತ್ತಮ ವ್ಯವಸ್ಥೆ ಮಾಡಿಕೊಡುವದರಿಂದ, ಪರಿಸಿಯು ಹೆಚ್ಚೆಚ್ಚು ಕೂಡಿ, ದೇವರಿಗೆ ಆದಾಯವೇ ಆಗುತ್ತದೆ. ದೇವರ ಭಕ್ತರಲ್ಲಿ ಅನೇಕ ಜನರು ಶ್ರೀಮಂತರಿದ್ದು, ಅವರಿಗೆ ಹೇಳಿದರೆ- ಅವರೂ ಸಹಾಯ ಮಾಡುವರು. ಪಂಚರು ಈ ಪ್ರಕಾರ ಲೋಕಸಂಗ್ರಹ ಮಾಡಿಕೊಳ್ಳಬೇಕಲ್ಲದೆ, ಜಾತ್ರೆಗೆ ಕೂಡುವ ಜನರಿಗೆ ಅನಾನುಕೂಲತೆಯನ್ನು ಮಾಡಿ, ಅವರಿಂದ ಬೈಗಳನ್ನು ಶಾಪವನ್ನೂ ಪಡೆಯಬಾರದೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ಪಂಚರು ಸರಕಾರದಿಂದ ಬಂದ ದ್ರವ್ಯವನ್ನು ಹಿಂದಕ್ಕೆ ಬಿಡುವದು ಎಂದೆಂದಿಗೂ ಜಾಣತನವಾಗಲಾರದು. ಸರಕಾರದಿಂದ ಬಂದಷ್ಟು ಬಳಕೊಳ್ಳಬೇಕಲ್ಲದೆ, ಬಂದದ್ದನ್ನು ಬಿಡತಕ್ಕದ್ದಲ್ಲ. ದೇವಸ್ಥಾನವನ್ನು ಪೇಚಿನಲ್ಲಿ ತಂದು, ಅದರ ಕೈಕಾಲು ಕಟ್ಟಿ ಹಾಕುವಂಥ ಯಾವದೊಂದು ಶರ್ತು ಇದ್ದರೆ- ತಮಗೆ ಇಂಥ ಉಪಕಾರ ಬೇಡೆಂದು ಸರಕಾರಕ್ಕೆ ಹೇಳಬಹುದು. ಅಂಥ ಕರಾರವಾದರೂ ಇರುವದಿಲ್ಲ. ಕಾರಣ ಪಂಚರು ಈ ಬಗ್ಗೆ ಪುನಃ ವಿಚಾರ ಮಾಡಿ, ಮೊದಲಿನ ಠರಾವನ್ನು ರದ್ದು ಮಾಡಿಕೊಳ್ಳುವರೆಂದು ಆಶಿಸುತ್ತೇವೆ.

ಭಂಗಿಯ ಕೂಡ ಬ್ರಾಹ್ಮಣರ ಸಹಭೋಜನ.

ಮುಂಬಯಿಯಲ್ಲಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯುತ್ಸವ ನಡೆದಾಗ- ಒಂದು ದಿವಸ ಪ್ರೀತಿ ಭೋಜನವಾಯಿತು. ಈ ಭೋಜನದಲ್ಲಿ ಬ್ರಾಹ್ಮಣ, ಮರಾಠಾ, ಕ್ರಿಶ್ಚನ್, ಪಾರ್ಸಿ, ಮುಸಲಮಾನ, ಮಾದಿಗ, ಭಂಗಿ ಮೊದಲಾದವರೆಲ್ಲರೂ ಸೇರಿದ್ದರು. ಪಗಳೂಡ ಪ್ರಾಂತದ ವೀರವಾಮನರಾವ, ಪ್ರಸಿದ್ಧ ಪಾರ್ಸಿ ಗೃಹಸ್ಥನಾದ ಮಿ. ಭರೂಚಾ, ಕ್ರಿಶ್ಚನ್ ಲೇಖಕ ವಿಶಾರದರಾದ ಮಿ. ಜೋಸೆಫ, ಸುಪ್ರಸಿದ್ಧ ಅಸಹಕಾರಿಯಾದ ಮಿ. ಪಡವಿದ್ರಿ, ವಾಗಳೆ ಮತ್ತು ಕೃಷ್ಣ ಅಯ್ಯರ ಬೇರೆ ಮೊದಲಾದವರು ಒಂದೇ ಸಾಲಿನಲ್ಲಿ ಕೂತು ಭೋಜನ ಮಾಡುತ್ತಿದ್ದರು. ಈ ಅಪೂರ್ವ ಔತಣಕ್ಕೆ ಬ್ಯಾರಿಸ್ಟರ ಜಯಕರರಿಗೆ ಆಮಂತ್ರಣವಿದ್ದಿಲ್ಲ. ಊಟದ ವರ್ತಮಾನ ಕೇಳಿ ತಾವಾಗಿ ಹೋಗಿ ಅಗಾಂತುಕರಾಗಿ ಬಂದಿದ್ದೇವೆಂದು ಹೇಳಿ, ಎಲ್ಲರ ಕೂಡ ಪ್ರೀತಿಯಿಂದ ಉಂಡರು. ವೀರ ವಾಮನರಾವ ಮತ್ತು ಮಿ. ಭಾರುಚಾಸಾಹೇಬರ ನಡುವೆ ಭಂಗಿ ರಾಘೋಜಿಯು ಕೂತಿದ್ದನು. ಬ್ಯಾರಿಸ್ಟರ ಜಯಕರರು ಕಾಂಗ್ರೆಸ ಕಚೇರಿಯ ಸಿಪಾಯಿಯ ಹೆಗಲ ಮೇಲೆ ಕಯ್ಯಿಟ್ಟು ರೊಟ್ಟಿ ತಿನ್ನುತ್ತಿದ್ದರು. ಈ ಪ್ರಕಾರ ಬಹು ಪ್ರೇಮದಿಂದ ಊಟ ನಡೆದಾಗ, ಒಬ್ಬ ಭಂಗೀ ಹೆಣ್ಣುಮಗಳು ದೂರ ನಿಂತದ್ದನ್ನು ಕಂಡು, ಮಿ. ವಾಗಳೆಯವರ ಹೆಂಡತಿಯು ಆಕೆಯನ್ನು ಜಗ್ಗಿಕೊಂಡು ಬಂದು, ತನ್ನ ಹತ್ತರ ಕೂಡಿಸಿಕೊಂಡಳು. ಊಟದಲ್ಲಿ ಪಕ್ವಾನ್ನವಿರಬಹುದೆಂದು ಓದುಗರ ಬಾಯಿಗೆ ನೀರು ಬರಬಹುದು. ಬಕ್ಕರಿ ಮತ್ತು ಝುಣಕದ ಹೊರತು ಇನ್ನೊಂದಿದ್ದಿಲ್ಲ. ಶ್ರೀ. ಶಿವಾಜಿಯು ದಂಡಯಾತ್ರೆ ಮಾಡುತ್ತಿದ್ದಾಗ ಆತನ ಸೈನಿಕರು ಉಣ್ಣುವ ಊಟವು. ಶ್ರೀ ಶಿವಾಜಿಯ ಜಯಂತ್ಯುತ್ಸವದಲ್ಲಿ ಆತನ ಸ್ಮರಣೆಗಾಗಿ

ಬೇಕೆಂದು ಈ ಅಡಿಗೆಯ ಏರ್ಪಾಡು ಮಾಡಿದ್ದರು. ಊಟವಾದ ಬಳಿಕ ವೀರ ವಾಮನರಾಯರು ಮುಂದೆ ಹೇಳಿದಂತೆ ಭಾಷಣ ಮಾಡಿದ್ದಾರೆ.

" ನಾವೆಲ್ಲರೂ ಒಂದೆಡೆಯಲ್ಲಿ ಕೂತು ಅನ್ನೋದಕ ತೆಕ್ಕೊಳ್ಳುತ್ತಿರುವದು ಭಾವೀ ಸುಚಿನ್ಹವೇ ಸರಿ. ರೊಟ್ಟಿ ಮತ್ತು ಝುಣಕವು ಮಹಾರಾಷ್ಟ್ರೈಕ್ಯದ ನಿಜ್ಯದ ಊಟವು. ಪಾಲಯದಲ್ಲಿದಳವಾಯಿಯಿಂದ ಆಳಿನ ತನಕ ಎಲ್ಲರೂ ಒಂದೇ ಪಂಙ್ತಿಯಲ್ಲಿ ಕೂತು ಊಟ ಮಾಡುತ್ತಾ ಶ್ರೀ ಶಿವಾಜಿ ಮಹಾರಾಜನಿಗೆ ಸ್ವರಾಜ್ಯ ಸಂಪಾದಿಸಲಿಕ್ಕೆ ಸಹಾಯ ಮಾಡಿದರು. ಈ ಪ್ರಸಂಗದಲ್ಲಿ ಕೂಡಿದ ಜನರಲ್ಲಿ ಹುಟ್ಟಿದಂಥ ಐಕ್ಯದ ಭಾವನೆಯು ಅವರ ಸಾರ್ವಜನಿಕ ಕರ್ತವ್ಯಗಳಲ್ಲಿ ವ್ಯಕ್ತವಾಗಿ, ಆಳರಸರಿಂದ ಸ್ವರಾಜ್ಯವನ್ನು ಕಸಿದುಕೊಳ್ಳಲು ಸಹಾಯವಾಗಲೆಂದು ಆಶಿಸುತ್ತೇನೆ."

ಬರಮಾ ಆಯಿಲ ಕಂಪನಿಯ ವಖಾರಿನಲ್ಲಿ ದಂಗೆ.

ಗೋಳಿಬಾರ; ಅನೇಕರು ಘಾಯವಾದರು.

—೦—

ಹೆಚ್ಚಿಗೆ ಸಂಬಳಬೇಕೆಂದು ಮದ್ರಾಸಿನಲ್ಲಿರುವ ಬರಮಾ ಆಯಿಲ ಕಂಪನಿಯಲ್ಲಿ ಕೆಲಸ ಮಾಡುವ ಕೂಲಿಕಾರರು ಸಂಪು ಮಾಡಿ ಮೂರು ವಾರವಾಯಿತು. ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲೆನ್ನುವಂತೆ ಸಂಪಿನ ಅವಸ್ಥೆಯಾಯಿತು. ಎರಡೂ ಪಕ್ಷಗಳು ತಮ್ಮ ಬಿಗುವು ಬಿಡಲಿಲ್ಲ. ಕಳೆದ ಮಂಗಳವಾರದ ದಿವಸ ಕೂಲಿಕಾರರು ಕಂಪನಿಯ ವಖಾರಿನಿಂದ ಎಣ್ಣೆಯು ಹೊರಗೆ ಹೋಗದಂತೆ ದಾರಿಯಲ್ಲಿದ್ದ ತೆಂಗಿನಮರಗಳನ್ನು ಕೆಡವಿ ಅಡ್ಡ ಚಲ್ಲಿದರು. ಮತ್ತು ಎಣ್ಣೆಯ ಮೋಟಾರ ಲಾರಿಗಳ ಮೇಲೆ ಕಲ್ಲಿನ ಮಳೆ ಸುರಿಸಿದರು. ಕಂಪನಿಯ ಅನೇಕ ಕಾಮದಾರರು ಘಾಯವಾದರು. ಆಗ ಇವರು ಕೂಲಿಕಾರರ ಮೇಲೆ ಗುಂಡು ಹಾಕಿದರು. ಕೂಲಿಕಾರರು ಎಣ್ಣೆಯ ಲಾರಿಗಳಿಗೆ ಬೆಂಕಿ ಹಚ್ಚಿದರು. ಈ ಅನಾಹುತಗಳಲ್ಲಿ ೧೭ ಜನ ಕೂಲಿಕಾರರು ಗುಂಡು ಬಡಿಸಿಕೊಂಡು ಆಸ್ಪತ್ರೆ ಕಂಡರು. ಕಂಪನಿಯ ಲಾರಿಗಳು ಸುಟ್ಟದ್ದಲ್ಲದೆ ನೆರೆಯ ತೆಂಗಿನ ಬನವೂ ಸುಟ್ಟದೆ. ಎಣ್ಣೆ ಸುಟ್ಟು ಕಂಪನಿಗೆ ೩೦ ಸಾವಿರದ ನಷ್ಟ ತಗಲಿದೆ.

ಪಟ್ಟಿಗೆ ಪದ್ಧತಿಯ ಸತ್ಯಾಗ್ರಹ-

ಅಲೀಬಾಗದಲ್ಲಿ ಒಪ್ಪಿ ಜನರು ಪಟ್ಟಿ ಕೊಡಬಾರದೆಂಬ ಸಂಪು ಸತ್ಯಾಗ್ರಹವು ಪ್ರಾರಂಭವಾಗಿದೆ. ದೊಡ್ಡ ದೊಡ್ಡ ಇನಾಮುದಾರ ವತನದಾರರು ಸತ್ಯಾಗ್ರಹದಲ್ಲಿ ಸೇರಿದ್ದಾರೆ. ಈ ಪಟ್ಟಿಯನ್ನು ವಸೂಲ ಮಾಡಬೇಕೆಂದು ಅಧಿಕಾರಿಗಳು ಪಂಥಗಟ್ಟಿ ಜಪ್ತಿಯ ವಾರಂಟುಗಳನ್ನು ತೆಗೆದಿದ್ದಾರೆ. ಗ್ರಾಮಸ್ತರು ಈ ವಾರಂಟುಗಳನ್ನು ತಕ್ಕೊಂಡು ಮನೆ ಮನೆಗೆ ಹೋಗುವರು. ಆಯಾ ಮನೆಯವರು ಭತ್ತದ ಖಣಜ ತೋರಿಸುವರು. ಆದರೆ ಭತ್ತವನ್ನು ಅಳೆಯಲಿಕ್ಕೂ, ಪಂಚನಾಮೆ ಮಾಡಲಿಕ್ಕೂ ಅಶಿಕ್ಷಿತ ಸುಶಿಕ್ಷಿತರಾರೂ ಸಿಗದಾಗಿದ್ದಾರೆ ಸಪ್ತಿ ಕೊಡಲೀ ಕೂಡದೆಂದು ರೈತರು ಸತ್ಯ ಸಂಕಲ್ಪ ಮಾಡಿದ್ದಾರೆ.

ಕಾಯದೆಭಂಗಕ್ಕೆ ಮಹಾತ್ಮರ ಅನುಮೋದನ-

ಬಂಗಾಲದ ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿಸುವ ವಿಷಯವಾಗಿ ನಾಗಪೂರದವರು ಶಸ್ತ್ರದ ಕಟ್ಟಳೆಯನ್ನು ಮುರಿಯುವದಕ್ಕೆ ಮಹಾತ್ಮರ ಪೂರ್ಣ ಅನುಮೋದನವುಂಟು. ಮಹಾತ್ಮರು ವರ್ಧಾದಲ್ಲಿದ್ದಾಗ ಮಿ. ಆವರಿಯವರು ಕಾಯದೆಭಂಗದ ಯೋಜನೆಯನ್ನು ಅವರ ಮುಂದಿಟ್ಟರು. ಈ ಪ್ರಕಾರ ಕಾಯದೆಭಂಗ ಮಾಡುವದು ಅವಶ್ಯವೂ ನ್ಯಾಯವಾದದ್ದೂ ಇರುತ್ತದೆಂದು ಮಹಾತ್ಮರು ಅನುಮೋದನ ಕೊಟ್ಟು, ಮಿ. ಆವರಿಯವರಿಗೆ ನೀವು ಸ್ವತಃ ಮಾತ್ರ ಕತ್ತೀ ಹಿಡಿಯಬೇಡಿರೆಂದು ಸೂಚಿಸಿದ್ದಾರೆ. ಕಮ್ಮಾನಸೀ ಮೊದಲಿನ ತುತ್ತಿಗೆ ಕುರಂಗ ಕಂಸರೆ- ಚಳವಳಿಯೋ ನಿಲ್ಲುವದೆಂದು ಈ ಪ್ರಕಾರ ಹೇಳಿರುತ್ತಾರೆ.

ಮಂತ್ರಿಯ ಸಾಹಸ-

ಬೇರೆ ಬೇರೆ ಇಲಾಖೆಗಳ ಮಂತ್ರಿಗಳು ಕರೆ-ಕಿಂದಿಯ ವ್ಯಾಪಾರ ನಿಲ್ಲಿಸಲು- ಮೀನ ಮೇಷ ಮಾಡಿ, ಶಕ್ಯಾಶಕ್ಯತೆಯ ಬಗ್ಗೆ ಸಂಶಯ ತಕ್ಕೊಳ್ಳುತ್ತಿರುವಾಗ, ಆಸಾಮದ ಮಂತ್ರಿಯಾದ ರೆವ್ಹರೆಂಡ ನಿಕಲಸನ್ನ ರೇಸಾಹೇಬರು ಅಫುಮಿನ ಸೇವನ ಮತ್ತು ಸಾರಾಯಿಯ ಕುಡಿತವನ್ನು ಪೂರಾ ನಿಲ್ಲಿಸಬೇಕೆಂದು ಅಭಿಪ್ರಾಯಪಟ್ಟು, ಮತದಾರರು ಒಮ್ಮ ಸಂಖ್ಯೆಯಿಂದ ಈ ವ್ಯಸನಗಳನ್ನು ಬಂದು ಮಾಡಬೇಕೆಂಬ ಅಭಿಪ್ರಾಯ ಪಟ್ಟರೆ- ಆ ಪ್ರಕಾರ ಅವನ್ನು ಬಂದು ಮಾಡಲೇ ಬೇಕೆಂದಿದ್ದಾರೆ. ಇವರು ತಮ್ಮ ಪ್ರಾಂತದಲ್ಲಿ ಬಂದುಮಾಡಿ, ಬೇರೆ ಪ್ರಾಂತಗಳಿಗೆ ಉದಾಹರಣೆ ಹಾಕಿ ಕೊಡುವರೆಂದು ಆಶಿಸುತ್ತೇವೆ.

ರಾಜ್ಯಭಾರಿಯ ಸರಂಜಾಮು-

ನೀವು ಸರ್ವಂಟ ಆಫ ಇಂಡಿಯಾದ ಸೇವಕರು ಬಿಡಿಯಾಳಾಗಿ ಈ ದೇಶಕ್ಕೆ ಬರಬೇಡಿರಿ. ರಾಜ್ಯಭಾರಿಗೆ ಒಪ್ಪುವಂತೆ ಸಕಲ ಸರಂಜಾಮುದೊಂದಿಗೆ ಬಂದು ಇಲ್ಲಿ ಒಂದು ಠಾಣೆಮಾಡಿಕೊಳ್ಳುವ ಮನೆಯಲ್ಲಿರಿ. ಅಂದರೆ ಹಿಂದೂ ಜನರು ಕೂಲಿಗಳೆಂದು ಇಲ್ಲಿಯ ಗೌರವರ್ಣೀಯ ನಿವಾಸಿಗಳ ತಿಳುವಳಿಕೆಯಾಗುವದೆಂದು ಶ್ರೀ ಅಂಡ್ರ್ಯೂಜ ಸಾಹೇಬರು ನಾಮುದಾರ ಶ್ರೀನಿವಾಸಶಾಸ್ತ್ರಿಯವರಿಗೆ ತಾರಿನಿಂದ ತಿಳಿಸಿದ್ದಾರೆ.

ವಿವಿಧ ವರ್ತಮಾನಗಳು.

—೦—

ಶ್ರೀ ಸುಭಾಷಚಂದ್ರ ಬೋಸರನ್ನು ಅಲ್ಮೋರಾಕ್ಕೆ ಕರಕೊಂಡು ಹೋಗುವರು. ದಾರಿಯಲ್ಲಿ ಕಲಕತ್ತೆಯಲ್ಲಿ ಹೆಸರಾದ ಡಾಕ್ಟರರು ಅವರ ಪ್ರಕೃತಿಯ ಪರೀಕ್ಷೆ ಮಾಡುವರು.

ಮಾಯಾವರಮದಲ್ಲಿ ಕೂಡಿದ್ದ ಬ್ರಾಹ್ಮಣೇತರ ಪರಿಷತ್ತಿನವರು ಐದು ವರ್ಷಗಳ ತನಕ ಬ್ರಾಹ್ಮಣರಿಗೆ ಕೆಲಸ ಕೊಡಬಾರದೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ಠರಾವು ಮಾಡಿದ್ದಾರೆ.

ಹಿಂದೀ ಭಾಷೆಯಲ್ಲಿ ನೂರಕ್ಕೆ ೯೦ ರಷ್ಟು ಸಂಸ್ಕೃತ ಶಬ್ದಗಳಿರುತ್ತವೆಂದು ಒಬ್ಬರು ಹೇಳುತ್ತಾರೆ. ಮರಾಟಿಯಲ್ಲಿ ಯಾವ ಪ್ರಮಾಣ ಬೀಳುವದು.

ಲಾಹೋರದಲ್ಲಿ ದಂಗೆಯ ಸಂಬಂಧ ಹೆಚ್ಚಿ ಕಾಲೇಜದಲ್ಲಿ ಓದುವ ೫೦ ವಿದ್ಯಾರ್ಥಿಗಳನ್ನು ಹಿಡಿದಿದ್ದಾರೆ. ಈ ಬಗ್ಗೆ ಪಟ್ಟಣದ ತುಂಬ ಚಳವಳಿಯಾಗಿದೆ.

ಲಾಹೋರದಲ್ಲಾದ ಒಂದೇ ದಿವಸದ ದಂಗೆಯಲ್ಲಿ ೨೫ ಜನರು ಸತ್ತರು. ಮತ್ತು ೧೮೦ ಜನರು ಘಾಯವಾಗಿದ್ದಾರೆ.

ಮದ್ರಾಸದಿಂದ ಗುಂಟೂರಿಗೆ ಪೋಸ್ಟಿನಿಂದ ಹೋಗುತ್ತಿದ್ದ ಹತ್ತು ಸಾವಿರದ ಇಂಪೀರಿಯಲ ಬ್ಯಾಂಕ ಹಕ್ಕು ಮಾಯವಾಗಿರುತ್ತದೆ.

ಗೋವೆಯಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆ ನಡೆದಿದೆ. ದಂಗೆಯಾಗಬಾರದೆಂದು ಪೋಲಿಂಗ ಆಫೀಸುಗಳ ಹತ್ತರ ದಂಡಿನ ಕಾವಲಿಟ್ಟಿದ್ದಾರೆ.

ಅಹಮದಾಬಾದಿನ ಕೋರ್ಟಿನ ಗೋಡೆ ಕೆಡವಿ ನಿಮ್ಮ ಜೀವ ತಕ್ಕೊಳ್ಳುವೆವೆಂದು ಅಧ್ಯಕ್ಷರಾದ ಶ್ರೀ ಪಟೇಲರಿಗೆ ಅನಾಮಧೇಯ ಪತ್ರ ಬರೆದಿರುತ್ತಾರೆ.

ಮುಲ್ಕೀ ಪರೀಕ್ಷೆಯ ಪರಿಣಾಮವು.

ಪುನಃ ಮುದ್ರಿಸಿದ್ದು.

ನಂಬರು ೩ ೫ ೧೧ ೧೩ ೧೪
೧೭ ೧೯ ೨೪ ೨೯ ೩೦ ೩೧ ೩೫
೩೮ ೪೦ ೪೯ ೫೦ ೫೩ ೫೮ ೫೯
೬೧ ೬೨ ೬೪ ೬೫ ೬೬ ೬೭ ೬೯
೭೦ ೭೩ ೭೪ ೭೬ ೭೯ ೮೪ ೮೫
೮೬ ೯೪ ೯೫ ೯೮

೧೦೩ ೧೦೫ ೧೦೬ ೧೦೭
೧೦೮ ೧೧೧ ೧೧೮ ೧೨೦ ೧೨೭
೧೨೮ ೧೩೧ ೧೩೪ ೧೪೭ ೧೪೩
೧೪೪ ೧೫೧ ೧೫೪ ೧೫೭ ೧೫೮
೧೫೯ ೧೬೦ ೧೬೨ ೧೬೪
೧೬೭ ೧೭೭ ೧೭೯ ೧೮೧ ೧೮೩
೧೮೫ ೧೮೬ ೧೮೮ ೧೯೨ ೧೯೪
೧೯೫ ೧೯೭

೨೦೭ ೨೦೯ ೨೧೩ ೨೨೧
೨೨೮ ೨೩೦ ೨೩೧ ೨೩೨ ೨೩೩
೨೩೬ ೨೪೦ ೨೪೪ ೨೪೫ ೨೪೭ ೨೪೮
೨೫೧ ೨೫೨ ೨೫೩ ೨೫೪ ೨೫೫ ೨೬೦
೨೬೫ ೨೬೬ ೨೬೭ ೨೭೧ ೨೭೪
೨೭೬ ೨೮೦ ೨೮೬ ೨೮೮ ೨೯೬
೨೯೩ ೨೯೪ ೨೯೭

೩೦೨ ೩೦೩ ೩೦೬ ೩೦೯
೩೧೩ ೩೧೬ ೩೧೮ ೩೧೯ ೩೨೦
೩೨೮ ೩೩೦ ೩೩೨ ೩೩೪ ೩೪೦
೩೪೨ ೩೪೫ ೩೪೬ ೩೪೯ ೩೫೬
೩೫೮ ೩೬೨ ೩೬೬ ೩೬೯ ೩೭೦
೩೭೨ ೩೭೬ ೩೭೮ ೩೮೦ ೩೮೪
೩೮೬ ೩೮೭ ೩೮೯ ೩೯೫ ೩೯೭

೪೦೧ ೪೦೫ ೪೦೭ ೪೦೯
೪೧೦ ೪೧೧ ೪೧೩ ೪೧೫ ೪೧೬
೪೨೨ ೪೩೧ ೪೩೩ ೪೩೭ ೪೩೮
೪೩೦ ೪೪೦ ೪೪೩ ೪೪೪ ೪೪೮
೪೫೧ ೪೫೨ ೪೫೪ ೪೫೬ ೪೬೦
೪೬೭ ೪೭೧ ೪೭೨ ೪೭೮ ೪೮೧
೪೮೯ ೪೯೨ ೪೯೩

೫೦೪ ೫೦೫ ೫೦೮ ೫೦೯
೫೧೮ ೫೧೩ ೫೧೪ ೫೧೬ ೫೨೧
೫೨೨ ೫೨೫ ೫೨೮ ೫೩೧ ೫೩೩
೫೩೯ ೫೪೦ ೫೪೧ ೫೪೪ ೫೪೬
೫೪೯ ೫೫೦ ೫೫೩ ೫೫೬ ೫೫೮
೫೬೩ ೫೬೪ ೫೬೫ ೫೬೭
೫೭೪ ೫೭೭ ೫೭೮ ೫೮೩ ೫೯೧
೫೯೪ ೫೯೬ ೫೯೭

೬೦೩ ೬೦೪ ೬೦೭ ೬೧೧
೬೧೭ ೬೨೦ ೬೨೧ ೬೨೬ ೬೨೮
೬೩೧ ೬೩೫ ೬೩೭ ೬೩೯ ೬೪೩
೬೪೪ ೬೪೭ ೬೫೦ ೬೫೩ ೬೫೬
೬೫೭ ೬೫೯ ೬೬೦ ೬೬೩ ೬೬೫
೬೭೪ ೬೭೫ ೬೭೬ ೬೮೦ ೬೮೧
೬೮೫ ೬೯೩ ೬೯೪ ೬೯೬

೭೦೧ ೭೦೩ ೭೦೪ ೭೦೫
೭೦೬ ೭೦೮ ೭೧೪ ೭೧೭ ೭೧೯
೭೩೦ ೭೩೫ ೭೩೬ ೭೪೩
೭೪೭ ೭೫೦ ೭೫೪ ೭೫೫ ೭೫೮
೭೬೦ ೭೬೩ ೭೬೭ ೭೭೧ ೭೭೪
೭೭೫ ೭೭೯ ೭೮೦ ೭೮೪ ೭೮೫
೭೮೬ ೭೮೭ ೭೯೧ ೭೯೩ ೭೯೪
೭೯೭ ೭೯೯

೮೦೦ ೮೦೧ ೮೦೩ ೮೦೪
೮೦೬ ೮೧೦ ೮೧೩ ೮೧೫ ೮೨೩
೮೨೫ ೮೨೬ ೮೨೭ ೮೨೮ ೮೩೩
೮೩೫ ೮೩೬ ೮೪೦ ೮೪೧ ೮೪೩
೮೪೪ ೮೪೫ ೮೪೮ ೮೫೧ ೮೫೩
೮೫೪ ೮೫೫ ೮೫೭

ಪ್ರತಿಯೊಂದು ನೂರಕ್ಕೆ ಬೇರೆ ವ್ಯಾರಾ ಮಾಡಿದ್ದೇವೆ. ನಡುವಿನ ಸ್ಥಳದಲ್ಲಿ ಸಂಶಯದ ಹೆಸರುಗಳಿರುತ್ತವೆಂದು ತಿಳಕೊಳ್ಳಬಾರದು.

ಧಾರವಾಡದಲ್ಲಿ ಉತ್ತರಾದಿ ಮಠದ ಪರವಾಗಿ ನಡೆಯುವ ಪಂಚಾಂಗ ವಿಚಾರ ಸಭೆ.

ಸಾಂಪ್ರತ ಪಂಚಾಂಗ ವಿಚಾರದಲ್ಲಿ ಭಿನ್ನ ಭಿನ್ನ ಮತಗಳು ರೂಢವಾಗಿರುವದರಿಂದ ಧಾರ್ಮಿಕ ವಿಧಿಯ ಆಚರಣೆಯಲ್ಲಿ ಗೊಂದಲವಾಗಿದೆ. ಈ ಬಗ್ಗೆ ಏನೆಂಬುದನ್ನು ನಿರ್ಣಯ ಮಾಡಬೇಕೆಂದು ಜನರು ಚಿನ್ನತ ಮಾಡಿಕೊಂಡಿದ್ದರಿಂದ ಈ ವಿಚಾರವಾಗಿ ಶ್ರೀಗಳವರು ಚಿತ್ತೈಸಿ ಈ ಬಗ್ಗೆ ಬೇರೆ ಬೇರೆ ಪಕ್ಷದ ವಿದ್ವಾಂಸರಿಗೆ ಕಾಗದ ಬರೆಯಿಸಿ ಅಭಿಪ್ರಾಯ ಕರಿಸಿದರು, ಬೆಳಗಾವಿಯಲ್ಲಿ ಈ ಸಂಬಂಧವಾಗಿ ವಿದ್ವಾಂಸರದೊಂದು ಸಭೆ ನೆರೆಯಿಸಿ, ಅವರೊಡನೆ ಚರ್ಚೆ ನಡಿಸಿ ಅಭಿಪ್ರಾಯ ಕೇಳಿದರು.

ಈ ಧಾರವಾಡ ಮುಕ್ಕಾಮಿನಲ್ಲಿ ಇದೇ ತಿಂಗಳ ೨೬-೨೭-೨೮ ತಾರೀಖುಗಳಲ್ಲಿ ಅಂದರೆ ವೈ॥ ೧೦-೧೧-೧೨ ತಿಥಿಗಳಲ್ಲಿ ಸಭೆ ನೆರೆದು ಜ್ಯೋತಿರ್ವಿದ್ವಾನ್ ಹಾಗೂ ಧರ್ಮಶಾಸ್ತ್ರ ವಿದ್ವಾನ್ ಜನರ ಸಪ್ರಮಾಣ ಅಭಿಪ್ರಾಯ ತೆಗೆದುಕೊಂಡು ಕೊನೆಯ ತೀರ್ಮಾನ ಕೊಡಬೇಕೆಂದು ನಿರ್ಣಯಿಸಿದ್ದಾರೆ.

ಸಭೆಯಲ್ಲಿ ನಡೆಯುವ ಚರ್ಚೆಗಳು. — ೧ ಸೂರ್ಯಚಂದ್ರರಿಗೆ ದೃಕ್ ಪ್ರತ್ಯಯ ಸಂಪಾದಕ ಹೊಸ ಸಂಸ್ಕಾರ ಕೊಟ್ಟು ಆಯಾ ಕಾಲದಲ್ಲಿ ಹೊಸದಾಗಿ ರಚಿಸಿದ ಗ್ರಂಥಗಳ ಆಧಾರದಿಂದ ಬಂದ ತಿಥಿಗಳನ್ನೇ ಎಲ್ಲ ಧರ್ಮ ಕಾರ್ಯಕ್ಕಾಗಿ ತೆಗೆದುಕೊಳ್ಳಬೇಕು, ಯಾತ್ರೆ, ವಿವಾಹ, ಗ್ರಹಣ, ಶೃಂಗೋನ್ನತಿ, ಮುಂತಾದ ಕಾರ್ಯಗಳಿಗೆ ಮಾತ್ರ ಆ ತಿಥಿಗಳನ್ನು ತೆಗೆದುಕೊಂಡು ವ್ರತ ಕಾರ್ಯಗಳಿಗೆ ಸಿದ್ಧಾಂತ ಗ್ರಂಥಗಳಿಂದ ಬಂದ ತಿಥಿಗಳನ್ನು ತೆಗೆದುಕೊಳ್ಳಬೇಕೇ?

೨ ವರ್ತಮಾನ ಮತ್ತು ಅಯನ ಗತಿ ಎಷ್ಟೆಂದು ತಿಳಿಯಬೇಕು.

೩ ಶಕೆ ೧೮೫೦ ಆರಂಭದಲ್ಲಿ ಅಯನಾಂಶವನ್ನು ಎಷ್ಟು ಹಿಡಿಯಬೇಕು.

೪ ಮೇಲಿನ ನಿರ್ಣಯಕ್ಕೆ ಬೇಕಾಗಿರುವ ವಿಶೇಷ ಚರ್ಚೆಗಳು ನಡೆಯುವವೆಂದು ಉತ್ತರಾದಿ ಮಠದ ದಿವಾಣರು ತಿಳಿಸುತ್ತಾರೆ.

ಕನ್ನಡ ನವನೀತ ಮಾಸ ಪತ್ರಿಕೆ

ಸಂಪಾದಕ- ಪಂಡಿತ ಬಸ್ಸಬಸವಪ್ಪ ಕವಲಿ.

ಸಮಾಜದ ಸರ್ವಾಂಗ ಸುಂದರ ಉನ್ನತಿಗೆ ತಕ್ಕವಾದ ಎಲ್ಲ ಬಗೆಯ ಲೇಖಗಳೂ ಬರುವವು. ವರ್ಷಕ್ಕೆ ೨ ಸಾಮಾಜಿಕ ನಾಟಕ ಕಾದಂಬರಿಗಳು ಪೂರ್ಣವಾಗುವವು. ವಾ. ವ. ಮೂರು ರೂಪಾಯಿ.

ಪತ್ತೆ
ನವನೀತ ಕಾರ್ಯಾಲಯ ಬ್ಯಾಡಗಿ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ
೧೨ ತಿಂಗಳಿಗೆ ೧೨—೮—೦ ರೂ
೬ " ೭—೦—೦ ರೂ
೪ " ೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ ೩—೧೨—೦ ರೂ
ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ.

ಈ ಪತ್ರವನ್ನು ಬನ್ನೂರಾಯರ ಬಾಳಾಚಾರ್ಯ ಮೊಸಳೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶನಿವಾರ ತಾರೀಖು ೧೪ ನೇ ಮೇ ೧೯೩೨ | ಸಂಚಿಕೆ ೯೯

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಪೆಟ್ಟಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಕಾಲರಾ ಪಿಲ್ಸ್

—೧—

ಜೇನ ಒಂದ ಮೂರು ತಾಸಿನೊಳಗಾಗಿ

ತಪ್ಪದೆ ಗುಣ.

—೧—

ನಾನು ಕಾಲರಾ ಜೇನಿಯ ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಮಾರಡಗಿ, ಶಿವಳ್ಳಿ, ಕರಡಿಗುಡ್ಡ, ಮಂಡಿನಾಳ ಮುಂತಾದ ಊರುಗಳಲ್ಲಿ ಗುಣ ಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತಿವೆ. ಪರಸ್ಥಳದವರಿಗೆ ವ್ಹಿ. ಪಿ. ಮುಂದಲಿ ಕಳಿಸುವೆವು. ವ್ಹಿ. ಪಿ ಸಂಗಡ ಅನುಪಾನ ತಿಳಿಸುವೆನು.

ಗೌಡಸಾಹೇಬ ಎಲಿಗಾರ,

ಮಾರ್ಕೆಟ ಧಾರವಾಡ.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ತರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂದಿಗೆಯು ಆರು ಲಕ್ಷದ ಮೇಲಿಂಟು. ಚೆಕ್ಕಿಂದ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವವು. ಠೇವಣಿಯವುಗಳು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ಕೊಡುವೆವು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಜತ್ತಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ನೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

೯೧೩೨

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೪-೫-೨೭ ನೇ ಇಸ್ವಿ

ರಾಯಲ ಕಮಿಶನದ ಚರ್ಚೆ.

ಹಿಂದುಸ್ಥಾನಕ್ಕೆ ಜವಾಬದಾರ ರಾಜ್ಯ ಪದ್ಧತಿಯ ಎರಡನೆಯ ಹಂತವನ್ನು ಎಷ್ಟರ ಮಟ್ಟಿಗೆ ಕೊಡಬೇಕೆಂಬದನ್ನು ಕುರಿತು ವಿಚಾರ ಮಾಡಲು ಒರುವ ರಾಯಲ ಕಮಿಶನದ ಬಗ್ಗೆ ಹಿಂದುಸ್ಥಾನ ಮತ್ತು ಇಂಗ್ಲಂಡದಲ್ಲಿ ನಿತ್ಯ ಚರ್ಚೆ ನಡೆದಿದೆ. ಹಿಂದೂ ದೇಶಕ್ಕೆ ವಿಶೇಷವಾದ ಹಕ್ಕುಗಳು ದೊರೆಯಬಾರದೆಂದು ಇಲ್ಲಿಯ ಯುರೋಪಿಯನ ವರ್ತಕ ಮತ್ತು ಸುಖವಸ್ತುಗಳ ಮತವಿದೆ. ಈ ಕಮಿಶನದಲ್ಲಿ ಹಿಂದುಸ್ಥಾನದ ವಾತಾವರಣದಿಂದ ದೂಷಿತನಾದಂಥ ಯಾವ ಗೃಹಸ್ಥನನ್ನೂ ನೇಮಿಸಬಾರದೆಂದು ಇವರು ಸರಕಾರಕ್ಕೆ ತಿಳಿಸಿದ್ದಾರೆ. ಇದೇ ಪ್ರಕಾರ ವಿಲಾಯತಿಯಲ್ಲಿರುವ ಇವರ ಪಕ್ಷದ ವರ್ತಮಾನಪತ್ರಗಳು ಬೊಬ್ಬೆಗುಟ್ಟುತ್ತಿರುವವು.

ರಾಯಲ ಕಮಿಶನದಲ್ಲಿ ಯಾರಾರು ಮೆಂಬರರಾಗುವರೆಂಬದನ್ನು ಹೇಳುವಿರಾ ಎಂಬದಾಗಿ ಪಾರ್ಲಮೆಂಟ ಸಭೆಯಲ್ಲಿ ಕೇಳಿದ ಪ್ರಶ್ನೆಕ್ಕೆ ಅರ್ಲ ವಿಂಟರಟನ ಸಾಹೇಬರು ಕಿವಿಯ ಮೇಲೆ ಕೈ ಇಟ್ಟುಕೊಂಡರು. ಮೆಂಬರರ ಹೆಸರು ನಿಶ್ಚಿತವಾದ ಹೊರ್ತು ಹೆಸರು ಹೇಳುವದು ಸಮಂಜಸವಾಗಲಾರದು; ಆದರೂ ತರ್ಕವಿತರ್ಕಗಳು ನಡೆದೇ ಇರುತ್ತವೆ. ಸರ ಥಾಮಸರೆಂಬವರು ಕಮಿಶನದ ಪ್ರೆಸಿಡೆಂಟರಾಗುವರೆಂದೂ ಉದಾರ ಪಕ್ಷದ ಒಂದು ವರ್ತಮಾನ ಪತ್ರದ ಸಂಪಾದಕರು ಒಬ್ಬ ಮೆಂಬರರಾಗುವರೆಂದೂ ಸುದ್ದಿಯಾಗಿರುವದು. ಸರ ಥಾಮಸಸಾಹೇಬರು ಲಂಡನದ ಮಾಯರಕೋರ್ಟಿನ ಜಡ್ಜರಾಗಿದ್ದಾರೆ. ಇವರು ಮೊದಲು ಹಿಂದುಸ್ಥಾನದ ಪಕ್ಷಿಯಿಂದ ಅಲ್ಲಿ ಹೊರಡುತ್ತಿದ್ದ ಇಂಡಿಯಾ ಪತ್ರದ ಸಂಪಾದಕರಾಗಿದ್ದರು. ಕಮಿಶನದಲ್ಲಿ ಎಲ್ಲ ಮೆಂಬರರು ಯುರೋಪಿಯನ್ನರೇ ಇದ್ದು, ಒಬ್ಬ ಹೆಸರಾದ ಹಿಂದೂ ಕಾಯದೆ ಪಂಡಿತರೊಬ್ಬರೇ ಹಿಂದೂ ಮೆಂಬರರಾಗುವರೆಂದು ನಡುವೆ ಒಂದು ಸುದ್ದಿಯಾಗಿತ್ತು. ಇದರಲ್ಲಿ ಎಷ್ಟು ತಥ್ಯವಿರುವದಿಲ್ಲ. ಸರಿಯರ್ಥ ಜನರು ಒಂದೂ ಬದ ಹೊರ್ತು ಹಿಂದುಸ್ಥಾನದ ಸಮಾಧಾನವಾಗಲಾರದೆಂಬದು ನಿರ್ವಿವಾದವಾದ್ದಷ್ಟು.

ಮಾಂಟೆಗ್ಯು, ಚೆಲ್ಮ್ಸ್‌ಫೋರ್ಡ ಕಮಿಶನದಲ್ಲಿ ರಾಜಕೀಯ ಸುಧಾರಣೆಗೂ ಸಂಸ್ಥಾನಿಕರಿಗೂ ಹೇಳುವಂಥ ಸಂಬಂಧವುಂಟಾಗಿದ್ದಿಲ್ಲ. ಪ್ರಕೃತದ ರಾಯಲ ಕಮಿಶನ ಮತ್ತು ಭಾವೀ ಹಕ್ಕುಗಳಲ್ಲಿ ಸಂಸ್ಥಾನಿಕರ ಹಾಗು ಭಾರತೀಯರ ಹಿತ ಸಂಬಂಧಗಳು ಕೂಡುವಂತಿರುತ್ತವೆ. ಬ್ರಿಟಿಶ ಪ್ರಜರು ರಾಜಕಾರಣದಲ್ಲಿ ಬಹಳ ಮುಂದೆ ಹೋಗಿ ಸಂಸ್ಥಾನಗಳ ಪ್ರಜರು ಅಂಧಃಕಾರದಲ್ಲಿರುವದು ವಿಷಮವಾಗುತ್ತದೆ. ಆದುದರಿಂದ ಇವರು ತಂತಮ್ಮ ಪ್ರಜರಿಗೆ ಎಷ್ಟು ಹಕ್ಕು ಕೊಡುವರು; ಮತ್ತು ಬ್ರಿಟಿಶ ಪ್ರಜರ ಹಕ್ಕುಗಳಿಗೂ ಇವರಿಗೂ ಎಷ್ಟು ಪ್ರಕಾರದ ಸಂಬಂಧವಿರಬೇಕೆಂಬ ವಿಚಾರವನ್ನು ಲಾರ್ಡ ಆರ್ಯರ್ವಿನ ಸಾಹೇಬರು ಈ ದೇಶದಲ್ಲಿ ನಡೆಸಿದ್ದಾರೆ.

ಸಂಸ್ಥಾನಗಳಿಗೆ ಹೋಗಿ ಅದರ ಸತ್ಕಾರ ಹೊಂದಿ ನೀವು ದೊಡ್ಡವರು; ನಾವು ಘನವಂತರೆಂದು ಪರಸ್ಪರ ಮುಖಸ್ತುತಿಯಗಿಂತ ಈಗಿನ ಇವರ ಪ್ರವಾಸದಲ್ಲಿ ರಾಜಕೀಯ ವಿಚಾರವು ಮುಖ್ಯವಾಗಿರುತ್ತದೆ. ಹಿಂದಿನ ವ್ಹಾಯಿಸರಾಯರಾದವರು ನಾಲ್ಕಾರು ಸಂಸ್ಥಾನಗಳಿಗೆ ದರ್ಶನಲಾಭ ಕೊಟ್ಟರೆ ಬಹಳವಾಗುತ್ತಿತ್ತು. ಆದರೆ ಇವರು ದೊಡ್ಡ ದೊಡ್ಡ ಸಂಸ್ಥಾನಗಳಿಗೆಲ್ಲ ದರ್ಶನ ಕೊಟ್ಟು, ಇದೇ ವಿಷಯವನ್ನು ಪ್ರಸ್ತಾಪಿಸುವರು. ಜುಲೈ ತಿಂಗಳಲ್ಲಿ ವ್ಹೈಸರಾಯಿಗೆ ಬರುವ ಉದ್ದೇಶವಾದರೂ ಇದೇ ಇರುವದೆಂದು ತರ್ಕವಾಗಿರುತ್ತದೆ. ಈ ಪೂರ್ವದಲ್ಲಿ ಸಂಸ್ಥಾನಿಕರೂ, ಅವರ ದಿವಾನರೂ ಇದೇ ವಿಚಾರ ಮಾಡಲು ಕಮೀಟಿ ಕೂಡಿದ್ದಾರೆ. ರಾಯಲ ಕಮಿಶನದಲ್ಲಿ ತಮ್ಮ ಪತಿಯಿಂದಲೂ ಒಬ್ಬ ಮೆಂಬರನಿರಬೇಕೆಂದು ಸಂಸ್ಥಾನಿಕರು ಹೇಳುತ್ತಿದ್ದಾರೆ.

ಕಳೆದ ಬುಧವಾರ ರಾತ್ರಿಯಲ್ಲಿ ಶ್ರೀ ಪಟೇಲರು ಪಾರ್ಲಮೆಂಟ ಸಭೆಯಲ್ಲಿ ಕೂಲಿಕಾರ ಮೆಂಬರರ ಹಾಗು ಪ್ರಮುಖ ಜನರ ಮುಂದೆ ಹಿಂದುಸ್ಥಾನದ ರಾಜಕೀಯ ಸ್ಥಿತಿಯನ್ನು ಕುರಿತು ಉಪನ್ಯಾಸಮಾಡಿದರು ಬಳಿಕ ಚರ್ಚೆಯೂ ನಡೆಯಿತು. ಉಪನ್ಯಾಸ ಮತ್ತು ಚರ್ಚೆಯ ಭಾಗಗಳು ಗುಪ್ತವಾಗಿರುತ್ತವೆ. ಬಾಗಿಲ ಹಾಕಿಕೊಂಡೇ ಮಾತಾಡಿದರು. ಆದರೂ ಕೂಲಿಕಾರರು ತಾವು ದಿವಾನಗಿರಿಗೆ ಬಂದಕೂಡಲೆ, ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯ ಕೊಡುವಂತೆ ಶ್ರೀ. ಪಟೇಲರಿಗೆ ಆಶ್ವಾಸನ ಕೊಟ್ಟಂತೆ ಸುದ್ದಿಯೊಡೆದಿದೆ. ಮೂರು ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ ತಿಳಿಯದೆ ಹೋಗುವದುಂಟೇ?

ಈಗಿನ ಮಂತ್ರಿಗಳಾದ ಕಾನ್ಸರವೇಟಿವ್ಹರು ಸಕ್ಕರೆಯನ್ನು ಬೇಕಾದಷ್ಟು ಅಗ್ಗ ಮಾಡುತ್ತಾರಲ್ಲದೆ, ಅದನ್ನು ಹಿಂದುಸ್ಥಾನಕ್ಕೆ ತಿನ್ನಗೊಡುವದಿಲ್ಲ. ಲಾರ್ಡ ಸಿಂಹರ ತರುವಾಯ [illegible] ಗವ್ಹರ್ನರರಾದರು. ಅವರೆಲ್ಲರೂ ವಿಳಿದೊಗೆದಿನವರೇ! ಗವ್ಹರ್ನರರನ್ನು ನೇಮಿಸುವ ವಿಷಯವಾಗಿ ತಮ್ಮ ಪದ್ಧತಿಯು ಹೇಗುಂಟೆಂದು ಪಾರ್ಲಮೆಂಟದಲ್ಲಿ ಮಾಡಿದ ಪ್ರಶ್ನೆಕ್ಕೆ ಇದ್ದ ಜನರಲ್ಲಿ ಉತ್ತಮ ಗುಣವಂತರೆಂತಲೇ ಅರ್ಲವಿಂಟರಟನ್ನ ಸಾಹೇಬರು ಉತ್ತರ ಕೊಟ್ಟಿದ್ದಾರೆ. ಗವ್ಹರ್ನರ ಕೆಲಸ ಕೂಡ ಕೊಡಲಿಕ್ಕೆ ಹಿಂದು ಮುಂದೆ ನೋಡುವ ಪ್ರಧಾನರಿಂದ ಬಹಳ ಆಶೆ ಮಾಡುವಂಥ ಹಕ್ಕುಗಳು ದೊರೆಯುವ ಬಗೆಯೆಂತು? ಹಿಂದೀ ಪ್ರಜರು ತೃಪ್ತಪಡುವಷ್ಟು ಹಕ್ಕು ದೊರೆತ ವಿನಹ ಹಿಂದುಸ್ಥಾನದಲ್ಲಿದ್ದ ಅಸಂತೋಷ ಹೋಗಲಾರದು. ಸಂಪ, ಸತ್ಯಾಗ್ರಹ ಮತ್ತು ಕಾಯದೆಭಂಗದ ಸುದ್ದಿಯೇ ದೇಶದ ತುಂಬ ಹರಡುವದು.

ಸ್ಕೂಲಬೋರ್ಡಿನ ಆ್ಯಡಮಿನಿಸ್ಟ್ರೇಟರರು.

ಧಾರವಾಡ ಡಿಸ್ಟ್ರಿಕ್ಟ ಲೋಕಲ ಬೋರ್ಡಿನವರು ಆ್ಯಡಮಿನಿಸ್ಟ್ರೇಟರರ ನೇಮಣೂಕಿಯ ವಿಷಯವಾಗಿ ಮಾಡಿದ ಅವಸರವೂ, ಅವಿಚಾರವೂ ಬಹಳ ದಿವಸ ಮರೆಯದಂಥ ನೋವು ಮಾಡಿತು. ಯಾವದೊಂದು ಕೃತ್ಯವನ್ನು ಸ್ವಜನಾಭಿಮಾನದಿಂದ ಮತ್ತು ಗುಣೈಕ ಪಕ್ಷಪಾತವಿಲ್ಲದೆ ಮಾಡುವದರಿಂದ ಹೇಗೆ ದಂತಭಗ್ನವಾಗುತ್ತದೆಂಬದು ಪೂರಾ ನಿದರ್ಶನಕ್ಕೆ ಬಂತು. ಸರಕಾರದವರು ಈ ನೇಮಣೂಕಿಯ ಮಂಜೂರಿಯ ಭಾಗವನ್ನು ತಮ್ಮ ಕಡೆಗಿಟ್ಟುಕೊಂಡಿದ್ದರಿಂದಲೇ ಈ ಬಗ್ಗೆ ಯೋಗ್ಯಾಯೋಗ್ಯತೆಯ ವಿಚಾರವಾಯಿತು. ಇಲ್ಲವಾದರೆ ಅನನುಭವಿಕ ಜನರು ಅನುಭವಿಕರಾದಂಥ ಶಿಕ್ಷಕರ ತಲೆಯ ಮೇಲೆ ಮೆಣಸು ಅರೆಯಲಿಕ್ಕೆ ಎಷ್ಟು ಅವಕಾಶ ಪತ್ತುತ್ತಿದ್ದಿಲ್ಲ. ತಮ್ಮ ಅಧಿಕಾರಕ್ಕೊಳಪಟ್ಟದ್ದೆಂದು ಚೀಫ ಆಫೀಸರರನ್ನು ನೇಮಿಸಿಕೊಳ್ಳುವರು. ಅಯೋಗ್ಯ ಜನರನ್ನು ನೇಮಿಸುವದರಿಂದ ವಿನಹಕಾರಣ ತಮಗೇ ಅಪಕೀರ್ತಿ ಎಂಬ ಉದಾಹರಣೆಗಳು ಅನೇಕ ಕಡೆಗೆ ಕಂಡು ಬಂದಿರುತ್ತವೆ. ಈ ತರದ ಅಪಕೀರ್ತಿಗಳು ಪುನಃ ಬರದಂತೆ ಮ್ಯುನಿಸಿಪಾಲಿಟಿಗಳೂ ಲೋಕಲಬೋರ್ಡುಗಳೂ ವ್ಯ ತುಂಬ ಎಚ್ಚರರಾಗಿರತಕ್ಕದ್ದು.

ಗದಗಬೆಟಗೇರಿ ಮ್ಯುನಿಸಿಪಾಲಿಟಿಯವರು ತಮಗೊಬ್ಬ ಸ್ಕೂಲಬೋರ್ಡ ಆ್ಯಡಮಿನಿಸ್ಟ್ರೇಟರನು ಬೇಕಾಗಿದ್ದಾನೆಂಬ ನೋಟೀಸನ್ನು ಪ್ರಸಿದ್ಧ ಮಾಡಿದ್ದಾರೆ. ಇದರಲ್ಲಿ ಅರ್ಜದಾರನು ಬಿ. ಎ. ಇರಬೇಕೆಂಬ ಶರ್ತು ಹಾಕಿದ್ದಾರೆ. ಬಿ. ಎ. ಕಿಂತ ಹೆಚ್ಚಿನ ಯೋಗ್ಯತೆ ಬೇಕೆಂದು ಇವರಿಗೆ ಹೊಳೆಯಬಿದ್ದದ್ದನ್ನು ಕಂಡು ನಮಗೆ ಸಖೇದಾಶ್ಚರ್ಯವಾಗಿರುತ್ತದೆ. ತಾಲೂಕಾ ಖಾತೆಯಲಿ ಶಿಕ್ಷಣದಲಿ ಅನುಭ-

ವ ಪಡೆಯಲಿಕ್ಕೆ ಬಿ ಎ. ದ ಮೇಲೆ ಬಿ. ಟಿ. ಪರೀಕ್ಷೆ ಕೊಡಬೇಕಾಗುತ್ತದೆ. ಇಂಥ ಬಿ. ಟಿ. ಪರೀಕ್ಷೆ ಕೊಟ್ಟವನು ಬೇಕೆಂದು ಶರ್ತು ಹಾಕಿದ್ದರೆ ನೆಟ್ಟಗಾಗುತ್ತಿತ್ತು. ಇನ್ನಾದರೂ ನೋಟೀಸಿನಲ್ಲಿ ದುರಸ್ತಿ ಮಾಡುವರೆಂದು ತಿಳಿಯುತ್ತೇವೆ.

ಬಿ. ಎ. ಪಾಸಾಗಿ, ಎಲ್ಲಾದರೂ ಕೆಲಸ ಮಾಡಿ, ಅನುಭವಿಕನೆನಿಸುವಂಥ ಶಿಕ್ಷಕನಿಗಿಂತ ಬಿ. ಟಿ. ತರಗತಿಯು ಹೆಚ್ಚಿನದಾಗುತ್ತದೆಂದು ಹೇಳಲವಶ್ಯವಿಲ್ಲ. ವಿದ್ಯಾಖಾತೆಯವರು ಬಿ. ಟಿ. ಪರೀಕ್ಷೆಯನ್ನು ಹೆಸರಿಗೆ ಇಟ್ಟಿಲ್ಲ. ಅದರಲ್ಲಿ ಅಂಥ ಯೋಗ್ಯತೆ ಮತ್ತು ಗುಣವಿರುವದು. ಕಾರಣ ಗವರ್ನಮೆಂಟಿನವರಾಗಲಿ, ಬೇರೆ ಸ್ಥಳಗಳ ಮ್ಯುನಿಸಿಪಾಲಿಟಿ, ಲೋಕಲ ಬೋರ್ಡುಗಳಾಗಲಿ, ತಮ್ಮ ಎಡ್ಮಿನಿಸ್ಟ್ರೇಟರನು ಕನಿಷ್ಠ ಪಕ್ಷಕ್ಕೆ ಬಿ. ಟಿ. ಇರಬೇಕೆಂಬ ಅಭಿಲಾಷೆತೊಡಬೇಕು. ಇದರಿಂದ ತಮಗೇ ಭೂಷಣವು. ಲೋಕಲಬೋರ್ಡಿನ ಮಂಜೂರಿಯ ಪ್ರಸಂಗದಲ್ಲಂತೂ ಇನ್ನೊಂದು ದೊಡ್ಡ ಆಧಾರವಾಗುವದು ಸ್ಥಳಕ್ಕೆ ತಕ್ಕ ಯೋಗ್ಯ ಗೃಹಸ್ಥನ ನೇಮಣೂಕಿ ಮಾಡಿಕೊಂಡರೆ- ಜನತೆಯಿಂದ ಅಪಶಬ್ದ ಬರದು. ಅಧಿಕಾರಿಗಳಿಂದ ತಕರಾರ ಬರದು ತಮಗೆ ದೊರೆತ ಅಧಿಕಾರದ ಸದುಪಯೋಗ ಮಾಡಿದ ಶ್ರೇಯಸ್ಸು ಬರುವದು. ಮತ್ತು ಇಂಥ ನೇಮಣೂಕಿಯ ದೆಸೆಯಿಂದ ಸೆಂಟ್ರಲ ಕಮಿಟಿ ಬೇಕೆಂಬ ವಾದ ಹುಟ್ಟಲಾರದು.

ಕೂಲಿಕಾರ ಸಂಘ-

ನಾನ- ಕೋ. ಆಪರೇಶನದ ಚಳವಳಿಯಲ್ಲಿ ಕೂಲಿಕಾರರ ಸಂಘ ಸ್ಥಾಪನೆ ಅಥವಾ ಅವುಗಳ ಬೆಳವಣಿಗೆಯ ವಿಷಯವಾಗಿ ಮಹಾತ್ಮರು ತಟಸ್ಥರಾಗಿದ್ದರು ಆದರೆ ಇತ್ತೀಚಿನ ಅನುಭವದಿಂದ ಕೂಲಿಕಾರ ಮತ್ತು ರೈತರ ಸಂಘಸ್ಥಾಪನೆ ಮಾಡಿ, ಅವರದೊಂದು ಶಕ್ತಿಯನ್ನು ಹುಟ್ಟಿಸಿದ ಹೊರತು, ರಾಜಕೀಯ ಚಳವಳಿಗೆ ಬಲ ಬರಲಾರದೆಂದು ಕಂಡು ಬಂದಿದೆ. ಶ್ರೀ. ಶಕಲಾತವಾಲಾನವರು ಬಂದು, ಈ ದೇಶದಲ್ಲಿ ಈ ಬೀಜವನ್ನು ಪೂರಾ ಬಿತ್ತಿ ಹೋದರು. ಮುಂಬಯಿಯ ಕಾಂಗ್ರೆಸ ಕಮಿಟಿಯವರು ಕೂಲಿಕಾರರ ಸಂಘ ಸ್ಥಾಪನೆ ಮಾಡಿ, ಅದರ ಶಕ್ತಿ ಬೆಳೆಸುವದಕ್ಕೆ ಪೂರ್ವ ಸಿದ್ಧತೆ ಮಾಡಿ, ಇದರ ವೆಚ್ಚಕ್ಕಾಗಿ ಐವತ್ತು ರೂಪಾಯಿಗಳನ್ನು ಮಂಜೂರ ಮಾಡಿದ್ದಾರೆ.

ರುಂಡ ಹಾರಿಸುವ ಬೆದರಿಕೆಯ ಪತ್ರಗಳು-

ಹಿಂದೂ ಮಹಾಸಭೆ, ಹಿಂದೂ ಸಂಘಟನದ ಅಧ್ಯಕ್ಷರುಗಳಾದ ಡಾಕ್ಟರ ಮುಂಜೆ ಮತ್ತು ಹೆಡಗೇವಾರರಿಗೆ ಅಬ್ದುಲ ಕರೀಮನೆಂಬ ಸಹಿಯಿಂದ ಪತ್ರಗಳು ಬಂದಿವೆ. ಸ್ವಾಮಿ ಶ್ರದ್ಧಾನಂದರೊಬ್ಬರನ್ನೇ ಕೊಂದೆನೆಂದು ತಿಳಿಯಬೇಡಿರಿ. ಒಂದು ವರ್ಷದಲ್ಲಿ ನಿಮ್ಮ ಹಾಗು ನಿಮ್ಮ ಪಕ್ಷದ ಎಲ್ಲ ಜನರನ್ನು ಕೊಂದು ಹಾಕುವೆನೆಂದು ಈ ಪತ್ರಗಳಲ್ಲಿ ಹೆದರಿಸಿರುತ್ತಾರೆ. ಡಾಕ್ಟರ ದ್ವಯರು ಈ ಪತ್ರಗಳನ್ನು ಪೋಲೀಸ ಕಮಿಶನರಸಾಹೇಬರ ಕಡೆಗೆ ಕಳಿಸಿದ್ದಾರೆ.

ಮಹಾತ್ಮರ ಭೆಟ್ಟಿಗೆ ಓತುಮಾನ ಆಗಮನ-

ಬ್ರಹ್ಮದೇಶದ ಟಿಳಕನೆಂತಿರುವ ಓತುಮಾನಾಸಾಹೇಬರು ಪ್ರಸ್ತುತದ ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡಲು ಮಹಾತ್ಮರನ್ನು ಕಾಣುವದಕ್ಕಾಗಿ ಬೇಗನೆ ನಂದೀ ಬೆಟ್ಟಕ್ಕೆ ಬರುವರು. ಬ್ರಹ್ಮದೇಶ ಮತ್ತು ಹಿಂದುಸ್ಥಾನದಲ್ಲಿ ಕಂಡು ಬಂದ ಔದಾಸೀನ್ಯವನ್ನು ನೋಡಿ ಇವರು ಬಹುವಾಗಿ ಮನಮರುಗಿದ್ದಾರೆ. ಪುನಃ ರಾಜಕೀಯ ಕೋಲಾಹಲಕ್ಕೆ ಚಾಲನೆ ಕೊಡಬೇಕೆಂಬುದೇ ಇವರ ವಿಚಾರವು. ಹಿಂದುಸ್ಥಾನ ಮತ್ತು ಬ್ರಹ್ಮದೇಶವನ್ನು ಅಗಲಿಸಬೇಕೆಂದು ಕೆಲ ಯುರೋಪಿಯನ್ನರೂ ಅವರ ಕಂಕುಳದೊಳಗಿನ ಕೂಸಾಗಿರುವ ಬ್ರಿಹ್ಮೀ ಜನರೂ ಹುಯಿಲೆಬ್ಬಿಸಿದ್ದಾರೆ. ಶ್ರೀ. ಓತುಮಾನಾಸಾಹೇಬರು ಇದು ಮನೆಮುರುಕತನದ ಕೃತ್ಯವೆಂಬ ಮತದವರಾಗಿದ್ದಾರೆ.

ಬಕರೀದದಲ್ಲಿ ಶಾಂತತೆಯ ರಕ್ಷಣೆ-

ಬಕರೀದ ಹಬ್ಬದಲ್ಲಿ ದಿಲ್ಲಿಯಲ್ಲಿ ದಂಗೆಯಾಗಬಾರದೆಂದು ಪೋಲೀಸರೂ ಮ್ಯಾಜಿಸ್ಟ್ರೇಟರೂ ಈಗಿನಿಂದಲೇ ಜಾಗ್ರತೆಯನ್ನು ನಡೆಸಿದ್ದಾರೆ. ಗೋಡೆಗೆ ಹಚ್ಚುವ ಅಥವಾ ಕೈ ಪತ್ರಿಕೆಯಾಗಿ ಹಂಚುವ ವಿಷಯಗಳನ್ನು ಮೊದಲು ಪಂಚರು ಓದಬೇಕು. ಅವುಗಳಲ್ಲಿ ಕಂಡು ಬರುವ ಆಕ್ಷೇಪಾರ್ಹ ಸಂಗತಿಗಳನ್ನು ತೆಗೆದು ಹಾಕಬೇಕು. ಪರಸ್ಥಳದವರಾರಿಗೂ ಪಟ್ಟಣದಲ್ಲಿ ಬರಗೊಡಬಾರದು. ಯಾವನಾದರು ಬಂದರೆ- ಅವನು ಸಂಭಾವಿತರ ಜಾಮೀನು ಕೊಡಬೇಕು. ಮ್ಯುನಿಸಿಪಾಲಿಟಿಯ ಮೆಂಬರು ತಂತಮ್ಮ ವಾರ್ಡಿನಲ್ಲಿ ತಿರುಗಾಡಿ, ಜನರ ವಿಚಾರಗಳ ನಿದಾನ ಮಾಡಬೇಕು. ಅವಶ್ಯ ಕಂಡರೆ- ಸದ್ಗೃಹಸ್ಥರನ್ನು ತಾತ್ಕಾಲದ ಮಟ್ಟಿಗೆ ಪೋಲೀಸ ಜಮೇದಾರರಾಗಿ ನೇಮಿಸಿಕೊಳ್ಳಬೇಕೆಂದು ಗೊತ್ತಾಗಿದೆ.

ಬಂಗಾಲದಲ್ಲಿ ಖಾಶೀಪೂರದ ಕಲೆಕ್ಟರರಾಗಿದ್ದ ಮಿ. ಸೇನಸಾಹೇಬರು ಬೇಟೆಗೆ ಹೋದಾಗ ಹುಲಿಯು ಇವರನ್ನು ಘಾಯಪಡಿಸಿತು. ಈ ಘಾಯಗಳಿಂದ ಸಾಹೇಬರು ಪರಲೋಕವಾಸಿಯಾದರು.

ಶ್ರೀಮಂತರ ಸೌಖ್ಯವೂ ಬಡವರ ದುಃಖವೂ.

—(೧)—

(ಲೇಖಕ- ಮಡಿವಾಳೇಶ್ವರಸುತ.)

ಭಾಮಿನಿ॥

ರಾಜಧನಿಕರು ತಮ್ಮ ತನ್ಮೊಗಳು।
ಮೋಜವಾನಿಯ ಮಾಡುತಾಗಲೆ।
ಭೋಜನವ ಮಾಡುವರು ಹೊಟ್ಟೆಯು ಹರಿಯುವಂದದಲಿ ॥
ಓಜೆಯಿಂದಲಿ ಸಾಹುರಂಗದ।
ನೋಜಗದಿ ಸಲೆ ಹೊತ್ತುಗಳೆವರು।
ರಾಜ ಸೌಖ್ಯವ ತಾವು ಪಡುತಿರಲಿತ್ತ ಕಡೆಯಲ್ಲಿ ॥ ೧ ॥

ಎಲೆಗಳೆಂಜಲು ಮುಸುರಿಗೋಸುಗ।
ಒಲಿದು ತಿರುಕರು ಜಗಳವಾಡುತ।
ಕಲಲ! ಕಲಕಲ! ಪೆನ್ನುತಿರೆಯೊಡೆ ಕರಗಿ ನೀರಾಯ್ತು ॥
ಜಲವು ಸುರಿದವು ಕಣ್ಗಳಿಂದಲಿ।
ಲಲಿತ ಕಂಠವು ದುಃಖದಿಂದಲಿ।
ಅಲಲ! ಬಿಗಿಯಿತು! ಫಾಲನೇತ್ರನೆ! ಮಾತುಬರದಾಯ್ತು ॥ ೨ ॥

ಕಲಿಯು ಮಹಿಮೆಯನೆಂತು ಪೇಳಲಿ।
ಛಲರೆ! ಎನ್ನಯ ಭರತಖಂಡದ।
ಹಲವು ಬಡವರು ದುಃಖಪಡುವದನೆಂತು ಸೈರಿಸಲಿ ॥
ಅಲಸ ಮಾಡದೆ ದೇವ ಪಾಲಿಸು।
ಅಲಲ! ನಿನ್ನಿಂದಾಗದಿದ್ದರೆ।
ಕೊಲೆಯ ಮಾಡೈ!! ಎನ್ನ ಬೇಗಲೆ ವೀರಶಂಕರನೆ!! ॥ ೩ ॥

ಸರಸ ಕಟಾಕ್ಷ ಮಾಲನೀಗಳೆ।
ಪರರ ದೇಶಕೆ ನೀವು ಕಳಿಸದೆ।
ಪರಮ ಸುಂದರ ಸರಕು ರಚಿಸಲು ಸಾಲೆ ತೆಗೆಯುವದೈ ॥

ನಿಜಾಮ ರಾಜ್ಯದಲ್ಲಿ ಹಣದ ಖಾತೆಯ ಮಂತ್ರಿಯಾದ ಮಿ. ಹೈದರಿಯವರಿಗೆ ಪುನಃ ಒಂದು ವರ್ಷದ ಕೆಲಸ ನೋಡುವ ಅವಧಿ ದೊರೆಯಿತು. ಈ ಪ್ರಕಾರ ಇವರ ಅವಧಿ ಹೆಚ್ಚಿದ್ದು, ಇದು ನಾಲ್ಕನೆಯ ಸಾರೆ.

ಹೈದರಾಬಾದಿನ ರೆಸಿಡೆಂಟರು ರಜೆ ತಕ್ಕೊಂಡು ವಿಲಾಯಿತಿಗೆ ಹೋಗತಕ್ಕವರಿದ್ದರು. ಆದರೆ ಅಲ್ಲಿಯ ವ್ಯವಸ್ಥೆಯು ಅಚ್ಚುಗಟ್ಟಾಗುವವರೆಗೆ ಇವರ ಪ್ರಯಾಣ ನಿಲ್ಲಿಸಲ್ಪಟ್ಟದೆ.

ನೋಟೀಸು

—೦—

ಜನಬಸಪ್ಪಾ ಬಿಂನ ಮುದಿಮಲ್ಲಪ್ಪಾ ಚಿಕ್ಕ ವಳ್ಳೇರ ತಳವಾರ ಸಾಕೀನ ಚಿಕ್ಕಣಜಿ ತಾಲ್ಲೂಕ ಕೋಡ ಈತನಿಗೆ—

ಕೆಳಗೆ ಸಹಿ ಮಾಡಿದವಳ ಕಡೆಯಿಂದ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನು ಇರುತ್ತೀದಿ ನಿನಗೆ ನನ್ನ ತಾಯಿಯಾದ ಬಸವ್ವಾ ಗಂಡ ಅಡಿವೆಪ್ಪಾ ಅಸುಂಡೀ ಇವಳು ನಿನ್ನನ್ನು ಮನಿ ಅಳಿಯತನಕ್ಕೆ ಇಟ್ಟು ಕೊಂಡು ಲಗ್ನದ ಖರ್ಚು ಯಾವತ್ತು ಅಂದರೆ ಅಜಮಾಸ (೩೦೦) ಮೂರು ನೂರು ರೂಪಾಯಿ ಹಾಕಿ ಲಗ್ನ ಮಾಡಿಕೊಟ್ಟಳು ನಾನು ಮೈನರೆದ- ಅಜಮಾಸು ಮೂರು ವರುಷ ಆಯಿತು ನೀನು ನನ್ನ ಕೂಡ ಮೈನೆರೆದ ಮೇಲೆ ೭ ೮ ತಿಂಗಳು ಚಲೋ ರೀತಿಯಿಂದ ಬಾಳ್ವೆ ಮಾಡಿದಿ ಅನಂತರ ಕರೆ ಎಂದಿ ದುರ್ವ್ಯಸನಕ್ಕೆ ಬಿದ್ದು ದಿನ ದಿವಸ ಕುಡಿದು ನನಗೆ ಹೊಡಿಯಲಿಕ್ಕೆ ಹತ್ತಿ ಬಹಳ ತ್ರಾಸ ಕೊಡಲಿಕ್ಕೆ ಹತ್ತಿದಿ ನೀನು ಪ್ರಸ್ಥಳ ಸಾರೆ ನನ್ನ ಜೀವಕ್ಕೆ ಅಪಾಯ ಆಗುವ ಹಾಗೆ ಹೊಡಿದು ಧಾಂದಲೆ ಮಾಡಿದಿ. ಈಗ ನಿನ್ನ ಕೃತಿ ನೋಡಿ ಊರಲ್ಲಿಯ ಪ್ರಮುಖರಿಗೆ ವ ನಮ್ಮ ಜ್ಯಾತ್ಯಸ್ತರಿಗೆ ಒಪ್ಪಿಸಿದೆ ಆನು ಅಂದರೆ ಅವರು ನಿನಗ ಬುದ್ಧೀ ಹೇಳಿದ್ದು ನಿನ್ನ ಮನಸಿಗೆ ಬಾರದೆ ನನ್ನ ತಾಯಿಯ ಮನೆ ಬಿಟ್ಟು ನಿನ್ನ ಊರಾಗ ಚಿಕ್ಕಣಜಿಗೆ ಹೋಗಿ ಅಲ್ಲಿ ಇರಲಿಕ್ಕೆ ಹತ್ತಿ ಅಜಮಾಸು ಒಂದು ವರುಷ ಆಯಿತು ಇಲ್ಲೀವರೆಗೆ ನೀನು ಒಂದು ಬಾಳ್ವೆ ಮಾಡಿಕೊಂಡು ಹೋಗತಕ್ಕ ಅಂಥಾ ಮಾಡಿದೆ ನೀನು ಬರಲಿಲ್ಲಾ ಸದರ ನಿಂಮ ಊರಲ್ಲಿ ರಂಡೀ ಇಟ್ಟು ಕೊಂಡು ಬಾಳ್ವೆ ಮಾಡತೀದಿ ನಿನ್ನ ದುರ್ವ್ಯಸನ ಸ್ಥಿತಿ ನೋಡಿ ನನಗೆ ಪ್ರಾಣದ ಭಯ ಬಂದು ಈ ನೋಟೀಸು ಕೊಡುವ ಭಾಗಬಿತ್ತು ಇದು ಮುಟ್ಟಿದ ಕೂಡಲೆ ೧೫ ದಿವಸದಲ್ಲಿ ನಾನು ಇಲ್ಲಿಯ ವರಿಗೆ ಸಾಲಾ ಮಾಡಿ ಹೊಟ್ಟೆ ತುಂಬಿಕೊಂಡದ್ದರಿಂದ ಆದರ ಬಾಬತು ನಂದು ನೂರು ಐವತ್ತು ೧೫೦ ರೂಪಾಯಿ ಸಾಲಾ ತೀರಿಸಬೇಕು ನೀನು ಕರಾರ ಪ್ರಕಾರ ನನ್ನ ತಾಯಿಯ ಮನಿಯಲ್ಲಿದ್ದು ಚಲೋ ರೀತಿಯಿಂದ ಬಾಳ್ವೆ ಮಾಡಬೇಕು ನೀನು ಉತ್ತಮ ರೀತಿಯಿಂದ ಇರುವ ಬಗ್ಗೆ ಜಾಮೀನು ಕೊಡಬೇಕು. ನೀನು ವಿನಯಾರಿಂದ್ರಾ ಯೇನಾದರೂ ನೋಡದಲಿನಂತೆ ಕುಡಿದು ವಗೈತೆ ತ್ರಾಸ ಕೊಡಲಿಕ್ಕೆ ಬಂದರೆ ನಿನ್ನ ಮೇಲೆ ಫಿ|| ದಿ ಮಾಡತೇನೆ ಈ ನೋಟೀಸು ಪ್ರಸಿದ್ಧವಾದ ಎರಡು ತಿಂಗಳ ತನಕಾ ನಿನ್ನ ದಾರಿ ನೋಡಿ ಇ [illegible] ಎಂದು ನನ್ನ ವಿಚಾ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೌನ್ಸ ಚಹಾ ಮತ್ತು ಕಾಫೀ ಸೋವಿ ದರದಿಂದ ಸಿಗುವದಲ್ಲದೆ, ಸೇರು ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ [illegible] ಮಾಡಿ ನಿಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ಕೊಂಡುಕೊಳ್ಳಬಹುದು. [illegible] ಕಡೆಗೆ ಪಸಾರವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿದ್ದುದೆ [illegible] ಕ ಪತ್ರಿಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ [illegible] ನ ಕಳಿಸಿ ಕೊಡುತ್ತೇವೆ ಆರ್ಡರ ಕೊಡುವದಾದರೆ ೧/೨ ಹಣವನ್ನು [illegible]

[ತಿಗುವ ಪತ್ತೆ]

ಏಜಂಟ-

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚ ಪರಾಂಜ ಪೈಕಾರಿ,

ವಾಚ ರಿಪೇರರ ವ ಡೀಲರ ಜೇಗಾಡಿಗಲ್ಲಿ ಹುಬ್ಬಳ್ಳಿ

ಪ್ರಕಾರ ವ್ಯವಸ್ಥಾ ಮಾಡಿಕೋತೇನೆ ತಿಳಿಯೋದು

ತಾ|| ೧೧ ೫-೧೯೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಫಕೀರವ್ವಾ ಕೋಂ ಜನಬಸಪ್ಪಾ ಚಿಕ್ಕವಳ್ಳೇರ ಸಾ|| ಕಾರಗಿ ತಾಲ್ಲೂಕ ಕೋಡ ಇತಿ ಮಾಡಿದ್ದು ಅದೆ.

ನೋಟೀಸು

—೦—

ಬಸನಗೌಡಾ ಭೀಮನಗೌಡಾ ಮಲಗೌಡ್ರ ಸಾಕೀನ ನಾರಾಯಣಪೂರ ತಾ|| ಶಿರಟ್ಟಿ ಇವನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವವಳು. ಈ ನೋಟೀಸಿನ ಮೂಲಕ ನಿನಗೆ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿರುತ್ತೀ ಅಜಮಾಸ ೪-೫ ವರ್ಷಗಳ ಹಿಂದೆ ನೀನು ಯರಡನೇ ಜನರ ಭುಲತಾಪಿನಿಂದ ನಿನ್ನನ್ನು ಹಿಡಿಸಿ ಮನಿಬಿಟ್ಟು ನನ್ನ ಮೈಮೇಲಿನ ದಾಗೀನೆಗಳನ್ನು ಕಸಕೊಂಡು ಹೊರಗೆ ಹಾಕಿದಿ ಆ ಲಾಗಾಯಿತ ನಾನು ಯರಡನೆ ಕಡಿಗೆ ಇದ್ದು ಸಾಲಾ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತಾ ಬಂದಿರುತ್ತೇನೆ. ಆ ಸಾಲಾ (೪೦೦) ರೂಪಾಯಿ ಆಗಿರುತ್ತದೆ ಮುಂದೆ ಸಾಲಾ ಹುಟ್ಟಬೊಲ್ಲದು ಸಾಲಗಾರರ ತಗಾದಿ ಬಹಳೇ ಆಗಿರುತ್ತದೆ. ಕಾರಣ ನೋಟೀಸು ಕೊಡುವ ಭಾಗ ಬಿತ್ತು. ಈ ನೋಟೀಸು ಮುಟ್ಟಿದ ೮ ದಿವಸಗಳಾಗಿ ನೀನು ಬಂದು ನನಗೆ ಯಾವ ರೀತಿಯಿಂದಲು ತ್ರಾಸು ಕೊಡದೆ ಸುಶೀಲತ ಪ್ರಪಂಚ ಮಾಡತೇನೆಂದು ಅಲ್ಲದೆ ನಾನು ಮಾಡಿದ ಸಾಲಾ ತೀರಿಸಿ ನನ್ನನ್ನು ಕರಕೊಂಡು ಹೋಗಬೇಕು. ಜರ ಇದಕ್ಕೆ ತಪ್ಪಿದರೆ ನಾನು ಸಾಲದ ಸಲುವಾಗಿಯೂ ಹೊಟ್ಟೆಯ ಸಲುವಾಗಿಯೂ ಯರಡನೆಯವನನ್ನು ಉಡಿಕಿ ಮಾಡಿಕೊಂಡು ಹೋಗತ್ತೇನೆ ಆ ಮೇಲೆ ನನ್ನ ಮೇಲೆ ಮತ್ತು ನನ್ನ ಉಡಕಿ ಗಂಡನ ಮೇಲೆ ನಿನ್ನಗು ಯಾವ ಥರದ ಹಕ್ಕು ಉಳಿಯಲಿಕ್ಕಿಲ್ಲಾ ಇದೇ ನೋಡಪತ್ರವೆಂದು ತಿಳಿಯತಕ್ಕದ್ದು ಅಂತ ಕೊಟ್ಟ ನೋಟೀಸು

ತಾ|| ೧೫-೫-೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಮರಿಯವ್ವಾ ಕೋಂ ಬಸನಗೌಡಾ ಮಲಗೌಡ್ರ ಸಾ|| ರಣತೂರು ತಾ|| ಶಿರಹಟ್ಟಿ ಇಕಿದು ಇರುತ್ತದ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೧—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ.

—೦೦೦—

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಮೇಲೆ ದಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ ಪಿ ಸ್ವೀಕಾರ ಮಾಡಿ ಉಪಕರಿಸುವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಜಾವ [illegible] ಯರಗೊಪ್ಪಕರೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ರವಿವಾರ ತಾರೀಖು ೧೫ ನೇ ಮೇ ೧೯೩೨ | ಸಂಚಿಕೆ ೧೦೦

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಪೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಜೆಟ್ಟಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಕಾಲರಾ ಪಿಲ್ಸ್

— o —

ಜೇನೆ ಒಂದ ಮಾತು ತ ಸಿದ್ಧೋಗಾಗಿ ತಪ್ಪದ ಗುಣ.

— o —

ನಾನು ಕಾಲರಾ ಜೇಡಿಯು ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ಆಣೆ ಇದೆ. ಧಾರವಾಡ, ಮೊರಬಗಿ, ಶಿವಳ್ಳಿ, ಕರಡಿಗುಡ್ಡ, ಮರೆವಾಡ ಮುಂತಾದ ಊರುಗಳಲ್ಲಿ ಗುಣ ಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತವೆ. ಪರಸ್ಥಳದವರಿಗೆ ಪ್ಹಿ. ಪಿ. ಯಿಂದಲೂ ಕಳಿಸುವೆವು. ಪ್ಹಿ. ಪಿ. ಸಂಗಡ ಅನುಪಾನ ತಿಳಿಸುವೆನು.

ಗೋಪಾಲಸಾಹೇಬ ಎಲಿಗಾರ,

ಮಾರ್ಕೆಟ ಧಾರವಾಡ.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಆರು ಲಕ್ಷದ ಮೇಲುಂಟು. ಚೆಕ ಮುಂತಾದವುಗಳಿಂದ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವವು. ಠೇವಿಯನ್ನು ಮತ್ತು ರೊಕ್ಕ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಹಾಗೀರದಾರ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ಸೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತೆ ಬೀಳುತ್ತದೆ.

ಎ. ಶಿ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಳು ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸ್ವಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ.

— —

ವಿಜಯ.

ಧಾರವಾಡ ತಾ- ೧೫-೫-೨೭ ನೇ ಇಸ್ವಿ

ಪರೀಕ್ಷಕರ ಚಳ್ಳಾಟಿ
ಬಡ ವಿದ್ಯಾರ್ಥಿಗಳ ಗೋಳ್ಯಾಟ

ನಂಬರು ೩

೩ ಭಾಷಾವಿಷಯ ಇತಿಹಾಸ ಭೂಗೋಲ ಗಳ ವಿಷಯದಲ್ಲಿ ಅಂಥ ಆಕ್ಷೇಪಾರ್ಹವಾದ ಅಂಶಗಳೇನೂ ತೋರಿಬರುವದಿಲ್ಲ.

೪ ಆರೋಗ್ಯವಿಜ್ಞಾನ ಮತ್ತು ಶಾಸ್ತ್ರೀಯ ವಿಷಯ.

೨ ನೆಯ ಪ್ರಶ್ನೆ— "ಅನ್ನಪಚನ ಅಂದರೇನು? ಚನ್ನಾಗಿ ಬರೆಯಿರಿ" ಅಂದರೆ ಇದಕ್ಕೆ ಅರ್ಥವೇನು? "ಚನ್ನಾಗಿ" ಈ ವಿಶೇಷಣದ ಸಾರ್ಥಕತೆಯು ನಮಗಂತೂ ಏನೂ ತೋರುವದಿಲ್ಲ. (ಮುಂದಿನ ಭಾಗ) ಸಾಮಾನ್ಯವಾಗಿ ನಾವು ಯಾವ ಪದಾರ್ಥಗಳನ್ನು ತಿನ್ನುತ್ತೇವೆ, ಅವುಗಳ ಪಚನ ಕ್ರಿಯೆಯು ಯಾವ ಪ್ರಕಾರವಾಗಿ ಆಗುತ್ತವೆ? ಪಚನ ಕ್ರಿಯೆಯು....... ಆಗುತ್ತವೆ. ಇದರೊಳಗಿನ ವ್ಯಾಕರಣವನ್ನು ಮೊದಲು ನೋಡಿರಿ. ಇನ್ನು ವಿಷಯ: ನಾವು ತಿನ್ನುವ ಬೇರೆ ಬೇರೆ ಆಹಾರದ ಪದಾರ್ಥಗಳ ಪಚನ ಕ್ರಿಯೆಯು ಬೇರೆ ಬೇರೆ ರೀತಿಯಾಗಿ ನಡೆಯುತ್ತವೆಯೆಂದು ಈ ಪ್ರಶ್ನೆಯು ಧ್ವನಿತಾರ್ಥವಾಗುತ್ತದೆ. ನೋಡಿರಿ ಶಾಸ್ತ್ರೀಯ ವಿಷಯದೊಳಗಿನ ಸಶಾಸ್ತ್ರವಾದ ಪ್ರಶ್ನೆ ಯನ್ನು!

೫ ನೆಯ ಪ್ರಶ್ನೆ— ಹವೆಯ ಒತ್ತುವಿಕೆಯ ಕಾರಣವೇನು? ಅದನ್ನು (ಹವೆಯನ್ನು- ಕಾರಣವನ್ನೋ ಒತ್ತುವಿಕೆಯನ್ನೋ?) ಯಾವ ಯಂತ್ರದಿಂದ ಯಾವ ಪ್ರಕಾರ ಎಣಿಸಲಿಕ್ಕೆ ಬರುತ್ತದೆ. ಒತ್ತುವಿಕೆಯನ್ನು ಎಣಿಸಬೇಕೋ ಕಾರಣವನ್ನು ಎಣಿಸಬೇಕೋ ಪರೀಕ್ಷಕರು ಹೇಳಲಿ. ಪಂಡಿತರಾದ ಪರೀಕ್ಷಕರಿಗೆ ಅಳೆಯುವದೂ ಎಣಿಸುವದೂ ಒಂದೇ ಎಂದು ತೋರುತ್ತದೆ. ಇದು ಅವರ ಶಾಸ್ತ್ರೀಯ ವಿಷಯದೊಳಗಿನ ಪರಿಭಾಷಿಕಗಳ ಪರಿಜ್ಞಾನದ ಸಾಕ್ಷಿಯಾಯಿತು. ವಾಕ್ಯಾರಂಭದಲ್ಲಿ ಬಂದಿರುವ ಸರ್ವನಾಮವು ಶಬ್ದಕ್ಕೆ ಹೆಚ್ಚು ಸಮೀಪದಲ್ಲಿದ್ದ ನಾಮಕ್ಕೆ- ಹೆಚ್ಚು ಸಂಬಂಧ ಪಡೆಯುತ್ತದೆಯೆಂಬ ವ್ಯಾಕರಣ ನಿಯಮವಂತೂ ಅವರಿಗೆ ನೆನಪಿರಲಿಕ್ಕೆ ಕಾರಣವೇ ಇಲ್ಲ.

ಇದೇ ಪ್ರಶ್ನೆಯ ಎರಡನೆಯ ಭಾಗದಲ್ಲಿಯೂ ಇದೇ ಗೊಂದಲ ಎರಡನೇ ವಾಕ್ಯದ ಆರಂಭದಲ್ಲಿರುವ "ಅದರಿಂದ" ಈ ಪದದಿಂದ ಸಾಧಕನ ಯಂತ್ರದಿಂದ ಎಂದು ಅರ್ಥ ಮಾಡಬೇಕೆಸೋ ಅಥವಾ ಸಾಧಕನ ಯಂತ್ರದಲ್ಲಿರುವ ತತ್ವದ ಮೂಲಕವಾಗಿ ಎಂದೋ ಎಂಬದು ಸ್ಪಷ್ಟವಾಗುವದಿಲ್ಲ. ಇಲ್ಲಿಯೂ ದೂರಾನ್ವಯ ದೋಷವಿದ್ದೇ ಇರುವದು.

ಸೇಫಟಿಮ್ಯಾಚಿಸ(೭ ನೆಯ ಪ್ರಶ್ನೆ) ಪ್ರಾಯಮಸ್ ಸ್ಟೋವ್ಹ ಥರ್ಮಾಮಿಟರ (ಪ್ರ. ೧೨) ಇವು ಯಾವ ಭಾಷೆಯೊಳಗಿನ ಶಬ್ದಗಳು? ಪರಭಾಷೆಯ ಪಾರಿಭಾಷಿಕಗಳೆಂದು ನೀವು ಹೇಳುವದಾದರೆ ಅವುಗಳ ವ್ಯಾಖ್ಯೆಗಳು ಹುಡುಗರ ಯಾವ ಪಾಠ ಪುಸ್ತಕದಲ್ಲಿ ಬಂದಿವೆ?

ಇವು ಭಾಷೆಯ ಸಂಬಂಧ ವಿಚಾರಗಳಾದವು- ಇನ್ನು ವಿಷಯವನ್ನು ನೋಡಿರಿ.

೪ ನೆಯ ಪ್ರಶ್ನೆಯೊಳಗಿನ ೧ ಮತ್ತು ೪ ನೆಯ ವಿಭಾಗಗಳೂ ಪ್ರಾಯಮಸ ಸ್ಟೋವ್ಹವೂ ವಿದ್ಯಾರ್ಥಿಗಳಿಗೆ ಗೊತ್ತುಪಡಿಸಿದ ವಿಷಯದ ಹೊರಗಿನ ಪ್ರಶ್ನೆಗಳಾಗಿವೆ. ೧೧ ನೆಯ ಪ್ರಶ್ನೆಯು ಭೂಗೋಲಕ್ಕೆ ಸಂಬಂಧಿಸಿದ ಪ್ರಶ್ನೆಯೆಂಬವದು ಹಿಂದಿನ ವರ್ಷಗಳ ಇದೇ ಪರೀಕ್ಷೆಯ ಭೂಗೋಲದ ಪ್ರಶ್ನೆಯ ಕಾಗದಗಳನ್ನು ಓದಿ ನೋಡಿದವರಿಗೆಲ್ಲಾ ಗೊತ್ತಿರುವದು. ಹಾಗಲ್ಲದಿದ್ದರೆ ಪ್ರಶ್ನೆಯ ಕಾಗದಕ್ಕೆ ಸಂಬಂಧಿಸಿದ ವಿಷಯಗಳ ಪುಸ್ತಕಗಳಾದ ಆರೋಗ್ಯವಿಜ್ಞಾನ ಮತ್ತು ೭ ನೆಯ ಪುಸ್ತಕದೊಳಗಿನ ಶಾಸ್ತ್ರೀಯ ವಿಷಯದ ಪಾಠಗಳು ಇವೆರಡರಲ್ಲಿ ಎಲ್ಲಿ ಬಂದಿರುವವೆಂಬದನ್ನು ಪರೀಕ್ಷಕರು ತೋರಿಸಿಕೊಡಲಿ ಹಾಗಿರುವಾಗ ಬಡವಿದ್ಯಾರ್ಥಿಗಳು "ಸ್ಟೀಮ್" ನಿಂದ ಜಹಾಜಾ ಫಿ ಮಾಡಲಿಕ್ಕೆ ಬರುತ್ತದೆಂದು ಉತ್ತರ ಬರೆದರೆ ಅದಕ್ಕೆ ಯಾರು ಹೊಣೆಗಾರರು? ಒಟ್ಟಿನ ಮೇಲೆ ಈ ಸಾರೆ ಪರೀಕ್ಷಕರು ಬಡವಿದ್ಯಾರ್ಥಿಗಳನ್ನು ಹೀಗೆ ಪರಿಪರಿಯಿಂದ ಗೋಳಾಡಿಸಿದ್ದು ಬಹು ದುಃಖದ ಸಂಗತಿಯು ಇನ್ನು ಮುಂದಾದರೂ ಹಾಗಾಗದಂತೆ ನೋಡಿಕೊಳ್ಳುವದು ಮೇಲಾಧಿಕಾರಿಗಳ ಕರ್ತವ್ಯವು ಪರೀಕ್ಷೆಯ ಪ್ರಶ್ನಗಳಲ್ಲಿಯೇ ಇಷ್ಟು ಅವ್ಯವಸ್ಥೆಯಾದ ಬಳಿಕ ಉತ್ತರದ ಕಾಗದಗಳನ್ನು ನೋಡುವಾಗ ಏನವಸ್ಥೆಯಾಗಿದ್ದೀತೆಂಬದನ್ನು ಬಲ್ಲವರೇ ತರ್ಕಿಸಲಿ ಕನ್ನಡವನ್ನರಿಯದ ಹಾಗು ಕನ್ನಡ ಸಾಲೆಗಳಿಗೆ ಏನೂ ಸಂಬಂಧವಿಲ್ಲದ ಹಾಯಸ್ಕೂಲಿನ ಶಾಸ್ತ್ರಜ್ಞರನ್ನು ಪರೀಕ್ಷೆಯ ಪ್ರಶ್ನೆಗಳನ್ನು ತೆಗೆಯುವದಕ್ಕೆ ನೇಮಿಸುವದರಿಂದಲೇ ಈ ತರದ ಅವ್ಯವಸ್ಥೆಯಾಗಿರಬೇಕೆಂದು ನಮಗೆ ತೋರುವದು. ಮುಂದಿನ ಸಾರೆ ಪರೀಕ್ಷಕರನ್ನು ನೇಮಿಸುವಾಗಲಾದರೂ ಈ ನಮ್ಮ ಸೂಚನೆಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ಮೇಲಧಿಕಾರಿಗಳಿಗೆ ನಮ್ಮ ಸೂಚನೆಯಿದೆ.

ಬ್ರಾಹ್ಮಣೇತರ ಪಕ್ಷದ ಬೋಡಿತನವು.

—o—

ಮದ್ರಾಸಿನ ಬ್ರಾಹ್ಮಣೇತರ ಪಕ್ಷದಲ್ಲಿ ಎಷ್ಟು ಬೋಡಿತನ ನೆಲೆಸಿರುತ್ತದೆಂಬದರ ಒಂದು ಪ್ರತ್ಯಕ್ಷ ದೃಷ್ಟಾಂತವು ಮೂರು ದಿವಸಗಳ ಹಿಂದೆ ಕಂಡುಬಂತು. ಬರ್ಮಾ ಆಯಿಲ ಕಂಪನಿಯ ಕೆಲಸಗಾರರ ಮೇಲೆ ಕಂಪನಿಯ ಕಾವಲುದಾರರು ಹಾಕಿದ ಗುಂಡಿನ ಬಗ್ಗೆ ವಿಚಾರ ಮಾಡಲು ಮ್ಯುನಿಸಿಪಾಲಿಟಿಯಲ್ಲಿ ಸ್ಪೇಶಲ ವಿಚಾರವಾಗಬೇಕೆಂದು ಶ್ರೀ. ಶಿಂಗರವೇಲು ಇವರು ಠರಾವು ತರುವಂತೆ ಮುಂದಾಗಿ ಅಧ್ಯಕ್ಷರಿಗೆ ತಿಳಿಸಿದರು. ಆ ಪ್ರಕಾರ ಜನರಲ ಕಮಿಟಿ ಕೂಡುವಂತೆ ಗೊತ್ತಾಯಿತು. ಕಾಂಗ್ರೆಸ ಪಕ್ಷದ ಎಲ್ಲ ಮೆಂಬರರು ಬಂದು ಸಭಾಸ್ಥಾನವನ್ನಲಂಕರಿಸಿದರು. ಜಸ್ಟಿಸ ಪಕ್ಷದವರು ಮ್ಯುನಿಸಿಪಾಲಿಟಿಗೆ ಬಂದರು. ಆದರೆ ಸಭಾಸ್ಥಾನಕ್ಕೆ ಬರದೆ, ಹೊರಗೇ ನಿಂತುಕೊಂಡರು. ಇವರು ಬರದ್ದರಿಂದ ಕೋರಮ್ಮ ಕೂಡದೆ, ಕಮಿಟಿಯ ಕೆಲಸವನ್ನು ತಹಕೂಬ ಮಾಡಬೇಕಾಯಿತು. ಗುಂಡು ಹಾಕಿಸಿಕೊಂಡು, ಘಾಯವಾದವರೆಲ್ಲರೂ ಬ್ರಾಹ್ಮಣೇತರರು. ಬ್ರಾಹ್ಮಣೇತರರೆಂಬವರು ಇವರ ಹಿತವನ್ನು ಎಷ್ಟರ ಮಟ್ಟಿಗೆ ನೋಡುವರೆಂಬದು ಇವರ ವರ್ತನದಿಂದ ಸ್ಪಷ್ಟವಾಗುತ್ತದೆ. ಬ್ರಾಹ್ಮಣೇತರ ಹಿತವೆಂಬದು ಹೆಸರಿಗಿದ್ದು, ಸರಕಾರದ ತಂತ್ರದಂತೆ ನಡೆಯುವದೇ ಇವರ ಧ್ಯೇಯವಾಗಿರುತ್ತದೆ. ಆದ್ದರಿಂದಲೇ ಕೌನ್ಸಿಲ ಚುನಾವಣೆಯಲ್ಲಿ ಅಧಃಪಾತ ಹೊಂದಿದರು. ಇದೇ ಪ್ರಕಾರ ಇನ್ನೆರಡು ತಿಂಗಳಲ್ಲಿ ಆಗುವ ಮ್ಯುನಿಸಿಪಾಲಿಟಿಯಲ್ಲಿಯೂ ಅಪಯಶಕ್ಕೆ ಗುರಿಯಾಗುವ ದುರ್ಲಕ್ಷಣಗಳು ಈಗಿನಿಂದಲೇ ತೋರಹತ್ತಿವೆ. ಬ್ರಾಹ್ಮಣೇತರರೆಂಬವರು ಬಿಕ್ಕಟ್ಟಿನ ಪ್ರಸಂಗದಲ್ಲಿ ಬಾಲಾ ಹಾಕಿದ ಉದಾಹರಣೆಗಳೇ ಇರುತ್ತವಲ್ಲದೆ, ಧೈರ್ಯ ತಾಳಿದಂಥ ಒಂದೂ ಉದಾಹರಣೆ ಇರುವದಿಲ್ಲ. ಇಂಥವರಿಂದ ಸ್ವಜನ- ಸ್ವದೇಶ ಹಿತ ಬಯಸುವದು ಮೂರ್ಖತನವೇ ಸರಿ.

ನೀನು ಮೂರ್ಖನಿದ್ದೀ, ಕತ್ತೆ ಇದ್ದೀ ಎಂದು ಒಬ್ಬ ಸಾಹೇಬನು ಪಂಡಿತ ಮಾಲವೀಯಾಜಿಯವರ ಚಿರಂಜೀವನಿಗೆ ಬೈದನು. ಚಿರಂಜೀವನು ಇವನ ಮೇಲೆ ಮಾನಹಾನಿಯ ಫಿರ್ಯಾದಿ ಮಾಡಿದನು. ಈ ಬೈಗಳು ಇಂಗ್ಲಿಷ ಜನರಲ್ಲಿ ಸಹಜವಾಗಿದೆ. ಅವುಗಳಿಂದ ಅಪಮಾನವಾಗಲಾರದೆಂದು ಮ್ಯಾಜಿಸ್ಟ್ರೇಟರು ಫಿರ್ಯಾದಿಯನ್ನು ತೆಗೆದು ಹಾಕಿದರು.

ಸತ್ಯಾಗ್ರಹಿಗೆ ಕಾಯದೆಯ ಜಿವರಿಕೆ ಇಲ್ಲ.

—೦—

ನಾಗಪೂರ ಕಾಯದೆಭಂಗದ ಸತ್ಯಾಗ್ರಹದ ಒಬ್ಬ ವೀರನಾದ ರಾಮಚಂದ್ರನೆಂಬವನು ಬಿಚ್ಚುಗತ್ತೀ ಹಿಡಕೊಂಡು ಊರ ತುಂಬ ಮೆರವಣಿಗೆ ತೆಗೆದಿದ್ದನು ಅಂದು ಪೋಲೀಸರು ಈತನನ್ನು ಹಿಡಿಯಲಿಲ್ಲ. ಮರು ದಿವಸ ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಆಗ ಈತನು ತನ್ನ ಜವಾಬಿನಲ್ಲಿ ಹೇಳಿದ್ದೇನಂದರೆ-

ನಾನು ಬಿಚ್ಚುಗತ್ತಿ ಹಿಡಕೊಂಡು ಮೆರವಣಿಗೆ ತೆಗೆದದ್ದು ನಿಜ. ಈ ಬಗ್ಗೆ ಬ್ರಿಟಿಶ ಸರಕಾರದ ಕಾಯದೆಯ ದೃಷ್ಟಿಯಿಂದ ಅಪರಾಧಿಯಾಗಿದ್ದೇನೆ. ಆದರೆ ನಾನು ಸತ್ಯಾಗ್ರಹಿಗಳ ಸೈನ್ಯಕ್ಕೆ ಸೇರಿದವನು. ಆದ್ದರಿಂದ ಶಸ್ತ್ರವನ್ನಿಡುವದಕ್ಕಾಗಿ ಅಪ್ಪಣೆ ಪಡಕೊಳ್ಳುವ ಅಗತ್ಯವೇನೂ ಉಂಟಾಗುವದಿಲ್ಲ.

ಮ್ಯಾಜಿಸ್ಟ್ರೇಟರು ಈತನಿಗೆ ಹತ್ತು ರೂಪಾಯಿ ದಂಡ ಅಥವಾ ೧೫ ದಿವಸಗಳ ಸಾದಾ ಕೈದಿನ ಶಿಕ್ಷೆ ವಿಧಿಸಿದರು. ರಾಮಚಂದ್ರನು ದಂಡ ಕೊಡದೆ ತುರಂಗದ ದಾರೀ ಹಿಡಿದನು.

ಸಾವಿರ ಕುದುರೆಯ ಸರದಾರ!
ಮನೆಯ ಹೆಂಡತಿಯ ಪಿಂಜಾರ!!

—೦—

ಲಾಹೋರಿನಲ್ಲಿ ಹಿಂದೂ ಮುಸಲಮಾನ ದಂಗೆಯಾಯಿತು. ಒಂದು ಹಗಲು ಮತ್ತು ಒಂದು ರಾತ್ರಿಯಲ್ಲಿ ಆ ಪಟ್ಟಣದ ತುಂಬ ಅಂತಕನ ದೂತರು ಕಿಂಚಿತ್ತು ದಯವಿಲ್ಲದೆ ಊರಾಟಿಕೆ ಹಾಕಿದರು ಈ ದುರ್ಧರ ಸಮಯದಲ್ಲಿ ಹಿಂದೂ, ಶೀಖ ಮತ್ತು ಮುಸಲಮಾನ ಮುಂದಾಳುಗಳೆಂಬವರು ಎದೆಗಾರಿಕೆಯಿಂದ ಮನೆಬಿಟ್ಟು ಹೊರಬಿದ್ದು ದಂಗೆಗಾರರಿಗೆ ಬುದ್ಧೀ ಹೇಳಿ, ದಂಗೆಯನ್ನು ಹಬ್ಬಗೊಡಬಾರದಾಗಿತ್ತು. ಆದರೆ ಇವರು ಹೆಂಡರ ಮಾತು ಕೇಳಿ, ಜೀವದಾಶೆಯಿಂದ ಮನೆಬಿಟ್ಟು ಹೊರಬೀಳಲೇ ಇಲ್ಲ. ಇವರ ದೇಶಾಭಿಮಾನದ ಸುಭವಾರ್ತೆಯು ಅಶಿಕ್ಷಿತ ಮತ್ತು ನಿರಪರಾಧಿ ಜನರಿಗೆ ಸಂಕಟನಿವಾರಣೆಯ ಬದಲಾಗಿ ಮರಣವನ್ನು ತಂದಿತು. ಇಂಥ ಡಾಂಭಿಕ ಮುಂದಾಳುಗಳಿಗೆ ಧಿಕ್ಕಾರವಿರಲೆಂದು ದೇವಿ ಸರೋಜನಿಯವರು ಕಣ್ಣೀರು ಹಾಕಿದ ಉದ್ಗಾರ ತೆಗೆದಿದ್ದಾರೆ.

ಪಾಲಿಟಾಣಾದ ಶತ್ರುಂಜಯದ ಜೈನ ದೇವಸ್ಥಾನದ ವಾದದ ಕೊನೆಯ ನಿರ್ಣಯವು ಸಂಧೀ ಬೆಟ್ಟದಲ್ಲಿ ಮಹಾತ್ಮರ ಸನ್ನಿಧಾನದಲ್ಲಾಗುವದು. ಸಂಸ್ಥಾನದ ಪರಿಯಿಂದ ಬಿಕಾನೇರದ ದಿವಾನರಾಗಿದ್ದ ಸರ ಮನುಭಾಯಿ ಮಹತಾ ಪ್ರತಿನಿಧಿಯಾಗಿರುವರು.

ಕಲಕತ್ತೆಯ ಮೇಲೆ ಮೇಘರಾಜನ ಕೋಪ.

ಗಾಳಿ, ಮಳೆ ಮತ್ತು ಆಣೆಕಲ್ಲಿನಿಂದ ಅದ್ಭುತ ಹಾನಿ.

ಕಳೆದ ಬುಧವಾರದ ದಿವಸ ಸಾಯಂಕಾಲದಲ್ಲಿ ಕಲಕತ್ತೆ ಪಟ್ಟಣದಲ್ಲಿ ಅದ್ಭುತವಾಗಿ ಆಣೆಕಲ್ಲಿನ ಮತ್ತು ನೀರಿನ ಮಳೆಯಾಗಿ ಅತಿಶಯ ಕೇಡಾಗಿರುತ್ತದೆ. ಈ ಮಳೆಯಾಗುವ ಮೊದಲು ಮೂರು ದಿವಸ ಅಸ್ಲಿ ತಾಳಲಾರದಷ್ಟು ತಕೆಯಾಯಿತು. ಗಾಳಿಯು ಪೂರಾ ಕಟ್ಟಾಯಿತು. ಜನರು ಹಾಯ ಹಾಯ ಎಂದರು. ಈ ಉರಿಯು ಮುಂದಾಗುವ ಅನಾಹುತವನ್ನು ಸೂಚಿಸಿತು. ಬುಧವಾರ ಮಧ್ಯಾನ್ಹದಿಂದ ಗಾಳಿಯು ಬಲವಾಗಿ ಬೀಸಲಾರಂಭಿಸಿತು. ದೊಡ್ಡ ದೊಡ್ಡ ಮರಗಳು ಬೇರು ಸಹಿತ ಕಿತ್ತಿ ಬಿದ್ದು, ದಾರಿಗಳು ಕಟ್ಟಾದವು. ಸಾಯಂಕಾಲದ ೫ ಗಂಟೆಯ ಸಮಯದಲ್ಲಿ ಮಳೆಗೆ ಪ್ರಾರಂಭವಾಯಿತು. ಒಂದು ತಾಸಿನ ತನಕ ಒಂದೇ ಸವನೆ ಹುಟ್ಟಿತು. ಅನಂತರ ಕಲ್ಲು ಕಟ್ಟಿ ಮಳೆ ಸುರಿಯಲಾರಂಭಿಸಿತು. ಮಧ್ಯದಲ್ಲಿ ಮಿಂಚೂ ಗುಡುಗೂ ಸಿಡಿಲು ಜನರನ್ನು ಹೌಹಾರಿಸಿದವು. ಪಟ್ಟಣದ ತುಂಬ ಎತ್ತ ನೋಡಿದತ್ತ ನೀರೇ ನೀರಾಯಿತು. ಗಾಳಿ ಮತ್ತು ಆಣೆಕಲ್ಲಿನ ಹೊಡತದಿಂದ ಪಕ್ಷಿಗಳು ಸತ್ತು ನೆಲದ ತುಂಬ ಹಾಸಿದವು. ಟೆಲಿಫೋನಿನ ಕಬ್ಬಿಣ ಕಂಬಗಳು ಕಿತ್ತಿ ಬಿದ್ದು, ತಾರುಗಳು ಅಲ್ಲಲ್ಲಿ ಹತ್ತರಿಸಿದವು ವಿದ್ಯುತ್ತಿನ ತಂತಿಗಳು ಹರಿದು, ಟ್ರಾಮುಗಳು ಬಂದಾದವು ಅಲ್ಲಲ್ಲಿ ದೊಡ್ಡ ದೊಡ್ಡ ದನಗಳು ಸತ್ತು ಬಿದ್ದವು. ನದಿಯಲ್ಲಿ ಹಡಗಗಳು ಹಗ್ಗ ಹರಿದು, ದಿಕ್ಕುಪಾಲಾದವು. ನಾಲ್ಕು ದೋಣಿಗಳು ಮುಣುಗಿದವು. ಸರಕಿಗೆ ಬಹು ಕೇಡಾಯಿತು. ನದಿಯಲ್ಲಿ ಇಬ್ಬರು ಮುಣುಗಿ ಸತ್ತರು. ಊರ ತುಂಬ ಕೇಡೇ ಕೇಡಾಯಿತು.

ಮದ್ರಾಸದಿಂದ ಸೇಲಮಕ್ಕೆ ಒಬ್ಬ ಪರಾಣಾ ಕೈದಿಯನ್ನು ಒಯ್ಯುತ್ತಿದ್ದರು. ಈತನು ಅರಕೋಣಮ ಸ್ಟೇಶನದ ಹತ್ತರ ನಡಿಯುವ ಬಂಡಿಯಿಂದ ಹಾರಿ, ಗಪ್ಪ ಹೇಳಿಸಿದ್ದಾನೆ.

ಸಾಯಕಲ್ಲಿನ ಮೇಲಿಂದ ಪ್ರವಾಸ ಮಾಡುತ್ತಾ ಪಂಜಾಬಿಯ ಒಬ್ಬ ಫಾರ್ಸಿ ಯುವಕನು ಭೂಮಂಡಲದ ಪ್ರದಕ್ಷಿಣೆಗೆ ಹೊರಟಿದ್ದಾನೆ. ಈತನು ಈಗ ಅಮೇರಿಕೆಯಲ್ಲಿರುವ ಬ್ರೆಝಿಲ ದೇಶದ ರಾಜಧಾನಿಗೆ ಬಂದಿದ್ದಾನೆ.

ಜಯ ಭುವನೇಶ್ವರಿ.

(ಲೇಖಕ- ಮಡಿವಾಳೇಶ್ವರ ಸುತ ತುರಗುಂದ)

ಭಾಮಿನಿ-

ವಿಜಯ ಭುವನೇಶ್ವರಿಯೇ! ಪ್ರೇಮದಿ!
ವಿಜಯ ನೀಯೌ! ಎನ್ನ ಕವಿತೆಗೆ।
ವಿಜಯ ನೀಯೌ! ಪರಮ ಪಾವನ ಸರ
ಸಗನ್ನಡಕೆ॥
ವಿಜಯ ನೀಯೌ! ಎನ್ನ ನಾಡಿಗೆ।
ವಿಜಯ ನೀಯೌ! ಬಂಧು ಬಳಗಕೆ।
ವಿಜಯ ನೀಯೌ! ವಿಜಯನೀಯುವ
ವಿಜಯ ಸತ್ವಕ್ಕೆ॥ ೧ ॥

ಬಾರಿಸಾಲದಲ್ಲಿ ಬಂಗಾಲ ಇಲಾಖೆಯ ಮುಸಲಮಾನರ ಪರಿಷತ್ತು ಕೂಡಿತು. ಆದರೆ ಮಳೆಯು ಸಭೆಗೆ ವಿಘ್ನ ತಂದಿತು.

ಮುಂಬಯಿಯಲ್ಲಿ ಮಹಿಮಭಾಗದಲ್ಲಿ ಪ್ಲೇಗ ಪ್ರಾರಂಭವಾಗಿದೆ. ಒಂದೇ ವಾರದಲ್ಲಿ ೭೩ ಮರಣವಾದವು.

ಜಪಾನದ ಬ್ಯಾಂಕುಗಳ ದಿವಾಳಿ ಹೊರಟಿದ್ದರಿಂದ ಅಲ್ಲಿಯ ಎನ್ನವೆಂಬ ಬೆಳ್ಳಿಯ ನಾಣ್ಯದ ಬೆಲೆಯು ಕಡಿಮೆಯಾಗಿದೆ. ಈ ಅಗ್ಗದ ಲಾಭ ಪಡಕೊಂಡು ಜಪಾನರು ಹಿಂದುಸ್ಥಾನದಲ್ಲಿ ವಸ್ತ್ರ ಬಟ್ಟೆಗಳನ್ನು ವಿಪರೀತವಾಗಿ ತಂದು, ಇಲ್ಲಿಯ ಗಿರಣಿಗಳ ವ್ಯಾಪಾರಕ್ಕೆ ಧಕ್ಕಿ ತರುವರೆಂದು ಮುಂಬಯಿಯ ಗಿರಣಿಯವರು ಭಯಭೀತರಾಗಿದ್ದಾರೆ.

ಲಂಡನದ ಪೋಲೀಸರು ಅಲ್ಲಿರುವ ರಶಿಯರ ವರ್ತಕ ಸಂಘದ ಮನೆಯ ಸುತ್ತಲು ಕಾವಲಿಟ್ಟು, ಜಪ್ತಿ ಮತ್ತು ಝಡತಿಯನ್ನು ಪ್ರಾರಂಭಿಸಿದ್ದಾರೆ. ಕಾರಣ ಗುಪ್ತವಾಗಿರುವದು.

ಧಾರವಾಡ-

ಈ ಊರಲ್ಲಿ ಕೂಡುವ ಜ್ಯೋತಿಷಜ್ಞರ ಪರಿಷತ್ತಿನ ವೇಳೆಯಲ್ಲಿ ಬ್ರಾಹ್ಮಣ ಸಭೆಯನ್ನು ಕೂಡಿಸುವ ವಿಚಾರ ನಡೆದಿದೆ.

ಇಲ್ಲಿಯ ಫರ್ಸ್ಟಗ್ರೇಡ ಪ್ರಿನ್ಸಿಪಾಲರಾದ ಮಿ. ಹಾನೆಯವರು ಜೂನ ಮತ್ತು ಜುಲೈ ಈ ಎರಡು ತಿಂಗಳ ರಜೆ ಪಡಕೊಂಡಿದ್ದಾರೆ

ಮಳೆಯಿಲ್ಲ; ಮಳೆಯ ಚಿನ್ಹ ಕೂಡ ಇಲ್ಲ, ರಾತ್ರಿ ಗದಗುಟ್ಟುವಂಥ ಕೆಟ್ಟ ಗಾಳಿಯು ಬೀಸುತ್ತಿರುವದು.

ದೆ ಶೆಳ್ಳೆ ಕೋಡು ಪಣೆಚಿಕ್ಕ ಹೂಬಾಲ ನಾಲ್ಕೂ ಕಾಲು ಬೆಳ್ಳಗುಂಟು ಬಿಳಿಸುಳಿ ಹಿಂಗಾಲಿನ ಬಲಗಾಲ ಶಿಟಗಾಲು.

ಇವನ್ನು ಇಂಥಲ್ಲಿನೆಂದು ನಮಗೆ ತಪಾಸು ಮಾಡಿಕೊಟ್ಟವರಿಗೆ ೧೫ ರೂಪಾಯಿ ಇನಾಮು ಕೊಡುವೆವು ಅಂತಾ ಜಾಹೀರ ಮಾಡಿದ ನೋಟೀಸು. ತಾ|| ೧೪-೪-೧೯೨೭ ಇಸ್ವಿ

ಈ ಎಡಗ್ಯೆ ಹೆಬ್ಬಟ್ಟಿನ ಗುರ್ತು ಫಕೀರಪ್ಪಾ ತಂದಿ ಚನ್ನಬಸಪ್ಪಾ ಹನಸಿಯವರ ಸಾಕೀನ ಕರಡಿಗುಡ್ಡ ತಾಲ್ಲೂಕು ಧಾರವಾಡ.

——

ನೋಟೀಸು

ರಾಮಾ ತಂದಿ ಸೋಮಪ್ಪಾ ಪಟ್ಟಿ ಸಾ|| ಮತ್ತಿಗಟ್ಟಿ ಪ|| ಕಾಂಡಗಿ ತಾ|| ಬಂಕಾಪೂರ ಈತಗೆ—

ಕೆಳಗೆ ಹೆ. ಗು. ಮಾಡಿದವಳ ಕಡೆಯಿಂದ ನೋಟೀಸು ಕೊಡುವದೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ಈಗ ಐದು ವರ್ಷದ ಕೆಳಗೆ ದುಷ್ಟ ಜನರ ಚಿತಾವಣಿಯಿಂದ ನನ್ನ ಹೊಡಿದು ಮ್ಯೆಮೇಲಿನ ದಾಗೀನೆ ಕಸಕೊಂಡು ಮನಿ ಬಿಟ್ಟು ಹೊರಗೆ ಹಾಕಿದಿ ಆ ಲಾಗಾಯತ ನಾನು ಸಾಲಾ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತಾ ಇರುತ್ತೇನೆ. ಆ ಸಾಲಾ ಈಗ ಐವತ್ತು (೫೦೦) ನೂರು ಆಗಿದೆ ಸಾಲಗಾರರ ತಗಾದಿ ಬಹಳ ಆಗಿದೆ ಕಾರಣ ನೋಟೀಸು ಕೊಡುವ ಪ್ರಸಂಗ ಬಿತ್ತು. ನೀನು ಈ ನೋಟೀಸು ಮುಟ್ಟಿದ ೫ ದಿವಸದಲ್ಲಿ ಬಂದು ನನ್ನ ಸಾಲಾ ತೀರಿಸಿ ನನ್ನ ಕಡೆ ಯೋಗ್ಯ ರೀತಿಯಿಂದ ಪ್ರಪಂಚ ಮಾಡತಕ್ಕದ್ದು ಯೋಗ್ಯ ಜನರ ಜಾಮೀನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಬರೆ ಇದಕ್ಕೆ ತಪ್ಪಿದರೆ ನಾನು ನನ್ನ ಹೊಟ್ಟೆಯ ಸಲುವಾಗಿ ಮತ್ತು ಸಾಲದ ಸಲುವಾಗಿಯೂ ಎರಡನೆಯವನನ್ನು ಉಡಿಕೆ ಮಾಡಿಕೊಂಡು ಹೋಗುತ್ತೇನೆ ಆ ಮೇಲೆ ನನ್ನ ಮೇಲೂ ನನ್ನ ಉಡಕಿ ಗಂಡನ ಮೇಲೂ ಯಾವ ತರದ ಹಕ್ಕು ಉಳಿಯುವದಿಲ್ಲ ಇದೇ ಸೋಡಪತ್ರವೆಂದು ತಿಳಿಬೇಕು ಅಂತಾ ಕೊಟ್ಟ ನೋಟೀಸು.

ತಾ|| ೧೪-೫-೧೯೨೭ ಇಸ್ವಿ

ಈ ಎಡಗ್ಯೆ ಹೆಬ್ಬಟ್ಟಿನ ಗುರ್ತು ಕರೆವ್ವಾ ಕೋಂ ರಾಮಾ ಪಟ್ಟಿ ಇಕೇದು ಅದೆ.

——

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಈ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ಎಡಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ವ್ಯವಸ್ಥಾಪಕರು ವಿಜಯ ಧಾರವಾಡ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋಳೀ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಕು ಕಡೆಗೆ ಪಸಾರವಾಗಿರುತ್ತದೆ, ಆದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಅರ್ಜಂಟ ಪೋಸ್ಟನ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಜೋಶಿ ಕಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ

ಜಾಹೀರ ನೋಟೀಸು.

ಹೊಲ ಮನೆಗಳ ಲಿಲಾವು

ಧಾರವಾಡ ಡಿ|| ಕೋರ್ಟಿನ ಡೆ|| ನಾಜರ ಇವರ ಕಡಿಯಿಂದಾ ಇದರ ಮೂಲಕಾ ಯಾವತ್ತೂ ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ|| ಧಾರವಾಡ ಇವರ ಜಾ|| ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ|| ಸ|| ನಂಬರ ೩೨ ಯಕರೆ ೧೧.೧೭ ತರಮ ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ, ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಹರ್ತಿ ಇವರ ಮನೆ ಆಲೂರಲ್ಲಿ ರೋದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ|| ೩೧ ಮಾಹೆ ಮೆ ಸನ್ನ ೧೯೨೭ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮಧ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖ ೨೫ನೇ ಮಾಹೆ ಎಪ್ರಿಲ ೧೯೨೭ ಇಸ್ವಿ

G V. DESHPANDE,
Dy. Nazir & Guardian of
Shrinivas & Ramachandra Alur.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಜೋಪದೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮; ಧಾರವಾಡ ಸೋಮವಾರ ತಾರೀಖು ೧೬ ನೇ ಮೇ ೧೯೨೭ | ಸಂಚಿಕೆ ೧೦

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕವಾಲ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ಕಾಲರಾ ಪಿಲ್ಸ್

— ೦ —

ಜೇನೆ ಬಂದ ಮೂರು ತಾಸಿನೊಳಗಾಗಿ

ತಪ್ಪದೆ ಗುಣ.

— ೦ —

ನಾನು ಕಾಲರಾ ಜೇನೆಯ ಮೇಲೆ ನಾವು ಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ರೂಪಾಯಿ ಧಾರವಾಡ, ಮಾರಡಗಿ, ಶಿವಳ್ಳಿ, ಕರಡಿಗುಡ್ಡ, ಮರೆವಾಡ ಮುಂತಾದ ಊರುಗಳಲ್ಲಿ ಗುಣಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತವೆ. ಪರಸ್ಥಳದವರಿಗೆ ವ್ಹಿ. ಪಿ. ಯಿಂದಲೂ ಕಳಿಸುವೆವು. ವ್ಹಿ. ಪಿ. ಸಂಗಡ ಅನುಪಾನ ತಿಳಿಸುವೆನು.

ಗರೀಬಸಾಹೇಬ ಎಲಿಗಾರ,

ಮಾರ್ಕೆಟ ಧಾರವಾಡ.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೊಂದಿರುವ ಆರು ಲಕ್ಷದ ಮೇಲ ಬಂಡವಲು. [illegible] ಯಾದಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಠೇವಿಗಳಿಗೆ ಬಡ್ಡಿ ಕೊಡುವ [illegible] ಮೆಂಬರುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಳ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ವರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

— ೦ —

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೬-೫-೩೨ ನೇ ಇಸ್ವಿ

ಮಠದ ಸಾಂಪ್ರದಾಯಗಳು ದೇವರು ಮಾಡಿದ್ದಲ್ಲ; ಮನುಷ್ಯ ಮಾಡಿದ್ದು

ಹಿಂದೂ ಮತದಲ್ಲಿ ಅನೇಕ ಪಂಗಡಗಳಿರುವವು. ಜೈನರನ್ನು ಹಿಂದೂ ಜನರಲ್ಲಿ ಸೇರಿಸಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಅವರು ಹಿಂದೂ ನಿಜ. ಆದರೆ ಧರ್ಮ ಬೇರೆ. ಶೀಖರಂತೆ ಸ್ವತಂತ್ರ ಧರ್ಮದವರು. ಹಿಂದೂ ಜನರಲ್ಲಿ ಆರ್ಯ ಸಮಾಜದವರೂ ಸೇರುತ್ತಾರೆ. ಬ್ರಾಹ್ಮಣ, ಆರ್ಯ ಸಮಾಜ ಮತ್ತು ಜೈನರ ಧರ್ಮ ಗುರುಗಳು ಶಿಷ್ಯರ ಮೇಲೆ ದರ್ಮದ ನೆವನದಿಂದ ಶಿಷ್ಯರ ಮೇಲೆ ಬಲವಂತಿಕೆಯಿಂದ ಹೇರಿದ ಮತ್ತು ಹೇರುತ್ತಿರುವ ನಿಯಮಗಳನ್ನು ನೋಡಿದರೆ- ಇವೆಲ್ಲ ಅತಿರೇಕವೆಂದೇ ಕಂಡು ಬರುವವು. ಪ್ರಾಣಿ ಹಿಂಸೆಯು ಭಯಂಕರವಾಗಿ ನಡೆದಾಗ ಅಹಿಂಸೆಯು ಪ್ರಸಾರ ಮಾಡುವ ಬೌದ್ಧ ಧರ್ಮ ಹುಟ್ಟಿತು. ಈ ಧರ್ಮದ ಗುರುಗಳು ತಮ್ಮ ಬಾಯಿಯಲ್ಲಿ ಗಾಳಿಯೊಳಗಿನ ಅತ್ಯಂತಾತ್ಯಂತ ಸೂಕ್ಷ್ಮ ಜಂತುಗಳು ಹೋಗಬಾರದೆಂದು ಬಾಯಿಗೆ ಅರಿವೆ ಹಾಕುವರು. ಹೀಗೆ ಧರ್ಮ ಪಾಲಿಸುವಾಗ ನೀರೊಳಗಿನ ಜಂತುಗಳು ಹೊಟ್ಟೆಯಲ್ಲಿ ಹೋಗುತ್ತವೆಂಬ ವಿಚಾರವನ್ನೇ ಮಾಡುವದಿಲ್ಲ. ಇದು ಧರ್ಮದ ಅತಿರೇಕವು. ಇದೇ ಪ್ರಕಾರ ಆರ್ಯ ಸಮಾಜದವರು. ವರ್ಣಾಶ್ರಮ ಧರ್ಮ ಮುರಿದು, ಪುರಾಣ ಪುಣ್ಯಕಥೆಗಳನ್ನು ಕಟ್ಟುಕಥೆ ಮಾಡಿ, ಮೂರ್ತಿಪೂಜೆಯನ್ನು ಬಿಟ್ಟುಗೊಟ್ಟದ್ದು, ಹಿಂದೂ ಧರ್ಮದ ಮೇಲೆ ಬಂಡಾಯ ಮಾಡಿದಂತಾಗಿತ್ತುದೆ. ಈ ಬಂಡಾಯವು ಭಗವತ್ಪ್ರೇರಣೆಯಿಂದಾದದ್ದಲ್ಲ. ಶ್ರೀ. ದಯಾನಂದ ಸರಸ್ವತಿಯವರ ಪ್ರೇರಣೆಯಿಂದಾದದ್ದೆಂದು ಯಾರು ತಾನೆ ಹೇಳುವರು.

ಬ್ರಾಹ್ಮಣರಲ್ಲಿ ಸ್ಮಾರ್ತ, ಶ್ರೀವೈಷ್ಣವ ಮತ್ತು ಮಾಧ್ವರೆಂಬ ತ್ರಿಮತಗಳುಂಟಷ್ಟೇ; ತಪ್ತ ಮುದ್ರೆ ಒಂದೇ ವಿಷಯ ತಕ್ಕೊಳ್ಳುವಾ ಸ್ಮಾರ್ತರು ಅದನ್ನು ಅನುಮೋದಿಸುವದೇ ಇಲ್ಲ ಶ್ರೀವೈಷ್ಣವರು ಜನ್ಮದಲ್ಲಿ ಒಮ್ಮೆ ಮುದ್ರೆ ತಕ್ಕೊಳ್ಳುವರು. ಮಾಧ್ವರಲ್ಲಿ ಮೂರು ಭಾಗಗಳುಂಟು ಉತ್ತರಾದಿ ಮಠದವರು ತಮ್ಮ ಶಿಷ್ಯರಾದ ಗಂಡಸರಿಗೆ ಐದು ಕಡಿಗೆ ಮುದ್ರೆ ಹಾಕುವರು. ರಾಘವೇಂದ್ರ ಮತ್ತು ವ್ಯಾಸರಾಯ ಮಠದವರು ಎರಡೇ ಕಡಿಗೆ ಮುದ್ರೆ ಹಾಕುವರು ಒಂದೇ ಮತದಿಂದ ಟಿಸಳಾಗಿ ಒಡೆದಿರುವ ಮೂವರು ಬೇರೆ ಬೇರೆ ಪ್ರಕಾರದಿಂದ ಹಾಕುವ ಮುದ್ರೆಯ ಪ್ರಕಾರವನ್ನು ನೋಡಿದರೆ- ಇದು ಮನುಷ್ಯ ಕೃತಿಯೇ ಎಂದು ತಿಳಿಯುವದು. ಈ ಮಠದವರು ಶ್ರೀ ವೈಷ್ಣವರಂತೆ ಒಮ್ಮೆ ಮುದ್ರೆ ಹಾಕುವದಿಲ್ಲ. ಒಬ್ಬೊಬ್ಬನು ಒಂದು ಜನ್ಮದಲ್ಲಿ ಹತ್ತಿಪ್ಪತ್ತು ಸಾರೆ ಸಹಜವಾಗಿ ತಕ್ಕೊಳ್ಳುವನು. ಮಠಕ್ಕೆ ಇದೊಂದು ಉತ್ಪನ್ನದ ಭಾಗವಾಗಿರುತ್ತದೆ. ಬ್ರಾಹ್ಮಣರಲ್ಲಿ ಇನ್ನೊಂದು ಶಾಖೆಯುಂಟು. ಅವರು ಭಾಗವತ ಸಾಂಪ್ರದಾಯದವರು. ಇವರಿಗೂ ಗುರುಗಳಿದ್ದಾರೆ. ಆದರೆ ಇವರು ತಪ್ತ ಮುದ್ರೆ ಕೊಡುವದಿಲ್ಲ. ಗಂಧದ ಮುದ್ರೆ ಒತ್ತುವರು. ವೈಷ್ಣವರು ತೊಗಲು ಸುಡುವಂತೆ ಒತ್ತುವ ಹಾಗು ಸ್ಮಾರ್ತರು ನಿಷೇಧಿಸುವ ಪ್ರಕಾರದ ಮಧ್ಯದಲ್ಲಿ ಹರಿಹರ ದ್ವೇಷವಿಲ್ಲೆನ್ನುವಂತೆ ಭಾಗವತ ಮಠದ ಶ್ರೀಗಳವರು ಗಂಧದ ಮುದ್ರೆ ಒತ್ತುವ ಮಧ್ಯಮಾರ್ಗ ತೆಗೆದಿದ್ದಾರೆಂದು ಸ್ಪಷ್ಟವಾಗುತ್ತದೆ.

ಮಾಧ್ವ ಮಠಗಳಲ್ಲಿಯೇ ಚಮತ್ಕಾರದ ಭೇದಗಳುಂಟು. ಏಕಾದಶಿಯ ನಿರ್ಣಯವು ಸೋಜಿಗವಾದದ್ದಿರುತ್ತದೆ. ಪಳಾ ಅಥವಾ ಘಟಿಕಾ ಅಂತರದಿಂದ ಉತ್ತರಾದಿ ಹಾಗು ರಾಘವೇಂದ್ರ ಸ್ವಾಮಿಗಳವರ ಏಕಾದಶಿಗಳು ಭಿನ್ನವಾಗುತ್ತವೆ. ಒಬ್ಬರಿಗೆ ದಶಮಿ ಮತ್ತೊಬ್ಬರಿಗೆ ಏಕಾದಸಿಯಾಗುವದು. ಪಕ್ಷಕ್ಕೊಂದು ಉಪವಾಸ ಮಾಡಬೇಕೆಂದು ಸರ್ವಜ್ಞನು ಹೇಳಿದ್ದಾನೆ. ಆದರಂತೆ ಈ ಮತದವರು ಒಂದು ದಿವಸ ಹಿಂದೆ ಅಥವಾ ಒಂದು ದಿವಸ ಮುಂದೆ ಎಂದಾದರೂ ಏಕಾದಸಿ ಮಾಡಿದರಾಯಿತೆಂದು ಹೇಳುವಂತಾಗುತ್ತದೆ. ಏಕಾದಸಿಯ ದಿವಸ ಭೋಜನ ಮಾಡುವವನಿಗೆ ನರಕವಾಗುತ್ತದೆಂದು ಮತದ ಸಿದ್ಧಾಂತವು. ಆದರೆ ಮಠಭೇದದ ಮೂಲಕ ಒಂದೇ ಸಮಯದಲ್ಲಿ ಸ್ವರ್ಗವೂ ನರಕವೂ ಲಭಿಸುತ್ತವೆ. ಈ ಮತದಲ್ಲಿ ಏಕಾದಸಿಯ ಮಹತ್ವವು ಇಷ್ಟು ದೊಡ್ಡದಾಗಿದ್ದರೂ, ಜಗನ್ನಾಥದಲ್ಲಿ ಏಕಾದಸಿಯ ಉಪವಾಸವೇ ಇಲ್ಲ. ಅಲ್ಲಿ ಏಕಾದಶಿಯನ್ನು ಜಯಿಸಿ, ಅದನ್ನು ಕಟ್ಟಿಹಾಕಿದ್ದಾರೆ. ಯಾರಾದರೂ ನಿರಾಹಾರ ಮಾಡಲು ಪ್ರಯತ್ನಿಸಿದರೆ- ಅವರ ವ್ರತವನ್ನು ಜುಲುಮೆಯಿಂದ ಮುರಿಸುವರು. ಏಕಾದಸಿಯವರು ಈ ತಿಥಿಯಲ್ಲಿ ಅಲ್ಲಿ ನಿಲ್ಲುವದೇ ಇಲ್ಲ, ಒಂದೊಂದು ತರಹವಾಗಿರುವ ಸಾಂಪ್ರದಾಯ ನೋಡಲಾಗಿ ಏಕಾದಸಿಯ ವ್ರತವು ಮನುಷ್ಯ ನಿರ್ಮಿತವಲ್ಲದೆ, ದೇವ ನಿರ್ಮಿತವಲ್ಲೆಂದು ಧಾರಾಳವಾಗಿ ತಿಳಿಯುವದು.

ಉತ್ತರಾದಿ ಮತ್ತು ರಾಘವೇಂದ್ರಸ್ವಾಮಿಗಳ ಮಠದಲ್ಲಿಯ ವ್ರತದ ಪದ್ಧತಿಯೂ ಕೌತುಕಪಡುವಂತಿರುತ್ತದೆ. ಉತ್ತರಾದಿ ಮಠದವರು ಚಾತುರ್ಮಾಸ್ಯದ ಮೊದಲನೆಯ ವ್ರತದಲ್ಲಿ ಹುಣಸೆಹಣ್ಣು ಮೊದಲಾದ ಹುಳಿಯ ಪದಾರ್ಥವನ್ನೂ ಸಾಸಿವೆಯನ್ನೂ ತಕ್ಕೊಳ್ಳುವದಿಲ್ಲ. ರಾಘವೇಂದ್ರಸ್ವಾಮಿಗಳು ಮಾವಿನ ಸೋಲನ್ನೂ, ಸಾಸಿವೆಯನ್ನೂ ತಕ್ಕೊಳ್ಳುತ್ತಾರೆ. ಇದು ಮಠದ ಸಾಂಪ್ರದಾಯವಂತೆ! ಮಠದ ಸಾಂಪ್ರದಾಯದ ಹೆಸರಿನಿಂದ ಏಕಾದಸಿಯ ತಿಥಿಯು ಹಿಂದುಮುಂದಾಗುವದು. ಹುಳಿಯ ಊಟ ಸಿಗುವದು. ಇನ್ನು ಅನೇಕ ತರದ ವ್ರತಭಂಗಗಳು ದೀಪದ ಬುಡದಲ್ಲಿ ಕತ್ತಲೆನ್ನುವಂತೆ ನಡೆಯುವವು. ಇವೆಲ್ಲ ಸುಧಾರಣೆಗಳಲ್ಲವಂತೆ! ಮಠದ ಸಾಂಪ್ರದಾಯದ ಹೆಸರಿನಿಂದಾದ ಸುಧಾರಣೆಗಳಲ್ಲೆಂದು ಯಾರು ಹೇಳುವರು? ತಪ್ತ ಮುದ್ರೆ ಮೊದಲು ಮಾಡಿಕೊಂಡು, ಸಾಸವಿ ತಿನ್ನುವತನಕ ಮನಸೋಕ್ತವಾಗಿ ನಡಿಯಲಿಕ್ಕೆ ಬರುತ್ತದೆ. ಆದೇ ಪ್ರಕಾರ ವರ್ತಮಾನ ಕಾಲದ ಶ್ರೀಗಳವರು ವರ್ತಮಾನ ಪರಿಸ್ಥಿತ್ಯನುಸಾರವಾಗಿ ಬ್ರಾಹ್ಮಣ ವರ್ಗಕ್ಕೆ ಅವಶ್ಯವೆನಿಸುವ ಸುಧಾರಣೆಗಳನ್ನೇಕೆ ಮಾಡಬಾರದು?

ರಾವಬಹಾದ್ದೂರ ಕಂಬಳಿಯವರ ಸಿಂಧುದೇಶದ ಪ್ರವಾಸ.

ಕನ್ನಡಿಗರಿಗೆ ಅಲ್ಲಿಗೆ ಒಕ್ಕಲತನ ಮಾಡುವದಕ್ಕೆ ಹೋಗುವಂತೆ ಉಪದೇಶ.

ಸಕ್ಕರದಲ್ಲಿ ಸಿಂಧೂ ನದಕ್ಕೆ ಕಾಲುವೆ ಮಾಡಿಸುವ ಪ್ರಚಂಡ ಉದ್ಯೋಗದ ನಿಜಸ್ಥಿತಿಯನ್ನು ನೋಡಲು- ಮುಂಬಯಿ ಸರಕಾರದವರು ನೇಮಿಸಿದ ಕಮಿಟಿಯಲ್ಲಿ ರಾ. ಬ. ಕಂಬಳಿಯವರು ಒಬ ಮೆಂಬರರಾಗಿದ್ದಾರೆ. ಇವರು ಅಲ್ಲಿಗೆ ಹೋಗಿ ಬಂದರು. ಅಲ್ಲಿ ಕಂಡ- ಕೇಳಿದ ಸಂಗತಿಗಳನ್ನು ಇದರಡಿ ಕೊಟ್ಟಂತೆ ಹೇಳುತ್ತಾರೆ.

ಸಿಂಧದಲ್ಲಿರುವ ಹಿಂದೂ ಜನರ ಆಚಾರವಿಚಾರಗಳನ್ನು ಕಂಡು ನನಗೆ ಮಹದಾನಂದವಾಯಿತು. ಅಲ್ಲಿ ಸ್ಪೃಶ್ಯಾಸ್ಪೃಶ್ಯತೆಯ ಗದ್ದಲವಿರುವದೇ ಇಲ್ಲ. ದಕ್ಷಿಣ ಹಿಂದುಸ್ಥಾನದಲ್ಲಿರುವಂಥ ಜಾತಿಭೇದವಿಲ್ಲ. ಒಬ್ಬ ಹಿಂದುವು ಮತ್ತೊಬ್ಬ ಹಿಂದುವಿನ ಕೂಡ ಬಂಧುಭಾವದಿಂದ ನಡಕೊಳ್ಳುವನು. ಅನೇಕ ಶತಕಗಳಿಂದ ಅಲ್ಲಿ ಪರಕೀಯರ ಅನೇಕ ಆಘಾತಗಳು ಬಿದ್ದರೂ, ಹಿಂದುತ್ವವು ಉಳಿದಿದೆ. ಇವತ್ತಿನ ಪರಿಸ್ಥಿತಿಯಂತೆ ಆ ದೇಶದಲ್ಲಿ ಹಿಂದುತ್ವವು ಸಜೀವವಾಗಿ ಉಳಿಯಲು ಶಕ್ಯವಾಗಿರುತ್ತದೆ.

ಸಿಂಧದ ಹಿಂದೂ ಜನರೆಲ್ಲರೂ ಸುಶಿಕ್ಷಿತರಾಗಿದ್ದಾರೆ. ಅಲ್ಲಿಯ ಜನಸಂಖ್ಯೆಯು ೩೦ ಲಕ್ಷ; ಇದರಲ್ಲಿ ಏಳೇ ಲಕ್ಷ ಜನರು ಹಿಂದೂಗಳಾಗಿದ್ದಾರೆ ಆದರೆ ಸ್ತ್ರೀಯರ ಸಂಖ್ಯೆಯು ಮಾತ್ರ ಕಡಿಮೆಯಾಗಿದೆ. ಸಾವಿರ ಗಂಡಸರಿಗೆ ಎಂಟು ನೂರು ಸ್ತ್ರೀಯರ ಪ್ರಮಾಣವುಂಟು ಆದ್ದರಿಂದ ಹೆಂಗಸರನ್ನು ಎತ್ತಿಕೊಂಡು ಅಥವಾ ಓಡಿಸಿಕೊಂಡು ಹೋಗುವ ಅಪರಾಧಗಳಾಗುತ್ತಿರುವವು ಪರಪ್ರಾಂತಗಳಿಂದ ಹೆಂಗಸರನ್ನು ಪೂರೈಸುವ ವ್ಯಾಪಾರವೇ ನಡೆದಿದೆ. ವಿಶೇಷವಾಗಿ ವಿಧವೆಯರನ್ನು ತಂದು ಮಾರಾಟ ಮಾಡುವರು. ಜಾತಿಯ ನಿರ್ಬಂಧನೆಯು ಮೂಲಕ ಚಿಕ್ಕಂದಿನಲ್ಲಿ ವಿಧವೆಯರಾದವರು ವಿಧವೆಯರಾಗಿಯೇ ಉಳಿಯುತ್ತಾರೆ. ಈ ವ್ಯಾಪಾರದಲ್ಲಿ ಸೊಕ್ಕಿದ ಜನರು ಈ ಹೀನತನದ ವ್ಯಾಪಾರದಲ್ಲಿ ಪುಷ್ಟರಾಗಿದ್ದಾರೆ ಈ ಮಹಾ ಘಾತಕದ ವ್ಯಾಪಾರ ನೋಡಿ ನನಗೆ ನಾಚಿಕೆ ಬರುತ್ತದೆ. ಆದರೆ ಇದನ್ನು ನಿಲ್ಲಿಸಲು ನಾನು ಗತಿಹೀನನಾಗಿದ್ದೇನೆ

ಭವಿಷ್ಯತ್ಕಾಲದಲ್ಲಿ ಸಿಂಧು ದೇಶವು ಬಹಳೇ ಉತ್ಕರ್ಷ ಹೊಂದುವದು. ಪರ ಪ್ರಾಂತದವರು ಇಲ್ಲಿಗೆ ಬಂದು ವಸಾಹತು ಮಾಡಿಕೊಂಡಿರುವದಕ್ಕೆ ಅತ್ಯುತ್ತಮ ಸ್ಥಳವು ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತದ ರೈತರು ಗೇಣಿ ಪಟ್ಟಿಯಲ್ಲಿ ದರಿದ್ರತನದಿಂದ ಕಾಲಹರಣ ಮಾಡುತ್ತಾರೆ. ಈ ದೇಶದಲ್ಲಿ ಫಲವತ್ತಾದಂಥ ಭೂಮಿಯುಂಟು. ಮಹಾಜಲವಾದ ಸಿಂಧುನದದ ನೀರನ್ನು ಮನುಷ್ಯನ ಉಪಯೋಗಕ್ಕೆ ಬೀಳುವಂತೆ ವ್ಯವಸ್ಥೆ ಮಾಡಿದರೆ ಈ ಪ್ರದೇಶವು ಪ್ರತ್ಯಕ್ಷ ನಂದನವನವೇ ಆಗುವದು.

ಇಲ್ಲಿ ಗೋದಿ, ಜೋಳ, ಹತ್ತಿ ಮೊದಲಾದ ಎಲ್ಲ ಜೀನಸುಗಳನ್ನು ಬೆಳೆಯಬಹುದು. ಇಲ್ಲಿಯ ದನಗಳು ಗುಜರಾಥದ ದನಗಳಂತೆ ಪುಷ್ಟವಾಗಿರುವವು ಧೈನವಂತೂ ಸಮೃದ್ಧಿಯು ಸಕ್ಕರದ ಕಾಲುವೆಯ ಕೆಲಸ ಮುಗಿದ ಬಳಿಕ ಸರಕಾರದವರು ಭೂಮಿಯನ್ನು ಲಿಲಾವಿನಿಂದ ಕೊಡುವರು. ಆಗ ಕರ್ನಾಟಕ ಮತ್ತು ಮಹಾರಾಷ್ಟ್ರದ ಒಕ್ಕಲಿಗರು ಇದನ್ನು ಕೊಂಡು ಒಕ್ಕಲುತನವನ್ನು ಬೆಳೆಸಿ, ಸುಖಿಗಳಾಗಬೇಕೆಂದು ಸೂಚಿಸುತ್ತೇನೆ. ಇಲ್ಲಿ ಯಾವಾಗಲೂ ನೀರಿನ ಕೊರತೆ ಬಾರದು. ಇದರಿಂದ ರೈತರು ಧನಿಕರಾಗುವರು.

ಶ್ರೀ ಪಟೇಲರು ಅಲ್ಲಿಯ ಪಾರ್ಲಮೆಂಟದಲ್ಲಿ ನಡೆಯುವ ಕೆಲಸದ ಶಿಸ್ತನ್ನು ನೋಡಿಕೊಂಡು, ಹತ್ತು ದಿವಸಗಳ ವರೆಗೆ ಆ ದೇಶದಲ್ಲಿ ಸಂಚಾರ ಮಾಡುವರು.

ಮುಂಬಯಿಯ ಶ್ರೀ ವೆಂಕಟೇಶದೇವರ ಪ್ರತಿಷ್ಠಾಪನೆ.

—o—

ಮುಂಬಯಿಯಲ್ಲಿ ಫಣಸವಾಡಿಯಲ್ಲಿ ನಾಲ್ಕೈದು ವರ್ಷಗಳಿಂದ ಶ್ರೀ ವೆಂಕಟೇಶ ಹಾಗು ಲಕ್ಷ್ಮೀ ದೇವಿಯ ಗುಡಿಯನ್ನು ಕಟ್ಟುವ ಕೆಲಸ ನಡೆದು, ಅದು ಜ್ಯೇಷ್ಠದೊಳಗಾಗಿ ಪೂರ್ಣವಾಗುವದು. ಗುಡಿಯನ್ನು ದ್ರಾವಿಡರ ಕಟ್ಟಣೆಯಂತೆ ಕಟ್ಟಿದ್ದಾರೆ ಮಹಾದ್ವಾರದ ಮೇಲೆ ಬಹಳ ಎತ್ತರವಾದ ಗೋಪುರ ಕಟ್ಟಿದ್ದಾರೆ. ಉತ್ತರ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ಹೆಸರಾದ ಶಿಲ್ಪಿಗಳನ್ನು ತಂದು, ದೇವಾಲಯದ ಕೆಲಸವನ್ನು ಮನೋಹರವಾಗಿ ಮಾಡಿಸುತ್ತಿದ್ದಾರೆ. ಹತ್ತು ಲಕ್ಷದ ವೆಚ್ಚ ಬಂದಿದೆ.

ಚತುಃಶಾಸ್ತ್ರ ಪಂಡಿತರೆಂದು ದಿಗಂತ ಕೀರ್ತಿ ಪಡೆದ ಪ್ರತಿವಾದಿ ಭಯಂಕರ ಅನಂತಾಚಾರ್ಯರು ಈಗ ಯತ್ಯಾಶ್ರಮ ಪಡೆದಿದ್ದಾರೆ ಶ್ರೀ ವೈಷ್ಣವ ಪಂಥದ ಜಗದ್ಗುರುಗಳಾಗಿದ್ದಾರೆ. ಇವರೇ ದೇವರ ಪ್ರತಿಷ್ಠಾಪನೆ ಮಾಡುವರು. ಪಾದಚಾರಿಯಾಗಿ ಕಂಚಿಯಿಂದ ಹೊರಟು, ಈಗ ಪಂಢರಪೂರವನ್ನು ದಾಟಿದ್ದಾರೆ. ಪ್ರತಿಷ್ಠಾಪನೆಯ ಸಮಾರಂಭವು ಜ್ಯೇಷ್ಠ ಶುದ್ಧ ದಶಮಿಯ ದಿವಸ ಪ್ರಾರಂಭವಾಗುವದು.

ಶ್ರೀಮದಾಚಾರ್ಯರು ಈ ದೇವಾಲಯದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನೂ, ಅನ್ನಛತ್ರವನ್ನೂ ಇಡಬೇಕೆಂಬ ಆಲೋಚನೆ ಮಾಡಿದ್ದಾರೆ. ವೈಷ್ಣವ ಪಂಥದ ಗುಜ್ಜರು ಈ ಕಾರ್ಯದಲ್ಲಿ ಇವರಿಗೆ ದ್ರವ್ಯ ಸಹಾಯ ಮಾಡಲು ವಿಶಾಲತೆಯಿಂದ ಮುಂದೊರೆದಿರುತ್ತಾರೆ.

ಮ್ಯಾಜಿಸ್ಟ್ರೇಟರ ಕೋರ್ಟಿಗೆ ಬಹಿಷ್ಕಾರ.

—o—

ಮದ್ರಾಸದಲ್ಲಿ ಬರಮಾ ಆಯಿಲ ಕಂಪನಿಯು ಕೂಲಿಕಾರರ ಮೇಲೆ ಗುಂಡು ಹಾಕಿದ ಪ್ರಕರಣದ ಪೂರ್ವ ವಿಚಾರಣೆಯು ಮ್ಯಾಜಿಸ್ಟ್ರೇಟರ ಮುಂದೆ ನಡೆದಿದೆ ಆದರೆ ಈ ವಿಚಾರಣೆಯು ಶ್ರೀಮಂತರಾದ ಕಂಪನಿಯವರ ವಿಷಯವಾಗಿ ಒಂದು ತರಹ ಮತ್ತು ಬಡವರಾದ ಕೂಲಿಕಾರರ ದೆಸೆಯಿಂದ ಬೇರೊಂದು ತರಹವಾಗಿ ಸಂಪೂರ್ಣವಾಗಿ ಪಕ್ಷಪಾತದ್ದಾಗಿರುತ್ತದೆಂದು ಕೂಲಿಕಾರರ ವಕೀಲರಾದ ಮಿ. ಚಕ್ರಾಯರವರು ಮ್ಯಾಜಿಸ್ಟ್ರೇಟರ ಮೋರೆಯ ಮೇಲೆ ಹೇಳಿ ತಮಗೆ ಮುಂದೆ ಕೆಲಸ ನಡಿಸುವ ಕಾರಣವಿಲ್ಲೆಂದು ಸ್ಪಷ್ಟವಾಗಿ ನುಡಿದು ಕೋರ್ಟಿಗೆ ಶರಣು ಹೊಡೆದು ಹೊರಬಿದ್ದರು. ಮ್ಯಾಜಿಸ್ಟ್ರೇಟರು ಕಂಪನಿಯ ಸಾಕ್ಷೀದಾರನು ಬಂದಾಗ ಒಂದೆರಡು ಪ್ರಶ್ನೆಗಳನ್ನು ಕೇಳಿ ಆತನನ್ನು ಹೋಗಗೊಡುತ್ತಿದ್ದರು. ಮತ್ತು ಕೂಲಿಕಾರರ ಸಾಕ್ಷೀದಾರನು ಬಂದಾಗ ಕಿಡಿಯನ್ನು ಗುಡ್ಡ ಮಾಡಿ ಅದಷ್ಟು ರಗಳೆ ಬೆಳೆಸಿ, ಸಾಕ್ಷೀದಾರನನ್ನು ತ್ರಾಹಿ ತ್ರಾಹಿ ಮಾಡುತ್ತಿದ್ದರು. ಈ ಪ್ರಕಾರ ಪ್ರತ್ಯಕ್ಷ ಕಂಡುಬರುವ ಸಾಕ್ಷಿಯ ಪಕ್ಷಪಾತವನ್ನು ಕಂಡು, ಚಕ್ರಾಯಶೆಟ್ಟರು ಕೋರ್ಟಿಗೆ ಸಲಾಮು ಹೊಡೆದರೆ ಆಶ್ಚರ್ಯವೇನು?

ನೋಟೀಸು.

ಮೆ॥ ರಜಿಸ್ಟ್ರಾರ ಸಾಹೇಬ ಬಹಾದ್ದೂರ ಸಹಕಾರಿ ಸಂಘ ಪುಣೆ ಇವರು ಕರ್ಜಗಿ ತಾಲ್ಲೂಕ ಹೈಕೋಣನತಂಬಿಗಿ ಸಹಕಾರಿ ಸಂಘವನ್ನು ರದ್ದು ಮಾಡಿದ ಬಗ್ಗೆ ಹಾಗು ಕೆಳಗೆ ಸಹಿ ಮಾಡಿದವರನ್ನು ಸದರ ಸಂಘದ "ಲಿಕ್ವಿಡೇಟರ" ರನ್ನಾಗಿ ನೇಮಿಸಿದ ಬಗ್ಗೆ ಮುಂಬಯಿ ಸರಕಾರಿ ಗ್ಯಾಜೆಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಕಾರಣ ಸದರ ಸಂಘದಿಂದ ಯಾರಿಗಾದರು ಏನಾದರು ಸಲ್ಲತಕ್ಕದ್ದಿದ್ದರೆ, ಆ ಬಗ್ಗೆ ನಮ್ಮ ಕಡೆಗೆ ಈವತ್ತಿನಿಂದ ಎರಡು ತಿಂಗಳೊಳಗಾಗಿ ಲೇಖಿಯಿಂದ ತಿಳಿಸಬೇಕಾಗಿ ವಿನಂತಿ ಅದೆ.

ತಾ॥ ೧೩-೫-೧೯೩೭ ಇಸ್ವಿ

R. B. Khudanpur,
ಆಡಿಟರ, ಸಹಕಾರಿ ಸಂಘ, ಹಾವೇರಿ
ಹಾಗು
ಲಿಕ್ವಿಡೇಟರ ಕೋಣನತಂಬಿಗಿ ಸಂಘ

ಎಮ್ಮೆಗಳ ತಪಾಸು ಹೇಳಿದವರಿಗೆ ೧೫ ರೂಪಾಯಿ ಇನಾಮು.

ನಮ್ಮ ಮಾಲಕಿಯ ಮೂರು ಎಮ್ಮೆಗಳು ಧಾರವಾಡ ತಾಲೂಕ ಕರಡಿಗುಡ್ಡದ ಊರ ಅಗಸಿಯೊಳಗಿಂದ ತಪ್ಪಿಸಿಕೊಂಡು ಹೋಗಿರುತ್ತವೆ ಇಂದಿಗೆ ೧೪ ದಿವಸವಾಯಿತು. ಅವುಗಳ ಚಹರೆಪಟ್ಟಿ—

೧ ಹಣೆಚುಕ್ಕಿ, ಮೆಂಗಳ ಕಣ್ಣು, ಪೂಚಬಾಲ, ನಾಲ್ಕು ಕಾಲು ಕೆಳಗೆ ಬೆಳ್ಳಗೆ, ಕೋಡು ಒಂದು ಹಿಂಬರಗೊಂಬು, ಎಡಕ್ಕೆ ಸ್ವಲ್ಪ ಹೊಳ್ಳಿದೆ. ತುಂಬ ಕರಿದಾಗಿದೆ. ಒಣ್ಣ ಬಿಳಿಸುಳಿ. ಹಗಲು ಹೂಡಿದ ಕಲೆಯಿದೆ.

೨ ಹಿಂಡುತ್ತದೆ ಕರೇ ಮಣಕ ಒಂದೇ ಸಡಿಲ ಹಾದದ್ದು ತಟ್ಟಿಗೊಂಬಿನದು ಗೋಣಿನ ಮೇಲೆ ಕೊಂಬಿನ ಹೊಂಕಳ ನಾಲ್ಕು ಬೊಟ್ಟು ಸೋತು ಬಿದ್ದದೆ. ಬಾಲ ಮೊಣಕಾಲ ಮೇಲೆ ನಿಲ್ಲುತ್ತದೆ. ತೀರ ಉದ್ದ ಇಲ್ಲ.

೩ ಛಾಜ್ಜಲ ಮಣಕ ತುಂಬ ಕರಿದಾಗಿರುತ್ತ

ನೋಟೀಸು.

—o—

ಮಿ|| ರಜಿಸ್ಟ್ರಾರ ಸಾಹೇಬ ಬಹಾದ್ದೂರ ಸಹಕಾರಿ ಸಂಘ ಪುಣೆ ಇವರು ಕರ್ಜಗಿ ತಾಲ್ಲೂಕ ಹೈಕಿ ಕೋಣನತಂಬಿಗಿ ಸಹಕಾರಿ ಸಂಘವನ್ನು ರದ್ದು ಮಾಡಿದ ಬಗ್ಗೆ ಹಾಗು ಕೆಳಗೆ ಸಹಿ ಮಾಡಿದವನನ್ನು ಸದರ ಸಂಘದ "ಲಿಕ್ವಿಡೇಟರ" ರನ್ನಾಗಿ ನೇಮಿಸಿದ ಬಗ್ಗೆ ಮುಂಬಯಿ ಸರಕಾರಿ ಗ್ಯಾಜಿಟಿನಲ್ಲಿ ಪ್ರಸಿದ್ಧ ಮಾಡಿರುತ್ತಾರೆ. ಕಾರಣ ಸದರ ಸಂಘದಿಂದ ಯಾರಿಗಾದರು ಏನಾದರು ಸಲ್ಲತಕ್ಕದ್ದಿದ್ದರೆ, ಆ ಬಗ್ಗೆ ನಮ್ಮ ಕಡೆಗೆ ಈ ಪತ್ರಿಕೆಯಿಂದ ಎರಡು ತಿಂಗಳೊಳಗಾಗಿ ಲೇಖದಿಂದ ತಿಳಿಸಬೇಕಾಗಿ ವಿನಂತಿ ಇದೆ.

ತಾ|| ೧೩-೫-೧೯೩೭ ಇಸ್ವಿ

R. B. Khudanpur.

ಆಡಿಟರ, ಸಹಕಾರಿ ಸಂಘ, ಹಾವೇರಿ

ಹಾಗು

ಲಿಕ್ವಿಡೇಟರ ಕೋಣನತಂಬಿಗಿ ಸಂಘ

ನೋಟೀಸು

ಪಟೇಲಸಾಹೇಬ ವ|| ಮಹಮುದಸಾಹೇಬ ...ಮುದನಗರ ಸಾ|| ಹೊಸೂರ ತಾಲೂಕ ಬಂಕಾಪುರ ಇವನಿಗೆ–

ಕೆಳಗೆ ಹೆಸರುಬಟ್ಟಿನ ಗುತಾರ ಮಾಡಿದವಳು ಕೊಡುವ ನೋಟೀಸೇನಂದರೆ– ನೀನು ನನ್ನ ಲಗ್ನವಾಗಿ ಏಳೆಂಟು ವರುಷವಾಯಿತು. ನಾನು ಚಿಕ್ಕಂದಿನಿಂದ ಅಪ್ರಾಪ್ತದ ವಿಷಯದಲ್ಲಿ ನಿನ್ನ ಮನೆಗೆ ಹೋಗುತ್ತಾ ಬರುತ್ತಾ ಇದ್ದೆನು. ಆದರೆ ನೀನು ನನಗೆ ಬಹಳೇ ಉಪದ್ರವ ಕೊಟ್ಟಿ ಕಾರಣ ನಮ್ಮ ತಂದೆಯು ಪಂಚ ನಾಲ್ಕು ಮಂದಿ ಪಂಚರನ್ನು ಕರಕೊಂಡು ಕರಿಯಲಿಕ್ಕೆ ಬಂದಾಗ್ಗೆ ನೀನು ನನ್ನ ಮೇಲೆ ಹಾಕಿದ ವಸ್ತ್ರಗಳು ಅಂದರೆ ಮಹಾರಿನಲ್ಲಿ ಕಟ್ಟಿದ ಬಂಗಾರದ ಬುಗುಡಿ ಎರಡು ತೊಲಿ ಅರು, ಬೆಳ್ಳಿಯ ಪಟ್ಟಿ ೧೨ ತೊಲಿ, ಸರಗಿ ಬೆಳ್ಳಿಯದು ೧೨ ತೊಲಿ, ತೋಳಬಂದಿ ಎರಡು ೨೪ ತೊಲಿ, ಈ ವಸ್ತುಗಳನ್ನು ಮತ್ತು ನಮ್ಮ ತವರಮನೆಯವರು ಕೊಟ್ಟ ಗುಂಡಿನ ಸೀರೆ ಒಂದು ಕಿಮ್ಮತ್ತು ರೂಪಾಯಿ ೫೦, ನತ್ತು ಮತ್ತು ಬುಲಾಕ್, ಬುಗಡಿ ಜೋಡು ಕಾಲೊಳಗಿನ ಬೆಳ್ಳಿ ವಸ್ತ್ರದ ಕಿಮ್ಮತ್ತು ೫೦, ರೂಪಾಯಿ ಇಟ್ಟುಕೊಂಡು ನನ್ನನ್ನು ಸೀರಿಲೆ ಕಳಿಸಿ ಮೂರು ವರ್ಷವಾಯಿತು. ನಾನು ನಿನ್ನ ಬಿಟ್ಟು ಇನ್ನು ಎರಡು ವರ್ಷವಾಯಿತು ನಾನು ನಿನ್ನ ಮೇಲೆ ಕರಕೊಂಡು ಹೋಗಿರೆಂದು ತಮಗೆ ಏಳೆಂಟು ಪತ್ರ ಬರೆದರೂ ಒಂದು ಕಡೆಕೊಂಡು ಹೋಗಲಿಲ್ಲ. ಆದರೆ ಈಗ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಮೇಲೆ ಬರೆದ ವಸ್ತ್ರದ ಹೊಟ್ಟೆಯ ದೆಸೆಯಿಂದಾ ಸಾಲಾ ಮಾಡಿ ತಿಂದ ಎರಡುನೂರು ರೂಪಾಯಿಗಳನ್ನು ಕೊಟ್ಟು ನನಗೆ ಕರಕೊಂಡು ಹೋಗಬೇಕು. ಆ ಮುದ್ದತಿನಲ್ಲಿ ಕರಕೊಂಡು ಹೋಗದಿದ್ದರೆ– ನಾನು ಎರಡನೆಯವರಿಗೆ ಉಡಕಿ ಮಾಡಿಕೊಂಡು ಹೋಗುತ್ತೇನೆ. ಆ ಮೇಲೆ ನಿನ್ನದು ನನ್ನ ಮೇಲೆ ಮತ್ತು ನನ್ನ ಉಡಕಿ ಗಂಡನ ಮೇಲೆ ಯಾವ ಹಕ್ಕು ಉಳಿಯಲಾರದು. ಈಗಾದ ಹೊಟ್ಟೆ ಸಾಲ ಮತ್ತು ಮಹಾರಿನ ದಾಗೀನಗಳ ದೆಸೆಯಿಂದ ಕಾಯದೆಶೀರ ಇಲಾಜ ಮಾಡುವನು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲುಂಟು. ತಿಳಿಯುವದು. ತಾ. ೧೬ ಮೇ ೩೭ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುತಾರ ಫತ್ತೇಶಾ ಕೋಮ ಪಟೇಲಸಾಹೇಬ ಅಹಮುದನಗರ ಸಾ|| ಉಪ್ಪಿನಬೆಟಗೇರಿ ಇವಳದ್ದು ಇರುತ್ತದೆ.

ನೋಟೀಸು.

—o—

ರಾಜೇಸಾಹೇಬ ವ|| ಪೀರಸಾಹೇಬ ಸಾಕೀನ ಅಟ್ಟಿಗಾಗಿ ಪೇಟಾ ಮುಂಡರಗೋಡ ಇವನಿಗೆ–

ಕೆಳಗೆ ಹೆಬ್ಬೆಟ್ಟಿನ ಗುತಾರ ಮಾಡುವ ಇಮಾಮಬಿ ಕೋಮ ರ. ಜೇಸಾಹೇಬ ಸಾಕೀನ ಅಂದಲಗಿ ಪೇಟಾ ಮುಂಡಗೋಡ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಉಡಕೆಯ ಗಂಡನಾಗಬೇಕು ನಾನೊಬ್ಬ ಫಕೀರ ಮಗಳು ನನ್ನ ನಿನ್ನ ಮದವಿಯಾದನಂತರ ನೀನು ಸ್ವಬುದ್ಧಿಯಾಗಿ ಛಿನಾಲಿಮಾಡದೆ ನು ದಿನತುಂಬಿದವಳಾದ ಒಳಿತ ಒಸಗೆಯಿಂದು ತವರು ಮನೆಗೆ ಕಳಿಸಿ ಅಲ್ಲಿ ಹಡೆದೆನು. ಆದರೆ ಕೂಸು ಹೋಯಿತು ನನ್ನ ಬಾಣಂತನ ಮಾಡದ ಒಳಿತ ನೀನು ಒಂದು ನನ್ನನ್ನು ಕರಕೊಂಡು ಹೋಗಲೇ ಇಲ್ಲ. ನೀನು ಒಬ್ಬ ಮಾದರ ಹೆಂಗಸಿನ ಸಹವಾಸದಲ್ಲಿ ಬಿದ್ದು ನನ್ನನ್ನು ಮರೆತುಬಿಟ್ಟೆ. ಮುಸಲಮಾನ ಧರ್ಮಶಾಸ್ತ್ರ ಪ್ರಕಾರ ಮಾವರನ್ನು ಮುಸಲಮಾನ ಜಾತಿಯಲ್ಲಿ ತಕ್ಕ ಕ್ಲೇಶಕ್ಕೆ ಒಳಪಡಿಸಿವೆ. ಆದರೆ ಮಾದರಲ್ಲಿ ಸೇರಿದವನನ್ನು ಅವರ ಮುಸಲಮಾನದವರಲ್ಲಿ ತೆಗೆದುಕೊಳ್ಳಲಿಕ್ಕೆ ಬರುವದಿಲ್ಲ. ನೀನು ಈಗ ತಲೆಗೆಟ್ಟು ಮೂಲಕ ನನಗೆ ನಿನ್ನ ಕೂಡ ಬಾಳುವೆ ಮಾಡುವ ಮಾರ್ಗವೇ ಉಳಿದಿಲ್ಲ. ನಿನ್ನ ಕಡೆಯಿಂದ ನೋಡಿದರೆ ತಕ್ಕೊಂಡ ನಂತರ ನನ್ನ ಜೀವನ ಸಾಗುವಂತಿಲ್ಲ ಕಾರಣ ಈ ನೋಟೀಸು ಕೊಟ್ಟಿದ್ದೇನೆ. ನೀನು ಈ ನೋಟೀಸ ನೋಡಿದ ಪತ್ರಿಕೆಯಿಂದ ತಿಳಿಯಬೇಕು ಮತ್ತು ನೀನು ಕಾಯದೆಶೀರ ರೀತಿಯಿಂದ ನನಗೆ ಒಂದುಕ್ಕೆ ಮಹಾರಿನ ರಕಾ ಕೊಡಬೇಕು ನನ್ನ ವೈವಾಹಿಕ ದಾಗೀನ ಕೊಡಬೇಕು ಬಾಣಂತಿತನ ಮತ್ತು ಇತ್ಯಾದಿಗಾಗಿ ಐದಾರು ತಿಂಗಳು ನನ್ನ ಹೊಟ್ಟೆಗೆ ಹತ್ತಿದ ಖರ್ಚು ಕೊಡಬೇಕು. ಜರ ಇದಕ್ಕೆ ತಪ್ಪಿದರೆ– ಇವುಗಳ ಬಾಬತು ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡುವೆನು ಮತ್ತು ಆ ಬಾಬತು ಪತ್ರದ ಯಾವತ್ತು ಖರ್ಚಿನ ಬೋಜಾ ನಿನ್ನ ಮೇಲಿರುವದು. ನಾನು ಉಡಕಿ ಮಾಡಿಕೊಂಡ ಬಳಿಕ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕಿ ಗಂಡನ ಮೇಲೆ ಯಾವ ರೀತಿಯಿಂದಲೂ ನಡೆಯಲಾರದು. ಈ ನೋಟೀಸಿನ ಖರ್ಚು ಸಹ ನಿನ್ನ ತಲೆಯ ಮೇಲಿರುತ್ತದೆ ತಿಳಿಯುವದು ಅಂತಾ ಕೊಟ್ಟ ನೋಟೀಸು

ತಾ|| ೧೬-೫ ೧೯೩೭ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಇಮಾಮಬಿ ಕೋಮ ರಾಜೇಸಾಹೇಬ ಅಟ್ಟಿಗೇರಿ ಈಕೆಯದು ಇರುತ್ತದೆ

ತ್ವರೆ ಮಾಡಿರಿ. **ಮಾರಿಕಾ · ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯುಳ್ಳಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸುವರು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾಂವ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೂಲಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬಿಡಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ | ಧಾರವಾಡ ಬುಧವಾರ ತಾ. [illegible] ೧೯೩೨ | ಸಂಚಿಕೆ ೧೦೩

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಪೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಬ್ಬಿನ ಗಾಣಕ್ಕೆ ಪದಕವು ದೊರೆಕಿದೆ ಪೆಟ್ಟಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ವಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೀಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರ ಪೈ— ೨೦ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ದರ. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಕತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ರೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಕ್ಕರಡು ಆಣೆಯಂತಿರುತ್ತದೆ.

ಎ. ಬಿ. ಶೆಟ್ಟಿ

ಮ್ಯಾನೇಜಿಂಗ ಡೈರೆಕ್ಟರ

ಕಾಲರಾ ಪಿಲ್ಸ

—೦—

ಜೇನೆ ಬಂದ ಕೂಡಲೆ ಉಪಯೋಗಿಸಿರಿ

ತಪ್ಪದೆ ಗುಣ.

—೦—

ನಾನು ಕಾಲರಾ ಜೇನೆಯ ಮೇಲೆ ರಾಮಬಾಣ ಮದ್ದನ್ನು ಹುಡುಕಿ ತೆಗೆದಿದ್ದೇನೆ. ನಾಲ್ಕು ಗುಳಿಗೆ ತಕ್ಕೊಳ್ಳುವದರಿಂದ ಪೂರ್ತಾ ಗುಣವಾಗುತ್ತದೆ. ನಾಲ್ಕು ಗುಳಿಗೆಗಳ ಕಿಮ್ಮತ್ತು ೧ ಆಣೆ. ಧಾರವಾಡ, ಮದಿಹಾಳ, ತಿಮ್ಮಳ್ಳಿ, ಕಲಘಟಗಿ, ಮುಂತಾದ ಊರುಗಳಲ್ಲಿ ಗುಣ ಹೊಂದಿದವರಿಂದ ಸರ್ಟಿಫಿಕೇಟುಗಳು ದೊರೆತವೆ. ಸರ್ಟಿಫಿಕೇಟ ವ್ಹಿ. ಪಿ. ಯಿಂದಲೂ ಕಳಿಸುವೆನು. ವ್ಹಿ. ಪಿ. ಖರ್ಚು ಅನುಮಾನ ತಿಳಿಸುವೆನು.

ಗಂಗಪ್ಪ ದಾಸಪ್ಪ ಎಲಿಗಾರ,

ಮಾರ್ಕೆಟ ಧಾರವಾಡ.

ದಿ ಧಾರವಾಡ ಅರ್ಬನ ಕೋ. ಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಯು ಆರು ಲಕ್ಷದ ಮೇಲೆ ಇದೆ. ಠೇವಣಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸಲ್ಪಡುವದು. ಠೇವಣಿಯು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚಲೋ ಬಡ್ಡಿ ಕೊಡುತ್ತೇವೆ.

ಹೆಚ್ಚಿನ ಸಂಗತಿಗಳನ್ನು ಬ್ಯಾಂಕಿನ ಕಡೆ ಪತ್ರ ಮಾಡಿದರೆ ತಿಳಿಸಲಾಗುವದು.

ಮಾಸ್ತಮರಡಿ ಬಿ. ಬಿ. ದೇಸಾಯಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ–೧೮-೫-೨೭ ನೇ ಇಸ್ವಿ

ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸ್ಕೂಲಬೋರ್ಡಿನ ಅ್ಯಡಮಿನಿಸ್ಟ್ರೇಟರರ ವಿಷಯ.

ಧಾರವಾಡ ಜಿಲ್ಲೆಯ ಲೋಕಲಬೋರ್ಡಿನ ಸ್ಕೂಲಬೋರ್ಡಿನ ಅ್ಯಡಮಿನಿಸ್ಟ್ರೇಟರರ ನೇಮಣೂಕಿಗೆ ವಿದ್ಯಾಖಾತೆಯ ಮಂತ್ರಿಯವರು ಒಪ್ಪಿಗೆ ಕೊಡದ ಸುದ್ದಿಯನ್ನು ಈ ಮೊದಲು ಬರೆದಿದ್ದೇವೆ. ಅ್ಯಡಮಿನಿಸ್ಟ್ರೇಟರರಿಗೆ ಕೆಲಸದ ಅನುಭವವಿಲ್ಲೆಂಬ ಕಾರಣ ಹಚ್ಚಿ, ಅವರು ಈ ನೇಮಣೂಕಿಯನ್ನು ನಾ-ಮಂಜೂರ ಮಾಡಿದ್ದಾರೆ. ಆದರೆ ಇದಕ್ಕೆ ಸ್ಕೂಲಬೋರ್ಡಿನವರು ಪುನಃ ಉತ್ತರವಾಗಿ ಪತ್ರ ಬರೆದು, ಅನುಭವದ ಅವಶ್ಯಕತೆಯಿಲ್ಲೆಂದು ತಿಳಿಸಿ, ಮಂಜೂರ ಕೇಳಿದ್ದಾರೆಂದು ವರ್ತಮಾನವುಂಟು. ಈ ವರ್ತಮಾನವು ದಿಟವಿದ್ದರೆ ಆಶ್ಚರ್ಯವೇ ಸೈ! ಇದೇ ಸ್ಕೂಲಬೋರ್ಡಿನವರು ಸುಪರವಾಯಜರರಾಗುವಂಥವರು ಶಿಕ್ಷಣ ಕೆಲಸದಲ್ಲಿ ಹತ್ತು ವರ್ಷ ನುರಿತವರಿರಬೇಕೆಂಬ ನಿಯಮ ಹಾಕಿದ್ದಾರೆ. ಇವರ ಮೇಲೆ ಅಧಿಕಾರಿಯಾಗಿ, ಇವರಿಂದ ಕೆಲಸ ತಕ್ಕೊಳ್ಳುವ ಅ್ಯಡಮಿನಿಸ್ಟ್ರೇಟರನು ಶಿಕ್ಷಣ ವಿಷಯವಾಗಿ ಏನೂ ಅರಿಯದವನಾಗುವದೆಂದರೆ- ಸಂಸ್ಕೃತದಲ್ಲಿ ಹೇಳುವಂತೆ ನಿರಕ್ಷರ ಮಂತ್ರಿಯಂತಾಗುತ್ತದೆ. ದ್ವೈವಿಯರಾದ ಅ್ಯಡಮಿನಿಸ್ಟ್ರೇಟರರು ತಾವು ಬೇಕಾದಷ್ಟು ಸಹಾಯಕರೆಂದೂ ದಣಿವೇ ಆಗುವದಿಲ್ಲೆಂದೂ ತಮ್ಮ ಅರ್ಜಿಯಲ್ಲಿಯೇ ಬರೆಕೊಂಡಿದ್ದಾರೆ. ಇವರು ದಣಿವು ಅಥವಾ ಬಾಯಾರಿಕೆಯಿಲ್ಲದೆ ಊರಿಂದೂರಿಗೆ, ಶಾಲೆಯಿಂದ ಶಾಲೆಗೆ ಹೋಗುವದು ಶಿಕ್ಷಕರು ಯಾವ ಪ್ರಕಾರ ಕಲಿಸುತ್ತಾರೆಂಬದನ್ನು ನೋಡಲಿಕ್ಕಾಗದೆ, ಶಾಲೆಯಲ್ಲಿ ಎಷ್ಟು ಹುಡುಗರಿದ್ದಾರೆ. ಎಷ್ಟು ವರ್ಗಗಳುಂಟು. ಹಾಜರಿ ಹೇಗೆ ಎಂಬದು ಮಾತ್ರ ನೋಡಲಿಕ್ಕೆ ಹೋಗುವಂತಾಗುತ್ತದೆ. ಅ್ಯಡಮಿನಿಸ್ಟ್ರೇಟರನಾಗುವಂಥವನಿಗೆ ಶಿಕ್ಷಣದ ಎಷ್ಟು ಅನುಭವವಿಲ್ಲದಿದ್ದರೆ- ಅವರ ಅನುಭವವನ್ನು ಸುಪರವಾಯಜರರೂ, ಶಿಕ್ಷಕರೂ ತಮ್ಮಂತೆ, ಸ್ವತಂತ್ರವಾಗಿ ನಡೆಯಬಹುದು. ಅ್ಯಡಮಿನಿಸ್ಟ್ರೇಟರರಾಗುವಂಥವರು ಗ್ರ್ಯಾಜ್ಯುಏಟರಿರಬೇಕೆಂಬ ನಿಯಮವಿದ್ದು, ಅವರು ಅದೇ ಹೊಸದಾಗಿ ಬಿ. ಎ. ದ ಡಿಗ್ರಿ ಪಡೆದವರೆಂದು ಅರ್ಥ ಮಾಡುವದು ಮೂರ್ಖತನವೂ ಬೇಕೆಂದು ಹುಚ್ಚನ್ನು ಮೈ ಮೇಲೆ ಹಾಕಿಕೊಳ್ಳುವಂಥದ್ದೂ ಆಗುತ್ತದೆ. ಡಿಗ್ರಿಯ ಕೂಡ ಅನುಭವದ ಇಮ್ಮಡಿ, ಮುಮ್ಮಡಿ ಡಿಗ್ರಿ ಬೇಕಾಗುತ್ತದೆ ಬಿ ಟಿ. ಪಾಸಾದ ಹೊರ್ತು ವಿದ್ಯಾಖಾತೆಯಲ್ಲಿ ನೇಮಣೂಕಿಯು ಕಾಯಂವಾಗುವದಿಲ್ಲ. ಹತ್ತೆಂಟು ಜನ ಬಿ. ಟಿ. ಗಳ ಮೇಲಧಿಕಾರಿಯಾಗುವಂಥವನು ಮಾತ್ರ ಬರೇ ಬಿ ಎ. ಮತ್ತು ತೀರ ಹೊಸಬನಾದರೂ ಸಾಗುತ್ತದೆಂದು ಹೇಳುವದು ಲೋಕಾಪಹಾಸ್ಯಕ್ಕೆ ಕಾರಣವಾಗುತ್ತದೆಂದು ಹೇಳತಕ್ಕ ಆವಶ್ಯಕತೆಯಿಲ್ಲ.

ಲಂಡನದಲ್ಲಿ ರಶಿಯಾದ ವಕಾಲತಿಯ ಮೇಲೆ ದಾಳಿಯು.

ಪೇಕಿಂಗದಲ್ಲಿ ಚೀನ ಸರಕಾರದವರು ರಶಿಯಾದ ವಕಾಲತಿಯ ಮೇಲೆ ಮಾಡಿದ ಅಭಿಯೋಗದಲ್ಲಿ ರಶಿಯಾ ಸರಕಾರದವರು ಯಾವ ಪ್ರಕಾರದ ತೀಕ್ಷ್ಣ ಉಪಾಯ ಮಾಡದೆ, ಹೆಣದಂತೆ ಕೂತರು. ಅದರ ಲಾಭವನ್ನು ಇಂಗ್ಲೀಷ ಸರಕಾರದವರು ತಮ್ಮ ರಾಜಧಾನಿಯಾದ ಲಂಡನ ಪಟ್ಟಣದಲ್ಲಿ ತಕ್ಕೊಂಡರು. ಅರಕಾಸನೆಂಬ ಇವರ ವ್ಯಾಪಾರದ ನಿವಾಸಸ್ಥಾನಕ್ಕೆ ಪೋಲೀಸರು ಮುತ್ತಿಗೆ ಹಾಕಿದರು. ಒಳಗೆ ಹೋಗಿ ಝಡತಿಗೆ ಪ್ರಾರಂಭಿಸಿದರು. ಹೆಂಗಸರ ಮೈ ಝಡತಿಯನ್ನು ಗಂಡಸರಿಂದ ಮಾಡಿಸಿದರು. ವಾರಂಟೂ ತೋರಿಸಲಿಲ್ಲ. ಈ ಪ್ರಕಾರ ತಪಾಸ ಮಾಡಿಸಿದ್ದರ ವಿರುದ್ಧವಾಗಿ ರಶಿಯಾದ ರಾಯಭಾರಿಯು ತಕರಾರ ಮಾಡಿದ್ದಾನೆ. ಅರಕಾಸ ಮನೆಯಲ್ಲಿ ಕೋಟೆಯ ಗೋಡೆಯಂತೆ ಭದ್ರವಾದ ಗೋಡೆಗಳನ್ನು ನೋಡಿದರು. ಇವನ್ನು ಆಧುನಿಕ ಸಾಧನಗಳಿಂದ ಉಪಕರ ಮತ್ತು ಯಂತ್ರಗಳ ಸಹಾಯದಿಂದ ಒಡೆದರು. ರಶಿಯರು ಸೇಫಿನ ಕೀಲೀ ಕೈಗಳನ್ನು ಕೊಡದ್ದರಿಂದ, ಅವನ್ನೂ ಜುಲುಮೆಯಿಂದ ಒಡೆಯುವರು. ಒಡೆಯುವದು, ಕಾಗದಪತ್ರಗಳನ್ನು ಜಪ್ತ ಮಾಡುವದೂ ನಡೆದದೆ. ಇಂಗ್ರೇಜಿ ಸರಕಾರದ ಕಾಗದಪತ್ರಗಳು ಇಂಗ್ಲಂಡ ದೇಶವನ್ನು ಬಿಟ್ಟು ಹೊರಗೆ ಹೋಗಬಾರದೆಂದು ತಾವು ಇಂಥ ಬಲಾತ್ಕಾರದ ಉಪಾಯ ಕೈಕೊಂಡಿರುತ್ತೇವೆಂದೂ ಈ ಸಂಬಂಧದ ಯಾವತ್ತು ಜವಾಬದಾರಿಯು ತಮ್ಮ ಮೇಲಿರುತ್ತದೆಂದೂ ಮಿ. ಚರ್ಚಿಲ್ಲ ಸಾಹೇಬರು ಹೇಳುತ್ತಾರೆ. ರಶಿಯಾದ ಕಾಗದಪತ್ರಗಳನ್ನು ಪರೀಕ್ಷಾ ಮಾಡಿದ ಬಳಿಕ ಸ್ಥಳದಲ್ಲಿ ತಂದರೆ- ಅವುಗಳ ಬಗ್ಗೆ ಆಕ್ಷೇಪಣೆ ತೆಗೆಯಬಾರದೆಂದು ಎರಡೂ ರಾಜ್ಯಗಳ ನಡುವೆ ಅದಂಥ ಕರಾರವಿರುತ್ತದೆ. ಇಂಥ ಕರಾರವು ಒಂದು ದೇಶವು ಇನ್ನೊಂದು ದೇಶದ ಕೂಡ ಮಾಡಿದ್ದಿರುತ್ತದೆ. ಈ ಕರಾರ ಮುರಿದಿರೆಂದು, ರಶಿಯಾದ ರಾಯಭಾರಿಯು ಇಂಗ್ಲಿಷ ಮಂತ್ರಿಗಳಿಗೆ ತಿಳಿಸಿದ್ದಾನೆ. ಈತನು ಈಗ ಇಲ್ಲಾದ ಅನಾಯುತವನ್ನು ತನ್ನ ಸರಕಾರಕ್ಕೆ ತಿಳಿಸಿದ್ದಾನೆ. ಅಲ್ಲಿಂದ ಅಪ್ಪಣೆಯಾದಂತೆ ಮುಂದೆ ವರ್ತಿಸುವನು.

ಶ್ರೀಮದ್ವೀರಶೈವ ಧರ್ಮದ ಶ್ರೀಮದ್ ಗುರು-ನಿರಂಜನ ಜಂಗಮ ಪೀಠಗಳ ಸನ್ನಿಧಿಗೂ ವೀರಶೈವ ಸಮಾಜ ಬಂಧುಗಳಿಗೂ

ಅರಿಕೆಯು.

ಪೂರ್ವದಿಂದಲೂ ವೀರಶೈವ ಸಮಾಜದವರಾಗಿ ಕಾಲಗತಿಯಿಂದ ಬಳಿಕೆ ತಪ್ಪಿದ ಹಡಪದವರೂ ಮಡಿವಳರೂ ಧರ್ಮಸಂಸ್ಕೃತಿಯನ್ನು ಹೊಂದಿ ಪುನೀತರಾಗಲು ಬಹಳ ಸ್ಥಳಗಳಲ್ಲಿ ಬಯಸುತ್ತಿರುವರು. ಅದರಂತೆ ಹುಬ್ಬಳ್ಳಿಯಲ್ಲಿ ಈ ಉಭಯ ಸಮಾಜದವರು ಧರ್ಮ ಸಂಸ್ಕೃತಿಯನ್ನು ಹೊಂದಲಿಕ್ಕೆ ಬಯಸಿ ಲಿಂಗಾಯತ ಧರ್ಮ ಪ್ರಸಾರಕ ಸಂಘ ಹುಬ್ಬಳ್ಳಿ ಇವರಿಗೆ ವಿನಂತಿ ಮಾಡಿರುವರು. ಎಷ್ಟೋ ಸ್ಥಳಗಳಲ್ಲಿ ಹಡಪದವರು ದೀಕ್ಷಾವಂತರಾಗಿ ಲಿಂಗಾಯತ ಸಮಾಜದ ಬಳಿಕೆಯಲ್ಲಿಯೂ ಇರುವರು. ಆದರಿಂದ ಈ ಸಂಘದವರು ಶಾಸ್ತ್ರ ಸಮ್ಮತವಾದ ಪದ್ಧತಿಯಿಂದ ಈ ಧರ್ಮಾಪೇಕ್ಷಿಗಳಿಗೆ ಸಂಸ್ಕಾರವನ್ನು ಮಾಡಿಸಬೇಕೆಂಬ ಅಭಿಪ್ರಾಯವನ್ನುಳ್ಳವರಾಗಿರುವರು. ಆದರೆ ನಮ್ಮ ಮತದ ಗುರು-ನಿರಂಜನ ಜಂಗಮ ಪೀಠಗಳ ಮತ್ತು ಪ್ರಮುಖರ ಸಹಾನುಭೂತಿಯಿಂದ ಈ ಕಾರ್ಯವನ್ನು ಮಾಡತಕ್ಕದ್ದಿರುತ್ತದೆ. ಧರ್ಮಪೀಠಗಳ ಸಯುಕ್ತಿಕವಾದ ಅಪ್ಪಣೆಗಳೂ ಧರ್ಮಾಭಿಮಾನಿಗಳ ಸದಭಿಪ್ರಾಯವೂ ದೊರೆಯಬೇಕೆಂಬ ಉದ್ದೇಶದಿಂದ ಈ ಪತ್ರವನ್ನು ಪ್ರಕಟಿಸಿರುತ್ತದೆ. ತಮ್ಮ ಅಪ್ಪಣೆ ಅಥವಾ ಅಭಿಪ್ರಾಯಗಳನ್ನು ಕಳಿಸುವವರು ಗಮನಿಸತಕ್ಕ ವಿಷಯಗಳನ್ನು ಪ್ರಶ್ನರೂಪದಿಂದ ಕೊಟ್ಟಿರುತ್ತೇವೆ.

೧ ಈ ಉಭಯ ಸಮಾಜದವರನ್ನು ಧರ್ಮಶುದ್ಧಿಯಿಂದ ಪುನೀತರನ್ನು ಮಾಡಲಿಕ್ಕೆ ವೀರಶೈವ ಆಗಮಗಳಿಂದ ಅಥವಾ ಪುರಾತನ ಶರಣರ ಗ್ರಂಥಗಳಿಂದ ಅಥವಾ ಸಿದ್ಧಾಂತ ಶಿಖಾಮಣಿ. ವೀರಶೈವ ಧರ್ಮಶಿರೋಮಣಿ ಮುಂತಾದ ಗ್ರಂಥಗಳಿಂದ ಏನಾದರೂ ಆತಂಕವಿದೆಯೇ?

೨ ಈ ಜನರು ಲಿಂಗಧಾರಿಗಳಿದ್ದು ಈಗ ಬಳಿಕೆಯಿಲ್ಲದ್ದರಿಂದ ಅಲಿಂಗಿಗಳ ಸೇವೆಯನ್ನು ಮಾಡುವದನ್ನು ಅವರಿಗೆ ದೀಕ್ಷಾ ಸಂಸ್ಕಾರವನ್ನು ಕೊಟ್ಟು ತಪ್ಪಿಸುವದು ವೀರಶೈವ ಧರ್ಮದೃಷ್ಟಿಯಿಂದ

ಯೋಗ್ಯವೋ ಅಯೋಗ್ಯವೋ?

೧ ನಮ್ಮಲ್ಲಿ ಅನೇಕರು ಶೀಲವಂತರಾಗಿ ಲಿಂಗಾಯತ ಹಡಪದವರಿಂದಲೇ ಕ್ಷೌರ ಮಾಡಿಸುತ್ತಿರುವರು. ಅಲಿಂಗಿಗಳ ಮೈಲಿಗೆಯನ್ನು ತೊಳೆವ ಹಡಪದವರ ವಿಚಾರಪೂರ್ವಕವಾದ ಶೀಲಾಚಾರ ದೃಷ್ಟಿಯಿಂದ ಈ ಶೀಲ ವ್ಯವಹಾರಕ್ಕೆ ಸಲ್ಲುವರೋ? ನಿಜವಾದ ಲಿಂಗದೀಕ್ಷೆಯನ್ನು ಹೊಂದಿದವರಿಂದ ಕ್ಷೌರ ಕರ್ಮವನ್ನು ಮಾಡಿಸುವದು ನಿಜವಾದ ಶೀಲವೆನಿಸಲಿಕ್ಕಿಲ್ಲವೆ?

೨ ಅಸ್ಪೃಶ್ಯತ ಸೃಷ್ಟಿಯೆನಿಸುವ ವೀರಶೈವ ಸಮಾಜದಲ್ಲಿ ದೀಕ್ಷಾದಿ ವ್ಯವಹಾರಂಗಳಲ್ಲಿ ಆಗಬೇಕಾಗಿರುವ ಮುಂಡನ ವಿಧಿಗೆ ಶುದ್ಧ ವೀರಶೈವರಾದ ಕ್ಷೌರಿಕರು ಅಗತ್ಯವಲ್ಲವೆ?

೩ ವೀರಶೈವ ಸಮಾಜವು ಆರ್ಯ ವೈದಿಕ ಧರ್ಮದ ಒಂದು ಸರ್ವಾಂಗ ಪೂರ್ಣವಾದ ಅವಯವವಾಗಿ ಅದರ ಒಂದೊಂದು ಅವಯವಗಳು ಶಿಥಿಲವಾಗಿ ಹೋಗುತ್ತಿರುವದು ಧರ್ಮದ ಹ್ರಾಸವಲ್ಲವೋ?

೪ ಸಾಮಾಜಿಕ ಒಕ್ಕಟ್ಟಿನ ದೃಷ್ಟಿಯಿಂದ ನಿಕಟತರವಾಗಿ ನಮ್ಮವರಾಗಬೇಕೆನ್ನುವ ಈ ಬಂಧುಗಳನ್ನು ಪುನೀತರನ್ನು ಮಾಡುವದು ನಮ್ಮ ಕರ್ತವ್ಯವಲ್ಲವೆ?

೫ ಈಗ ಪ್ರತಿಯೊಂದು ಸಮಾಜದವರು ತಮ್ಮ ತಮ್ಮ ಸ್ಥಿತಿಗತಿಯನ್ನು ಸುಧಾರಿಸುತ್ತಿರುವಾಗ ನಮ್ಮ ವೀರಶೈವ ಸಮಾಜವು ಸುಮ್ಮನೆ ಉಳಿಯಬಹುದೆ?

೬ ಹಡಪದವರೂ ಋಗ್ವೇದವಳರೂ ಧರ್ಮ ಸಂಸ್ಕೃತಿಯನ್ನು ಹೊಂದಿ ನಮ್ಮ ಸಮಾಜದಲ್ಲಿ ಸಂಪೂರ್ಣವಾಗಿ ನೋಡದರೆ ಅವರಲ್ಲಿ ಗೌರಿರುಗಳು ಇತರ ಶಿಷ್ಯಂತ ಅಷ್ಟಾವರಣ ಧರ್ಮವನ್ನು ಅನುಕೂಲಿಸಲಿಕ್ಕೆ ಶಾಸ್ತ್ರ ಪ್ರಮಾಣದಿಂದ ಏನು ಅಡ್ಡಿಯದೆ?

೭ ಈ ಬಂಧುಗಳನ್ನು ದೀಕ್ಷೆಯಿಂದ ಪಾವನರನ್ನಾಗಿ ಮಾಡುವದು ನಮ್ಮ ವೀರಶೈವ ಸಮಾಜಕ್ಕೆ ಆರ್ಥಿಕವಾಗಿಯೂ ರಾಜ್ಯಕರಣಿಕವಾಗಿಯೂ ಹಿತಪ್ರದವಲ್ಲವೆ?

ಈ ವಿಷಯಕ್ಕೆ ತಮ್ಮ ಅಪ್ಪಣೆಗಳನ್ನೂ ಅಭಿಪ್ರಾಯಗಳನ್ನೂ ಇದೇ ಜ್ಯೇಷ್ಠ ಶು|| ೧೫ ಶತನಿಲ (ತಾ. ೨೫-೬-೩೭)ನೇದರೊಳಗಾಗಿ ನಮಗೆ ಪತ್ರ ಒರೆಯಾಗಲಿ ಅಥವಾ ವರ್ತಮಾನಪತ್ರಗಳಲ್ಲಿ ಚರ್ಚಿಸಿಯಾಗಲಿ ತಿಳಿಸಬೇಕೆಂದು (ವಿದ್ವಜ್ಜನರು ಅವಶ್ಯವಾಗಿ ವರ್ತಮಾನಪತ್ರಗಳಲ್ಲಿ ಚರ್ಚಿಸಬೇಕು) ವಿನಯದಿಂದ ವಿನಂತಿಸುವೆ.

ಚನಬಸಪ್ಪ ಶಿರಹಟ್ಟಿ
ತಾಲುಕ್ಕ ಪಂಚಾಯತ
ಚ. ಸಿ. ಚಂಪಣ್ಣನವರ
ಗೌ ಕಾರ್ಯದರ್ಶಿಗಳು
ಲಿಂಗಾಯತ ಧರ್ಮಪ್ರಸಾರಕ ಸಂಘ.

ನಿನ್ನೆ ಸಾಯಂಕಾಲದಲ್ಲಿ ಬಂದಂಥ ಮಹತ್ವದ ಸುದ್ದಿಗಳು.

ಮುಂಬಯಿಯಲ್ಲಿ ಕೂಡಿದ ಅಲಇಂಡಿಯಾ ಕಾಂಗರೇಸ ಕಮೀಟಿಯಲ್ಲಿ ಮುಸಲಮಾನ ಐಕ್ಯದ ಠರಾವು ಪಾಸಾಯಿತು. ಮುಸಲಮಾನರು ಬೇಡಿದ ರಾಜಕೀಯ ಹಕ್ಕುಗಳನ್ನು ಕೊಟ್ಟರು. ಸಿಂಧವನ್ನು ಮುಂಬಯಿ ಇಲಾಖೆಯಿಂದ ಅಗಲಿಸುವ ಮತ್ತು ವಾಯುವ್ಯ ಸರಹದ್ದಿನ ಪ್ರದೇಶವನ್ನು ಸ್ವತಂತ್ರ ಇಲಾಖಾ ಮಾಡುವ ಠರಾವಿಗೆ ಹಿಂದೂ ಜನರು ಒಪ್ಪಿಗೆ ಕೊಟ್ಟರು.

ಶ್ರೀ ಬೋಸರ ಬಂಧಮುಕ್ತತೆ.

ಶ್ರೀ ಸುಭಾಷಚಂದ್ರ ಬೋಸರನ್ನು ಕಲಕತ್ತೆಗೆ ಕರಕೊಂಡು ಬಂದರು. ಸಾವಿರಾರು ಜನರು ಇವರನ್ನು ನೋಡಲು ಘಾಟಿಗೆ ಹೋಗಿದ್ದರು ಆದರೆ ಪೋಲೀಸರು ಇವರನ್ನು ನಡು ಹೊಳೆಯಲ್ಲಿಯೇ ದೋಣಿಯಲ್ಲಿಸಿಕೊಂಡು, ಬೇರೊಂದು ಮಾರ್ಗದಿಂದ ಅಲೀಪೂರದ ತುರಂಗಕ್ಕೆ ಕರಕೊಂಡು ಹೋದರು. ಗವರ್ನರಸಾಹೇಬರ ಸ್ವಂತದ ಡಾಕ್ಟರು ಇವರ ಪ್ರಕೃತಿಯ ಪರೀಕ್ಷೆ ಮಾಡಿದರು. ಅಲಮೋರಾಕ್ಕೆ ಹೋಗುವ ಪ್ರವಾಸದ ತ್ರಾಸವನ್ನು ಸಹಿಸಲಿಕ್ಕಾಗುತ್ತದೆಂದು ಕಂಡು ಬಂದರೇ ಇವರನ್ನು ಇಲ್ಲಿಗೆ ಕಳಿಸಬೇಕೆಂದು ಹೇಳ ಹೇಳುತ್ತಾ ಸರಕಾರದವರು ಇವರನ್ನು ಬಂಧಮುಕ್ತ ಮಾಡಿದ ಹುಕುಮನ್ನು ಪ್ರಸಿದ್ಧ ಮಾಡಿದರು.

ಸ್ನೇಹಕ್ಕೆ ವ್ಯತ್ಯಾಸ.

ಲಂಡನದಲ್ಲಿರುವ ಆರಕಾಸ ಹೌಸಿನಲ್ಲಿ ಒಂದು ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಇಂಗ್ಲಿಷ ಸರಕಾರದವರು ಝಾಡತಿ ಮಾಡಿದ ಝಡತಿಯಿಂದ ರಶಿಯಾ ಮತ್ತು ಇಂಗ್ಲಂಡದ ನಡುವಿನ ವ್ಯಾಪಾರ ಸಂಬಂಧವಾದ ಸ್ನೇಹವು ಅಳಿಯುವದೆಂದು ರಶಿಯಾದ ಪತ್ರಗಳು ಅಭಿಪ್ರಾಯ ಪಟ್ಟಿರುತ್ತವೆ.

ಅರಬಸ್ಥಾನದ ಇಬ್ನೆಸಾವುದನು ಮಕ್ಕಾದ ಯಾತ್ರೆಗೆ ಬರುವಂಥ ಏಗುಪ್ತರು ನಿಃಶಸ್ತ್ರರಾಗಿ ಬರಬೇಕೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದರಿಂದ, ಅಲ್ಲಿಗೆ ಹೋಗತಕ್ಕವರು ತಮ್ಮ ಜವಾಬದಾರಿಯ ಮೇಲೆ ಹೋಗಬೇಕೆಂದು ಏ ಸಂಸ್ಥಾನದವರು ಪ್ರಸಿದ್ಧ ಮಾಡಿದ್ದಾರೆ.

ವಿವಿಧ ವರ್ತಮಾನಗಳು

ಪರದೇಶ–

ಜರ್ಮನಿಯಲ್ಲಿ ಶೇರಗಳ ಧಾರಣೆಯು ಮತ್ತೊಮ್ಮೆ ಇಳಿದಿದ್ದರಿಂದ ಜನರಲ್ಲಿ ಅಸ್ಥಿರವಾದ ಗದ್ದಲವೆದ್ದಿದೆ. ಈ ಸಂಗತಿಯು ಶುಕ್ರವಾರ ಸಂಭವಿಸಿತು. ದುರ್ದಿನದ ಶುಕ್ರವಾರವೆಂದಿರುತ್ತಾರೆ.

ಅಮೇರಿಕೆಯಲ್ಲಾದ ಅತಿವೃಷ್ಟಿಯಿಂದಾದ ಹಾನಿಯು ಒಂದು ಅಬ್ಜವಾಯಿತೆಂದು ಅಂದಾಜು ಮಾಡಿದ್ದಾರೆ.

ಲಂಡನದಿಂದ ಕರಾಚಿಯ ತನಕ ನಡುವೆ ಎಲ್ಲಿಯೂ ನಿಲ್ಲದೆ, ಕಾರನೆಂಬ ಸಾಹೇಬನು ವಿಮಾನ ಹೊರಡಿಸಿದ್ದಾನೆ.

ಬೋಲ್ಶೆವಿಕರೆಂದು ರಶಿಯರನ್ನೂ ಜಪಾನರನ್ನೂ ಜಪಾನ ದೇಶದಲ್ಲಿ ದಸ್ತಗಿರ ಮಾಡುವ ಸಂಕ್ರಾಂತಿ ಎದ್ದಿದೆ. ರಶಿಯಾದ ಹೊರ್ತು ಎಲ್ಲ ದೇಶಗಳಲ್ಲಿಯೂ ಬೊಲ್ಶೆವಿಕರ ವಿರುದ್ಧ ಚಳವಳಿ ಹುಟ್ಟಿರುತ್ತದೆ.

ಸ್ವದೇಶ–

ಧಾರವಾಡ, ಬೆಳಗಾವಿ ಮತ್ತು ವಿಜಾಪೂರ ಈ ಮೂರು ಜಿಲ್ಹೆಗಳಲ್ಲಿ ಲಂಳಳ ಜನರಿಗೆ ಮಾರಿ ಬಂದು ೩೪೫ ಜನರು ಸತ್ತರು.

ನಾಮದಾರ ಶ್ರೀನಿವಾಸಶಾಸ್ತ್ರಿಯವರಿಗೆ ಬೆಂಗಳೂರಿನ ನಿವಾಸಿಗಳು ಮಾನಪತ್ರ ಕೊಟ್ಟು ಇವರನ್ನು ಗೌರವಿಸಿದರು. ಸರ ವಿಶ್ವೇಶ್ವರಯ್ಯನವರೂ, ದಿವಾನರೂ ಇವರ ಅಭಿನಂದನ ಮಾಡಿದ ಭಾಷಣ ಮಾಡಿದರು.

ರಾಜಮಹೇಂದ್ರಿಯ ಹತ್ತರ ಒಂದು ದೋಣಿ ಮುಣುಗಿ ೫೦ ಜನರು ಜಲ ಸಮಾಧಿ ಹೊಂದಿದರು.

ಕಡೂರಿನಿಂದ ಚಿಕ್ಕಮಗಳೂರಿಗೆ ರೇಲ್ವೆ ಹಾಕುವ ವಿಚಾರವನ್ನು ಮೈಸೂರ ದರಬಾರಿನವರು ಅಂಗೀಕರಿಸಿದರು.

ಮದ್ರಾಸಿನ ಮೂವರು ಸುಪ್ರಸಿದ್ಧ ವ್ಯಾಪಾರಿಗಳಾದ ಕುಮಾರಸ್ವಾಮಿ ಶಾಸ್ತ್ರಿ, ವಿಶ್ವನಾಥಶಾಸ್ತ್ರಿ ಮತ್ತು ತಿರುನಾರಾಯಣಾಚಾರ್ಯರು ವಿಲಾಯತಿಗೆ ಪ್ರಯಾಣ ಬೆಳೆಸಿದ್ದಾರೆ.

ನೋಟೀಸು

—೦—

ಹಣಮಂತ ಕೃಷ್ಣ ಪೋತನೀಸ ಸಾ|| ಕಿತ್ತೂರ, ಇವರಿಗೆ–

ಕೆಳಗೆ ಸಹಿ ಮಾಡುವ ರಾಮಚಂದ್ರ ಶೇಷೋ ಸಾಂಬ್ರಾಣಿ ಹಲ್ಲಿವಸ್ತಿ ಧಾರವಾಡ ಇವನ ಕಡೆಯಿಂದ ತಿಳಿಸುವದೇನೆಂದರೆ–

ನೀನು ತಾ|| ೭-೫-೩೭ ಇಸ್ವಿಯ ದಿನದ ವಿಜಯ ವರ್ತಮಾನಪತ್ರದಲ್ಲಿ ನಾನು ಒಬ್ಬ ಅಲ್ಪವಯಿ ಶ್ರೀನಿವಾಸ ಇವನನ್ನು ದತ್ತಕ ಮಾಡಿಕೊಂಡಿರುತ್ತೇನೆ ಅಂತಾ ಪಗೈರೆ ಖೊಟ್ಟಿ ಮಜಕೂರು ಜಾಹೀರ ಮಾಡಿರುತ್ತೀದಿ ಆದರೆ ಸದ್ರಿ ಶ್ರೀನಿವಾಸನನ್ನು ನಾನು ಇದೂ ವರಗೂ ದತ್ತಕ ತೆಗೆದುಕೊಂಡಿರುವದಿಲ್ಲಾ ವ ಮುಂದಾದರೂ ನಾನು ಅವನನ್ನು ದತ್ತಕ ತೆಗೆದು ಕೊಂಬುವ ಇರಾದೆ ಇಲ್ಲಾ. ನಾನು ಸದರ ಶ್ರೀನಿವಾಸನನ್ನು ದತ್ತಕ ಮಾಡಿಕೊಂಡ ಬಗ್ಗೆ ನಿನ್ನ ಕಡಿಗೆ ಲೇಖಿ ಪುರಾವೆಗಳು ಇದ್ದರೆ ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನಗೆ ತಂದು ತೋರಿಸಬೇಕು ಸದರ ಮುದ್ದತಿನಲ್ಲಿ ಕಾಗದಪತ್ರಗಳು ದತ್ತಕ ಸಂಬಂಧ ಇರೋವು ನೀನು ತೋರಿಸದಿದ್ದರೆ ನೀನು ಖೊಟ್ಟಿ ಮಜಕೂರು ಪ್ರಸಿದ್ಧ ಮಾಡಿದ ಬಗ್ಗೆ ನಿನ್ನ ಮೇಲೆ ಫೌಜದಾರಿಯಲ್ಲಿ ಯಾಕ ಫಿರ್ಯಾದಿ ಮಾಡಬಾರದು ಅಂಬೋ ಬಗ್ಗೆ ತಿಳಿಸಬೇಕು ಈ ನೋಟೀಸಿನ ಖರ್ಚು ನಿನ್ನ ಮೇಲೆ ಇರುತ್ತದೆ ತಿಳಿಯುವದು ತಾರೀಖು ೧೮-೫-೩೭.

ರಾಮಚಂದ್ರ ಶೇಷೋ ಸಾಂಬ್ರಾಣಿ ಸಾ|| ಧಾರವಾಡ

ನೋಟೀಸು

—೦—

ನೀಲನಗೌಡಾ ತಂದಿ ಗುರುನಗೌಡಾ ಗೌಡರ ಸಾಕೀನ ಹುಲಗೂರ ಇವನಿಗೆ–

ಕೆಳಗೆ ಜಬ್ಬರೀನ ಗುರ್ತಾ ಮಾಡುವ ತಾಯವ್ವಾ ಕೋಮ ನೀಲನಗೌಡಾ ಗೌಡರ ಹಾಲಿವಸ್ತಿ ನರೇಂದ್ರ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದವಿಯ ಗಂಡನಾಗಬೇಕು ನಾನು ಪ್ರಬುದ್ಧಳಾದ ಒಳಿಕ, ನಿನ್ನಿಂದ ಒಂದು ಹೆಣ್ಣು ಹುಡಿಗೆ ಹುಟ್ಟಿದೆ ನಾನು ಏಸು ತಿಂಗಳು ಗರ್ಭಿಣಿ ಇದ್ದಾಗ ನೀನು ನನ್ನನ್ನು ವಿನಹಂಬಾರಣ ತ್ರಾಸ ಕೊಟ್ಟು ನನ್ನ ಮೈಮೇಲಿನ ಯಾವತ್ತು ದಾಗೀನೆ ಕಸಕೊಂಡು ಮನೀಬಿಟ್ಟು ಹೊರಗೆ ಹಾಕಿದಿ ನಾನು ಬಹಳ ಕಷ್ಟದಿಂದ ನರೇಂದ್ರಕ್ಕೆ ಬಂದೆನು ಅಲ್ಲಿ ನನ್ನ ಅಜಿಯು ಮನೆಯಲ್ಲಿಟ್ಟುಕೊಂಡು ಬಾಣಂತಿತನ ಮಾಡಿದಳು ಅದರ ಖರ್ಚು ಒಂದು ನೂರು ರೂಪಾಯಿ ಆಯಿತು ಇದನ್ನು ಕೊಟ್ಟು ಕರಕೊಂಡು ಹೋಗಲಿಕ್ಕೆ ಅನೇಕ ಸಾರೆ ಹೇಳಿ ಕಳಿಸಿದರೂ ಕರಕೊಂಡು ಹೋಗಲಿಲ್ಲ ಈ ಮಾತಿಗೆ ಮೂರು ವರ್ಷವಾಯಿತು ನಾನು ನನ್ನ ಹಾಗು ಕೂಸಿನ ಸಂರಕ್ಷಣೆಗಾಗಿ ದೇಣೆ ಮಾಡಿ ಈ ವರೆಗೆ ಕಾಲಹರಣ ಮಾಡುತ್ತಾ ಬಂದಿದ್ದೇನೆ ಈಗ ಸಾಲಾ ಕೊಟ್ಟವರ ತಗಾದಿಯಾಗಿದೆ ದೊಡ್ಡ ಮನೆತನದವರೆಂದು ಸಾಲಕೊಟ್ಟವು ಈಗ ಕೊಟ್ಟು ತೀರೆಂದು ನನಗೆ ಬಹಳ ತ್ರಾಸ ಕೊಡುತ್ತಿದ್ದಾರೆ ಆದಕಾರಣ ಈ ನೋಟೀಸು ಕೊಡಬೇಕಾಯಿತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಹೊಟ್ಟೆಯ ಸಾಲ ಮುನ್ನೂರು ರೂಪಾಯಿ ಮತ್ತು ಬಾಣಂತಿತನದ ಸಾಲ ನೂರು ರೂಪಾಯಿ ಅಂತು ನಾಲ್ಕು ನೂರು ರೂಪಾಯಿ ಕೊಟ್ಟು ನನ್ನನ್ನು ಕರಕೊಂಡು ಹೋಗಿ ಸುರಳಿತ ರೀತಿಯಿಂದ ಪ್ರಪಂಚ ಮಾಡಬೇಕು ಬರ ಇದಕ್ಕೆ ತಪ್ಪಿದರೆ– ಈ ನೋಟೀಸನ್ನು ನೋಡಪತ್ರವೆಂದು ತಿಳಿಯಬೇಕು ಮತ್ತು ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಿಕೆ ಗಂಡನ ಮೇಲೆ ಬಿಲಕೂಲ ನಡಿಯಲಾರದು ಮತ್ತು ರಾಗಾದ ಸಾಲದ ದೆಸೆಯಿಂದ ಕಾಯದೆಶೀರ ಇಲಾಜ ಮಾಡಿ, ಅದನ್ನು ಕೋರ್ಟ ಖರ್ಚ ಸಹಿತ ವಸೂಲ ಮಾಡುವೆನು ಈ ನೋಟೀಸಿನ ಖರ್ಚ ನಿನ್ನ ತಲಿಯ ಮೇಲುಂಟು. ಅಂತ್ಹ ಕೊಟ್ಟ ನೋಡಪತ್ರದ ನೋಟೀಸು.

ತಾ|| ೧೭-೫-೩೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ತಾಯವ್ವಾ ಕೋಮ ನೀಲನಗೌಡಾ ಗೌಡರ ಈಕೆಯದು ಇರುತ್ತದೆ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗಿರುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾಂವ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೂಕ್ ಬಾಂಡ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ತೋಳ ವ್ಯಾಪಾರಸ್ಥರಿಗೆ [illegible] ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಪಸಂತಿಗೆ "[illegible]" ಅನ್ನದಿದ್ದರೆ ಕೇಳಿಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ಸಾಲುತ [illegible] ಪರಸ್ಥಳದವರು ತಮಗೆ ಬೇಕಾದಲ್ಲಿ ಕಳಿಸಿ [illegible] ಯಿಂದ ಕಾಳಜೀ ಪೂರ್ವಕ ಕಳಿಸಿ [illegible] ಆದವಾಷ್ಟೆ ಕಳಿಸಕೊಡುತ್ತೇವೆ.

[ತಿರುಗುವ ಪತ್ರ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ನೋಕಶಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾಂವಿಗಲ್ಲಿ, ಹುಬ್ಬಳ್ಳಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಚಾರಕಲ್ಪತರು ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ

ಬಿಡಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಗುರುವಾರ ತಾರೀಖು ೧೯ ನೇ ಮೇ ೧೯೩೭ | ಸಂಚಿಕೆ ೧೦೩

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಚಿಬ್ಬ
ನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಗುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲಾಗುವದು. ಕಾಯಮವು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ.

ಕಾಲರಾ (ಮಾರಿಕಾ) ರೋಗದ ಮೇಲೆ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೯೩೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹ ಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೌಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೩೦ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ. ಪತ್ತಾ:- ಮ್ಯಾ. ಆಯುರ್ವೇದ ಕಾರಖಾನಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ವರ್ಗಣೀದಾರರಿಗೆ ಸೂಚನೆ.

ಮೇ ೨೦ರೊಳಗಾಗಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ನಾವು ಪತ್ರದ ವರ್ಗಣಿದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ವರ್ಗಣಿದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುವೆವು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು.

ತಿಂಗಳ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸ್ವಕಾರ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಧಿ ಗೆ ಮೂ ರಾ ದೆ— ಇಂ ಗಿ ಷ ದಿಂದ ಅನವರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು ಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಒಪ್ಪರಡು ಆಗುತ್ತದೆ.

ಎ. ಶ. ಶೆಟ್ಟಿ
ಮಾನೇಜಿಂಗ ಡಾಯರೆಕ್ಟರ

ವಿಜಯ.

ಬುಧವಾರ ತಾ- ೧೮-೫-೨೭ ನೇ ಇಸ್ವಿ

ಮುಂಬಯಿಯಲ್ಲಿ ಕೂಡಿದ ಅಖಿಲ ಇಂಡಿಯಾ ಕಾಂಗ್ರೆಸ ಕಮಿಟಿಯು.

ಮುಂಬಯಿಯಲ್ಲಿ ಕೂಡಿರುವ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯಲ್ಲಿ ನಡೆದ ಕೆಲಸಗಳು ಹಿಂದುಸ್ಥಾನದ ಭಾವೀ ಏಳ್ಗೆಯ ತಳಹದಿಯಾಗಿರುತ್ತವೆ. ಅಸಹಕಾರದ ಚಳವಳಿಯಲ್ಲಿ ಹಿಂದೂ ಮುಸಲಮಾನ ಐಕ್ಯವು ಅಭೂತಪೂರ್ವವಾಗಿತ್ತು. ಆದರೆ ನಡು ನಡುವೆ ತಲೆದೋರಿದ ಪರಸ್ಪರ ದ್ವೇಷವೂ, ಅದರಿಂದಾದ ರಕ್ತಪಾತವೂ ಪುನಃ ಹಿಂದೂ ಮುಸಲಮಾನ ಐಕ್ಯವಾದೀತೇ ಎಂಬ ಚಿಂತೆಯನ್ನು ಉಭಯ ಜನಾಂಗಗಳ ಪ್ರಮುಖರಿಗೆ ಹುಟ್ಟಿಸಿತು. ದಿನ ದಿನಕ್ಕೆ ಕಲಹದಂತೆ ದಂಗೆಗಳು ವಿಕಾಲಕ್ತ ರೂಪ ಧಾರಣ ಮಾಡಿ, ಅರ್ಥಹಾನಿ ಪ್ರಾಣಹಾನಿಯನ್ನು ಮಾಡುತ್ತಿರುವದನ್ನು ಕಂಡು, ಬಲಾಢ್ಯ ರಾಜ್ಯ ಆಳರಸರು ಕೂಡ ಕಯ್ಯೂರಿದರು. ದಂಗೆ ಯಾಗುವದನ್ನು ನಿಲ್ಲಿಸುವದು ಇವರಿಗೆ ಸುಲಭಸಾಧ್ಯವಾಗಲೇ ಇಲ್ಲ. ದಂಡು ತಂದು, ಹೆಚ್ಚು ರಕ್ತಪಾತವಾಗದಂತೆ ಮಾತ್ರ ಜಾಗ್ರತರಾಗುತ್ತಿದ್ದರು. ಆಳರಸರು ಒಂದು ಬಗೆಯಿಂದ ಊರು ಸುಟ್ಟಿರೂ ಹನುಮಪ್ಪ ಹೊರಗೆ ಎಂಬಂತಾದರು. ಆದರೆ ಈ ತರದ ಉಪೇಕ್ಷೆ ಅಥವಾ ಅಕರ್ತೃತ್ವಶೀಲತೆಯನ್ನು ಈ ಎರಡು ಜನಾಂಗದವರು ತೋರಿಸುವದು ಎಷ್ಟು ಕ್ಷೇಮಕರವಾಗಲಿಲ್ಲ. ಹಿಂದೂ ಜನರಲ್ಲುಂಟಾಗಿರುವ ಹಲವು ಉಪಭೇದಗಳ ಮೂಲಕ, ಐಕ್ಯದ ಅಭಾವ ತೋರಿದ ಕೂಡಲೆ, ಹಿಂದೂ ಮಹಾಸಭೆಯು ನಿರ್ಮಾಣವಾಯಿತು. ಡಾಕ್ಟರ ಮುಂಜೆ, ಪಂಡಿತ ಮಾಲವಿಯಾ, ಲಾಲಾ ಲಜಪತರಾಯ ಮೊದಲಾದ ಉತ್ತರ ದೇಶಿಯರು ಹಿಂದೂ ಪಕ್ಷದ ಜಟ್ಟಿಗಳಂತೆ ಮುಸಲಮಾನರ ಕೂಡ ಹೋರಾಡಲು ಸನ್ನದ್ಧರಾದರು. ಮುಯ್ಯಿ ಹಿಂದು ವರ್ತಿಸಿದ ಹೊರ್ತು ಮುಸಲಮಾನರು ತಗ್ಗಿ ನಡೆಯಲಾರರೆಂದು ಸರ್ವತೋಮುಖವಾಯಿತು. ಕಲಕತ್ತೆ, ಲಾಹೋರ ಮುಂತಾದ ಪಟ್ಟಣಗಳಲ್ಲಾದ ದಂಗೆಗಳಲ್ಲಿ ಹಿಂದೂ ಜನರು ಶ್ರೇಷ್ಠ ಕನಿಷ್ಠವೆಂಬ ಭಾವವನ್ನು ಬಿಟ್ಟು, ಐಕ್ಯಭಾವದಿಂದ ವರ್ತಿಸಿದರು. ಈ ವರ್ತನವು ಮುಸಲಮಾನರ ಮೇಲೆ ಉತ್ತಮವಾಗಿ ಪರಿಣಾಮ ಮಾಡಿತು. ಹಿಂದೂ ಜನರ ಕೂಡ ಸಹಕಾರ ಮಾಡಿದ ಹೊರ್ತು ಮುಸಲಮಾನರಿಗೆ ಸುಖ ಸೌಖ್ಯವುಂಟಾಗಲಾರದೆಂದು ಪೂರಾ ಮನಗಂಡರು. ಇದೇ ಸಮಯದಲ್ಲಿ ಗೋಹತಿಯ ಕಾಂಗ್ರೆಸ ಸಭೆಯಲ್ಲಿ ಹಿಂದೂ ಮುಸಲಮಾನ ಐಕ್ಯವನ್ನುಂಟು ಮಾಡಿಸಬೇಕೆಂದು ಗೊತ್ತಾಗಿ ಈ ಬಗ್ಗೆ ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಅಯ್ಯಂಗಾರ, ದೇವಿ ಸರೋಜಿನಿ, ಮೌಲಾನಾ ಮಹಮುದಲ್ಲಿ, ಶೌಕತಲ್ಲಿ ಹಕಿಮ ಅಜಮಲ ಖಾನ ಪಂಡಿತ ಮೋತಿಲಾಲ ಮೊದಲಾದವರ ಕಮೀಟಿ ನೇಮಿಸಿದರು. ಈ ಕಮೀಟಿಯವರು ಹಿಂದೂ ಮುಸಲಮಾನ ಐಕ್ಯವನ್ನು ಹೇಗೆ ಒದಗಿಸಬೇಕೆಂದು ಪುಷ್ಕಳವಾಗಿ ಚರ್ಚೆ ನಡೆಸಿದರು. ಆ ಚರ್ಚೆಯ ಕೊನೆಯ ನಿರ್ಣಯವೇ ಆಲ ಇಂಡಿಯಾ ಕಾಂಗ್ರೆಸ ಕಮೀಟಿಯಲ್ಲಾಯಿತು.

ಅನೇಕ ಜನರು ಸಂಕೋಚ ದೃಷ್ಟಿಯವರಾಗಿ, ಸ್ವತಂತ್ರ ಚುನಾವಣೆಯ ಅಪೇಕ್ಷೆ ಮಾಡುತ್ತಿದ್ದಾರೆ. ಆದರೆ ಈ ಸ್ವತಂತ್ರ ಚುನಾವಣೆಯು ಹಿಂದೂ ಮುಸಲಮಾನ ಅನರ್ಥಕ್ಕೆ ಕಾರಣವಾಯಿತೆಂದು ಎರಡೂ ಜನಾಂಗಗಳ ನಿದರ್ಶನಕ್ಕೆ ಬಂತು. ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಜನ ಸಂಖ್ಯೆಯ ಪ್ರಮಾಣದಿಂದ ಹಿಂದೂ ಮತ್ತು ಮುಸಲಮಾನರು ಮೆಂಬರರಾಗಿರಬೇಕೆಂಬ ತತ್ವವನ್ನು ಉಭಯತರು ಒಪ್ಪಿದ್ದಾರೆ. ಆದರೆ ಈ ಜನರು ತಂತಮ್ಮ ಜಾತಿಯ ಜನರಿಂದಲೇ ಆರಿಸಲ್ಪಟ್ಟವರಾಗದೆ, ಮಿಶ್ರ ಮತಗಳಿಂದ ಮೆಂಬರರಾಗಬೇಕೆಂದು ಗೊತ್ತು ಮಾಡಿದ್ದಾರೆ. ಈ ರೀತಿಯಿಂದ ಒಬ್ಬರ ಪ್ರೀತಿಯನ್ನು ಮತ್ತೊಬ್ಬರು ಸಂಪಾದಿಸಿದ ಹೊರ್ತು ಚುನಾವಣೆಯಲ್ಲಿ ಯಶಾಪೇಕ್ಷೆ ಮಾಡುವದೇ ಅಶಕ್ಯವು. ಮುಸಲಮಾನರ ದ್ವೇಷ ಮಾಡುವ ಹಿಂದೂ ಗೃಹಸ್ಥನೂ, ಹಿಂದೂ ಜನರ ದ್ವೇಷ ಮಾಡುವ ಮುಸಲಮಾನ ಗೃಹಸ್ಥನೂ ಯಶಾಪೇಕ್ಷೆ ಮಾಡಿದರೆ ಅತನು ಮೃಗಜಲದ ಬೆನ್ನು ಹತ್ತುವಂತಾಗುತ್ತದೆ. ಆದುದರಿಂದ ಪ್ರತಿಯೊಂದು ಹಳ್ಳಿಯಿಂದ ರಾಜಧಾನಿಯ ದೊಡ್ಡ ಪಟ್ಟಣದ ತನಕ ಹಿಂದೂ ಮುಸಲಮಾನರು ಸ್ನೇಹಾನುರಾಗದಿಂದಿರಬೇಕಾದರೆ- ಇದೊಂದು ರಾಮಬಾಣ ಉಪಾಯವೆಂದು ತಿಳಿದು, ಅದನ್ನು ಪ್ರತ್ಯಕ್ಷ ಕೃತಿಯಲ್ಲಿ ತರಲು ಈ ಕಮೀಟಿಯಲ್ಲಿ ನಿರ್ಧರಿಸಿರುತ್ತಾರೆ. ಮುಸಲಮಾನರು ದಿಲ್ಲಿಯಲ್ಲಿ ಸಭೆ ಕೂಡಿ, ತಮ್ಮ ಬೇಡಿಕೆಗಳನ್ನು ಜಾಹೀರ ಮಾಡಿದರು. ಇವುಗಳ ಅನುವಾದವನ್ನೇ ಮೌಲಾನಾ ಮಹಮುದಲ್ಲಿ ಮತ್ತು ಡಾಕ್ಟರ ಅನಸಾರಿಯವರು ಕಮೀಟಿಯಲ್ಲಿ ಮಾಡಿದರು. ಮುಸಲಮಾನರು ಹೆಚ್ಚು ಹಕ್ಕು ಬೇಡಿದ್ದಾರೆ; ಕಡಿಮೆ ಬೇಡಿದ್ದಾರೆಂಬ ಪ್ರಶ್ನದ ಸ್ಪಷ್ಟಾಸ್ಪಷ್ಟ ಮಾಡದೆ, ಮುಸಲಮಾನರ ಕೋರಿಕೆಗಳನ್ನು ಸಹಾನುಭೂತಿಯಿಂದ ಮಾಡಿರಿ; ಇದನ್ನು ಅದಲುಬದಲು ಮಾಡುವ ವಿನಿಮಯವೆಂದು ಭಾವಿಸಬೇಡಿರೆಂದು ಡಾಕ್ಟರ ಅನಸಾರಿಯವರು ಮಾಡಿಕೊಂಡ ವಿನಂತಿಯನ್ನು ಹಿಂದೂ ಮೆಂಬರರು ಬಹುತೇಕವಾಗಿ ಒಪ್ಪಿದರು. ಬ್ಯಾರಿಸ್ಟರ ಜಯಕರರು ಹಿಂದೂ ಜನರ ಪರಿಯಿಂದ ಕೆಲವು ಉಪಸೂಚನೆಗಳನ್ನು ಮಾಡಿದರು. ಮುಸಲಮಾನರ ಅಪೇಕ್ಷೆಯನ್ನು ಪೂರ್ಣ ಮಾಡಬೇಕೆಂದು ಬಹುತೇಕ ಜನರ ವಿಚಾರವಾದ್ದರಿಂದ, ಬ್ಯಾರಿಸ್ಟರರ ಸೂಚನೆಗಳು ಅಂಗೀಕರಿಸಲ್ಪಡಲಿಲ್ಲ.

ಹಿಂದೂ ಮುಸಲಮಾನ ಐಕ್ಯವಾಗಬೇಕೆಂದು ಮೊದಲಿನಿಂದ ದೀರ್ಘ ಪ್ರಯತ್ನಬಟ್ಟು, ಖಿಲಾಫತಕ್ಕೆ ಹಿಂಬಲಕೊಟ್ಟವರು ಮಹಾತ್ಮರು. ಮತ್ತು ಈ ದಂಗೆ ನಿಲ್ಲಿಸಬೇಕೆಂದು ೧೮ ದಿವಸ ನಿರಾಹಾರ ಮಾಡಿದವರೂ ಮಹಾತ್ಮರೆ! ಇವರ ನಿರಾಹಾರದ ವ್ರತಕ್ಕೆ ಮಾನ ಕೊಡಬೇಕೆಂದು ಮುಸಲಮಾನ ಪ್ರಮುಖರಲ್ಲಿ ಕೆಲವರು ಅಂತಃಕರಣಪೂರ್ವಕವಾಗಿ ಪ್ರಯತ್ನ ಮಾಡಿದರು. ಆದರೆ ಅವರಿಗೆ ಯಶ ದೊರೆಯಲಿಲ್ಲ. ಇವರ ತರುವಾಯ ಪಂಡಿತ ಮೋತಿಲಾಲ, ದೇವಿ ಸರೋಜನಿ ಮತ್ತು ಶ್ರೀ ಶ್ರೀನಿವಾಸಯ್ಯಂಗಾರರು ಈ ಕಾರ್ಯ ಕೈಕೊಂಡರು. ಚುನಾವಣೆಯ ವೇಳೆಯಲ್ಲಿ ಹಿಂದೂ ಮಹಾಸಭೆಯವರು ಹಿಂದೂ ಮುಸಲಮಾನ ಐಕ್ಯವೇ ಜಯಂದ ಸ್ವರಾಜ್ಯ ಪಕ್ಷದ ಉಮೇದವಾರರ ವಿರುದ್ಧ ತಮ್ಮ ಉಮೇದವಾರರನ್ನು ನಿಲ್ಲಿಸಿದರು. ಆದರೂ ಇವರ ಎದೆಗುಂದಲಿಲ್ಲ. ಕಾಂಗ್ರೆಸದ ಕೆಲಸ ಮುಗಿದ ಬಳಿಕ ಅಧ್ಯಕ್ಷ [illegible] ಶ್ರೀ ಶ್ರೀನಿವಾಸಯ್ಯಂಗಾರರು ಉತ್ತರ [illegible] ಸಂಚಾರ ಮಾಡಿದರು. [illegible] ಮುಸಲಮಾನರೆಂಬ [illegible] ಪರಿಯುತ್ತಿ [illegible] ಅಬ್ದುಲ ರಹಿಮಾನ ಸಂಘದವರ ಕೂಡ ಒಡಂಬಡಿಕೆಯ ಪ್ರಸ್ತಾಪ ಮಾಡಿದರು. ಮುಸಲಮಾನರಾದರೂ ತಮ್ಮ ಲೀಗ ಖಿಲಾಫತ ಮತ್ತು ಜಮಾಯತಲ್ಲ ಉಲೇಮಾಗಳ ಸಭೆ ಕೂಡಿಸಿ, ರಾಜಿಯ ಶರ್ತುಗಳನ್ನು ಹೇಳಿದರು. ಇವನ್ನೇ ಮೇಲೆ ಹೇಳಿದಂತೆ ಹಿಂದೂ ಜನರು ಒಪ್ಪಿದರು. ಈ ಪ್ರಕಾರ ಒಡಂಬಡಿಕೆಯ ಮುಖ್ಯ ಶ್ರೇಯಸ್ಸು ಶ್ರೀ. ಶ್ರೀನಿವಾಸ ಅಯ್ಯಂಗಾರ, ಪಂಡಿತ ಮೋತಿಲಾಲ ದೇವಿ ಸರೋಜಿನಿ, ಹಕೀಮ ಅಜಮಲಖಾನ, ಡಾಕ್ಟರ ಅನಸಾರಿ ಮತ್ತು ಮೌಲಾನಾ ಮಹಮುದಲ್ಲಿ ಯವರಾದ ಅಲ್ಲೀ ಬಂಧುಗಳಿಗಿರುತದೆ. ಈ ಒಡಂಬಡಿಕೆ ಕೊನೆಗಾಣಿಸಿದ ಬಗ್ಗೆ ಮನಃಪೂರ್ವಕವಾಗಿ ಇವರನ್ನು ಅಭಿನಂದನ ಮಾಡುತ್ತೇವೆ. ಇದೇ ಭಾವೀ ಸ್ವರಾಜ್ಯದ ತಳಗಲ್ಲಾಗಿರುತ್ತದೆ.

ಮಿಕ್ಕ ವಿಷಯಗಳನ್ನು ನಾಳಿನ ಸಂಚಿಕೆಯಲ್ಲಿ ಬರೆಯುವೆವು.

ವಿವಿಧ ವರ್ತಮಾನಗಳು

—[o][o]—

ಸ್ವದೇಶ—

ಕಾಶಿಯಲ್ಲಿ ಬಿ. ಎಸ. ಸಿ. ಪರೀಕ್ಷೆಗೆ ಕೂತಂಥ ಒಬ್ಬ ವಿದ್ಯಾರ್ಥಿಯು ನಾಪಾಸಾದನು. ಆ ಬಳಿಕ ಈತನ ತಮ್ಮನು ಪಾಸಾದನು. ತಮ್ಮನು ಪಾಸಾಗಿ, ತಾನು ನಾಪಾಸಾದುದರಿಂದ ದುಃಖಪಟ್ಟು, ಆತ್ಮಹತ್ಯ ಮಾಡಿಕೊಳ್ಳುವ ನಿಶ್ಚಯ ಮಾಡಿದನು. ಹೆಂಡತಿಯ ಮನೆಗೆ ಹೋಗಿ, ಆಕೆಗೂ ತನ್ನ ಕೂಡ ಜೀವ ಕೊಡಲಿಕ್ಕೆ ಹೇಳಿದನು. ಹೆಂಡತಿಗೆ ಗಂಡನ ಆಡಿಕೆಯಲ್ಲಿ ವಿಶ್ವಾಸ ಹುಟ್ಟಲಿಲ್ಲ. ತುಸು ಹೊತ್ತಿನನಂತರ ಈತನು ಮಲಗಲಿಕ್ಕೆ ಹೋಗಿ, ವಿಷ ತಕ್ಕೊಂಡನು. ಡಾಕ್ಟರನನ್ನು ಕರಿಸುವಷ್ಟರಲ್ಲಿ ಪ್ರಾಣ ಹೋಗಿತ್ತು.

ಬೆಂಗಳೂರಲ್ಲಿರುವ ಮೆಡಿಕಲ ಕಾಲೇಜವನ್ನು ಮೈಸೂರಿಗೆ ಒಯ್ಯುವ ವಿಚಾರ ನಡೆದಿದೆ. ಇಲ್ಲಿಂದ ಕಾಲೇಜವನ್ನು ಕಿತ್ತಬಾರದೆಂದು ಬೆಂಗಳೂರಿನವರು ಸರ ಪುಟ್ಟಣಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ, [illegible] ಕಡೆಗೆ ಡೆಪ್ಯುಟೇಶನ ಕಳಿಸುವ ನಿರ್ಣಯ ಮಾಡಿದ್ದಾರೆ.

ಮದ್ರಾಸದಲ್ಲಾದ ಅನಾಹುತದಿಂದ ಕೂಲಿಕಾರರಲ್ಲಿ ದೊಡ್ಡ ಚಳವಳಿ ಎದ್ದಿದೆ. ಬಿರಮಾ ಕಂಪನಿಯ ಕೂಲಿಕಾರರಿಗೆ ಸಹಾನುಭೂತಿಯಾಗಿ ಎಲ್ಲ ಕೂಲಿಕಾರರು ಸಂಪು ಮಾಡುವ ವಿಚಾರ ಮಾಡುತ್ತಿದ್ದಾರೆ.

ಅಹಮದಾಬಾದಿನಲ್ಲಿ ಒಬ್ಬ ಮುಸಲಮಾನನ ಹೆಂಡತಿಯನ್ನು ಆರ್ಯ ಸಮಾಜದ ಸ್ವಯಂಸೇವಕರು ಈಕೆಯು ಆತನ ಹೆಂಡತಿಯಲ್ಲವೆಂದು ಬಲವಂತದಿಂದ ಕರಕೊಂಡು ಒಯ್ದರು. ಈ ಅಪರಾಧದ ಬಗ್ಗೆ ಇವರ ಮೇಲೆ ಫಿರ್ಯಾದಿಯಾಗುತ್ತದೆ.

ಹಿಂದೂಮುಸಲಮಾನ ಐಕ್ಯದ ಠರಾವು ಪಾಸಾದ ಕೂಡಲೆ ಹಿಂದೂ ಮತ್ತು ಮುಸಲಮಾನ ಪ್ರಮುಖರು ಪರಸ್ಪರ ಆಲಿಂಗನ ಕೊಟ್ಟು ಪ್ರೇಮಾತಿಶಯವನ್ನು ತೋರಿಸಿದರು. ಡಾಕ್ಟರ ಮುಂಜೆ ಮತ್ತು ತನ್ನ ನಡುವೆ ಗಡ್ಡ ಮೊದಲು ಮಾಡಿಕೊಂಡು ಶರೀರಯಷ್ಟಿಯು ಸಾಮ್ಯವುಂಟೆಂದು ಮೌಲಾನಾ ಶೌಕತಅಲ್ಲಿಯವರು ವಿನೋದ ಮಾಡಿದ್ದಾರೆ.

ಸಿಂಧದಂತೆ ಆಂಧ್ರ ಮತ್ತು ಕರ್ನಾಟಕವನ್ನು ಭಾಷಾದೃಷ್ಟಿಯಿಂದ ಸ್ವತಂತ್ರ ಪ್ರಾಂತ ಮಾಡಬೇಕೆಂದು ನಿರ್ಣಯಿಸಲ್ಪಟ್ಟಿತು.

ನಾರಾಯಣರಾವ ಆನಂದರಾವನೆಂಬೋರ್ವ ಕನ್ನಡಿಗನು ನಾಗಪೂರಕ್ಕೆ ಹೋಗಿ, ಶಸ್ತ್ರದ ಕಾಯದೆ ಮುರಿದು, ಕತ್ತಿಯನ್ನು ಕಯ್ಯಲ್ಲಿ ಹಿಡಿದು, ಮೆರವಣಿಗೆ ತೆಗೆದನು. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಈತನಿಗೆ ೧೫ ದಿವಸಗಳ ಸಾದಾ ಕೈದಿನ ಶಿಕ್ಷೆ ವಿಧಿಸಿದರು.

ಪರದೇಶ-

ಫ್ರಾನ್ಸದ ಅಧ್ಯಕ್ಷರು ಇಂಗ್ಲಂಡಕ್ಕೆ ಪಯಣ ಮಾಡಿಸುವರು. ಡೋವ್ಹರ ಬಂದರಿನಲ್ಲಿ ಪ್ರಿನ್ಸ ಆಫ ವೇಲ್ಸರು ಇವರ ಸ್ವಾಗತ ಮಾಡುವರು. ಮತ್ತು ಲಂಡನದ ಸ್ಟೇಶನದಲ್ಲಿ ಸ್ವತಃ ಬಾದಶಹರೇ ಇವರನ್ನು ಎದುರುಗೊಂಡು ತಮ್ಮ ಅರಮನೆಗೆ ಕರಕೊಂಡು ಹೋಗುವರು.

ಅತಿವೃಷ್ಟಿಯಿಂದ ಜಪಾನ ದೇಶದಲ್ಲಿ ರೇಶ್ಮೆಯ ಹುಳಗಳಿಗಾಗಿ ಬೆಳೆಸುವ ಮಲ್ಬರಿ ಗಿಡದ ವ್ಯವಸಾಯಕ್ಕೆ ಬಹುವಾಗಿ ಕೇಡು ಸಂಭವಿಸಿದೆ.

ಇಂಗ್ಲಿಷರ ಕಾಲೇಜುಗಳಿಗೆ ಒಕ್ಸಫರ್ಡ ಕೇಂಬ್ರಿಜದ ಪರಂಪರೆಗಳ [illegible] ಈ ಕೆಲಸ ಬಿಟ್ಟನು. ಪರೀಕ್ಷೆಯಲ್ಲಿ ಆನಂದದ ಸಿದ್ಧಿಯು.

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ದಕ್ಷಿಣ ಆಫ್ರಿಕೆಯ ರಾಯಭಾರಿಯಾಗಿ ಬರುವದನ್ನು ಅಲ್ಲಿಯ ಹಿಂದೂ ಕಾಂಗ್ರೆಸ ಸಭೆಯವರು ಅನುಮೋದಿಸಿ, ಆ ಬಗ್ಗೆ ನಾಮದಾರ ಶಾಸ್ತ್ರಿಯವರಿಗೆ ಅಭಿನಂದನ ತಂತಿಯನ್ನು ಕಳಿಸಿದ್ದಾರೆ. ನಾಮದಾರರು ಬರುವ ತಿಂಗಳ ಎಂಟನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಹಡಗವೇರುವರು.

ಗ್ರೀಕ ಜನರು ಅಥೆನ್ಸ ಪಟ್ಟಣದಲ್ಲಿ ಇಂಗ್ಲಿಷ ಸರಕಾರದ ಸುಳ್ಳು ನೋಟುಗಳನ್ನು ಮಾಡುತ್ತಿದ್ದವನ್ನು ಕಂಡು ಹಿಡಿದಿದ್ದಾರೆ. ಇವರು ಕೋಟ್ಯವಧಿ ರೂಪಾಯಿಗಳ ನೋಟುಗಳನ್ನು ಮಾಡಿ, ಬ್ಯಾಂಕುಗಳಿಗೆ ಟೊಪ್ಪಿಗೆ ಹಾಕಿದ್ದಾರೆ.

ಅಮೇರಿಕೆಯಲ್ಲಿ ಪುನಃ ಅತಿವೃಷ್ಟಿಯಾಗಿ ಅಪಾರ ಕೇಡಾಗಿದೆ. ದೊಡ್ಡ ದೊಡ್ಡ ದೇವಾಲಯಗಳು ಸಹ ಬಿದ್ದು ಹೋಗಿವೆ. ಪಕ್ಷಿಗಳು ಆಹಾರವಿಲ್ಲದೆ ಬಳಲಿ, ಗಿಡಗಳಿಂದ ಬಿದ್ದು, ಪ್ರವಾಹದ ಗುಂಟ ಹೋಗುತ್ತಿರುವವು. ಮನುಷ್ಯರ ಸ್ಥಿತಿಯೂ ಕನಿಕರ ಪಡುವಂತಾಗಿದೆ.

ಧಾರವಾಡ-

ನಿನ್ನೆ ಮಧ್ಯಾಹ್ನದಲ್ಲಿ ೩೦ ನಿಮಿಷಗಳ ವರೆಗೆ ಚನ್ನಾಗಿ ಮಳೆ ಬಿತ್ತು.

ಇಲ್ಲಿಯ ಫಸ್ಟ್‌ಕ್ಲಾಸ ಸಬ್ ಜಡ್ಜರಾದ ಮಿ. ಸಾನೆಯವರು ಜುಲೈದ ಕೊನೆಯಲ್ಲಿ [illegible]ವರು.

ಹುಬ್ಬಳ್ಳಿಯ ವಿದ್ಯುತ್ತಿನ ಕಚೇರಿಯ ಒಬ್ಬ ಕಾರಕೂನನಿಗೆ ವಿದ್ಯುತ್ತಿನ ಧಕ್ಕಿ ಕೊಟ್ಟು, ಆಸ್ಪತ್ರೆದಲ್ಲಿ ಮೃತ ಪಟ್ಟನು.

ಇಲ್ಲಿಗೆ ಕೊಡಗಾವಿಯ ಶ್ರೀ ನಾರಾಯಣ ಮಹಾರಾಜರು ದಯಮಾಡಿಸಿದ್ದಾರೆ.

ಲಿಂಗಾಯತ ಧರ್ಮ ಪ್ರಸಾರಕ ಸಂಘ ಹುಬ್ಬಳ್ಳಿ

—ಉದ್ದೇಶಗಳು.—

[illegible] ಧರ್ಮ ಪ್ರಸಾರವನ್ನು ಸಮ್ಯಕ್ಕೆ [illegible] ಗಳಿಂದ ಮಾಡುವದು.

[illegible] ಲ್ಲಿ ಧರ್ಮಜಾಗೃತಿಗೊಳಿಸುವ [illegible] ಮಾಡಿಸುವದು, ಸಣ್ಣ ಸಣ್ಣ ಪುಸ್ತಕ [illegible] ಗ್ರಂಥಗಳನ್ನು [illegible] ಉಚಿತವಾಗಿ ಹಂಚುವದು, ದೀಕ್ಷಾ ಪದ್ಧತಿಯನ್ನು ಸಾರ್ವತ್ರಿಕವಾಗಿ ಬಳಕೆಯಲ್ಲಿ ತರುವದು.

೩ ಈಗಿದ್ದ ಒಳಪಂಗಡಗಳನ್ನು ತೆಗೆದು ಹಾಕಿ ಸಮಾಜದಲ್ಲಿ ಐಕ್ಯತೆ [illegible] ಮಾಡುವದು.

೪ ಎಷ್ಟೋ ಒಳಪಂಗಡದವರು ಲಿಂಗವನ್ನು ಧರಿಸುತ್ತಿದ್ದು ಅವರ ಒಳಕೆ[illegible]ನ್ನು ಸಾರ್ವಜನಿಕ ಸ್ಥಳಗಳಲ್ಲಿ([illegible])ಯೂ ತಾವು ಮಾಡುವದಿಲ್ಲ; ಮತ್ತು ಈ ಜನ ಮನಿಗೆ ಜಂಗಮರು ಸಹ ಹೋಗುವದಿಲ್ಲ; ಕಾರಣ ಈ ಒಳಪಂಗಡದವರಿಗೆ ಮೊದಲು ಯೋಗ್ಯ ಧರ್ಮಾಧಿಕಾರಿಗಳಿಂದ ದೀಕ್ಷೆಯನ್ನು ಮಾಡಿಸಿ ಅವರ ಸಂಗಡ ಸಾರ್ವತ್ರಿಕವಾಗಿ ಬಳಕೆಯನ್ನು ಮಾಡಲಿಕ್ಕೆ ಪ್ರಾರಂಭ ಮಾಡುವದು.

೫ ಈಗ ಅಸ್ಪೃಶ್ಯರೆನಿಸಿಕೊಳ್ಳುವವರ ಅಸ್ಪೃಶ್ಯತೆಯನ್ನು ತೆಗೆದುಹಾಕಿ ಅವರನ್ನು ಸ್ಪೃಶ್ಯರನ್ನಾಗಿ ಮಾಡತಕ್ಕದ್ದು. ಅವರಲ್ಲಿ ಧರ್ಮಜಾಗೃತಿಯನ್ನು ಮಾಡಿ ಎಲ್ಲ ರೀತಿಯಿಂದಲೂ ಸುಧಾರಿಸಲಿಕ್ಕೆ ಪ್ರಯತ್ನ ಮಾಡುವದು.

ಚನ್ನಬಸಪ್ಪಾ ಸಿ ತಿರವಟ್ಟಿ
ಹಾಲಯ್ಯ [illegible]
ಚಂದ್ರಶೇಖರಪ್ಪ [illegible]
ಗೌರವ ಕಾರ್ಯದರ್ಶಿಗಳು

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.
೨-೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಜಾಹೀರಾತು.

ಪ್ರಿಯಬಾಂಧವರೇ
ನಮ್ಮಲ್ಲಿ ಅತಿ ಉತ್ತಮವಾದ ಬೌನ್ಸ ಚಹಾ ಮತ್ತು ಕಾಫೀ ಪೂಡೀ ದರದಿಂದ ಸಿಗುವದಲ್ಲದೆ, ಕೋಳ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.
ಮತ್ತು ನೀವು ಒಂದುಸಾರೆಯಾದರೂ ನಮ್ಮ ಚಹಾ ಕೊಂಡುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ಕೊಂಡುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾವೊ ಕಡೆಗೆ ಮಾರಾಟವಾಗಿರುತ್ತದೆ ... ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ಕೇಳಿಕೊಳ್ಳತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ಹಣವನ್ನು ಅದರೊಳಗೆ ಕಳಿಸತಕ್ಕದ್ದು.
[ಸಿಗುವ ಪತ್ತೆ]
ಏಜಂಟ:-
ಗಣಪತ ಭವಾನರಾವ ಲೋಖಂಡೆ ಪೇಠ ಕರಾವ ಧಾರವಾಡ
ಮತ್ತು
ಜನಾರ್ದನ ರಾಮಚಂದ್ರರಾವ ಟಿಕಾರೆ,
ವಾಚ ರಿಪೇರರ ವ ಡೀಲರ ಬೆಳಗಾವಿಗಲಿ, ಹುಬ್ಬಳ್ಳಿ.

ನೋಟೀಸು

ರಾ|| ರಾ|| ಕಲ್ಲಪ್ಪ ರಾಮಪ್ಪ ಹೂಳಿಣ್ಣವರ ಸಾ| ಕೀನ ನಾಗನೂರ ತಾ. ನವಲಗುಂದ ಇವರಿಗೆ

ಕೆಳಗೆ ಸಹಿ ಮಾಡುವವರ ಕಡಿಂದ ತಿಳಿಸುವದೇನಂದರೆ-

ನಾಗನೂರ ಗ್ರಾಮದ ರಿ|| ಸರ್ವೆನಂಬರ ೧೦೭ನೇ ಜಾತ ಇನಾಂ ಜಮೀನು ನಿಮಗೆ ತಾರೀಖು ೨೬-೪-೧೯೩೫ ನೇ ದಿವಸ ೩೫೦೦ ರೂಪಾಯಿಕ್ಕೆ ಖರೀದಿ ಮಾಡುವ ಕರಾರ ಮಾಡಿ ಉಭಯತರ ನಡುವೆ ಕರಾರ ಪತ್ರ ಸಹ ಮಾಡಿ ಕೊಟ್ಟಿ ಅದರಂತೆ ನೀವು ರಕಂ ಕೊಟ್ಟು ಖರೀದಿ ಪತ್ರ ಬರೆಸಿಕೊಳ್ಳಲಿಲ್ಲ ಆದರ ದಸಿಂದ ಅನೇಕ ಸಾರೆ ಸೂಚನಾ ಕೊಟ್ಟ ಹೇಳಿಕೊಂಡ್ರಿ ಅಡಚಣೇ ತೋರಿಸ್ತಿದ್ದ ಕಡೆಗೆ ಲೀಗಲ ನೋಟೀಸು ಕೊಟ್ಟ ಆದರೂ ನೀವು ದಾದ ತೊಗೊಳ್ಳದೆ ಕರಾರ ಪತ್ರ ನೀನು ಬರಿಸಿ ಬಮೋನೀ ಕಾಬಾ ಮಾತ್ರ ಇಟ್ಟು ಕೊಂಡೀದಿ ಆದರಿಂದ ನಮಗೆ ಬಹಳ ರೀತಿಯಿಂದ ಲುಕ್ಸಾನ ಮಾಡಿ ನಮ್ಮ ಎರಡನೇ ಜಮೀನು ಮಾರಿ ನಮಗೆ ಅಡಚಣಿ ದೂರ ಮಾಡಬೇಕಾಯಿತು ಕರಾರ ಪತ್ರ ನೀನು ಸದರಿ ಒಂದ ಕಿಮ್ಮತ್ತಿಗೆ ಜಮೀನು ಎರಡನೇದವರಿಗೆ ಮಾರಿ ಉಳಿದ ರಕಮಿಗೆ ವ ಲುಕ್ಸಾನೀ ಮತ್ತು ಬಡ್ಡೀ ಹಣಕ್ಕೆ ದಾವೇ ಮಾಡತಕ್ಕವರೇ ಆದರೆ ಬಹಳ ಕಡ್ಮೀ ಕಿಮ್ಮತ್ತಿಗೆ ಬೇಡಲಿಕ್ಕೆ ಹತ್ತಿದ್ದರಿಂದ ಕೇವಲ ನಿಮ್ಮ ಹತ್ರ ಈ ವರೆಗೆ ಬಿಟ್ಟ ಇನ್ನು ಮೇಲೆ ಹಾಗೇ ಬಿಡಲಿಕ್ಕೆ ಸವಡು ಇಲ್ಲ ಆದ್ದರಿಂದ ತಿಳಿಸುವದೇನಂದರೆ

ಈ ನೋಟೀಸು ಪ್ರಸಿದ್ಧವಾದ ೧೫ ದಿವಸಗಳಲ್ಲಿ ಖರೀದೀ ವ ಲುಕ್ಸಾನೀ ಹಣ ಬಡ್ಡೀ ರಕಂ ಕೊಟ್ಟು ಖರೀದೀ ಪತ್ರ ಒಪ್ಪಿಕೋ ಬೇಕು ಇಲ್ಲದಿದ್ದರೆ ಈಗಿದ್ದ ಗಿರಾಕಿಗೆ ಒಂದು ಸಾವಿರ ರೂಪಾಯಿಕ್ಕೆ ಮಾರಿ ಉಳಿದ ಯಾವತ್ತು ಹಣಕ್ಕೆ ದಾವೇ ಮಾಡುತ್ತೇವೆ. ಮುಂದೆ ನಿಮ್ಮ ತಕರಾರ ಏನೂ ನಡಿಲಿಕ್ಕಿಲ್ಲ. ಕರಾರ ಪತ್ರದ ಪ್ರಕಾರ ಯಾವತ್ತು ಹಣದ ಬೋಜಾ ನಿಮ್ಮ ವ ನಿಮ್ಮ ವಾರ್ಸದಾರ ವ ಮಿಳಕತಿ ಮೇಲೆ ಅದೆ ತಿಳಿಯೋದು ತಾ. ೧೭-೫-೩೭ ಇಸ್ವಿ.

C. T. Navalgund.

ನೋಟೀಸು.

ರಾ|| ಬಸವೆಪ್ಪಾ ಸಂಗಪ್ಪಾ ಗುಂಡಲೂರ ಸಾ| ಗೊಡವಾಡ ಸ್ಟೇಟ ಸಾಂಗಲಿ ಇವರಿಗೆ-

ಕೆಳಗೆ ಸಹಿ ಮಾಡುವವರ ಕಡಿಂದ ತಿಳಿಸುವದೇನಂದರೆ- ಗೊಡವಾಡ ಗ್ರಾಮದಲ್ಲಿರುವ ದರೆಪ್ಪಾ ದುಂಡೆಪ್ಪಾ ಗುಂಡಲೂರ ಈತನ ಕರೀಕಟ್ಟಿ ತೀವಿಗೆ ಹೊಂದಿದ ಹೊಲಾ ಸುಮಾರು ೯ ಎಕರೆ ನನ್ನ ಕಡಿಗೆ ಖರೀದಿ ಹಕ್ಕಿನಿಂದ ಅದೆ ಯಾವಾಗಲೂ ಖರೀದಿ ವ ಬಡ್ಡಿ ರಕಂ ಕೊಟ್ಟರೆ ಪರತ ಖರೀದಿ ಬಿಡಬೇಕಂತ ದರೆಪ್ಪನಿಗೂ ನನಗೂ ನಡುವೆ ಬಾಯಿ ಕರಾರ ಇತ್ತು ದರೆಪ್ಪನಂತೂ ಖರೀದಿ ಕೊಟ್ಟ ಮೇಲೆ ನತ್ತನು ಮುದ್ದತ ಮೀರಿ ಜಮೀನ ಕಾಬಾ ದಕಿಂದ ದಾವೇ ಮಾಡುವ ಆವಶ್ಯಕತೆ ಇತ್ತು ನೀವು ದರೆಪ್ಪನ ಸರಳ ವಾರಸದಾರರು ಫಕ್ತ ಮುದ್ದಲು ರಕಂ ಒಂದು ಸಾವಿರ ರೂಪಾಯಿ ತೊಗೊಂಡು ಪರತ ಖರೀದಿ ಕೊಡಬೇಕಂತ ನೀವು ಪಂಚ ಮಾರ್ಫತ ಗೊತ್ತು ಪಡಿಸಿಕೊಂಡಿರಿ ಆದರಂತೆ ಕಾಗದಪತ್ರ ಮಾಡಿಸುವದಕ್ಕಾಗಿ ವೆಟ್ಟ ಚನಬಸಪ್ಪಾ ಶಂಕರೆಪ್ಪಾ ಮುಂಗೋಡ ಇವರ ಕಡಿಗೆ ಹೋಗಿ ಅವರ ಹೇಳಿಕೆಯಂತೆ ಬರೇ ಭರಪಾಯಿಯಾದರೆ ಸಾಕು ಅಂತಾ ಹೇಳಿ ಅವರ ಕಡಿಂದ ಭರಪಾಯಿ ಬರಿಸಿ ಪೂರಾ ಮಾಡಿ ರಕಂ ಕೊಟ್ಟು ನೋಂದು ಮಾಡಿಸಿಕೊಳ್ಳುವದಕ್ಕಾಗಿ ಸಬ್ಬರಜಿಸ್ಟ್ರಾರರು ಊರಿಲ್ಲಿ ಇಲ್ಲದ ಮೂಲಕ ವಾಡಿಕೆಯಂತೆ ಕಾಗದ ಸದರಿ ಚನಬಸಪ್ಪನವರ ಕಡಿಗೆ ಉಳಿದವೆ. ಹೀಗಿದ್ದು ಈಗ ನೀವು ಭರಪಾಯಿ ನೋಂದಣಿ ಕಾರಣವಿಲ್ಲ ರಕಂ ಯಾವತ್ತು ಮುಟ್ಟಿದೆ ಈ ಮಾತು ಭರಪಾಯಿ ನೋಡಿಂದಲೇ ಕಂಡು ಬರುವಂತಿದೆ ಅಂತ ನನ್ನ ದ್ವೇಷಿಕ ಜನರ ಮಾತು ಕೇಳಿ ಅನ್ನುತ್ತಿರುವಿರಿ ಕಾಗದ ಕೇಳಿದರೆ ಬರಬವರು ನಳಾಂದ ಚಿನ್ನ ತೋರಿಸಿದರು ನೀವು ಇಬ್ಬರೂ ಸಂಗನಮತ ಮಾಡಿ ನನ್ನ ಮೋಸ ಮಾಡುವ ದುರಾಲೋಚನೆ ಮೊದಲಿಂದಲೂ ಮಾಡಿದಂತೆ ತೋರುತ್ತದೆ ಕಾರಣ ಈ ನೋಟೀಸು ಪ್ರಸಿದ್ಧವಾದ ೧೫ ದಿವಸಗಳಲ್ಲಿ ರೀತಿ ಪ್ರಕಾರ ರಕಂ ಸಬ್ಬರಜಿಸ್ಟ್ರಾರ ಸಾಹೇಬರ ಕಡಿಗೆ ಹಜರ ಮಾಡಿ ಭರಪಾಯಿ ನೋಂದ ಮಾಡ್ಸಿಕೋಬೇಕು ಇಲ್ಲದಿದ್ದರೆ ಖರೀದಿ ಹಕ್ಕು ಭರಪಾಯಿಂದ ಹೋಗಬಾರದು ಭರಪಾಯಿ ಗೈರ ಕಾಯದೇಶೀರ ಅದೆ ರೀತಿ ಪ್ರಕಾರ ದಾವೇ ಮಾಡಬೇಕಾಗುತ್ತದೆ ಮತ್ತು ಕಾಯದೇ ಪಂಡಿತರ ಅಭಿಪ್ರಾಯದಂತೆ ನೀವು ಮಾಡಿದ ಮೋಸದ ಬಗ್ಗೆ ರೀತಿ ಪ್ರಕಾರ ಫೌಜದಾರೀ ಫಿರ್ಯಾದಿ ಸಹ ಮಾಡತೇನೆ ತಿಳಿಯುವದು ತಾ| ೧೭-೫-೩೭ ನೇ ಇಸ್ವಿ

ಸಹಿ- ಸಂಗಪ್ಪಾ ಬಾಲಪ್ಪಾ ಮುಲವನಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶುಕ್ರವಾರ ತಾರೀಖು ೨೦ ನೇ ಮೇ ೧೯೨೭ | ಸಂಚಿಕೆ ೧೦೩

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಚೆಟ್ಟಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಕಾಯದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಠಾಹೀಮುತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಒಳಗೆ ಸರಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ
ಮ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ.

ಕಾಲರಾ (ಮಾರಿಕಾ) ರೋಗದ ಮೇಲೆ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೯೨೭ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೊಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೩೨ ಗುಳಿಗಿಗೆ ೧ರೂ. ೧೦೦ಕ್ಕೆ ೩ರೂ. ಪತ್ತಾ:- ಮ್ಯಾ. ಆರ್ಯೋಷಧಿ ಕಾರಖಾನಾ ಚಿಕ್ಕೋಡಿ ರ ಪೋ. ಚಿಕ್ಕೋಡಿ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸ ಹತ್ತಿ. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಆಶ್ರಯವನ್ನು ಮುಂದುವರಿಸಬೇಕೆಂದು ವಿನಂತಿಸುವೆವು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನರಡು ಆಣೆಯಂತಿರುತ್ತದೆ

ಎ. ರಾ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ್

ವಿಜಯ.

ಧಾರವಾಡ ತಾ- ೨೦-೫-೨೭ ನೇ ಇಸ್ವಿ

ಶ್ರೀ. ಸುಭಾಷಚಂದ್ರ ಬೋಸರ ಬಂಧಮುಕ್ತತೆ.

ಬಂಗಾಲ ಸರಕಾರದವರು ಒಮ್ಮೆ ಧೈರ್ಯ ಮಾಡಿ, ಶ್ರೀ. ಸುಭಾಷಚಂದ್ರ ಬೋಸರನ್ನು ಬಂಧಮುಕ್ತ ಮಾಡಿ, ಅವರನ್ನು ಅವರ ಬಳಗದಲ್ಲಿ ಕೂಡಿಸಿದರು. ಈ ಬಗ್ಗೆ ಸರಕಾರದ ಉಪಕಾರವನ್ನು ಎಷ್ಟು ನೆನೆಸುವಂತಿಲ್ಲ. ಸರಕಾರವು ತನ್ನ ಕೊರಳಿಗೆ ಬೀಳುತ್ತಿದ್ದ ದೊಡ್ಡ ಬಂಡೆಗಲ್ಲಿನ ಭಾರ ಮಾತ್ರ ತಪ್ಪಿಸಿಕೊಂಡಿತು. ಶ್ರೀ ಬೋಸರು ನಾಲ್ಕಾರು ತಿಂಗಳಿಂದ ವಿಶೇಷವಾದ ಜಡ್ಡಿನಿಂದ ಹಾಸಿಗೆ ಹಿಡಿದಿದ್ದಾರೆ. ದಿನಾಲು ಜ್ವರ ಬರುವದು. ಜೇಲಿನಲ್ಲಿ ಮಾಡಿದ ಉಪಚಾರವೆಲ್ಲ ನಿಷ್ಫಲವಾಯಿತು. ಆದುದರಿಂದ ಸರಕಾರದವರು ಇವರಿಗೆ ಸ್ವಿಟ್ಝರ್ಲಂಡಕ್ಕೆ ಹೋಗುವ ಶರ್ತು ಹಾಕಿದರು. ಕೆರೆಯಿಂದ ತೆಗೆದು ಬಾವಿಯಲ್ಲಿ ಹಾಕುವ ಹುಕುಮು!! ಆ ದೇಶಕ್ಕೆ ಹೋದ ಬಳಿಕ, ತಿರಿಗಿ ಸ್ವದೇಶಕ್ಕೆ ಬರುವ ವ್ಯಕ್ತಿ ಸ್ವಾತಂತ್ರ್ಯವೆಷ್ಟೂ ಇರಲಿಲ್ಲ. ದಬ್ಬಾಳಿಕೆಯ ಕಾಯದೆಯನ್ನು ರದ್ದು ಮಾಡಿದ ನಂತರ ಸ್ವದೇಶದ ದಾರಿ ಹಿಡಿಯಬೇಕೆಂಬ ಕರಾರಕ್ಕೆ ಒಡಂಬಡಬೇಕಾಗಿತ್ತು. ಅದರೆ ಹೇಳಿ ಕೇಳಿ ಒಪ್ಪಿಕೊಂಡು ದ್ವೀಪಾಂತರ ವಾಸದ ಶಿಕ್ಷೆಗೆ ಒಪ್ಪಿಗೆ ಕೊಡುವಂಥ ಪ್ರಕಾರವು. ಮಾನವಂತರಿಗೆ ಅಪಮಾನಕ್ಕಿಂತ ಮರಣವೇ ಸುಖದಾಯಕವು. ಸಾಕ್ರೆಟೀಸನು ತನ್ನ ತತ್ವಕ್ಕಾಗಿ ವಿಷಪ್ರಾಶನ ಮಾಡಿದನು. ಸುಭಾಷಚಂದ್ರ ಬೋಸರೂ ಇದೇ ತತ್ವದವರು. ಬಂಧಮುಕ್ತತೆಯ ವಿಷಯವು ಅಂಗಡಿಕಾರರಂತೆ ವ್ಯಾಪಾರ ಹೊಂದಿಸುವದಕ್ಕಾಗಿ ಹಿಂದೆ ಮುಂದೆ ಸರಿಯುವ ರೀತಿಯಲ್ಲ; ತತ್ವವು ಯಾವಾಗಲು ಅಚಲವಾಗಿರುತ್ತದೆಂದು ಹೇಳುವ ಪ್ರಕಾರ ತಮ್ಮ ವರ್ತನದಲ್ಲಿ ಬದಲಾಗಬಾರದೆಂದು ಇವರು ತುರಂಗದಲ್ಲಿ ಹಾಸಿಗೆಯ ಮೇಲಿಂದ ನರಳುತ್ತಿರುವಾಗ ಸ್ವದೇಶಿಯನ್ನು ನ್ವೇಷಿಸಿ, ಒಂದು ಸಂದೇಶವನ್ನು ಪ್ರಸಿದ್ಧ ಮಾಡಿ ಒಂದು ವಾರ ಕೂಡ ಆಗಿಲ್ಲ. ಇವರ ಈ ತಪಸ್ಸಿಕ್ಕೆ ಎಳ್ಳಷ್ಟು ಚ್ಯುತಿ ಬಾರದಂತೆ, ಬಂಧಮುಕ್ತರಾಗಿದ್ದಾರೆ. ಮಹಾತ್ಮಾ ಗಾಂಧಿಯವರು ಬೇಸ್ನೆಟ್ಟಗಾದ ಮೇಲೆ ಮುಕ್ತರಾದರು. ಶ್ರೀ ಬೋಸರು ಸಾಯುವರೋ? ಬದುಕುವರೋ? ಎಂಬ ಕಠಿಣಾವಸ್ಥೆಯಲ್ಲಿ ಬಿಡುಗಡೆ ಹೊಂದಿದ್ದಾರೆ.

ಬಿಡುಗಡೆ ಹೊಂದಿದ ಕೂಡಲೆ- ಇವರೊಂದು ಸಂದೇಶವನ್ನು ಜಾಹೀರ ಮಾಡಿದರು, ಅದರ ಒಕ್ಕಣಿಕೆಯೇನಂದರೆ:-

"ಈಗ ನಾನು ನನ್ನ ಮನೆಗೆ ಬಂದಿದ್ದೇನೆ. ನನ್ನ ಪ್ರಕೃತಿಯನ್ನು ನೆಟ್ಟಗೆ ಮಾಡಿಕೊಂಡು ಆರೋಗ್ಯವನ್ನುಂಟು ಮಾಡಿಕೊಳ್ಳುವದು ಮೊದಲನೆಯ ಕರ್ತವ್ಯವು. ದೇಹ ಸದೃಢವಾದರೆ- ಮುಂದಿನ ಕಾರ್ಯ ಮಾಡಲು ಶಕ್ತಿ ಬರುವದು. ನನ್ನಂತೆ ತುರಂಗದಲ್ಲಿ ಬಿದ್ದಂಥ ನನ್ನ ಬಾಂಧವರ ವಿಷಯವಾಗಿ ನನ್ನ ಅಂತಃಕರಣದಲ್ಲಿ ಹಗಲು ರಾತ್ರಿ ಚುಚ್ಚುತ್ತಿರುವದು. ನಾವು ಮಾಡಿಕೊಂಡಿರುವಂಥ ಧ್ಯೇಯ ಪೂರ್ತಿಗಾಗಿ ಕರ್ತವ್ಯ ಮಾಡುವಂತೆ ನನಗೆ ಬೇಗನೆ ಗುಣವಾಗುವಂತೆ ನನ್ನ ದೇಶಿಯರು ಅಪೇಕ್ಷಿಸುವರೆಂದು ಆಶಿಸುತ್ತೇನೆ"

ಮರಣೋನ್ಮುಖರಾಗಿದ್ದರೂ, ಶ್ರೀ ಬೋಸರು ದೇಶಸೇವೆ ಮತ್ತು ಸ್ವರಾಜ್ಯಸ್ವಾತಂತ್ರ್ಯವನ್ನು ತಮ್ಮ ಗುರಿ ಮಾಡಿಕೊಂಡಿರುತ್ತಾರೆಂದು ತಮ್ಮ ಬೇರೆ ದೇಶಬಾಂಧವರು ಬಂಧಮುಕ್ತರಾಗದಿರುವದು ಅವರಿಗೆ ಹೃದ್ರೋಗವಾಗಿರುತ್ತದೆಂದೂ ಮೇಲಿನ ಉದ್ಗಾರಗಳಿಂದ ಸ್ಪಷ್ಟವಾಗುತ್ತದೆ. ಅಂತೇ ಇವರು ಭಾರತೀಯರಿಗೆ ವಂದ್ಯರಾಗಿಯೂ ಆಳರಸರಿಗೆ ನಿಂದ್ಯರಾಗಿಯೂ ಕಾಣುತ್ತಿರುವರು!

ಶ್ರೀ ಬೋಸರು ಕಲಕತ್ತೆಗೆ ಬರುವರೆಂಬ ವರ್ತಮಾನ ಕೇಳಿ, ಸಾವಿರಾರು ಜನರು ಘಾಟಿಗೆ ಹೋದರು. ಆದರೆ ಪೋಲಿಸರು ಕಣ್ಮಾಸಕು ಮಾಡಿ ಇವರನ್ನು ನಡು ಸೂಳಿಯಲ್ಲಿಳಿಸಿಕೊಂಡು ಬೇರೊಂದು ದಾರಿಯಿಂದ ತುರಂಗಕ್ಕೆ ಒಯ್ದರು. ಅಲ್ಲಿ ಇವರ ಪ್ರಕೃತಿಯ ನಿದಾನ ಮಾಡಲಿಕ್ಕೆ ಗವ್ಹರ್ನರ ಸಾಹೇಬರು ತಮ್ಮ ಸ್ವಂತದ ಡಾಕ್ಟರರನ್ನು ಕಳಿಸಿದ್ದರು. ಇವರ ಕೂಡ ಸರ ನೀಲರತ್ನ ಸರಕಾರ ಮತ್ತು ಬಿಧನಚಂದ್ರ ರಾಯರೂ ಪ್ರಕೃತಿಯ ಪರೀಕ್ಷೆ ಮಾಡಿದರು. ಇವರಿಗೆ ಮುಂದಿನ ಪ್ರವಾಸವೇ ತಡೆಯಲಾರದೆಂದು ಗವ್ಹರ್ನರ ಸಾಹೇಬರ ಡಾಕ್ಟರರು ಅಭಿಪ್ರಾಯಪಟ್ಟದ್ದರಿಂದಲೇ ಇವರು ಅವಸರದಿಂದ ಬಂಧಮುಕ್ತರಾಗಲು ಕಾರಣವಾಯಿತು. ಮೇಲೆ ಹೇಳಿದಂತೆ ಬಂಧಮುಕ್ತತೆಯಿಂದ ಸಾಹೇಬರು ತಮ್ಮ ಪಾಲಿಗೆ ಜನ್ಮಜನ್ಮಾಂತರದಲ್ಲಿಯೂ ಬರಬೇಕಾಗಿದ್ದ ದುಷ್ಕೀರ್ತಿಯನ್ನು ತಪ್ಪಿಸಿಕೊಂಡರು.

ಮುಕ್ತತೆಯ ಸುದ್ದಿಯನ್ನು ಕೇಳಿ ಪತ್ರಕಾರರು ವಿಶೇಷ ಸಂಚಿಕೆಗಳನ್ನು ಹೊರಡಿಸಿ ಊರತುಂಬ ಹಂಚಿದರು. ಇಂಗ್ಲಿಷಮನ್ನ ಪತ್ರಿಕೆಯು ಬೋಸರ ಚಿತೆಯ ಮೇಲೆ ಅನ್ನ ಮಾಡಿಕೊಂಡು ಉಣ್ಣುವ ತರಹವಾಗಿ ವಿಶೇಷ ಸಂಚಿಕೆಗಳಿಂದ ರೊಕ್ಕ ಗಳಿಸಿತು ಈ ಆನಂದದ ವರ್ತಮಾನ ಕೇಳಿ, ಮ್ಯುನಸಿಪಾಲಿಟಿ ಮತ್ತು ಅನೇಕ ಸಾರ್ವಜನಿಕ ಸಂಸ್ಥೆಗಳು ರಜೆ ತಕ್ಕೊಂಡವು. ಪೇಟೆಗಳು ಬಂದಾಗಿ, ಜನರು ಆನಂದಿತರಾಗಿ ಆ ದಿನವನ್ನು ಹಬ್ಬದಂತೆ ಕಳೆದರು. ನಾಗರಿಕರು ದರ್ಶನೋತ್ಸುಕರಾಗಿ ಲಕ್ಷಾವಧಿ ಸಂಖ್ಯೆಯಿಂದ ಇವರ ವಾಸಸ್ಥಾನಕ್ಕೆ ಬಂದರು. ಆದರೆ ಯಾರೂ ಇವರನ್ನು ಕಾಣಬಾರದೆಂದು ಡಾಕ್ಟರರು ನಿರ್ಬಂಧಪಡಿಸಿದ್ದರಿಂದ, ಜನರು ನಿರುತ್ಸಾಹ ಹೊಂದಿ ಹಿಂದಿರುಗಿದರು. ಇವರನ್ನು ಹಗಲೆಲ್ಲ ನೋಡುವದರಿಂದ ಸಹ ಆಯಾಸವಾಗಿ ಜ್ವರ ಏರುವಷ್ಟು ಇವರ ಪ್ರಕೃತಿಯು ಸೂಕ್ಷ್ಮವಾಗಿರುತ್ತದೆಂದು ಡಾಕ್ಟರ ನೀಲರತ್ನ ಸರಕಾರ ಮತ್ತು ರಾಯರವರು ಜಾಹೀರ ಮಾಡಿದ್ದಾರೆ. ದಾಸಪತ್ನಿಯವರು ಬಂದು ಬಹಳ ಹೊತ್ತಿನ ತನಕ ಇವರ ಹತ್ತರ ಕೂತು ಆರೈಕೆಯುಪಚಾರ ಮಾಡಿದರು. ಬಂಧಮುಕ್ತತೆಯ ವರ್ತಮಾನವು ನಾಲ್ಕೂ ಕಡೆಗೆ ತಾರಿನಿಂದ ತಿಳಿಸಲ್ಪಟ್ಟಿತು. ಮುಂಬಯಿಯಲ್ಲಿ ಕೂತಿದ್ದ ಆಲ ಇಂಡಿಯಾ ಕಾಂಗ್ರೆಸ ಕಮಿಟಿಗೂ ತಾರಿನ ವರ್ತಮಾನ ಬಂತು. ಮೆಂಬರರು ಶ್ರೀ ಬೋಸರ ಅಭಿನಂದನ ಮಾಡಿದರು. ಶ್ರೀ ಬೋಸರು ಬೇಗನೆ ಗುಣಹೊಂದಿ, ಸ್ವರಾಜ್ಯ ರಥದ ಸೂತ್ರಗಳನ್ನು ಬೇಗನೆ ಕೈಕೊಳ್ಳಲೆಂದು ಹಾರೈಸುತ್ತೇವೆ.

ಹಿಂದೂ ಮುಸಲಮಾನ ಐಕ್ಯದಿಂದ ಆಳರಸರಿಗೆ ಬಂದ ಕುತ್ತು.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲಾದ ಹಿಂದೂ ಮುಸಲಮಾನ ಐಕ್ಯವು ಆಳರಸರ ಚಿಂತೆಗೆ ಮೂಲವಾಯಿತು. ಕಳೆದ ನಾಲ್ಕು ವರ್ಷಗಳಿಂದ ಕಾಡ್ಗಿಚ್ಚಿನಂತೆ ಹಬ್ಬುತ್ತಿದ್ದ ಈ ದ್ವೇಷಾಗ್ನಿಯಿಂದ ಆಳರಸರು ನಿಶ್ಚಿಂತರಾಗಿ, ಸುಖದ ನಿದ್ರೆ ಮಾಡುತ್ತಿದ್ದರು. ಆದರೆ ಈ ನಂತರ ಚಿಂತಾ ದಹತಿ ಸಜೀವಂ ಎಂಬಂತೆ ಇವರಿಗೊದಗಿ ಬಂದದೆ. ಹಿಂದೂ ಮುಸಲಮಾನರೊಂದಾದರೆ- ಪುನಃ ಅಸಹಕಾರವೇಳುವದು; ಕಾಯದೆಭಂಗದ ಕೋಲಾಹಲವಾಗುವದೆಂದು ಇವರಿಗೆ ಮೊದಲಿನಿಂದಲೂ ಹೆದರಿಕೆಯುಂಟು. ಈ ಭಯವು ಈ ನಂತರ ನಿಜವಾಗಲು ಅವಕಾಶ ಹತ್ತಲಾರದು. ಅದರ ಪ್ರಸಾದ ಚಿನ್ಹವನ್ನು ಪಂಡಿತ ಮೋತಿಲಾಲರು ಇದೇ ಕಮಿಟಿಯಲ್ಲಿ ಸ್ಪಷ್ಟವಾಗಿ ತೋರಿಸಿದ್ದಾರೆ. "ಇವರು ಅಂದದ್ದೇನಂದರೆ-

" ನಾವು ನಿಜವಾಗಿಯೂ ರಾಯಲ ಕಮಿಶನದ ಮುಂದೆ ಸಾಕ್ಷೀ ನುಡಿಯಲಿಕ್ಕೆ ಹೋಗುವದಿಲ್ಲ. ನಮ್ಮಲ್ಲಿ ಸ್ವರಾಜ್ಯನಾಳುವ ಪಾತ್ರತೆ ಅಥವಾ ಸಮರ್ಥತೆಯುಂಟೆಂದು ಬಾಯಿ ತೆರೆದು ಹೇಳಿಕೊಳ್ಳಲು ಇನ್ನಾವ ಕಮಿಶನದ ಮುಂದೂ ನಿಲ್ಲುವದಿಲ್ಲ. ರಾಯಲ ಕಮಿಶನವು ಇಂಡಿಯಾ ಆಕ್ಟದ ಪ್ರಕಾರ ಶಾಲೆಯ ಪರೀಕ್ಷೆಯಾಗಿದೆ. ನಾವು ವಿದ್ಯಾರ್ಥಿಗಳಂತೆ ಇದರ ಮುಂದೆ ಪರೀಕ್ಷೆ ಕೊಡತಕ್ಕವರಲ್ಲ.

ಲಾರ್ಡ ಬರ್ಕನಹೆಡ್‌ಸಾಹೇಬರು ಕಳೆದೆರಡು ವರ್ಷಗಳಲ್ಲಿ ನೀವೆಲ್ಲರೂ ಒಂದಾಗಿ ನಿಮಗೆಂಥ ಸ್ವರಾಜ್ಯ ಬೇಕೆಂಬದನ್ನು ಹೇಳಿರೆಂದು ಆಗಾಗ್ಗೆ ಹೇಳುತ್ತಾ ಬಂದಿದ್ದಾರೆ. ಹಿಂದೂ ಮುಸಲಮಾನ ಐಕ್ಯವಾಗಲಾರದು; ಇವರು ತಮ್ಮ ಮೇಲೆ ಸ್ವರಾಜ್ಯದ ಹೊಣೆ ಹಿಡಲಾರರೆಂದೇ ಸಾಹೇಬರು ಭಾವಿಸಿದ್ದರು ಆದರೆ ರಾಯಲ ಕಮಿಶನ ಬರುವದರೊಳಗಾಗಿ ಐಕ್ಯವಾಯಿತು. ಇವರೀರ್ವರೂ ಸೇರಿ, ನಮಗೆ ನಿಮ್ಮ ರಾಯಲ ಅಥವಾ ಇನ್ನೊಂದು ಕಮಿಶನ ಬೇಡ. ನಮಗೆ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯ ಬೇಕೆಂತಲೇ ಹೇಳುವರು. ಮತ್ತು ಆ ಶರ್ತುಗಳನ್ನು ಇವರ ಮುಂದಿಡುವರು. ಈ ಶರ್ತುಗಳು ಸಾಹೇಬರ ಮೇಲೆ ಆಕಾಶದ ಕೊಳ್ಳಿಯಂತೆ ಬೀಳುವವು. ಸಾಹೇಬರು ಇವನ್ನು ಒಪ್ಪಿದರೇ ಸರಿ. ಇಲ್ಲವಾದರೆ ಅಸಹಕಾರ ಮತ್ತು ಕಾಯದೆಭಂಗವು ಇವರನ್ನು ಪೀಡಿಸಲಿಕ್ಕೆ ಪ್ರಾರಂಭಿಸುವವು.

ನರಗುಂದವು ಹೇಗೆ ಹಾಳಾಯಿತು?

—o—

ಬಂಡಾಯದ ನಂತರ ಆದ ಸುಲಿಗೆಯಲ್ಲಿ ನರಗುಂದವು ಹೇಗೆ ಹಾಳಾಯಿತೆಂಬದನ್ನು ಮಿ. ಹುಲಿಕವಿಯವರು ವಾಗ್ಭೂಷಣದಲ್ಲಿ ಕೆಳಗೆ ಕೊಟ್ಟಂತೆ ವರ್ಣಿಸಿದ್ದಾರೆ

ನರಗುಂದ ಪಟ್ಟಣವು ಸಮೃದ್ಧವಾದದ್ದು. ಆದದರಿಂದ ಅಲ್ಲಿಯ ಜನರು ಶ್ರೀಮಂತರಿದ್ದರು. ಆದರೆ ತಮ್ಮ ತಮ್ಮ ತುಂಬಿದ ಮನೆಯನು ಬಿಟ್ಟು ಓಡಿ ಹೋಗುವ ಪ್ರಸಂಗ ಬಂದ ಕೂಡಲೆ ಅವರು ಅಮೌಲ್ಯವಾದ ಉಡಿಗಿ ತೊಡಿಗೆಗಳು, ಆಭರಣಗಳು, ವಸ್ತ್ರಗಳು ಇವೇ ಮೊದಲಾದ ಎಲ್ಲ ವಸ್ತುಗಳನ್ನು ತ್ವರೆಯಿಂದ ಮನೆಯೊಳಗಿನ ಹಗೆಯಲ್ಲಿ ಚೆಲ್ಲಿಕೊಟ್ಟು ಪರಮಾತ್ಮನ ಮೇಲೆ ಭಾರ ಹಾಕಿ ಹೊರಟು ಹೋದರು. ಇಂಗ್ಲಿಷರು ಪಟ್ಟಣವನ್ನು ವಶ ಮಾಡಿಕೊಂಡ ಅಲ್ಪಾವಧಿಯಲ್ಲಿಯೇ ಕೋಟ್ಯವಧಿ ರೂಪಾಯಿಗಳ ವಸ್ತುಗಳು ಲೂಟಿ ಮಾಡಲ್ಪಟ್ಟವು. ಯಾವನಿಗೆ ಯಾವ ಒಡವೆಯು ಬೇಕಾಗಿತ್ತೋ, ಅವನು ಅದನ್ನು ಊರೊಳಗಿನ ಮನೆಗಳನ್ನು ಹೊಕ್ಕು ಆರಿಸಿ ತೆಗೆದುಕೊಳ್ಳುತ್ತಿದ್ದನು. ಒಬ್ಬ ಗೋವಿಂದರಾಯನ ಮನೆಯಲ್ಲಿ ನಾಲ್ಕು ಸಾವಿರ ರೂ. ಗಳ ಜರದ ವಸ್ತ್ರಗಳೂ, ಎಷ್ಟೋ ಬೆಳ್ಳಿಯ ಮತ್ತು ಬಂಗಾರದ ಒಡವೆಗಳೂ ಸಿಕ್ಕವು. ಇದರ ಹೊರತು ಎಷ್ಟೋ ಮುತ್ತುಗಳು ದೊರೆತವು ನರಗುಂದದಲ್ಲಿ ಒಬ್ಬ ವೇಶ್ಯೆಯಿದ್ದಳು. ಅವಳ ಮನೆಯನ್ನು ಲೂಟಿ ಮಾಡಲು, ಅಲ್ಲಿದ್ದ ರೂಪಾಯಿ, ಬೆಳ್ಳಿ, ಬಂಗಾರ, ವಸ್ತ್ರ ಮತ್ತು ಪಾತ್ರೆ ಇವುಗಳ ಗಣನೆಯೇ ಆಗಲಿಲ್ಲವಂತೆ! ಲೂಟೀ ಮಾಡುವವರು ಮನೆಯೊಳಗೆ ನಿಕ್ಷೇಪವು ಇರುವದೆಂದು ಭಾವಿಸಿ ಊರೊಳಗಿನ ಪ್ರತಿಯೊಂದು ಮನೆಯನ್ನು ಅಗಿದು ನೋಡುತ್ತಿದ್ದರು. ಇಂತು ನರಗುಂದವು ದುರವಸ್ಥೆಯನ್ನು ಹೊಂದಿತು! ಅದರ ಐಶ್ವರ್ಯವು ಅಡಗಿತು! ಕಾಂತಿಯು ಮಣ್ಣುಪಾಲಾಯಿತು!

ತಿರುಪತಿಯ ಮಹಂತರು ದೇವಸ್ಥಾನದ ದೆಸೆಯಿಂದ ಒಂದು ಹುಲಿಯನ್ನು ಕೊಂಡಿದ್ದಾರೆ. ಇದಕ್ಕೆ ದಿನಾಲು ಮೂರು ರೂಪಾಯಿಯ ಮಾಂಸ ಬೇಕು. ಹುಲಿ ಮತ್ತು ಅದಕ್ಕಾಗಿ ಆಗುವ ಪಶುಹತ್ಯದ ದೆಸೆಯಿಂದ ಭಾವಿಕರೂ ಯಾತ್ರಿಕರೂ ಮಹಂತರ ಕೃತ್ಯವನ್ನು ನಿಷೇಧಿಸುತ್ತಿದ್ದಾರೆ.

ಬರ್ಮಾ ಆಯಿಲ (ಮದ್ರಾಸ) ಕಂಪನಿಯ ಸಂಪು ಮುಗಿಯಿತು. ಕಂಪನಿಯವರು ಕೂಲಿಕಾರರು ಶರ್ತುಗಳಿಗೆ ಒಪ್ಪಿದರು. ಮೂಗು ಹಿಡಿದರೆ- ಬಾಯಿ ತೆರೆಯುವದು.

ಬ್ರಹ್ಮದೇಶದ ವಿಶ್ವ ವಿದ್ಯಾಲಯದ ದೆಸೆಯಿಂದ ಅಲ್ಲಿಯ ಗವ್ಹರ್ನರಸಾಹೇಬರು ಭಿಕ್ಷಾಪಾತ್ರೆಯನ್ನು ಹಿಡಿದು ಹೊರಟಿದ್ದಾರೆ. ಎಷ್ಟೋ ಉದಾರರಾದ ಗೃಹಸ್ಥರೇ- ಸಂತೋಷದಿಂದ ಕೊಡರಿ, ಎಲ್ಲಕ್ಕೂ ಹೆಚ್ಚಿನ ರಕಮು ಕೊಡಿರಿ; ಏನು ಕೊಡತಕ್ಕದ್ದು ಈಗ್ಗೇ ಕೊಡಿರೆಂದು ಸಾರುತ್ತಿದ್ದಾರೆ. ಈ ವರೆಗೆ ಏಳು ಲಕ್ಷ ರೂಪಾಯಿಗಳು ಕೂಡಿವೆ

ಮದ್ರಾಸದಿಂದ ಪುದುಕೋಟೆಗೆ ಒಬ್ಬ ಗೃಹಸ್ಥನು ೧೦೦೦೦ ರೂಪಾಯಿಯ ಆಭರಣಗಳುಳ್ಳ ಟ್ರಂಕನ್ನು ತಕ್ಕೊಂಡು ರೇಲ್ವೆಯಲ್ಲಿ ಪ್ರವಾಸ ಮಾಡುತ್ತಿದ್ದಾಗ, ನಡುಸ್ಟೇಶನದಲ್ಲಿ ಒಬ್ಬನು ಟ್ರಂಕನ್ನು ಹೊರಗೆ ಚಲ್ಲಿ, ತಾನೂ ಹಾರಿ, ಟ್ರಂಕ ಸಹಿತ ಓಡಿ ಹೋಗುತ್ತಿದ್ದಾಗ ಹಿಡಿಯಲ್ಪಟ್ಟಿದ್ದಾನೆ.

ಧಾರವಾಡ—

ಶ್ರೀಯುತ ಶಿವಾನಂದ ಯಜ್ಞೇಶ್ವರ ವಾಜಪೇಯಿಯವರನ್ನು ಅರಿಯದಂಥ ಕನ್ನಡ ಶಿಕ್ಷಕರಾರೂ ಇಲ್ಲ; ಇವರು ಈಗ ಪೆನಶನ್ ಪಡೆದ ಗೃಹಸ್ಥರೂ ಹಾಗೆ ಬಹಳ ಹಣ್ಣನಂಥ ವಯೋವೃದ್ಧರೂ ಆಗಿದ್ದಾರೆ ಇವರು ಶಾಂತಕವಿಯವರ ಕಾಲದವರು. ಶಾಂತಕವಿಯಂತೆ ಸತ್ಕವಿಗಳು; ನರಕವಿಗಳಲ್ಲ. ನೀವು ನರಕವಿಗಳಲ್ಲ. ನಿಮ್ಮ ಕವಿತಾಶಕ್ತಿಯು ಮತ್ತು ವಿಷಯ ನಿರೂಪಣೆಯು ನಿಮ್ಮಿಂದಲೇ ಅಸ್ತವಾಗಬಾರದೆಂದು ಅನೇಕ ಜನ ಕನ್ನಡಿಗರು ಇವರಿಗೆ ಸೂಚನೆ ಮಾಡಿದ್ದರಿಂದ, ಇವರು ಈಗ ನೀತಿಬೋಧಿನಿ ಮತ್ತು ರೇಣುಕಾ ಮಹಾತ್ಮೆಯನ್ನು ಪದ್ಯರೂಪದಿಂದ ಬರೆದಿರುತ್ತಾರೆ. ಇವುಗಳ ಹಸ್ತಪತ್ರಿಕೆಯನ್ನೋದಿ, ಶ್ರೀಯುತ ರಾವ ಹುನಗುಂದ ರಾ. ಬ. ದೇಶಪಾಂಡೆ ಮೊದಲಾದವರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ ಇವರು ಈ ಗ್ರಂಥಗಳನ್ನು ಬೇಗನೆ ಮುದ್ರಿಸುವರು ಇವಕ್ಕೆ ಸಹಾಯ ಮಾಡಿ. ಇವರಿಂದ ಹೆಚ್ಚು ಕನ್ನಡ ನುಡಿಯ ಹಾಗು ನಾಡಿನ ಸೇವೆ ಮಾಡಿಸಿಕೊಳ್ಳಬೇಕೆಂದು ನಾವು ಕರ್ನಾಟಕಸ್ಥರಿಗೆ ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ಟೆಂಡರ ನೋಟೀಸು.

—o—

ರೋಣ ತಾಲೂಕ ಅಬ್ಬಿಗೇರಿ ಗಂಡು ಹುಡುಗರ ಸಾಲಿಯಲ್ಲಿ ಕಲ್ಲು ಫರ್ಸಿ ಹಾಕುವ ಬಗ್ಗೆ ಸನ್ ೧೯೨೭-೨೮ ಸಾಲಿನ ಬಗ್ಗೆ ರೂಪಾಯಿ ೮೯೦ ಮತ್ತು ಹಾನಗಲ್ಲ ತಾಲೂಕ ಪೈಕಿ ತಿಳವಳ್ಳಿ ಗಂಡು ಹುಡುಗರ ಸಾಲೆಯ ವಿಶೇಷ ರಿಪೇರಿಯ ಬಗ್ಗೆ ಚಾಲೂ ಸಾಲಿನಲ್ಲಿ ರೂಪಾಯಿ ೮೨೭ ಮಂಜೂರಿ ಆಗಿರುತ್ತದೆ.

ಟೆಂಡರ ಕೊಡುವವರು ಮೆ|| ಇಂಜಿನಿಯರ ಸಾ|| ಡಿ|| ಲೋ|| ಬೋ|| ಧಾರವಾಡ ಇವರ ಕಡೆಗೆ ತಾರೀಖು ೨೬-೩-೧೯೨೮ ರ ಒಳಗಾಗಿ ಕಳಿಸಿ ಕೊಡಬೇಕು. ಮುದ್ರಿತ ಫಾರಂ ಬಿಟ್ಟು ಬೇರೆ ಟೆಂಡರ ಹಿಡಿಯಲಿಕ್ಕಿಲ್ಲ. ಕವ್ಹರ ಮೊಹರ ಮಾಡಿ ಮೇಲೆ ಟೆಂಡರ ಅರ್ಜಿ ಅಂತಾ ಬರೆಯತಕ್ಕದ್ದು. ಪ್ಲಾನ ವ ಎಸ್ಟಿಮೇಟ ಇಂಜಿನಿಯರ ಹೇವಳಿಯಲ್ಲಿ ನೋಡಲಿಕ್ಕೆ ದೊರೆಯುವವು.

C. C, HULKOTI.

President D. L. B.

Dharwar

ಜಾಹೀರ ನೋಟೀಸು

ಭೀಮಾ ತಂದಿ ಭರಮಣ್ಣಾ ತಳವಾರ ಸಾ|| ಚಿಕ್ಕಯರಗಟಿ ತಾಲೂಕ ಕೋಡ ಇವನಿಗೆ–

ಈ ಕೆಳಗೆ ಸಹೀ ಮಾಡುವವಳ ಕಡಿಂದಾ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ–

ನೀನು ನನಗೆ ಮದ್ವಿ ಗಂಡನಿದ್ದು ಒಳಗಡೆ ನೀನು ತೋಛಸಕಾರ್ಯ ಮಾಡಿಕೊಂಡು ಹೋಗ ಲಾರದೇ ೧೫-೨೦ ಜನರನ್ನು ಕರಕೊಂಡು ಬಂದು ಹೊತ್ತುಕೊಂಡು ಒಯಿದಿ ಮತ್ತೊಮ್ಮೆ ಇದೇ ಪ್ರಕಾರ ನನ್ನ ತವರ ಮನಿಯಿಂದಾ ದಾಂಡಗ್ಯಾ ಮಾಡಿ ನನ್ನ ತಾಯಿಗೆ ಹೊಡದು ಒಡದು ನನ್ನ ಹೊತ್ತುಕೊಂಡು ಹೋದಿ ಮೆ. ಪೋಲೀಸ ಸುಪರಿಂಟೆಂಡೆಂಟ ಸಾ|| ರವರ ಕಡಿಗೆ ನನ್ನ ತಾಯಿಯು ಫಿರ್ಯಾದಿ ಮಾಡಲಾಗಿ ಅದರಲ್ಲಿ ಈ ಪ್ರಕಾರ ಗೈರ ವರ್ತಿಸುವದಿಲ್ಲಾ ಅಂತಾ ಒಪ್ಪಿಕೊಂಡಿ ಯೇನಿಕೀ ಜನರು ಒಬ್ಬೋ ಹೇಳಿದ ಪ್ರಕಾರ ಚಲೋರೀತೀ ನಡೀಸ್ತೇನೆ ಅಂತಾ ಹೇಳಿ ಕರಕೊಂಡು ಹೋಗಿ ಹೊಡದು ಬಂಧನದೊಳಗೆ ಇಟ್ಟು ಬಾಧಾ ತಡಿಯದೆ ನನ್ನ ತಾಯಿ ಮನಿಗೆ ಓಡಿಬಂದ ಮೇಲೆ ಮೆ. ಮಾಮಲೇದಾರಸಾಹೇಬ ತಾಲೂಕ ಕೋಡ ಇವರಲ್ಲಿ ಮತಲಬಿಯಿಂದಾ ಫಿರ್ಯಾದ ಮಾಡಿದಿ ಅದರಲ್ಲಿ ನನ್ನ ಕರಕೊಂಡು ಹೋಗಿ ಚಲೋ ರೀತಿ ಬಾಳ್ವೆ ಮಾಡಿಕೊಂಡಿರತೇನೆ ಅಂತಾ ಹೇಳಿ ರಾಜೀ ಆಗಿ ಹೋದವನು ಇದೂ ವರಿಗೂ ಬರಲಿಲ್ಲ. ಮತ್ತು ನನ್ನ ತಾಯಿ ತಂದಿಗಳು ನನಗೆ ಕೊಟ್ಟಿದ್ದ ದಾಗೀನ ಸಹಾ ಮಾರಿಕೊಂಡು ತಿಂದಿ ನನ್ನ ಹೊಟ್ಟೀ ಬಟ್ಟೀ ಸರಿಯಾಗಿ ನೋಡಲಿಲ್ಲಾ ಇದೂ ವರಿಗೂ ನಾನು ಕೂಲೀ ವಗ್ಯೆರೆ ಮಾಡಿ ಹೊಟ್ಟೀ ಉಪಜೀವನದ ಬಗ್ಗೆ ಯೇನಿಕೇ ಸಾಲಾ ಸಹಾ ಮಾಡಿಕೊಂಡಿ ಈ ನೋಟೀಸು ಮುಟ್ಟಿದ ಮೂರು ದಿವಸಗಳೊಳಗೆ ಬಂದು ನನ್ನ ಬಾಬತ ದಾಗೀನ ವ ನನ್ನ ಹೊಟ್ಟೀ ಬಗ್ಗೆ ಆದ ಸಾಲಾ ಶೀರ್ಸಿ ಕರಕೊಂಡು ಹೋಗಬೇಕು. ಇದಕ್ಕೆ ತಪ್ಪಿದಲ್ಲಿ ನಿನ್ನ ಮೇಲೆ ಯೋಗ್ಯರೀತಿ ಕೆಲಸ ನಡಿಸುವದರಲ್ಲಿ ಬಂದೀತು ಮತ್ತು ಇದೇ ನನ್ನ ನಿನ್ನ ಬಿಡುಗಡೇ ಮಾಡಿಕೊಂಡ ಸೋಡಚೀಟಿ ಅಂತಾ ತಿಳಿಯತಕ್ಕದ್ದು ಮುಂದೆ ನನ್ನ ಮೇಲೆ ನಿನ್ನ ಯಾವ ಅಧಿಕಾರವೂ ಉಳಿಯಲಿಕ್ಕಿಲ್ಲ ನನ್ನ ಮೇಲೆ ದಾಂಡಗ್ಯಾ ವಗ್ಯೆರೇ ಮಾಡಿದಲ್ಲಿ ರೀತಿ ಪ್ರಕಾರ ಫಿರ್ಯಾದ ಮಾಡುವದರಲ್ಲಿ ಬಂದೀತು ಈ ನೋಟೀಸಿನ ಖರ್ಚು ನಿನ್ನ ಮೇಲೆ ಅದೆ ತಿಳಿಯೋದು ತಾರೀಖು ೧೭-೫-೧೯೩೭ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಕೆನ್ನವ್ವಾ ಕೋಂ ಭೀಮಾ ತಳವಾರ ಸಾ. ಚಿಕ್ಕಯರಗಟಿ ಹಾಲೀವಸ್ತಿ ಹಿರೇಕೆರೂರ ಈಕಿ ಮಾಡಿದ್ದು ಅದೆ.

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋಳಿ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ ".ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ರಾಜಕಂಡರೆ ಊರಲ್ಲಿ ಎಲ್ಲ ತರದ ಚಹಾ ನಾಲತಿ ಕಡೆಗೆ ಪಸಾರವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ತಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟರು—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಪಿಕಾರೆ,

ವಾಚ ರಿಪೇರರ ವ ಡೀಲರ ಬೆಂಗೇರಿಗಲ್ಲಿ, ಹುಬ್ಬಳ್ಳಿ,

ತ್ವರೆ ಮಾಡಿರಿ. **ಮಾರಿಕಾ ಬೇನಿಗೆ** ಅಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಸಪ್ತಾಹ ... ...

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ... ..., ಜಿ. ...

ನೋಟೀಸು

—೦—

ಕೆಳಗೆ ಸಹೀ ಮಾಡಿದವನ ಕಡಿಂದ ಯಾವತ್ತು ಜನರಿಗೆ ವ ಈಶ್ವರಪ್ಪಾ ಶಿವಲಿಂಗಪ್ಪಾ ಪೂರಬದ ವ ಕಲ್ಲಪ್ಪಾ ರಾಮಪ್ಪಾ ಧಾರವಾಡ ಸಾ|| ಭೈರಿದೇವರಕೊಪ್ಪ ಇವರಿಗೆ ತಿಳಿಸುವದೇನಂದರೆ–

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಮ್ಹೊಜೆ ಹಿರೇದೇವರಕೊಪ್ಪದಲ್ಲಿರುವ ಸರಕಾರೀ ಜಮೀನು ರಿ|| ಸ| ನಂಬರ ೭೯ ಎಕರೆ ೧೭ ಗುಂಟೆ ೨೫ ತರಮು ರೂಪಾಯಿ ೪೫ ಇದು ಕೃಷ್ಣಾಜಿ ಶ್ರೀನಿವಾಸ ಮಾಳಾಪೂರ ಈತನ ಮಾಲಕೀದು ಇದ್ದು ಸದರಿಯವನು ಸದರೀ ಜಮೀನು ಚನ್ನಪ್ಪಗೌಡಾ ಪಾಟೀಲ ಸಾ| ಉಣಕಲ್ಲ ಈತಗೆ ತೋಂವತ್ತಿ ಬರಕೊಟ್ಟದ್ದಲ್ಲದೆ, ನನ್ನ ಹೆಸರಿಲೆ ತೋಂವತ್ತಿ ಬರಕೊಟ್ಟು ಮೂರು ಸಾವಿರ ರೂಪಾಯಿ ಸಾಲಾ ತೆಗೊಂಡಿರತಾನೆ. ಈ ಎರಡೂ ಸಾಲದ ಬೋಜಾದ ರಕಮಿಗೆ ಈಗ ಸದರೀ ಜಮೀನಿಯು ಕಿಮ್ಮತ್ತು ಕಮಿ ಆಗುವಂತೆ ಕಂಡು ಬರುತ್ತದೆ ಸದರ ಕೃಷ್ಣಾಜಿ ಶ್ರೀನಿವಾಸ ಮಾಳಾಪೂರ ಈತನು ಫೋತಿ ಆಗಿದ್ದು ಆತನ ಹೆಂಡತಿ ಯಂಕೂಬಾಯಿ ಕೋಂ ಕೃಷ್ಣಾಜಿ ಮಾಳಾಪೂರ ಈಕೆಯು ನನ್ನ ಲುಕಸಾನ ಮಾಡುವ ಇರಾದೆಯಿಂದ ನನ್ನ ವಿರುದ್ಧ ಜಹರ ಮಾತು ಕೇಳಿ, ಸದರೀ ಜಮೀನು ಏಂಡನೆಯವರಿಗೆ ಆಗಾವು ಲಾವಣಿ ವಗ್ಯೆರೆ ಹಾಕುವ ಸಂಭವ ಕಂಡುಬರುತ್ತದೆ ನನ್ನ ಹಣದ ದೆಸೆಯಿಂದ ಸದರೀ ಜಮೀನಿಯ ಮೇಲೆ ನಾನು ಕೋರ್ಟ ಮುಖಾಂತರ ಇಲಾಜ ಮಾಡತಕ್ಕವನಿದ್ದೇನೆ ಕಾರಣ ಸದರೀ ಜಮೀನು ಯಾರೂ ಆಗಾವು ಲಾವಣಿ ವಗ್ಯೆರೆ ಹಿಡಿಯಬಾರದು ಹಿಡಿದರೆ ಆ ಸಂಬಂಧಿ ಆಗುವ ಲುಕಸಾನಕ್ಕೆ ನಾವು ಜವಾಬದಾರರಲ್ಲ ಅಂತಾ ಜಾಹೀರ ಮಾಡಿದ ನೋಟೀಸು ತಾ| ೨೦-೫-೩೭ ನೇ ಇಸ್ವಿ

ಸಹಿ ಇಂಗ್ರೇಜಿ– ಪಿ ಆರ್. ವಿಜಾಪೂರ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶನಿವಾರ ತಾರೀಖು ೩೧ ನೇ ಮೇ ೧೯೩೦ | ಸಂಚಿಕೆ ೧೦೪

ಕಿರ್ಲೋಸ್ಕರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರೆಕಿದೆ ಪೆಟ್ಟಿನ ಸಂಗತಿ ಬಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ವಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒನ್ನೆರಡು ಆಣೆಯಂತಿರುತ್ತದೆ.

ಎ. ರಾ. ಶೆಟ್ಟಿ
ಮಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ,

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿ ಕಾಯ್ದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಆರು ಲಕ್ಷದ ಮೇಲುಂಟು. ಬ್ಯಾಂಕು ಮಾಡಬೇಕಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾರ್ಯಮಾಡುತ್ತ ಬೇರೆ ತರದ [illegible]ಗಳಿಗೆ ಹೆಚ್ಚಾಗಿ ಬಡ್ಡಿ ಕೊಡಿಸುವದು.

[illegible] ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆ ಕೇಳಬೇಕು.

ಎಂ. ನರಸಪ್ಪ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ

ಕಾಲರಾ (ವಾಂತಿ ಭೇದಿ) ದ ಮೇಲೆ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹ ಸ್ವಾನುಭವದಿಂದ ಗುಣ ಹೊಂದುತ್ತಿರುವರು. ಇಂಥ ಅಮೋಘ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೩೨ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ. ಪತ್ತಾ:- ಮ್ಯಾ. ಆಯುರ್ವೇದ ಕಾರಖಾನಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಮಾಡಿ ಉಪಕರಿಸಬೇಕೆಂದು ವಿನಂತಿಸುವೆವು.

ಮ್ಯಾನೇಜರ ವಿಜಯ ಧಾರವಾಡ

ಕೃಷ್ಣ ಪ್ರೆಸ್ ... [illegible]

ವಿಜಯ.

ಧಾರವಾಡ ತಾ- ೨೧-೫-೨೭ ನೇ ಇಸ್ವಿ

ಉತ್ತರಾದಿ ಮಠವೂ ಪರದೇಶಗಮನವೂ.

ಶ್ರೀಮದುತ್ತರಾದಿ ಮಠದ ಶ್ರೀಪಾದಂಗಳವರು ಧಾರವಾಡಕ್ಕೆ ಬರುವ ಮುಂಚಿತವಾಗಿ ವಿಲಾಯತಿಯವರ ಸಂಸರ್ಗವೆಂದು ಎದ್ದ ಗ್ರಾಮಣ್ಯವನ್ನು ತೀರಿಸಿಕೊಂಡು, ಶಿಷ್ಯ ಮಂಡಲದಲ್ಲಿ ಯಾವದೊಂದು ಮನಃಕ್ಲೇಶವಿಲ್ಲದಂತೆ ಆಗಮಿಸಿದರು. ಮರು ದಿವಸವೇ ವಿಲಾಯತಿಯವರ ಸಂಸರ್ಗ ಹೊಂದಿದವರ ಮನೆಯಲ್ಲಿ ಭಿಕ್ಷೆಯಾಯಿತು. ಈ ಸಂಗತಿಯು ಸಂಭವಿಸಿದ ಮೂರನೆಯ ದಿವಸವೇ ಒಬ್ಬ ಗೃಹಸ್ಥರ ಮನೆಯಲ್ಲಿ ಭೋಜನ ಸಮಾರಂಭವಾಯಿತು. ಅಂದು ತಟ್ಟಿಯ ಆಚಾರ್ಯರೂ ದೊಡ್ಡ ದೊಡ್ಡ ಗೃಹಸ್ಥರೂ ವಿಲಾಯತಿಯ ನಿಕ್ಕಸಂಸರ್ಗವಿದ್ದಂಥವರ ಕೂಡ ಭೋಜನ ಮಾಡಿದರು. ಊಟಕ್ಕೆ ಬಂದವರು ನೂರಕ್ಕಿಂತ ಹೆಚ್ಚು ಜನರು. ಇವರೆಲ್ಲರೂ ಒಂದೆಡೆಯಲ್ಲಿ ಅಥವಾ ಸಂಪ್ರದಾಯದಂತೆ ಒಂದೇ ವೇಳೆಗೆ ಕೂತು ಊಟ ಮಾಡಲಿಲ್ಲೆಂಬುದು ನಿಜ. ಅಡಿಗೆಯೊಂದೇ! ಉಪ್ಪೇರೆಯೊಂದೇ! ಎಲ್ಲರೂ ಭೇದಬುದ್ಧಿಯಿಲ್ಲದೆ ಪ್ರೀತಿಯಿಂದ ಸ್ಥಳಾಭಾವದ ಮೂಲಕ ಬೇರೆ ಬೇರೆ ಸ್ಥಳಗಳಲ್ಲಿ ಕೂತು ಉಂಡದ್ದು ಮಾತ್ರ ನಿಜ.

ಊರೊಳಗೆ ಅನೇಕ ಸ್ಥಳಗಳಲ್ಲಿ ಮುಂಜಿ ಮದುವೆಗಳು ನಡೆದಿವೆ. ಲೌಕಿಕ ದೃಷ್ಟಿಯಿಂದ ಮೇಜವಾನಿಗಳಾಗುತ್ತಿರುವವು. ಹಗಲು ಮಠದಲ್ಲಿ ಶಿಷ್ಯರಂತೆ ನಟಿಸುವಂಥವರು ರಾತ್ರಿಯಲ್ಲಿ ಇಂಥ ಮೇಜವಾನಿಗಳಿಗೆ ಹೋಗುವರು. ಧಾರವಾಡವು ಆಂಗ್ಲಭಾಷೆಯ ವಿದ್ಯಾಪೀಠವಾಗಿರುವದರಿಂದ, ವಿಲಾಯತಿಯ ಪ್ರತ್ಯಕ್ಷ ಸಂಪರ್ಕವಾದಂಥ ಕೆಲವು ಬ್ರಾಹ್ಮಣರಿದ್ದಾರೆ. ಅವರು ಮಠದ ಸಾಂಪ್ರದಾಯದ ಪ್ರಕಾರ ಬಹಿಷ್ಕೃತರಾದರೂ ಸಮಾಜ ದೃಷ್ಟಿಯಿಂದ ತ್ಯಾಜ್ಯರಾಗಿರುವದಿಲ್ಲ. ಇವರು ಬಹಾತೇಕವಾಗಿ ಆಮಂತ್ರಣ ಹೊಂದುವರು. ಇವರ ಹಾಗು ಇವರಂತೆ ವಿಲಾಯತಿಗೆ ಹೋಗಿ ಬಂದಂಥವರ ಮನೆತನದ ಸ್ತ್ರೀ ಪುರುಷರ ಕೂಡ, ದೇಶಸ್ಥ ವೈಷ್ಣವ ಸ್ತ್ರೀ ಪುರುಷರಿಗೆ ಸಂಬಂಧ ಲಾಭ ದೊರೆಯುತ್ತಿರುವದು. ಇದನ್ನು ಬಿಡಿಲ್ಕೊಂದು ತರಹವಾಗಿ ಅಲ್ಲಗಳೆಯುವದೆಂದರೆ- ಶ್ರೀಗಳವರನ್ನು ಠಕ್ಕಿಸುವಂತಾಗುತ್ತದೆ.

ಇಲ್ಲಿಯ ಒಬ್ಬ ವಕೀಲರಾದ ಶ್ರೀ ಸಿರ್ಸಿಕರರ ಮನೆಯಲ್ಲಿ ಉಪನಯನವಾಯಿತು. ಈ ಸಮಾರಂಭದ ದೆಸೆಯಿಂದಾದ ಉಪನಯನದ ಕಾಲಕ್ಕಾದ ಮೇಜವಾನಿಗೆ ಹೋದ ಗೃಹಸ್ಥರಿಗೆ ವಿಲಾಯತಿಗೆ ಹೋಗಿ ಬಂದವರ ಕೂಡ ಭೋಜನ ಮಾಡುವ ಪ್ರತ್ಯಕ್ಷ ಯೋಗ ಬಂತು. ಆದರೆ ಅವರ ಮೈಲಿಗೆಯನ್ನು ಶಿಷ್ಟರೆಂಬವರು ಮಾಡುವ ರೀತಿಯನ್ನು ನೋಡಿ, ನಮಗೆ ಆಶ್ಚರ್ಯವೆನಿಸಿದೆ. ನಾವು ಬೇರೆ ಕೋಣೆಯಲ್ಲಿ ಕೂತಿದ್ದೆವೆಂದು ಶ್ರೀ ಆಲೂರ ವೆಂಕಟರಾಯರು ಹೇಳುತ್ತಾರೆ. ಈ ಪ್ರಕಾರ ಹೇಳಿಕೊಳ್ಳುವದು ಪುಕ್ಕಟನವಾಗುತ್ತದೆ. ಮನೋಧೈರ್ಯವನ್ನೆಷ್ಟೂ ತೋರಿಸುವದಿಲ್ಲ. ಮೆಸರ್ಸ ರಾಮಬ್ರಹ್ಮ ಕುಲಕರ್ಣಿ ಮತ್ತು ಧಾರವಾಡಕರರು ಈ ಊರಲ್ಲಿ ಊಟ ಮಾಡದಂಥ ಗೃಹಸ್ಥರ ಮನೆಗಳೇ ಇಲ್ಲೆಂದರೂ ಸಾಗುವದು. ಅಂದ ಬಳಿಕ ಈ ಮಾತನ್ನು ಎಷ್ಟೆಂದು ಮುಚ್ಚಿಡುವದು? ಆಮು. ಸಿ. ಎಸ್. ಬೇವೂರರಿಗೂ ಎಲ್. ಸಿ. ಈ ರಾಮರಾಯರಿಗೂ, ಧಾರವಾಡಕರ ವಾಮನರಾಯರಿಗೂ ಎಷ್ಟು ಯುವಕರ ಆಂತರದಿಂದ ಅನ್ಯೋದಕ ವ್ಯವಹಾರ ನಡಿಯತೆಂಬ ಪ್ರಶ್ನೆ ಮಾಡಬೇಕೆಂಬ ಪ್ರಶ್ನವನ್ನು ಯಾರಾದರೂ ಕೇಳಿದ ಸಾಕು. ಶಾಂತಿಪಾಠ ಹಾಕಿದವರು ನಿಜ ಸಂಗತಿಯನ್ನೇ ಹೇಳುವರು. ಶ್ರೀ ಧಾರವಾಡಕರರ ಸಂಪರ್ಕವೆಂದು ಶ್ರೀಗಳವರು ಒಬ್ಬರಿಗೆ ಪುನಃ ಮುದ್ರೆ ಹಾಕಿ, ಪಂಚಗವ್ಯ ಪ್ರಾಶನ ಮಾಡಿಸಿದರು. ವಾಸ್ತವಿಕವಾಗಿ ನೋಡಿದರೆ- ಶ್ರೀಗಳವರು ದಿನಾಲು ನೂರಾರು ಜನರಿಗೆ ಮುದ್ರೆ ಹಾಕಿ, ಪಂಚಗವ್ಯದಿಂದ ಶುದ್ಧ ಮಾಡಿಕೊಳ್ಳಬೇಕಾಗುತ್ತದೆ.

ಡಾಕ್ಟರ ತ್ರಯರಾದ ಹರ್ಡೀಕರ, ನಾಡಿಗೇರ ಮತ್ತು ಕೊಳಟಸೂರರು ಕರ್ನಾಟಕ ಪ್ರಾಂತದಲ್ಲಿ ಬೇಕಾದಂಥ ಅವಶ್ಯಕ ಜನರು. ಇವರಂತೆ ಮೆಸರ್ಸ ಕುಲಕರ್ಣಿ ಮತ್ತು ಧಾರವಾಡಕರರಾಗಿದ್ದಾರೆ. ಇವರು ಹೋಗಲಿಲ್ಲ ಮೇಜವಾನಿಗಳಾಗುವವು. ಹತ್ತೆಂಟು ಜನರು ಪ್ರಸಿದ್ಧ ಗೃಹಸ್ಥರು ಇವರ ಕೂಡ ಭೋಜನ ಮಾಡುವರು. ಹೀಗಾಗಿ ವಿಲಾಯತಿಯವರ ಕೂಡ ಊಟ ಮಾಡದಂಥ ಗೃಹಸ್ಥರ ಮನೆಯು ಒಂದೂ ದೊರೆಯಲಾರದು. ಪ್ರೊಫೇಸರ ಭಾಟೆಯವರು ಮರಾಠಾ ಸ್ತ್ರೀಯ ಕೂಡ ಲಗ್ನ ಮಾಡಿಕೊಂಡವರು. ಅವರು ಇಲ್ಲಿಗೆ ಬಂದಾಗ ನ್ಯೂ ಇಂಗ್ಲಿಷ ಸ್ಕೂಲಿನಲ್ಲಿ ನೂರಾರು ಜನರು ಇವರ ಕೂಡ ಭೋಜನ ಮಾಡಿದರು. ಇವೆಲ್ಲ ಪ್ರತ್ಯಕ್ಷ ಪ್ರಮಾಣಗಳಿರುತ್ತವೆ. ಇಂಥ ಕೃತ್ಯಗಳು ಅಜ್ಞಾತದಿಂದಾಯಿತೆಂದು ಹೇಳುವವರಲ್ಲಿ ನಂಬಿಗೆ ಇಡುವಂಥವರಲ್ಲಿ ಎಷ್ಟರ ಮಟ್ಟಿಗೆ ವಿಶ್ವಾಸವಿಡಬೇಕೆಂಬದನ್ನು ಶ್ರೀಗಳವರೇ ಹೇಳಲಿ;

ಶ್ರೀಗಳವರು ಗದಗಿನಲ್ಲಿದ್ದಾಗ ಪ್ರೌಢ ವಿವಾಹದ ಚರ್ಚೆಯಾಯಿತು ಒಂದು ಗದಗವೇಕೆ? ಪ್ರತಿಯೊಂದು ಊರ ಪ್ರತಿಯೊಂದು ಮನೆಯಲ್ಲಿ ಪ್ರೌಢ ಕನ್ಯೆಗಳುಂಟೆಂದು ಆಗ್ಗೇ ನಾವು ಬರೆದಿರುತ್ತೇವೆ. ಅಂಥ ಪ್ರೌಢ ಕನ್ಯೆಯ ವಿವಾಹವು ವಿಲಾಯತಿಗೆ ಹೋಗಿ ಬಂದಂಥ ಶ್ರೀ ಚಂದ್ರಚೂಡರ ಕೂಡ ಹುಬ್ಬಳ್ಳಿಯಲ್ಲಾಯಿತು. ಮದುವೆಗೆ ಯಾರಾರು ಹೋಗಿದ್ದರು? ಊಟಕ್ಕೆ ಯಾರಾರು ಹೋಗಿದ್ದರೆಂದು ಶ್ರೀಗಳವರು ಅಲ್ಲಿಯ ಮಠಾಧಿಕಾರಿಯಿಂದ ಹೆಸರು ತರಿಸಿಕೊಂಡರೆ- ಹುಬ್ಬಳ್ಳಿಯಲ್ಲಿರುವ ಪ್ರಮುಖ ವೈಷ್ಣವರೆಲ್ಲರೂ ವಿಲಾಯತಿಯ ಸಂಪರ್ಕ ಹೊಂದಿದರೆಂದು ತಿಳಿದುಬರುವದು. ಈ ಸಂಬಂಧ ಹೊಂದಿಸಿದವರು ಸಾಮಾನ್ಯ ಗೃಹಸ್ಥರಲ್ಲ. ಶ್ರೀಗಳವರ ಪೀಠ ಅಲಂಕರಿಸಿದಂಥ ಶ್ರೀ ಸತ್ಯಪರಾಕ್ರಮ ಸ್ವಾಮಿಗಳ ವಂಶಸ್ಥರಾದ ವಾಯಿಯ ಮನೆತನದವರು. ಈ ಬಗೆಯಾಗಿ ಪ್ರೌಢ ವಿವಾಹ ಮತ್ತು ವಿಲಾಯತಿಯ ಪ್ರತ್ಯಕ್ಷ ಸಂಬಂಧವು ಗುರುಪರಂಪರೆಯ ಮನೆತನಕ್ಕೇ ಒಂದು ಹತ್ತಿರುತ್ತದೆ. ಶಾಸ್ತ್ರಕ್ಕಿಂತಲೂ ಬಲವಾಗಿ ನಡಿಯುತ್ತಿರುವ ರೂಢಿಯ ವಿಚಾರದಲ್ಲಿ ಶ್ರೀಗಳವರಿಗೆ ಒಂದೇ ಉಚಿತ ಮಾರ್ಗ ಉಳಿದಿರುತ್ತದೆ. ಸಾರ್ಥಕ ಸ್ವಾಮಿಗಳಂತೆ ಈ ವಿಷಯವನ್ನು ತಮ್ಮೆದುರಿಗೆ ತರಬಾರದೆಂದು ಜಗಳ ಹಚ್ಚಿ, ಆನಂದಪಡಬೇಕೆಂಬ ಉಲಕೋಚಿತನ ಮಾಡುವ ಅಲ್ಲಲ್ಲಿಯ ಮಠಾಧಿಕಾರಿಗಳಿಗೆ ಕಟ್ಟಪ್ಪಣೆ ಮಾಡುವದೇ ಈ ಮಾರ್ಗವು.

ನಾಲ್ಕು ಜಯಂತಿಗಳು-

ವೈಶಾಖ ಶುದ್ಧವು ಜಯಂತಿಯ ಪಕ್ಷವೆಂದು ಒಬ್ಬ ಲೇಖಕನು ಹೇಳುತ್ತಾನೆ. ೧ ಪರಶುರಾಮ, ೨ ನೃಸಿಂಹ, ೩ ಬುದ್ಧ; ೪ ಶ್ರೀ ಶಿವಾಜಿ. ಈ ಪ್ರಕಾರ ನಾಲ್ವರು ಈ ಹದಿನೈದು ದಿವಸಗಳಲ್ಲಿ ಜನ್ಮವೆತ್ತಿ, ಪ್ರಜರನ್ನು ಪರದಾಸ್ಯದಿಂದ ಮುಕ್ತಮಾಡಿದ್ದಾರೆ ಆದ್ದರಿಂದ ಈ ಪಕ್ಷಕ್ಕೆ ಸ್ವಾತಂತ್ರ್ಯಪಕ್ಷವೆನ್ನಬೇಕೆಂದು ಆ ಲೇಖಕನು ಅನ್ನುತ್ತಾನೆ.

ಸಿಂಧದ ಹಿಂದೂ ಜನರ ದೂರು-

ಮುಸಲಮಾನರ ಕೋರಿಕೆಯ ಪ್ರಕಾರ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ಸಿಂಧು ದೇಶವನ್ನು ಸ್ವತಂತ್ರ ಪ್ರಾಂತ ಮಾಡಬೇಕೆಂಬದಾಗಿ

ಮಾಡಿದ ಠರಾವಿನ ವಿಷಯವಾಗಿ ಈ ದೇಶದ ಹಿಂದೂ ಮುಖಂಡರಾದ ಶ್ರೀ. ಜಯರಾಮದಾಸ, ಚವೃಥರಾಮ, ಘನಶ್ಯಾಮ ಮತ್ತು ಸ್ವಾಮಿ ಕೃಷ್ಣಾನಂದರು ತಮ್ಮ ನಿಷೇಧವನ್ನು ವ್ಯಕ್ತ ಪಡಿಸಿದ ತಾರನ್ನು ಆಲ ಇಂಡಿಯಾ ಕಾಂಗ್ರೆಸ ಕಮಿಟಿಗೆ ಕಳಿಸಿದ್ದಾರೆ. ಈ ದೇಶದ ಜನ ಸಂಖ್ಯೆಯು ೩೦ ಲಕ್ಷವಿದ್ದು, ಇದರಲ್ಲಿ ಏಳೇ ಲಕ್ಷ ಜನರು ಹಿಂದುಗಳಾಗಿದ್ದಾರೆ. ಸಿಂಧವು ಸ್ವತಂತ್ರವಾದರೆ- ಹ ವಾಗೆ ವ್ಯಕ್ತಿ ಸ್ವಾತಂತ್ರ್ಯ, ಅಧಿಕಾರ ಸ್ವಾತಂತ್ರ್ಯ ದೊರೆಯಲಾರದೆಂದು ಇವರ ಮತವಾಗಿದೆ.

ಆನಂದಾನಂದದ ತಾರು-

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಹಿಂದೂ ಮುಸಲಮಾನ ಐಕ್ಯದ ಠರಾವು ಪಾಸಾದ ಕೂಡಲೆ, ಡಾಕ್ಟರ ಅನಸಾರಿಯವರು ಪ್ರಮುಖ ಮುಸಲಮಾನರಿಗೆ ತಾರು ಮಾಡಿ, ನಿಮ್ಮಲ್ಲಿಯ ಮುಸಲಮಾನ ಸಭೆಗಳನ್ನು ಕೂಡಿಸಿ, ಈ ಠರಾವನ್ನು ಒಪ್ಪಿದಂತೆ ಠರಾವು ಮಾಡಿರೆಂದು ತಿಳಿಸಿದ್ದಾರೆ. ಪ್ರಮುಖರಲ್ಲಿ ಮಿ. ಜಿನ್ನಾ, ಅಬ್ದುಲ ಕಲಮ ಆಜಾದ, ಸರ ಅಬ್ದುಲ ರಹಿಮಾನ, ಡಾಕ್ಟರ ಮಹಮೂದ, ಮುಜರುಲ ಹಕ್ಕ, ಸರ ಅಲ್ಲಿ ಇಮಾಮ, ಹಸನ ಇಮಾಮ, ಸಯ್ಯದ ಮುರ್ತುಜಾ, ಸರ ಜುಲಫಿಕಾರ ಅಲ್ಲಿಖಾನ, ಸ ಹೇಬಜಾದಾ ಸರ ಅಬ್ದುಲ ಕ್ಯಾಯುಮ ಮೊದಲಾದವರಾಗಿದ್ದಾರೆ.

ಪ್ರೀತಿಭೋಜನ-

ಒಂಬಡಿಕೆಯ ಸತೋಷಾರ್ಥವಾಗಿ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ವತಿಯಿಂದ ಪ್ರೀತಿ ಭೋಜನವಾಯಿತು. ಹಿಂದೂ, ಮುಸಲಮಾನ ಕ್ರಿಶ್ಚನ ಪಾರ್ಸಿ ಮೊದಲಾದ ೫೦೦ ಜನರು ಪ್ರೀತಿ ಭೋಜನ ಮಾಡಿದರು. ಅಡಿಗೆಯು ಹಿಂದೂ ಪದ್ಧತಿಯಂತೆ ಇತ್ತು. ಹಿಂದೂ ಪದ್ಧತಿಯಂತೆ ನೆಲದ ಮೇಲೆ ಕೂತು ಪತ್ರಾವಳಿಯಲ್ಲಿ ಉಂಡರು. ಪ್ರಸಿದ್ಧ ಧನಿಕ ಗೃಹಸ್ಥರಾದ ಮಿ. ಭಾವನಾಜಾ ಸಾಹೇಬರು ನೀರು ಕೇಳುತ್ತಿದ್ದರು. ಮುಸಲಮಾನರು ತಮ್ಮ ಗೀತೆಗಳನ್ನು ಹಿಂದೂ ಜನರು ತಮ್ಮ ಶ್ಲೋಕಗಳನ್ನೂ ಹೇಳಿ, ರಾಮ- ರಹಿಮ ಭೇದವಿಲ್ಲೆಂದು ತೋರಿಸಿದರು. ಸ್ವಾಗತ ಕಮಿಟಿಯ ಕೂಲಿಕಾರರ ವತಿಯಿಂದ ಮೆಂಬರರಾಗಿರುವ ಮಿ. ಸ್ಟ್ರೋಟಸಾಹೇಬರೂ ಭೋಜನಕ್ಕೆ ಬಂದಿದ್ದರು. ಇವರು ಇಂಗ್ಲಿಷ ಪದ್ಧತಿಯಂತೆ ಹಾಡಿ ಅತಿಥಿ ಅಭ್ಯಾಗತರನ್ನು ಹರ್ಷಪಡಿಸಿದರು.

ಅಭಿನಂದನ-

ಕಾಂಗ್ರೆಸದ ಅಧ್ಯಕ್ಷರಾದ ಶ್ರೀ. ಶ್ರೀ ಶ್ರೀನಿವಾಸ ಅಯ್ಯಂಗಾರರು ಮದ್ರಾಸದಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಐಕ್ಯ ಮಾಡಿ, ಸ್ವರಾಜ್ಯ ಪಕ್ಷಕ್ಕೆ ಯಶ ತಂದರು. ಅದೇ ಪ್ರಕಾರ ಹಿಂದೂ ಮುಸಲಮಾನ ಐಕ್ಯ ಮಾಡಿ, ಸ್ವರಾಜ್ಯವನ್ನು ತೀರ ಸನಿಯ ಮಾಡಿದರೆಂದು ಪ್ರತಿಯೊಬ್ಬರು ಅಯ್ಯಂಗಾರರ ಪ್ರಶಂಸೆ ಮಾಡುತ್ತಿದ್ದಾರೆ.

ಕಮಿಟಿಯಲ್ಲಾದ ಬೇರೆ ಠರಾವುಗಳು-

ಚೀನರು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವದಕ್ಕೆ ಹಿಂದುಸ್ಥಾನದ ವತಿಯಿಂದ ಸಹಾನುಭೂತಿಯ ಠರಾವು ಮಾಡಿದರು. ಆ ದೇಶದ ಯುದ್ಧದಲ್ಲಿ ಗಾಯ ಹೊಂದುವಂಥವರ ಆರೈಕೆಗಾಗಿ ಡಾಕ್ಟರ ಆರ್ಡಿನರ ನೇತೃತ್ವದಲ್ಲಿ ವತಿಯಿಂದ ಒಂದು ಅಂಬ್ಯುಲನ್ಸ ಕಳಿಸುವದನ್ನು ಗೊತ್ತು ಮಾಡಿದರು. ವಿಲಾಯತಿಯಲ್ಲಿ ಮಂತ್ರಿಗಳು ಕೂಲಿಕಾರರ ಸಂಘಗಳ ಸಂಪನ್ನ ಮುರಿಯುವದಕ್ಕಾಗಿ ಮಾಡುತ್ತಿರುವ ಕಾಯದೆಯನ್ನು ನಿಷೇಧಿಸಿ, ಕೂಲಿಕಾರರಿಗೆ ಸಹಾನುಭೂತಿ ತೋರಿಸಿದರು. ವಿಲಾಯತಿಯ ಮಾದರಿಗನುಸರಿಸಿ, ಈ ದೇಶದಲ್ಲಿ ಪಟ್ಟಣ ಹಾಗು ಗ್ರಾಮಗಳಲ್ಲಿ ಕೂಲಿಕಾರರ ಸಂಘಗಳನ್ನು ಸ್ಥಾಪಿಸಬೇಕೆಂಬ ಠರಾವು ಮಾಡಿದರು. ನಾಗಪೂರದ ಕಾಯಿದೆ ಭಂಗದ ನಿಜಸ್ವರೂಪ ತಿಳಿಕೊಂಡು ಆ ಬಗ್ಗೆ ರಿಪೋರ್ಟ ಮಾಡುವದಕ್ಕಾಗಿ ಕಾಂಗ್ರೆಸ ವರ್ಕಿಂಗ ಕಮಿಟಿಯ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಕಳಿಸಬೇಕೆಂದು ಗೊತ್ತುಪಡಿಸಿದರು.

ಶ್ರೀ ಬೋಸರ ಬಿಡುಗಡೆಯ ಮಹತ್ವದ ಸುದ್ದಿಗಳು.

—o—

ಶ್ರೀ ಬೋಸರಿಗೆ ಬಂಧಮುಕ್ತತೆಯ ಹುಕುಮು ಮಾಡಿ ಮನೆಗೆ ಕಳಿಸುವಾಗ ಶ್ರೀಯುತರು ಸನ್ಯಾಸಿಯಂತೆ ದಾಡಿಯು ಬಿಟ್ಟಿಯುಟಿದ್ದರು. ತಲೆಯ ಮೇಲೆ ಗಾಂಧಿ ಟೊಪ್ಪಿಗೆ ಹಾಕಿದ್ದರು.

ಬೋಸರ ಪ್ರಕೃತಿಗೆ ಸ್ವಲ್ಪ ಗುಣವೆನಿಸಿದೆ ಆದರೂ ಇವರನ್ನು ಬೇರೆ ಕಡೆಗೆ ಕರಕೊಂಡು ಹೋಗುವದು ಜವಾಬದಾರಿಯ ಕೆಲಸವಾಗುತ್ತದೆಂದು ಡಾಕ್ಟರರ ಮತವಾಗಿದೆ.

ಬೋಸರ ಬಂಧಮುಕ್ತತೆಯು ದೊಡ್ಡ ಮನಸ್ಸಿನ ದೇಶಾಭಿಮಾನಿಯು ಕೀಳ ಮನಸ್ಸಿನ ಆ ರಕಾರದ ಮೇಲೆ ಜಯ ಸಂಪಾದಿಸಿದ್ದಾಗಿರುತ್ತದೆಂದು ಡಾಕ್ಟರ ಅನಸಾರಿಯವರು ಅಭಿಪ್ರಾಯ ಪಟ್ಟಿದ್ದಾರೆ

ಕೌನ್ಸಿಲ ಮತ್ತು ಅಸೆಂಬ್ಲಿಯು ನಿರ್ಬಲವಾದಾಗ ಶ್ರೀ. ಬೋಸರು ಗಂಡುಗಲಿಯಂತೆ ಸರಕಾರದ ಕೂಡ ಹೋರಾಡಿ ತಮ್ಮ ಮುಕ್ತತೆ ಮಾಡಿಕೊಂಡರೆಂದು ಶ್ರೀ. ಪಟ್ಟಾಭಿರಾಮಯ್ಯನವರು ಅಂದಿರುತ್ತಾರೆ.

ಇವರೊಬ್ಬರನ್ನು ಬಿಟ್ಟರೇನಾಯಿತು? ಬೆಂಗಾಳದ ಕಾಯದೆಯಲ್ಲಿ ಕೊಳೆಯುತ್ತಿರುವಂಥ ಎಲ್ಲ ಗೃಹಸ್ಥರನ್ನು ಬಿಟ್ಟರೇ ಸರಕಾರವು ತನ್ನ ಕರ್ತವ್ಯ ಮಾಡಿದಂತಾಯಿತೆಂದು ಸರ್ವಸಾಮಾನ್ಯವಾಗಿ ಬಂಗಾಲಿಗಳ ಮತವಾಗಿರುತ್ತದೆ.

ಬೋಸರು ಬಿಡುಗಡೆ ಹೊಂದಿದ ದಿವಸವೇ ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿಯ ಇವರ ಕೆಲಸದ ರಜೆಯು ತೀರಿತು. ಸರಕಾರವು ಇವರನ್ನು ಬೇಗನೆ ಮುಕ್ತ ಮಾಡಲಾರದೆಂದು ಮ್ಯುನಿಸಿಪಾಲಿಟಿಯವರು ಇವರ ಸ್ಥಳದಲ್ಲಿ ಬೇರೊಬ್ಬನನ್ನು ಎರಡು ವರ್ಷದ ಮಟ್ಟಿಗೆ ನೇಮಿಸಿಕೊಂಡಿದ್ದಾರೆ.

ಬೋಸರು ಕೌನ್ಸಿಲದಲ್ಲಿ ಬರುವದರಿಂದ ಸ್ವರಾಜ್ಯ ಪಕ್ಷಕ್ಕೆ ಬಲಬರುವದೆಂದೂ, ತಮಗೆ ಈ ಬಿಡುಗಡೆಯ ಬಗ್ಗೆ ಆನಂದವಾಗಿದೆಂದೂ ಸರ ಅಬ್ದುಲ ರಹಿಮಾನರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಸ್ವದೇಶಿಯರಾದಂಥ ಮನಮಂತ್ರಿಗಳು ಬುದ್ಧಿವಂತರನ್ನು ತುರಂಗದಲ್ಲಿ ದಬ್ಬಿ ಹಾಕಿರುವ ತನಕ ಬ್ರಿಟಿಶ ಮತ್ತು ಹಿಂದುಸ್ಥಾನದ ಐಕ್ಯವು ಸಹಕಾರದಿಂದ ನಡೆಯುವದು ಶಕ್ಯವಿಲ್ಲೆಂದು ಮಿ. ಬಿಪಿನಚಂದ್ರಪಾಲರು ಅನ್ನುತ್ತಾರೆ

ಒಕ್ಕಲಿಗರ ಗವರ್ನರಸಾಹೇಬರ ವಿಶ್ವವಿದ್ಯಾಲಯದ ಫಂಡನ್ನು ಕೂಡಿಸುವದಕ್ಕಾಗಿ ಒಬ್ಬ ವಕೀಲರು ನಾಟಕ ಕಂಪನಿ ತರೆದುಕೊಂಡು ಹೋಗುತ್ತಿದ್ದಾಗ, ದಾರಿಯಲ್ಲಿ ದರೋಡೆಗಾರರು ಇವರನ್ನು ತರಬಿ, ಗುಂಡು ಹಾಕಲು. ವಕೀಲರು ಅಲ್ಲೇ ಸತ್ತು ಬಿದ್ದರು. ಒಬ್ಬ ಹೆಣ್ಣು ಮಗಳು ಗುಂಡು ತಾಕಿ ಬಿದ್ದು, ಆಸ್ಪತ್ರಿಯಲ್ಲಿ ಸತ್ತಳು. ದರೋಡೆಗಾರರು ಇವರ ಹತ್ತಿರವಿದ್ದ ದ್ರವ್ಯ ತಕ್ಕೊಂಡು ಪಲಾಯನ ಹೇಳಿಸಿದರು. ಇವರನ್ನು ಹಿಡಕೊಟ್ಟವರಿಗೆ ಐನೂರು ರೂಪಾಯಿ ಇನಾಮು ಕೊಡುವಂತೆ ಪೋಲೀಸರು ಜಾಹೀರನಾಮೆ ಪ್ರಸಿದ್ಧ ಮಾಡಿದ್ದಾರೆ.

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—(०)—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ೬ ರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲ ಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು. ಹೆಚ್ಚು ಕಾಲದ ದರಕ್ಕೆ ದಯೆಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನಗಳನ್ನು ಮತ್ತೀತ ಇಟ್ಟುಕೊಳ್ಳಲ್ಪಡುವವು ಮತ್ತ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ್ ದೇಶಪಾಂಡೆ ಮತ್ತು ಆರ್ ಚಾರ್ಯ ಆಟ್ಟೆ

ಕಂಪನಿ ಮ್ಯಾನೇಜಿಂಗ ಏಜಂಟರು.

ಏಜಂಟ್ಸ

—— ——

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ ಲಾಗಾಯಿತ [illegible] ವಿವಿಧ ಅರಗಜ ಬಿಲ್ಲೆ, ಪನ್ನಿರು, ಭೃಂಗಾಮಲಕ ತೈಲ, ಬಕಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತಿ ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಆ್ಯಂಡ್ ಸನ

ಸುಗಂಧಾಧಿಕಾರಿ ಮೈಸೂರ

—— ——

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
	೬—೦—೦ ರೂ
	೩—೦—೫ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಭಿಕ್ಷೇಪ ಮಾಡತಕ್ಕ ಕೆಳಗಿನ ವಿಳಾಸಕ್ಕೆ

ವ್ಯವಸ್ಥಾಪಕ ವಿಜಯ ಧಾರವಾಡ.

—— ——

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ್ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋಟ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ [illegible] ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ [illegible] ಬಹುದು. [illegible] ನಾಲ್ಕು ಕಡೆಗೆ ಪಸಾರವಾಗುತ್ತದೆ. ಅದರಲ್ಲಿ ಇದು ಉತ್ತಮವಾಗುತ್ತದೆ. [illegible] ಈ ಪತ್ರಿಕೆ ಬರೆದು ವಿಚಾರಿಸತಕ್ಕದ್ದು. ಮತ್ತು ತಮ್ಮ ಆರ್ಡರ [illegible] ನ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ [illegible]

[ಸಿಗುವ ಪತ್ತೆ]

ಏಜಂಟ—

ಗಣಪತ ಭವಾನರಾವ [illegible] ಪೋಸ್ಟ ತಲಾವ ಧಾರವಾಡ

— ತ್ತು

ಜನಾರ್ದನ ರಾಮಚಂದ್ರ [illegible] ಪೇಕಾರೆ,

[illegible] ಬೆಂಗೇರಿ, ಹುಬ್ಬಳ್ಳಿ,

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ

೨—೩ ಗುಳಿಗೆ ಸೇವಿಸಿ ಒಂದು [illegible]

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ [illegible] ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. [illegible], [illegible] ಬೆಳಗಾವ

ಜಾಹೀರ ನೋಟೀಸು.

ಹೊಲ ಮನೆಗಳ ಲಿಲಾವು

[illegible] ಇದರ ಮೂಲಕ [illegible] ಶ್ರೀನಿವಾಸ [illegible] ರಾಮಚಂದ್ರ [illegible] ೧೧॥ [illegible] ಶ್ರೀ [illegible] ಗೋವಿಂದ [illegible] ಮನೆ, [illegible] ೧೦ ರೂಪಾಯಿ [illegible] ಸದರ ವ್ಯಕ್ತಿ ಸದರ ಗ್ರಾಮದ [illegible] ಹಾಜರ ಇರಬೇಕು. [illegible] ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ [illegible] ತಿಳಿಯುವದು. [illegible] ೧೯೩೭ [illegible]

G V DESHPANDE,
Dy. Nazir & Guardian of
Shrinivas & Ramachandra Aln [illegible]

ಈ ಪತ್ರವನ್ನು [illegible] ಧಾರವಾಡದಲ್ಲಿಯ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ — ವಿಜಯ — ಬಿಡಿ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ರವಿವಾರ ತಾರೀಖು ೩೩ ನೇ ನೊಂ ೧೯೨೭ ಸಂಚಿಕೆ ೧೦೨

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪೂನಾ ಪ್ರದರ್ಶನದಲ್ಲಿ ಈ ಆಮಾಲಿ ಗಾಣಕ್ಕೆ ಪದಕವು ದೊರೆಕಿದೆ ಹೆಚ್ಚಿನ ಸಂಗತಿ ಇನ್ನೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಇತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದಾವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರ್ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗ ಸಾ ಲಿ ಗೆ ಮೂ ರು ಆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇತ್ತು[illegible] ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳ ಕಡ್ಡದಾ[illegible] ಆಗುಯುಂತಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ್

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಹುಂಗಿಬಜಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ [illegible] ಸೊಸಾಯಟಿಯ. ಜಸ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ,

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ತೆಂಡಿಗೆಯು ಐದು ಲಕ್ಷದ ಮೇಲುಂಟು. ಚೆಕ [illegible] ದಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮಾಡುವರು. ಕಾಯಮ [illegible] ಠೇವು ದರವ [illegible] ಜಿಟಿಗಳಿಗೆ ಹೆಚ್ಚಾಗಿ ಬಡ್ಡಿ ಕೊಡುವರು.

[illegible] ಸಂಗತಿಗಳನ್ನು ಒಳಗೆ ಮಹೇ ಮಾಡಿದವ [illegible] ದ ತಿಳಕೊಳ್ಳಬೇಕು.

ಮ್ಯಾನೇಜರ ಬಿ. [illegible]

[illegible]

ಕಾಲರಾ ಪಿಲ್ಸ.

ಕಾಲರಾ (ಮಾಕರಿ) [illegible] ಗದ ಮೇಲೆ [illegible] ಷಧವು [illegible] ಗುಣಕಾರಿ ಇರುತ್ತದೆ. ೧೯೨೩ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ [illegible] ಉಪಯೋಗಿಸುತ್ತಿರುವರು ನಮ್ಮ ಸ್ವಾವಧಿ [illegible] ಗುಣ ಹೊಂದುತ್ತಿರುವರು [illegible] ಅನೇಕ ಔಷಧ ತರಿಸಿ ಗುಣ ಹೊಂದಿರಿ. [illegible] ಗುಳಿಗೆಗೆ ೧೪ ಆ. ೧೦೦ಕ್ಕೆ ಇದೂ [illegible] ಆಯುರ್ವೇದ ಔಷಧಿ ಕಾರಖಾನಾ ಕಿತ್ತೂರ [illegible] ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

—ooo—

ನೋ[illegible] ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುವು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೨ - ೫ - ೨೭ ನೇ ಇಸ್ವಿ

ಚೀನ ದೇಶಕ್ಕೆ ಹೋಗುವ ಹಿಂದೀ ಅಂಬ್ಯುಲನ್ಸ.

ಡಾಕ್ಟರ ಹರ್ಡೀಕರರ ಹಿಂದುಸ್ಥಾನ ಸೇವಾದಲದ ವಿದ್ಯಮಾನವಾಗಿ ಚೀನ ದೇಶಕ್ಕೆ ಕಳಿಸುವ ಅಂಬ್ಯುಲನ್ಸದ ಪೂರ್ವ ಸಿದ್ಧತೆಯು ಬಹಳ ಒತ್ತರದಿಂದ ಆಗಿರುತ್ತದೆ. ಅಂಬ್ಯುಲನ್ಸವೆಂದರೆ- ಯುದ್ಧದಲ್ಲಿ ಘಾಯ ಹೊಂದಿದಂಥವರ ಆರೈಕೆಗಾಗಿ ಹೋಗುವ ಡಾಕ್ಟರ, ಕಾಂಪೌಂಡರ ಮತ್ತು ಆಳುಗಳ ಗುಂಪು. ಇದು ಕೇವಲ ಭೂತದಯೆ ಮತ್ತು ಮಾನವ ಹಿತಕ್ಕಾಗಿರುತ್ತದೆ. ಎರಡು ದೇಶದವರು ಪರಸ್ಪರ ಸಾಮರ್ಥ್ಯ ತೋರಿಸುತ್ತಿದ್ದಾಗ ಎಂಥವರ ಪಕ್ಷದ ವಿವಾದಿಗಳೇ ಆದರೂ ಘಾಯ ಹೊಂದಿ ಬಿದ್ದಾಗ ಸ್ವಪಕ್ಷ ಪರಪಕ್ಷವೆಂಬ ಭೇದವೆಣಿಸದೆ ಅವರ ಸೇವೆ ಮಾಡುವದೇ ಅಂಬ್ಯುಲನ್ಸದ ಕರ್ತವ್ಯವು. ಹಿಂದುಸ್ಥಾನದ ದಂಡು ಚೀನ ದೇಶಿಯರ ಸ್ವಾತಂತ್ರ್ಯ ಹರಣ ಮಾಡಲಿಕ್ಕೆ ಹೋಗಬಾರದೆಂದು ಹೇಳುವ ರಾಜಕೀಯ ಮತವು ಆದರೆ ಅಂಬ್ಯುಲನ್ಸಕ್ಕೆ ಇಂಥ ಮತವೇನೂ ಇರುವದಿಲ್ಲ. ಇದು ಒಳ್ಳೇ ಉಚಿತವಾದದ್ದು. ಆದುದರಿಂದ ಈ ಅಂಬ್ಯುಲನ್ಸಕ್ಕೆ ಹಿಂದುಸ್ಥಾನ ಸರಕಾರದವರು ಸಮ್ಮತಿ ಕೊಡುವದು ಸಹಜವಾದದ್ದು. ಆ ಮೇರೆಗೆ ಸರಕಾರದವರು ಇಂಥ ಸಹಾಯ ಕಳಿಸಲು ಪೂರ್ಣ ಅನುಮೋದನ ಕೊಟ್ಟಿದ್ದಾರೆ

ಸಾಹೇಬ ಕತ್ರಿರಾಸಿ ಎಂಬ ಹೆಸರಿನ ಮುಸಲಮಾನ ಗೃಹಸ್ಥರು ತುರ್ಕಸ್ಥಾನಕ್ಕೆ ಅಂಬ್ಯುಲನ್ಸ ತೆಗೆದುಕೊಂಡು ಹೋಗಿದ್ದರು. ಚೀನಕ್ಕೆ ಹೋಗುವ ಅಂಬ್ಯುಲನ್ಸವೂ ಇವರ ಮಾರ್ಗದರ್ಶಕತ್ವದಿಯಲ್ಲಿಯೇ ಹೊರಡುವದು. ಐವರು ಡಾಕ್ಟರರು ಇಬ್ಬರು ಕಾಂಪೌಂಡರರು, ಎಂಟು ಜನ ಪರಿಚಾರಕರು ಅಂತೂ ೧೫ ಜನರನ್ನು ಆದಷ್ಟು ಬೇಗನೆ ಆ ದೇಶಕ್ಕೆ ಕಳಿಸುವರು. ಆದ್ದರಿಂದ ಅಲ್ಲಿಗೆ ಹೋಗಲಿಚ್ಛಿಸುವವರು ಡಾಕ್ಟರ ಹರ್ಡೀಕರ ಅಥವಾ ಸಾಹೇಬ ಕತ್ರಿರಾಸಿಯವರ ಕಡೆಗೆ ಅರ್ಜಿಯನ್ನು ಮಾಡತಕ್ಕದ್ದು. ಅರ್ಜಿಗಳ ವಿಚಾರಣೆ ಮಾಡಿ, ಯೋಗ್ಯ ಜನರನ್ನೇ ಆರಿಸುವದಕ್ಕಾಗಿ ಶ್ರೀ: ಗೋಸ್ವಾಮಿ, ಡಾಕ್ಟರ ಅನಸಾರಿ, ಡಾಕ್ಟರ ದೇಶಮುಖ, ದೇವಿ ಸರೋಜನಿ, ಮಿ. ತೇರಸಿ ಮತ್ತು ಡಾಕ್ಟರ. ಹರ್ಡೀಕರ ಇಷ್ಟು ಜನರದೊಂದು ಕಮಿಟಿ ನೇಮಿಸಿದ್ದಾರೆ.

ಈ ಅಂಬ್ಯುಲನ್ಸಕ್ಕೆ ಕನಿಷ್ಠ ಒಂದು ಲಕ್ಷದ ವೆಚ್ಚ ಬರುವದೆಂದು ಅಂದಾಜು ಮಾಡಲ್ಪಟ್ಟಿದೆ. ಇದು ಬಹಳ ತಡವೆಂದರೆ- ಜೂನ ತಿಂಗಳ ಕೊನೆಯಲ್ಲಿ ಹೊರಡಲೇ ಬೇಕಾಗಿರುತ್ತದೆ. ಲಕ್ಷ ರೂಪಾಯಿಗಳನ್ನು ವರ್ಗಣಿಯಿಂದಲೇ ಕೂಡಿಸಬೇಕಾಗಿದೆ. ಡಾಕ್ಟರ ಅನಸಾರಿಯವರು ಈಗಾಗಲೇ ೫೭೦೦೦ ರೂಪಾಯಿಗಳ ವಚನ ತಕ್ಕೊಂಡಿದ್ದಾರೆ. ಇವರ ಹೊರತು ಪ್ರತಿಯೊಂದು ಕಾಂಗ್ರೆಸ ಕಮಿಟಿಯವರು ಧನ ಸಹಾಯ ಮಾಡಲೊಪ್ಪಿದ್ದಾರೆ. ಮುಂಬಯಿಯ ಕಾಂಗ್ರೆಸ ಕಮೀಟಿಯವರು ಹತ್ತು ಸಾವಿರ ಮತ್ತು ಕರ್ನಾಟಕ ಕಾಂಗ್ರೆಸ ಕಮಿಟಿಯವರು ಐದು ಸಾವಿರ ರೂಪಾಯಿಗಳ ವಾಗ್ದಾನ ಮಾಡಿದ್ದಾರೆ. ಡಾಕ್ಟರ ಹರ್ಡೀಕರರೂ ಅವರ ಸೇವಾದಳವೂ ಕರ್ನಾಟಕದಲ್ಲಿ ವಾಸ್ತವ್ಯವಾಗಿರುವಂಥಾದ್ದು. ಆದುದರಿಂದ ಕನ್ನಡಿಗರು ಈ ಐದು ಸಾವಿರವನ್ನು ಆದಷ್ಟು ಬೇಗನೆ ಕೂಡಿಸಿಕೊಡುವದೆಂದು ನೆರೆ ನಂಬಿದ್ದೇವೆ.

ಪಂಡಿತ ಮೋತೀಲಾಲರ ಮತವು.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಾದ ಹಿಂದೂ ಮುಸಲಮಾನ ಐಕ್ಯ ಮತ್ತು ಪರಸ್ಪರ ಭಿನ್ನವಾಗಿರುವ ರಾಜಕೀಯ ಮತಗಳ ದೆಸೆಯಿಂದ ಪಂಡಿತ ಮೋತೀಲಾಲರು ಮುಂದೆ ಕೊಟ್ಟಂತೆ ಅಭಿಪ್ರಾಯಪಟ್ಟಿದ್ದಾರೆ.

ಹಿಂದೂ ಮುಸಲಮಾನ ಐಕ್ಯದ ತಳಗಲ್ಲಿನ ಮೇಲೆ ಹಿಂದೂ ಸ್ವರಾಜ್ಯದ ದಿವ್ಯ ಮಂದಿರ ಕಟ್ಟಬೇಕಾಗಿರುತ್ತದೆ. ಈ ಕಾರ್ಯಕ್ಕೆ ಇಡೀ ಹಿಂದುಸ್ಥಾನದ ಹಿಂಬಲಬೇಕು, ಈ ವಿಷಯವಾಗಿ ಮತಭೇದವನ್ನು ಎಷ್ಟೂ ಗಣನೆಗೆ ತರುವದಿಲ್ಲ. ಈಗಿನ ಸುಧಾರಣೆಗಳ ಬಗ್ಗೆ ನಾವು ಒಪ್ಪುವದು ಅಥವಾ ಒಪ್ಪದಿರುವದು ಗೌಣ ವಿಚಾರವು. ಒಟ್ಟಿನಿಂದ ನೋಡಲಾಗಿ ಸುಧಾರಣೆಗಳಿಂದ ನಮ್ಮ ಸ್ಥಿತಿಯು ಎಷ್ಟೂ ಸುಧಾರಿಸಿಲ್ಲ. ನಮ್ಮ ಪರಾವಲಂಬನ ತಪ್ಪಿಲ್ಲ. ನಾವು ನಿರಾಶ್ರಿತರಾಗಿ ಪರದಾಸ್ಯದಲ್ಲಿಯೇ ಬಿದ್ದಿದ್ದೇವೆ. ರಾಜಕೀಯವಾಗಿ ಹುಟ್ಟಿದ ಅನೇಕ ಪಂಗಡಗಳು ತಮ್ಮ ತಮ್ಮ ಮಾರ್ಗದಿಂದಲೇ ಸ್ವರಾಜ್ಯ ದೊರೆತು ಈಗಿನ ಅತ್ಯಸ್ತವಾದ ಸ್ಥಿತಿಯು ಹೋಗುವದೆಂದು ಸಾಧಿಸುತ್ತವೆ. ಇವರಿವರ ಹೇಳಿಕೆಯಿಂದ ಗುಲಾಮಗಿರಿಯ ಸರಪಳಿಯು ನಮ್ಮನ್ನು ಕಟ್ಟಿಹಾಕಿದೆಂದೂ, ಅದನ್ನು ಯಾವ ಪ್ರಕಾರ ಹಾಕಿಕೊಳ್ಳಬೇಕೆಂಬದಾಗಿ ಹೊಡದಾಡುತ್ತಿದ್ದೇವೆಂದೂ ವಿದಿತವಾಗುತ್ತದೆ. ಪರದಾಸ್ಯದ ಸರಪಳಿಯನ್ನು ಕೊರಳಿಗೆ ಹಾಕಿಕೊಂಡರೇನು? ಕಾಲಿಗೆ ಹಾಕಿದರೇನು? ಕೈಗೆ ಹಾಕಿಕೊಂಡರೇನು? ನಾವು ನಮ್ಮ ರಾಷ್ಟ್ರೀಯ ಒಗ್ಗಟ್ಟು ಮಾಡಿಕೊಂಡು, ನಮ್ಮಲ್ಲಿ ಐಕ್ಯವುಂಟೆಂದು ಜಗತ್ತಿಗೆ ತೋರಿಸುವ ತನಕ ಈ ದೊರೆತನದಲ್ಲಿ ಎಷ್ಟು ಕಲಹಗಳಾದರೂ ಅವನ್ನು ಲಕ್ಷಿಸತಕ್ಕದ್ದಲ್ಲ. ಭವಿಷ್ಯತ್ಕಾಲವು ನಮಗೆ ಹಿತಾವಹವಾಗಿರುತ್ತದೆಂದು ಸಂಪೂರ್ಣ ನಂಬಿಗೆಯುಂಟು.

ಮದ್ರಾಸದ ಸ್ವರಾಜ್ಯ ಪಕ್ಷೀಯರ ಭೂಷಣ- ದೂಷಣ.

ಮದ್ರಾಸದಲ್ಲಿ ಸ್ವರಾಜ್ಯ ಪಕ್ಷೀಯರ ಪ್ರಚಂಡ ಬಹುಮತವಾಯಿತು. ಬ್ರಾಹ್ಮಣೇತರ ಪಕ್ಷದ ದುರವಸ್ಥೆಯು ಕನಿಕರಪಡುವಂತಾಯಿತು. ನಡುವೆ ಎಣ್ಣೆಯ ಗುಂಡಿಕಂತಿದ್ದ ಸ್ವತಂತ್ರರು ದಿವಾನರಾದರು. ದಿವಾನರ ಸಂಬಳ ಮಂಜೂರ ಮಾಡುವ ವಿಷಯವು ಕೌನ್ಸಿಲದಲ್ಲಿ ಬಂತು. ಕಾಂಗ್ರೆಸದ ನಿರ್ಣಯದ ಪ್ರಕಾರ, ಸ್ವರಾಜ್ಯ ಪಕ್ಷದವರು ಈ ಠರಾವಿಗೆ ಮಂಜೂರಿ ಕೊಡತಕ್ಕವರಿದ್ದಿಲ್ಲ. ಇವರು ಈ ಪ್ರಕಾರ ವರ್ತಿಸಿದ್ದರೆ- ಮಂತ್ರಿಗಳು ರಾಜೀನಾಮೆ ಕೊಡುತ್ತಿದ್ದರು. ಮತ್ತು ಚುನಾವಣೆಯಲ್ಲಿ ಸಲಪಟ್ಟಾಗಿ ಬಿದ್ದಿದ್ದ ಪಾಸಗಲ್ಲಿನ ರಾಜರೇ ಮೊದಲಾಗಿ ಬ್ರಾಹ್ಮಣೇತರರು ಪುನಃ ದಿವಾನರಾಗುತ್ತಿದ್ದರು ಇವರಿಗೆ ತತ್ವವಿಲ್ಲ. ಸಂಸಾರದ ಕಂಕುಳದೊಳಗಿನ ಕೂಸಾಗಿ, ಅಧಿಕಾರದ ಕೆಲಸಗಳನ್ನು ಸಂಪಾದಿಸುವದೇ ಇತಿ ಕರ್ತವ್ಯವು ಇಂಥ ದೇಶಾಭಿಮಾನಶೂನ್ಯರು ಮತ್ತೆ ಮಂತ್ರಿಗಳಾಗಬಾರದೆಂದು ಸ್ವರಾಜ್ಯ ಪಕ್ಷದವರು ಮಂತ್ರಿಗಳ ಸಂಬಳಕ್ಕೆ ತಥಾಸ್ತು ಎಂದರು.

ಇವರ ಈ ಪ್ರಕಾರದ ವರ್ತನವು ಕಾಂಗ್ರೆಸದ ಠರಾವಿಗೆ ತೀರ ವಿರುದ್ಧವಾದದ್ದೆಂದು ಅಗ್ಗೀ ಚರ್ಚೆಯಾಯಿತು. ಪೂರ್ವಪಕ್ಷ, ಉತ್ತರ ಪಕ್ಷಗಳಾಗಿ ಖಂಡನ ಮಂಡನಗಳಾದವು. ಆದರೆ ಕೆಲವರು ಈ ವಿಷಯವನ್ನು ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ಮುಂದೆ ತರುವ ನಿಶ್ಚಯ ಮಾಡಿದರು. ಆ ಪ್ರಕಾರ ಇದು ಈ ಕಮಿಟಿಯಲ್ಲಿ ಚರ್ಚೆಗೆ ಹೊರಟಿತು. ಚರ್ಚೆಯ ಪೂರ್ವದಲ್ಲಿ ಕಾಂಗ್ರೆಸದ ವರ್ಕಿಂಗ ಕಮಿಟಿಯವರು ಈ ಸ್ವರಾಜ್ಯ ಪಕ್ಷೀಯರು ಕಾಲ ಮತ್ತು ಸ್ಥಳ ಪರಿಸ್ಥಿತಿಗನುಸರಿ

ಸಿ, ಮಾಡಿದ ಕೆಲಸವು ತಮಗೆ ಮಾನ್ಯನಾಗಿರುತ್ತದೆಂಬ ಠರಾವು ಮಾಡಿ, ಇವರನ್ನು ಗೌರವದ ಶಬ್ದಗಳಿಂದ ಭೂಷಿಸಿದರು.

ವರ್ಕಿಂಗ ಕಮಿಟಿಯ ಠರಾವು ಅಸಹಕಾರಿಗಳಿಗೆ ಸಮ್ಮತವಾಗಲಿಲ್ಲ. ಇವರು ನಿಷೇಧದ ಠರಾವು ತಂದರು. ಮುದ್ರಾಸದ್ದೇ ವಿಷಯವಾದ್ದರಿಂದ, ಶ್ರೀ ಶ್ರೀನಿವಾಸ ಅಯ್ಯಂಗಾರರು ಅಧ್ಯಕ್ಷಸ್ಥಾನ ಬಿಟ್ಟು, ಅದನ್ನು ಶ್ರೀ ಮೋತಿಲಾಲರಿಗೆ ಕೊಟ್ಟರು. ಸ್ವರಾಜ್ಯ ಪಕ್ಷೀಯರು ಮಂತ್ರಿಗಳ ಸಂಬಳಕ್ಕೆ ಮಂಜೂರಿ ಕೊಟ್ಟಿದ್ದರೆ- ಕಾಂಗ್ರೆಸದ ವೈರಿಗಳಾದ ಜಸ್ಟೀಸ ಪಕ್ಷದವರು ಪುನಃ ಮಂತ್ರಿಗಳಾಗುತ್ತಿದ್ದ ಕಾರಣ ಹಾಗೆ ಮಾಡಬೇಕಾಯಿತೆಂದು ಶ್ರೀ. ಅಯ್ಯಂಗಾರರು ತಮ್ಮ ಮತ ಹೇಳಿದರು. ಬಳಿಕ ಶ್ರೀ ಸತ್ಯಮೂರ್ತಿಯವರು ಅಂದದ್ದೇನಂದರೆ-

" ನಾವೇನೂ ಮಂತ್ರಿಗಳ ಹಿತೈಷಿಗಳಲ; ಆಲ ಠರಾವುಗಳಲ್ಲಿ ೨೨ ಠರಾವುಗಳ ಮೇಲೆ ಅವರ ವಿರುದ್ಧ ಹೋಟು ಕೊಟ್ಟಿದ್ದೇವೆ. ಡಾಯರಿಕೆಯು ಶಕ್ಯವಾದುದಲ್ಲೆಂಬದನ್ನು ತೋರಿಸುವದಕ್ಕಾಗಿಯೇ ನಾವು ಕೌನ್ಸಿಲಗಳಲ್ಲಿ ಪ್ರವೇಶ ಮಾಡಿದ್ದೇವೆಂಬದನ್ನು ಮರೆಯಕೂಡದು. ನಾವು ದಿವಾನರ ಸಂಬಳಕ್ಕೆ ಮಂಜೂರಿ ಕೊಡದಿದ್ದರೆ- ಬ್ರಾಹ್ಮಣೇತರ ಪಕ್ಷದವರು ವಾಚೇತನದಿಂದ ಪ್ರಧಾನರಾಗಿ, ಡಾಯರಿಕೆಯನ್ನು ಶಾಶ್ವತಗೊಳಿಸುತ್ತಿದ್ದರು. ನಮ್ಮಿಂದ ಅಕ್ರಮವಾಯಿತೆಂದು ತಿಳಿದರೂ, ನಾವು ಸ್ವಂತ ಹಿತಕ್ಕಾಗಿ ಈ ಕೃತಿ ಮಾಡಲಿಲ್ಲ. "

ಇವರ ಭಾಷಣವು ಪ್ರತಿಯೋಗಿ ಸಹಕಾರಿಗಳ ಮುಂದಾಳುಗಳಾದ ಪುಣೆಯ ಶ್ರೀ. ಕೇಳಕರರಿಗೆ ಬಹು ಸಂತೋಷವನ್ನುಂಟು ಮಾಡಿತು. ಶ್ರೀ ಸತ್ಯಮೂರ್ತಿಯವರಿಗೆ ಅನುಕೂಲವಾಗಿ ಅನೇಕರು ಭಾಷಣ ಮಾಡಿದರು. ಆದರೂ ಈ ಬಗ್ಗೆ ಅವರ ಜವಾಬು ತಕ್ಕೊಂಡು ಅದನ್ನು ಮುಂದಿನ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿಡಬೇಕೆಂದು ಗೊತ್ತಾಯಿತು. ಸದ್ಯದಲ್ಲಿ ಇವರಿಗೆ ವರ್ಕಿಂಗ ಕಮಿಟಿಯಲ್ಲಿ ಬಂದ ಭೂಷಣ ತಪ್ಪಿ, ದೂಷಣದ ಮುದ್ರೆ ಮಾತ್ರ ಬಿಡಿದದೆ ಕಮಿಟಿಯಲ್ಲಿ ಈ ವಿಷಯವನ್ನೇ ಎತ್ತಬಾರದಿತ್ತೆಂದು ಪಂಡಿತ ಮೋತಿಲಾಲರ ಮತವು.

ಮಲಬಾರದಲ್ಲಿ ಒಬ್ಬ ನಂಬುದ್ರಿ ಬ್ರಾಹ್ಮಣನು ಕ್ಷಯರೋಗದ ಮೇಲೆ ಔಷಧವೆಂದು ಕಾಡಬೆಕ್ಕಿನ ಎಣ್ಣೆಯನ್ನು ತಕ್ಕೊಂಡದ್ದರಿಂದ, ಈತನನ್ನು ಉಳಿದ ನಂಬುದ್ರಿಗಳು ಕುಲದಿಂದ ಹೊರಗೆ ಇಟ್ಟಿದ್ದಾರೆ.

ಡಾಕ್ಟರ ಡಾಕ್ಟರಣಿಯ ಮದುವೆ.

ಮದ್ರಾಸದಲ್ಲಿ ಡಾಕ್ಟರರಾಗಿರುವ ಕೃಷ್ಣಸ್ವಾಮಿ ನಾಯುಡುಯವರು ಡಾಕ್ಟರಣಿಯಾಗಿರುವ ಲಕ್ಷ್ಮಿ ಅಮ್ಮನವರೊಂದಿಗೆ ಬ್ರಹ್ಮೋ ಪದ್ಧತಿ ಪ್ರಕಾರ ವಿವಾಹ ಮಾಡಿಕೊಂಡರು. ಸರ ವೆಂಕಟರತ್ನ ನಾಯುಡು ಇವರು ಪುರೋಹಿತರಾಗಿದ್ದರು. ಸತಿ ಪತಿಯರಿಬ್ಬರೂ ಎಲ್. ಎಮ್. ಎಂಡ ಎಸ. ಪರೀಕ್ಷೆ ಪಾಸಾಗಿದ್ದಾರೆ.

ವಿವಿಧ ವರ್ತಮಾನಗಳು

ಯೆರವಡೆಯ ತುರುಂಗದಲ್ಲಿರುವ ಹಿಂದೂ ಕೈದಿಗಳಿಗೆ ನೈತಿಕ ಮತ್ತು ಧಾರ್ಮಿಕ ವಿಷಯಗಳ ಮೇಲೆ ಉಪದೇಶ ಮಾಡುವದಕ್ಕಾಗಿ ಪುಣೆಯ ಕಲೆಕ್ಟರರು ಹಿಂದೂ ಮಹಾಸಭೆಯ ಒಬ್ಬ ಪ್ರಚಾರಕನಿಗೆ ಅಪ್ಪಣೆ ಕೊಟ್ಟಿದ್ದಾರೆ.

ನಾಗಪೂರದ ಕಾಯದೆಭಂಗದಲ್ಲಿ ಇಬ್ಬರು ಬ್ರಾಹ್ಮಣರು ಬಿಚ್ಚುಗತ್ತಿ ಹಿಡಕೊಂಡು ಮೆರೆದ ಕಾರಣದಿಂದ, ಮ್ಯಾಜಿಸ್ಟ್ರೇಟರು ಇವರಿಗೆ ಹತ್ತು ರೂಪಾಯಿ ದಂಡ ಇಲ್ಲವೆ ೧೫ ದಿವಸಗಳ ಶಿಕ್ಷೆ ವಿಧಿಸಿದರು, ಇವರು ದಂಡ ಕೊಡದೆ ತುರುಂಗಕ್ಕೆ ಹೋದರು.

ಸತ್ಯಾಗ್ರಹ ಮತ್ತು ಕಾಯದೆಭಂಗದ ನಿಜಸ್ವರೂಪ ತಿಳಕೊಳ್ಳುವದಕ್ಕಾಗಿ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ಶ್ರೀ ಪಟೇಲರನ್ನು ನೇಮಿಸಿದ್ದಾರೆ.

ಜಬಲಪೂರದಲ್ಲಿ ಆರ್ಯ ಸಮಾಜದ ಸಮಾರಂಭವಾಗತಕ್ಕದ್ದಿತ್ತು. ಪ್ರಿನ್ಸಿಪಾಲ ಧರ್ಮಭಿಕ್ಷು ಎಂಬವರು ವ್ಯಾಖ್ಯಾನ ಕೊಡಲಿಕ್ಕೆ ಬರತಕ್ಕವರಿದ್ದರು. ಇವರು ಬರುವದರೊಳಗಾಗಿ ಇನ್ನೊಬ್ಬನು ತಾನೇ ಧರ್ಮಭಿಕ್ಷು ಎಂದು ಹೇಳಿಕೊಂಡು, ಆತಿಥ್ಯ ಸತ್ಕಾರ ಹೊಂದಿದ್ದನು. ಸಾಯಂಕಾಲದಲ್ಲಿ ನಿಜವಾದ ಧರ್ಮ ಭಿಕ್ಷು ಬರಲು- ಈತನು ಈಗ ಜ್ಞಾನಮಂಟಪ ಕಂಡಿದ್ದಾನೆ.

ರಂಗೂನದ ಮ್ಯಾಕ ಗ್ರೇಗರ ಕಂಪನಿಯವರು ಬ್ರಹ್ಮದೇಶದ ಯುನಿವ್ಹರ್ಸಿಟಿ ಫಂಡಿಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಸೇಲಮದಲ್ಲಿ ಒಬ್ಬ ಕಳ್ಳನು ಓಡಿ ಹೋದನು. ಆತನನ್ನು ಹಿಡಿಯುವದಕ್ಕಾಗಿ ಒಬ್ಬ ಪೋಲೀಸನು ಬೆನ್ನಟ್ಟಿದನು. ಕಳ್ಳನು ಪೋಲೀಸನ ಬಳಿ ದೂಕು ದೊರೆಕಿಸಿ, ಸಿಪಾಯಿಯನ್ನು ಗುಂಡು ಹಾಕಿಕೊಂದನು. ಬಳಿಕ ಬೇರೆ ಪೋಲೀಸರು ಹೋಗಿ ಕಳ್ಳನನ್ನು ಗುಂಡು ಹಾಕಿ ಕೊಂದರು.

ಚೀನರಂತೆ ಇರಾಣ ಸರಕಾರದವರೂ ಪರದೇಶಿಯರ ಕೂಡ ಆದಂಥ ಎಲ್ಲ ಅಸಮ ಒಡಂಬಡಿಕೆಗಳನ್ನು ರದ್ದು ಮಾಡುವಂತೆ ಪರರಾಷ್ಟ್ರೀಯರಿಗೆ ತಿಳಿಸಿದ್ದಾರೆ.

ಮಿಚಿಗಾನ ದೇಶದಲ್ಲಿ ಒಂದು ಮನೆಯ ಮೇಲಿನ ಅಂತಸ್ತಿನಲ್ಲಿ ಶಾಲೆಯಿತ್ತು. ಕೆಳಗೆ ಮದ್ದು ಇತ್ತು. ಮದ್ದಿಗೆ ಬೆಂಕಿ ಹತ್ತಿ, ಶಾಲೆಯು ಮುಗಿಲಿಗೆ ಹಾರಿತು. ೩೫ ಹುಡುಗರು ಸುಟ್ಟು ಸತ್ತರು.

ಮದ್ರಾಸ ಸರಕಾರದವರ ತರೆ ಕೊಡುವ ತೆಂಗಿನ ಮರಕ್ಕೆ ಮೂರು ಮತ್ತು ತಾಡಿನ ಗಿಡಕ್ಕೆ ಎರಡು ರೂಪಾಯಿ ಕರ ಕೊಡಿಸುವರು. ಇದರಿಂದ ಸರಕಾರಕ್ಕೆ ಮೂರು ಲಕ್ಷದ ಆದಾಯ ಹೆಚ್ಚುವದು.

ಬ್ಯಾರಿಸ್ಟರ ಮಹಮದ ಅಮೀನಸಾಹೇಬರು ಕಾನಪೂರಕ್ಕೆ ಹೋಗಿ ತಗಲಿಫಾದ ಮೇಲೆ ವ್ಯಾಖ್ಯಾನ ಪ್ರಾರಂಭಿಸಿದರು ಕಾನಪೂರದ ಸುತ್ತಲು ೩ ತಿಂಗಳ ವರೆಗೆ ವ್ಯಾಖ್ಯಾನ ಕೊಡಕೂಡದೆಂದು ಮ್ಯಾಜಿಸ್ಟ್ರೇಟರು ಇವರ ಮೇಲೆ ನೋಟೀಸು ತೆಗೆದಿದ್ದಾರೆ.

ಧಾರವಾಡ—

ವೃಷ್ಟಿಯೋಗ- ಬುಧವಾರದಿಂದ ವಿಶಾಲ ಮೃಗದಲ್ಲಿ ಮಳೆಯಾಗುತ್ತಿಲುವದು. ಹಾವೇರಿ, ಹುಬ್ಬಳ್ಳಿಯಲ್ಲಿ ನೀರು ನೀರಾದಂಥ ಮಳೆಯಾಗಿದೆ. ಧಾರವಾಡದಲ್ಲಿ ಅಂಥ ಮಳೆಯಾಗಿಲ್ಲ. ಇಲ್ಲಿ ನಿನ್ನಿನ ದಿವಸ ಮಳೆಯ ಕೂಡ ಆಣಿಕಲ್ಲುಗಳೂ ಬಿದ್ದವು. ಮಲ್ಲಾಪದಲ್ಲಿ ಭತ್ತದ ಬಿತ್ತಿಗೆ ಪದವೆನಿಸುವಷ್ಟು ಹಸಿ ಮಳೆಯಾಗಿರುತ್ತದೆ.

ಬರುವ ೨೯ ಮತ್ತು ೩೦ ತಾರೀಖುಗಳಲ್ಲಿ ಈ ಊರಲ್ಲಿ ಬ್ರಾಹ್ಮಣ ಹಿತವರ್ಧಿನಿ ಸಭೆಯು ಕೂಡುವದು. ಮಹಾರಾಷ್ಟ್ರ ಪ್ರಾಂತದಿಂದಲೂ ಡೆಲಿಗೇಟರು ಬರುವರು. ಶ್ರೀ ಸತ್ಯಧ್ಯಾನತೀರ್ಥ ಸ್ವಾಮಿಗಳು ಅಧ್ಯಕ್ಷಸ್ಥಾನವನ್ನಲಂಕರಿಸಲೊಪ್ಪಿಕೊಂಡಿರುತ್ತಾರೆ.

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—(೧)—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ೬ ರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರುಪಾಯಿ ಬಡ್ಡಿ ದೊರೆಯುವದು. ಹೆಚ್ಚು ಕಾಲಕ್ಕೆ ದೆಸೆಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳನ್ನೂ ಪತ್ರೀ ಇಟ್ಟುಕೊಳ್ಳಲ್ಪಡುವವು ಚಕ್ಕ ವ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಣ್ಣಾಚಾರ್ಯ ಕಟ್ಟಿ
ಕಂಪನಿ ಮ್ಯಾನೇಜಿಂಗ ಏಜಂಟ್ಸ ಚೇರಮನ.

ಏಜಂಟ್ಸ

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ ಲಾಗಾಯಿತ ೨-೦-೦ ವರೆಗೂ ಮಲ್ಲಿಗೆ ಅರಗಜ ಬಿಲ್ವ, ಪನ್ನೀರು, ಭೃಂಗಾಮಲಕ ತೈಲ, ದಶಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತ ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಆ್ಯಂಡ ಸನ
ಸುಗಂಧಾಧಿಕಾರಿ ಮೈಸೂರು

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಕ್ಕೆ

೩ ತಿಂಗಳಿಗೆ	೧೨—೮—೦ ರೂ
„	೭—೦—೦ ರೂ
	४—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜ ವಿಜಯ ಧಾರವಾಡ.

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೌಸ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೊಳ್ಳುವ ವ್ಯಾಪಾರಸರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು ... ಕಡೆಗೆ ಪಸಾರವಾಗಿರುತ್ತದೆ, ಅದರಲ್ಲಿ ಇದು ಉತ್ತಮವಿದ್ದದೆ. ... ಕ ಪತ್ರಿಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ... ನ ಕಳಿಸಿ ಕೊಡುತ್ತೇವೆ, ಆರ್ಡರ ಕೊಡುವವರು ೧/೨ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ಶಿಗಾವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,
ವಾಚ ರಿಪೇರರ ವ ಡೀಲರ ಬೆಂಗಾಪಿನಗಲ್ಲಿ, ಹುಳಿ,

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ. ಜಿಲ್ಹಾ ಬೆಳಗಾವ.

ಜಾಹೀರ ನೋಟೀಸು.

ಹೊಲ ಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ॥ ಸ॥ ನಂಬರ ೩೨ ಯಕರೆ ೧೧.೧೬ ತರಮ ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸ್ಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಹರ್ತಿ ಇವರ ಮನೆ ಆಲೂರಲ್ಲಿ ರೋದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ॥ ೩೧ ಮಾಹೆ ಮೆ ಸನ್ನ ೧೯೨೭ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮಧ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಸುವದು. ತಾರೀಖು ೨೫ನೇ ಮಾಹೆ ಎಪ್ರಲ ೧೯೨೭ ಇಸ್ವಿ

G V DESHPANDE,
Dy. Nazir & Guardian of
Shrinivas & Ramachandra Alu

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಜಯಕರ್ನಾಟಕ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬಲಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮! ಧಾರವಾಡ ಸೋಮವಾರ ತಾರೀಖು ೨೩ ನೇ ನವೆಂ ೧೯೨೭ | ಸಂಚಿಕೆ ೧೦೬

ಕಿರ್ಲೋಸ್ಕರರ ಕಬ್ಬಿನ ಗಾಣಗಳು.



ಮೊನ್ನೆ ಪುಣೆ ಪ್ರದರ್ಶನದಲ್ಲಿ ಈ ಕಮಾಲ ಗಾಣಕ್ಕೆ ಪದಕವು ದೊರಕಿದೆ ಹೆಚ್ಚಿನ ಸಂಗತಿ ಒಗ್ಗೆ ತಿಳಿದುಕೊಳ್ಳಿರಿ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯು ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸ್ವಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ೮ ಗೆ ಮೂ ರಾ ಣೆ— ಇಂಗಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಕಚ್ಚೇರಿಗೆ ಪತ್ರವ್ಯವಹಾರ ಮಾಡಬಹುದು

ವ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ಪ್ರತಿಕ್ಕೆ ತಿಂಗಳ ಕನ್ನಡದು ಆಗುತ್ತಿರುತ್ತದೆ.

ಎ. ಕೆ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹುಂಡಿಗೆಯು ಆರು ಲಕ್ಷದ ಮೇಲಿಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವದು. ಕಾರಕೂನರು ಮತ್ತು ಬೇರೆ ತರದ ಶಿಕ್ಷಿತರಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು,

ವಾಸುದೇವರಾವ ಬಿ. ಜಕಾತಿ,
ವ್ಯಾನೇಜಿಂಗ ಡಾಯರೆಕ್ಟರ

ಕಾಲರಾ ಪಿಲ್ಸ.

ಕಾಲರಾ (ಮಾರಿಕಾ) ರೋಗದ ಮೇಲೆ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಕೂಡಲೆ ಅಮೂಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೩೨ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ.

ಪತ್ತಾ:- ವ್ಯಾ. ಆಯುರ್ವೇದ ಶಾಲಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

ಮೇ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸವೆವು. ಚಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ಪಡಿಸುವದನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ವ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೮-೫-೨೩ ನೇ ಇಸ್ವಿ

ನಾಗಪೂರದ ಕಾಯದೆಭಂಗದ ಸಡಗರ.

ಸೇನಾಧ್ಯಕ್ಷರ ನಡವಿನ ಸಂದೇಶ.

ಆಲ ಇಂಡಿಯಾ ಕಾಂಗ್ರೆಸ ಕಮೀಟಿಯವರು ನಾಗಪೂರದ ಕಾಯದೆಭಂಗದ ಸತ್ಯ ಪರೀಕ್ಷೆ ಮಾಡುವದಕ್ಕಾಗಿ ಶ್ರೀ ಪಟೇಲರನ್ನು ನೇಮಿಸಿದ್ದಾರೆ. ಇವರು ಈ ಮೊದಲು ನ್ಯಾಸಗ.ಡಿಯ ಸತ್ಯಾಗ್ರಹದ ಸತ್ಯ ಪರೀಕ್ಷೆ ಮಾಡಿ, ಅದಕ್ಕೆ ಅನುಕೂಲ ಮತಕೊಟ್ಟಿದ್ದರು. ಅದೇ ಪ್ರಕಾರ ಇವರು ಪ್ರಕೃತದ ಕಾಯದೆಭಂಗದ ವಿಷಯದ ಮಾಡುವ ರಿಪೋರ್ಟ ಕೂಡ ವಸ್ತುಸ್ಥಿತಿಗೆ ಅನುಕೂಲವಾಗಿಯೇ ಆಗುವದೆಂದು ಹೇಳಲವಶ್ಯವಿಲ್ಲ.

ಕಾಯದೆಭಂಗದ ಅಧ್ವರ್ಯುಯಾದ ಶ್ರೀ. ಮಂಚರಶಹಾ ಆವರಿಯವರು ಧಾರ್ಸ ಗೃಹಸ್ಥರಾಗಿದ್ದಾರೆ. ಇವರು ಬರೇ ಕಾಯದೆಭಂಗದಲ್ಲಿ ತೊಡಗದೆ, ತಾವು ಹಿಂದುಸ್ತಾನದ ದೇಶದಿಂದ ಪ್ರಜಾಸತ್ತಾತ್ಮಕ ರಾಜ್ಯಸ್ಥಾಪನೆ ಮಾಡುವಂತೆ ಸಾರಿದ್ದಾರೆ. ಇವರ ಪ್ರೇರಣೆಯಿಂದ ಕಾಯದೆಭಂಗ ಮಾಡತಕ್ಕವರು ಬರೇ ಸ್ವಯಂಸೇವಕರಲ್ಲ ದಂಡಾಳುಗಳೆಂಬ ಪದವಿ ಹೊಂದಿದ್ದಾರೆ. ಇವರಲ್ಲಿ ಇಂದಿಗೆ ೧೫೫ ಜನರಿಗೆ ಶಿಕ್ಷೆಯಾಗಿದೆ. ಮತ್ತು ಇನ್ನೂ ಬಹಳ ಜನರು ಹುರಂಗ ಕಾಣಲು ಸಿದ್ಧರಾಗಿದ್ದಾರೆ. ದಿನಾಲು ಇಬ್ಬರಂತೆ ಕಾಯದೆಭಂಗ ಮಾಡುವರು. ಪೋಲೀಸರು ಇವರ ಕತ್ತಿಗಳನ್ನು ಜಪ್ತ ಮಾಡುವರು. ಇವರಿಗೆ ಪ್ರತಿನಿತ್ಯ ಎಲ್ಲಿಂದ ಕತ್ತಿ ಕರಾರಿಗಳು ಬರುವವೆಂದು ಸಹಜವಾದ ಪ್ರಶ್ನವದೆ. ಇವರು ಉಕ್ಕಿನ ತಗಡುಗಳನ್ನು ತಕ್ಕೊಂಡು ಕತ್ತೀ ಮಾಡಿ, ಅವನ್ನು ಮೆರೆಸುವರು. ಪೇಟೆಯಲ್ಲಿ ಉಕ್ಕಿನ ತಗಡು ಸಿಗುವ ತನಕ ಇವರಿಗೆ ಆಯುಧಗಳ ಕೊರತೆಯಾಗಲಾರದು.

ಬಂಗಾಲದ ದಬ್ಬಾಳಿಕೆಯಲ್ಲಿ ಹಿಡಿದು ತುರಂಗದಲ್ಲಿ ಹಾಕಿದಂಥ ಜನರನ್ನು ಪೂರಾ ಬಂಧಮುಕ್ತ ಮಾಡುವ ತನಕ ಕಾಯದೆಭಂಗ ನಡೆಯುವದು. ಶ್ರೀ. ಸುಭಾಷಚಂದ್ರ ಬೋಸರನ್ನು ಬಿಟ್ಟರಿ, ಉಳಿದವರನ್ನು ಬಿಡುವಿರಾ ಎಂಬದಾಗಿ ಪಾರ್ಲಮೆಂಟ ಸಭೆಯಲ್ಲಿ ಕೇಳಿದ ಪ್ರಶ್ನಕ್ಕೆ ಹಾಗೇನೂ ವಿಚಾರವಿಲ್ಲೆಂದು ಅರ್ಲ ವಿಂಟರಟನ್ನ ಸಾಹೇಬರು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಈ ಸತ್ಯಾಗ್ರಹವು ಬಂಗಾಲಿಗಳು ಬಂದಮುಕ್ತರಾಗುವ ತನಕ ಸತತವಾಗಿ ನಡೆಯುವಂತಾಯಿತು.

ಕಾಯದೆಭಂಗವನ್ನು ಕುರಿತು ಅನೇಕರು ಅನೇಕ ತರದ ಟೀಕೆ ಮಾಡಿದ್ದಾರೆ ಕೆಲವರು ಉಪಹಾಸ ಮಾಡಿದ್ದಾರೆ. ಇವನ್ನುದ್ದೇಶಿಸಿ, ಸೇನಾಧಿಪತಿಯಾದ ಆವರಿಯವರು ಒಂದು ಸಂದೇಶವನ್ನು ಜಾಹೀರ ಮಾಡಿದ್ದಾರೆ. ಅದರಲ್ಲಿ ಅವರು ಅನ್ನುವದೇನಂದರೆ-

“ನನ್ನ ಮೇಲೆ ಬೇಕಾದವರು ಮನಸಿಗೆ ಬಂದಂತೆ ಟೀಕೆ ಮಾಡಲಿ ದೇಶದ ಮುಂದಾಳುಗಳೂ ವರ್ತಮಾನಪತ್ರಕಾರರೂ ಎಷ್ಟರಿಂದ ನಿಂದೋಕ್ತಿಯನ್ನಾಡಬೇಕು ಶಿವಾಜಿಯ ಕಾಲ ಹಿಂದಾಯಿತು. ಆತನ ಪದ್ಧತಿಯಿಂದ ಆಳರಸರ ಕೂಡ ಹೋರಾಡುವ ಸಮಯವಿಲ್ಲ. ನನ್ನ ವಿರುದ್ಧ ಟೀಕೆ ಮಾಡುವ ದವರಿ- ನನಗೆ ಅನುಕೂಲವಾಗಿ ಬಂದ ಕೂಳಲಿ- ಒಂದೊಂದು ತಪ್ಪಿಗಾಗಿ ಒಂದೊಂದು ತಿಂಗಳ ಸಕ್ತ ಮಜೂರಿಯ ಶಿಕ್ಷೆ ವಿಧಿಸುವೆನು. ಈ ತಪ್ಪು ಭಾಷಣದಿಂದಾದರೂ ಸರಿ; ಲೇಖನದಿಂದಾದರೂ ಸರಿ.

ಶ್ರೀ ಮುಂಚರಶಹಾ ಆವರಿಯು ಇಟಲಿಯ ಮುಸೋಲಿನಿಯಂತೆ ಸರ್ವ ಶಕ್ತಿಯನ್ನು ಒಟ್ಟುಗೂಡಿಸಿ, ರಾಜ್ಯಸೂತ್ರಗಳನ್ನು ಕಯ್ಯಲ್ಲಿ ತಕ್ಕೊಂಡಂತೆ ತಾನೂ ತಕ್ಕೊಳ್ಳಬೇಕೆಂದು ಮಹತ್ವಾಕಾಂಕ್ಷೆಯುಳ್ಳವನಾಗಿದ್ದಾನೆ ಇಟಲಿಯಲ್ಲಿ ಫಾಸಿಸ್ಟಿ ಪಂಥವು ಹತ್ತಿಪ್ಪತ್ತು ವರ್ಷ ಬೆಳೆದು, ಪೂರ್ಣಾವಸ್ಥೆಗೆ ಬಂದ ಬಳಿಕ, ಅದರ ಉದ್ದೇಶವು ಕೃತಾರ್ಥದಲ್ಲಿ ತೋರಿಸಿಗೊಂಡಿತು. ಇದರ ಪ್ರವರ್ತಕನು ಲ್ಹೋರ್ನಾದ ಡ್ಯೂಸನೆಂಬವನು ಆವರಿಯಂತೆ ಭಾಷಣ ಮಾಡುತ್ತಿದ್ದನು. ರೋಮಮಾನಿಯರು ಈತನನ್ನು ಮೂರ್ಖಕೋಟಿಯಲ್ಲಿಟ್ಟಿದ್ದರು. ಆದರೆ ಭವಿಷ್ಯತ್ಕಾಲದಲ್ಲಿ ಆತನ ನುಡಿಯು ನಿಜವಾಯಿತು ಡ್ಯೂಸನಂತೆ ತಾನೂ ಜಯಶಾಲಿಯಾಗುವಂತೆ ಆವರಿಯು ಅಪೇಕ್ಷಿಸಿದ್ದಾನೆ. ಮುಸೋಲಿನಗೆ ರಾಷ್ಟ್ರದ ಬೆಂಬಲ ಸಿಕ್ಕಿತು. ನಾಗಪೂರದ ನಾಯಕನಿಗ ರಾಷ್ಟ್ರದ ಬೆಂಬಲ ದೊರೆಯಿತು. ಶ್ರೀ ಪಟೇಲರ ರಿಪೋರ್ಟಿನಿಂದ ಕಾಯದೆಭಂಗವು ಒಪ್ಪಿಗೆಯುಳ್ಳದ್ದಾಗಿ, ಕಾಂಗ್ರೆಸದ ನೆರವು ಗೂರೆಶರೀ-ಆವರಿಯ ಕೈ ಕೂಡ ಕೆಲಸಕ್ಕೆ ಯಶ ಬರುವ ಸಂಭವವುಂಟು.

ಸ್ವರಾಜ್ಯ ಪಕ್ಷೀಯರ ಅಧಃಪಾತವೇ?

—೦—

ಮದ್ರಾಸದ ಸ್ವರಾಜ್ಯ ಪಕ್ಷೀಯರು ಮಂತ್ರಿಗಳ ಸಂಬಳಕ್ಕೆ ಮಂಜೂರಿ ಕೊಟ್ಟದ್ದಕ್ಕೆ ಅವರ ಜವಾಬು ಕೇಳಬೇಕೆಂದು ಆಲ ಇಂಡಿಯಾ ಕಾಂಗ್ರೆಸ ಕಮೀಟಿಯಲ್ಲಿ ಠರಾವು ಪಾಸಾಗಿ, ಬಹುಕೇಕ ಮೆಂಬರರು ತಂತಮ್ಮ ದೇಶಗಳಿಗೆ ಪ್ರಯಾಣ ಬೆಳೆಸಿದ ಬಳಿಕ ಕಾಂಗ್ರೆಸದ ವರ್ಕಿಂಗ ಕಮೀಟಿಯವರು ಈ ಸ್ವರಾಜ್ಯ ಪಕ್ಷೀಯರಲ್ಲಿ ಪ್ರಮುಖರಾದ ಶ್ರೀ. ವೆಂಕಟಾಚಲಮಶೆಟ್ಟಿ ಮತ್ತು ಶ್ರೀ ಸತ್ಯಮೂರ್ತಿಯವರ ಜವಾಬನ್ನು ತಕ್ಕೊಂಡು, ಅವರನ್ನು ಎಲ್ಲ ದೋಷದಿಂದ ಮುಕ್ತಮಾಡಿದರು. ವರ್ಕಿಂಗ ಕಮೀಟಿಯು ಈ ಠರಾವು ಘೋರಶಾಹಿಯದಾಗಿರುತ್ತದೆಂದು ಆಲ ಇಂಡಿಯಾ ಕಾಂಗ್ರೆಸ ಕಮೀಟಿಯ ಮೆಂಬರರು ಟೀಕೆ ಮಾಡಿದ್ದಾರೆ ಸ್ವರಾಜ್ಯ ಪಕ್ಷೀಯರು ಕೌನ್ಸಿಲಿನಲ್ಲಿ ಬ್ರಾಹ್ಮಣೇತರ ಪಕ್ಷದ ವಿರೋಧಿಗಳಂತೆ ನಟಿಸಿದರೂ, ಅದರ ಅಧಃಪಾತವೇ ಆಗಿರುತ್ತದೆಂದು ಲೀ ಪ್ರಕಾಶಮರು ಅನುತ್ತಾರೆ. ಇವರು ಹೇಳುವದೇನಂದರೆ-

ಮಂತ್ರಿಗಳ ಸಂಬಳದ ಠರಾವಿಗೆ ಮಂಜೂರಿ ಕೊಡುವ ಮುನ್ನಾ ದಿವಸ ಶ್ರೀ. ಸತ್ಯಮೂರ್ತಿವರು ಮಂತ್ರಿಗಳನ್ನು ತಮ್ಮ ಮನೆಗೆ ಊಟಕ್ಕೆ ಕರೆದು, ಕೌನ್ಸಿಲಿನಲ್ಲಿ ಸ್ವರಾಜ್ಯ ಪಕ್ಷೀಯರು ಹೇಗೆ ನಡೆಯಬೇಕೆಂದು ಗೊತ್ತು ಮಾಡಿದರು ಸ್ವರಾಜ್ಯ ಪಕ್ಷದ ಸೂತ್ರಗಳು ಶ್ರೀ ವೆಂಕಟಾಚಲಮಶೆಟ್ಟಿ ಅಥವಾ ಶ್ರೀ ಸತ್ಯಮೂರ್ತಿಯವರ ಕಯ್ಯಲ್ಲಿರದೆ, ಕಾಯದೆ ಕೌನ್ಸಿಲರರಾದ ಸ... ಸಿ... ಪಿ... ರಾಮಸ್ವಾಮಿಯವರ ವಶದಲ್ಲುಂಟೆ ಇವರು ಹೇಳಿದಂತೆ ಮಂತ್ರಿಗಳು ಸ್ವರಾಜ ಪಕ್ಷದವರ ಕೇಳುತಿದ್ದಾರೆ. ಸ್ವರಾಜ್ಯ ವಾದಿಗಳ ಸ್ವಾತಂತ್ರ್ಯವೆಲ್ಲವು ಸಂಪೂರ್ಣ ಬಂದಿದೆ ತಮ್ಮ ಜನರಿಗೆ ಕೆಲಸ ದೊರೆಯಬೇಕೆಂದೂ, ಲೋಕಲಬೋರ್ಡ ಮ್ಯುನಿಸಿಪಾಲಿಟಿಗಳಲ್ಲಿ ತಮ್ಮವರು ಮೆಂಬರ ಅಧವಾ ಅಧ್ಯಕ್ಷರಾಗಬೇಕೆಂದೂ ಮಂತ್ರಿಗಳ ಬಾಗಿಲ ಕಾಯುತ್ತಿದ್ದಾರೆ. ನಾನು ಅಂದ್ರೂಸ, ಆಂಧ್ರ ಮೆಂಬರರೂ ಅನ್ಯರಿಗೆ ಶರಣಾಗತ ಸ್ಥಿತಿಯಲ್ಲಿದ್ದದ್ದನ್ನು ನೋಡಿ, ನಾಚಿಕೆಯಿಂದ ತಲತಲೆಗೆ ಮಾಡಬೇಕಾಗಿರುತ್ತದೆ.”

ಸ್ವರಾಜ್ಯ ಪಕ್ಷೀಯರ ಕುಂದು ಕಲಂಕಗಳನ್ನು ಮುಚ್ಚುವದಕ್ಕಾಗಿಯೇ ವರ್ಕಿಂಗ ಕಮೀಟಿಯವರು ಇಷ್ಟು ಅವಸರ ಮಾಡಿರಬಹುದೆಂದು ಹೇಳಬಹುದು. ಇದರಿಂದ ಕಾಂಗ್ರೆಸದಲ್ಲಿ ಇಬ್ಬಣವಾಗುವ ಭಯವುಂಟಾಗಿದೆ. ಸ್ಪೇಶಲ ಆಲ ಇಂಡಿಯಾ ಕಾಂಗ್ರೆಸ ಕಮೀಟಿ ಕೂಡಿಸಿ, ವರ್ಕಿಂಗ ಕ

ವಿಷಯವು ಅಪ್ರಯೋಜಕ ಮತ್ತು ಅಪ್ರಸ್ತುತವ ಕೃತ್ಯದ ವಿಚಾರ ಮಾಡಬೇಕೆಂದು ಅಧ್ಯಕ್ಷರಿಗೆ ವಿನಂತಿ ಪತ್ರ ಕಳಿಸುವ ವಿಚಾರ ನಡೆದಿದೆ.

—o—

ಐರ್ಲಂಡದಲ್ಲಿ

ಶ್ರೀ ಪಟೇಲರ ಅಪೂರ್ವ ಸನ್ಮಾನ.

—o—

ಅಸೆಂಬ್ಲಿಯ ಅಧ್ಯಕ್ಷರಾದ ಶ್ರೀ ಪಟೇಲರು ಲಂಡನದಲ್ಲಿ ಭಾರತಮಂತ್ರಿ ಮತ್ತು ಮಂತ್ರಿಯ ಕೂಡ ಹಿಂದುಸ್ಥಾನದ ರಾಜಕಾರಣದ ಪ್ರಸ್ತಾಪ ಮಾಡಿದನಂತರ ಐರ್ಲಂಡಕ್ಕೆ ಹೋಗಿದ್ದಾರೆ. ಅಲ್ಲಿ ಇವರ ಸನ್ಮಾನ ಸಮಾರಂಭವು ಪ್ರೇಮಾತಿಶವಾಗಿ ನಡೆದಿದೆ. ಹಿಂದುಸ್ಥಾನದಂತೆ ಐರ್ಲಂಡವೂ ರಾಜಕೀಯ ದಾಸ್ಯತ್ವದಿಂದ [illegible]ತ್ತು. ಸ್ವಂತ ಪ್ರಯತ್ನದಿಂದ ಸ್ವರಾಜ್ಯ ಸುಖ ಸಂಪಾದಿಸಿತು [illegible] ಸಹಾನುಭೂತಿಯಿಂದ ಆ ದೇಶೀಯರು ಶ್ರೀ ಪಟೇಲರ ಸ್ವಾಗತ ಮಾಡಿದ್ದಾರೆ. ಅಲ್ಲಿ ಇವರು [illegible] ಪಾರ್ಲಮೆಂಟ ಸಭೆಗೆ ಹೋಗುವರು. ಅಧ್ಯಕ್ಷರು ಇವರ ಕೂಡ ವಿವಿಧ ವ[illegible]ಗಳನ್ನು ಕುರಿತು ಪ್ರಸ್ತಾಪಿಸುವರು. ಇವರಿಗಾಗಿ ವನಭೋಜನ [illegible]ಯಿತು. ಆಗ [illegible] ಪ್ರಮುಖ ಮಂಡಳಿಯೂ ಬೇರೆ ಪ್ರತಿಷ್ಠಿತ ನಾಗರೀಕರೂ ಇವರನ್ನು ಗೌರವದ ಶಬ್ದಗಳಿಂದ [illegible]ದರು. ಇಂಗ್ಲಂಡದ ಪತಿಯಿಂದ ಅಲ್ಲಿ ನ್ಯಾಯಸ್ಥರಾಗಿರುವ [illegible]ಸಾಹೇಬರು ಇವರನ್ನು ತಮ್ಮ [illegible] ಕರಕೊಂಡು ಹೋಗಿ, ಒಂದು ದಿವಸ ತಮ್ಮಲ್ಲಿಟ್ಟುಕೊಂಡು ಮೇಜವಾನಿಯಿಂದ ಬಹುಮಾನಗೊಳಿಸಿದರು. [illegible] ಸಭೆಯ ಅಧ್ಯಕ್ಷರು ಇವರನ್ನು ಮೋಟಾರದಲ್ಲಿ ಕೂಡಿಸಿಕೊಂಡು, ಐರ್ಲಂಡದ ಸೃಷ್ಟಿಸೌಂದರ್ಯವನ್ನೂ ಗ್ರಾಮಗಳ ವ್ಯವಸ್ಥೆಯನ್ನೂ ತೋರಿಸಿದರು. [illegible], ಶ್ರೀ ಪಟೇಲರು ಐರ್ಲಂಡಕ್ಕೆ ಸ್ವರಾಜ್ಯ ಸಂಪಾದಿಸಿಕೊಡಲು ಬ್ರಿಟಿಶ ಸರಕಾರದ ವಿರುದ್ಧ [illegible] ಮಾಡಿದ [illegible] ಭೆಟ್ಟಿಯೂ, [illegible] ಕೂಡ ಸಂಭಾಷಣೆಗೈದು, [illegible] ಪ್ರಯಾಣ ಬೆಳೆಸಿದ್ದಾರೆ. [illegible] ಇವರನ್ನು ಉತ್ಸಾಹದಿಂದ ಸತ್ಕರಿಸುವರು. ಅಗ್ಗಿ ಇವರ ಪರಿಚಯ ಮಾಡಿಕೊಳ್ಳಲು ಆ ದೇಶದ ಪ್ರಮುಖರಿಗೆಲ್ಲ ಆಮಂತ್ರಣ ಪತ್ರ ಕಳಿಸಿದ್ದಾರೆ.

ಸ್ವಾಮಿ ಶ್ರದ್ಧಾನಂದರ [illegible] ಅಬ್ದುಲ ರಶೀದನ [illegible] ವಿಚಾರಣೆಯು [illegible] ಹೋಲಿನ ಹಾಯಕೋರ್ಟಿನಲ್ಲಾಗಿ, ಅಪೀಲು ನಾಮಂಜೂರಾಯಿತು. [illegible] ಶಿಕ್ಷೆ ಸ್ಥಿರಪಡಿಸಲ್ಪಟ್ಟಿತು.

ಹಿಂದುಸ್ಥಾನದ ಮುಸಲಮಾನರೆಂಥವರು?

—o—

ಇವರೆಲ್ಲರೂ ಹಿಂದೂ ಆಗಬೇಕು.

—o—

ಡಾಕ್ಟರ ಮೂಂಜೆಯವರು ಹಿಂದುಸ್ಥಾನದಲ್ಲಿರುವ ಮುಸಲಮಾನರ ನಿಜಸ್ಥಿತಿಯ ವರ್ಣನೆಯನ್ನು ಈ ಪ್ರಕಾರ ಹೇಳುತ್ತಾರೆ-

" ಹಿಂದುಸ್ಥಾನದಲ್ಲಿ ವಾಸವಾಗಿರುವಂಥ ಮುಸಲಮಾನರು ಶುದ್ಧರಕ್ತದ ತುರುಕರೂ ಅಲ್ಲ; ಅಫಗಾಣರೂ ಅಲ್ಲ. ಇವರೆಲ್ಲರೂ ಜಾತಿ ಭ್ರಷ್ಟರಾದಂಥ ಹಿಂದೂ ಆಗಿದ್ದಾರೆ. ಸಂತೋಷ ಅಥವಾ ಅಸಂತೋಷದಿಂದ ಮುಸಲಮಾನರಾದಂಥವರು. ಇವರು ಪುನಃ ತಮ್ಮ ಪೂರ್ವಜರ ಹಿಂದೂ ಧರ್ಮದಲ್ಲಿ ಸೇರಬಹುದಾಗಿದೆ. ಹಿಂದೂ ಧರ್ಮದವರನ್ನು ಆಗತ್ಯವಾಗಿ ಪತಿತ ಪಾವನ ಮಾಡಿಕೊಳ್ಳತಕ್ಕದ್ದು. "

ಮುಸಲಮಾನರು [illegible] ಮಾಡುವ ಪ್ರಯತ್ನ ೨೭ ಕೋಟಿ ಹಿಂದೂ [illegible]ರನ್ನು ಮುಸಲಮಾನ ಮಾಡಬೇಕೆನ್ನುವದಕ್ಕಿಂತ ೭ ಕೋಟಿ ಮುಸಲಮಾನರೇ ಹಿಂದೂ ಧರ್ಮ ದೀಕ್ಷೆ ತಕೊಳ್ಳುವದೇ ಸುಲಭ ಸಾಧ್ಯವೆನಿಸುತ್ತದೆ.

ಧಾರವಾಡದಲ್ಲಿ

ಮಾವಿನ ಹಣ್ಣಿನ ಪ್ರದರ್ಶನವು.

—o—

ಈ ಸಾರೆ ಇಲ್ಲಿಯ ಒಕ್ಕಲತನದ ಸಂಘದವರು ಮಾವಿನ ಹಣ್ಣುಗಳ ಪ್ರದರ್ಶನ ಮಾಡುವರು. ಒಕ್ಕಲತನದ ಖಾತೆಯವರು ಪ್ರದರ್ಶನಕ್ಕೆ ಸಂಪೂರ್ಣ ಸಹಾಯ ಮಾಡಲೊಪ್ಪಿದ್ದಾರೆ. ಪ್ರದರ್ಶನವು ಜೂನ ತಿಂಗಳ [illegible] ನೆಯ ತಾರೀಖಿನ ದಿವಸ ಪ್ರಾರಂಭವಾಗಿ [illegible] ನೆಯ ತಾರೀಖಿನ ಸಾಯಂಕಾಲದಲ್ಲಿ ಮುಗಿಯುವದು. ಮಿ. ಕಲೆಕ್ಟರ ಸಾಹೇಬರು ಪ್ರದರ್ಶನ ತೆರೆಯುವ ಸಮಾರಂಭ ಮಾಡುವರು. ಕಡೆಯ ದಿವಸ ಪ್ರಥಮ ಸ್ಥಾನವನ್ನು [illegible]ವರಿಗಾಗಿ ಗೊತ್ತು ಮಾಡಿದ್ದಾರೆ. ಪ್ರದರ್ಶನಕ್ಕೆ ಹಣ್ಣುಗಳನ್ನು ಕಳಿಸತಕ್ಕವರು ಕನಿಷ್ಠ [illegible] ಹಣ್ಣುಗಳನ್ನು ಕಳಿಸಬೇಕು.

ಈ ವೇಳೆಯಲ್ಲಿ ಮಾವಿನ ಗಿಡಗಳ ಸಾಗವಳಿ, ಮತ್ತು ಮಾವಿನ ಹಣ್ಣಿನ ವ್ಯಾಪಾರ ವಿಷಯವಾಗಿ ತಜ್ಞರ ಭಾಷಣಗಳಾಗುವವು. ಇವುಗಳ [illegible] ಸಾಗವಳಿ, ಕಸಿಯ ಮಾಡುವ ರೀತಿ ರೋಗಗಳ ಚಿಕಿತ್ಸೆ, ರಸವನ್ನು ಡಬ್ಬಿಯಲ್ಲಿ ಹಾಕಿ, ಕಾಯಿಸುವಂಥ ಪ್ರಾತ್ಯಕ್ಷಿಕೆಗಳು ನಡೆಯಿಸಲ್ಪಡುವವು.

ಡಾಕ್ಟರ ಪಡಿಸೋರರಿಗೆ ಆಮಂತ್ರಣ

ಡಿಸೆಂಬರ ತಿಂಗಳಲ್ಲಿ ಮದ್ರಾಸದಲ್ಲಿ ಕೂಡುವ ಕಾಂಗ್ರೆಸ ಸಭೆಯ ದೆಸೆಯಿಂದ ಬೆಳಗಾವಿಯ ಪದ್ಧತಿಯಂತೆ ಸ್ವಯಂಸೇವಕರ ದಳವನ್ನು ಸಿದ್ಧ ಮಾಡುವದಕ್ಕಾಗಿ ಆಗತ್ಯ ಬರಬೇಕೆಂದು ಶ್ರೀ. ಶ್ರೀನಿವಾಸ ಅಯ್ಯಂಗಾರರು ಡಾಕ್ಟರ ಪಡಿಸೋರರಿಗೆ ಪತ್ರ ಬರೆದಿದ್ದಾರೆ. ಸೇವಾ ದಳದ ನಿರ್ಮಾಣಕ್ಕೆ ಪಡ್ಡುವ ವೆಚ್ಚವನ್ನು ಸ್ವಾಗತ ಕಮೀಟಿಯಿಂದ ಕೊಡುವಂತೆಯೂ [illegible]ವಂತೆಯೂ ಆಶ್ವಾಸನ [illegible].

ಇಜಿಪ್ತದ ಸ್ವಾತಂತ್ರ್ಯ

ಇಜಿಪ್ತ ದೇಶವು ಇಂಗ್ಲಂಡದ ಗುಲಾಮವಲ್ಲ. ಅದು ಸ್ವಾತಂತ್ರ್ಯವಾದದ್ದೆಂದು ಜಾಹೀರಾಗಬೇಕೆಂಬ [illegible] ದೇಶದಲ್ಲಿ ಹುಟ್ಟಿದೆ. ಈ ವಿಷಯವಾಗಿ ಅಲ್ಲಿನ [illegible] ಸಭೆಯಲ್ಲಿ [illegible] ನಡೆದಿದೆ.

ಕಲಕತ್ತೆಯ [illegible]ಲ್ಲಿ ಜ್ಯೂರಿಗಳ ಮುಂದೆ ಒಂದು ಖ[illegible] ವಿಚಾರಣೆ ನಡೆದಿತ್ತು. ವಿಚಾರಣೆಯಲ್ಲಿ [illegible] ಸಾಕ್ಷಿದಾರನ [illegible] ಆಗುತ್ತಿತ್ತು. ಆಗ ಜ್ಯೂರಿಯ [illegible] ಒಂದು ಪ್ರಶ್ನೆ ಕೇಳಬೇಕೆಂದು ಸರಕಾರೀ [illegible] ವ್ಯಕ್ತಿ [illegible] ಅದರ [illegible] ಆಕ್ಷೇಪಿಸಿ [illegible]. ವಿಚಾರಣೆಯ ಪೂರ್ವದಲ್ಲಿಯೇ ಜ್ಯೂರಿಗಳ [illegible] ಮಾಡದ [illegible] ಇವರಿಗೆ [illegible] ಕೊಟ್ಟು, ಹೊಸ ಜ್ಯೂರಿಯನ್ನು [illegible]ದರು.

ನಾಗೇಂದ್ರನಾಥ [illegible] ಗುರುದಾಸ [illegible] ಇವರಿಯಲ್ಲಿ [illegible] ಕ್ಯೂಲೇಶನ ಪರೀಕ್ಷೆ [illegible] ದಲ್ಲಿ ಎಮ್. ಬಿ. ದಲ್ಲಿ [illegible] ಬಂದನು. ಈಗ ಈತನನ್ನು [illegible] ಕಲಿಸುವ ಪ್ರೊಫೇಸರನಾಗಿ ನೇಮಿಸಿದ್ದಾರೆ.

ಮದ್ರಾಸದಲ್ಲಿ [illegible] ನೆಯಲ್ಲಿ [illegible] ವರದರಾಜಸ್ವಾಮಿ [illegible] ನು ಸತ್ತನು. ಆತನ ಅಂತ್ಯಸಂಸ್ಕಾರಕ್ಕೆ ಅನೇಕರು ರುದ್ರಭೂಮಿಗೆ ಹೋದರು. ಅದರಲ್ಲಿ ಒಬ್ಬ [illegible] ಇದ್ದನು. [illegible] ದೆಸೆಯಿಂದ ಈತನು ಶವದ ಮೇಲೆ ಅಕ್ಕೀಕಾಳು [illegible]. ಅಷ್ಟರಲ್ಲಿ ಹೀಗೆ ಮಾಡತಕ್ಕದ್ದಲ್ಲೆಂದು [illegible] ಹುಟ್ಟಿತು. [illegible] ಗಳಿಂದವು ಭಯಂಕರ ಹೊಡೆದಾಟವಾಯಿತು. ಒಬ್ಬನು ಸತ್ತನು. ಇನ್ನೊಬ್ಬನು ಮರಣೋನ್ಮುಖನಾಗಿದ್ದಾನೆ.

ಸಿಂಗಣ್ಣವರ ಎಲ್ ಬಿ
ಮುನ್ನೊಳ್ಳಿ ಗಟ್ಟಿ ಡಿ ವ್ಹಿ
ನೀಳಗಿ ಎ ಜಿ
ಸಿಪ್ಪಲ ದೇಸಾಯಿ ಡಿ ವ್ಹಿ

ಸವಲೂರ
ಅವಧಾನಿ ಎಸ್. ಎನ್. | ಕನ್ನಡ

ಜಂಗಲ ಸಿ ಜೀ ಇತಿಹಾಸ
ಮೊರೆ ಎಸ್ ಕೆ ಗಣಿತ

ಜಂತಲಿ ಎಮ್ ಆರ್
ಕುಲಕರ್ಣಿ ಎಸ್ ಎಫ್ | ಫಿಜಿಕ್ಸ್ ಅ್ಯಂಡ ಕೆಮಿಸ್ಟ್ರೀ

ಕರ್ನಾಟಕ ಹಾಯಸ್ಕೂಲ

ದೀಕ್ಷಿತ ಡಿ ಜಿ
ಕುಲಕರ್ಣಿ ಬಿ ಎಸ್
ಕುಲಕರ್ಣಿ ಆರ್ ಎಸ್
ಕಾನಡೆ ಟಿ ಡಿ
ಕೆ ಮಾಧವಭಟ್ಟ
ಮಠ ಎಸ್ ಎಮ್
ಪಾಟೀಲ ಸಿ ಎಮ್
ಪಾಟೀಲ ಸಿ ಎ
ಪೀರಜಾದೆ ಪಿ ಆರ್
ತೆಂಕ್ರೆ ಸಿ ಎಚ್
ಸುಬ್ರಾಯ ಎಚ್ ಜಿ
ವೈದ್ಯ ಜಿ ವ್ಹಿ
ಪಾಟೀಲ ಶೇಷಗಿರಿ ರಾಮಚಂದ್ರ

ನೋಟೀಸು.

ಸವದತ್ತಿ ಯಲ್ಲಮ್ಮಾ ಮ್ಯುನಿಸಿಪಾಲಿಟಿಯಿಂದಾ—

ಯಾವತ್ತು ಜನರಿಗೆ ತಿಳಿಸುವದೇನಂದರೆ ಚೈತ್ರ ಹುಣ್ಣಿವೆ (ಮುತ್ತೈದಿ ಹುಣ್ಣಿವೆ) ಯು ಶ್ರೀ ಯಲ್ಲಮ್ಮನ ಜಾತ್ರೆಯನ್ನು ಅನುಜಾಜು ಮತ್ತು ಬುದ್ಧ ಸವದತ್ತಿಯಲ್ಲಿ ಮಾರಿಕಾ ಬೇನೆಯು ಬಹಳ ಇದ್ದಬರಿಂದ ಮೆ. ಕಲೆಕ್ಟರಸಾಹೇಬರು ಬಾ. ನ. ಭಾ. ಇವರ ಹುಕುಂ ಪ್ರಕಾರ ತಾ|| ೧೨-೪-೧೯೨೭ ರಿಂದ ೨೦-೪-೧೯೨೭ ಪೂರಾ ವರೆಗೆ ಬಂದ ಇಟ್ಟಿತ್ತು. ಅದರ ನಂತ್ರಾ ಶ್ರೀ ದೇವಿಯ ದರ್ಶನಕ್ಕೆ ಬರತಕ್ಕ ಜನರಿಗೆ ಯಾವ ತರಹೇದ ಪ್ರತಿಬಂಧಕವಿರುವದಿಲ್ಲಾ ತಿಳಿಯುವದು:

ತಾ|| ೨೧—೫—೧೯೨೭ ಇಸ್ವಿ

G. M. KALADAGI,
President
Savadatti Yellamma Municipality

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೬ ರೂಪಾಯಿ.
೨—೩ ಗುಳಿಗೆ ಸೇವಿಸಿ ಒಂದು ವರ್ಷ ನಿರ್ಭಯರಾಗಿರಿ.
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ.

ಜಾಹೀರ ನೋಟೀಸು

ರಾ|| ರಾ|| ನಿಂಗಪ್ಪಾ ತಂದಿ ರಾಮಪ್ಪಾ ಹಡಪದ ಸಾ|| ರಡ್ಡೇರತಿಮ್ಮಾಪೂರ ತಾಲ್ಲೂಕ ಬಾದಾಮಿ ಇವರಿಗೆ—

ಈ ಕೆಳಗೆ ಸಹಿ ಮಾಡಿದವರು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ನನ್ನ ಕೂಡ ಕೆಲವು ದಿವಸ ಚಲೋ ರೀತಿಯಿಂದ ಪ್ರಪಂಚ ಮಾಡಿಕೋತಾ ಬಂದಿ ಈಗ ಅಜಮಾಸು ೬-೭ ವರ್ಷಗಳ ಕೆಳಗೆ ನನ್ನನ್ನು ನೀನು ನಿನ್ನ ಉಡಕೀ ಹೆಂಡತಿಯ ಮಾತು ಕೇಳಿ ನನ್ನ ಕೂಡಾ ವಿನಃಕಾರಣ ತಂಟೇ ತಗಿದು ನನ್ನನ್ನು ಹೊಡಿದು ಬಡಿದು ಮಾಡಿ ನನ್ನ ಮನಿಯನ್ನು ಬಿಟ್ಟು ಹೊರಗೆ ಹಾಕಿದಿ ನನ್ನನ್ನು ಹೊರಗೆ ಹಾಕುವ ಕಾಲಕ್ಕೆ ನನಗೆ ನನ್ನ ತವರ ಮನಿಯವರು ಕೆಳಗೆ ಬರೆದ ದಾಗೀನೆಗಳನ್ನು ಕೊಟ್ಟದ್ದು ಅದರ ವಿವರಾ—

ಭಂಗಾರದ ಒಳಿ ಜೋಡು ವಂದು ತೊಲಿ ೬ ಇದರ ಕಿಮ್ಮತ್ತು ರೂಪಾಯಿ ೧೩೦ ಬೆಳ್ಳಿ ಕೋಳಬಂದಿ ಜೋಡು ವಂದು ಅಜಮಾಸ ತೊಲಿ ೨೪ ಇದರ ಕಿಮ್ಮತ್ತು ರೂಪಾಯಿ ೧೮ ನತ್ತು ವಂದು ಇವರ ಕಿಮ್ಮತ್ತು ರೂಪಾಯಿ ೪೦ ಬೆಳ್ಳಿ ಜವಕಾ ವಂದು ಹೊಸ ತೊಲಿ ೧೬ ಅಜಮಾಸು ಕಿಮ್ಮತ್ತು ರೂಪಾಯಿಗಳು ೧೨ ಈ ಪ್ರಕಾರ ಕಿಮ್ಮತ್ತಿನ ದಾಗೀನೆಗಳನ್ನು ನನ್ನ ತವರ ಮನಿಯವರು ನನಗೆ ಕೊಟ್ಟದ್ದು ಅವುಗಳನ್ನು ಸಹಾ ಕಸಕೊಂಡು ಹೋದ್ದ ಅರಿವಿಲೆ ಹೊರಗೆ ಹಾಕಿದಿ ಅನಂತರಾ ನಾನು ನನ್ನ ತವರಮನಿಗೆ ಬಂದು ಎರಡನೇ ಭಾಡಿಗಿ ಮನಿಯನ್ನು ಹಿಡಿದು ರೊಟ್ಟೀ ಬೀಸಿ ನನ್ನ ಹೊಟ್ಟೆಯನ್ನು ತುಂಬಿಸಿಕೊಂಡೆ ಈಗ ಅಜಮಾಸು ೩-೪ ವರ್ಷಗಳ ಲಾಗಾಯಿತ ವಿಳಿಯಾಗದೆ ಭಯಂಕರ ದುಖ್ಖಾಳ ಬಿದ್ದು ಹೊಟ್ಟೆ ಒಟ್ಟಿಯ ಉಪಜೀವನದ ಕೆಲಸ ನಡಿಯುದಂತಾಯಿತು. ಕಾರಣ ನನ್ನ ಹೊಟ್ಟಿ ಬಟ್ಟಿಯ ಉಪಜೀವನದ ಸಲುವಾಗಿ ೨೦೦ ರೂಪಾಯಿ ಸಾಲಾ ಹೆಟ್ಟಿ ತುಂಬಿಕೊಂಡೆ ಈಗ ಸಾವಕಾರರಲ್ಲಿ ಮಾಡಿದ ದೇಣೆದ ತಗಾದಿ ಬಹಳ ಆದ್ದರಿಂದ ಈ ನೋಟೀಸು ಕೊಡುವ ಭಾಗ ಬಿತ್ತು. ಈ ನೋಟೀಸು ಮುಟ್ಟಿದ ೮ ದಿವಸಗಳಲ್ಲಿ ನನ್ನ ತವರಮನಿಯವರು ನನಗೆ ಕೊಟ್ಟ ದಾಗೀನೆ ಮತ್ತು ನಾನು ಸಾಹುಕಾರರಲ್ಲಿ ಮಾಡಿದ ಸಾಲಾ ಫೇಡ ಮಾಡಿ ನಾಲ್ಕು ಮಂದಿ ಸಂಭಾವಿತರ ಸಮಕ್ಷಮ ಯೋಗ್ಯ ವಹಿವಾಟ ಜಾಮೀನು ಕೊಟ್ಟು ದೇಣೆದ ಫೇಡಿಯ ಬಗ್ಗೆ ಎರಡನೇದವನನ್ನು ಉಡಕೀ ಮಾಡಿಕೊಂಡು ಹೋಗುತ್ತೇನೆ ಆ ಮೇಲೆ ನನ್ನ ಮೇಲೆ ವ ನನ್ನ ಉಡಕೀ ಆದ ಗಂಡನ ಮೇಲೆ ಯಾವ ತರದ ಮಾಲ್ಕೀ ಆಗರ ಹಕ್ಕು ಉತ್ಪನ್ನವಾಗಲಾರದು ಇದೇ ಸೋಡಚೀಟಿ ಅಂತಾ ತಿಳಿಯತಕ್ಕದ್ದು ಈಗ ಮಾಡಿದ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಇರುತ್ತದೆ. ತಿಳಿಯೋದು.

ತಾ|| ೨೨-೫-೧೯೨೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಬಸವ್ವಾ ಕೋಂ ನಿಂಗಪ್ಪಾ ಈಕೀದು ಅದೆ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ್ವ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀಲಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ [illegible] ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತಾರ್ಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಬುಧವಾರ ತಾರೀಖು ೭ನೇ ಮೇ ೧೯೩೭ | ಸಂಚಿಕೆ ೧೦೭

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಅಸುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ಜಾಹೀರ ನೋಟೀಸು.

ಹೊಲಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ॥ ಸ॥ ನಂಬರ ೩೨ ಯಕರೆ ೧೧।೧೭ ತರಮ ೮೦ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಪತ್ತಾರ ಇವರ ಮನೆ ಆಲೂರಲ್ಲಿ ಇದ್ದು ಉಘಡ ಲಿಲಾವಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ॥ ೩೧ ನೇ ಮಾಹೆ ಮೆ ಸನ್ನ ೧೯೩೭ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮಧ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಲಿಲಾವಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖು ೨೩ನೇ ಮಾಹೆ ಎಪ್ರಿಲ ೧೯೩೭ ಇಸ್ವಿ

G. V. DESHPANDE,
Dy. Nazir & Guardian of
Shrinivas & Ramachandra Alur.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಯಮ ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುಕುಂದರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೭—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೫-೫-೨೭ ನೇ ಇಸ್ವಿ

ಮ್ಯಾಟ್ರಿಕ್ ಪರೀಕ್ಷೆ.
ಕನ್ನಡ ತೆಗೆದುಕೊಂಡು ಮೂರ್ಖರಾದೆವು?

ಕಳೆದ ವರ್ಷದಿಂದ ಎಸ್. ಎಲ್. ಸಿ. ಪರೀಕ್ಷೆಗೆ ಸಂಸ್ಕೃತದ ಬದಲು ಕನ್ನಡವನ್ನು ತೆಗೆದುಕೊಳ್ಳಬಹುದೆಂದು ಮುಂಬಯಿಯ ವಿಶ್ವವಿದ್ಯಾಲಯದವರು ನಿರ್ಣಯಿಸಿದ್ದು ಈ ವರ್ಷ ಸುಮಾರು ಆರು ನೂರಕ್ಕಿಂತ ಹೆಚ್ಚು ಹುಡುಗರು ಕನ್ನಡವನ್ನು ಆರಿಸಿಕೊಂಡಿರುವರೆಂದು ತಿಳಿದು ಬಂದಿದೆ. ಜಪತೆ ಕನ್ನಡದ ಪರೀಕ್ಷೆಯು ನಡೆದ ದಿನ ಸಾಯಂಕಾಲದಲ್ಲಿ ಹುಡುಗರು ತಿರುಗಿ ಬರುವಾಗ ಎತ್ತ ನೋಡಿದರೂ ಪರೀಕ್ಷೆಯ ಪ್ರಶ್ನೆಗಳ ವಿಷಯವಾಗಿಯೇ ದುಃಖೋದ್ಗಾರಗಳು ಕೇಳಿ ಬರುತ್ತಿದ್ದವು. ಕೆಲ ಕೆಲವು ಜಾಣ ಹುಡುಗರು ಕಟುತರವಾದ ಟೀಕೆಗಳನ್ನು ಮಾಡುತ್ತಿದ್ದರು. ಕನ್ನಡದ ಪಂಡಿತರನ್ನು ಮನಬಂದಂತೆ ಅಂದುಕೊಂಡರು. ಕೆಲವರಂತೂ "ಕನ್ನಡ ತೆಗೆದುಕೊಂಡು ಕೇವಲ ಮೂರ್ಖರಾದೆವೆಂದು ಅಂದು ಬಿಟ್ಟರು!" ಅವರು ಹೇಳುವ ಮಾತುಗಳು ಸಾಧಾರಣವಾಗಿದ್ದವು. ಆ ಹೊತ್ತೇ ನಡೆದ ಮರಾಠಿಯ ಅಥವಾ ಸಂಸ್ಕೃತದ ಕಾಗದವನ್ನು ಕನ್ನಡದ ಕಾಗದಕ್ಕೆ ಹೋಲಿಸಿ ಎರಡಕ್ಕೂ ಹತ್ತಬಹುದಾದ ವೇಳೆಯನ್ನು ಅವರು ತುಲನೆ ಮಾಡಿ ತೋರಿಸುತ್ತಿದ್ದರು. ವಿದ್ಯಾರ್ಥಿಗಳ ಹೇಳಿಕೆಗಳನ್ನೆಲ್ಲ ಇಲ್ಲಿ ಸವಿಸ್ತಾರವಾಗಿ ಬರೆಯುವದು ಸಾಧ್ಯವಲ್ಲದ ಇದ್ದರೂ, ಈ ಪ್ರಶ್ನೆಗಳ ಸ್ವರೂಪ ವಿವೇಚನೆಯನ್ನೂ ಪರೀಕ್ಷಕರ ಪಾಂಡಿತ್ಯದ ನಿದರ್ಶನವನ್ನೂ ಜನತೆಗೆ ಮಾಡಿಕೊಡದಿದ್ದರೆ ನಮ್ಮ ಕರ್ತವ್ಯಕ್ಕೆ ಭಂಗಬಂದಂತಾಗುವದೆಂಬ ಭಾವನೆಯಿಂದ ತುಸು ತಡವಾಗಿಯೇ ಆದರೂ ಈ ಕೆಲಸಕ್ಕೆ ಕೈಹಾಕಬೇಕಾಗಿದೆ.

ವಿಶ್ವವಿದ್ಯಾಲಯದ ಅಧಿಕಾರಿಗಳು ಈ ಕಡೆಗೆ ಯೋಗ್ಯಲಕ್ಷ್ಯವನ್ನು ಪೂರೈಸದೆ ಹೋದರೆ ಕನ್ನಡಕ್ಕೆ ಸ್ವತಂತ್ರತೆಯನ್ನು ಕೊಟ್ಟಿರುವೆವೆಂಬ ಹೇಳಿಕೆಯು ಕೇವಲ ಕಾಗದದಲ್ಲಿಯೇ ಉಳಿಯುವದು. ಮತ್ತು ಈ ಪ್ರಕಾರವಾಗಿ ಕನ್ನಡವನ್ನು ಆರಿಸಿಕೊಳ್ಳುವ ಹುಡುಗರ ಸಂಖ್ಯೆಯು ದಿನ ದಿನಕ್ಕೆ ಕಡಿಮೆಯಾಗುತ್ತ ಹೋಗುವದರಲ್ಲಿ ಸಂಶಯವಿಲ್ಲ. ಕನ್ನಡವು ಮಾತೃಭಾಷೆಯಾಗದ ಹಾಗು ಸರಕಾರದ ಕಾಗದ ಪತ್ರಗಳಲ್ಲಿಯಷ್ಟೇ ಕನ್ನಡ ಪಂಡಿತರೆಂದು ಪ್ರಸಿದ್ಧರಾಗಿರುವ ತೋರಿಕೆಯ ಭಾಷಾಭಿಜ್ಞರನ್ನು ಪರೀಕ್ಷಕರನ್ನಾಗಿ ಆರಿಸಿರುವದೇ ಈ ತರದ ಗೊಂದಲಕ್ಕೆ ಕಾರಣವೆಂದು ಹೇಳಬಹುದು. ಆದ್ದರಿಂದ ಮುಂದಿನ ಸಾರೆ ಪರೀಕ್ಷಕರನ್ನು ಆರಿಸುವಾಗ ಈ ವಿಷಯದ ಕಡೆಗೂ ವಿಶ್ವವಿದ್ಯಾಲಯದ ಅಧಿಕಾರಿಗಳು ಲಕ್ಷ್ಯ ಪೂರೈಸುವದು ಅವಶ್ಯವಾಗಿದೆ.

ಈ ಪರೀಕ್ಷೆಯ ಪ್ರಶ್ನ ಪತ್ರಿಕೆಯ ವಿಷಯವಾಗಿ ಈ ಕೆಳಗೆ ಬರೆದಂತೆ ಆಕ್ಷೇಪಗಳಿರುವವು.

(೧) ಪ್ರಶ್ನೆಗಳು ಬಹಳ ಉದ್ದವಾಗಿರುವವು. ಅಂದರೆ ಮೂರು ತಾಸಿನ ಕಾಲಾವಧಿಯಲ್ಲಿ ಈ ಎಲ್ಲ ಪ್ರಶ್ನೆಗಳಿಗೆ ಪೂರ್ಣ ಉತ್ತರ ಬರೆಯುವದು ಪರೀಕ್ಷೆಗೆ ಕೂತ ವಿದ್ಯಾರ್ಥಿಗಳಿಗಂತೂ ಒತ್ತಟ್ಟಿಗಿರಲಿ ಯಾವ ಪಂಡಿತನಿಗೂ ಸಾಧ್ಯವಾಗಿಲ್ಲ.

(೨) ಕೆಲ ಕೆಲವು ಮಾತುಗಳು ಅನವಶ್ಯಕವಾಗಿ ವಿದ್ಯಾರ್ಥಿಗಳ ವೇಳೆಯನ್ನು ಹಾಳು ಮಾಡುವಂಥವುಗಳಾಗಿವೆ. ಭಾಮಿನಿ ವಾರ್ಧಿಕ ಷಟ್ಪದಿಗಳಂಥ ಮಾತ್ರಾ ವೃತ್ತಗಳಿಗೆ ಪ್ರಸ್ತಾರವನ್ನು ಬರೆಯಲಿಕ್ಕೆ ಹೇಳುವ ಕಾರಣವೇನು? (ಪ್ರಶ್ನೆ ೧ ಬ) ವೃತ್ತಗಳ ಹೆಸರು ಅವುಗಳ ಲಕ್ಷಣ ಇವುಗಳನ್ನು ಹೇಳಿದ ಬಳಿಕ ಉಳಿಯುವದಿನ್ನೇನು? ಅಕ್ಷರ ವೃತ್ತಗಳ ಪ್ರಸ್ತಾರವನ್ನು ಬರೆಯಲಿಕ್ಕೆ ಹೇಳುವದರಿಂದ ಏನಾದರೂ ಪ್ರಯೋಜನವಿದೆಯೆಂದು ಹೇಳಿದರೂ ಹೇಳಬಹುದು. ವಿದ್ಯಾರ್ಥಿಗಳಿಗೆ ಪ್ರಸ್ತಾರ ಹಾಕುವದರ ತಿಳುವಳಿಕೆಯಿರುವದೋ ಹ್ಯಾಗೆಂಬದನ್ನು ನೋಡುವದಿದ್ದರೆ ಒಂದೇ ನವನೆ ಮೂರು ವೃತ್ತಾರ್ಧಗಳಿಗೆ ಪ್ರಸ್ತಾರ ಹಾಕಲಿಕ್ಕೆ ಹೇಳಿರುವದು ಹ್ಯಾಗೂ ಸಮ್ಮತವಾಗಲಾರದು. ಈ ಪ್ರಶ್ನೆಯಲ್ಲಿ ವಾರ್ಧಿಕ ಹಾಗು ಭಾಮಿನಿ ಷಟ್ಪದಿಗಳಿಗೂ ಮತ್ತೇಭವಿಕ್ರೀಡಿತವೃತ್ತದ ಎರಡು ಚರಣಗಳಿಗೂ ಪ್ರಸ್ತಾರ ಹಾಕಲಿಕ್ಕೆ ಹೇಳಿದ್ದು ಕೇವಲ ಅನ್ಯಾಯದ್ದೇ ಸರಿ. ಈ ಕವಿತೆಗಳೊಳಗಿನ ಚರಣಗಳಿಗೆ ಪ್ರಸ್ತಾರ ಹಾಕಿಸುವದರ ಬದಲು ಒಂದೇ ಚರಣಕ್ಕೆ ಪ್ರಸ್ತಾರ ಕೇಳಿದ್ದರೆ ಸಾಕಾಗುತ್ತಿತ್ತು. ಪರೀಕ್ಷಕರಲ್ಲಿ ನಿಜವಾದ ಪಾಂಡಿತ್ಯವು ಇದ್ದಿದ್ದರೆ ಅಥವಾ ಅವನು ಅಧಿಕ ಪ್ರಸಂಗಿಯಲ್ಲದೆ ಇದ್ದರೆ, ಈ ಪ್ರಶ್ನೆಯ ಸ್ವರೂಪವು ಹೀಗಾಗಬಹುದಾಗಿತ್ತು!! "ಮೇಲಿನ ಪದ್ಯಗಳಲ್ಲಿ ಮೊದಲಿನ ಮೂರರ ವೃತ್ತಗಳು ಯಾವವು? ಅವುಗಳ ಲಕ್ಷಣ ಹೇಳಿರಿ. (ವೃತ್ತಗಳ ಲಕ್ಷಣಗಳನ್ನು ಕೇಳುವದು ಪಂಡಿತರ ಲಕ್ಷಣವು- ವ್ಯಾಖ್ಯೆಗಳನ್ನು ಕೇಳುವದು ಯಾವ ಲಕ್ಷಣವು?) ಮತ್ತು ಮೂರನೆಯ ಪದ್ಯದ ಮೊದಲನೆಯ ಚರಣಕ್ಕೆ ಪ್ರಸ್ತಾರ ಹಾಕಿರಿ" ಪದ್ಯಗಳ ಅರ್ಥವನ್ನು ಪದ ಲೋಪಮಾಡದೆ (ಪ್ರ. ೧ ಅ) ಬರೆಯಿರಿ ಅಂದರೆ ಇದಕ್ಕೆ ಅರ್ಥವೇನು? ವಿದ್ಯಾರ್ಥಿಗಳು ಹೆಚ್ಚು ಗೊಂದಲದಲ್ಲಿ ಬೀಳಲೆಂಬದೇ ಇದಕ್ಕೆ ಕಾರಣವಷ್ಟೆ?

೨ ಪ್ರಶ್ನೆಯ ಕಾಗದದಲ್ಲಿ ಮುದ್ರಣ ದೋಷಗಳು ವಿಪುಲವಾಗಿವೆ. ಇನ್ನು ಮೇಲೆ ಹೇಳಿದ ಮೊದಲನೆಯ ಮಾತಿನ ಬಗ್ಗೆ ನಾಲ್ಕು ಹೆಚ್ಚಿನ ಮಾತುಗಳನ್ನು ಬರೆಯುವೆವು.

(ಅ) ಮೊದಲನೆಯ ಪ್ರಶ್ನೆ (ಅ) ಗೂ ನಾಲ್ಕನೆಯ ಪ್ರಶ್ನೆಗೂ ಭೇದವೇನು?

ಕೆಳಗಿನ ಪದ್ಯಗಳ ಸರಳವಾದ ಅರ್ಥವನ್ನು ಬರೆಯಿರಿ ಪ್ರ (೧ ಅ) ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಸುಲು (ಲು?) ಭವಾದ ಕನ್ನಡದಲ್ಲಿ ಬರೆಯಿರಿ. (ಪ್ರ ೪) ನಮ್ಮ ಕಣ್ಣಿಗಂತೂ ಸುಲಭ ಹೋಗಿ ಸುಲುಭವಾದದ್ದರ ಹೊರತಾಗಿ ಹೆಚ್ಚಿಗೇನೂ ತೋರುವದಿಲ್ಲ.

ಪದ್ಯಗಳಿಗೆ ಅರ್ಥವನ್ನು ಕೇಳುವದರಲ್ಲಿ ಎರಡು ಉದ್ದೇಶಗಳಿರಬಹುದು.

(೧) ವಿದ್ಯಾರ್ಥಿಗಳು ತಮಗೆ ನಿಯಮಿಸಿಕೊಟ್ಟಿರುವ ಪದ್ಯಗ್ರಂಥಗಳನ್ನು ಓದಿ ಸರಿಯಾಗಿ ಅರ್ಥ ತಿಳಿದುಕೊಂಡಿರುವರೋ ಹ್ಯಾಗೆ (೨) ಮತ್ತು ಅಷ್ಟೇ ಗಹನವಾದ ಬೇರೆ ಕವಿತೆಗಳನ್ನು ಈಗ ತಾವು ಓದಿರುವ ಗ್ರಂಥಗಳ ಜ್ಞಾನಸಹಾಯದಿಂದ ಅರ್ಥ ಮಾಡಿಕೊಳ್ಳಲಿಕ್ಕೆ ಬರುವದೋ ಹ್ಯಾಗೆ? ಈ ಎರಡು ಮಾತುಗಳನ್ನು ಪರೀಕ್ಷಿಸುವದಕ್ಕಾಗಿ ೨೨+೧೬ (೧ ನೇ ಮತ್ತು ೪ ನೇ ಪ್ರ. ಗಳು) ೩೮ ಸಾಲು ಕವಿತೆಗಳ ಅರ್ಥವನ್ನು ಬರೆಯಲಿಕ್ಕೆ ಹೇಳಿರುವರು. ಇಷ್ಟು ಸಾಲದೆ ಸೋಮೇಶ್ವರಶತಕ ಜೈಮಿನಿ (ಪ್ರಶ್ನೆ ೨ ಅ. ಬ.) ಇವುಗಳ ಒಳಗಿನ ಎಷ್ಟು ಕವಿತೆಗಳ ಅರ್ಥವನ್ನು ಅವರು ಬರೆಯಬೇಕಾಗಿರುವದೆಂಬದನ್ನು ನೋಡಿರಿ. ವಿದ್ಯಾರ್ಥಿಗಳು ಕವಿತೆಗಳನ್ನು ಪಾಠ ಮಾಡಬೇಕೆಂದು ಪರೀಕ್ಷಕರು ಬಯಸುವರೋ ಹ್ಯಾಗೆ? ಅವಿಲ್ಲದಿದ್ದರೆ ಸೀತೆಯ ಕಣ್ಣಿಗೆ ತೋರಿದ ಮಹಾಟವಿಯನ್ನು ಅವರು ಹೇಗೆ ವರ್ಣಿಸಬೇಕು?

ಅದರಂತೆ ಗದ್ಯವಿಭಾಗದಲ್ಲಿಯ ೫-೬ ನೆಯ ಪ್ರಶ್ನೆಗಳು ಒಂದೊಂದು ಗ್ರಂಥಕ್ಕೆ ಸಂಬಂಧಿಸಿದವಾಗಿದ್ದರೂ ಎರಡನ್ನೂ ಕೂಡಿಸುವದಕ್ಕೆ ಪ್ರಶ್ನೆಯನ್ನು ಮಾಡಿ ಆ ವಾಕ್ಯಗಳನ್ನು ಕೇಳುವದರ ಬದಲು ನಾಲ್ಕು ವಾಕ್ಯಗಳಿಂದ ವಿದ್ಯಾರ್ಥಿಗಳ ಯೋಗ್ಯತೆಯನ್ನು ಪರೀಕ್ಷಿಸಬಹುದಾಗಿದ್ದೀತು.

ಇದೀ ಪ್ರಶ್ನೆಯ ಕಾಗದಕ್ಕೆ ಮೂರು ತಾಸು ಕಾಲಾವಧಿಯಿದ್ದು ಎರಡನೆಯ ವಿಭಾಗದೊಳಗಿನ ನಿಬಂಧ ಭಾಷಾಂತರಗಳಿಗೆಯೇ ತೀರ ಕಡಿಮೆಯೆಂದರೆ ಒಂದೂವರೆ ತಾಸಿನಷ್ಟು ಕಾಲವು ತೀರಿ ಹೋಗುವದು. ಆ ನಾಲು ನಿಬಂಧವನ್ನು ಬರೆಯು

ವದಕ್ಕೆ ತೀರ ಕಡಿಮೆಯೆಂದರೆ ಒಂದು ತಾಸು ಬೇಕಾಗುವದು. ನಿಬಂಧದ ಪ್ರಶ್ನ ಪದ್ಧತಿಯು ವಿಚಿತ್ರವಾಗಿದೆ. "ಆನೆ....ಹಾನಿ" ಈ ಪದ್ಯಾರ್ಥವನ್ನು ಅರ್ಥ ಮಾಡಿಕೊಂಡು ಅದರಲ್ಲಿರುವ ವಿಷಯವು ಯಾವದೆಂಬದನ್ನು ನಿರ್ಣಯಿಸುವದಕ್ಕೇನೇ ವಿದ್ಯಾರ್ಥಿಗಳಿಗೆ ೧೦ ನಿಮಿಷಗಳು ಬೇಕಾಗಬಹುದು ಇದೊಂದೇ ಪದ್ಯಾರ್ಥಕ್ಕೆ ಬೇರೆ ಬೇರೆ ಜನರು ಬೇರೆ ಬೇರೆ ರೀತಿಯಾಗಿ ವ್ಯಾಖ್ಯಾನ ಮಾಡಿಕೊಳ್ಳುವ ಸಂಭವವೂ ಇರುವದು. ಅಂತೂ ನಿಬಂಧಕ್ಕೆ ತೀರ ಕಡಿಮೆಯೆಂದರೆ ೧ ತಾಸು ವೇಳೆಯು ಬೇಕಾಗುವದು. ಮುಲ್ಕೀ ಪರೀಕ್ಷೆಯಲ್ಲಿ ಒಂದೇ ನಿಬಂಧಕ್ಕೆ (ಅವರು ಬರೆಯುವದೂ ೪೦-೫೦ ಸಾಲೆ ಸರಿ) ೨ ತಾಸು ವೇಳೆಯಿದೆ. ಇನ್ನು ಭಾಷಾಂತರಕ್ಕೆ ಅರ್ಧ ತಾಸು ವೇಳೆಯು ಬೇಕೇ ಬೇಕು. ಇಲ್ಲಿ ಕೊಟ್ಟಿರುವ ಇಂಗ್ಲಿಷ ವಾಕ್ಯಗಳನ್ನೇ ಒಮ್ಮೆಲೆ ಭಾಷಾಂತರ ಮಾಡಿ ಉತ್ತರದ ಕಾಗದದ ಮೇಲೆಯೇ ಬರೆಯುವದು ಮೆಟ್ರಿಕದ ವಿದ್ಯಾರ್ಥಿಗಳಿಗೆ ಒತ್ತಟ್ಟಿಗಿರಲಿ ಸಾಮಾನ್ಯ ಪದವೀಧರರಿಗೂ ಸಾಧ್ಯವಿದ್ದಂತೆ ತೋರುವದಿಲ್ಲ. ಮೊದಲೊಮ್ಮೆ ಕಚ್ಚಾ ಬರೆದುಕೊಂಡು ಅದನ್ನು ತಿದ್ದಿ ಉತ್ತರದ ಕಾಗದವನ್ನು ಬರೆದರೇನೇ ಅದು ಕೆಲಮಟ್ಟಿಗಾದರೂ ನೆಟ್ಟಗಾಗಬಹುದು. ಅಷ್ಟಾದರೂ ಇದರಲ್ಲಿ ಸೊಬತ್ರ್ಯುಟಿ ಈ ವರ್ಡನ ಮೀನಿಂಗ ಬಂದಿಲ್ಲ. ಇನ್ನೊಂದರಲ್ಲಿ ಮತ್ತೊಂದು ಫ್ರೇಜಿನ ವರ್ಡಿಂಗು ಸರಿಯಾಗಿಲ್ಲ ಎಂದು ಒಟ್ಟು ಇಡೀ ಭಾಷಾಂತರವನ್ನೇ ಕಾಟು ಹಾಕುವ ಪಂಡಿತ ಪರೀಕ್ಷಕರೇ ಇದ್ದೇ ಇರುವರು. ಹೀಗೆ ಒಂದೂವರ ತಾಸು ಹೋಗಿ ಬಿಟ್ಟ ಬಳಿಕ ೩೮ ಸಾಲು ಕವಿತೆಯ ಅರ್ಥವನ್ನು ಎಷ್ಟು ವೇಳೆಯಲ್ಲಿ ಬರೆಯಬೇಕು. ೫ ಬೇರೆ ಬೇರೆ ವಾಕ್ಯಗಳ ಪೂರ್ವಾಪರ ಸಂದರ್ಭವನ್ನು ಹೇಳುವ ಹಾಗೆ ಬೇರೆ ಬೇರೆ ಸನ್ನಿವೇಶವನ್ನು (೬-೭) ಗ್ರಂಥಕರ್ತನ ಅಭಿಪ್ರಾಯವನ್ನೂ (೫-೭) ಎಷ್ಟು ಕಾಲಾವಧಿಯಲ್ಲಿ ಬರೆಯಬೇಕು? ಸಮಾಸಗಳಿಗೆ ವಿಗ್ರಹವಾಕ್ಯಗಳನ್ನು ಬರೆಯುವದು ಯಾವಾಗ (ವಿಗ್ರಹವನ್ನು ಹೇಳಿದರೆ ಸಾಲದೋ? ವಿಗ್ರಹವಾಕ್ಯಗಳನ್ನು ಬರೆಯುವದೆಂದರೆ ಏನು?

ಮೂರು ತಾಸಿನ ಅವಧಿಯ ಕನ್ನಡದ ಕಾಗದದಲ್ಲಿ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಇರುವ ಇವೇ ಮಾರ್ಕುಗಳನ್ನೇ ನೋಡಿರಿ. ೮ ಸಾಲು ಕವಿತೆಗಳಿಗೆ ಅರ್ಥವನ್ನು ಬರೆದರೆ ತೀರಿತು. ೪ ಕವಿತೆಯೊಳಗಿನ ವಾಕ್ಯಗಳು ೪ ಗದ್ಯದೊಳಗಿನ ವಾಕ್ಯಗಳು ಇವುಗಳಿಗೆ ಅರ್ಥ ವಿವರಣೆ ಸಂದರ್ಭಗಳನ್ನು ಹೇಳಿದರೆ ಮುಗಿಯಿತು. ನಮ್ಮ ವಿಚಾರದ ಮೇರೆಗೆ ಈ ವರ್ಷದ ಮುಲಕೀ ಪರೀಕ್ಷೆಯ ಕನ್ನಡ ಕಾಗದದ ಉತ್ತರಕ್ಕೆ ೩ ತಾಸು ವೇಳೆಯಾದರೆ ಪ್ರಸ್ತುತದ ಕನ್ನಡ ಕಾಗದಕ್ಕೆ ಉತ್ತರ ಬರೆಯಲು ೮ ತಾಸು (ನಿಬಂಧದ ೨ ತಾಸು ಹಿಡಿದು) ಬೇಕಾಗಬಹುದು.

ಒಟ್ಟಿನ ಮೇಲೆ ಈ ಸಾಲಿನ ಮೆಟ್ರಿಕದ ಕನ್ನಡದ ಕಾಗದದಲ್ಲಿ ಏನೂ ಸ್ವಾರಸ್ಯವಿಲ್ಲ. ಬರೇ ಘೋಕಂಪಟ್ಟಿಯ ಪ್ರಶ್ನಗಳು; ಅವೂ ಹದಿನಾರನೇ ಶತಮಾನದ ಮಾದರಿಯವು, ಮುಂಜಾನೆಯಿಂದ ಸಂಜೆತನಕ ಕೂತು ಬರೆದರೂ ಮುಗಿಯದಷ್ಟು ಎಲ್ಲವೂ ಆರಾರು ಹರದಾರಿ ಉದ್ದದ್ದ ಪ್ರಶ್ನೆಗಳು ಪರೀಕ್ಷಕರಿಗೆ ಈ ಪ್ರಶ್ನೆಯ ಕಾಗದವನ್ನೇ ನಕಲು ಮಾಡಲಿಕ್ಕೆ ಎಷ್ಟು ಹೊತ್ತು ಹತ್ತಿದ್ದಿತೋ ತಿಳಿಯಲಿಲ್ಲ. ಈ ಪ್ರಶ್ನೆಯ ಕಾಗದವನ್ನು ನಕಲು ಮಾಡುವಾಗ ಪರೀಕ್ಷಕರ ಬಳಿಯಲ್ಲಿ ಗಡಿಯಾಳವಿದ್ದು ಅವರು ಅದನ್ನು ನೋಡಿ ತಮಗೆ ನಕಲು ಮಾಡಲಿಕ್ಕೆ ಎಷ್ಟು ವೇಳೆ ಹಿಡಿಯಿತೆಂಬದನ್ನು ನೋಡಿಕೊಂಡಿದ್ದರೆ. ಅವರು ಜವಾಗಿಯಾದ ಒಂದೆರಡು ಪ್ರಶ್ನೆಗಳನ್ನು ಕಾಟು ಹಾಕಿ ಕಡಿಮೆ ಮಾಡುತ್ತಿದ್ದರೆಂದು ನಾವು ಧೈರ್ಯವಾಗಿ ಹೇಳುವೆವು.

ವಿಶ್ವವಿದ್ಯಾಲಯದ ಯೋಗ್ಯ ಅಧಿಕಾರಿಗಳು ಇನ್ನು ಮುಂದಾದರೂ ಈ ತರದ ತೊಂದರೆಗಳು ಉಂಟಾಗದಂತೆ ಯೋಗ್ಯ ಪರೀಕ್ಷಕರನ್ನು ಆರಿಸಿ ಪರೀಕ್ಷಕರಿಗೆ ಈ ತರದ ಪೂರ್ವ ಸೂಚನೆಗಳನ್ನು ಕೊಡುವರೆಂದು ನಾವು ಸೂಚಿಸಿರುವೆವು. ಮತ್ತು ಪ್ರಶ್ನೆಯ ಕಾಗದಗಳನ್ನು ಮುದ್ರಿಸುವಾಗ ಒಂದೆರಡು ರೂಪಾಯಿಗಳನ್ನು ಹೆಚ್ಚಿ ಕೊಟ್ಟು ಯೋಗ್ಯ ಪ್ರೂಫರೀಡರರನ್ನು ನೇಮಿಸುವರೆಂದೂ ಆಶಿಸುವೆವು. ಉಪನೇತ್ರದ ಸಹಾಯದಿಂದ ಓದುವ ಮುಳ್ಳುಗಣ್ಣಿನವರಿಗೆ ಪ್ರೂಫುಗಳನ್ನು ಓದುವಾಗ ದೃಷ್ಟಿಯು ಅಷ್ಟು ಚುರುಕಾಗಿಂದೆ ಇದ್ದುದರಿಂದಲೋ ಅಥವಾ ಮನಸ್ಥೈರ್ಯವಿಲ್ಲದ ಚಂಚಲ ಚಿತ್ತದವರನ್ನು ಈ ಕೆಲಸಕ್ಕೆ ನಿಯಮಿಸಿದ್ದರಿಂದಲೋ ಇಷ್ಟೊಂದು ದೋಷಗಳು ಅದರಲ್ಲಿ ಸೇರಿರಬೇಕೆಂದು ನಮ್ಮ ತರ್ಕವಿದೆ.

ತ್ರಾವಣಕೋರದ ರಾಜಧಾನಿಯಾದ ತ್ರಿವೆಂದ್ರಮದಲ್ಲಿ ಪ್ರೊಫೇಸರರಾಗಿರುವ ಕರುಣಾಕರ ಮೆನಾನರೆಂಬವರು ಒಬ್ಬ ಜರ್ಮನ ಕನ್ನಿಕೆಯ ಕೂಡ ವಿವಾಹ ಮಾಡಿಕೊಂಡರು. ವಿವಾಹ ಸಮಾರಂಭವು ಥಿಯ್ಯಾಸಂಘದ ಗುರುಗಳಾದ ಶ್ರೀ. ನಾರಾಯಣಸ್ವಾಮಿಯವರ ಸನ್ನಿಧಾನದಲ್ಲಾಯಿತೆಂಬದೊಂದು ಮಹತ್ವದ ಸಂಗತಿಯು.

ಮ್ಯಾಟ್ರಿಕ ಪರೀಕ್ಷೆಯ ಪರಿಣಾಮ.

ಹಾಯಸ್ಕೂಲ

ಅಮೀಲಾಡಿ ಆರ್ ಕೆ
ಟೊಂಬೆ ಎಸ್ ಆರ್
ಬಾರಕೆ ಎ ಎಸ್
ಹಬ್ಬು ಎಮ್ ಕೆ
ಜೋಶಿ ಎಸ್ ಆರ್
ಮುದಭಾವಿ ಎಸ್ ಎಮ್
ನಾಗರಕಟ್ಟಿ ಕೆ ಡಿ
ಪರ್ವತೀಕರ ಜೆ ಪಿ
ರಹಾಪೂರಕರ ಜಿ ಡಿ
ಪಾರಖಿ ಎಸ್ ಬಿ
ಕೇಳಕರ ಎನ್ ಡಬ್ಲ್ಯು
ಪೋತನೀಸ ಆರ್ ಎನ್
ಕೊಣ್ಣೂರ ಆರ್ ಜಿ
ಭಡಕಮ್ಕರ ಎಮ್ ಆರ್
ಬಾಣದ ಎಸ ಬಿ
ಹೊಸಳ್ಳಿ ಎನ್ ಎಮ್
ಕಲ್ಲಾಳ ಬಿ. ಜಿ.
ದೇಸಾಯಿ ಆರ್ ಎಸ್
ಪಾಟೀಲ ವ್ಹಿ ಬಿ
ಕುಲಕರ್ಣಿ ಎಸ್ ಜಿ
ಜಮಖಂಡಿ ಎಚ್ ಜಿ
ಪಾಟೀಲ ಎಚ್ ವ್ಹಿ

ಸ್ಕೂಲ ಲೀವ್ಹಿಂಗ

ಗೂಗ್ಗಿ
ಕೋಟ್ನೀಸ್‌ಮಠ

ನ್ಯೂ ಇಂಗ್ಲಿಷಸ್ಕೂಲ.

ಕುಲಕರ್ಣಿ ಎಸ್ ವ್ಹಿ
ಮೊಗಸಿನಕಾಯಿ ವ್ಹಿ ವ್ಹಿ
ಮೋಡಕ ಡಿ ಪಿ
ಮುನವಳ್ಳಿ ಎಸ್ ಜೀ
ನಾಡಪುರೋಹಿತ ಆರ್ ಎಮ್
ಯಾದಪ್ಪನವರ ಎಸ್ ಎನ್
ಜಮನೀಸ ಎಸ್ ಎಚ್
ಮುತಾಲಿಕ ಎಮ್ ವ್ಹಿ
ಲಕ್ಷ್ಮೇಶ್ವರ ಜೀ ವ್ಹಿ
ಮುಮ್ಮಿಗಟ್ಟಿ ಜೀ ವ್ಹಿ
ರಾಯಬಾಗಿ ವಾಯ್ ಸೀ
ನಾಡಗೇರ ಬಿ ಕೆ
ಟೊಣಪಿ ಬಿ ಕೆ
ನಾಡಗೇರ ಆರ್ ಎಮ್

ಜಾಹೀರ ನೋಟೀಸು.

ಅಣ್ಣಿಗೇರಿ ಕೋ. ಆ. ಗ್ಯಾರಂಟಿಯಿಂಗ ಯುನಿಯನ್ ಅಣ್ಣಿಗೇರಿ ತಾಲೂಕ ನವಲಗುಂದ ಜಿಲ್ಲಾ ಧಾರವಾಡ ಈ ಸಂಘವನ್ನು ಮೆ. ರಜಿಸ್ಟ್ರಾರಸಾಹೇಬ ಬಹಾದ್ದೂರ ಕೋ. ಆ. ಸೊಸಾಯಿಟೀಜ ಬೊಂಬೆ ಪ್ರೆಸಿಡೆನ್ಸಿ ಪುಣಾ ಇವರು ರದ್ದ ಪಡಿಸಿ ಈ ಕೆಳಗೆ ಸಹಿ ಮಾಡಿದವರಾದ ಖಾನಸಾಹೇಬ ಎಮ್. ಎ. ಖುದಾವಂದ ಡಿಸ್ಟ್ರಿಕ್ಟ ಆನರರಿ ಆರ್ಗನಾಯಝರ ಕೋ. ಆ. ಸೊಸಾಯಿಟಿಜ ನವಲಗುಂದ ಇವರನ್ನು ಸದರ ಸಂಘದ ಲಿಕ್ವಿಡೇಟರನ್ನಾಗಿ ನೇಮಿಸಿದ ಬಗ್ಗೆ ತಮ್ಮ ಪತ್ರ ನಂಬರ ೭೦೫೧ / ೧೧-೩-೨೭ ನೇ ದಿನಸ ತಿಳಿಸಿರುತ್ತಾರೆ. ಕಾರಣ ಈ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ-

ಸದರ ಸಂಘದಿಂದ ಯಾರಿಗಾದರೂ ಹಣ ವಸೂಲಿ ಬರತಕ್ಕದ್ದು ಇದ್ದರೆ ಆ ಸಮ್ಮಂಧಿ ಯಾವತ್ತು ಹಕೀಕತ ನಮ್ಮ ಕಡೆಗೆ ಅಂದರೆ ಕೆಳಗೆ ಸಹಿ ಮಾಡಿದವರ ಕಡೆಗೆ ಸಮಕ್ಷಮ ಬಂದು ಅರಗ [illegible] ಅರ್ಜಿಯಿಂದ ಈ ನೋಟೀಸ ಪ್ರಸಿದ್ಧವಾದ ಎರಡು ತಿಂಗಳದೊಳಗಾಗಿ ತಿಳಿಸತಕ್ಕದ್ದು ಈ ಮುದ್ದತಿನೊಳಗಾಗಿ ತಿಳಿಸದೆ ಇದ್ದರೆ ಆ ಬಗ್ಗೆ ವಿಚಾರ ಮಾಡಲಿಕ್ಕೆ ಬರುವ ಹಾಗೆ ಇಲ್ಲಾ ತಿಳಿಯುವದು

M A KHUDAVAND.

ನವಲಗುಂದ
ತಾ. ೨೦-೫-೨೭

ಡಿಸ್ಟ್ರಿಕ್ಟ ಆನರರಿ ಆರ್ಗನಾಯಝರ ಕೋ ಆ ಸೊಸಾಯಿಟಿಜ ವ ಲಿಕ್ವಿಡೇಟರ ಅಣ್ಣಿಗೇರಿ ಕೋ ಆ ಗ್ಯಾರಂಟಿಯಿಂಗ ಯುನಿಯನ ನವಲಗುಂದ

ನೋಟೀಸಿನ ಉತ್ತರಾ

ಬಸವಣ್ಣೆ ಕೋಂ ಫಕೀರಪ್ಪಾ ಹಂಚಿನಾಳ ಸಾ॥ ನಲ್ವತ್ತಿ ಈಕೆಗೆ—

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಫಕೀರಪ್ಪಾ ತಂದಿ ಚನ್ನಬಸಪ್ಪಾ ಹಂಚಿನಾಳ ಈತನು ನಿನಗೆ ಈ ನೋಟೀಸಿನಿಂದ ಪ್ರತ್ಯುತ್ತರ ಕೊಡುವದೇನಂದರೆ-

ನೀನು ನನ್ನ ಮೇಲೆ ವಿಜಯದಲ್ಲಿ ತಾ, ೧೨ ನೇ ಮೇ ೧೯೨೭ನೇ ದಿವಸ ಕೊಟ್ಟ ನೋಟೀಸು ಮುಟ್ಟಿತು ಮಜಕೂರು ತಿಳಿಯಿತು ಆದರೆ ಸದರ ನೋಟೀಸಿನಲ್ಲಿ ಬರೆದ ಯಾವತ್ತು ಸಂಗತಿ ಸುಳ್ಳು ಮತ್ತು ಮತಲಬೀದು ಇರುತ್ತದೆ ನಾನು ನಿನಗೆ ಯಾವಾಗಲೂ ಪೀಡಿಸಿಲ್ಲ ನಿನ್ನ ತವರ ಮನೆಯವರು ದೀವಳಿಗೆ ಹಬ್ಬಕ್ಕೆ ಕರಿಯಲಿಕ್ಕೆ ಬಂದಾಗ ಸಂತೋಷದಿಂದ ಕಳಿಸಿದ್ದೇನೆ ಆಗ ಮೈ ಮೇಲೆ ಯಾವತ್ತು ದಾಗೀನೆ ಹಾಕಿಕೊಂಡು ಹೊಸ ತೀರೆ ತಕ್ಕೊಂಡು ಹೋಗಿರುತ್ತೀದಿ ನಿನ್ನ ತವರ ಮನೆಯವರು ತಮ್ಮ ಅಡಚಣಿಯ ದೆಸೆಯಿಂದ ನನ್ನ ದಾಗಿನೆ ಪತ್ತೀ ಇಟ್ಟು ತಮ್ಮ ಗರಜು ಸಾಗಿಸಿಕೊಂಡ ಸುದ್ದೀ ಕೇಳಿ, ನಾನು ಬಂದು ಕೇಳಲಾಗಿ ನಿಜ ಸಂಗತಿಯು ತಿಳಿಯಬಹುದು ಆಗಿನಿಂದ ಮುಸುಮುಸಿ ನಡೆದು ಈಗ ಸುಳ್ಳೇ ನೋಟೀಸು ಕೊಟ್ಟಿರುತ್ತೀದಿ ನಾನು ನಿನ್ನ ಕೂಡ ಪ್ರಪಂಚ ಮಾಡಲಿಕ್ಕೆ ತಯಾರ ಇದ್ದೇನೆ ಆದರೆ ನೀನು ನನ್ನ ದಾಗೀನೆ ಮಾತ್ರ ಯಾವತ್ತೂ ತಕ್ಕೊಂಡು ಬರಬೇಕು. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ದಾಗೀನೆ ತಕ್ಕೊಂಡು ಬರದಿದ್ದರೆ- ನಿನ್ನ ಹಾಗು ತವರ ಮನಿಯವರ ಮೇಲೆ ಕಾಯದೆಶೀರ ಫೌಜದಾರಿಯಲ್ಲಿ ಫಿರ್ಯಾದಿ ಮಾಡುವೆನು ನೀನು ನಿನ್ನ ನೋಟೀಸಿನಲ್ಲಿ ಬರಕೊಂಡಂತೆ ಫಾರಿಕತ ಪಡೆಯಲಾರಿ ಗಂಡನಾದ ನಾನು ಕೊಟ್ಟರೇ ಸೋಡಪತ್ರ ಹುಟ್ಟುವದು ಈ ನೋಟೀಸಿನ ವಿರುದ್ಧ ನೀನು ಯಾರನ್ನಾದರೂ ಉಡಿಕಿ ಮಾಡಿಕೊಂಡರೆ- ನಿನ್ನ ಮೇಲೂ, ಆ ಉಡಕಿ ಗಂಡನ ಮೇಲೂ ಫೌಜದಾರಿಯಲ್ಲಿ ಫಿರ್ಯಾದಿ ಮಾಡುವೆನು ಅಂತಾ ಕೊಟ್ಟ ನೋಟೀಸು ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲಿರತದೆ ತಿಳಿಯುವದು ತಾರೀಖು ೨೪ ಮೇ ೧೯೨೭

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಫಕೀರಪ್ಪಾ ತಂದಿ ಚನ್ನಬಸಪ್ಪಾ ಹಂಚಿನಾಳ ಈತನ ಕೈದು ಇರುತ್ತದೆ.

ಜಾಹೀರ ನೋಟೀಸು

ರಾ॥ ರಾ॥ ನಿಂಗಪ್ಪಾ ತಂದಿ ರಾಮಪ್ಪಾ ಹಡಪದ ಸಾ॥ ಬದ್ದೇರತಿಮ್ಮಾಪೂರ ತಾಲ್ಲೂಕ ಬಾದಾಮಿ ಇವರಿಗೆ—

ಈ ಕೆಳಗೆ ಸಹಿ ಮಾಡಿದವಳು ಈ ನೋಟೀಸಿನಿಂದ ತಿಳಿಸುವದೇನಂದರೆ- ನೀನು ನನ್ನ ಲಗ್ನದ ಗಂಡನಿದ್ದು ನನ್ನ ಕೂಡ ಕೆಲವು ದಿನಸ ಚಲೋ ರೀತಿಯಿಂದ ಪ್ರಪಂಚ ಮಾಡಿಕೋತಾ ಬಂದಿ ಈಗ ಅಜಮಾಸು ೬-೭ ವರ್ಷಗಳ ಕೆಳಗೆ ನನ್ನನ್ನು ನೀನು ನಿನ್ನ ಉಡಕೀ ಹೆಂಡತಿಯ ಮಾತು ಕೇಳಿ ನನ್ನ ಕೂಡಾ ವಿನಾಕಾರಣ ತಂಟೇ ತೆಗಿದು ನನ್ನನ್ನು ಹೊಡಿದು ವ ಬಡಿದು ಮಾಡಿ ನನ್ನ ಮನಿಯನ್ನು ಬಿಟ್ಟು ಹೊರಗೆ ಹಾಕಿದಿ ನನ್ನನ್ನು ಹೊರಗೆ ಹಾಕುವ ಕಾಲಕ್ಕೆ ನನಗೆ ನನ್ನ ತವರ ಮನಿಯವರು ಕೆಳಗೆ ಬರೆದ ದಾಗೀನೆಗಳನ್ನು ಕೊಟ್ಟದ್ದು ಅದರ ವಿವರಾ—

ಭಂಗಾರದ ಒಳಿ ಜೋಡು ಒಂದು ತೊಲಿ ೩ ಇದರ ಕಿಮ್ಮತ್ತು ರೂಪಾಯಿ ೧೩೦ ಬೆಳ್ಳಿ ತೋಳಬಂದಿ ಜೋಡು ಒಂದು ಅಜಮಾಸ ತೊಲಿ ೨೪ ಇದರ ಕಿಮ್ಮತ್ತು ರೂಪಾಯಿ ೧೮ ನತ್ತು ಒಂದು ಇದರ ಕಿಮ್ಮತ್ತು ರೂಪಾಯಿ ೪೦ ಬೆಳ್ಳಿ ಪವಕಾ ಒಂದು ತೂಕ ತೊಲಿ ೧೬ ಅಜಮಾಸು ಕಿಮ್ಮತ್ತು ರೂಪಾಯಿಗಳು ೧೨ ಈ ಪ್ರಕಾರ ಕಿಮ್ಮತ್ತಿನ ದಾಗೀನೆಗಳನ್ನು ನನ್ನ ತವರ ಮನಿಯವರು ನನಗೆ ಕೊಟ್ಟದ್ದು ಅವುಗಳನ್ನು ಸಹಾ ಕಸಕೊಂಡು ಹೋದ್ದ ಅರಿವೆ ಹೊರಗೆ ಹಾಕಿದಿ ಆನಂತರಾ ನಾನು ನನ್ನ ತವರಮನಿಗೆ ಬಂದು ಎರಡನೇ ಬಾಡಿಗಿ ಮನೆಯನ್ನು ಹಿಡಿದು ಕೂಲೀ ನಾಲಿ ನನ್ನ ಹೊಟ್ಟೆಯನ್ನು ತುಂಬಿಕೊಂಡೆ ಈಗ ಅಜಮಾಸು ೩ ೪ ವರ್ಷಗಳ [illegible] ದುಷ್ಕಾಳ [illegible] ಟ್ಟಿಯ ಉಪಜೀವನದ ಸಲುವ [illegible] ನಾಲಾ ಮಾಡಿ ಹೊಟ್ಟೆ [illegible] ಪಕಾರದಲ್ಲಿ [illegible] ದ್ದರಿಂದ ಈ ನೋಟೀಸು [illegible] ಈ ನೋಟೀಸು [illegible] ನನ್ನ ತವರಮನಿಯವರು ನನಗೆ ಕೊಟ್ಟ ದಾಗೀನೆ [illegible] ನಾನು [illegible] ಮಾಡಿ ನಾಲ್ಕ [illegible] ಯೋಗ್ಯ ವ [illegible] ಕೊಂಡು ಹೋಗಬೇಕು. ಇಲ್ಲವಾದರೆ ದೇಶದ ಪೇಡಿಯ ಒಗ್ಗ ಎರಡನೇದವನನ್ನು ಉಡಕೀ ಮಾಡಿಕೊಂಡು ಹೋಗುತ್ತೇನೆ ಆ ಮೇಲೆ ನನ್ನ ಮೇಲೆ ವ ನನ್ನ ಉಡಕೀ ಆದ ಗಂಡನ ಮೇಲೆ ಯಾವ ತರದ ಪಾಲ್ಸೀ ಆಗರ ಹಕ್ಕು ಉತ್ಪನ್ನವಾಗಲಾರದು ಇದೇ ಸೋಡಚೀಟಿ ಅಂತಾ ತಿಳಿಯತಕ್ಕದ್ದು ಈಗ ಮಾಡಿದ ನೋಟೀಸಿನ ಖರ್ಚ ನಿನ್ನ ತಲಿಯ ಮೇಲೆ ಇರುತ್ತದೆ ತಿಳಿಯೋದು.

ತಾ॥ ೨೭ ೫-೧೯೨೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಬಸವ್ವಾ ಕೋಂ ನಿಂಗಪ್ಪಾ ಈಕೀದು ಅದೆ.

D. D. JOSHI,
Pleader

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾಣಿ ಆದರೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ದೇಶ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರು ಆ— ಇಂ ಗ್ಲಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ **ವಿಜಯ** ಬೆಲೆ ೧ ಆಣೆ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ.

[illegible] ಧಾರವಾಡ ಗುರುವಾರ [illegible] ಮೇ ೧೯೨೨ [illegible]

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳು ಅದು ನೀರಿನ ಡಬ್ಬಿಗಳನ್ನು ಹಿಡಿಸುವವು, ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಹಸು ಗಳುಂಟು. ಗಾಲಿಯ ವ್ಯಾಸವ ೩೭ ಇಂಚು ಇರುತ್ತದೆ. ಅದರಿಂದ ಬಾರಿಗೆ ೩೪ ಗ್ಯಾಲನ್ ನೀರಿನ ಭಾರವನ್ನು ಒಬ್ಬ ಹುಡುಗನಾಗಿ ಒಯ್ಯುತ್ತದೆ. ಗಾಡಿಕ್ಕೆ ನೀರಿನ ಕೋಡ ತೆಯು ಎಲ್ಲಾ ಕಡೆಗೂ ಉಂಟು. ಅದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೭೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಜಾಹೀರ ನೋಟೀಸು.

ಹೊಲಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕಾ ಯಾವ ತ್ತು ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ॥ ಸ॥ ನಂಬರ ೩೨ ಯಕರೆ ೧೧।೧೭ ತರನು ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ, ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಹರ್ತಿ ಇವರ ಮನೆ ಆಲೂರದಲ್ಲಿ ನೇದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ॥ ೩೧ ಮಾಹೆ ಮೆ ಸನ್ನ ೧೯೨೨ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವ ಡಿಯಲ್ಲಿ ಮಧ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕಾ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖು ೨೫ನೇ ಮಾಹೆ ಎಪ್ರಿಲ ೧೯೨೨ ಇಸ್ವಿ

G. V. DESHPANDE,
Dy. Nazir & Guardian of
Shrinivas & Ramachandra Alur.

ದಿ ಧಾರವಾಡ [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ವಿಶೇಷ ಸಂಗತಿಗಳನ್ನು [illegible] ತಿಳಿಕೊಳ್ಳಬೇಕು.

ಮ್ಯಾನೇಜಿಂಗ [illegible]

ದಿ ಧಾರವಾಡ [illegible]

[illegible]

ಈ ಬ್ಯಾಂಕಿನಲ್ಲಿ [illegible] ತಿಂಗಳ ಮುದ್ದತಿ [illegible] ಇಟ್ಟುಕೊಳ್ಳಬಹುದು. [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ರೀ ಇ ಟ್ಟುಕೊಳ್ಳುವ ಏರ್ಪಾಡು ದರಪ್ರ ಸಾರಕ್ಕೆ ತಿಂಗಳಿಗೆ [illegible] ಆಗಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ ”	೭—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೬-೫-೨೭ ನೇ ಇಸ್ವಿ

ಅಮೇರಿಕೆಗೆ ಹೋಗಿ ಬಂದವರ ಕೂಡ ಪ್ರತ್ಯಕ್ಷ ಪಂಙ್ತಿ ಭೋಜನವು.

ಧಾರವಾಡದಲ್ಲಿ ವಿಲಾಯತಿಗೆ ಹೋಗಿ ಬಂದಂಥ ಮತ್ತು ಹೋಗಿ ಬಂದವರ ಆಪ್ತೇಷ್ಟರ ಕೂಡ ಅನ್ನೋದಕದ ವ್ಯವಹಾರ ಮಾಡಿದಂಥ ಶ್ರೀಮದುತ್ತರಾದಿ ಮಠದ ಶಿಷ್ಯರ ಯೋಗ್ಯತೆಯನ್ನು ಹೇಗೆ ನೋಡಬೇಕೆಂಬ ದೊಡ್ಡ ವಾದವಿವಾದ ನಡೆದದೆ. ಶ್ರೀಗಳವರ ಸನ್ನಿಧಾನದಲ್ಲಿ ದಿನಾಲು ಇದೊಂದು ಚರ್ಚೆಯ ವಿಷಯವಾಗುತ್ತದೆ. ಶ್ರೀಗಳವರು ಧಾರವಾಡಕ್ಕೆ ಬಂದ ಮರುದಿವಸ ಒಬ್ಬ ಪ್ರಮುಖ ಗೃಹಸ್ಥರಿಗೆ ಮುದ್ರೆ ಹಾಕಿ, ಅವರನ್ನು ಪಾವನ ಮಾಡಿಕೊಂಡರು. ಇದೇ ಗೃಹಸ್ಥರು ಪುನಃ ಎರಡನೆಯ ಸಾರೆ ಇದೇ ಅಪರಾಧಕ್ಕಾಗಿ ತಪ್ತಮುದ್ರೆಯ ಪ್ರಾಯಶ್ಚಿತ್ತ ಪಡೆದರು. ಆದರೆ ಇವರೊಬ್ಬರೇ ಅಲ್ಲ. ಇನ್ನೂ ಅನೇಕರಿದ್ದಾರೆಂದು ಹಳ್ಳಿಯ ಕರ್ನಾಟಕವೃತ್ತದ ಸಂಪಾದಕರು ಬರೆದು, ಶ್ರೀಯುತರಾದ ನರಗುಂದಕರ ಮತ್ತು ಆಲೂರ ವೆಂಕಟರಾಯರ ಹೆಸರನ್ನು ಪ್ರಸಿದ್ಧ ಮಾಡಿದರು. ಅನಂತರ ಶ್ರೀ ನರಗುಂದಕರರು ಹೋಗಲಿಲ್ಲೆಂದು ಅವರ ಕ್ಷಮೆ ಬೇಡಿಕೊಂಡು, ಆ ಊಟದಲ್ಲಿ ತಾವೂ ಒಬ್ಬರಿದ್ದಂತೆ ಕಬೂಲಿ ಜವಾಬು ಕೊಟ್ಟಿದ್ದಾರೆ. ಆದರೆ ಆಯದು ಯಾರಾರು ಭೋಜನ ಮಾಡಿದರೆಂಬ ನಾಮಾವಳಿಯನ್ನು ಪ್ರಸಿದ್ಧ ಮಾಡಬೇಕೆಂದು ಇವರಿಗೆ ಆಗತ್ಯಗತ್ಯವೆಂದು ಕೆಲವರು ಹೇಳಿದರೂ ಇವರು ಹುಚ್ಚರ ಸೋಗು ವೈಮೇಲೆ ಹಾಕಿಕೊಂಡು ಹೆಸರುಗಳನ್ನು ಮುದ್ರಿಸಲು ಹೇಡಿತನ ತೋರಿಸಿದ್ದಾರೆ. ವಿಷಯ ಮಹತ್ವವನ್ನು ಅರಿತು ನಾವು ನಮಗೆ ದೊರೆತಷ್ಟು ಹೆಸರುಗಳನ್ನು ಇದರಡಿ ಮುದ್ರಿಸುತ್ತೇವೆ ಇವನ್ನು ಕೊಂಕಣಸ್ಥ ಗೃಹಸ್ಥರಾದ ಶ್ರೀ ವಿಠ್ಠಲರಾವ ಜೋಶಿ ವಕೀಲರು ನಮಗೆ ವಿಶ್ವಾಸಪೂರ್ವಕವಾಗಿ ಕೊಟ್ಟಿರುತ್ತಾರೆ.

ಇಲ್ಲಿಯ ಚಿಕ್ಕಲತನದ ಶಾಕೆಯಲ್ಲಿ ಅರಳಿಯ ವಿಷಯದಲ್ಲಿ ತಜ್ಞರಾದ ಶ್ರೀ ಅಣ್ಣಾರಾವ ಧಾರವಾಡಕರರು ಅಮೇರಿಕೆಗೆ ಹೋಗಿಬಂದಿದ್ದಾರೆ. ಶ್ರೀ ಸಿಡೇನೂರ ವಕೀಲರ ಮನೆಯಲ್ಲಾದ ಮೇಜವಾನಿಯಲ್ಲಿ ಇವರ ಜಾಕಿನಲ್ಲಿ ಇವರ ಕೂಡ ಭೋಜನ ಮಾಡಿದವರಾರಾರೆಂದರೆ-

ಶ್ರೀಯುತರಾದ

೧ ಕೃಷ್ಣರಾವ ಮುದವೇಡಕರ
೨ ವೆಂಕಟರಾವ ಮುದವೇಡಕರ
೩ ವಿಶ್ವನಾಥರಾವ ಹೇರಲೇಕರ ವಕೀಲ
೪ ಹಣಮಂತರಾವ ದೇಸಾಯಿ
೫ ವಿಶ್ವನಾಥರಾವ ಜೋಗಿ
೬ ದಿವಾನಬಹಾದ್ದೂರ ರೊದ್ದ
೭ ವಿಠ್ಠಲರಾವ ಜೋಶಿ
೮ ಗಂಗಾಧರರಾವ ಜೋಗಳೇಕರ ವಕೀಲ
೯ ಭೀಮರಾವ ದಿವೇಕರ ಬಿ. ಎ. ಆ|| ಡಿಪುಟಿ
೧೦ ಗುಂಜೀಕರ ವಕೀಲ

ಇನ್ನೊಂದು ಭಾಗದಲ್ಲಿ

೧೧ ಸಂಜೀವರಾವ ಆರೂರ ಸಾರಸ್ವತ
೧೨ ಕೃಷ್ಣರಾವ ರೊದ್ದ
೧೩ ಬೋಧರಾವ ಸಾಹುಕಾರ ವಕೀಲ
೧೪ ವಿಠ್ಠಲರಾವ ಮಂಗಳವೇಡೆಕರ ಮುನಸಫ
೧೫ ಡಾಕ್ಟರ ಗೋಖಲೆ
೧೬ ನವಲಗುಂದ ಆ|| ಡಿಪುಟಿ
೧೭ ವೆಂಕಟರಾವ ಆಲೂರ
೧೮ ಡಾಕ್ಟರ ಕಿರ್ಲೋಸ್ಕರ
೧೯ ರಾಮಬ್ರಹ್ಮ, ವಿಲಾಯತಿಗೆ ಹೋಗಿ ಬಂದವರು
೨೦ ಗರುಡಾಚಾರ್ಯ ವೆಟರನರಿ ಡಾಕ್ಟರ
೨೧ ಅಮ್ಮಿನಭಾವಿ ಮಾಸ್ತರ
೨೨ ಕೋರ್ಟಿನ ಬಹುತೇಕ ಕಾರಕೂನರು
೨೩ ಶ್ರೀನಿವಾಸ ನಾಯಿಕ- ಲಕ್ಷ್ಮೇಶ್ವರ ವಕೀಲರ ಬೀಗರು.

ಇವರ ಹೊರ್ತು ಅನೇಕರಿದ್ದರು. ಸ್ಥಳ ಸಂಕೋಚದ ಮೂಲಕ ಇಲ್ಲಿ ಬರೆದಿಲ್ಲ. ಮುದವೇಡಕರ ದ್ವಯರಾದ ಕೃಷ್ಣರಾವ ಮತ್ತು ವೆಂಕಟರಾಯರು ಶ್ರೀ ಧಾರವಾಡಕರರ ಎಡಬಲದಲ್ಲಿ ಕೂತಿದ್ದರು. ಆಲೂರ ವೆಂಕಟರಾಯರು ಬೇರೆ ಕಡೆಯಲ್ಲಿ ಕೂತಿದ್ದೆನೆಂದು ಹೇಳಿದರೂ, ಅಲ್ಲಿ ಶ್ರೀ. ರಾಮಬ್ರಹ್ಮರು ಇದ್ದೇ ಇದ್ದರು. ಮೇಲಿನ ಗೃಹಸ್ಥರಲ್ಲಿ ಏಳೆಂಟು ಜನರು ಶ್ರೀ ಸತ್ಯಧ್ಯಾನತೀರ್ಥರ ದೀಕ್ಷೆಗೆ ಪಾತ್ರರಾಗಿದ್ದಾರೆ. ಉತ್ತರಾದಿ ಮಠದವರಂತೆ ಮಾಧ್ವರಾದಂಥ ಶ್ರೀವ್ಯಾಸರಾಯ ಮತ್ತು ರಾಘವೇಂದ್ರಸ್ವಾಮಿಗಳ ಮಠಕ್ಕೆ ಸೇರಿದವರ ವಿಚಾರವೇನು? ಅವರು ಬೇರೆ ಕಡೆಗೆ ಭೋಜನಕ್ಕೆ ಹೋಗಿ, ಅವರು ವಿಲಾಯತಿಯ ಸಂಪರ್ಕ ಸಂಸರ್ಗ ಮಾಡುವದಿಲ್ಲವೇ? ದಿವಾನಬಹಾದ್ದೂರ ರೊದ್ದ ಶ್ರೀನಿವಾಸರಾಯರೂ ಶ್ರೀ ರೊದ್ದ ಕೃಷ್ಣರಾಯರೂ ವ್ಯಾಸರಾಯರ ಮಠಕ್ಕೆ ಹೋದವರು. ಸ್ವತಃ ಶ್ರೀ. ಸಿಡೇನೂರ ವಕೀಲರು ಶ್ರೀ. ರಾಘವೇಂದ್ರಸ್ವಾಮಿಗಳ ಮಠಕ್ಕೆ ಸೇರಿದವರು. ಈ ಸ್ವಾಮಿಗಳವರು ಶ್ರೀಸತ್ಯಧ್ಯಾನತೀರ್ಥರಿಗಿಂತ ಮುಂದಾಗಿ ಶ್ರೀ ಹಣಮಂತರಾವ ದೇಸಾಯಿಯವರ ಮನೆಯಲ್ಲಿ ಶ್ರೀ ರಾಮದೇವರ ಪೂಜೆ ಮಾಡಿ, ಅವರ ಮೇಲೆ ಅನುಗ್ರಹ ಮಾಡಿದ್ದಾರೆ. ಶ್ರೀ ಸತ್ಯಧ್ಯಾನ ಶ್ರೀಪಾದಂಗಳವರು ತಮ್ಮ ಶಿಷ್ಯರನ್ನು ಶುದ್ಧ ಮಾಡಿಕೊಂಡರೂ ಅದು ಕೇವಲ ಫಾರ್ಸ ಆಗುತ್ತದೆ. ಏಕೆಂದರೆ- ಬೇರೆ ಮಠದವರು ಒಂದಿಲ್ಲೊಂದು ಕಡೆಯಲ್ಲಿ ಇವರ ಕೂಡ ಉಂಡು, ಇವರನ್ನು ವಿಲಾಯತಿಯ ಸಂಪರ್ಕಗಳಲ್ಲಿ ಸೇರಿಸುವದು ನಿಜ. ಮತ್ತು ಈ ಕಾಲದಲ್ಲಿ ಈ ಸಂಸರ್ಗ ತಪ್ಪಿಸುವದು ಹರಿಹರಬ್ರಹ್ಮಾದಿಗಳಿಗೂ ಅಶಕ್ಯ.

ನಾಗಪೂರದ ಕಾಯದೆಭಂಗ-

ಈ ಕಾಯದೆಭಂಗದ ದೆಸೆಯಿಂದಲೇ ಸೇನಾಧ್ಯಕ್ಷ ಆವರಿ ಮತ್ತು ಕಾಶಿಯಿಂದ ಬಂದಿರುವ ನಿಜಾಮುದ್ದಿನನೆಂಬವನು ಭಾಷಣಗಳನ್ನು ಮಾಡಿ, ಪೋಲೀಸರಿಗೆ ಹೆದರಿಕೆ ಹಾಕಿದ್ದಾರೆ. ಯಾವನೊಬ್ಬ ಪೋಲೀಸನು ಸ್ತ್ರೀ ಸ್ವಯಂ ಸೇವಿಕೆಯರನ್ನು ದಸ್ತಗಿರ ಮಾಡುತ್ತಿರುವಾಗ, ಅವರ ಅಪಮಾನವಾಗುವಂಥ ಕೃತ್ಯ ಮಾಡಿದರೆ- ಅತನ ಕಣ್ಣು ಕಿತ್ತುವೆನು. ಮತ್ತು ಅವರ ಮಾನರಕ್ಷಣೆಗಾಗಿ ಜೀವ ಸಹ ಕೊಡುವೆನೆಂದು ನಿಜಾಮುದ್ದೀನನು ಪೋಲೀಸರಿಗೆ ಭಯ ಹಾಕಿದ್ದಾನೆ. ಗವ್ಹರ್ನರ ಸಾಹೇಬರೇ ಇಂಥ ಪ್ರಸಂಗವು ನಿಮ್ಮ ಮೇಲೆ ಬಂದಿದ್ದರೆ- ನಿಮಗೆ ಹೇಗೆ ಅನಿಸುತ್ತಿತ್ತೆಂಬದನ್ನು ಹೇಳಿರೆಂದು ಆವರಿಯು ಅವರಿಗೆ ಸವಾಲು ಹಾಕಿದ್ದಾನೆ ಕಾಂಗ್ರೆಸ ಸಭೆಯಿಂದ ತಮಗೆ ಅನುಮತಿ ದೊರೆಯುವದೆಂದೇ ಇವರ ದೃಢವಾದ ನಂಬಿಗೆಯಾಗಿದೆ.

ಸೇನಾಧ್ಯಕ್ಷನ ದಸ್ತಗಿರಿಯು-

ಶ್ರೀ ಮಂಚರಶಹಾ ಆವರಿಯು ಮೇಲಿನ ಭಾಷಣ ಮಾಡಿದ ನಂತರ ಅವರನ್ನು ಸರಕಾರದ ಸುದರ್ಶನ ಚಕ್ರ ಬೆನ್ನಟ್ಟಿತು. ಪೋಲೀಸರು ಇವರನ್ನು ದಸ್ತಗಿರ ಮಾಡಿದರು. ದಸ್ತಗಿರಿಯಾದ ಕೂಡಲೆ- ಪ್ರಜಾಸತ್ತಾತ್ಮಕ ಸೈನ್ಯದ ಒಬ್ಬ ಸಿಪಾಯಿಯು, ಪಟ್ಟಣಿಗರೇ ಆವರಿಯನ್ನು ಹಿಡಿದರು. ಸರಕಾರದ ಕೃತ್ಯ ನಿಷೇಧಿಸುವದಕ್ಕಾಗಿ ಭರತಾಳ [illegible], ಎಲ್ಲ ಉದ್ದಿಮೆ ವ್ಯವಹಾರ ನಿಲ್ಲಿಸಿರೆಂದು ಸಾರುತ್ತಾ ಹೋದನು. ಆವರಿಯು ಮೇಲೆ ರಾಜದ್ರೋಹ ಮತ್ತು ಧರ್ಮ ಧರ್ಮದಲ್ಲಿ ಅಸಂತೋಷ ಹುಟ್ಟಿಸುವ ಆರೋಪವಿಟ್ಟಿದ್ದಾರೆ. ನಿಜಾಮುದ್ದೀನನ ಬಂಟು ಕಾಲೂ ತುರಂಗದಲ್ಲಿರುವದು.

ಸುಧಾರಿಸಿದ ಪದ್ಧತಿಯ ಕಳವು–

ಮದ್ರಾಸ ಇಲಾಖೆಗೆ ಸೇರಿದ ಮೌನಾವರದ ಬೇಗಮಸಾಹೇಬರು ಮುಂಬಯಿಗೆ ಬಂದು, ವಾಳಕೇಶ್ವರದಲ್ಲಿ ಶಾಹೆರಮಹಾಲವೆಂಬಲ್ಲಿ ಇಳಕೊಂಡಿದ್ದಾರೆ. ಕಳೆದ ಸೋಮವಾರ ಬೆಳಗು ಮುಂಜಾನೆ ನಾಲ್ವರು ಮೋಟಾರಿನಲ್ಲಿ ಬಂದು, ತಾಢಮಹಾಲಿನಲ್ಲಿ ಹೊಕ್ಕು, ಒಡಿವೆಯ ಪೆಟ್ಟಿಗೆಯೊಡೆದು, ಹದಿನಾಲ್ಕು ಸಾವಿರ ರೂಪಾಯಿ ಬೆಲೆ ಬಾಳುವಷ್ಟು ಮುತ್ತು ರತ್ನದ ಆಭರಣಗಳನ್ನು ತಕ್ಕೊಂಡು, ಮೋಟಾರಿನಲ್ಲಿ ಕೂತು, ಕೃಷ್ಣಮುಖ ಮಾಡಿದ್ದಾರೆ. ಕನ್ನದ ಕಳವು ಹಿಂದಾಗಿ, ಮೋಟಾರಿನಿಂದ ಮಾಡುವ ಕಳವು ಮುಂದಾಯಿತು. ಎಲ್ಲ ಸುಧಾರಣೆಗಳ ಕೂಡ ಕಳವಿನದೂ ಸುಧಾರಣೆಯಾಯಿತು.

ಇಂಗ್ಲಂಡ ಮತ್ತು ರಶಿಯಾ–

ಇಂಗ್ಲಿಷ ಮುತ್ಸದ್ದಿಗಳು ಲಂಡನದಲ್ಲಿರುವ ಆರಕಾಸ ವ್ಯಾಪಾರದ ಮನೆಯನ್ನು ಜಪ್ತಿ ಮಾಡಿ, ಅದರಲ್ಲಿರುವ ಕಾಗದಪತ್ರಗಳನ್ನು ತಕ್ಕೊಂಡು ಹೋದನಂತರ ರಶಿಯಾ ಮತ್ತು ಇಂಗ್ಲಂಡದ ನಡುವೆ ಜುರುಕಿಯ ಪತ್ರವ್ಯವಹಾರ ನಡೆಯಿತು. ಇಂಗ್ಲಿಷ ಸರಕಾರದವರು ತಮಗೆಷ್ಟೆಂದರೂ ಸನಿಯನಾಗಿ ರಶಿಯಾ ಭೀತಿ ಇಲ್ಲದ್ದನ್ನು ಕಂಡು, ಈ ವಿಷಯವಾಗಿ ಖೇದವನ್ನೂ ವ್ಯಕ್ತಪಡಿಸುವದಿಲ್ಲ; ತಪಾಸಣೆಯಲ್ಲಿ ನಷ್ಟ ಹೊಂದಿದಂಥ ರಶಿಯರ ಹಾನಿಯನ್ನು ತುಂಬಿ ಕೊಡುವದಿಲ್ಲೆಂದು ಕಡ್ಡಾಯವಾಗಿ ಹೇಳಿ[illegible]. ಇಷ್ಟೇ ಅಲ್ಲದೆ, ಪಾರ್ಲಮೆಂಟ ಸಭೆಯಲ್ಲಿ [illegible] ಹೇಳಿ, ರಶಿಯಾದ ಕೂಡ [illegible] ವ್ಯಾಪಾರಸಂಬಂಧವನ್ನು ಕಡಕೊಂಡು ಈ ಮಟ್ಟಿ[illegible] ನಿಶ್ಚಯ ಮಾಡಿದ

ಜರ್ಮನರಿಗೆ ಕಿವಿಮಾತು–

ಲೋಕಾರ್ನೋದ ಒಡಂಬಡಿಕೆಯ ಮೇರೆಗೆ ಜರ್ಮನರು ಪೋಲಂಡ, ರೋಮಾನಿಯಾಗಳ ಮೇರೆಯಲ್ಲಿರುವ ಬಲವಾದ ಗಡಿದುರ್ಗಗಳನ್ನು ನಾಶ ಮಾಡಿ, ಅವಕ್ಕೆ ಜರ್ಮನಿಯ ಹೆದರಿಕೆಯಿಲ್ಲೆಂದು ತೋರಿಸಿಕೊಡತಕ್ಕದ್ದು. ಈ ಕೆಲಸವು ಇಷ್ಟರಲ್ಲಿ ಮುಗಿಯತಕ್ಕದ್ದು. ಕೋಟೆ ಕೊತ್ತಳಗಳ ನಾಶವು ಎಲ್ಲಿಗೆ ಬಂದಿದೆಂದು ನೋಡಲು ಪರರಾಷ್ಟ್ರ ತಜ್ಞರನ್ನು ಅಕ್ತಕಡೆಗೆ ಬಿಡಲೊಲ್ಲರು. ಆದುದರಿಂದ ಸಂಶಯಗೊಂಡು ಅದಕ್ಕೆ ಇಂಗ್ಲಿಷರು ಕಿವಿಮಾತು ಹೇಳಿ ಸಮಜೂತು ಕೊಡತಕ್ಕವರಿದ್ದಾರೆ.

ಮಹಾತ್ಮರ ಆರೋಗ್ಯದ ಸುದ್ದಿಯು

—[೦][೦]—

ಮಹಾತ್ಮರು ಪೂರ್ಣ ಆರೋಗ್ಯದ ಸ್ಥಿತಿ ಹೊಂದುತ್ತಿದ್ದಾರೆ. ದಿನಾಲು ಮುಂಜಾನೆ ಮತ್ತು ಸಂಜೆಯಲ್ಲಿ ಒಂದು ಮೈಲಿನ ತನಕ ತಿರುಗಾಡಲಿಕ್ಕೆ ಹೋಗುವರು. ಮೊದಲಿನ ಸಾಮರ್ಥ್ಯ ಬಂದಿಲ್ಲ. ಇನ್ನೂ ಒಂದು ತಿಂಗಳು ಇಲ್ಲಿಯೇ ಇರಬೇಕೆಂದು ಡಾಕ್ಟರರ ಮತವು.

ಬಹಳ ಹೊತ್ತು ಯಾರ ಸಂಗಡಲೂ ಮಾತಾಡಬಾರದು. ರಾಜಕೀಯವಾದಂಥ ಘನ ವಿಷಯಗಳ ಮೇಲೆ ಚರ್ಚೆ ಮಾಡಬಾರದು. ಏಕೆಂದರೆ ಮಿದುಳಿಗೆ ಭಾರವಾಗಿ, ಇದರಿಂದ ಆಯಾಸ ಬರುವದೆಂದು ಡಾಕ್ಟರರು ಹೇಳುತ್ತಾರೆ.

ಸರ ವಿಶ್ವೇಶ್ವರಯ್ಯನವರೂ ಪ್ರಕೃತದ ದಿವಾನರೂ ಮಹಾತ್ಮರನ್ನು ಕಾಣಲಿಕ್ಕೆ ಹೋಗಿದ್ದರು. ಇವರಿಬ್ಬರ ಕೂಡ ಮಹಾತ್ಮರು ಖಾದಿಯ ಪ್ರಸಾರದ ದೆಸೆಯಿಂದ ಪ್ರಸ್ತಾಪ ಮಾಡಿದರು.

ಮೈಸೂರಿನ ಬೇರೆ ಬೇರೆ ಕಾಮದಾರರೂ ಸಾರ್ವಜನಿಕ ಹಿತೈಷಿಗಳೂ ಇವರನ್ನು ಕಾಣಲಿಕ್ಕೆ ಹೋಗಿದ್ದರು. ಈ ದರ್ಶನದಿಂದ ಆ ನಾಡಿನಲ್ಲಿ ಖಾದಿಯ ಪ್ರಸಾರವಾಗಲು ದೊಡ್ಡ ಅನುಕೂಲವಾಗಿರುತ್ತದೆ.

ಶ್ರೀ. ಜಮನಾಲಾಲ ಬಜಾಜ, ಗಂಗಾಧರರಾವ ದೇಶಪಾಂಡೆ ಮತ್ತು ರಾಜಗೋಪಾಲಾಚಾರ್ಯರು ಮಹಾತ್ಮರನ್ನು ಕಾಣುವದಕ್ಕಾಗಿ ಅಲ್ಲಿಗೆ ದಯಮಾಡಿಸಿದ್ದಾರೆ.

ದೇಶಭಕ್ತ ಕೊಂಡಾ ವೆಂಕಟಪ್ಪಯ್ಯನವರೂ ಇವರನ್ನು ಕಾಣಲಿಕ್ಕೆ ಬಂದು ಹೋದರು. ಚರಕಾದ ವಿಷಯವಾಗಿಯೇ ಮುಖ್ಯ ಚರ್ಚೆ ನಡೆಯಿತು.

ಕಾಂಗ್ರೆಸದ ಅಧ್ಯಕ್ಷರಾದ ಶ್ರೀನಿವಾಸ ಅಯ್ಯಂಗಾರರೂ ಮಹಾತ್ಮರನ್ನು ಕಾಣುವದಕ್ಕಾಗಿ ಬೇಗನೆ ಬರತಕ್ಕವರಿದ್ದಾರೆ.

ಮಹಾತ್ಮರ ತೆಲಗು ಮತ್ತು ತಮಿಳ ದೇಶಗಳ ಪ್ರವಾಸಕ್ಕಾಗಿ ಎರಡು ಸ್ಪೇಶಲ ಮೋಟಾರಗಳನ್ನು ಮಾಡಿದ್ದಾರೆ. ಒಂದರಲ್ಲಿ ಮಲಗುವ ಮಂಚವನ್ನೂ ಬರೆಯುವ ಮೇಜನ್ನೂ ಹಾಕುವರು. ಇನ್ನೊಂದರಲ್ಲಿ ರಾಟಿ ಇಟ್ಟುಕೊಂಡು ನೂಲುವ ವ್ಯವಸ್ಥೆ ಮಾಡುವರು.

ಚಿಕ್ಕಬಳ್ಳಾಪೂರ ಮತ್ತು ಬೆಂಗಳೂರಿನ ಸ್ವಯಂಸೇವಕರು ಮಹಾತ್ಮರ ಬಂದೋಬಸ್ತವನ್ನು ಸರಿಯಾಗಿಟ್ಟಿದ್ದಾರೆ. ವ್ಹಾಲಂಟಿಯರರು ಪಾಂಚಾರಕ್ಕೆ ಬದಲಾಗುವರು. ಶ್ರೀ. ಎಚ್. ರಾಮರಾಯರು ಕಪ್ತಾನರಾಗಿದ್ದಾರೆ.

ವಿವಿಧ ವರ್ತಮಾನಗಳು

ಹೈದರಾಬಾದಿನ ನಿಜಾಮಸಾಹೇಬರು ತಮ್ಮ ರಾಜ್ಯಕ್ಕೆ ಸೇರಿದ ಮಹಾರಾಷ್ಟ್ರ ಪ್ರಾಂತದ ಅವಲೋಕನಕ್ಕಾಗಿ ಹೊರಡುವರು.

ರಂಗೂನದಲ್ಲಿ ಒಂದು ಅಕ್ಕಿಯ ಗಿರಣಿಗೆ ಬೆಂಕಿ ಹತ್ತಿ, [illegible] ಲಕ್ಷದ ಹಾನಿಯಾಯಿತು.

ರಂಗೂನದ ದಂಡಿನಲ್ಲಿರುವ ಮದ್ದಿನ ಕೋಣೆಗೆ ಕನ್ನ ಹಾಕಿ, ಮೂರು ರಿವ್ಹಾಲ್ವರಗಳನ್ನೂ [illegible] ಕಾಡತೂಸಗಳನ್ನೂ ಕದ್ದೊಯ್ದಿದ್ದಾರೆ.

ಉತ್ತರಮಂಡಲದ ಲಾಯಬ್ರರಿಯಲ್ಲಿ ಮಿ. ಬಲರಾಮಯ್ಯರೆಂಬ ಹಾಯಕೋರ್ಟಿನ ವಕೀಲರು ಸ್ವದೇಶಿ ಉಡುಪು ಧರಿಸಿ, ಹೋದರು. ವ್ಯವಸ್ಥಾಪಕರು ಇವರ ಬರುವಿಕೆಗೆ ಅಡ್ಡಿ ಮಾಡಿದರು. ಈ ಬಗ್ಗೆ ಅಲ್ಲಿ ಚರ್ಚೆ ನಡೆದಿದೆ. ಸಾಹೇಬರ ಡ್ರೆಸ ಮತ್ತು ದೇಶೀ ಡ್ರೆಸವೆಂದು ಎರಡು ಪಕ್ಷಗಳ ಮತಗಳು ಸಮವಾಗಿವೆಂದು ಹೇಳುತ್ತಾರೆ.

ಕಾಶಿಯಲ್ಲಿ ಪಂಡಿತ ಮಾಲವಿಯಾಯವರನ್ನು ಕಾಣಲಿಕ್ಕೆ ಹೋದ ಮುಸಲ್ಮಾನ [illegible] ರಾಮಪೂರ ಸಂಸ್ಥಾನದಲ್ಲಿ [illegible] ದೊಡ್ಡ ಮನೆತನದವರಿದ್ದು, ಅವರು ಮಾಲವಿಯಾಯವರನ್ನು ಕೊಲ್ಲಲಿಕ್ಕೆ ಹೋದರೆಂದು ಸಂಶಯ ತಕ್ಕೊಳ್ಳುವಂತಿರಲಿಲ್ಲೆಂದು ಪ್ರಸಿದ್ಧ ಮಾಡಲ್ಪಟ್ಟಿದೆ.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ಮುಸಲ್ಮಾನರ ಬೇಡಿಕೆಗಳನ್ನು ಪೂರ್ಣ ಮಾಡಿದ ಬಗ್ಗೆ ಮೌಲಾನಾ ಅಬ್ದುಲ ಕಲಮ ಆಜಾದರು ಹಿಂದೂ ಜನರ ಅಭಿನಂದನ ಮಾಡಿದ್ದಾರೆ.

ಜಾವಾ ನಡುಗಡ್ಡೆಗೆ ಹೋಗಿ, ಅಲ್ಲಿಯ ಹಿಂದೂ ಜನರ ಸಂಸ್ಕೃತಿ ಮತ್ತು ಪುರಾತನ ಇತಿಹಾಸದ ಸಂಶೋಧನ ಮಾಡಬೇಕೆಂದು ಡಚ್ಚ ಸರಕಾರದವರು ಸರ ರವೀಂದ್ರನಾಥ ಟಾಗೋರರಿಗೆ ವಿನಂತಿ ಮಾಡಿಕೊಂಡಿದ್ದು, ಸರರು ಈ ವಿನಂತಿಯನ್ನು ಅಂಗೀಕರಿಸಿದ್ದಾರೆ.

ನೋಟೀಸು.

ತ್ರಿಂಗಳ

ಬ್ಯಾಡಗಿಗ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ಚೇರಮನ್ನರಿಂದ ತಿಳಿಸಲ್ಪಡುವದೇನೆಂದರೆ:

ನಮ್ಮ ಬೋರ್ಡಿಂಗಿನಲ್ಲಿ ಸದ್ಯಕ್ಕೆ ಇಂಗ್ಲಿಷ ೪ ನೇ ಇಯತ್ತೆಯ ೨ ಸ್ಥಳಗಳೂ ೫ ನೇ ಇಯತ್ತೆಯ ೪ ಸ್ಥಳಗಳೂ ತೆರವಿರುವವು ಈ ಸ್ಥಳಗಳ ಭರ್ತಿಗಾಗಿ ನಮ್ಮಲ್ಲಿ ಬಂದು ಸೇರಲಿಚ್ಛಿಸುವ ಮೇಲೆ ತೋರಿಸಿದ ಇಯತ್ತೆಯ ವಿದ್ಯಾರ್ಥಿಗಳು ಬರುವ ಜೂನ ತಿಂಗಳ ೧೦ ನೇ ತಾರೀಖಿನೊಳಗಾಗಿ ನಮ್ಮ ಕಡೆಗೆ ತಪ್ಪದೇ ಅರ್ಜಿ ಕಳಿಸಬೇಕು ಅರ್ಜಿಯ ಸಂಗಡ ತಾವು ಬಡವರೂ ಒಳ್ಳೇ ನಡತೆಯವರೂ ಇದ್ದ ಬಗ್ಗೆ ಗ್ರಾಮಸ್ಥರ ಹಾಗು ಸಭ್ಯ ಗೃಹಸ್ಥರ ಸರ್ಟಿಫಿಕೇಟುಗಳನ್ನು ಲಗತಿ ಇಡಲಿಕ್ಕೆ ಬೇಕು. ತಿಳಿಯುವದು.

ಕುರ್ವತ್ತೆಪ್ಪ ಚನ್ನಬಸಪ್ಪಾ ಶೆಟ್ರ
ಚೇರಮನ್ನ ಶ್ರೀ ಶಿ. ವೀ ಬೋರ್ಡಿಂಗ
ಬ್ಯಾಡಗಿ

ನೋಟೀಸಿನ ಉತ್ತರಾ

—೦—

ರುದ್ರಪ್ಪಾ ಬಿನ್ನ ಸಿದ್ದಪ್ಪಾ ಸಿದ್ದನಗವಡರ ಅಲ್ಪವಯಿ ಸಂ| ದಾರ ಹಿರೆಯವ್ವಾ ಕೋಂ ಸಿದ್ದಪ್ಪಾ ಸಿದ್ದನಗವಡರ ಸಾ. ಅರಿಕಟ್ಟಿ ತಾಲ್ಲೂಕ ಕೋಡ ಇವರಿಗೆ

ಉಜ್ಜಣೆಪ್ಪಾ ಬಿನ್ನ ಮಲ್ಲಪ್ಪಾ ಸಿದ್ದನಗವಡರ ಸಾ ಅರಿಕಟ್ಟಿ ತಾ. ಕೋಡ ಇವನ ಕಡಿಂದ ತಿಳಿಸುವದೇನಂದರೆ- ನೀನು ವಿಜಯ ಪತ್ರದಲ್ಲಿ ಕೊಟ್ಟ ನೋಟೀಸಿನ ಮಜಕೂರ ತಿಳಿತು ನೋಟೀಸಿನಲ್ಲಿ ಸುಳ್ಳ ಮಜಕೂರಿನ ಮಾಲು ವ ದಾಗಿನೆ ಕಾಣಿಸಿ ಕೊಟ್ಟರೆ ಖರೆ ಆಗಲಾರದು ನೀನು ಬರಸಿದ ಮಾಲು ನಿನ್ನ ಮೈ ಮೇಲೆ ಇದ್ದ ನೀನೆ ಧರಿಸುತ್ತಿದ್ದಿ ತಿಂಬೋ ಧೂತಿಗೆ ಇರೋ ಹಣದಲ್ಲಿ ಇದ್ದಷ್ಟು ಇರುತ್ತವೆ ಅವನ್ನ ಅಳದಿಲ್ಲ ನಿನ್ನ ಗಂಡ ಸತ್ತ ಮೂರು ವರ್ಷದ ಮೇಲೆ ಆಯಿತು ನಾನೇ ಜ್ಯಾಸ್ತಿಯ ಮಾಡಿ ಬೆಳದಿರುತ್ತೇನೆ ನಿನ್ನ ಮಾವ ಅಂದರ ನನ್ನ ತಾಸ ತಂದಿ ಮಲ್ಲಪ್ಪ ವ ನಿನ್ನ ಗಂಡ ಸಿದ್ದಪ್ಪ ಇಬ್ಬರೂ ನಮ್ಮಗಿಲೆ ತೀರಿಕೊಂಡಿರುತ್ತಾರೆ. ನನ್ನ ತಂದಿ ವ ನಿನ್ನ ಮಾವ ಮಾಡಿದ ಸಾಲ ತೀರಿಸಿದ ಕಾಗದಗಳು ಕೋರ್ಟಿನಲ್ಲಿ ಹಾಜರ ಮಾಡಿದೆ ನಿನ್ನ ಮಗನು ೬ ವರು ವರ್ಷದವನಿದ್ದು ಅವನ ಹಿತಕ್ಕೆ ನೀನು ಹಿಸೆ ಬೇಡೋದಿಲ್ಲಾ ನಿನ್ನ ತವರ ಮನಿ ಅಣ್ಣಂದಿರ ಮಾತು ಕೇಳಿ ಹಿಸೆ ಬೇಡುತ್ತಿದಿ ಕೋರ್ಟಿನಲ್ಲಿ ನೀನಾಗೆಲಿ ವ ನಿನ್ನ ಅಣ್ಣಂದಿರಾಗೆಲಿ ದಾವಿಯ ಕೊಟ್ಟರೆ ಹಿಸೆ ಸಿಗಬಹುದು ಕೋರ್ಟಿನಿಂದಾ ಹಿಸೆ ಆಗದ ಹೊರ್ತು ನ ನಗೆ ಅಲ್ಪವಯಿ ನಮ್ಮಂಧಿಕೊಂದರೆ ಬರುತ್ತದೆ ಕಾರಣ ನಿನಗೆ ಇಲ್ಲೆ ಹಿಸೆ ಸಿಗೋದಿಲ್ಲ ಕೋರ್ಟಿನಲ್ಲಿ ಇಲಾಜ ನಡ್ಸಬೇಕು ನಾನು ಖರೀದಿಗೆ ತಂದ ಎತ್ತುಗಳನ್ನ ಹಣಕೊಡಲಿಕ್ಕೆ ತಾಖತ ಇಲ್ಲದ್ದಕ್ಕೆ ಎತ್ತುಗಳನ್ನು ಮಾರಿರುತ್ತೇನೆ ಮೂರು ವರ್ಷದ ಹುಡುಗನಿಗೆ ಹಿಸೆ ಕೊಡಲಿಕ್ಕೆ ಬರೋದಿಲ್ಲಾ ಕೋರ್ಟಿನಲ್ಲಿ ದಾವೆ ನಾದರೆ ಕಾಯದೇ ಪ್ರಕಾರ ಹಿಸೆ ತಿಕ್ಕಿತು ಅಲ್ಲಿ ವರಿಗೆ ಸಿಗಲಾರದು ನನಗೆ ಅಲ್ಪವಯಿಗೆ ಹಿತ ಆಗಬೇಕೆಂಬ ಹೇತುವಿನಿಂದ ಕೋರ್ಟಿನಿಂದಾ ಹಿಸೆ ತೂಗೋದೇಕೆಂತ ನಿನಗೆ ತಿಳಿಸಲತೇನೆ ತಿಳಿಯೋದು ತಾ. ೨೩-೫-೩೭

ಸಹಿ ಉಜೆಣಪ್ಪ ಬಿನ್ನ ಮಲ್ಲಪ್ಪಾ ಸಿದ್ದನಗವಡರ

ಜಾಹೀರಾತು.

ಪ್ರಿಯ ಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರಾನ್ನ ಚಹಾ ಮತ್ತು ಕಾಫೀ ಸೋವಿ ದರದಿಂದ ಸಿಗುವದಲ್ಲದೆ, ಚಿಲ್ಲರೆ ವ್ಯಾಪಾರಸ್ಥರಿಗೆ ಕಮಿಶನ್ನ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನಿಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಇಲ್ಲಿ ಎಲ್ಲ ತರದ ಚಹಾ ನಾಲ್ಕು ಕಡೆಗೆ ಪ ಸಾರವಾಗುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ ... ಕಪತ್ರಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ... ನ ಕಳಿಸಿ ಕೊಡುತ್ತೇವೆ ಆರ್ಡರ ಕೊಡುವದಾದರೆ ೧/೪ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ಸಿಗುವ ಸ್ಥಳ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಪೇಟೆ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರ ದಳವಿ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಧಳ,

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೬ ರೂಪಾಯಿ.

೨—೬ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಬಹುದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತರಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಧನ್ವಂತರಿ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾವಿ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಖ್ಯಾತಿ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ರಿ ಗೆ ಮೂ ರಾ ಣೆ— ಇಂಗಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾ...

R.N. B. 1445

ವಿಜಯ

ನಿತ್ಯ ಪತ್ರ — ಬಿಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ — ಧಾರವಾಡ ಶುಕ್ರವಾರ ತಾರೀಖು ೨೭ ನೇ ಮೇ ೧೯೨೭ — ಸಂಚಿಕೆ ೧೦

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಆಸುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಬಾರಿಗೆ ೩೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸಧ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಒಳಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸಧ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ — ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗಲಯು ಆರು ಲಕ್ಷದ ಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಠೇವಣಿ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರ ನೋಟೀಸು.

ಹೊಲ ಮನೆಗಳ ಲಿಲಾವು

ಧಾರವಾಡ ಡಿ|| ಕೋರ್ಟಿನ ಡೆ|| ನಾಜರ ಇವರ ಕಡೆಯಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ|| ಧಾರವಾಡ ಇವರ ಸಾ|| ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ|| ಸ|| ನಂಬರ ೩೨ ಯಕರೆ ೧೧.೧೬ ತರಮ ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ- ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ, ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಹರ್ತಿ ಇವರ ಮನೆ ಆಲೂರದಲ್ಲಿ ರೋದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ|| ೩೧ ಮಾಹೆ ಮೆ ಸನ್ನ ೧೯೨೭ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮಧ್ಯಾನ್ಹ ೩ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖು ೨೫ನೇ ಮಾಹೆ ಎಪ್ರಿಲ ೧೯೨೭ ಇಸ್ವಿ

G. V. DESHPANDE,
Dy. Nazir & Guardian of
Shrinivas & Ramachandra Alur.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರು
೬ ,,	೭—೦—೦ ರು
೪ ,,	೪—೦—೦ ರು
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರು

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೭-೫-೨೭ ನೇ ಇಸ್ವಿ

ರಶಿಯಾ ಮತ್ತು ಇಂಗ್ಲಂಡ.

ಯುದ್ಧದ ಭಾವೀ ದುಶ್ಚಿನ್ಹಗಳು.

—[o][o]—

ಬೇರೆ ಕಡೆಯಲ್ಲಿ ರಶಿಯರು ಚೀನ ದೇಶಕ್ಕೆ ಯಾವ ಪ್ರಕಾರದಿಂದ ಮದ್ದುಗುಂಡಿನ ಸಹಾಯ ಮಾಡುತ್ತಿದ್ದಾರೆಂಬದನ್ನು ಕೊಟ್ಟಿದ್ದೇವೆ. ರಶಿಯರ ಬೊಲ್ಶೆವಿಕ ಸಂಘವನ್ನು ಬೇಗನೆ ಬಡಿಯಬೇಕೆಂಬುದೇ ಇಂಗ್ಲಿಷರ ಮನೀಷೆಯು. ಇಂದು ಜಗತ್ತಿನಲ್ಲಿ ಎಲ್ಲಿಯಾದರೂ ಹಾವಿಗೂ ಮುಂಗಲಿಗೂ ಬದ್ದಂಥ ದ್ವೇಷವಿದ್ದರೆ- ಅದು ಇಂಗ್ಲಂಡ ಮತ್ತು ರಶಿಯಾದ ನಡುವೆಯುಂಟು. ರಶಿಯರು ತಮ್ಮ ಬೊಲ್ಶೆವಿಕ ಭೂತವನ್ನು ಛೂ ಬಿಟ್ಟಂಥ ಯಾವ ದೇಶವೂ ಇಲ್ಲ. ಈ ಭೂತವನ್ನು ಹೊರಗೆ ಹಾಕಬೇಕೆಂದು ಅನೇಕ ವಿಧವಾಗಿ ಜಯಾ ಪೇಶಿಯರಿಗೆ ಸಲಹೆತ್ತು ಹೇಳದೆ ಇಂಗ್ಲಂಡವು ಸ್ವಸ್ಥ ಕೂತಿಲ್ಲ. ಆದುದರಿಂದ ಇಂದಿಲ್ಲ ನಾಳೆ ಇಂಗ್ಲಂಡಕ್ಕೂ ರಶಿಯಕ್ಕೂ ಯುದ್ಧವು ಹತ್ತದೆ ಹೋಗಲಾರದೆಂಬುದು ಖಂಡಿತ.

ಇಂಗ್ಲಿಷ ಸರಕಾರದವರು ಲಂಡನದಲ್ಲಿರುವ ರಶಿಯನ ವರ್ತಕರ ಸಂಘವನ್ನು ಜಪ್ತ ಮಾಡಿ, ಅದರೊಳಗಿನ ಕಾಗದಪತ್ರಗಳನ್ನು ತಕ್ಕೊಂಡು, ರಶಿಯರಿಗೆ ತುಸುವಾದರೂ ವ್ಯಸನವಾದಂಥ ಪತ್ರ ಬರೆದಿದೆ, ರಶಿಯಾದ ವ್ಯಾಪಾರ ವಿಷಯಕವಾದ ಒಡಂಬಡಿಕೆಯನ್ನು ಮುರಿಯುವ ನಿಶ್ಚಯ ಮಾಡಿದ್ದು, ರಶಿಯಾದ ದ್ವೇಷದ ಪ್ರಾರಂಭವಾಗುತ್ತದೆ. ರಶಿಯದ ಮನಸ್ಸಿನಲ್ಲಿ ತಮ್ಮ ದೆಸೆಯಿಂದ ದ್ವೇಷಾಗ್ನಿಯು ಹೊತ್ತಬಾರದೆಂದು ಕೂಲಿಕಾರರ ಮಂತ್ರಿಯಾದಾಗ ಆಲೋಚಿಸಿ, ರಾಜಕೀಯವಿಲ್ಲದಿದ್ದರೂ, ವ್ಯಾಪಾರ ವಿಷಯಕವಾಗಿ ರಶಿಯರ ಕೂಡ ಒಪ್ಪಂದ ಮಾಡಿಕೊಂಡರು. ಕೂಲಿಕಾರರು ಅಟ್ಟಿಗೆಸ್ನೆಲ್ಲ ಕಾಸ್ಸೆರ್ವೇಟಿವ್ಹರು ಕೆಡಿಸುವ ಕೃತನಿಶ್ಚಯ ಮಾಡಿದ್ದಾರೆ.

ರಶಿಯಾದ ವ್ಯಾಪಾರ ಮುರಿಯುವದರಿಂದ ಇಂಗ್ಲಂಡಕ್ಕೆ ಹಾನಿಯೇ ಸರಿ. ಇಂಗ್ಲಂಡದ ವ್ಯಾಪಾರವು ಕುಗ್ಗುವದರಿಂದ ಇಂಗ್ಲಂಡದ ಕೂಲಿಕಾರರಿಗೆ ಜೀವನವಾಗಬೇಕೆಂದು ರಾಮಸೆ ಮ್ಯಾಕ ಡೋನಾಲ್ಡ ಸಾಹೇಬರು ಬಗೆದು- ಪುಷ್ಕಳವಾದ ಕ್ರಮದಿಂದ ವ್ಯಾಪಾರದ ಒಡಂಬಡಿಕೆ ಮಾಡಿಕೊಂಡು, ರಶಿಯರ ವಕೀಲರನ್ನು ಲಂಡನದಲ್ಲಿ ಕಂದು ಕೂಡ್ರಿಸಿದರು. ಇವನೊಬ್ಬನಿಗೆ ಎದ್ದಲಗಾಟ ಕೊಡುವದರಿಂದ, ಇಂಗ್ಲಂಡದ ಲಕ್ಷಾವಧಿ ಕೂಲಿಕಾರರ ಹೊಟ್ಟೆಯ ಮೇಲೆ ಕಾಲು ಕೊಡುವ ದುರ್ಧರ ಪ್ರಸಂಗವೂ ಬರುವದು. ಇದೇ ವಿಷಯವಾಗಿ ಪಾರ್ಲಮೆಂಟ ಸಭೆಯಲ್ಲಿ ರಣಚಿತ್ತರವಾಗಳ್ಕದ್ದುಂಟು.

ಜಿನೇವ್ಹಾದಲ್ಲಿ ಜಗತ್ತಿನೊಳಗಿನ ಎಲ್ಲ ದೇಶಗಳ ಪ್ರತಿನಿಧಿಗಳ ಪರಿಷತ್ತು ಕೂಡಿದೆ ಎಲ್ಲ ದೇಶಗಳ ಕೂಡ ಸ್ನೇಹವಾಗಿದ್ದು, ವ್ಯಾಪಾರವೃದ್ಧಿಯಾಗಬೇಕ; ಕೂಲಿಕಾರರಿಗೆ ಉಪಜೀವನವಾಗಿ ಅವರ ಸ್ಥಿತಿಯು ಸುಧಾರಿಸಬೇಕೆಂಬು ಈ ಪರಿಷತ್ತಿನ ಮುಖ್ಯೋದ್ದೇಶವಾಗಿರುತ್ತದೆ. ಇಂಥ ವೇಳೆಯಲ್ಲಿ ಇಂಗ್ಲಂಡವು ರಶಿಯಾದ ಸಲುವ ಹವಣೊಂಡದ್ದರಿಂದ ಈ ಪರಿಷತ್ತಿನಲ್ಲಿ ಇಂಗ್ಲಂಡದ ಗೌರವವು ಬಹುಮಾಗಿ ಕಡಿಮೆಯಾಗುವದೆಂಬದು ನಿರ್ವಿವಾದವು.

ಝಾರಶಾಹಿಯಿಂದ ಅಂದರೆ ೧೮೭೦ ನೆಯ ಇಸವಿಯಿಂದ ರಶಿಯದ ಕಣ್ಣು ಹಿಂದುಸ್ಥಾನದ ಮೇಲುಂಟು. ಇವೆರಡೂ ದೇಶಗಳಿಗೆ ಯುದ್ಧ ಹತ್ತಬೇಕಾದರೆ- ಹಿಂದುಸ್ಥಾನವು ನೆರೆಯ ದೇಶವಾಗಿರುತ್ತದೆ. ಇಂಗ್ಲಿಷ ಮಂತ್ರಿಗಳು ಅರಕಾಸಿನ ಝುಪತಿಯಿಂದ ಮಾಡಿದ ತಮ್ಮ ಮಾನಖಂಡನೆಯ ಸುಯ್ಯ ತೀರಿಸಿಕೊಳ್ಳಬೇಕಾದರೆ- ಹಿಂದುಸ್ಥಾನದ ಮೇಲೆ ದಾಳಿಯಿಟ್ಟು ಬರುವದೇ ಸುಲಭವಾಗುತ್ತದೆ. ರಶಿಯರು ಇಂದಿಲ್ಲ, ನಾಳೆ ದಂಡೆತ್ತಿ ಬರಬಹುದೆಂಬ ವಿಚಾರದಿಂದ ವಾಯುವ್ಯ ಮತ್ತು ಕಾಬೂಲ ಸರಹದ್ದಿನಲ್ಲಿ ಇಂಗ್ಲಿಷ ಸರಕಾರದವರು ಈಗಾಗಲೇ ಭಂದೋಬಸ್ತುಗಳನ್ನು ಕೈಕೊಳ್ಳಲಾರಂಭಿಸಿದ್ದಾರೆ. ಹೋದ ತಿಂಗಳಲ್ಲಿ ಲಾರ್ಡ ಆಯರ್ವಿನ ಸಾಹೇಬರು ಈ ಭಾಗವನ್ನು ನೋಡಲಿಕ್ಕೆ ಹೋಗಿದ್ದರು. ಅದು ಕೇವಲ ಸೃಷ್ಟ್ಯವಲೋಕನವಿರದೆ, ರಶಿಯಾದ ಬಾವುಗನನ್ನು ಹೇಗೆ ಅಡ್ಡಗಟ್ಟಬೇಕೆಂದು ನೋಡುವ ರಹಸ್ಯವಾಗಿತ್ತೆಂದು ಲೋಕಚರ್ಚೆ ನಡೆದಿದೆ

ಬೆಳಗಾವಿಯಲ್ಲಿ ಬರುವ ತಿಂಗಳ ೪ ಮತ್ತು ೫ ನೇ ತಾರೀಖುಗಳ ದಿವಸ ಪ್ರೋಗ್ರೆಸ್ಸಿವ್ಹರ ಪರಿಷತ್ತು ಬ್ಯಾರಿಸ್ಟರ ಜಯಕರರ ಅಧ್ಯಕ್ಷತೆಯಲ್ಲಿ ನೆರವೇರುವದು.

ಕಲಕತ್ತೆಯಲ್ಲಿ ಒಬ್ಬ ಬಂಗಾಲಿ ತರುಣನು ರಿವ್ಹಾಲ್ವರ ಮತ್ತು ಕಾಡತೂಸುಗಳನ್ನು ಹಿಡಕೊಂಡು ಹೋಗುತ್ತಿದ್ದಾಗ, ಪೋಲೀಸರು ಅವನನ್ನು ಚಲಾಂಜ ಮಾಡಿದ್ದಾರೆ.

ರಶಿಯರು ಚೀನರಿಗೆ ಮಾಡಿದ ಮದ್ದು ಗುಂಡಿನ ಸಹಾಯ.

ರಶಿಯರು ಚೀನದ ಉತ್ತರದಲ್ಲಿರುವ ಬೊಲ್ಶೆವಿಕ ಸೈನ್ಯಕ್ಕೆ ಮಾಡಿದ ಮದ್ದುಗುಂಡಿನ ಸಹಾಯದ ಪಟ್ಟಿಯು ಪೇಕಿಂಗದ ಝಡತಿಯಲ್ಲಿ ಹೊರಬಿದ್ದ ಅದರ ಮುಖ್ಯಾಂಶಗಳು:—

(೧) ೨೪ ದೊಡ್ಡ ದೊಡ್ಡ ತೋಪುಗಳು
೯೦ ಮಶಿನ ಗನ್ನುಗಳು
೨೧೯೭೦ ರಾಯಫಲ ಬಂದೂಕುಗಳು
೪೦೦೦ ಜಪಾನಿ ರಾಯಫಲಗಳು
೨೨೦೦೦ ತೋಫಿನ ತುಬಾಕಿಗಳು
೧ಕೋಟಿ ೪೮ ಲಕ್ಷ ರಶಿಯಾದ ಕಾಡತೂಸುಗಳು
ಐದು ಲಕ್ಷ ಜಪಾನದ ಕಾಡತೂಸುಗಳು
ಹತ್ತು ಸಾವಿರ ಕಯ್ಯಿಂದ ಒಗೆಯುವ ಬಾಂಬುಗಳು.

(೨) ಕ್ಯಾಂಟನದ ಸೈನ್ಯಕ್ಕೆ ಪೂರೈಸಿದ್ದು:-
೫೨ ಲಕ್ಷ ೫೦ ಸಾವಿರ ಕಾಡತೂಸುಗಳು
೨೦ ಮ್ಯಾಗಾಜಿನ್ನಗಳು (ತೋಪು)
೭ ಗುಡ್ಡದ ಮೇಲೆ ಹೊಡೆಯುವ ತೋಪುಗಳು
೭೦೦೦ ತೋಫಿನ ಗುಂಡುಗಳು
೧೦೦೦೦ ಜ್ವಾಲಾಗ್ರಾಹಿ ಗುಂಡುಗಳು
೪೦ ಬಾಂಬು ಚೆಲ್ಲುವ ಯಂತ್ರಗಳು
೯ ವಿಮಾನಗಳು

ಇವುಗಳ ಹೊರತು ಚೀನಕ್ಕೆ ಸಹಾಯವಾಗಿ ಕೆಳಗಿನ ಸಾಹಿತ್ಯವನ್ನು ಉರಗಾದಲ್ಲಿ ಸಂಗ್ರಹಿಸಿಟ್ಟಿದ್ದಾರೆ.

೭೫೦೦೦ ಬಂದೂಕುಗಳು
೩ ಲಕ್ಷ ೨೦ ಸಾವಿರ ಕಾಡತೂಸುಗಳು
೧೪೦ ಮಶಿನಗನ್ನಗಳು
೪೨ ದೊಡ್ಡ ದೊಡ್ಡ ತೋಪುಗಳು
೪೭೦೦೦ ತೋಫಖಾನೆಯ ಗುಂಡುಗಳು
೧೦೦೦೦ ಗರ್ನಲಗಳು
೫೦೦೦ ಕತ್ತಿಗಳು
೧೦೦೦೦ ಜ್ವಾಲಾಗ್ರಾಹಿ ಗುಂಡುಗಳು
ಆರು ವಿಮಾನಗಳು

ಮಹಾಯುದ್ಧದ ನಂತರ ವಿಲಾಯತಿಯು ಯುದ್ಧಶಾಸ್ತ್ರದಲ್ಲಿ ಆಶ್ಚರ್ಯವಾಗಿ ಸುಧಾರಣೆಯಾಗಿದೆ. ಆದ್ದರಿಂದ ಹಳೇ ಸಾಹಿತ್ಯವನ್ನು ಕಾಸಿಗೆ ಪಂಚ್ಛೇರಿನಂತೆ ಮಾರಲಿಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ರಶಿಯಾವು- ಇಂಗ್ಲಂಡದ ದ್ವೇ

ಷ ಸಾಧಿಸಿದಂತಾಯಿತು, ಮತ್ತು ರೊಕ್ಕವಾಯಿತೆಂದು ಚೀನದ ಸಹಾಯಕ್ಕೆ ಮುಂದೊರೆದಿರುತ್ತದೆ.

ಮಹಾತ್ಮರ ನಿತ್ಯದ ಕಾರ್ಯಕ್ರಮವು.

—(०)—

ದಿನಾಲು ಪ್ರಾತಃಕಾಲದಲ್ಲಿ ಎರಡು ತಾಸು ರಾತ್ರಿ ಇರುವಾಗ ಏಳುವರು. ಸೂರ್ಯೋದಯದೊಳಗಾಗಿ ಪ್ರಾತಃಕಾಲದ ಸ್ನಾನ ಮತ್ತು ದೇವತಾರಾಧನೆ ತೀರಿಸುವರು. ಅನಂತರ ಒಂದು ತಾಸು ತಿರಗಲಿಕ್ಕೆ ಹೋಗುವರು. ಮರಳಿ ಬಿಡಾರಕ್ಕೆ ಬಂದ ನಂತರ, ಯಂಗ ಇಂಡಿಯಾಕ್ಕೆ ಲೇಖಗಳನ್ನು ಬರೆಯಲಿಕ್ಕೆ ಹೇಳುವರು. ಮಧ್ಯಾಹ್ನದಲ್ಲಿ ಒಂದು ತಾಸು ನೂಲುವರು. ಬಳಿಕ ವಿಶ್ರಾಂತಿ ತಕ್ಕೊಳ್ಳುವರು. ಎರಡರಿಂದ ಮೂರರ ತನಕ ಪತ್ರವ್ಯವಹಾರದ ಕೆಲಸ ಮಾಡುವರು. ಆನಂತರ ತಮ್ಮನ್ನು ಕಾಣಲಿಕ್ಕೆ ಬಂದ ಸದ್ಗೃಹಸ್ಥರಿಗೆ ಭೆಟ್ಟಿ ಕೊಟ್ಟು, ಅವರ ಕೂಡ ಸಂಭಾಷಣೆ ಮಾಡುವರು. ಈ ಸಂಭಾಷಣೆ ಮಾಡುತ್ತಿರುವಾಗ ಪುನಃ ನೂಲುವರು. ಸಾಯಂಕಾಲದ ಆರು ಗಂಟೆಗೆ ಸಾಯಂಕಾಲದ ಹವೆ ತಕ್ಕೊಳ್ಳುವದಕ್ಕೆ ಹೋಗುವರು. ರಾತ್ರಿ ೯-೩೦ ಕ್ಕೆ ಮಲಗುವರು.

ಮಹಾತ್ಮರು ಜೂನ ತಿಂಗಳ ೧೫ ನೆಯ ತಾರೀಖಿನ ದಿವಸ ಬೆಂಗಳೂರಿಗೆ ದಯಮಾಡಿಸುವರು. ಪ್ರಕೃತಿಯು ಪೂರಾ ನೆಟ್ಟಗಾಯಿತೆಂದು ತೋರಿದರೆ- ತಮಿಳ, ತೆಲಗು ಮತ್ತು ಮಲಿಯಾಳ ದೇಶದ ಪ್ರವಾಸ ಕೈಕೊಳ್ಳುವರು. ದೊಡ್ಡ ದೊಡ್ಡ ಪಟ್ಟಣಗಳಿಗಷ್ಟೇ ದರ್ಶನ ಲಾಭ ಕೊಡುವದು. ವಯೋಮಾನಕ್ಕನುಸರಿಸಿ, ಉಂಟಾದ ಅಶಕ್ತತೆಯನ್ನು ಲಕ್ಷದಲ್ಲಿಟ್ಟು, ಶ್ರಮ ಮಾಡುವರು. ಶಾರೀರಿಕ ಮತ್ತು ಬೌದ್ಧಿಕ ತ್ರಾಸವನ್ನು ಕಡಿಮೆ ಮಾಡಿದರೆ- ಬೇಗನೆ ಪೂರ್ವದ ಸ್ಥಿತಿಯುಂಟಾಗುವದೆಂದು ಡಾಕ್ಟರರ ಮತವು. ಆದರೂ ಹಿಂದುಸ್ಥಾನದ ಎಲ್ಲ ಭಾಗಗಳಿಂದ ಜನರು ಇವರನ್ನು ಕಾಣಲಿಕ್ಕೆ ಬರುತ್ತಿದ್ದಾರೆ. ಇವರ ಪ್ರಕೃತಿಯು ವಿಷಯವಾಗಿ ವಿಲಾಯತಿ ಅಮೇರಿಕೆಯಿಂದಲೂ ಪತ್ರಗಳ ಮೇಲೆ ಪತ್ರಗಳು ಬರುತ್ತಿರುವವು.

ಮಹಾತ್ಮರು ಸಂಚಾರಕ್ಕೆ ಹೊರಟ ಬಳಿಕ ತಮ್ಮ ಮುಖ್ಯ ಧ್ಯೇಯಗಳಾದ ಖಾದಿ, ಅಸ್ಪೃಶ್ಯೋದ್ಧಾರ ಮತ್ತು ಎಲ್ಲ ಜಾತಿಗಳಲ್ಲಿ ಐಕ್ಯದ ಪ್ರಶ್ನವನ್ನು ಕೈಕೊಳ್ಳುವರು

ಅಗ್ರ್ಯಾ ಪ್ರಾಂತದ ಪದೆಯೂ ಸ್ವತಂತ್ರ ಯೂನಿವ್ಹರ್ಸಿಟಿಯನ್ನು ಸ್ಥಾಪಿಸಿದ್ದಾರೆ. ಅದರ ಪ್ರಾರಂಭವು ಜುಲೈ ತಿಂಗಳಲ್ಲಾಗುವದು.

ಮ್ಯಾಟ್ರಿಕ ಪರೀಕ್ಷೆಯ ಪರಿಣಾಮ.

ಲಿಂಗಾಯತ ಹಾಯಸ್ಕೂಲ-

೧ ಹುಕ್ಕೇರಿ ಡಿ ಎಸ್

೨ ಹಳ್ಳಿಕೇರಿ ಜಿ ವ್ಹಿ

೩ ಕಜ್ಜಾರಿ ಎಸ್ ಎಸ್

೪ ಹಿರೇಮಠ ಪಿ ಜಿ

೫ ಹೊಂಬಳ ಡಿ ಬಿ

೬ ಜವಳಿ ವ್ಹಿ ಕೆ

೭ ಸಂಕನಗವಡರ ಎಸ್ ಕೆ

೮ ಕಡಸೂರ ಬಿ ಎಮ

೯ ಬೆಟಸೂರ ಜಿ ಎಸ್

೧೦ ಚಂದ್ರಪಟನ ಎಮ ಸಿ

೧೧ ಬಂಡರಗಲ್ಲ ಎಸ್ ಬಿ

೧೨ ಹಿರೇಮಠ ಶಿವಮೂರ್ತಿ ವ್ಹಿ

೧೩ ದೇಸಾಯಿ ಎಸ್ ವ್ಹಿ

೧೪ ಪಾಟೀಲ ಎಮ ಎಸ್

೧೫ ಕುಲಕರ್ಣಿ ಎಚ್ ಡಿ

ಕಾಕೋರಿಯ ಸತ್ಯಾಗ್ರಹಿಗಳು-

ಕಾಕೋರಿಯ ದರೋಡೆಯ ಪ್ರಕರಣದಲ್ಲಿ ಶಿಕ್ಷೆ ಹೊಂದಿದ ಸತ್ಯಾಗ್ರಹಿಗಳು ತಮ್ಮನ್ನು ರಾಜಕೀಯ ಕೈದಿಗಳಂತೆ ನಡಿಸಿಕೊಳ್ಳುವದಿಲ್ಲೆಂದು ಅನ್ನಬಿಟ್ಟು ಸತ್ಯಾಗ್ರಹ ಮಾಡಿ, ೪೬ ದಿವಸಗಳಾದವು. ಇವರು ತೀರ ಅಶಕ್ತರಾಗಿದ್ದರು. ಜೇಲಿನ ಅಧಿಕಾರಿಗಳು ಗುದದ್ವಾರದಿಂದ ರಬ್ಬರಿನ ನಳಿಯಿಂದ ಹಾಲು ಹಾಕುತ್ತಿದ್ದರು. ಕಾಕೋರಿಯ ದರೋಡೆಯ ಪ್ರಶ್ನವನ್ನು ಆಲ ಇಂಡಿಯಾ ಕಾಂಗ್ರೆಸ ಕಮೀಟಿಯವರು ಕೈಕೊಂಡಿದ್ದಾರೆ. ಸರಕಾರದ ದೃಷ್ಟಿಕೋನವು ಬದಲಾದ ಹೊರತು ದೇಶಾಭಿಮಾನಿಗಳಿಗೆ ಇಂಥ ತಾಪಗಳು ತಪ್ಪಿದ್ದಲ್ಲ; ನಿಮ್ಮ ಪ್ರಶ್ನವು ಸರಕಾರ ಮತ್ತು ಕಾಂಗ್ರೆಸದ ನಡುವೆ ವಾದಗ್ರಸ್ತವಾಗಿ ಬಿದ್ದದೆ. ಆದುದರಿಂದ ನಿರಾಹಾರ ಮುಗಿಸಿ ಪಾರಣೆ ಮಾಡಿರೆಂದು ಕೌನ್ಸಿಲ ಮೆಂಬರರಾದ ಶ್ರೀ. ವಿದ್ಯಾರ್ಥಿಯವರು ಇವರಿಗೆ ಮನವಟ್ಟಾಗುವಂತೆ ಹೇಳಲು- ಇವರು ಅವರ ಮಾತಿಗೆ ಒಪ್ಪಿ, ಅವರ ಎದುರಿನಲ್ಲಿ ಹಾಲು ಕುಡಿದು ನಿರಾಹಾರ ಮುರಿದರು.

ಲಂಡನದಲ್ಲಿ ಬ್ರಾಹ್ಮಣನ ಪುಂಡತನ-

ಮುಂಬಯಿಯ ವಾಸಸ್ಥನಾಗಿರುವ ಗುಜರಾಥಿ ಬ್ರಾಹ್ಮಣನಾದ ಉಪಾಧ್ಯಾಯನೆಂಬವನು ಲಂಡನಕ್ಕೆ ಹೋಗಿದ್ದಾನೆ. ಅಲ್ಲಿ ಈತನು ಬ್ರಿಟಿಶ ಸರಕಾರದ ವಿರುದ್ಧ ರಾಜ್ಯಕ್ರಾಂತಿಯ ಭಾಷಣ ಮಾಡುತ್ತಿದ್ದಾನೆ. ಈತನ ವಿಷಯವಾಗಿ ನೀವಾವ ವ್ಯವಸ್ಥೆಯನ್ನು ಮಾಡುವಿರೆಂದು ಪಾರ್ಲಮೆಂಟ ಸಭೆಯಲ್ಲಿ ಕೇಳಿದ ಪ್ರಶ್ನಕ್ಕೆ " ಈತನ ಚಳವಳಿಯು ನಮಗೆ ಗೊತ್ತುಂಟು. ಯಾವ ಉಪಾಯ ಕೈಕೊಳ್ಳುವೆವೆಂಬದನ್ನು ಈಗಾಗಲೇ ಹೇಳಲಿಕ್ಕಾಗುವದಿಲ್ಲೆಂದು ಗೃಹಮಂತ್ರಿಯು ಉತ್ತರ ಕೊಟ್ಟಿದ್ದಾನೆ.

ಆವರಿಯ ಸತ್ಯಾಗ್ರಹದ ತಪಸ್ಸು-

ನಾಗಪೂರದ ಪ್ರಜಾಸತ್ತಾತ್ಮಕ ಸೈನ್ಯದ ಮುಖ್ಯಾಧಿಕಾರಿಯಾದ ಆವರಿಯನ್ನು ಹಿಡಿದಿದ್ದಾರಷ್ಟೇ; ಈತನ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ನಡೆದಿದೆ. ಶಿಕ್ಷೆಯಾಗುವದಂತೂ ನಿಶ್ಚಯ. ಆವರಿಯು ತನ್ನ ಪರಿಯಿಂದ ಡಿಫೆನ್ಸ ಕೊಡುವದಿಲ್ಲ. ಜವಾಬು ಕೊಡುವದಿಲ್ಲ. ಇಂಗ್ಲಿಷರ ನ್ಯಾಯಕೋರ್ಟನ್ನೇ ಮನ್ನಿಸುವದಿಲ್ಲ. ಸೆರೆಮನೆಗೆ ಹೋದ ಬಳಿಕ, ಪರಕೀಯರಾದ ಇಂಗ್ಲಿಷರ ಅನ್ನ ತಕ್ಕೊಳ್ಳುವದಿಲ್ಲ.

ಮುಂಬಯಿ ಇಲಾಖೆಯ ಮ್ಯಾಟ್ರಿಕ ಪರೀಕ್ಷೆಗೆ ಹತ್ತು ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೂತಿದ್ದರು. ಇವರಲ್ಲಿ ೫೨೪೧ ಉಮೇದವಾರರು ಪಾಸಾಗಿದ್ದಾರೆ. ವಿದ್ಯಾರ್ಥಿನಿಯರು ಅನೇಕ ಸ್ಕಾಲರಶಿಪ್ಪುಗಳನ್ನು ಪಡೆದಿದ್ದಾರೆ.

ರಾಜಕಾರಣದಲ್ಲಿ ಪ್ರತಿಯೋಗಿ ಸಹಕಾರಿಗಳಿಗೆ ಎಲ್ಲಿಯೂ ಸ್ಥಳವಿಲ್ಲ; ಅವರಿಗೆ ಹುಜ್ಜರ ಆಸ್ಪತ್ರಿಯ ಹೊರತು ಬೇರೆ ಸ್ಥಳವಿಲ್ಲೆಂದು ಮೌಲಾನಾ ಮಹಮದಲ್ಲಿಯವರು ಹೇಳುತ್ತಾರೆ.

ಪುಣೆಯಲ್ಲಿ ಕೂಡಿದ್ದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದಲ್ಲಿ ಮುಂಬಯಿ, ನಾಗಪೂರ ಮತ್ತು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಮರಾಠಿಯಲ್ಲಿಯೇ ಮುಖ್ಯ ಶಿಕ್ಷಣ ಕೊಡಬೇಕೆಂಬ ಠರಾವು ಪಾಸಾಯಿತು.

ಧಾರವಾಡ-

ಶ್ರೀಮದುತ್ತರಾದಿ ಮಠದ ಶ್ರೀ ಪಾಂಡುರಂಗಿಯವರ ಆಶ್ರಯದಲ್ಲಿ ನಿನ್ನೆಯಿಂದ ಈ ಊರಲ್ಲಿ ಪಂಚಾಂಗ ಕಮೀಟಿಯು ಕೂತಿದೆ. ನಾಳೆಗೆ ಮುಗಿಯುವದು. ಈ ಮೀಟಿಗಾಗಿ ಪರಸ್ಥಳದ ೨೫-೩೦ ಜನ ಜ್ಯೋತಿಷಜ್ಞರೂ, ಮಹಾರಾಷ್ಟ್ರ ಪ್ರಾಂತದಲ್ಲಿ ಕುಲಗುರುವೆಂದು ಸುಪ್ರಸಿದ್ಧರಾಗಿದ್ದ ಶ್ರೀ. ವೈದ್ಯ ಚಿಂತಾಮಣರಾಯರೂ ದಯಮಾಡಿಸಿದ್ದಾರೆ.

ರಸ್ತೆಯ ಮೇಲೆ ಒಂದು ರಾತ್ರಿ ಒಂದು ದೊಡ್ಡ ಗಿಡವು ಬಿದ್ದುದರಿಂದ ರಸ್ತೆಯು ಕಟ್ಟಾಯಿತು. ಮರುದಿವಸ ಆ ಹಳ್ಳಿಯವರು ಆ ಗಿಡವನ್ನು ಕಡಿದು ತುಂಡು ಮಾಡಿ ಆ ಗಿಡಕ್ಕೆ ಬೆಂಕಿಯೊಡ್ಡಿ ಸುಟ್ಟುಬಿಡಬೇಕೆಂದು ನಿರ್ಧರಿಸಿ, ಗಿಡಕ್ಕೆ ಬೆಂಕಿ ಹಚ್ಚಿದರು. ಆಗ ಅದನ್ನು ನೋಡಿದ ಒಂದು ಕಾಡಾನೆಯು ಅಡವಿಯೊಳಗೆ ನುಗ್ಗಿ ಆನೆಗಳ ಒಂದು ಹಿಂಡನ್ನೇ ಕರತಂದಿತು. ಆ ಎಲ್ಲಾ ಆನೆಗಳು ಕೂಡಿಕೊಂಡು ತಮ್ಮ ಸೊಂಡಿಲಗಳಲ್ಲಿ ನೀರನ್ನು ತುಂಬಿ ತಂದು ಸುಡುತ್ತಿದ್ದ ಗಿಡದ ಮೇಲೆ ಉಗ್ಗಿ ಬೆಂಕಿಯನ್ನು ಆರಿಸಿದವು! ಆ ಮೇಲೆ ಸುಡದೆ ಇದ್ದ ಒಡ್ಡಿಯನ್ನು ಎತ್ತಿ ರಸ್ತೆಯ ಮಧ್ಯದಲ್ಲಿಟ್ಟು, ಆ ಕಾಡಾನೆಗಳೆಲ್ಲ ಹಿಂಗಾಲುಗಳ ಮೇಲೆ ನಿಂತುಕೊಂಡು ಕುಣಿಯಲಾರಂಭಿಸಿದವು!!

ಸಿಂಧ ದೇಶದಲ್ಲಿ ಸ್ವಾಮಿಶ್ರದ್ಧಾನಂದರ ಸ್ಮಾರಕಫಂಡಿಗಾಗಿ ೨೫೦೦೦ ರೂಪಾಯಿಗಳು ಕೂಡಿವೆ

ನೋಟೀಸು.

ಬ್ಯಾಡಗಿ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ ಚೇರಮನ್ನರಿಂದ ತಿಳಿಸಲ್ಪಡುವದೇನಂದರೆ—

ನಮ್ಮ ಬೋರ್ಡಿಂಗಿನಲ್ಲಿ ಸದ್ಯಕ್ಕೆ ಇಂಗ್ಲಿಷ ೪ ನೇ ಇಯತ್ತೆಯ ೨ ಸ್ಥಳಗಳೂ ೫ ನೇ ಇಯತ್ತೆಯ ೪ ಸ್ಥಳಗಳೂ ತೆರವಿರುವವು ಈ ಸ್ಥಳಗಳ ಭರ್ತಿಗಾಗಿ ನಮ್ಮಲ್ಲಿ ಬಂದು ಸೇರಲಿಚ್ಛಿಸುವ ಮೇಲೆ ತೋರಿಸಿದ ಇಯತ್ತೆಯ ವಿದ್ಯಾರ್ಥಿಗಳು ಬರುವ ಜೂನ ತಿಂಗಳ ೧೦ ನೇ ತಾರೀಖಿನೊಳಗಾಗಿ ನಮ್ಮ ಕಡೆಗೆ ತಪ್ಪದೇ ಅರ್ಜಿ ಕಳಿಸಬೇಕು. ಅರ್ಜಿಯ ಸಂಗಡ ತಾವು ಬಡವರೂ ಒಳ್ಳೇ ನಡತೆಯವರೂ ಇದ್ದ ಬಗ್ಗೆ ಗ್ರಾಮಸ್ಥರ ಹಾಗು ಸಭ್ಯ ಗೃಹಸ್ಥರ ಸರ್ಟಿಫಿಕೇಟುಗಳನ್ನು ಲಗತ ಇಡಲಿಕ್ಕೆ ಬೇಕು. ತಿಳಿಯುವದು.

ಕುರ್ವತ್ತೆಪ್ಪಾ ಚನ್ನಬಸಪ್ಪಾ ಶೆಟ್ರು
ಚೇರಮನ್ನ ಶ್ರೀ ಶಿ. ವೀ. ಬೋರ್ಡಿಂಗ
ಬ್ಯಾಡಗಿ

ನೋಟೀಸಿನ ಉತ್ತರಾ

ರಾಮಚಂದ್ರ ಕೇಶೋ ಸಾಂಬ್ರಾಣಿ ಸಾ|| ಧಾರವಾಡ ಇವರಿಗೆ—

ಹಣಮಂತ ಕೃಷ್ಣ ಪೋತನೀಸ ಸಾ| ಕಿತ್ತೂರ ಇವರ ಕಡಿಂದಾ ತಿಳಿಸುವದೇನಂದರೆ—

ನೀವು ತಾರೀಖು ೧೯-೫-೧೯೨೭ ನೇ ದಿವಸ ವಿಜಯ ವರ್ತಮಾನಪತ್ರದಲ್ಲಿ ಅಲ್ಪವಯಿ ಶ್ರೀನಿವಾಸ ಈತನನ್ನು ದತ್ತಕ ತಗೊಂಡಿಲ್ಲಾ ಅಂತಾ ಖೊಟ್ಟಿ ನೋಟೀಸು ಕೊಟ್ಟಿರುತ್ತೀರಿ ನೀವು ಕಿತ್ತೂರಲ್ಲಿ ನಾಲ್ಕು ಜನ ಸಂಭಾವಿತ ಸಭ್ಯಗೃಹಸ್ಥರ ಮತ್ತು ಗುರುಹಿರಿಯರ ಸಮಕ್ಷಮ ವಿಧಾನ ಪೂರ್ವಕ ತಾ|| ೧೬-೪-೧೯೨೭ ನೇ ದಿವಸ ದತ್ತಹೋಮ ವಗೈರೆ ತೀರಿಸಿ ದತ್ತಕ ಮಾಡಿಕೊಂಡಿದ್ದು ಈಗ ನಾನು ಧಾರವಾಡಕ್ಕೆ ಹೋಗೋದು ಜರೂರ ಅದೆ ಅಲ್ಲಿಂದ ಬಂದ ಮೇಲೆ ಕಾಗದ ಪತ್ರ ಮಾಡಿಸೋಣ ಅಂತಾ ಹೇಳಿದಿರಿ ಈಗ ನಿಮ್ಮ ದತ್ತಕ ಮಗಾ ಶ್ರೀನಿವಾಸ ಈತನನ್ನು ಎರಡನೇ ನಮ್ಮ ವಿರುದ್ಧ ಜನರ ಚಿಥಾವಣಿ ಮೇಲಿಂದ ವಿನಾಕಾರಣ ಮುಳುಗಿಸುವ ಇರಾದೆಯಿಂದ ಬನಾವಟ ನೋಟೀಸು ಕೊಟ್ಟಿರುತ್ತೀರಿ ದತ್ತಕ ವ ಹೋಮವಿಧಾನ ವಗೈರೆ ಆಗಿರಲಾಗಿ ಖೊಟ್ಟಿ ನೋಟೀಸು ಉಲಟ ಕೊಟ್ಟ ಬಗ್ಗೆ ಮತ್ತು ವಯೋವೃದ್ಧ ವ ಥಿತಾಣಾ ಅದ ಮಾಲಿಕ ನಿಮ್ಮನ್ನು ಪಾಲನ ಮಾಡುವ ಇರಾದೆಯಿಂದ ದತ್ತಕ ತಗೊಂಡು, ಈಗ ಇಲ್ಲಾ ಅಂತಾ ನೋಟೀಸು ಕೊಟ್ಟ ಬಗ್ಗೆ ನಿಮ್ಮ ಮೇಲೆ ಕಾಯದೆಶೀರ ವಿಶ್ವಾಸಘಾತ ಫಿರ್ಯಾದಿ ಯಾಕೆ ಮಾಡಬಾರದು ಅಂಬೋ ಬಗ್ಗೆ ತಿಳಿಸಬೇಕು ನಿಮ್ಮ ದತ್ತಕ ಮಗಾ ಅಲ್ಪವಯಿ ಇರುವದರಿಂದ ನೀವು ಅವನನ್ನು ದತ್ತಕ ತಗೊಳ್ಳುವ ಪೂರ್ವದಲ್ಲಿದ್ದ ನಿಮ್ಮ ಮಾಲ್ಕಿ ಯಾವತ್ತು ಆಸ್ತಿಯ ಮೇಲೆ ಸದರಿಯವನ ಹಕ್ಕ ವ ಮಾಲ್ಕೀ ಸಂಪೂರ್ಣ ಇರುತ್ತದೆ ವಿಲೇವಾಟ ಮಾಡಲಿಕ್ಕೆ ನೀವು ಬಾಧ್ಯರಾಗುವದಿಲ್ಲಾ ಇದು ಕಾಯದೆಶೀರ ಅದೆ ನೀವು ೧೯-೫-೨೭ ನೇ ದಿವಸ ಕೊಟ್ಟ ನೋಟೀಸು ಚಿಥಾವಣಿದು ಅದೆ. ಅಂತಾ ಕೊಟ್ಟ ನೋಟಿಸು.

ತಾ|| ೨೬-೫-೧೯೨೭ ನೇ ಇಸ್ವಿ
ಸಹಿ ಎಚ್. ಕೆ. ಪೋತನೀಸ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ನ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕಿರಿ ವ್ಯಾಪಾರಸರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಕು ಕಡೆಗೆ ಮಾರಾಟವಾಗುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ನಮಗೆ ಕೆಳಗಿನ ವಿಳಾಸಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೪ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟರು—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ
ಮತ್ತು
ಜನಾರ್ದನ ರಾಮಚಂದ್ರರಾವ ಟಿಕಾರೆ,
ಮಾಟ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೧೦ ಕ್ಕೆ ೩ ರೂಪಾಯಿ.
೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮! | ಧಾರವಾಡ ಶನಿವಾರ ತಾರೀಖು ೨೮ ನೇ ಮೇ ೧೯೩೭ | ಸಂಚಿಕೆ ೧೧೦

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತರದಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯು ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ಜಾಹೀರ ನೋಟೀಸು.

ಹೊಲಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ॥ ಸ॥ ನಂಬರ ೧೩ ಯಕರೆ ೧೧-೧೬ ತರಮ ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಪತಿರ ಇವರ ಮನೆ ಆಲೂರಲ್ಲಿ ರೋದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು, ವ ಮನೆ-ತಾ॥ ೩೧ ಮಾಹೆ ಮೆ ಸನ್ನ ೧೯೩೭ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮಧ್ಯಾನ್ಹ ೩ ತಾಸಿಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖು ೩೦ನೇ ಮಾಹೆ ಎಪ್ರಿಲ ೧೯೩೭ ಇಸ್ವಿ

G. V. DESHPANDE,
Dy. Nazir & Guardian of
Shrinivas & Ramachandra Alur.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಕಾಯಮನುತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ ”	೭—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೮-೫-೨೭ ನೇ ಇಸ್ವಿ

ಇಂಗ್ಲಂಡವು ರಶಿಯಾದ ಸಲುಗೆ ಹರಕೊಂಡಿತು.

ಇಂಗ್ಲಂಡ ಮತ್ತು ರಶಿಯಾದ ನಡುವೆ ಹುಟ್ಟಿದ ಕಲಹದಲ್ಲಿ ಇಂಗ್ಲಂಡವು ಸಧ್ಯದಲ್ಲಿ ವ್ಯಾಪಾರದ ಮಟ್ಟಿಗೆ ರಶಿಯಾದ ಸಲುಗೆ ಹರಕೊಂಡಿತು. ಮುಖ್ಯ ಮಂತ್ರಿಯಾದ ಮಿ. ಬಾಲ್ಡವಿನಸಾಹೇಬರು ರಶಿಯವು ವ್ಯಾಪಾರದ ಸೋಗಿನಿಂದ ಲಂಡನದಲ್ಲಿದ್ದುಕೊಂಡು, ಬ್ರಿಟಿಶ ಸಾಮ್ರಾಜ್ಯವನ್ನು ಬುಡಮೇಲು ಮಾಡುವ ಕೃಷ್ಣಕಾರಸ್ಥಾನವನ್ನು ಹೇಗೆ ನಡೆಸಿತೆಂಬದನ್ನು ಪಾರ್ಲಮೆಂಟ ಸಭೆಯಲ್ಲಿ ಹೇಳಿದ್ದಾರೆ. ಅದರ ಸಾರಾಂಶವು ಮುಂದೆ ಕೊಟ್ಟಂತಿರುತ್ತದೆ:—

"ರಶಿಯಾದ ಗುಪ್ತ ಏಜಂಟರು ಇಂಗ್ಲಿಷರ ಗುಪ್ತ ಸಂಗತಿಗಳನ್ನು ತಿಳಕೊಳ್ಳುವದಕ್ಕಾಗಿ ನಡೆಸಿದ ಕಟಾರಸ್ಥಾನದ ಮೇಲೆ ಪೋಲೀಸರೂ, ದಂಡಿನವರೂ ಲಕ್ಷ್ಯವಿಟ್ಟರು. ಇವರ ಶೋಧಗಳ ತಾಳ ಕೂಡಿದವು. ಇವರು ದೊರಕಿಸಿದ ಫೋಟೋ ಮತ್ತು ಗುಪ್ತ ಪತ್ರಗಳನ್ನು ರಶಿಯಾಕ್ಕೆ ಕಳಿಸುವಂತೆ ವರ್ತಕ ಸಂಘದ ಮುಖ್ಯಾಧಿಕಾರಿಯು ಒಪ್ಪಿಕೊಂಡಿದ್ದನು. ಇಂಗ್ಲಿಷ ಸರಕಾರದ ವಿಮಾನಖಾತೆಗೆ ಸೇರಿದ ಒಬ್ಬ ಇಂಗ್ಲಿಷ ಕಾಮದಾರನೇ ಎರಡು ಮಹತ್ವದ ಕಾಗದಗಳನ್ನು ಕದ್ದನು. ಈ ಅಪರಾಧಕ್ಕಾಗಿ ಆತನು ಶಿಕ್ಷೆ ಅನುಭವಿಸುತ್ತಿದ್ದಾನೆ. ಇದಕ್ಕಿಂತ ಇನ್ನೊಂದು ಅತಿ ಮಹತ್ವದ ಕಾಗದವು ಮಾಯವಾಯಿತು. ಅದನ್ನು ಆರಕಾಸದ ಮನೆಗೆ ತಂದು, ಅದರ ಫೋಟೋ ತಕ್ಕೊಳ್ಳುವಾಗ ಪೋಲೀಸರು ಅಲ್ಲಿಗೆ ಹೋದರು. ಅಲ್ಲಿ ಅನೇಕ ಮಹತ್ವದ ಕಾಗದ ಪತ್ರಗಳು ಸಿಕ್ಕವು. ಬ್ರಿಟಿಶರು ಚೀನದಿಂದ ಹೊರಬೀಳಬೇಕೆಂಬ ಪತ್ರಗಳೂ ಇರುವವು. ಬ್ರಿಟಿಶರ ದಬ್ಬಾಳಿಕೆಯಲ್ಲಿ ಸಿಕ್ಕಂಥ ನಿಗ್ರೋ, ಹಿಂದೂ ಮೊದಲಾದ ಕುಲದವರು ಬ್ರಿಟಿಶ ಸಾಮ್ರಾಜ್ಯವನ್ನು ಒಬ್ಬ ಹಾಕುವ ಚಳವಳಿ ಮಾಡುವಂತೆ ಉತ್ತೇಜನ ಕೊಡಬೇಕೆಂಬ ಲೇಖಗಳೂ ಇರುವವು. ಅಂಟೋನ ಮಿಲರನೆಂಬವನನ್ನು ಮಿತಾಕ್ಷರಗಳನ್ನು ಒಡೆದು ಹೇಳುವ ಕೆಲಸದಲ್ಲಿ ನೇಮಿಸಿದ್ದಾರೆ. ಪೋಲೀಸರು ಆರಕಾಸ ಮನೆಯಲ್ಲಿ ಝಡತಿಗೆ ಹೋದಾಗ ಮಿಲರನು ಕಾಗದಪತ್ರಗಳನ್ನು ಸುಡುತ್ತಿದ್ದನು. ಪೋಲೀಸರಿಗೂ ಈತನಿಗೂ ಜಗ್ಗಾಟ ಹೊಡದಾಟವಾಯಿತು. ಈತನ ಕಯ್ಯಲ್ಲಿದ್ದ ಒಂದು ಗುಪ್ತ ಪಾಕೀಟು ದೊರೆಯಿತು. ಅಮೇರಿಕೆ, ಅಸ್ಟ್ರೇಲಿಯಾ, ಕಾನಡಾ, ನ್ಯೂಝಿಲಂಡ ಮತ್ತು ದಕ್ಷಿಣ ಆಫ್ರಿಕೆಯ ಬೊಲ್ಸೆವಿಕರಿಗೆ ಬರೆದ ಗುಪ್ತ ಪತ್ರಗಳ ವಿಳಾಸಗಳೂ ದೊರೆತಿವೆ. ಚೀನದಲ್ಲಿ ಬೊಲ್ಸೆವಿಕ ಪ್ರತಿನಿಧಿಗಳು ಇಂಗ್ಲಿಷರ ವಿರುದ್ಧ ನಡೆಸಿದ ಗುಪ್ತ ಮಸಲತ್ತು ಮತ್ತು ಚಳವಳಿಯು ವ್ಯಾಪಾರ ವಿಷಯಕವಾದ ಒಡಂಬಡಿಕೆಯ ಶರ್ತುಗಳ ವಿರುದ್ಧ ಇರುತ್ತದೆ. ಆದುದರಿಂದ ರಶಿಯಾದ ಸಲುಗೆ ಹರಕೊಳ್ಳಬೇಕೆಂದು ನಿಶ್ಚಯ ಮಾಡಿದ್ದೇವೆ."

ಮಂತ್ರಿಗಳು ಇದಕ್ಕೂ ವಿಸ್ತೃತವಾದ ಒಂದು ಲೇಖವನ್ನು ಪ್ರಸಿದ್ಧ ಮಾಡಿ, ರಶಿಯಾದ ಕಾರಸ್ಥಾನಗಳನ್ನು ಬೈಲಿಗೆ ಹಾಕತಕ್ಕವರಿದ್ದಾರೆ. ಮಿ. ಬಾಲ್ಡವಿನಸಾಹೇಬರು ಸ್ವಪಕ್ಷ ಸಮರ್ಥನವನ್ನು ಬೇಕಾದಷ್ಟು ಮಾಡಿಕೊಂಡರೂ, ಇದು ಕೂಲಿಕಾರ ಪಕ್ಷಕ್ಕೆ ಒಪ್ಪಿಗೆಯಾಗಿಲ್ಲ, ರಶಿಯಾದ ವ್ಯಾಪಾರವನ್ನು ನಿಷ್ಪ್ರಯೋಜಕರೇ ನಿಲ್ಲಿಸಬೇಡಿರಿ. ಇದೇ ವಿಷಯವನ್ನು ಪ್ರಾಧಾನ್ಯ ಮಾಡಿಕೊಂಡು ಪಾರ್ಲಮೆಂಟದ ಚುನಾವಣೆಯಾಗಲಿ; ಲೋಕಮತದಂತೆ ನಡೆಯುವಾ ಎಂಬದಾಗಿ ಮಿ. ಮ್ಯಾಕ್‍ಡೋನಾಲ್ಡ ಸಾಹೇಬರು ಪ್ರತಿಸೂಚಿಸತಕ್ಕವರಿದ್ದಾರೆ.

ಚುನಾವಣೆಯ ವಿಚಾರವು ಹೇಗೇ ಆಗಲಿ; ಮಿ. ಬಾಲ್ಡವಿನಸಾಹೇಬರು ತಮ್ಮ ಹಾಲಿನ ಬಿಟ್ಟರೆಂಬ ವರ್ತಮಾನ ಕೇಳಿದ ಕೂಡಲೆ ರಶಿಯಾ ಸರಕಾರದವರು ಇಂಗ್ಲಂಡದ ಕಾರಖಾನೆಗಳಿಗೆ ಒಂದು ಕಾಸಿನ ಕೆಲಸ ಸಹ ಕೊಡಬೇಡಿರೆಂದು ಲಂಡನದಲ್ಲಿರುವ ತಮ್ಮ ಪ್ರತಿನಿಧಿಗೆ ತಾರಿನಿಂದ ಅಪ್ಪಣೆ ಮಾಡಿದ್ದಾರೆ.

ರಾವಸಾಹೇಬರು ಸನ್ಯಾಸಿಯಾದರು.

ಮಂಗಳೂರಲ್ಲಿ ಬ್ರಹ್ಮೋ ಸಮಾಜದ ಅಧ್ಯಕ್ಷರೂ, ಬಹುಕಾಲ ಅಸ್ಪೃಶ್ಯ ಸಮಾಜದ ಅಧ್ಯಕ್ಷರೂ ಆಗಿದ್ದ ರಾವಸಾಹೇಬ ರಂಗರಾಯರೆಂಬವರು ಸನ್ಯಾಸಿಯಾಗಿ ಈಶ್ವರಾನಂದನೆಂಬ ಹೆಸರು ಪಡಕೊಂಡರು. ಆರ್ಯ ಸಮಾಜದ ತತ್ವದ ಪ್ರಕಾರ ಆಶ್ರಮ ತಕ್ಕೊಂಡರು. ಇವರು ಮದ್ರಾಸದ ಮುಖ್ಯಮಂತ್ರಿಯಾದ ಡಾಕ್ಟರ ಸುಬ್ಬರಾಯನರವರ ಮಾವಂದಿರು. ಗೃಹಸ್ಥಾಶ್ರಮಿಯಾಗಿದ್ದಾಗ ಉಳ್ಳಂಥ ಶ್ರೀಮಂತಿಕೆಯ ಎಲ್ಲ ಸುಖೋಪಭೋಗಗಳನ್ನು ತ್ಯಜಿಸಿದ್ದಂತೂ ನಿಜವು. ಸ್ವಂತ ಮನೆಯಲ್ಲಿ ಸಹ ನಿಲ್ಲದೆ ಮಂಗಳೂರಿಗೆ ಸನಿಯವಾಗಿರುವ ಮರಕೇರಾ ಎಂಬ ಗುಡ್ಡದಲ್ಲಿರುವ ಒಂದು ಪರ್ಣಕುಟಿಯಲ್ಲಿ ವಾಸವಾಗಿದ್ದಾರೆ.

ಆಳಿಯಂದಿರ ಮಾರಾಟ.

ಸಿಂಧ ಪ್ರಾಂತದಲ್ಲಿ ಅಮಿಲರೆಂಬ ಕುಲದ ಹಿಂದೂ ಜನರು ಮುಂಬಯಿಯ ಪರಭು ಜನರಂತೆ ಶ್ರೀಮಂತರಾಗಿದ್ದಾರೆ. ಪರಭೂಗಳಂತೆ ಇವರಲ್ಲಿಯೂ ವರಗಳ ಕೊರತೆಯುಂಟು. ಸುಶಿಕ್ಷಿತ ವರವಾದರಂತೂ ತೀರಿತು. ಆತನ ವರದಕ್ಷಿಣೆಯ ಸವಾಲು ಮಿತಿಮೀರಿ ಏರುತ್ತದೆ. ಲಗ್ನ ಮಾಸದಲ್ಲಿ ಸಾಧಾರಣವಾಗಿ ವರದಕ್ಷಿಣೆಯು ಎರಡು ಸಾವಿರದಿಂದ ಎಂಟು ಸಾವಿರದ ತನಕ ಏರುವದು. ಆದರೆ ಈ ವರ್ಷ ೨೦ ಸಾವಿರ ವರದಕ್ಷಿಣೆ ಮತ್ತು ಮೇಲೆ ಹತ್ತುಸಾವಿರ ವರೋಪಚಾರದ ತನಕ ಹೋಗಿವೆ. ಹೀಗೆ ವರದಕ್ಷಿಣೆ ಏರಿದರೆ ಮುಂದೇನು ಗತಿಯೆಂದು ಅಮಿಲರಲ್ಲಿ ದೊಡ್ಡ ಚಿಂತೆಯೂ ಚಳವಳಿಯೂ ಹುಟ್ಟಿರುತ್ತದೆ. ಇದಕ್ಕೆ ತಡೆಹಾಕುವದಕ್ಕಾಗಿ ಹೈದರಾಬಾದಿನಲ್ಲಿ ಒಂದು ಸಭೆ ಕರೆದರು. ಆದರೆ ಅವರಷ್ಟಕ್ಕಿಂತ ಹೆಚ್ಚು ಜನರು ಬರಲಿಲ್ಲ. ಇಷ್ಟೇ ಜನರಲ್ಲಿ ಒಂದು ಕಮಿಟಿ ನೇಮಿಸಿದ್ದಾರೆ. ಕಮಿಟಿಯು ಕೆಲಸವು ಗುದ್ದಿ ತೋಡಿ ಇಲೀ ತೆಗೆದಂತಾಗುವದೆಂದು ಜನರು ಆಡುವರು.

ಎದ್ದಾಗ ಕೂತಾಗ ಬ್ರಾಹ್ಮಣೇತರ.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ರಾವಿಗೆ ವರ್ಕಿಂಗ ಕಮಿಟಿಯವರು ಮಹಾಮಾಲಿಯ ಬುರಕಿ ಹಾಕಿದ್ದರಿಂದ ಉಂಟಾದ ಇಬ್ಬಣದ ಲಾಭ ಪಡಕೊಂಡು, ಸ್ವರಾಜ್ಯ ಪಕ್ಷದ ಬ್ರಾಹ್ಮಣೇತರರೆಂಬವರು ಕಾಂಗ್ರೆಸಕ್ಕೆ ಶರಣು ಹೊಡೆದು, ಬ್ರಾಹ್ಮಣೇತರ ಪಕ್ಷದಲ್ಲಿ ಸೇರಬೇಕೆಂದು ಪ್ರಸಿದ್ಧ ಅಸಹಕಾರಿಯಾಗಿದ್ದ ಡಾಕ್ಟರ ವರದರಾಜಲು ತುತೂರಿ ಹಿಡಿದಿದ್ದರೆ. ಅಲ್ಪಸ್ವಲ್ಪ ಮತಭೇದದ ದೆಸೆಯಿಂದ ಬ್ರಾಹ್ಮಣೇತರರಾದಂಥ ಸ್ವರಾಜ್ಯ ಪಕ್ಷೀಯರು ಕಾಂಗ್ರೆಸದ ಮೇಲೆ ಮುನಿದು, ಬ್ರಾಹ್ಮಣೇತರರ ಲಾಂಗೂಲಚಾಲನವೃತ್ತಿಯ ಜಸ್ಟೀಸ ಪಕ್ಷವನ್ನು ಸೇರುವರೆಂಬದು ಕೇವಲ ಹುಚ್ಚತನವು. ಎದ್ದಾಗ ಕೂತಾಗ ತಮ್ಮ ಕುದುರೆಯನ್ನು ಮುಂದೆ ಹಾಕುವವರು ಅಪಹಾಸ್ಯಕ್ಕೆ ಮಾತ್ರ ಕಾರಣರಾಗುತ್ತಾರೆ.

ವಿಧವೆಯ ಆತ್ಮಹತ್ಯೆ.

ಮುಂಬಯಿಯಲ್ಲಿ ಇಂದಿರಾಬಾಯಿ ತಾಂಬೆ ಎಂಬ ಹೆಸರಿನ ನರ್ಸಳು ವಿಧವೆಯು. ದೇಶಪಾಂ

ಡೆ ಎಂಬವನ ಪ್ರೇಮಪಾಶದಲ್ಲಿ ಬಿದ್ದಳು. ಆದರೆ ತಂದ್ರಿಮುಚ್ಚಿ, ಈ ರೀತಿ ನಡೆಯುವದು ಆಕೆಗೆ ಸಮಾಧಾನವೆನಿಸಲಿಲ್ಲ. ಪುನರ್ವಿವಾಹ ಮಾಡಿಕೊಳ್ಳಬೇಕೆಂದಳು ಆದರೆ ಧರ್ಮವು ಅಡ್ಡ ಬಂತು. ಜಾತಿಕೆಟ್ಟ ಎನಿಸಿಕೊಳ್ಳುವದಕ್ಕಿಂತ ಮರಣವೇ ಲೇಸೆಂದು ಅಫೂ ತಕ್ಕೊಂಡು ಆತ್ಮಹತ್ಯ ಮಾಡಿಕೊಂಡಳು. ಸಾಯುವಾಗ ದೇಶಪಾಂಡೆಯನ ಹೆಸರಿನಿಂದ ಒಂದು ಪತ್ರ ಬರೆದು ಅದರಲ್ಲಿ "ನೀನು ಸುಂದರಿಯಾದಂಥ ಹುಡಿಗೆಯ ಮದಿವೆಯಾಗು ನನ್ನದೂ ನಿನ್ನದೂ ಸ್ವರ್ಗದಲ್ಲಿ ಭೆಟ್ಟಿ" ಎಂದು ಹೇಳಿದ್ದಾಳೆ.

ಸಿಂಧದ ಸ್ವತಂತ್ರ ವಿಭಾಗ-

ಭಾಷೆಯ ಪ್ರಕಾರ ಸಿಂಧ, ಆಂಧ್ರ ಮತ್ತು ಕರ್ನಾಟಕವನ್ನು ಸ್ವತಂತ್ರ ಮಾಡಬೇಕೆಂದು ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಾದ ಠರಾವಿಗೆ ಅಲ್ಲಿ ವಾಸವಾಗಿರುವ ಹಿಂದೂ ಜನರು ಸಮ್ಮತಿಸ ಪದಿಲ್ಲ. ಪಂಡಿತ ಮೋತೀಲಾಲ ಮತ್ತು ಶ್ರೀ ಶ್ರೀನಿವಾಸ ಅಯ್ಯಂಗಾರರು ಹಿಂದೂ ಮುಸಲಮಾನ ಐಕ್ಯದ ದೆಸೆಯಿಂದ ಎಷ್ಟೇ ಆತುರ ಪಟ್ಟರೂ ಅದು ಸಿಂಧವಾಸಿಗಳಿಗೆ ಅಪಥ್ಯವಾಗಿರುತ್ತದೆ. ಕಾಂಗ್ರೆಸದ ಈ ಠರಾವು ಹಿಂದೂ ಮಹಾಸಭೆಗೆ ಎಂದಿಗೂ ಒಪ್ಪಿಗೆಯಾಗಲಾರದು. ಆದುದರಿಂದ ಹಿಂದೂ ಮಹಾಸಭೆಯ ಸ್ಪೇಶಲ ಕಮಿಟಿ ಕೂಡಿಸಿ, ಈ ವಿಷಯದ ನಿರ್ಣಯ ಮಾಡಬೇಕೆಂದು ಕೌನ್ಸಿಲದ ಮೆಂಬರರಾದ ಶ್ರೀ ಜಯರಾಮದಾಸರು ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ. ಮುಸಲಮಾನರನ್ನು ಸಮಾಧಾನಪಡಿಸುವದಕ್ಕಾಗಿ ಕಾಂಗ್ರೆಸ ಸಭೆಯವರ ಠರಾವು ಹಿಂದೂ ಮಹಾಸಭೆಯವರಿಗೆ ಸಮ್ಮತವಾಗಿರುವದಿಲ್ಲ.

ಇಂಗ್ಲಂಡ ಮತ್ತು ಫ್ರಾನ್ಸದ ಗೆಳೆತನ-

ಫ್ರಾನ್ಸದ ಅಧ್ಯಕ್ಷರು ಇಂಗ್ಲಂಡಕ್ಕೆ ಬಂದು ಸ್ವತಃ ಸಮ್ರಾಟ ಪಂಚಮಜಾರ್ಜರಿಂದ ಆತಿಥ್ಯ ಸತ್ಕಾರ ಹೊಂದಿದ ವರ್ತಮಾನವನ್ನು ಈ ಮೊದಲು ಬರೆದಿದ್ದೇವೆ. ಈ ಪ್ರಕಾರ ನಡೆದ ಆದರಾತಿಥ್ಯದ ಬುಡದಲ್ಲಿ ರಾಜಕೀಯ ಗೂಢ ಕಾರಣವುಂಟು. ವಿಲಾಯತಿಯಲ್ಲಿ ಶಾಂತತೆಯು ನೆಲೆಗೊಳಿಸಲಿಕ್ಕೂ, ಇಟಲಿಯ ಕಾರಸ್ಥಾನವು ಭೂಮಧ್ಯ ಸಮುದ್ರದಲ್ಲಿ ಹಬ್ಬದಂತೆಯೂ ವಿಚಾರ ಮಾಡುವದೇ ಈ ಭೆಟ್ಟಿಯ ಒಳ ಇಂಗಿತವಾಗಿರುತ್ತದೆ. ಇಂಗ್ಲಂಡ ಮತ್ತು ಫ್ರಾನ್ಸವೊಂದಾದರೆ ವಿಲಾಯತಿಯ ಯಾವ ಪ್ರಬಲರಾಜರಿಗೂ ಸೊಪ್ಪು ಹಾಕಲಾರರೆಂದು ಈ ಪ್ರಸಂಗದಲ್ಲಾದ ಭಾಷಣಗಳಿಂದ ಧ್ವನಿತವಾಗುತ್ತದೆ.

ಜಂಗಮವಾಡಿಯಲ್ಲಿ ಕಳವು:

ಕಾಶಿಯಲ್ಲಿರುವ ಜಂಗಮವಾಡಿಯಲ್ಲಿ ಬೆಳ್ಳಿಯ ಮೂರ್ತಿ ಮತ್ತು ಬೇರೆ ಪದಾರ್ಥಗಳ ಕಳವಾಗಿರುತ್ತದೆ. ಒಂದು ಮೂರ್ತಿಯು ಎರಡುಸಾವಿರ ತೊಲಿ ತೂಕದ್ದಿದೆ. ಇದು ಕೂತಂಥ, ತಲೆಯಮೇಲೆ ಜಟಾಧಾರಣ ಮಾಡಿದಂಥ ಎಡಗಯ್ಯಲ್ಲಿ ಪುಸ್ತಕ ಹಿಡಿದಂಥ ಮತ್ತು ಬಲಗಯ್ಯಿಂದ ಏನೋ ಉಪದೇಶ ಮಾಡುವಂತೆ ಭಾವವುಳ್ಳದ್ದಾಗಿರುತ್ತದೆ.

ಕಾಯದೆಭಂಗದ ಸುದ್ದಿಗಳು—

ನಾಗಪೂರದ ಕಾಯದೆಭಂಗದಲ್ಲಿ ಹಿಡಿಯಲ್ಪಟ್ಟಂಥ ಸೇನಾನಿ ಅವರಿಯನ್ನು ನಾಗಪೂರದಿಂದ ಜಿಂದವಾರಾದ ತುರಂಗಕ್ಕೆ ವೈದಿದ್ದಾರೆ. ಇವರ ವಿಚಾರಣೆಯು ೩೦ ನೆಯ ತಾರೀಖಿನ ದಿವಸ ನಡೆಯುವದು.

ನಿಜಾಮುದ್ದೀನ, ಹೀರಾಲಾಲ ಮತ್ತು ಸುರಜಾಪ್ರಸಾದ ಇವರು ಡಿಫನ್ಸ ಕೊಟ್ಟದ್ದರಿಂದ, ಇವರು ಜಾಮೀನದ ಮೇಲೆ ಬಿಡುಗಡೆ ಹೊಂದಿದ್ದಾರೆ. ಇವರು ಡಿಫನ್ಸ ಕೊಟ್ಟದ್ದು ಅವರಿಗೆ ಮಾನ್ಯವಿಲ್ಲ.

ಅವರಿಯನ್ನು ದಸ್ತಗಿರ ಮಾಡಿದ ಕೂಡಲೆ ಶ್ರೀ ಶಿವಾರೆಯವರ ಅಧ್ಯಕ್ಷತೆಯಲ್ಲಿ ಏಳು ಸಾವಿರ ಜನರ ಜಾಹೀರ ಸಭೆಯು ಕೂಡಿ, ಅವರಿಯ ಧೈರ್ಯ ಸ್ಥೈರ್ಯದ ಪ್ರಶಂಸೆ ಮಾಡಲ್ಪಟ್ಟಿತು.

ಅವರಿಯನ್ನು ಹಿಡಿದ ದಿವಸ ಪಟ್ಟಣಿಗರು ಹರತಾಳ ಮಾಡಿ, ಎಲ್ಲ ವ್ಯವಹಾರವನ್ನು ನಿಲ್ಲಿಸಿದ್ದರು.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ಮೆಂಬರರಾದ ಮತ್ತು ಮುಳಿಯಾಳ ಗೃಹಸ್ಥರಾದ ಶ್ರೀ ಶಂಕರರಾವ ಕೊಂಬ್ರಾಯಲಿಯರು ಕಾಯದೆಭಂಗವನ್ನು ಒಪ್ಪಿ ಈ ಚಳವಳಿಯಲ್ಲಿ ಸ್ವತಃ ಭಾಗ ತಕ್ಕೊಳ್ಳುವಂತೆ ಜಾಹೀರ ಮಾಡಿದ್ದಾರೆ.

ಹಿಂದುಸ್ಥಾನ ಸರಕಾರದವರು ಈ ದೇಶದ ಗಿರಣಿಗಳ ಸಂರಕ್ಷಣೆಗಾಗಿ ಪರದೇಶದ ಬಟ್ಟೆಗಳ ಮೇಲೆ ಜಕಾತಿ ಕೂಡಿಸಿದರೆ- ಜಪಾನರು ಹಿಂದುಸ್ಥಾನದಲ್ಲಿ ಗಿರಣಿಗಳನ್ನು ಕಟ್ಟುವ ವಿಚಾರ ಮಾಡಿದ್ದಾರೆ. ವ್ಯವಸ್ಥಾಪಕರಷ್ಟೇ ಜಪಾನರಾಗಿ, ಕಾರಕೂನ ಕೂಲಿ ಮೊದಲಾದವರು ಈ ದೇಶಿಯರೇ ಆಗುವರೆಂದು ಮುಂಬಯಿಯಲ್ಲಿರುವ ಜಪಾನ ವಕೀಲನು ಹೇಳುತ್ತಾನೆ.

ಮುನಸಫರ ವರ್ಗಾವರ್ಗಿ.

—o—

ಧಾರವಾಡದ ಜಾ. ಫ. ಕ್ಲಾ. ಸಬ್‌ಜಜ್ಜರಾದ ಮಿ. ಗುತ್ತೀಕರರು ಅಲ್ಲಿಯೇ ಫ. ಕ್ಲಾ. ಸಬ್ ಜಜ್ಜರಾಗಿ ಮಿ. ಸಾನೆಯವರ ಬದಲಾಗಿ ನಿಯಮಿಸಲ್ಪಟ್ಟಿದ್ದಾರೆ; ಮಿ. ಕೆ. ಜಿ. ಕುಲಕರ್ಣಿ ಇವರು ಜಾ. ಫ. ಕ್ಲಾ. ಸಬ್‌ಜಜ್ಜರಾಗಿ ಕೆಲಸ ಮಾಡತಕ್ಕದ್ದು.

ಧಾರವಾಡದ ಮಿ. ಎಸ್. ಎಂ. ಭೆಂಡೆ ಜಾ. ಅಡಿ. ಸೆ. ಕ್ಲಾ. ಸಬ್ ಜಜ್ಜರು ಹುಬ್ಬಳ್ಳಿಯ ಜಾ. ಸೆ. ಕ್ಲಾ. ಸಬ್ ಜಜ್ಜರಾಗಿ (ಹಂಗಾಮಿ) ಕೆಲಸ ಮಾಡತಕ್ಕದು.

ಮಿ. ಆರಾನಾ ಜಾ. ಸೆ. ಕ್ಲಾಸ ಸಬಜಜ್ಜ ಹುಬ್ಬಳ್ಳಿ ಇವರು ಧಾರವಾಡ ಜಾ. ಸೆ. ಕ್ಲಾ. ಸಬಜಜ್ಜರ ಕೆಲಸ ಮಾಡತಕ್ಕದ್ದು.

ವಿಜಾಪೂರದ ಹಂಗಾಮಿ ಡಿಸ್ಟ್ರಿಕ್ಟ ಜಜ್ಜರಾದ ಮಿ ಬಾಲಭಾವಿಯವರು ರಜೆ ಮುಗಿದ ನಂತರ ಬೆಳಗಾವಿಯ ಫ. ಕ್ಲಾ. ಸಬಜಜ್ಜರಾಗಿ ಮೂರು ತಿಂಗಳ ವರೆಗೆ ಕೆಲಸ ಮಾಡಿ ನಂತರ, ವಿಜಾಪೂರದ ಫ. ಕ್ಲಾ. ಸಬಜಜ್ಜರಾಗಿ ಮೂರು ತಿಂಗಳ ವರೆಗೆ ಕೆಲಸ ಮಾಡತಕ್ಕದ್ದು.

ಮಿ. ಬಾಲಭಾವಿಯವರು ಬೆಳಗಾವಿಯಿಂದ ವಿಜಾಪೂರಕ್ಕೆ ಬರುವವರೆಗೆ ಮಿ. ಬಾಪಟ, ವಿಜಾಪೂರದ ಜಾ. ಸೆ. ಕ್ಲಾ. ಸಬಜಜ್ಜರು ಫ. ಕ್ಲಾ. ಸಬಜ್ಜರ ಕೆಲಸ (ತಮ್ಮ ಕೆಲಸವಲ್ಲದೆ) ನೋಡತಕ್ಕದ್ದು.

ಹಾವೇರಿಯ ಸೆ. ಕ್ಲಾ. ಸಬಜಜ್ಜರಾದ ಮಿ. ಶಿರಾಳಿ ಇವರು ಬೈಲಹೊಂಗಲದ ಸೆ ಕ್ಲಾ. ಸಬಜಜ್ಜರಾಗಿ ಕೆಲಸ ಮಾಡತಕ್ಕದ್ದು; ಅವರ ಸ್ಥಳಕ್ಕೆ ಬೈಲಹೊಂಗಲದ ಮಿ. ಕ್ಷೀರಸಾಗರರು ಹಾವೇರಿಗೆ ಹೋಗತಕ್ಕದ್ದು.

ಚೀನರಿಗೆ ಸಹಾಯವಾಗಿ ವಿಲಾಯತಿಯ ಒಂದಾನೊಂದು ದೇಶದ ಹಡಗದ ತುಂಬ ಮದ್ದುಗುಂಡು ಕೊಲೊಂಬೋದ ಮಾರ್ಗವಾಗಿ ಹೋಗತಕ್ಕದ್ದಿದೆ. ಇದನ್ನು ಇಂಗ್ಲಿಷ ಸರಕಾರದವರು ಜಪ್ತಮಾಡುವ ಸಿದ್ಧತೆ ಮಾಡಿದ್ದಾರೆ. 'ದೇಶ ಮತ್ತು ಹಡಗದ ಹೆಸರನ್ನು ಸದ್ಯದಲ್ಲಿ ಗುಪ್ತವಾಗಿಟ್ಟಿದ್ದಾರೆ.

ಕಾರಖಾನೆಗಳ ವರ್ತನವು ಎಷ್ಟು ಸೋಜಿಗವಾಗಿರುತ್ತದೆಂಬುದು ತ್ರಾವಣಕೋರ ಸಂಸ್ಥಾನದಲ್ಲಿ ಮೊನ್ನೆ ತಾನೆ ನಡೆದ ಒಂದು ಸಂಗತಿಯಿಂದ ವ್ಯಕ್ತವಾಗುತ್ತದೆ. ಅಲ್ಲಿಯ ಗುಡ್ಡಗಾಡ ಪ್ರದೇಶದಲ್ಲಿಯ ಉದಂಪಚೋಲಾ ಎಂಬ ಊರಿನ ಹತ್ತ

ಜಾಹೀರಾತು.

—೦—

ಜಮನಸಾಬ ವ|| ಬುಡನಸಾಬ ಬಳಿಗಾರ ಸಾ|| ಹುಬ್ಬಳ್ಳಿ ಇವರಿಂದ ಹೀಗೆ ಜಾಹಿರ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ:- ಬಿಯಾಮಾ ಕೋಂ ಜಮನಸಾಬ ಬಳಿಗಾರ ಯಂಬವಳು ನನ್ನ ಲಗ್ನದ ಹೆಂಡತಿ ಇದ್ದು ನನ್ನಿಂದಾ ಅವಳ ಹೊಟ್ಟೆಲೆ ಮಕ್ತುಮಹುಶೇನ ವ|| ಜಮನಸಾಬ ಎಂಬ ಹುಡುಗನು ಹುಟ್ಟಿರುತ್ತಾನೆ.

ನನಗೆ ಬೆಳಗಾವ ಜಿಲ್ಲಾ ಬೈಲಹೊಂಗಲ ತಾಲ್ಲೂಕ ಪೈಕಿ ಬೈಲಹೊಂಗಲ ಗ್ರಾಮದಲ್ಲಿಯ ಅಂಗಡಿ ವ ಎರಡು ಮನೆಗಳು ಇವುಗಳ ಮ್ಯುನಿಸಿಪಾಲಿಟಿ ನಂಬರು ೧೧೮೭, ೧೪೫೯, ೧೫೬೦ ಕ್ರಮೇಣಾ ಈ ಪ್ರಕಾರ ಆಸ್ತಿಗಳು ನನ್ನ ಸ್ವಸಂಪಾದಿತ ಆಸ್ತಿಗಳು ಇರುತ್ತವೆ ಸದರೀ ಆಸ್ತಿಗಳನ್ನು ತಾ|| ೯-೪-೧೯೩೭ ನೇ ಇಸ್ವಿ ದಿವಸ ನನ್ನ ಅಲ್ಪವಯಿ ಮಗನಾದ ಮಕ್ತುಮಹುಶೇನ ಇವನಿಗೆ ನನ್ನ ಲಗ್ನದ ಹೆಂಡತಿಯಾದ ಮೇಲಿನ ಬಿಯಾಮಾ ಇವಳನ್ನು ಸಂ|ರಕ್ಷಕಳನ್ನಾಗಿ ನೇಮಿಸಿ ಮೇಲೆ ಬರೆದ ಆಸ್ತಿಗಳನ್ನು ಬಕ್ಷೀಸ ಕೊಟ್ಟಿರುತ್ತೇನೆ ಸದರೀ ಬಿಯಾಮಾ ಇವಳು ಈಗ ೫-೬ ತಿಂಗಳ ಹಿಂದೆ ನನ್ನ ಕೂಡ ತ್ಯಾಜ್ಯ ಮಾಡಿ ಮನೆಬಿಟ್ಟು ಯಿಂಡನೇ ಕಡಿಗೆ ಬೇರೆ ಇರಹತ್ತಿರುತ್ತಾಳೆ ಅಲ್ಪವಯಿ ಮಕ್ತುಮಹುಶೇನನು ನನ್ನ ಹತ್ತಿರ ಇದ್ದು ನನ್ನಿಂದಲೇ ಸಂರಕ್ಷಣೆ ಆಗುತ್ತಾನೆ ನನ್ನ ಹೆಂಡತಿ ಬಿಯಾಮಾ ಇವಳು ಅಲ್ಪವಯಿ ಸಂರಕ್ಷಣೆ ವಗೈರೆ ಮಾಡುವದಿಲ್ಲಾ ಕಾರಣ ಅವಳಿಗೆ ಮೇಲೆ ನಮೂದಿಸಿದ ಅಲ್ಪವಯಿ ಆಸ್ತಿಗಳನ್ನು ಖರೀದಿ ವತ್ತೀ ವಗೈರೆ ರೀತಿಯಿಂದ ವಿಲೇವಾರಿ ಮಾಡುವದಕ್ಕಾಗಲಿ ಅಥವಾ ಭಾಡೆ ವಗೈರೆ ಕೊಟ್ಟು ವಹಿವಾಟ ಮಾಡುವದಕ್ಕಾಗಲಿ ಯಾವ ಹಕ್ಕು ಇರುವದಿಲ್ಲಾ ಕಾರಣ ಸದರೀ ಬಿಯಾಮಾ ಕೋಂ ಜಮನಸಾಬ ಇವಳ ಕಡೆಯಿಂದ ಮೇಲ್ಕಂಡ ನಮೂದಿಸಿದ ಆಸ್ತಿಗಳನ್ನು ಖರೀದಿ ವ ಭಾಡಿಯಿಂದ ಯಾರೂ ಹಿಡಿಯಬಾರದು. ಮತ್ತು ಸದರೀ ಆಸ್ತಿಗಳ ಬೋಜಾದ ಮೇಲೆ ಅವಳಿಗೆ ಯಾರಾದರೂ ಸಾಲಾ ವಗೈರೆ ಕೊಟ್ಟಲ್ಲಿ ಅಲ್ಪವಯಿಯು ಅದರಿಂದ ಬದ್ಧನಿರುವದಿಲ್ಲಾ ಸದರೀ ಬಿಯಾಮಾ ಇವಳನ್ನು ನಾನು ಬಕ್ಷೀಸು ಕೊಡುವ ಕಾಲಕ್ಕೆ ಸಂ|ರಕ್ಷಕಳನ್ನಾಗಿ ನೇಮಿಸಿದ್ದು ಈಗ ರದ್ದ ಮಾಡಿರುತ್ತೇನೆ ಅಲ್ಪವಯಿಯ ಆಸ್ತಿಗಳನ್ನು ಆಕೆಗೆ ವಹಿವಾಟು ವ ಉಪಭೋಗ ಮಾಡಲಿಕ್ಕೆ ಯಾವ ತರಹದ ಹಕ್ಕು ವಗೈರೆ ಇರುವದಿಲ್ಲಾ ಈಗ ನಾನೇ ಅಲ್ಪವಯಿಯ ಸಂ|ರಕ್ಷಕನು ಇರುತ್ತೇನೆ.

ತಾ|| ೨೭-೪-೩೭

ಸಹಿ ಜಮನಸಾಬ ವ|| ಬುಡನಸಾಹೇಬ ಬಳಿಗಾರ

೧೫೨

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೌನ್ಸ ಚಹಾ ಮತ್ತು ಕಾಫೀ ಸೋವಿ ದರದಿಂದ ಸಿಗುವದಲ್ಲದೆ, ಚಿಲ್ಲರೆ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ತೆಗೆದುಕೊಳ್ಳಬಹುದು. ಯಾಕೆಂದರೆ ಇದರಲ್ಲಿ ಎಲ್ಲ ತರದ ಚಹಾ ನಾಲ್ಕೂ ಕಡೆಗೆ ಪಸಾರವಾಗುತ್ತದೆ. ಇದರಲ್ಲಿ ಕಡುಉತ್ತಮವಿರುತ್ತದೆ ಪರಸ್ಥಳದವರು ತಮಗೆ ಬೇಕಾದ ಚಹಾ ಪತ್ರಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಳಿಸಿ ಪೂರ್ವವತ್ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೨ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ತಿಳಿಯುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಕಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಟಿಕಾರೆ,

ಚಹಾ ಟೀ ಪೋರರ ವ ಡೀಲರ ಬೆಳಗಾಂವಿಗಲ್ಲಿ, ಹು,ಳಿ,

ಶೈರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು.

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕಿಂತ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲಕ್ಕೆ ದರ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳನ್ನು ವತ್ತೀ ಇಟ್ಟುಕೊಳ್ಳುವದು ಮತ್ತು ಚಳ್ಳ ವ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ್, ದೇಶಪಾಂಡೆ ಮತ್ತು ಅಣ್ಣಾಚಾರ್ಯ ಕಟ್ಟಿ

ಕಂಪನಿ ಮ್ಯಾನೇಜಿಂಗ ಏಜಂಟ ಪೇರವರ.

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಪತ್ತು ಒಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಒಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಸ್ಟೇಟ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲೀಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರಾಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಭಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ರವಿವಾರ ತಾರೀಖು ೨೯ ನೇ ಮೇ ೧೯೨೭ | ಸಂಚಿಕೆ ೧೧

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಟ್ಟಿನ ತರದ ಗಾಡಿ ಇರುವದು. ಕಬ್ಬಿಣ ಎರಡು ಕಾಲುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಯ್ದು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಬು ರಾವಣ್ಣಾ ಗಳೇ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ.
ಆಪರೇಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಂಸ್ಥೆ.

ಬಂಡಿಗೆಯು ಆರು ಲಕ್ಷದ ಮೇಲಿಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವವು. ಕಾರ್ಯಸ್ಥರುಗಳು ಮೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವವು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಜಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ಸೂಂಟ್ಯ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಶಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರ ನೋಟೀಸು.
ಹೊಲಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕಾ ಯಾವತ್ತು ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದಿ ನಾರಾಯಣರಾವ ಆಲೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಆಲೂರ ಗ್ರಾಮದ ಜಮೀನು ರಿ॥ ಸ॥ ನಂಬರ ೩೨ ಯಕರೆ ೧೧-೧೭ ತರಮು ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ- ಬಾಬು ವ ಗೋವಿಂದ ತಂದಿ ರಾಮರಾವ ಆಲೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ, ದಕ್ಷಿಣಕ್ಕೆ- ವೆಂಕಟರಾವ ಆಲೂರ ಇವರ ಮನೆ, ಉತ್ತರಕ್ಕೆ- ಹನಮ್ಯಾ ಹರಿ ಇವರ ಮನೆ ಅಲ್ಲಿರುವದು ಇದು ಉಘಡ ಸವಾಲಿನಿಂದ ಮಾರಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ॥ ೩೧ ಮಾಹೆ ಮೆ ಸನ್ನ ೧೯೨೭ ಇಸ್ವಿ ದಿವಸ ಆಲೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮಧ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾರುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತೆಗೊಂಡು ಹೋಗಬೇಕು. ತಿಳಿಯುವದು. ತಾರೀಖು ೨೫ನೇ ಮಾಹೆ ಏಪ್ರಿಲ ೧೯೨೭ ಇಸ್ವಿ

G. V. DESHPANDE,
Dy. Nazir & Guardian of
Shrinivas & Ramachandra Alur.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬	೭—೦—೦ ರೂ
೪	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೨೯-೫-೨೭ ನೇ ಇಸ್ವಿ

ಹಿಂದುಸ್ಥಾನಕ್ಕೆ ಅನಿಬಿಸಾಂಟಮ್ಮನವರ ಸಂದೇಶ.

ಅನಿಬಿಝಾಂಟಮ್ಮನವರು ಲೋಕಮಾನ್ಯರ ತರುವಾಯ ಹಿಂದುಸ್ಥಾನಕ್ಕೆ ಸ್ವರಾಜ್ಯ ಅಂದರೆ- ಹೋಮರೂಲ ದೊರೆಯಬೇಕೆಂಬದಾಗಿ ಚಳವಳಿ ನಡೆಸಿದವರು ಈ ವಿಚಾರದಲ್ಲಿ ಲೋಕಮಾನ್ಯರ ತರುವಾಯ ಇವರಿಗೆ ಎರಡನೆಯ ನಂಬರು ಇರುವದು ಇವರು ಕಾಂಗ್ರೆಸದ ಸ್ವರಾಜ್ಯ ಧ್ಯೇಯವನ್ನು ಬಿಟ್ಟು, ತಮ್ಮದೊಂದು ಕಾಮನವೆಲ್ಥವೆಂಬ ಸ್ವತಂತ್ರವಾದ ಸ್ವರಾಜ್ಯ ಯೋಜನೆ ಮಾಡಿ, ಅದರ ಬಿಲ್ಲನ್ನು ಪಾರ್ಲಮೆಂಟ ಸಭೆಯಲ್ಲಿ ಒಬ್ಬ ಮೆಂಬರರಿಂದ ತರಿಸಿ, ಅದರ ಮೊದಲನೆಯ ವಾಚನ ಕೂಡ ಮಾಡಿಸಿದ್ದಾರೆ. ಇದರ ಎರಡನೆಯ ವಾಚನವು ಬಹುತೇಕವಾಗಿ ಗಣಪ್ಪನ ಮದಿವೆ ಮುಂತಾಗಬಹುದು. ಒಂದು ವೇಳೆ ಅದು ವಿಚಾರಣೆಗೆ ಬಂದರೂ, ಬಹುಸಂಖ್ಯೆಯ ಬಲದಿಂದ ಈಗಿನ ಮಂತ್ರಿಗಳು ಅದಕ್ಕೆ ತಿಲಾಂಜಲಿ ಕೊಡುವರು; ಇಲ್ಲವೆ ಬಹಿರ್ದೆಶೆಗೆ ಹಾಕುವರು. ಬೆಳ್ಳಗಿರುವದೆಲ್ಲಾ ಹಾಲು... ತಮ್ಮ ನೂತನದ್ದೆಲ್ಲ ಹಾಲೆಂಬ ಹಂಜಿಯಾಗುತ್ತೆಂದೆನಿಸಿಕೊಳ್ಳಬಾರದೆಂದು ಅಮ್ಮನವರು ಮುಂದಾಗಿ ಭಾವಿಸಿ, ಹಿಂದೀ ಜನರು ಹಾಗು ಕಾಂಗ್ರೆಸದ ಸಹಾಯದ ಹೊರ್ತು ತಮ್ಮ ಹೋಮರೂಲಿನ ಮಹತ್ವಾಕಾಂಕ್ಷೆಯು ಪೂರ್ಣವಾಗಲಾರದೆಂದು ಖಂಡಿತವಾಗಿ ತಿಳಿದು, ಕಾಂಗ್ರೆಸದ ಕಡೆಗೆ ಒಲೆದಿದ್ದಾರೆ. ತಾವು ಪರದೇಶದಲ್ಲಿದ್ದರೂ, ಹಿಂದೀ ಜನರನ್ನುದ್ದೇಶಿಸಿ ಒಂದು ಸಂದೇಶವನ್ನು ನ್ಯೂ ಇಂಡಿಯಾದ ಮುಖಾಂತರವಾಗಿ ಪ್ರಸಿದ್ಧ ಮಾಡಿದ್ದಾರೆ. ಇದರಲ್ಲಿ ಇವರು ಅನ್ನುವದೇನಂದರೆ-

ಭಾರತ ಪುತ್ರರೇ- ನೀವು ಧಾರ್ಮಿಕ ಮತ್ತು ರಾಜಕೀಯ ಕಾರಣಗಳ ದೆಸೆಯಿಂದ ಏಕೆ ಕದದಾಡುತ್ತೀರಿ! ನಿಮ್ಮ ಪಕ್ಷ ಪ್ರಜ್ಞೆಗಳಿಗಿಂತ ದೇಶ ವಿಚಾರವು ದೊಡ್ಡದಾಗಿರುವದಿಲ್ಲವೇ? ನೀವು ತಿಳಿದು ನೋಡಿರಿ. ನೀವು ನಿಮ್ಮ ಸ್ವಾತಂತ್ರ್ಯಕ್ಕಾಗಿ ನಿಮ್ಮ ವೈರಿಯ ಕೈಮೇಲೆ ಹೋರಾಡುತ್ತೀರಿ. ಇಂಗ್ಲಿಷರು ಹಿಂದುಸ್ಥಾನವನ್ನು ಬಿಗುವಿನಲ್ಲಿಡಬಿದ್ದರೆ- ನೀವು ಒಬ್ಬರ ಗಂಟಲನ್ನೊಬ್ಬರು ಹಿಚಿಕುವಿರೆಂದು ಇಡೀ ಜಗತ್ತೇ ಹೇಳುತ್ತದೆ. ನೀವು ನಿಮ್ಮ ಜನನಿಯ ಉದುರದಲ್ಲಿ ಕಠಾರಿಯನ್ನು ಚುಚ್ಚುತ್ತಿರುವಾಗ ವಂದೇಮಾತರಮದ ರಾಷ್ಟ್ರಗೀತ ಹಾಡಿ ಪ್ರಯೋಜನವೇನು? ನಿಮ್ಮೊಳಗಿನ ದ್ವೇಷದಿಂದ ಮತ್ತು ರಣಖತ್ತರದಿಂದ ನಿಮ್ಮ ಅವಯವಗಳು ರಕ್ತಮಯವಾಗಿರುವಾಗ ಹಿಂದದೇವಿಗೆ ಸ್ವಾತಂತ್ರ್ಯ ದೊರೆಕಿಸಿ ಕೊಡುತ್ತೇವೆಂದು ಹೆಣಗಾಡುವದರ ಪ್ರಯೋಜನವೇನು? ೧೮೯೩ ರಲ್ಲಿ ನಾನು ಹಿಂದುಸ್ಥಾನದಲ್ಲಿಳಿದಾಗ- ಹಿಂದುಸ್ಥಾನವು ಸತ್ತ ದೇಶವಲ್ಲ. ಅದರ ಮಕ್ಕಳೇ ಅದನ್ನು ಕೊಲ್ಲಬಹುದೆಂದು ಸಾರಿದ್ದೇನೆ. ನಾನು ಆನಂತರದ ೩೪ ವರ್ಷಗಳನ್ನು ಹಿಂದುಸ್ಥಾನದ ಗುಲಾಮಗಿರಿಯನ್ನು ತಪ್ಪಿಸುವದಕ್ಕಾಗಿ ನನ್ನ ಸರ್ವಸ್ವವನ್ನು ಅರ್ಪಿಸಿದ್ದೇನೆ. ಇಂದು ಅದೇ ಪ್ರಶ್ನ ಮಾಡುತ್ತೇನೆ. ಅಗಸ್ತ್ಯ ಋಷಿಯು ಹಿಂದುಸ್ಥಾನದ ಪಾಲನಕರ್ತನಾಗಿದ್ದಾನೆಂದು ನಾನು ಭಾವಿಸಿದ್ದೇನೆ. ಆತನಿಗೂ ಇದೇ ಪ್ರಶ್ನ ಕೇಳುತ್ತೇನೆ.

ಬಂಧುಗಳೇ ನಿಮ್ಮ ಪ್ರಾಚೀನ ಕಾಲವೆಲ್ಲ ವೈಭವದಲ್ಲಿ ಕಳೆಯಿತು. ಪ್ರಕೃತ ಕಾಲವು ದುಃಖಮಯವಾಗಿರುತ್ತದೆ. ನೀವು ಅಜ್ಞಾನರಾಗಿದ್ದೀರಿ. ದರಿದ್ರರಾಗಿದ್ದೀರಿ; ಅಲ್ಪಾಯುಷಿಯಾಗಿದ್ದೀರಿ. ನಿಮ್ಮ ಸ್ವಂತ ದಾಸ್ಯತ್ವದ ದೆಸೆಯಿಂದ ನೀವು ಚಿಂತೆ ಮಾಡದಿದ್ದರೆ- ನಿಮ್ಮ ಮಕ್ಕಳು ಮರಿಗಳ ದೆಸೆಯಿಂದಾದರೂ ಐಕ್ಯವುಳ್ಳವರಾಗಿರಿ. ಇಂಗ್ಲಂಡವು ನಿಮಗೆ ಸ್ವಾತಂತ್ರ್ಯ ಕೊಡಲು ವಚನಬದ್ಧವಾಗಿದೆ. ನೀವೆಲ್ಲರೂ ಒಮ್ಮತದಿಂದ ಕೇಳಿದರೆ- ಅದು ಇಲ್ಲೆನ್ನಲಾರದು. ನಾವು ರಾಷ್ಟ್ರೀಯ ಸಭೆಯನ್ನು ಪುನಃ ರಾಷ್ಟ್ರೀಯ ಮಾಡುವಾ- ಹಿಂದೆ ಆದ ಸಂಗತಿಗಳನ್ನು ಮರೆತು, ಮುಂದಣ ಕಾರ್ಯಕ್ಕಾಗಿ ಒಂದುಗೂಡುವಾ- ನನ್ನ ಕಾಮನವೆಲ್ಥ ಬಿಲ್ಲು ನಿಮಗೆ ಒಪ್ಪಿಗೆಯಾಗದಿದ್ದರೆ- ಇನ್ನೊಂದು ಬರೆಯಿರಿ. ಅಂದರೆ ನನ್ನ ಬಿಲ್ಲನ್ನು ನಾನು ಚೂರು ಚೂರು ಮಾಡುವೆನು. ಆದರೆ ಐಕ್ಯದಿಂದ ಬರೆದ ಬಿಲ್ಲಿನ ಹೊರ್ತು ಯಾವ ಬಿಲ್ಲೂ ಕಾಯದೆಯಾಗಲಾರದೆಂಬದನ್ನು ಧ್ಯಾನದಲ್ಲಿಡಿರಿ. ಹಿಂದುಸ್ಥಾನವು ತನ್ನ ಮನೆಯಲ್ಲಿ ಸರ್ವತಂತ್ರ ಸ್ವತಂತ್ರವಾಗಬೇಕೆಂಬ ಬಿಲ್ಲಿಗೆ ಪ್ರತಿಯೊಬ್ಬನು ತನ್ನ ಕುಲ ಮತ್ತು ತೊಗಲಿನ ಬಣ್ಣದ ವಿಚಾರ ಮಾಡದೆ ಮನಃಪೂರ್ವಕವಾಗಿ ಸಹಾಯ ಮಾಡುವನು."

ಲಾರ್ಡ ಬರ್ಕನಹೆಡ್ಡ ಸಾಹೇಬರು ನಿಮಗೆಂಥ ಸ್ವರಾಜ್ಯಬೇಕೆಂಬದನ್ನು ನೀವೇ ಬರೆದು ಕೊಡಿರೆಂದು ಹಲವು ಸಾರೆ ಸಾರಿದ್ದಾರೆ. ಆ ಪ್ರಕಾರ ಹಿಂದೂ ಮುಸಲಮಾನರಿಬ್ಬರೂ ಸೇರಿ ಒಂದು ಯೋಜನೆ ಬರೆಯುವರು. ಆದರಿಂದ ತಮ್ಮ ಹಿಂದಿನ ಪ್ರಯತ್ನವೆಲ್ಲ ಹೊಳೆಯಲ್ಲಿ ಹುಳೀ ತೊಳೆದಂತಾಗಬಾರದೆಂದು ಅಮ್ಮನವರು ಕಾಂಗ್ರೆಸದಲ್ಲಿ ಸೇರಲು ಪುನಃ ಚಟಪಟಿಸುತ್ತಿದ್ದಾರೆಂದು ಮೇಲಿನ ಅವರ ವಿಚಾರಗಳಿಂದ ಸ್ಪಷ್ಟವಾಗುತ್ತದೆ.

ಸಾಮ್ರಾಜ್ಯ ದಿನೋತ್ಸವ.

ಶಾಲೆಯ ಮಾಸ್ತರರು ಸಭೆಗಳನ್ನು ಮಾಡಿ ರಾಜನಿಷ್ಠೆಯ ಠರಾವು ಮಾಡಿ, ಸಾಮ್ರಾಜ್ಯ ದಿನೋತ್ಸವ ಮಾಡುವರು. ರಾಜಕಾರಣ ಪಟುಗಳು ಇಷ್ಟು ಕುರುಡರಾಗಿರುವದಿಲ್ಲ. ಅವರು ರಾಜಕಾರಣವನ್ನು ಬೇರೆ ರೀತಿಯಾಗಿ ನೋಡುವರು. ಅವುಗಳ ಮಾದರಿಯನ್ನು ಇದರಡಿ ಕೊಡುತ್ತೇವೆ.

ಅಸೆಂಬ್ಲಿಯ ಅಧ್ಯಕ್ಷರಾದ ಪಟೇಲರು- ಹಿಂದೂ ಜನರು ಜವಾಬದಾರ ರಾಜ್ಯಪದ್ಧತಿಗೆ ಸಮರ್ಥರಾಗಿದ್ದಾರೆಂದು ತೋರಿಸುವದಕ್ಕಾಗಿ ನಾನು ಅಸೆಂಬ್ಲಿಯ ಅಧ್ಯಕ್ಷಪದವನ್ನು ಸ್ವೀಕರಿಸಿದ್ದೇನೆ. ನಾವು ಜವಾಬದಾರ ದೊರೆತನಕ್ಕೆ ಪಾತ್ರರಿದ್ದೇವೆಂಬದನ್ನು ಇನ್ನೂ ಎಷ್ಟು ದಿವಸ ರಾಜ್ಯಕರ್ತರ ನಂಬಿಗೆ ಮಾಡಿಕೊಡಬೇಕು? ಇದೇ ವಿಚಾರವು ನನ್ನ ಅಂತಃಕರಣದಲ್ಲಿ ಹರಿದಾಡುತ್ತಿರುವದು.

ಲಾರ್ಡ ಸಿಂಹ- ವಿಸ್ತೃತ ದೃಷ್ಟಿಯಿಂದ ವಿಚಾರ ಮಾಡಿದರೆ- ರಾಷ್ಟ್ರೀಯತ್ವವು ಸಾಮ್ರಾಜ್ಯ ವಿಚಾರದಿಂದ ಬೇರೆಯಾಗುವದಿಲ್ಲ. ಜನರು ತಮ್ಮ ದೇಶವನ್ನು ಹೆಚ್ಚಿಗಾಗಿ ಪ್ರೀತಿಸುವಂತೆ, ಸಾಮ್ರಾಜ್ಯವನ್ನೂ ಪ್ರೀತಿಸುತ್ತ ಹೋಗುವರು. ಇಂಗ್ಲಂಡ ಮತ್ತು ಹಿಂದುಸ್ಥಾನದ ನಡುವೆ ಯಾವಾಗಲು ಸಖ್ಯವೇ ಉಂಟೆಂದು ಹೇಳಲಾರೆನು. ಇಂಗ್ಲಿಷ ಜನರು ಸ್ವಾತಂತ್ರ್ಯಪ್ರಿಯರಾಗಿರುವ ಕಾರಣ, ಹಿಂದುಸ್ಥಾನಕ್ಕೆ ರಾಜಕೀಯ ಸ್ವಾತಂತ್ರ್ಯ ಕೊಡುವರೆಂದು ಸ್ವರ್ಗವಾಸಿ ಗೋಖಲೆಯವರು ಆಡಿದ್ದನ್ನೇ ಅನುಮೋದಿಸುತ್ತೇನೆ.

ದಿವಾನ ಬಹಾದ್ದೂರ ರಂಗಾಚಾರ್ಯರು- ಇವರು ಈಗ ಆಸ್ಟ್ರೇಲಿಯಾದಲ್ಲಿದ್ದಾರೆ. ಅಲ್ಲಿ ಭಾಷಣ ಮಾಡುವಾಗ ಅಂದದ್ದೇನಂದರೆ-

ಇಂಗ್ಲಿಷ ಜನರು ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಟ್ಟ ಹೊರ್ತು ಸಾಮ್ರಾಜ್ಯ ದಿನೋತ್ಸವದಲ್ಲಿ ಇಂಗ್ಲಿಷರಂತೆಯೇ ಅಂತಃಕರಣ ಮತ್ತು ಸ್ಫೂರ್ತಿಯಿಂದ ಭಾಗ ತಕ್ಕೊಳ್ಳಲಾರರು. ಸ್ವಾತಂತ್ರ್ಯ ವೃದ್ಧಿಯಾದಂತೆ, ರಾಜನಿಷ್ಠೆಯು ವೃದ್ಧಿಯಾಗುವದು. ರಾಜಭಕ್ತಿಯನ್ನು ಬಲಾತ್ಕಾರದಿಂದ ಅಥವಾ ದಂಡಿನ ಹೆದರಿಕೆಯಿಂದ ಜನರಿಂದ ಮಾಡಿಸಲಿಕ್ಕಾಗದು ... ಅಧಿಕಾರದ ಬಲದಿಂದಲೂ ಅದು ಉದ್ಭವಿಸಲಾರದು.

ಮಿ. ಬಾಲ್ಡವಿನಸಾಹೇಬರ ಆಶೀರ್ವಾದ- ಹಿಂ

ದೇ ಮುತ್ಸದ್ದಿಗಳಿಗೆ ಸಮಾಧಾನವೆನಿಸುವಂತೆ ಮುಖ್ಯ ಪ್ರಧಾನರು "ಹಿಂದುಸ್ಥಾನವು ಜವಾಬದಾರ ರಾಜ್ಯಪದ್ಧತಿಯಲ್ಲಿ ಪುಷ್ಕಳವಾಗಿ ಪ್ರಗತಿ ಹೊಂದಿದ ಮುಂದೆ ಬ್ರಿಟಿಶ ಸಾಮ್ರಾಜ್ಯಾಂತರ್ಗತವಾದ ಸ್ವರಾಜ್ಯ ಸುಖ ಪಡೆಯುವದೆಂದು" ಆಶೀರ್ವಾದ ಮಾಡಿದ್ದಾರೆ.

ಇಂಗ್ಲಂಡ ಮತ್ತು ರಶಿಯಾದ ಕಲಹ.

—೦—

ಇಂಗ್ರೇಜಿ ವರ್ತಮಾನಪತ್ರಗಳ ಮತವು.

—೦—

ಡೇಲಿ ಹೆರಾಲ್ಡ- ಇಂಗ್ಲಂಡವು ಅಕ್ಷಮ್ಯ ತಪ್ಪು ಮಾಡಿತು.

ವೆಸ್ಟ ಮಿನಿಸ್ಟರ ಗ್ಯಾಝೆಟ- ರಶಿಯವನ್ನು ಪರಿಯಾ (ಅಸ್ಪೃಶ್ಯ) ಮಾಡಿದರೆ- ಅದರಿಂದ ತಾಪವೇ ಉಂಟಾಗುವದು.

ಡೇಲಿ ಟೆಲಿಗ್ರಾಫ- ಅರಕಾಸ ಮನೆಯು ಚೀನರ ಒಳಸಂಚಿನ ಮತ್ತು ಯುಕ್ತಿಗಳ ಭದ್ರವಾದ ಪೆಟ್ಟಿಗೆಯಾಗಿತ್ತು. ಅದನ್ನು ಒಡೆದದ್ದು ನೆಟ್ಟಗಾಯಿತು.

ಡೇಲಿ ಮೇಲ- ಈ ವಿಶ್ವಾಸಘಾತುಕರಿಂದ ಇಂಗ್ಲಂಡವನ್ನು ಮುಕ್ತ ಮಾಡಿದ್ದು ಯೋಗ್ಯವಾಯಿತು.

ಡೇಲಿ ನ್ಯೂಜ- ರಶಿಯರು ತಮ್ಮ ಗೌರವಕ್ಕೆ ಕಳಂಕ ಹತ್ತುವಂಥ ಕೃತ್ಯ ಮಾಡಿದರು.

ಟಾಯಿಮ್ಸ- ರಶಿಯಾದ ಕೂಡ ಸರಿಸಮಾನಸ್ಕಂದರಂತೆ ಬಳಿಕೆ ಮಾಡುವದು ಇಂಗ್ಲಂಡದ ಗೌರವಕ್ಕೆ ಹಾನಿ ತರುವದಾಗುತ್ತದೆ.

ಡೇಲಿ ಕ್ರಾನಿಕಲ- ಫಿತೂರಿ ಮಾತ್ರವಲ್ಲ; ಬ್ರಿಟಿಶ ಸರಕಾರವನ್ನು ಒಡಮೇಲು ಮಾಡುವಂಥ ಅಪರಾಧದ ಶಿಕ್ಷೆಗೆ ರಶಿಯವು ಪಾತ್ರವಾಗಿರುತ್ತದೆ.

ರಶಿಯಾದ ಪರರಾಷ್ಟ್ರಗಳ ಪ್ರಧಾನರಾದ ಮಿ. ಚಿಚರಿನ್ನಸಾಹೇಬರು ಪಾರೀಸಕ್ಕೆ ಬಂದಿದ್ದಾರೆ ಇವರು ಇಂಗ್ಲಂಡದಂತೆ ರಶಿಯಾದ ಮೇಲೆ ಬ್ರಹ್ಮದಂಡ ಹಿಡಿಯಬಾರದೆಂದು ಮಂತ್ರಿಗಳ ಮನಸ್ಸೊಲಿಸುತ್ತಿದ್ದಾರೆ ದೂ, ಈ ಬಗ್ಗೆ ಅಲ್ಲಿಯ ಪಾರ್ಲಮೆಂಟ ಸಭೆಯಲ್ಲಿ ಸರಿಯಾಗಿ ಇಬ್ಬಣವಾಗಿದೆಂದೂ ಹೇಳುತ್ತಾರೆ.

ಚೀನ ಮತ್ತು ತರ್ಕಸ್ಥಾನದ ವಿಷಯವಾಗಿ ಫ್ರಾನ್ಸವು ತನ್ನ ಧೋರಣದಂತೆ ನಡೆಸುವದು. ಅದು ಅನ್ಯರ ಹೇಳಿಕೆಯಂತೆ ನಡೆದು, ಅವರ ಬೊಗಸೆಯಿಂದ ನೀರು ಕುಡಿಯಲಾರದೆಂದು ಪಾರೀಸದ ಈಕೋ ಡಿ ಪತ್ರವು ಅಭಿಪ್ರಾಯಪಟ್ಟಿರುತ್ತದೆ.

ಲಿಥುವೇನಿಯದ ದಂಡಿನ ಒಬ್ಬ ಅಮಲದಾರನು ರಶಿಯರ ಏಜಂಟನಿಗೆ ಗುಪ್ತವಾದ ಒಂದು ಮಹತ್ವದ ಕಾಗದ ಕೊಡುವಾಗ ಹಿಡಿದಿದ್ದಾರೆ, ಇಂಗ್ಲಂಡದಂತೆ ಈ ದೇಶವೂ ಇಂಗ್ಲಂಡದ ಪಲ್ಯುರ ಹರಕೊಳ್ಳುವದೆಂದು ಬರ್ಲಿನದ ತಾರು ಹೇಳುತ್ತದೆ.

ಪಲ್ಯುರ ಹರಕೊಂಡಿದ್ದರ ಪರಿಣಾಮ-

ಇಂಗ್ಲಿಷ ಸರಕಾರದವರು ವ್ಯಾಪಾರದ ಮಟ್ಟಿಗೆ ರಶಿಯಾದ ಕೂಡ ಪಲ್ಯುರ ಹರಕೊಂಡಿದ್ದರ ಅನಿಷ್ಟ ಪರಿಣಾಮವು ಈಗಾಗಲೆ ಇಂಗ್ಲಂಡ ಮತ್ತು ಆದರ ಒಂದು ಉಪಾಂಗವಾದ ಕಾನಡಾ ದೇಶದ ಮೇಲಾಯಿತು. ರಶಿಯರು ಇಂಗ್ಲಂಡದಲ್ಲಿ ಹತ್ತು ಕೋಟಿಯ ವ್ಯವಹಾರವನ್ನು ಮಿಡಲಂಡ ಬ್ಯಾಂಕಿನ ಮುಖಾಂತರವಾಗಿ ನಡಿಸಿದ್ದರು. ಇದರಿಂದ ೫೬.೦೦೦ ಇಂಗ್ಲಿಷ ಕೂಲಿಕಾರರಿಗೆ ಜೀವನವಾಗುತ್ತಿತ್ತು. ಆದರೆ ರಶಿಯರು ಎದುಷ್ಟ್ರತ್ವೇಗದಿಂದ ಈ ಕಾಂಟ್ರಾಕ್ಟನ್ನು ಮುರಿದದ್ದರಿಂದ, ಇಷ್ಟು ಜನರ ಪೋಷಣೆಗೆ ಧಕ್ಕೆ ಬಂತು ಕಾನಡಾದಲ್ಲಿ ನಾಲ್ಕು ಸಾವಿರ ಕುದುರೆಗಳನ್ನು ಕೊಳ್ಳತಕ್ಕವರಿದ್ದರು. ಈ ವ್ಯವಹಾರವನ್ನೂ ನಿಲ್ಲಿಸಿಬಿಟ್ಟರು.

ಭಯಂಕರ ಶಿಕ್ಷೆ-

ನಾಗಪೂರದ ಸತ್ಯಾಗ್ರಹದಲ್ಲಿ ಹೆಸರಿಗೆ ಬಂದಿದ್ದ ಆವಿಯ ನಿಜಾಮುದ್ದೀನನಿಗೆ ೧೮ ತಿಂಗಳ ಸಶ್ರಮ ಶಿಕ್ಷೆಯಾಯಿತು.

ಶ್ರೀ. ಅವರಿಯವರ ಸ್ಥಳದಲ್ಲಿ ಕಾಯದೆಭಂಗ ನಡಿಸುವದಕ್ಕಾಗಿ ಮಹಾತ್ಮಾ ಭಗವಾನದೀನರು ನಾಗಪೂರಕ್ಕೆ ದಯ ಮಾಡಿಸಿದ್ದಾರೆ.

ದಿನಾಲು ಹೊಸಕತ್ತಿ ಕರಾರಿಗಳನ್ನು ಮಾಡಿಸುವಕ್ಕಾಗಿ ಒಬ್ಬ ಸಾಹುಕಾರರು ಒಂದು ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಪುಣೆಯಲ್ಲಿ ಕೂಡಿದ್ದ ಸಾಹಿತ್ಯ ಸಮ್ಮೇಲನದಲ್ಲಿ ಮರಾಟಿ ಜನರ ದೆಸೆಯಿಂದಲೇ ಸ್ವತಂತ್ರವಾದ ಯುನಿವರ್ಸಿಟಿಯನ್ನು ಸ್ಥಾಪಿಸಬೇಕೆಂದೂ, ಇದಕ್ಕಾಗಿ ಸರಕಾರ ಮತ್ತು ಸಂಸ್ಥಾನಿಕರಿಗೆ ವಿನಂತಿ ಮಾಡಿಕೊಳ್ಳಬೇಕೆಂದೂ ಠರಾವು ಪಾಸಾಯಿತು.

ದಿಲ್ಲಿಯಲ್ಲಿ ಪ್ರಕಟವಾಗುವ ತಾಜವೇಬ ಪತ್ರದ ಸಂಪಾದಕರಿಂದ ಮಿ. ಗುಪ್ತರಿಗೆ ನಿಮ್ಮನ್ನು ಶ್ರದ್ಧಾನಂದರಂತೆ ಕೊಂದು ಹಾಕುವೆನೆಂದು ಅನೇಕವಾಗಿ ಅನಾಮಧೇಯ ಪತ್ರಗಳನ್ನು ಬರೆದಿರುತ್ತಾರೆ.

ವಿವಿಧ ವರ್ತಮಾನಗಳು

—(೦)—

ಶ್ರೀ ಸುಭಾಷಚಂದ್ರ ಬೋಸರ ಪ್ರಕೃತಿಯು ಸುಧಾರಿಸುತ್ತಿರುವದು. ಹವೆ ಬದಲಿಸುವದಕ್ಕಾಗಿ ಸಿಲಾಂಗಕ್ಕೆ ಹೋಗುವರು.

ಮದ್ರಾಸದ ಹತ್ತರ ಕೋಡಂಬಾಕ ಸ್ಟೇಶನದಲ್ಲಿ ಬಂದಿ ಹೋಗುತ್ತಿದ್ದಾಗ ಒಬ್ಬ ಮುಸಲಮಾನ ಹೆಣ್ಣುಮಗಳು ಬಂಡಿಯಲ್ಲಾದ ದಟ್ಟಣೆಯಿಂದ ಉಸುರುಗಟ್ಟಿ ಸತ್ತಳು. ಕಂಪನಿಯವರೂ ಸರಕಾರದವರೂ ಇನ್ನಾದರೂ ಕಣ್ಣು ತೆರೆಯುವರೇ?

ಪ್ರತಿ ದಸರೆಯ ಉತ್ಸವದಲ್ಲಿ ಹಿಂದುಸ್ಥಾನದಲ್ಲಿ ಹುಟ್ಟುವ ವಿವಿಧ ವಸ್ತುಗಳ ಪ್ರದರ್ಶನ ಮಾಡಬೇಕೆಂದು ಮೈಸೂರ ದರಬಾರಿನವರು ಗೊತ್ತು ಮಾಡಿದ್ದಾರೆ.

ಡೇರಾಡೂನದಲ್ಲಿ ಇಂಗ್ಲಿಷ ಮತ್ತು ಯುರೋಪಿಯನ್ನರ ದೆಸೆಯಿಂದ ಹಾಯಸ್ಕೂಲುಗಳುಂಟು. ಆದರೆ ಹಿಂದೂ ಜನರ ದೆಸೆಯಿಂದ ಒಂದು ಶಾಲೆಯಿಲ್ಲ. ಹಾಯಸ್ಕೂಲು ಸ್ಥಾಪಿಸುವದಕ್ಕಾಗಿ ಒಬ್ಬ ಹಿಂದೂ ಗೃಹಸ್ಥರು ೫೦ ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಗೋದಾವರಿ ಜಿಲ್ಲೆಯ ರಾಜಕೀಯ ಪರಿಷತ್ತು ಕೂಡತಕ್ಕದ್ದಿದೆ. ಮಿ. ಹಾರ್ನಿಮನ್ನಸಾಹೇಬರು ಅಧ್ಯಕ್ಷರಾಗುವರು. ನಾನ- ಕೋ. ಆಪರೇಶನವನ್ನು ಪುನರುಜ್ಜೀವನ ಮಾಡುವದೇ ಪರಿಷತ್ತಿನ ಮುಖ್ಯ ಉದ್ದೇಶವಾಗುವದು.

ಹಿಂದುಸ್ಥಾನ ಸರಕಾರದವರು ಲಾರ್ಡ ಡಾಲಹೌಸರ ವಂಶಸ್ಥರಿಂದ ಮೊಗಲರ ಎರಡು ವಜ್ರಗಳನ್ನು ೫೦ ಸಾವಿರ ರೂಪಾಯಿಗಳಿಗೆ ಕೊಂಡು, ಅವನ್ನು ದಿಲ್ಲಿಯಲ್ಲಿರುವ ವಿವಿಧ ವಸ್ತು ಸಂಗ್ರಹಾಲಯದಲ್ಲಿಡುವರು.

ಮೀರೂಟದಲ್ಲಿ ಮ್ಯಾಜಿಸ್ಟರ ಮತ್ತು ಇಟಲಿಯ ಸರಕು ತುಂಬಿದ ವಖಾರಕ್ಕೆ ಬೆಂಕಿ ಹತ್ತಿ ಒಂದು ಕೋಟಿಯ ಹಾನಿಯಾಯಿತು.

ಧಾರವಾಡ.—

ಧಾರವಾಡ ಜಿಲ್ಲೆಯಲ್ಲಿ ಕೋಡ ಮತ್ತು ರಾಣೇಬೆನ್ನೂರ ತಾಲೂಕುಗಳಲ್ಲಿ ಮಾತ್ರ ಮಾರಿಕಾವುಂಟು. ಉಳಿದ ಕಡೆಯಲ್ಲಿಲ್ಲವೆಂದು ಸ್ಯಾನಿಟರಿ ಖಾತೆಯವರು ಪ್ರಸಿದ್ಧ ಮಾಡಿದ್ದಾರೆ.

ಕಾಲರಾ ಪಿಲ್ಸ

—(೦)—

ಕಾಲರಾ (ಮಾರಿಕಾ) ರೋಗದ ಮೇಲೆ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವದು. ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೌಲ್ಯ ಔಷಧ ತರಿಸಿ ಗುಣ ಹೊಂದಿರಿ. ... ಗುಳಿಗೆಗೆ ೧ರೂ ೧೦೦ಕ್ಕೆ ... ರತ್ನಾ - ಮ್ಯಾ ಆಯುರ್ವೇದೌಷಧಿ ಕಾರ್ಖಾನೆ, ಕಿತ್ತೂರ, ಪೋ ಕಿತ್ತೂರ ಜಿ. ಬೆಳಗಾವ

—

ಜಗತ್ ಪ್ರಸಿದ್ಧವಾದ
ಊದು ಬತ್ತಿಗಳು

ನಮ್ಮಲ್ಲಿ ಎಲ್ಲ ವಿಧವಾದ ಊದುಬತ್ತಿಗಳು ... ಸೇರು ೧ಕ್ಕೆ ೧-೦-೦ ಲಾಗಾಯಿತ ... ಅರಗಜ ಬಿಲ್ಲೆ, ಪನ್ನಿರು, ಪ್ಯಂಗಾಮುಳಿ ತೈಲ, ದಶಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಅ್ಯಂಡ ಸನ
ಸುಗಂಧಾದಿಕಾರ ಮೈಸೂರ

THE ANKALIGI BANK LTD

Offices–Dharwar & Ranebennur

5%

Interest allowed on

ANNA SAVINGS BANK

DEPOSITS

Dharwar } K B ANKALIGI
3-1-1927 } Managing Director

—

ಚಂದಾದಾರರಿಗೆ ಸೂಚನೆ.

—೦೦೦—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವದರಿಂದ ... ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಪತ್ರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೌನ್ಸ ಚಹಾ ಮತ್ತು ಕಾಫೀ ಸೋವಿ ದರದಿಂದ ಸಿಗುವದಲ್ಲದೆ, ... ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ... ಹೋಗಿ ಪರೀಕ್ಷೆ ಮಾಡಿ ... ಮನಸ್ಸಿಗೆ "..." ... ಎಲ್ಲ ತರದ ಚಹಾ ... ಕಡೆಗೆ ... ಅದರಲ್ಲಿ ... ಈ ಪತ್ರಿಕೆಗೆ ಬರೆದು ... ಕಳಿಸಿ ಕೊಡುತ್ತೇವೆ. ... ಕೊಡುವದಾದರೆ ...

ಸಿಗುವ ಪತ್ತೆ

ಏಜಂಟ:—

ಗಣಪತ ಭವಾನರಾವ ... ಧಾರವಾಡ

ಮತ್ತು

ಜನಾರ್ದನ ರಾಮಚಂದ್ರ ... ಟಿಕಾರೆ,
... ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ,

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ... ಅನರ್ಥಕ್ಕೆ ಕಾರಣವು

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ
೨–೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವರು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ... ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು
ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ೬ ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರೆ ರೂಪಾಯಿ ಬಡ್ಡಿ ದೊರೆಯುವದು. ಹೆಚ್ಚು ಕಾಲದ ಠೇವಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳನ್ನು ಪತ್ರಿಕೆ ಇಟ್ಟುಕೊಳ್ಳಲ್ಪಡುವವು. ಚಕ್ಕ ವ ಹುಂಡಿಯ ವ್ಯವಹಾರ ಮಾಡಲ್ಪಡುವದು.

ಮೆಸರ್ಸ ದೇಶಪಾಂಡೆ ಮತ್ತು ಆಚಾರ್ಯ ಕಟ್ಟಿ
ಕಂಪನಿ ಮ್ಯಾನೇಜಿಂಗ ಏಜಂಟ್ಸ — ಬೆಳಗಾವ.

ಜಾಹೀರಾತಿನ ದರಗಳು

—೦—

... ತಿಂಗಳಿನ ಪತ್ರ ... ದರ ... ಪ್ರತಿಯೊಂದು ಓಳಿಗೆ ಒಂದುವರೆ ... ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ... ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ... ಕನ್ನಡದಲ್ಲಿ ಹಾಕುವದಿದ್ದರೆ ... ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ತ್ರೈ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ಸೋಮವಾರ ತಾರೀಖು ೩೦ ನೇ ಮೇ ೧೯೨೭ (ಸಂಚಿಕೆ ೧೧

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಆಸುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರವಾಗಿ ತರುತ್ತದೆ. ಇದ್ದಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಇದ್ದಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ
ಜಿಲ್ಲಾ, ಸಾತಾರಾ.

ಜಾಹೀರ ನೋಟೀಸು.

ಹೊಲ ಮನೆಗಳ ಲಿಲಾವು

ಧಾರವಾಡ ಡಿ॥ ಕೋರ್ಟಿನ ಡೆ॥ ನಾಜರ ಇವರ ಕಡೆಯಿಂದಾ ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಬೇಕಲ್ಲಾ- ಅಲ್ಪವಯಿ ಶ್ರೀನಿವಾಸ ವ ರಾಮಚಂದ್ರ ತಂದೆ ನಾರಾಯಣರಾವ ಅಳೂರ ಸಾ॥ ಧಾರವಾಡ ಇವರ ಬಾ॥ ರೋಣ ತಾಲೂಕ ಪೈಕಿ ಅಳೂರ ಗ್ರಾಮದ ಜಮೀನು ರಿ॥ ಸ॥ ನಂಬರ ೩೨ ಯಕರೆ ೧೧।।೬ ತರಮ ರೂ ನೇದ್ದು ಹಾಂಗು ಅಲ್ಪವಯಿಗಳ ಹಿಸೆಕ್ಕೆ ಬಂದ ಮನೆ ಚಕ್ಕಬಂದಿ ಪೂರ್ವಕ್ಕೆ ಬಾಬು ವ ಗೋವಿಂದ ತಂದಿ ರಾಮರಾವ ಅಳೂರ ಇವರ ಮನೆ, ಪಶ್ಚಿಮಕ್ಕೆ- ರಸ್ತೆ ದಕ್ಷಿಣಕ್ಕೆ.. ವೆಂಕಟರಾವ ಅಳೂರ ಇವರ ಮನೆ, ಉತ್ತರಕ್ಕೆ- ಬಸಪ್ಪಾ ಹರ್ತಿ ಇವರ ಮನೆ ಅಳೂರಲ್ಲಿ ರೋಡು ಉಭಯ ಸವಾಲಿನಿಂದ ವ್ಯಾಗಲಿಕ್ಕೆ ಕೋರ್ಟಿನಿಂದ ಹುಕುಮು ಆದ ಪ್ರಕಾರ ನಾವು ಸದರ ಜಮೀನು ವ ಮನೆ ತಾ॥ ೩೧ ಮಾಹೆ ಮೆ ಸನ್ನ ೧೯೨೭ ಇಸ್ವಿ ದಿವಸ ಅಳೂರ ಗ್ರಾಮದ ಸರಕಾರಿ ಚಾವಡಿಯಲ್ಲಿ ಮದ್ಯಾನ್ಹ ೨ ಘಂಟೆಕ್ಕೆ ಉಘಡ ರೀತಿ ಸವಾಲಿನಿಂದ ಮಾಡುವೆವು. ತಗೊಳ್ಳತಕ್ಕ ಜನರು ಸದರ ವ್ಯಾಳ್ಯಕ್ಕೆ ಸದರ ಗ್ರಾಮದ ಚಾವಡಿಯಲ್ಲಿ ಹಾಜರ ಇರಬೇಕು. ಲಿಲಾವಿನ ಶರ್ತುಗಳು ಓದಿ ಹೇಳಲ್ಪಡುವವು. ಇದಕ್ಕೂ ಹೆಚ್ಚಿಗೆ ಸ್ಪಷ್ಟ ತಿಳಿ ಬೇಕಾದಲ್ಲಿ ನಮ್ಮ ಕಚೇರಿಗೆ ಬಂದು ಮಾಹಿತಿ ತಗೊಂಡು ಹೋಗಬೇಕು. ತಿಳಿಯುವದು. ತಾರೀಖು ೨೫ನೇ ಮಾಹೆ ಎಪ್ರಿಲ ೧೯೨೭ ಇಸ್ವಿ

G. V. DESHPANDE,
Dy. Nazir & Guardian of
Shrinivas & Ramachandra Alur.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಆರು ಲಕ್ಷದ ಮೇಲುಂಟು. ಚೆಕ ೧೦೦ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಯಮಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ಇತರ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ೭೮ ೧೦ ೫ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದು ರೂ. ಆಣೆಯಿಂತಿರುತ್ತದೆ

ಬಿ. ಕೆ. ಕಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ
೬ „	೭—೦—೦ ರೂ
೪ „	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೩೦-೫-೨೭ ನೇ ಇಸ್ವಿ

ಕರವೀರ ಮಠದ ಜಗದ್ಗುರುಗಳ ನವೀನವಾದ ಧರ್ಮಸುಧಾರಣೆಯು.

ಶ್ರೀ. ಮಹಾಭಾಗವತರೆಂದು ಪೂರ್ವಾಶ್ರಮದಲ್ಲಿ ಪ್ರಸಿದ್ಧರಾಗಿ, ಕರವೀರಮಠದ ಶ್ರೀ ಜಗದ್ಗುರು ಶಂಕರಾಚಾರ್ಯರಾಗಿರುವ ಮಹಾಸ್ವಾಮಿಗಳು ಪ್ರಸ್ತುತದ ಹಿಂದೂ ಧರ್ಮದಲ್ಲಿ ಕಾಲೋಚಿತವಾದ ಸ್ಥಿತ್ಯಂತರ ಮಾಡಲು ವಿಚಾರಮಾಡಿ, ಆ ಬಗ್ಗೆ ಒಂದು ಕಮಿಟಿ ನೇಮಿಸಿದ್ದಾರೆ. ಈ ಕಮಿಟಿ ಹಾಗು ಶ್ರೀಗಳವರ ನವೀನವಾದ ವಿಚಾರದ ಬಗ್ಗೆ ಪುಣೆ- ಮುಂಬಯಿಯ ಇಂಗ್ರೇಜಿ ಪತ್ರಿಗಳಲ್ಲಿ ಲೇಖಗಳು ಬರಹತ್ತಿರುತ್ತವೆ ಸ್ವತಃ ಶ್ರೀಗಳವರೂ ಈ ವಿಷಯವಾಗಿ ಒಂದು ಉಪನ್ಯಾಸ ಮಾಡಿದ್ದಾರೆ ಆತ್ಮಚರಿತ್ರ ಹೇಳಿದ್ದಾರೆ ಇವೆಲ್ಲ ಕೂಡಿಸಿ ಈ ವಿಷಯವಿಚಾರವನ್ನು ಉಪಕ್ರಮಿಸಿದ್ದೇವೆ.

ಶ್ರೀ ಮಹಾಭಾಗವತರು ಧಾರವಾಡ ಜಿಲ್ಲೆಯವರು ಕುರ್ತಕೋಟಿಯ ಗೌಡರ ಮನೆತನಕ್ಕೆ ಹೊಂದಿದವರು. ಚಿಕ್ಕಂದಿನಿಂದಲೇ ಇವರಿಗೆ ವೇದಾಂತ ವಿಷಯಗಳಲ್ಲಿ ಆಸಕ್ತಿಯಿತ್ತು ಇಂಗ್ಲಿಷಕ್ಕಿಂತ ಸಂಸ್ಕೃತವನ್ನು ಹೆಚ್ಚು ಓದಿದರು. ಪ್ರಾರಂಭದಲ್ಲಿ ದ್ವೈತಾದ್ವೈತದಲ್ಲಿ ಸೇರಿ, ಏಕಾದಶಿಯ ನಿರ್ಣಯ, ತಪ್ತಮುದ್ರ ಮುಂತಾದ ವಿಷಯಗಳ ಮೇಲೆ ನಿಬಂಧಗಳನ್ನು ಬರೆದರು. ಪ್ರಾಚೀನ ಮತ್ತು ಅರ್ವಾಚೀನ ಪದ್ಧತಿಯಿಂದ ಗೀತೆಯು ಅಭ್ಯಾಸ ಮಾಡಿ, ಅದರ ಅನುವಾದ ಮಾಡಲಾರಂಭಿಸಿದ ಬಳಿಕ ಇವರ ಪ್ರಸಿದ್ಧಿಯಾಯಿತು. ಪುಣೆ ಮತ್ತು ಬೆಂಗಳೂರ ಪ್ರಾಂತದಲ್ಲಿ ಸಂಚಾರ ಮಾಡಿ, ವಿದ್ವಾಂಸರೆಂದು ಪ್ರಖ್ಯಾತಿ ಹೊಂದಿದರು ಸಂಸ್ಕೃತ ಭಾಷೋಜ್ಜೀವನಿ ಸಭೆ ಸ್ಥಾಪಿಸಿ, ವಿದ್ವಾಂಸರಿಗೆ ಪದವಿಗಳನ್ನು ಕೊಡಲುಪಕ್ರಮಿಸಿದರು ಕೆಲಕಾಲ ಧಾರವಾಡದ ಶ್ರೀ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ವ್ಯವಸ್ಥಾಪಕರಾದರು. ಡಾಕ್ಟರ ನಾಡಗೇರರ ಸಹಾಯದಿಂದ ಸಂಸ್ಕೃತ ವಿದ್ಯಾಭ್ಯಾಸದ ಬೆಳವಣಿಗಾಗಿ, ದೊಡ್ಡ ವಿದ್ಯಾಪೀಠ ಸ್ಥಾಪಿಸುವ ಸಿದ್ಧತೆ ಮಾಡಿದ್ದರು.

ಇವರ ವಿಚಾರವು ಪೂರಾ ಪುರಾತನದ್ದಾಗಿದ್ದು, ಆಧುನಿಕ ಸುಧಾರಣೆಗೆ ಅನುಕೂಲವಾಗಿರುವದನ್ನು ಕಂಡು ಇಲ್ಲಿ ಕಲೆಕ್ಟರರಾಗಿದ್ದ ವೆ ಮೆಕಾನಕಿಸಾಹೇಬರು ಅದಷ್ಟು ಇವರ ಉಪಯೋಗ ಮಾಡಿಕೊಳ್ಳಬೇಕೆಂದರು. ಇದೇ ಪ್ರಕಾರ ಕೊಲ್ಹಾಪೂರದ ಸ್ವರ್ಗವಾಸಿ ಮಹಾರಾಜರು ಇವರಿಗೆ ಕರವೀರಮಠದ ಜಗದ್ಗುರುತ್ವದನ್ನು ಕೊಟ್ಟು ಮರಾಠಾ ಜನರಿಗೆ ವೇದೋಕ್ತದ ಅಧಿಕಾರ ಪಡೆಯಬೇಕೆಂದರು ಆಗ ಬ್ರಾಹ್ಮಣ ಬ್ರಾಹ್ಮಣೇತರ ವಿದ್ದಿಲ್ಲ ವೇದೋಕ್ತದ ಪ್ರಸಾದದಿಂದ ಮಹಾರಾಜರನ್ನು ಕ್ಷತ್ರಿಯ ಮಾಡಿಕೊಳ್ಳುವಂತೆ ಶ್ರೀಗಳವರು ಅಪೇಕ್ಷಿಸಿದರು. ಶ್ರೀಗಳವರನ್ನು ಮುಂದೆ ಮಾಡಿ, ತಮ್ಮ ಕಾರ್ಯಸಾಧಿಸಿಕೊಳ್ಳಬೇಕೆಂದು ಮಹಾರಾಜರು ದೊಡ್ಡ ಬಲೆ ಒಡ್ಡಿದರು ಕೂನೆಯಲ್ಲಿ ಶ್ರೀಗಳವರೇ ಗುಳೇ ಹೋಗುವವರಂತೆ ದಂಡ ಕಮಂಡಲು ಮತ್ತು ಕಾಟಿಯನು ಮಾತ್ರ ತಕ್ಕೊಂಡು ಕೊಲ್ಹಾಪೂರಕ್ಕೆ ಶರಣು ಹೊಡೆದರು

ಇವರ ಹಾಗು ಸಂಕೇಶ್ವರದ ಸ್ವಾಮಿಗಳ ನಡುವೆ ದಿವಾಣಿ ನ್ಯಾಯ ಬಂದು ಅದು ಪಂಚರ ಮುಖಾಂತರ ತೀರಿತು. ಉತ್ತರ ದೇಶವು ಇವರ ಗುರುತ್ವದಲ್ಲಿ ಬಂತು ನಾಸಿಕದಲ್ಲಿ ತಮಗ ಗಿ ಮಠ ಕಟ್ಟಿದರು. ಆ ಪ್ರಾಂತದಲ್ಲಿ ಇವರು ಇಂದು ಬ್ರಾಹ್ಮಣ- ಬ್ರಾಹ್ಮಣೇತರ- ರಿಗೂ ವಂದ್ಯ ಗುರುಗಳಾಗಿದ್ದಾರೆ

ಧರ್ಮ ಮತ್ತು ರಾಜಕಾರಣವನ್ನು ಒಂದು ಮಾಡಿ, ಅದರಿಂದ ದೇಶೋನ್ನತಿ ಸಾಧಬೇಕೆಂಬುದೇ ಇವರ ಹಂಬಲವು. ಇದೇ ದೃಷ್ಟಿಯಿಂದ ಮುಸಲ್ಮಾನರ ಹಾಗು ದೇಶೀ ಸಂಸ್ಥಾನಿಕರ ಸಹಾಯ ಪಡಬೇಕೆಂದರು ಆದರೆ ಈ ವಿಷಯವಾಗಿ ಅತ್ಯಂತವಾಗಿ ನಿರಾಶೆ ಹೊಂದಿದರು ರಾಜ ಸಹಾಯಕ್ಕಿಂತ ಲೋಕದ ಸಹಾಯವು ಹೆಚ್ಚು ಉಪಯೋಗಕ್ಕೆ ಬೀಳುವದೆಂದು ಬಗೆದು, ಲೋಕಸಂಗ್ರಹ ಮಾಡಲಿಕ್ಕೆ ಪ್ರಾರಂಭಿಸಿದೆವೆಂದು ತಾವಾಗಿ ಕಬೂಲಿ ಜವಾಬು ಕೊಟ್ಟಂಥ ಭಾಷಣ ಮಾಡಿದ್ದಾರೆ

ಶ್ರೀ ಮಹಾಭಾಗವತರಾಗಿದ್ದಾಗ್ಗೇ ಅಂತ್ಯಜೋದ್ಧಾರವಾಗಬೇಕೆಂಬ ಮತದವರಾಗಿದರು. ಆ ಪ್ರಕಾರ ಪುಣೆಯಲ್ಲಿ ಕೂಡಿದ್ದ ಒಂದು ಸಭೆಗೆ ಗವರ್ನರಸಾಹೇಬರ ಆಮಂತ್ರಣದ ಪ್ರಕಾರ ಹೋಗಿ, ಭಾಷಣ ಮಾಡಿದರು ಇದೇ ಪ್ರಕಾರ ಬ್ರಾಹ್ಮಣೇತರರಲ್ಲಿಯೂ ಧರ್ಮ ಜಾಗೃತಿ ಮತ್ತು ಧರ್ಮ ಸುಧಾರಣೆಯಾಗಬೇಕೆಂಬ ಮತದವರು ಇಷ್ಟೇ ಅಲ್ಲದೆ. ಪರಧರ್ಮದಲ್ಲಿ ಸೇರಿದವರನ್ನು ಸ್ವಧರ್ಮದಲ್ಲಿ ಮರಳಿ ತಕ್ಕೊಳ್ಳಲಿಕ್ಕೆ ಬರುತ್ತದೆಂದು ನಿಂದಿಕವಾಗಿ ಧರ್ಮಶಾಸ್ತ್ರ ಹೇಳತಕ್ಕವರು. ಮಲಬಾರದ ಮಾಪಿಳ್ಳೆ ಜನರು ಅನೇಕ ಹಿಂದೂ ಜನರಿಗೆ ಬಲಾತ್ಕಾರದಿಂದ ಮುಸಲ್ಮಾನ ಧರ್ಮ ದೀಕ್ಷೆ ಕೊಟ್ಟರು ಇವರೆಲ್ಲರನ್ನೂ ಪುನಃ ಹಿಂದೂ ಧರ್ಮದಲ್ಲಿ ತಕ್ಕೊಳ್ಳಲಿಕ್ಕೆ ಬರುತ್ತದೆಂದು ಧರ್ಮಶಾಸ್ತ್ರ ಹೇಳಿ ಲೋಕಪ್ರಿಯರಾದರು.

ಇವರ ಧರ್ಮ ಮತ್ತು ರಾಜಕಾರಣಗಳಲ್ಲಿ ಎಪ್ಪೊ ರಾ ಸು ರಿ ತ ಪ ರು ರಾಜಕಾರಣದಲ್ಲಿ ಲೋಕಮಾನ್ಯರಂಥ ಮತದವರು ಇಂದು ಪತಿಯೋಗಿ ಸಹಕಾರಿಯಾಗಿದ್ದಾರೆ. ಧರ್ಮದಲ್ಲಿ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವಂಥವರು ಮುಸಲಮಾನರು ಸಹ ಇವರಲ್ಲಿ ಪೂಜ್ಯಭಾವವುಳ್ಳವರಾಗಿ, ಇವರಿಂದ ತೀರ್ಥ ಪ್ರಸಾದ ತಕ್ಕೊಳ್ಳುವರು. ಸನಾತನ ಧರ್ಮಾಭಿಮಾನಿಗಳೂ, ಸುಧಾರಕರೂ ಬ್ರಾಹ್ಮಣೇತರರೂ, ಅಸ್ಪೃಶ್ಯತೆಯನ್ನು ತೆಗೆದು ಹಾಕುವಂಥವರೂ - ರಲ್ಲಿ ಅತ್ಯಂತವಾದ ವಿಶ್ವಾಸವುಳ್ಳವರಾಗಿದ್ದಾರೆ.

ಸನಾತನ ಧರ್ಮಾಭಿಮಾನಿಗಳು ಮನುವಿನ ಕಾಲದ ಧರ್ಮಶಾಸ್ತ್ರದಂತೆ ಈಗಿನ ಜನರೂ ನಡೆಯಬೇಕೆಂದು ಹೇಳುತ್ತಾರೆ. ಸ್ವತ ಆ ಧರ್ಮದಂತೆ ತಮ್ಮ ಆಚರಣೆ ಇರದಿದ್ದರೂ, ಅನ್ಯರ ಮೇಲೆ ಆ ಶಾಸ್ತ್ರ ವಚನಗಳನ್ನು ಬಲಾತ್ಕಾರದಿಂದ ಹೇರುತ್ತಾರೆ. ಈ ಮೂಲಕ ರಾಜಕಾರಣಕ್ಕೆ ಮತ್ತು ಪದ್ಧತಿಯ ಮೂಲಕ ಉಂಟಾದ ಸಾಮಾಜಿಕ ಸುಧಾರಣೆಗೆ ಆಗಾಗ್ಗೆ ಆತಂಕಗಳು ಹುಟ್ಟುತ್ತಿವೆ. ಸಮುದ್ರಯಾನ, ಪ್ರೌಢವಿವಾಹ ಮುಂತಾದವುಗಳಿಗೆ ಬೇಕಾದಷ್ಟು ಸ್ಮೃತಿಗಳ ಆಧಾರವಿದ್ದರೂ, ಸನಾತನ ಧರ್ಮಾಭಿಮಾನಿಗಳಿಗೆ ಅವು ಒಪ್ಪಿಗೆಯಾಗಿಲ್ಲ. ಆದ್ದರಿಂದ ಕಾಲೋಚಿತವಾದ ಸುಧಾರಣೆಗೆ ಅವಶ್ಯವಾದ ಸ್ಮೃತಿಗಳ ಆಧಾರವನ್ನೇ ಪ್ರಮಾಣವಾಗಿ ಭಾವಿಸಬೇಕೆಂದೇ ಶ್ರೀಗಳ ಮತವು ಅತ್ಯಂತ ಕರ್ಮನಿಷ್ಠರಾದ ಶ್ರೀ ಮಾಧವರಾವ ಅಣೆ ಅಸ್ಪೃಶ್ಯತೆಯನ್ನು ತೆಗೆದು ಹಾಕಬೇಕೆಂದು ಗಂಡಗಟ್ಟಿ ಹಾಕಿದ ಮಿ. ಭೋಪಟಕರ ಮತ್ತು ಬ್ರಾಹ್ಮಣೇತರ ಮುಂದಾಳುಗಳಾದ ಮಿ. ಪವಾರ ಇವರೆಲ್ಲರಿಗೂ ಧರ್ಮವು ಬಾಧಿಸದಂತೆ ಮಾಡಬೇಕೆಂದು ಶ್ರೀಗಳವರ ಮನಃಪೂರ್ವಕವಾದ ವಿಚಾರವಿದ್ದು, ಈ ವಿಚಾರಕ್ಕೆ ಯೋಗ್ಯ ಚಾಲನೆ ಕೊಡುವದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಈ ಕಮಿಟಿಯಿಂದ ಹೊರಡುವ ಠರಾವು ಮಹಾರಾಷ್ಟ್ರೀಯರ ಧರ್ಮ ಸುಧಾರಣೆಯಲ್ಲಿ ಮಹತ್ವವಾದ ಕ್ರಾಂತಿಯನ್ನು ಮಾಡುವದು ಶ್ರೀ ದಯಾನಂದ ಸರಸ್ವತಿಯವರಂತೆ ಶ್ರೀ ಮಹಾಭಾಗವತರೂ ಅರ್ವಾಚೀನ ಧರ್ಮ ಸ್ಥಾಪಕರಾಗುವರು.

ಶ್ರೀಗಳವರು ಮಹಾಭಾಗವತರಿದ್ದ ಕಾಲದಿಂದ ಯೋಗಾಭ್ಯಾಸಿಗಳು. ತಪಸ್ಸಿನಲ್ಲಿ ಆಸಕ್ತಿಯುಳ್ಳವರು. ಧರ್ಮಜಾಗೃತಿಯನ್ನು ಮಾಡಿ, ಅದಕ್ಕೆ

ಯೋಗ್ಯ ಬಾಲನೆ ಕೊಡಬೇಕೆಂದು ಸನ್ಯಾಸಿಯಾದರು. ೫೦ ವರ್ಷ ರಾಜಭೋಗದಂತಿರುವ ಆಶ್ರಮದಲ್ಲಿಯೇ ದೇಹವಿಡುವದು ಅವರಿಗೆ ಅಭಿಮತವಿಲ್ಲ. ಆಶ್ರಮ [illegible] ೧೨ ವರ್ಷವಾಯಿತು. ಬಹಳವಾದರೆ ಮೂರು ನಾಲ್ಕು ವರ್ಷ ಇದೇ ಅವಸ್ಥೆಯಲ್ಲಿ ಇರುವರು! ಅಷ್ಟರಲ್ಲಿ ಯೋಗ್ಯನಾದಂಥ ಶಿಷ್ಯನಿಗೆ ಪಟ್ಟಗಟ್ಟಿ, ಏಕಾಂತವಾಸದಿಂದದ್ದು, ಯೋಗಸಾಧನೆ ಮಾಡುವರು. ಅಷ್ಟರಲ್ಲಿ [illegible] ಕೊಂಡಿರುವ ಧರ್ಮ ಸುಧಾರಣೆಯನ್ನು ಬಲಪಡಿಸಿ, ಅದನ್ನು ಲೋಕವ್ಯವಹಾರದಲ್ಲಿ ತರಬೇಕೆಂದಿದ್ದಾರೆ.

ಗೋಹತ್ಯದ ವಿಷಯವಾಗಿ

ಹಿಂದೂ, ಮುಸಲ್ಮಾನ ಮತ್ತು ಯುರೋಪಿಯನ್ನರ ಮತವು

— ೦ —

ಮೈಸೂರ ಸರಕಾರದವರು ಗೋಹತ್ಯದ [illegible] ಒಗ್ಗೆ ಕೆಲವು ಪ್ರಶ್ನೆಗಳನ್ನು [illegible] ಮಾಡಿ, ಜನರ ಮತ ಕೇಳಿದರಷ್ಟೇ, [illegible] ಜನರಿಂದ ಉತ್ತರಗಳು ಬಂದಿವೆ. ಅವುಗಳಲ್ಲಿ [illegible] ಹಿಂದೂ, [illegible] ಮುಸಲ್ಮಾನ ಮತ್ತು [illegible] ಜನರು ಯುರೋಪಿಯನ್ನರಾಗಿದ್ದಾರೆ.

ಹಿಂದೂ ಜನರಲ್ಲಿಯೂ ಕೆಲವರು ಗೋಹತ್ಯೆ ಮಾಡಬೇಕೆಂದಿದ್ದಾರೆ. ಇವರ ಸಂಖ್ಯೆಯು ತೀರ ಕಡಿಮೆ ಇರುವದು. ಭೂತದಯೆಯ ದೃಷ್ಟಿಯಿಂದ ಗೋಹತ್ಯ ನಿಲ್ಲಿಸುವದು ಯೋಗ್ಯವತ್ತು ಉಪಯುಕ್ತವಾದರೂ, ಇದು ಸಾಧ್ಯವಲ್ಲೆಂದು ಇವರ ಮತವು.

ಮುಸಲ್ಮಾನರಲ್ಲಿ ಹತ್ತು ಜನರು ಗೋಹತ್ಯ [illegible] ಆಗಿದ್ದಾರೆ. [illegible] ಕೊಲ್ಲಬೇಕೆನ್ನುತ್ತಿರೆ ಅದಕ್ಕೆ ಕುರಾಣದ ಆಧಾರವುಂಟು. ಇದು ಧರ್ಮದ ಪ್ರಶ್ನವು. ಇದರ ವಿರುದ್ಧ ಮಾಡುವ ಕಾಯದೆಯು ಧರ್ಮಸ್ವಾತಂತ್ರ್ಯದಲ್ಲಿ ಕೈಹಾಕುವಂತಾಗುತ್ತದೆಂದು ಇವರ ಮತವು.

ಬಂಜೆ ಮತ್ತು ಮುದುಕ ಆಕಳಗಳನ್ನು ಕೊಲ್ಲಬೇಕು. ಹಿಂಡುವ ಆಕಳಗಳನ್ನು ಕೊಲ್ಲಬಾರದು. ನಿರುಪಯೋಗಿ ದನಗಳನ್ನು ಕೊಲ್ಲದಿದ್ದರೆ ಹಿಂಡುವ ದನಗಳಿಗೆ ಮೇವಿನ ಕೊರತೆಯಾಗುವದೆಂದು ಯುರೋಪಿಯನ್ನರು ತಮ್ಮ ಮತಕೊಟ್ಟಿದ್ದಾರೆ.

ಇದೇ ವಿಷಯವಾಗಿ ಮಹಾತ್ಮರ ಮತವು.

ಗೋಹತ್ಯದ ಪ್ರಶ್ನವು ಧಾರ್ಮಿಕ ಮತ್ತು ಸಾಂಪತ್ತಿಕವಾಗಿದೆ. ಇವರಲ್ಲಿ ಸಂಸ್ಥಾನವು ಸೇರತಕ್ಕದ್ದಲ್ಲ. ಸಾಂಪತ್ತಿಕ ದೃಷ್ಟಿಯಿಂದ ನೋಡಲಾಗಿ ಹಿಂದೂ ಮುಸಲ್ಮಾನ ಎಲ್ಲ ಸಂಸ್ಥಾನಿಕರೂ ಗೋರಕ್ಷಣ ಮಾಡತಕ್ಕದ್ದು. [illegible] ಮಾನರು ಧರ್ಮ ದೃಷ್ಟಿಯಿಂದ ಗೋಹತ್ಯ ಮಾಡ[illegible] ವಾಗ [illegible] ಸಂಸ್ಥಾನವು ಜನರ ಮನ[illegible] ದಂತೆ [illegible] ಕಾನೂನು ಮಾಡತಕ್ಕದ್ದು.

ಹಿಂದುಸ್ಥಾನವು ಹಿಂದೂ ಜನರ ದೇಶವಾಗಿರುವಂತೆ ಮುಸಲ್ಮಾನರ ದೇಶವೂ ಆಗಿರುತ್ತದೆ. ಯಾವದೊಂದು ಹಿಂದೂ ಸಂಸ್ಥಾನವು ಮುಸಲ್ಮಾನರ ದೇಶವೂ ಆಗಿರುತ್ತದೆ. ಯಾವದೊಂದು ಹಿಂದೂ ಸಂಸ್ಥಾನವು ಮುಸಲ್ಮಾನರ [illegible] ಕಾಯದೆ ಗೋಹತ್ಯ ನಿಲ್ಲಿಸಲಾಗದು. ಹಿಂದೂ ಜನರ [illegible] ವ್ಯಥೆಯಾಗಿ, ಅವರನ್ನು [illegible] ಮುಸಲ್ಮಾನರು [illegible] ಮಾಡುತ್ತಿರುವದು. [illegible] ಸಂಸ್ಥಾನಿಕರು [illegible] ಸಾಂಪತ್ತಿಕ ದೃಷ್ಟಿಯಿಂದ ಗೋರಕ್ಷಣ ಮಾಡಬೇಕು. ಧಾರ್ಮಿಕ ವಿಚಾರದ [illegible]

ಸಂಸ್ಥಾನಗಳು [illegible] ಎಲ್ಲ ಆಕಳುಗಳನ್ನು [illegible] ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ [illegible] ಕೊಡಬೇಕು. [illegible] ದನಗಳಿಗಾಗಿ [illegible] ಮಾಡಬೇಕು. ಈ [illegible] ಸ್ವತಂತ್ರವಾಗಿ [illegible] ಬೇಕು. [illegible] ಮತ್ತು [illegible] ಈ [illegible] ವಿದ್ಯುತ್ [illegible] ವದ.

ನಾಗಪೂರದ [illegible] ಸತ್ಯಾಗ್ರಹ [illegible] ಜನ [illegible] ಹೋಗಿರುವರು.

ಡಾಕ್ಟರ [illegible] ಸೂಚಿಸಿದ ಮೇರೆಗೆ ಬ್ರಾಹ್ಮಣೇತರರೂ ಕಾಂಗ್ರೆಸ ಸಭೆಯನ್ನು ಸೇರಬೇಕೆಂಬ ವಿಚಾರವನ್ನು [illegible] ನಡಿಸಿದ್ದಾರೆ. ಈ ವಿಷಯವಾಗಿ [illegible] ಬ್ರಾಹ್ಮಣೇತರ ಪರಿಷತ್ತಿನಲ್ಲಿ ವಿಚಾರ ಮಾಡುವರು.

ಕಲಕತ್ತೆಯಲ್ಲಿ ಶರಚ್ಚಂದ್ರ ಸೇನರೆಂಬ ವಕೀಲರು ಕೋರ್ಟಿಗೆ ಹೋಗುತ್ತಿದ್ದಾಗ, ದಾರಿಯಲ್ಲಿಯೇ ಇವರ ಹೊಟ್ಟೆಯಲ್ಲಿ ಚೂರಿ ಇರದು ಇವರನ್ನು ಕೊಂದಿದ್ದಾರೆ.

ರಶಿಯಾದ ಸೇನಾ ಸಿದ್ಧತೆ

— ೦ —

ಇಂಗ್ಲಂಡ ಮತ್ತು ರಶಿಯಾದ ನಡುವೆ [illegible] ಕಲಹದ ದೆಸೆಯಿಂದ ರಶಿಯದು ಚೀನ ಭಾಗದಲ್ಲಿ ಇಂಗ್ಲಿಷ ಮುಖ್ಯ ತೀರಿಸಿಕೊಳ್ಳುವ ದಕ್ಕಾಗಿ ಚೀನದ [illegible] ಬಲದಿಂದ ದಂಡು ಕೂಡಿಸುತ್ತಿದ್ದಾರೆಂದು [illegible] ವರ್ತಮಾನ ಪತ್ರಗಳು [illegible] ಮಾಡಿರುತ್ತವೆ.

ವಿವಿಧ ವರ್ತಮಾನಗಳು

— ೦ —

[illegible] ಅಧ್ಯಕ್ಷರಾದ [illegible] ದಶನಾ[illegible]

[illegible] ಯುನಿವ್ಹರ್ಸಿಟಿಯು [illegible] ಪರೀಕ್ಷೆ [illegible] ಜನರು ಪಾಸಾಗಿದ್ದು, [illegible] ಜನರು [illegible] ರಿದ್ದಾರೆ. ಕುಮಾರ [illegible] ಮಾನಂದೀಕರರು [illegible] ಕ್ಲಾಸಿನಲ್ಲಿ ಬಂದಿದ್ದಾರೆ.

[illegible] ದಲ್ಲಿ [illegible] ತರುಣನನ್ನು ಹಿಡಿದಿದ್ದು, ಅವರ [illegible] ಹೊರಟಿರುತ್ತವೆ.

ಧಾರವಾಡ—

ಇಲ್ಲಿಯ ಲಿಂಗಾಯತ ಹಾಯಸ್ಕೂಲಿನಲ್ಲಿ ಕೆಲಗಿನ [illegible] ಎಸ್. ಬಿ ಮತ್ತು [illegible] ಎಸ್ [illegible] ಇವರು [illegible] ತಿಳಿಯುತ್ತದೆ [illegible] ಇವರು [illegible]

ಕಳೆದ ಮೂರು ದಿವಸಗಳಿಂದ ಇಲ್ಲಿ ಕೂಡಿದ್ದ ಪಂಚಾಂಗ ಕಮಿಟಿಯು ಕೆಲಸವು ಪೂರ್ಣವಾಗಲಿಲ್ಲ. ಒಂದು ತಿಂಗಳನಂತರ ಪುನಃ ಕಮಿಟಿ ಕೂಡಿಸಬೇಕೆಂದು [illegible] ಗಳವರು ಅಪ್ಪಣೆ ಮಾಡಿದ್ದಾರೆ. [illegible] ಪಂಚಾಂಗದ ಪ್ರತಿನಿಧಿಗಳು [illegible]

ಕಳೆದೆರಡು ದಿವಸ ಸೆಲ ಕೊಯ್ಯುವನ್ನು [illegible] ಯಾಯಿತು.

ಮಿ. ಚನ್ನಪ್ಪ [illegible] ಇವರು [illegible] ಜಿಲ್ಲೆಯಲ್ಲಿ [illegible] ನೇಮಿಸಲ್ಪಟ್ಟಿದ್ದಾರೆ.

ನೋಟೀಸು

ರಾ|| ರಾ|| ಬಸವಂತ ಶಂಕರೆಪ್ಪಾ ಕಂಬಾರ ಸಾಕೀನ ಕಲಭಾವಿ ತಾ| ಬೈಲಹೊಂಗಲ ಈತನಿಗೆ—

ಕೆಳಗೆ ಸಹಿ ಮಾಡುವವಳ ಕಡೆಯಿಂದಾ— ನೀನು ನನ್ನ ಲಗ್ನದ ಗಂಡನು. ನನ್ನ ಕೂಡ ಎಂದಿಗೂ ನನ್ನ ಬಾಳ್ವೆಯು ಇಲ್ಲ ಇತ್ತಿತ್ತಲಾಗಂತೂ ಎರಡು ಮೂರು ವರ್ಷಗಳಿಂದ [illegible] ನೀನು ಎರಡನೇ ಹೆಂಡತಿಯನ್ನು ಮಾಡಿಕೊಂಡದ್ದರಿಂದ ನನ್ನ [illegible] ನಡೆಸಿಕೊ[illegible] ನನ್ನ ಕೂಡ ಪ್ರಪಂಚ [illegible] ಮಾಡಿಲ್ಲ. ಕೇವಲ [illegible] ಮಾಡದೆ [illegible] ನನ್ನ [illegible] ತೆಗೆದುಕೊಳ್ಳುವ ಯತ್ನ ನಡೆಸಿ[illegible] ನನ್ನನ್ನು [illegible] ಬಡಿಯುವದೂ, [illegible] ಸೀರೆ ಕೊಡದೆ ಇರುವದೂ, ಮುಂತಾದ ಅತ್ಯಂತ ಕ್ರೂರತನದ ತ್ರಾಸ ಕೊಟ್ಟು [illegible] ಮೇಲೆ ನನ್ನನ್ನು ನನ್ನ ತವರ ಮನೆಗೆ ಅಟ್ಟುತ್ತೀರಿ ಈಗ ನಾಲ್ಕು ತಿಂಗಳ ಹಿಂದೆ ಇದೇ ರೀತಿಯ ತ್ರಾಸ ಕೊಟ್ಟು [illegible] ನೀನೇ ನನ್ನನ್ನು ನನ್ನ ತವರ ಮನೆಗೆ ಕಳಿಸಿ ಹೋದಿ ಈ ತರದ ನಿನ್ನ ವರ್ತನದ ಮೂಲಕ ನನಗೆ ಜೀವದ ಭಯವುಂಟಾಗಿ ನಿನ್ನ ಹತ್ತಿರ ಇರತಕ್ಕ ಧೈರ್ಯವು ನನ್ನಲ್ಲಿ ಎಳ್ಳಷ್ಟು ಉಳಿದಿರುವದಿಲ್ಲ. ಹೀಗಿದ್ದು ಈಗ ನಾಲ್ಕು ದಿವಸಗಳ ಹಿಂದೆ ನೀನು ನಮ್ಮಲ್ಲಿಗೆ ಬಂದು ನನ್ನನ್ನು ಕರೆದೊಯ್ಯುವ ಬಹಾಣೆಯಿಂದ ನನ್ನ ಮೇಲೆ ಅತ್ಯಂತ ಸಿಂದ್ಯತರವಾದ ಬಲಾತ್ಕಾರಗಳನ್ನು ಮಾಡಿ ಕೇವಲ ದುಡ್ಡು ಉಚ್ಚಿಕೊಳ್ಳುವ ಹೇತುವಿನಿಂದ ಕೆಲವು ಪುಂಡ ಮತ್ತು ಲಬಾಡ ಜನರ ಮದ್ದತಿನಿಂದ ನಾನಾತರದ ಧಮಕಿಗಳನ್ನು ಕೊಟ್ಟಿ ಆದ್ದರಿಂದ ನಿನಗೆ ತಿಳಿಸುವದೇನಂದರೆ—

ಈ ನೋಟೀಸು ಪ್ರಸಿದ್ಧವಾದ ಒಂದು ತಿಂಗಳಲ್ಲಿ ವೈವಾಹಿಕ ಹಕ್ಕು ಸ್ಥಾಪಿಸುವ ಬಗ್ಗೆ ಯೋಗ್ಯ ಕೋರ್ಟಿನಲ್ಲಿ ದಾವೆ ಮಾಡಿ ನನ್ನ ತಕರಾರುಗಳನ್ನು ದೂರ ಮಾಡಬೇಕು ಹಾಗೆ ಮಾಡದೇ ಗೈರಕಾಯದೇಶೀರ ವರ್ತನ ಮಾಡಿದ್ದು ನಿನ್ನ ಮೇಲೆ ರೀತಿಪ್ರಕಾರ ಫೌಜದಾರೀ ಫಿರ್ಯಾದಿ ಮಾಡಬಾರದೀತು ಮತ್ತು ಈ ನೋಟೀಸಿನ ಮುದ್ದತಿನಂತರ ನಾನು ನನ್ನ ಮರ್ಜಿಪ್ರಕಾರ ನಡೆದುಕೊಳ್ಳಲಿಕ್ಕೆ ಬಾಧ್ಯಳಿದ್ದೇನೆ ಆ ಮೇಲೆ ನಿನ್ನ ತಕರಾರುಗಳೇನೂ ನಡೆಯಲಿಕ್ಕಿಲ್ಲ ತಿಳಿಯುವದು.

ತಾರೀಖು ೨೬ ಮಾಹೆ ಮೇ ೧೯೩೭ ಇಸ್ವಿ

ಸಹಿ ಮಲ್ಲವ್ವಾ ಕೋಂ ಬಸವಂತ ಕಂಬಾರ

ಈ ನ[illegible] ಕೊಟ್ಟ ಮೇಲಿನ ನೋಟೀಸಿ

ಜಾಹೀ

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬಿನ್ನ[illegible] ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿ [illegible] ನ ಮನಸ್ಸಿಗೆ "ಉತ್ತಮ" [illegible] ಕಡಿಗೆ [illegible]. [illegible] ಕ ಪತ್ರಿಕೆ ಬರೆದು [illegible] ನ ಕಳಿಸಿ ಕೊಡುತ್ತೇವೆ. [illegible]

[ತಿಗ

ಗಣಪತ [illegible]

[illegible]

[illegible]

ನ ಪ್ರಕಾರ ನೀನು ತಜವೀಜ ಮಾಡಿ ಅಕೆಯನ ಕರೆದುಕೊಂಡು ಹೋಗುವ ಬಗ್ಗೆ ಹುಕುಮನಾಮೆಯನ್ನು ಪಡೆಯಬೇಕು ಹಾಗೇ ನಿನ್ನ ಹತ್ತಿರ [illegible] ಹಕ್ಕು ನಷ್ಟವಾಗಿದೆ ಇನ್ನು ಮೇಲೆ ನೀ[illegible] ಕಾಯದೆಶೀರ ತಜವೀಜ ಮಾಡದೇ ಗೈರ ಕಾ[illegible]ದೇಶೀರ ವರ್ತನ ನಡಿಸಿದಲ್ಲಿ ರೀತಿಪ್ರಕಾರ ಕೆ[illegible] ನಡಿಸಿ ಮುಂದೆ ಆಕೆಯು ಮರ್ಜೀಪ್ರಕಾರ ವ್ಯವಸ್ಥೆ ಮಾಡಲಾದೀತು. ಆ ಮೇಲೆ ನಿನ್ನ ತಕರಾರುಗ[illegible] ನೂ ನಡೆಯಲಿಕ್ಕಿಲ್ಲ ತಿಳಿಯುವದು.

ತಾ|| ೨೬-೫-೩೭ ಇಸ್ವಿ

ಸಹಿ ಬಸವಂತಪ್ಪಾ ರಾಮಪ್ಪಾ ಕಂಬಾರ

ನೋಟೀಸಿನ ಪ್ರತ್ಯುತ್ತರ

ರಾ|| ರಾ|| ಅಯ್ಯಪ್ಪಾ ಬಸಪ್ಪಾ ಕೋ[illegible] ಕೊಪ್ಪ ಹಲ್ಲಿವಸ್ತಿ ಕಡಬಗಟ್ಟಿ ತಾ. ಸಂಪಗಾ[illegible] ಈತನಿಗೆ

ಕೆಳಗೆ ಸಹಿ ಮಾಡುವವಳ ಕಡೆ[illegible] ತಿಳಿಸುವದೇನಂದರೆ— ನಿನ್ನ [illegible]ತ್ತರ ಮುಟ್ಟಿ ಮಜಕೂರ ತಿಳಿತು ಅದು ನ[illegible] ನೋಟೀಸಿನ ಕಾಯದೇಶೀರ ಉತ್ತರವಿದೆ, ಅ[illegible]ಲ್ಲಿ ಮಾಡಿದ ವಿಧಾನಗಳ ಮೇಲಿಂದಲೇ ಅದು ಸು[illegible] ಸಾಧಣೂಕೀದು ಅಂತ ಒಡೆದು ಕಂಡು ಬರುತ್ತ[illegible] ಅದರಲ್ಲಿ ಬರೆದ ಯಾವತ್ತು ಮಜಕೂರು ನಿಶ್ಚಯ[illegible]ತ್ಮಕವಲ್ಲ ಇಷ್ಟೇ ಅಲ್ಲ; ನನ್ನ ಸೂಚನಾದಂತೆ[illegible] ನಿನ್ನ ಅಂಬೋಣವಿದ್ದದರಿಂದ ನನ್ನ ನೋಟೀಸಿಗೆ[illegible]ದು ಒಂದು ಪ್ರಕಾರದ ಒಪ್ಪಿಗೆಯನ್ನೇ ತೋರಿಸುತ್ತ[illegible] ನಿನ್ನಲ್ಲಿ ಆಸ್ತೀ ಕಾಯ್ದುಕೊಳ್ಳುವ ಶಕ್ತೀ [illegible]ವಾಗೀನೆಗಳಿದ್ದರೆ ನೀನು ಹೊಲಾ ಮನಿ ಮಾರಿ •

ವಿಜಯ

ಕನ್ನಡ ದಿನ ಪತ್ರಿಕೆ

ದಿನಾಂಕ.	ಬುಧವಾರ	ತಾ॥ಬ. ೧ ನೇ	ಜೂನ್.	೧೯೭೭.	ಇದೆ.
	ಗುರುವಾರ	೨ ನೇ	"	"	"
	ಶುಕ್ರವಾರ	೩ ನೇ	"	"	"
	ಶನಿವಾರ	೪ ನೇ	"	"	"
	ರವಿವಾರ	೫ ನೇ	"	"	"
	ಸೋಮವಾರ	೬ ನೇ	"	"	ಇಲ್ಲ
	ಮಂಗಳವಾರ	೭ ನೇ	"	"	ಇದೆ
	ಬುಧವಾರ	೮ ನೇ	"	"	"
	ಗುರುವಾರ	೯ ನೇ	"	"	"
	ಶುಕ್ರವಾರ	೧೦ ನೇ	"	"	"
	ಶನಿವಾರ	೧೧ ನೇ	"	"	"
	ರವಿವಾರ	೧೨ ನೇ	"	"	"
	ಸೋಮವಾರ	೧೩ ನೇ	"	"	ಇಲ್ಲ
	ಮಂಗಳವಾರ	೧೪ ನೇ	"	"	ಇದೆ
	ಬುಧವಾರ	೧೫ ನೇ	"	"	"
	ಗುರುವಾರ	೧೬ ನೇ	"	"	"
	ಶುಕ್ರವಾರ	೧೭ ನೇ	"	"	"
	ಶನಿವಾರ	೧೮ ನೇ	"	"	"
	ರವಿವಾರ	೧೯ ನೇ	"	"	"
	ಸೋಮವಾರ	೨೦ ನೇ	"	"	ಇಲ್ಲ
	ಮಂಗಳವಾರ	೨೧ ನೇ	"	"	ಇದೆ
	ಬುಧವಾರ	೨೨ ನೇ	"	"	"
	ಗುರುವಾರ	೨೩ ನೇ	"	"	"
	ಶುಕ್ರವಾರ	೨೪ ನೇ	"	"	"
	ಶನಿವಾರ	೨೫ ನೇ	"	"	"
	ರವಿವಾರ	೨೬ ನೇ	"	"	"
	ಸೋಮವಾರ	೨೭ ನೇ	"	"	"
	ಮಂಗಳವಾರ	೨೮ ನೇ	"	"	"
	ಬುಧವಾರ	೨೯ ನೇ	"	"	"
	ಗುರುವಾರ	೩೦ ನೇ	"	"	"

ಬೆಲೆ ಅರ್ಧ ಆಣೆ

ಶ್ರೀ ಬಾಳಾಚಾರ್ಯ ಹೊಸಕೇರಿ.

ಖಿ ೧ ನೇ ಜೂನ ೧೯೨೭ | ಸಂಚಿಕೆ ೧೧೩

೧.

...ದ್ದು ಅರು ನೀರಿನ
...ಬ್ಬಿಣ ಎರಡು ಈಸು
...ಂದ ಜಾರಿಗೆ ೭೪
...ಕ್ಕೆ ನೀರಿನ ಕೊರ
ತರಕಕ್ಕಾರಿಗೆ ಈ
...ಕ್ಕೆ ೭೯|| ರೂಪಾಯಿ.
...ತಿರುಗುತ್ತಿರುವ ನಮ್ಮ
...ಖಾನೆಗೆ ಕಾಗದವನ್ನು

...ಫೋರ್ಸ್ಕವಾಡಿ
...ಬಿಲ್ಲಾ, ಸಾತಾರಾ

...ಬ್ಯಾಂಕ ಲಿಮಿಟೆಡ್
...ವಾಡ.

...ಮೂರು, ನಾಲ್ಕು ಆರ
...ನಿಂದ ಹಣವನ್ನು ಡಿಪಾಜಿ
...ದು. ದರವನ್ನು ಸಮಕ್ಷ

...ದಾಗೀನೆಗಳನ್ನು ವತ್ತೀ
ದರವು ನೂರಕ್ಕೆ ತಿಂಗಳಿಗೆ
...ತ್ತದೆ.

ಎ. ಕ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಕಾಲರಾ ಪಿಲ್ಸ.

—(೦)—

ಕಾಲರಾ (ಮಹಾರೋಗ) ರೋಗದ ಮೇಲೆ ಔಷಧವು ಒಳ್ಳೇ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೂಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೨೫ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ. ಪತ್ತೆ:- ಮ್ಯಾ. ಆರ್ಯೌಷಧಿ ಕಾರ್ಯಾನಂ ಕಿತ್ತೂರ ಪೋ., ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

—೦೦೦—

ಜೂನ ತಿಂಗಳಲ್ಲಿಹೊಸ ವರ್ಷ ಪ್ರಾರಂಭವಾಗುವ ನಿಶ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯುವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸು

ರಾ॥ ರಾ॥ ಬಸವಂತ ಶಂಕರೆಪ್ಪಾ ಕಂಬಾರ ಸಾಕೀನ ಕಲಭಾವಿ ತಾ॥ ಬೈಲಹೊಂಗಲ ಈತನಿಗೆ—

ಕೆಳಗೆ ಸಹಿ ಮಾಡುವವಳ ಕಡೆಯಿಂದಾ— ನೀನು ನನ್ನ ಲಗ್ನದ ಗಂಡನು. ನನ್ನ ಕೂಡ ಎಂದಿಗೂ ನನ್ನ ಚಾಕ್ರಿಯು ಇಲ್ಲ ಇತ್ತಿತ್ತಲಾಗಂತೂ ಎರಡು ಮೂರು ವರ್ಷಗಳ ಲಾಗಾಯತ ನೀನು ಎರಡನೇ ಹೆಂಡತಿಯನ್ನು ಮಾಡಿಕೊಂಡದ್ದರಿಂದ ನನ್ನನ್ನು ಬಹಳೇ ನಿರ್ದಯತನದಿಂದ ನಡೆಸಿಕೊ ಳ್ಳುತ್ತಿರುವಿ. ವಾಸ್ತವಿಕ ನನ್ನ ಕೂಡ ಪ್ರಪಂಚ ಮಾಡುವ ಇಚ್ಛೆಯು ನಿನ್ನದಿರುವದಿಲ್ಲ. ಕೇವಲ ರೂಢಿಗನುಸಾರವಾಗಿ ಲಗ್ನದ ಹಕ್ಕಿನ ಮೂಲಕ ಬದಲಿ ಯನ್ನು ನನ್ನ ಕಡೆಯಿಂದ ತೆಗೆದುಕೊಳ್ಳುವ ಯತ್ನ ನಡಿಸಿರುತ್ತೀ. ಅದಕ್ಕಂತೆಯೇ ನನ್ನನ್ನು ಹೊಡೆಯು ವದೂ, ಬಡೆಯುವದೂ, ಕೂಳೂ ನೀರೂ ಕೊಡದೆ ಇರುವದೂ, ಮುಂತಾದ ಅತ್ಯಂತ ಕ್ರೂರತನದ ತ್ರಾಸ ಕೊಟ್ಟು ಮೇಲಿಂದ ಮೇಲೆ ನನ್ನನ್ನು ನನ್ನ ತವರ ಮನೆಗೆ ಅಟ್ಟುತ್ತೀದಿ. ಈಗ ನಾಲ್ಕು ತಿಂಗಳ ಹಿಂದೆ ಇದೇ ರೀತಿಯ ತ್ರಾಸ ಕೊಟ್ಟು ಸ್ವತಃ ನೀನೇ ನನ್ನನ್ನು ನನ್ನ ತವರ ಮನೆಗೆ ಕಳಿಸಿ ಹೋದಿ. ಈ ತರದ ನಿನ್ನ ವರ್ತನದ ಮೂಲಕ ನನಗೆ ಜೀವದ ಭಯವುಂಟಾಗಿ ನಿನ್ನ ಹತ್ತರ ಇರತಕ್ಕ ಧೈರ್ಯವು ನನ್ನಲ್ಲಿ ಎಳ್ಳಷ್ಟು ಉಳಿದಿರುವದಿಲ್ಲ. ಹೀಗಿದ್ದು ಈಗ ನಾಲ್ಕು ದಿವಸಗಳ ಹಿಂದೆ ನೀನು ನಮ್ಮಲ್ಲಿಗೆ ಬಂದು ನನ್ನನ್ನು ಕರೆದೊಯ್ಯುವ ಬಹಾಣೆಯಿಂದ ನನ್ನ ಮೇಲೆ ಅತ್ಯಂತ ನಿಂದ್ಯತರವಾದ ಬಲಾತ್ಕಾರಗಳನ್ನು ಮಾಡಿ ಕೇವಲ ದುಡ್ಡು ಉಚ್ಚಿಕೊಳ್ಳುವ ಹೇತುವಿನಿಂದ ಕೆಲವು ಪುಂಡ ಮತ್ತು ಲಟಾಂಗ ಜನರ ಮದ್ದತಿನಿಂದ ನಾನಾತರದ ಧಮಕಿಗಳನ್ನು ಕೊಟ್ಟ ಕಾರಣ ನಿನಗೆ ತಿಳಿಸುವದೇನಂದರೆ—

ಈ ನೋಟೀಸು ಪ್ರಸಿದ್ಧವಾದ ಒಂದು ತಿಂಗಳಲ್ಲಿ ವೈವಾಹಿಕ ಹಕ್ಕು ಸ್ಥಾಪಿಸುವ ಬಗ್ಗೆ ಯೋಗ್ಯ ಕೋರ್ಟಿನಲ್ಲಿ ದಾವೆ ಮಾಡಿ ನನ್ನ ತಕರಾರುಗಳನ್ನು ದೂರ ಮಾಡಬೇಕು. ಹಾಗೆ ಮಾಡದೇ ಗೈರ ಕಾಯದೇಶೀರ ವರ್ತನ ಮಾಡಿದ್ದು ನಿನ್ನ ಮೇಲೆ ರೀತಿಪ್ರಕಾರ ಫೌಜದಾರೀ ಫಿರ್ಯಾದಿ ಮಾಡಲಾದೀತು ಮತ್ತು ಈ ನೋಟೀಸಿನ ಮುದ್ದತಿನಂತರ ನಾನು ನನ್ನ ಮರ್ಜಿಪ್ರಕಾರ ನಡೆದುಕೊಳ್ಳಲಿಕ್ಕೆ ಬಾಧ್ಯಳಿದ್ದೇನೆ. ಆ ಮೇಲೆ ನಿನ್ನ ತಕರಾರುಗಳೇನೂ ನಡಿಯಲಿಕ್ಕಿಲ್ಲ ತಿಳಿಯುವದು.

ತಾರೀಖು ೨೬ ಮಾಹೆ ಮೇ ೧೯೨೭ ಇಸ್ವಿ

ಸಹಿ ಮಲ್ಲವ್ವಾ ಕೋಮ ಬಸವಂತ ಕಂಬಾರ

ನನ್ನ ನಗಳು ಕೊಟ್ಟ ಮೇಲಿನ ನೋಟೀಸಿನ ಪ್ರಕಾರ ನೀನು ತಜವೀಜ ಮಾಡಿ ಆಕೆಯನ್ನು ಕರೆದುಕೊಂಡು ಹೋಗುವ ಬಗ್ಗೆ ಹುಕುಮನಾಮೆಯನ್ನು ಪಡೆಯಬೇಕು. ಹಾಗೇ ನಿನ್ನ ಹತ್ತರ ಇರುವ ಹಕ್ಕು ನಷ್ಟವಾಗಿದೆ. ಇನ್ನು ಮೇಲೆ ನೀನು ಕಾಯದೇಶೀರ ತಜವೀಜ ಮಾಡದೇ ಗೈರ ಕಾಯದೇಶೀರ ವರ್ತನ ನಡಿಸಿದಲ್ಲಿ ರೀತಿಪ್ರಕಾರ ಕೆಲಸ ನಡಿಸಿ ಮುಂದೆ ಆಕೆಯ ಮರ್ಜಿಪ್ರಕಾರ ವ್ಯವಸ್ಥಾ ಮಾಡಲಾದೀತು. ಆ ಮೇಲೆ ನಿನ್ನ ತಕರಾರುಗಳೇನೂ ನಡೆಯಲಿಕ್ಕಿಲ್ಲ ತಿಳಿಯುವದು.

ತಾ॥ ೨೬-೫-೨೭ ಇಸ್ವಿ

ಸಹಿ ಬಸವಂತಪ್ಪಾ ರಾಮಪ್ಪಾ ಕಂಬಾರ

ನೋಟೀಸಿನ ಪ್ರತ್ಯುತ್ತರ

ರಾ॥ ರಾ॥ ಅಯ್ಯಪ್ಪಾ ಬಸಪ್ಪಾ ಕೋರ್ವಿ ಕೊಪ್ಪ ಹಲ್ಲಿವಸ್ತಿ ಕಡಕಗಟ್ಟಿ ತಾ. ಸಂಪಗಾವ ಈತನಿಗೆ

ಕೆಳಗೆ ಸಹಿ ಮಾಡುವವಳ ಕಡಿಂದ ತಿಳಿಸುವದೇನಂದರೆ— ನಿನ್ನ ಉತ್ತರ ಮುಟ್ಟಿ ಮಜಕೂರ ತಿಳಿತು. ಅದು ನನ್ನ ನೋಟೀಸಿನ ಕಾಯದೇಶೀರ ಉತ್ತರವಿಂದೆ, ಅದರಲ್ಲಿ ಮಾಡಿದ ವಿಧಾನಗಳ ಮೇಲಿಂದಲೇ ಅದು ಸುಳ್ಳು ಸಾಧಣೂಕೀದು ಅಂತ ಒಡೆದು ಕಂಡು ಬರುತ್ತದೆ. ಅದರಲ್ಲಿ ಬರೆದ ಯಾವತ್ತು ಮಜಕೂರು ನಿಶ್ಚಯಾತ್ಮಕವಿಲ್ಲ. ಇಷ್ಟೇ ಅಲ್ಲ; ನನ್ನ ಸೂಚನಾದಂತೆಯೇ ನಿನ್ನ ಅಂಬೋಣವಿದ್ದದರಿಂದ ನನ್ನ ನೋಟೀಸಿಗೆ ಅದು ಒಂದು ಪ್ರಕಾರದ ಒಪ್ಪಿಗೆಯನ್ನೇ ತೋರ್ಸುತ್ತದೆ. ನಿನ್ನಲ್ಲಿ ಅಸ್ತೀ ಕಾಯ್ದುಕೊಳ್ಳುವ ಶಕ್ತೀ ಅಥವಾ ದಾಗೀನೆಗಳಿದ್ದರೆ ನೀನು ಹೊಲಾ ಮನಿ ಮಾರಿ ಎರಡನೇ ಊರಲ್ಲಿ ಕೇವಲ ಹೆಂಗಸಿನ ಆಶ್ರಯದ ಮೇಲೆ ಎಂದೂ ಜೀವಿಸಲು ಕಾರಣವಿದ್ದಿಲ್ಲ. ಪ್ರತ್ಯುತ್ತರದ ಕಾರಣವಿರದಿದ್ದರೂ ಇನ್ನು ಮುಂದೆ ಇದೇ ಪ್ರಕಾರ ಜೀವಿಸಲು ನನಗೆ ಸಾಧ್ಯವಿಲ್ಲ. ಕಾರಣ ಈ ಪ್ರತ್ಯುತ್ತರ ಮುಟ್ಟಿದ ೮ ದಿವಸಗಳಲ್ಲಿ ನನ್ನ ತಾಬಾ ಪಡೆಯುವ ಬಗ್ಗೆ ದಾವೇ ಮಾಡಬೇಕು. ಇಲ್ಲದಿದ್ದಲ್ಲಿ ನೋಟೀಸಿನಲ್ಲಿ ತಿಳಿಸಿದಂತೆ ನನ್ನ ಮರ್ಜಿ ಪ್ರಕಾರ ನಡಿಯಲಿಕ್ಕೆ ಮುಖತ್ಯಾರಳಿದ್ದೇನೆ. ಆಮೇಲೆ ನಿನ್ನ ಹಕ್ಕು ಅಗರ ತಕರಾರು ನಡಿಯಲಿಕ್ಕಿಲ್ಲ. ವಿನಾಃಕಾರಣ ಉತ್ತರಕ್ಕೆ ಉತ್ತರ ಕೊಟ್ಟು ಖರ್ಚಿಗೆ ಗುರಿಯಾಗಬಾರದು ತಿಳಿಯೋದು ತಾ. ೭೮-೫-೨೭

ಈ ಎಡಗೈ ಹೆಬ್ಬೆಟ್ಟಿನ ಗುರುತಾ ಮಲ್ಲವ್ವಾ ಕೋಮ ಅಯ್ಯಪ್ಪಾ ಕಲವಾಯಿ ಈಕಿದು ಆದೆ.

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೌನ್ಸ ಚಹಾ ಮತ್ತು ಕಾಫೀ ಸೂವೀ ದರದಿಂದ ಸಿಗುವದಲ್ಲದೆ, ಲೋಕ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನಿಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ತೆಗೆದುಕೊಳ್ಳಬಹುದು. ಯಾಕೆಂದರೆ ಊರಲ್ಲಿ ಎಲ್ಲ ತರದ ಚಹಾ ನಾಲ್ಕು ಕಡೆಗೆ ಪಸಾರವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ಈಗ ನಿಂದರಲ್ಲಿ ಕೆಳಗೆ ಕ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ರೋಜ ಕಾರ್ಡಿ ಪೋಸ್ಟಿನ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟಃ—

ಗಣಪತ ಭವಾನರಾವ ಲೋಖಂಡೆ ಪೋತಿ ಕಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಟಿಕಾರೆ,

ಮಾಜಿ ರಿಜೇಸ್ಟರ ವಕೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ.

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಿಕೆಗೆ ೧ ವರ್ಷಕ್ಕೆ	೫—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತ್ಸಾರ್ಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಬುಧವಾರ ತಾರೀಖು ೧ ನೇ ಜೂನ ೧೯೨೭ | ಸಂಚಿಕೆ ೧೧೩

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತರದಿನ ಗಾಡಿ ಇರುವದು. ಕಬ್ಬಿಣ ಎರಡು ಅಸು ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಜಾಗೆಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ಒಯ್ಯುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೭೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯಲ್ಪಡುವವು. ಕ್ಯಾಶ್‌ಮುಮತ್ತು ಜೇತಿ ಕರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲ್ಪಡುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಪಾಂಡುರಂಗ ವರದರಾವ ಬಿ. ಜಹಾಗೀ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಪತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೇಟಿವ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಕಾಲರಾ ಪಿಲ್ಸ.

—(೦)—

ಕಾಲರಾ (ಪಟಕಿ) ರೋಗದ ಮೇಲೆ ಔಷಧವು ಬಹಳ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೋಘ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೨೫ ಗುಳಿಗೆಗೆ ೧೨ಆ. ೧೦೦ಕ್ಕೆ ೩ರೂ. ಪತ್ತಾ:- ಮ್ಯಾ. ಆಯುರ್ವೇದ ಔಷಧಿ ಕಾರಖಾನಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

—೦೦೦—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು, ವಾರ ಪತ್ರದ ಚಂದಾದಾರರ ಹೆಸರಿನಿಂದ ಹ್ವಿ. ಪಿ. ಯನ್ನು ಕಳಿಸುವೆವು. ಚಂದಾದಾರರು ಹ್ವಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ. ತಾ—೧—೭—೩೧ ನೇ ಇಸ್ವಿ

ರಶಿಯರಿಗೆ ಇಂಗ್ಲಂಡದಿಂದ ಗುಡಚೀಪೆ ಕಟ್ಟುವ ಹುಕುಮು.

ರಶಿಯಾದ ವ್ಯಾಪಾರ ಸಂಬಂಧವಾದ ಪ್ರಭುತ್ವದ ಹಕ್ಕನ್ನು ಇಂಗ್ಲಿಷ ಸರಕಾರದವರು ಕಸಕೊಂಡನಂತರ, ಲಂಡನದಲ್ಲಿರುವ ಅದರ ಪ್ರತಿನಿಧಿಗಳಿಗೆ ಹತ್ತು ದಿವಸಗಳಲ್ಲಿ ಗುಡಚೀಪೆ ಕಟ್ಟಿ ಸ್ವದೇಶದ ದಾರೀ ಹಿಡಿಯುವಂತೆ ಇಂಗ್ಲಿಷ ಸರಕಾರದವರು ಹುಕುಮು ಮಾಡಿದ್ದಾರೆ. ಇವರಿಗೆ ಗಂಟುಗದಡಿ ಕಟ್ಟಿಕೊಂಡು ತಮ್ಮ ದೇಶಕ್ಕೆ ಹೋಗುವದಕ್ಕಾಗಿ ಬೇಕಾದ ಅನುಕೂಲತೆಗಳನ್ನೊದಗಿಸಿಕೊಡುವರು. ರಶಿಯಾರಾಜ್ಯದಲ್ಲಿರುವ ಲೆನಿನಗ್ರಾಡ, ಮಾಸ್ಕೋ ಮತ್ತು ಲಾಡಿಹೋಸ್ಟಾಕ ಪಟ್ಟಣಗಳಲ್ಲಿ ಇಂಗ್ಲಿಷ ಪ್ರತಿನಿಧಿಗಳಿದ್ದಾರೆ. ಇವರೂ ರಶಿಯಾಕ್ಕೆ ಶರಣು ಹೊಡೆಯಬೇಕೆಂದೂ, ಇವರ ಪ್ರಯಾಣಕ್ಕಾಗಿ ರಶಿಯರು ಸೌಕರ್ಯಗಳನ್ನುಂಟು ಮಾಡಿಕೊಡಬೇಕೆಂದೂ ಇಂಗ್ಲಿಷರು ರಶಿಯರಿಗೆ ತಿಳಿಸಿದ್ದಾರೆ.

ರಶಿಯಾದ ಪರ್ಲನ್ನು ಈ ಪ್ರಕಾರ ಹರಕೊಂಡದ್ದರಲ್ಲಿ ವ್ಯಾಪಾರಕ್ಕಿಂತ ರಾಜಕೀಯಗೂಢವುಂಟು. ಈ ರಾಜಕೀಯ ಸಂಬಂಧಬಿಟ್ಟು, ರಶಿಯರು ಬಿಡಿಯಾಗಿ ಬ್ರಿಟಿಶ ಸಾಮ್ರಾಜ್ಯದಲ್ಲಿ ವ್ಯಾಪಾರ ಮಾಡಬಹುದು. ಮತ್ತು ಇಂಗ್ಲಿಷರು ರಶಿಯಾದಲ್ಲಿ ವ್ಯಾಪಾರ ಮಾಡಬಹುದು. ಈ ತರದ ವ್ಯಾಪಾರವು ಅನ್ಯರ ರಾಜ್ಯದಲ್ಲಿದ್ದು, ಅವರ ಕಾಯದೆ ಕಾನೂನುಗಳಿಗೊಪ್ಪಿ ನಡೆಯುವಂತಾಗುತ್ತದೆ. ಅಕಾಶ ವರ್ತಕಶಾಲೆಯಲ್ಲಿ ಹತ್ತುಸಾವಿರ ಜನರಿದ್ದಾರೆ. ಇವರಲ್ಲಿ ಮಾರವಾಡಿಗಳಂತೆ ಕೇವಲ ವ್ಯಾಪಾರ ದೃಷ್ಟಿಯಿಂದಲೇ ಇಂತಕ್ಕವರನ್ನು ಇರಗೊಡುವರು. ಅದೇ ಪ್ರಕಾರ ರಶಿಯಾದಲ್ಲಿ ಇಂಗ್ಲಿಷ ವ್ಯಾಪಾರಿಗಳೂ ಇರಬಹುದಾಗಿದೆ.

ಅರಕಾಸ ಹೌಸಿನಲ್ಲಿದ್ದು ಬ್ರಿಟಿಶ ಸರಕಾರವನ್ನು ಬುಡಮೇಲು ಮಾಡಬೇಕೆಂಬ ಒಳಸಂಚಿನಲ್ಲಿ ಸೇರಿದೇಶವರ ಮೇಲೆ ಸಾರ್ವಜನಿಕರಿಯಲ್ಲಿ ಕೆಲಸ ನಡೆಸುವಂತೆ ಮಂತ್ರಿಗಳು ನಿಶ್ಚಯ ಮಾಡಿದ್ದು, ಆ ಪ್ರಕಾರ ಬೇಗನೆ ವಾರಂಟುಗಳು ಹೊರಡತಕ್ಕವಿವೆ. ಇದೇ ಸಂಬಂಧವಾಗಿ ಇಂಗ್ಲಂಡದಿಂದ ಸಾವಿರಾರು ಮೈಲು ದೂರಿರುವಂಥ ಬಾಯಾನಸ ಆರೀಸ ಪ್ರಾಂತದಲ್ಲಿಯೂ ಸಂಚುಗಾರರಾಗಿದ್ದವರನ್ನು ಹಿಡಿಯುವ ಪ್ರಾರಂಭವಾಗಿರುತ್ತದೆ.

ಡಾಕ್ಟರ ಮುಂಜೆಯವರ ವೀರಪ್ರತಿಜ್ಞೆ.

ಡಾಕ್ಟರ ಮುಂಜೆಯವರು ಗುಜರಾಥ ಪ್ರಾಂತ್ರದಲ್ಲಿ ಹಿಂದೂ ಮಹಾಸಭೆಯ ಉದ್ದೇಶಗಳನ್ನು ಹೇಳುತ್ತಾ ಪ್ರವಾಸ ಮಾಡುತ್ತಿದ್ದಾರೆ. ಇವರ ವ್ಯಾಖ್ಯಾನಕ್ಕೆ ಅಹಮದಾಬಾದ ಮತ್ತು ಬಡೋದೆಯ ಅಧಿಕಾರಿಗಳು ವಿಘ್ನ ತರಲಿಲ್ಲ. ಆದರೆ ಸುರತದ ಕಲೆಕ್ಟರರು ಮಾತ್ರ ಶಾಂತತಾಭಂಗದ ನಿಮಿತ್ತ ಮಾಡಿಕೊಂಡು ಕ್ರಿ॥ ಪ್ರೊ॥ ಕೋಡಿನ ೧೪೪ನೇ ಕಲಮಿನ ಪ್ರಕಾರ ಸುರತದ ಸುತ್ತಲು ಐದು ಮೈಲುಗಳಲ್ಲಿ ವ್ಯಾಖ್ಯಾನ ಕೊಡಬಾರದೆಂದು ಹುಕುಮು ಮಾಡಿದ್ದಾರೆ. ಆದರೆ ಡಾಕ್ಟರ ಮುಂಜೆಯವರು ಈ ಹುಕುಮನ್ನು ಮನ್ನಿಸಲು ಎಷ್ಟೂ ಸಿದ್ಧರಿಲ್ಲ. ಕಾಯದೆಭಂಗ ಮಾಡಿ, ವ್ಯಾಖ್ಯಾನ ಕೊಡುವರು. ಹೋದ ವರ್ಷ ಕಲಕತ್ತೆಯ ಮ್ಯಾಜಿಸ್ಟ್ರೇಟರು ಇವರಿಗೂ ಪಂಡಿತ ಮಾಲವಿಯಾಯವರಿಗೂ ಇದೇ ಹುಕುಮ ಮಾಡಿದ್ದರು. ಇಬ್ಬರೂ ಹುಕುಮು ಮುರಿದು, ಸತ್ಯಾಗ್ರಹ ಮಾಡಿ, ಕೊನೆಯಲ್ಲಿ ಜಯಶಾಲಿಯಾದರು. ಅದೇ ಪ್ರಕಾರ ಡಾಕ್ಟರರು ಸುರತದಲ್ಲಿಯೂ ಜಯ ಸಂಪಾದನೆ ಮಾಡುವರೆಂದು ಕೋರುತ್ತೇವೆ.

ಫ್ರಾನ್ಸದಲ್ಲಿಯೂ ಸಂಕ್ರಾಂತಿಯು-

ಇಂಗ್ಲಂಡದಂತೆ ಫ್ರಾನ್ಸದಲ್ಲಿಯೂ ರಶಿಯಾ ಬೊಲ್ಶೆವಿಕ ತತ್ವದ ಪ್ರಸಾರಕರಾದಂಥ ಫ್ರೆಂಚರ ಮೇಲೆ ಸಂಕ್ರಾಂತಿ ಬಂದಿದೆ. ನೀವು ಬೋಲ್ಶೆವಿಕ ಪಂಥದವರು ಸರಕಾರದ ವಿರುದ್ಧ ಬಂಡಾಯ ಮಾಡಲಿಕ್ಕೆ ಪ್ರವೃತ್ತರಾಗಿದ್ದೀರಿ. ಆದಕಾರಣ ನಿಮ್ಮನ್ನು ನಾವು ನ್ಯಾಯಾಸನದ ಮುಂದೆ ನಿಲ್ಲಿಸುವವೆಂದು ಗೃಹಮಂತ್ರಿಯು ಬೊಲ್ಶೆವಿಕ ಪಂಥದ ಮುಂದಾಳುವಾದ ಕಾಚಿನಸಾಹೇಬನಿಗೆ ಬೆದರಿಕೆ ಹಾಕಿದ್ದಾನೆ. ಈತನ ತನ್ನ ಮೇಲೆ ಒದಗುವ ಸಂಕಟಕ್ಕೆ ಹೆದರದೆ, ಜಗತ್ತಿನ ತುಂಬ ಬಂಡವಲಗಾರರ ಗುಲಾಮರಾಗಿರುವ ಪ್ರಜೆಗಳೆಲ್ಲರೂ ಸ್ವಾತಂತ್ರ್ಯಾಪೇಕ್ಷೆ ಮಾಡಿದ್ದಾರೆಂದು ಇವರಿಗೆ ಪ್ರತ್ಯುತ್ತರ ಕೊಟ್ಟಿದ್ದಾನೆ.

ಬಾದಶಹರ ಕಡೆಯ ಭಾಷಣ-

ಶ್ರೀ ಪಟೇಲರು ಬಾದಶಹರನ್ನು ಕಾಣಲಿಕ್ಕೆ ಹೋಗಿದ್ದರು. ಆಗ ಖಾದಿಯ ಬಟ್ಟೆ ಧರಿಸಿದ್ದಲ್ಲದೆ ಗಾಂಧೀ ಟೊಪ್ಪಿಗೆ ಹಾಕಿದ್ದರು. ಬಾದಶಹರನ್ನು ಕಾಣಲಿಕ್ಕೆ ಹೋಗುವಂಥವರು ಕ್ಷೇಮದ ಮಾಚಾರದ ಭಾಷಣವನ್ನೇ ಮಾಡುವರು. ಆದರೆ ಶ್ರೀ. ಪಟೇಲರ ವಿಷಯವು ಹಾಗಿರಲಿಲ್ಲ. ನಾಲ್ವತ್ತು ಮಿನಿಟುಗಳ ತನಕ ಹಿಂದುಸ್ಥಾನದ ಹಿತಾಹಿತದ ಪ್ರಶ್ನಗಳ ಮೇಲೆ ಚರ್ಚೆಯಾಯಿತು. ಯಾವ ಯಾವ ವಿಷಯಗಳ ಪ್ರಸ್ತಾಪವಾಯಿತೆಂಬದನ್ನು ಬಹಿರಂಗ ಮಾಡಲು ಶ್ರೀ ಪಟೇಲರು ಇಚ್ಛಿಸುವದಿಲ್ಲ.

ಮೂರನೇ ಕರ್ನಾಟಕ ಆಯುರ್ವೇದ ಪರಿಷತ್ತು.

ಶನಿವಾರ ೨೭ನೇ ತಾರೀಖಿನ ದಿವಸ ವಿಜಾಪೂರದಲ್ಲಿ ಸಂಜೆಯ ಮೂರು ಘಂಟೆಗೆ ಸರಕಾರೀ ಹೈಸ್ಕೂಲ ಕಟ್ಟಡದಲ್ಲಿ ಈ ಸಮ್ಮೇಲನವು ಕೂಡಿತ್ತು. ವಿಜಾಪೂರದ ಕರಂದೀಕರ ಬಸರ್ ಇವರಿಂದ ಕಟ್ಟಡವು ಒಪ್ಪೀ ಶೃಂಗರಿಸಲ್ಪಟ್ಟಿತ್ತು. ಮೈಸೂರಿನಿಂದ ಶ್ರೀ. ಶೇಷಶಾಸ್ತ್ರಿಗಳೂ ಪುಣೆಯಿಂದ ಶ್ರೀ. ನಾನಲಶಾಸ್ತ್ರಿಗಳೂ ಬೆಳಗಾವಿಯಿಂದ ಡಾ. ಸವಣೂರ ಮತ್ತು ಕೊಳಟನೂರ ಮೊದಲಾದವರು ಸಮ್ಮೇಲನಕ್ಕೆ ಆಗಮಿಸಿದ್ದರು. ಶ್ರೀ. ದತ್ತಾತ್ರಯ ನಾಟಕ ಮಂಡಳಿಯವರು ಸ್ವಾಗತ ಪದಗಳನ್ನು ಹಾಡಿದ ನಂತರದಲ್ಲಿ ಸಮ್ಮೇಲನದ ಸ್ವಾಗತಾಧ್ಯಕ್ಷರಾದ ರಾ. ಬ. ರಾಘವೇಂದ್ರರಾಯರು ತಮ್ಮ ಭಾಷಣವನ್ನು ಓದಿದರು. ಅದರಲ್ಲಿಯ ಮುಖ್ಯಾಂಶವನ್ನು ಕೆಳಗೆ ಕೊಟ್ಟಿರುತ್ತೇವೆ. "ದುರ್ದೈವದಿಂದ ನಮ್ಮ ಆಯುರ್ವೇದವು ಹೀನ ದೆಸೆಯನ್ನು ಹೊಂದಿದೆ. ಅವುಗಳಲ್ಲಿ ಇದಕ್ಕೆ ರಾಜಾಶ್ರಯವಿಲ್ಲದಿರುವದೂ, ಪಾಶ್ಚಾತ್ಯ ವೈದ್ಯದ ಅಭ್ಯಾಸವನ್ನು ಭರದಿಂದ ಸಾಗಿಸಿ ಪಾಶ್ಚಾತ್ಯ ಔಷಧಗಳೇ ಉತ್ತಮವಾದವುಗಳೆಂದು ಸರ್ವತ್ರ ಸುದ್ದಿ ಬೀರುವದು ಮುಖ್ಯ ಕಾರಣಗಳಾಗಿವೆ. ವಿಜಯನಗರ ಸಾಮ್ರಾಜ್ಯದ ಅಳಿಗಾಲದ ನಂತರ ಈ ಶಾಸ್ತ್ರಕ್ಕೆ ಹೀನ ಸ್ಥಿತಿಯು ಒದಗಿತು. ಕಳೆದ ೧೫೦ ವರುಷಗಳಲ್ಲಿ ಬ್ರಿಟಿಶರ ಆಡಳಿತೆಯಲ್ಲಿ ಪಾಶ್ಚಾತ್ಯ ಶಾಸ್ತ್ರಕ್ಕೆ ಬಲವಾದ ಉತ್ತೇಜನ ದೊರೆತ ಕಾರಣ ನಮ್ಮ ಶಾಸ್ತ್ರವು ಮತ್ತು ಔಷಧಗಳು ಮೂಲೆಗೆ ಬಿದ್ದವು. ಕಾಲಮಹಿಮೆ. ಹೀಗಾಗಿದೆ. ಆಯುರ್ವೇದದ ಗಂಧವೂ ಇಲ್ಲದವರು ನಮ್ಮ ಶಾಸ್ತ್ರ ಸುಳ್ಳು, ಅದರಲ್ಲಿ ಏನೂ ತಥ್ಯವಿಲ್ಲವೆಂದು ಅನ್ನಹತ್ತಿದರು. ಆದರೆ ಇತ್ತಿತಲಾಗಿ ಎರಡೂ ಶಾಸ್ತ್ರಗಳನ್ನು ಬಲ್ಲಂಥವರು ದೊರೆಯ ಹತ್ತಿದ್ದರಿಂದ ಆಯುರ್ವೇದದ ಮಹತ್ವ ಜನರಿಗೆ ತಿಳಿಯಹತ್ತಿದೆ. ನಮ್ಮ ದೇಶದ ಹವೆ, ನೀರು, ಆಹಾರ ಮುಂತಾದ ಸಂಗತಿಗಳನ್ನು ಬಲ್ಲ ಋಷಿಗಳು ಈ ಶಾಸ್ತ್ರವನ್ನು

ಕಲಿಸಿದ್ದರಿಂದ ಅವರು ಮಾಡಿದ ಚಿಕಿತ್ಸೆ ಮತ್ತು ರೋಗಗಳಿಗೆ ಹೇಳಿದ ಔಷಧದಿಂದ ಗುಣವಾಗುವದು ಏನು ಆಶ್ಚರ್ಯ? ಈಗ್ಗೆ ಇಂಗ್ಲೀಷ ಔಷಧ ಮೇಲಿನ ವಿಶ್ವಾಸವು ಕಡಿಮೆಯಾಗುತ್ತಾ ನಡೆದದೆ. ಆದಾಗ್ಯೂ ಇಂಗ್ಲೀಷ ವೈದ್ಯಶಾಸ್ತ್ರದಿಂದ ಎಷ್ಟೋ ಮಾತುಗಳು ನಾವು ಕಲಿಯುವಂಥವು ಇರುತ್ತವೆ. ಅದರಿಂದ ಲಾಭಮಾಡಿಕೊಳ್ಳುವದು ನಮ್ಮ ಕರ್ತವ್ಯ. ಎರಡು ಶಾಸ್ತ್ರಗಳನ್ನು ಸಂಕಲಿತ ಮಾಡಿ ಗ್ರಾಹ್ಯಭಾಗವನ್ನು ಗ್ರಹಣ ಮಾಡುವದು ಅವಶ್ಯಕವಾಗಿರುತ್ತದೆ. ಅದು ನನ್ನ ವಿಷಯವಲ್ಲ. ನಿಯೋಜಿತ ಅಧ್ಯಕ್ಷರಂಥ ಪಂಡಿತರ ಕೆಲಸವಾಗಿರುವದು. ಪಾಶ್ಚಾತ್ಯ ವೈದ್ಯಶಾಸ್ತ್ರವು ಅಸತ್ಯವೆಂದೂ ಅವರ ಔಷಧಗಳು ಅನುಪಯುಕ್ತವೆಂದೂ ತಿಳಿಯಕೂಡದು.

ಮದ್ರಾಸ ಮೈಸೂರಗಳ ಕಡೆಗೆ ಹೇಗೆ ಆಯುರ್ವೇದ ಕಾಲೇಜಗಳು ಸ್ಥಾಪಿತವಾಗಿವೆ ಹಾಗೆ ನಮ್ಮ ಮುಂಬೈ ಇಲಾಖೆಯಲ್ಲಿಯೂ ಸ್ಥಾಪಿಸುವದಕ್ಕಾಗಿ ಶಿಕ್ಷಣ ಮಂತ್ರಿಗೆ ವಿನಂತಿ ಮಾಡುವದಕ್ಕಾಗಿ ಒಂದು ಡೆಪ್ಯೂಟೇಶನ ಹೋಗಬೇಕು. ಅಧೀತ ಜನರು ಸಿಗುವದು ಅವಶ್ಯವದೆ. ಕಲಿಸುವಂಥ ಬೇಕು. ವೈದ್ಯಕ ವ್ಯವಸಾಯವನ್ನು ಮಾಡುವವರೂ ಅವಶ್ಯ. ಕೇವಲ ಚರಕ ಸುಶ್ರುತ ಓದಿದ ಮಾತ್ರಕ್ಕೆ ಕಾರ್ಯವಾಗದು ಪ್ರಾಣಿಶಾಸ್ತ್ರ ಇಂದ್ರಿಯ ವಿಜ್ಞಾನಗಳು ಅವಶ್ಯವಾಗಿ ಬೇಕು. ಪಾಶ್ಚಾತ್ಯರ ಹೊಸ ಹೊಸ ಶೋಧಗಳ ಉಪಯೋಗ ಮಾಡಿಕೊಳ್ಳಬೇಕು. ಅವುಗಳ ಸಹಾಯದಿಂದ ಆಯುರ್ವೇದವನ್ನು ಮುಂದೆ ತರತಕ್ಕದ್ದು. ಈ ಕೆಲಸವನ್ನು ಸರಕಾರವು ತಮ್ಮ ಕಡೆಗೆ ತಕ್ಕೊಳ್ಳತಕ್ಕದ್ದು.

ಸ್ಥಾನಿಕ ಸಂಸ್ಥೆಗಳು ಮುನಸಿಪಾಲಿಟಿ ಲೋಕಲಬೋರ್ಡಗಳು) ಇಂಥ ದವಾಖಾನೆಗಳನ್ನು ಪ್ರತಿ ನಗರದಲ್ಲಿಯೂ ತೆಗೆಯತಕ್ಕದ್ದು.

ವೈದ್ಯ ಶಾಸ್ತ್ರವನ್ನು ಕಲಿತವರು ಪ್ರಾಚೀನ ಸಂಸ್ಕೃತ ಗ್ರಂಥಗಳನ್ನು ಕನ್ನಡದಲ್ಲಿ ಅನುವಾದಿಸಬೇಕು. ಶಾಲೆಯಲ್ಲಿ ಕಲಿಸುವದಕ್ಕಾಗಿ ಆಯುರ್ವೇದ ಶಾಸ್ತ್ರದ ಸಣ್ಣ ಪುಸ್ತಕಗಳನ್ನು ಕನ್ನಡದಲ್ಲಿ ಬರೆಯಿಸಿ ಸಿದ್ಧಪಡಿಸಬೇಕು ಇದಕ್ಕಾಗಿ ಸಣ್ಣ ಕಮೀಟಿಯನ್ನು ಮಾಡಿ ಅದರ ಕೈಯಲ್ಲಿ ಈ ಕೆಲಸ ಕೊಡಬೇಕು. ಇದರ ಹೊರ್ತು ನಮ್ಮಲ್ಲಿಯ ಉತ್ತಮೋತ್ತಮ ಔಷಧಗಳ ಕೋಶವಾದ್ದರೂ ಸಿದ್ಧವಾಗಬೇಕು. ಇವರ ಭಾಷಣ ಮುಗಿದ ನಂತರ ಮಂಗಳೂರಿನ ಸುಪ್ರಸಿದ್ಧ ಶ್ರೀ. ಎಸ್. ವ್ಹಿ. ಶಾಸ್ತ್ರಿಯವರು ಅಧ್ಯಕ್ಷರಾಗಬೇಕೆಂದು ಶ್ರೀ ಶೇಷಶಾಸ್ತ್ರಿಗಳು ಸೂಚನೆಯನ್ನು ತಂದರು. ಅದಕ್ಕೆ ಸಭಿಕರು ಒಪ್ಪಿಕೊಂಡ ತರುವಾಯದಲ್ಲಿ ಶ್ರೀ ಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಅವರು ತಮ್ಮ ಭಾಷಣವನ್ನು ಕನ್ನಡದಲ್ಲಿಯೇ ಬರೆದಿದ್ದರೆ ಹೆಚ್ಚು ಒಳಿತಾಗುತ್ತಿತ್ತು. ಅಧ್ಯಕ್ಷರ ಭಾಷಣದ ಸಾರವನ್ನು ಕೆಳಗೆ ಕೊಟ್ಟಿರುತ್ತೇವೆ.

ಮಹಾಶಯರೇ

ಪೌರಸ್ತ್ಯರಲ್ಲಿಯೂ ಪಾಶ್ಚಾತ್ಯರಲ್ಲಿಯೂ ವೈದ್ಯ ಕೃತಿಗಳಲ್ಲಿ ಅನೇಕ ಚಿಕಿತ್ಸಕರು ನಿಪುಣರಾಗಿರುವರು. ಕೆಲವು ವರ್ಷಗಳಿಂದಲೂ ತ್ರಿದೋಷಗಳನ್ನು ಕುರಿತು ವಿಚಾರ ಮಾಡುತ್ತಿರುವರು. ಈ ವಿಚಾರವು ದೀರ್ಘವಾದುದರಿಂದ ಇದರ ನಿರ್ಣಯವು ಇನ್ನೂ ಗೊತ್ತಾಗಿಲ್ಲ. ಇಂಥ ಗಂಭೀರ ವಿಷಯದಲ್ಲಿ ನನ್ನಂಥವನಿಗೆ ವಿಚಾರ ಯೋಗ್ಯತೆಯು ಅವಕಾಶವು ಇರುವದಿಲ್ಲವಾದರೂ ಸಭಾಪತಿ ಸಂಪ್ರದಾಯವನ್ನು ಅನುಸರಿಸಿ ಸ್ವಲ್ಪ ಹೇಳುವೆನು. (ಈ ವಿಷಯವು ಸಂಸ್ಕೃತ ಮೂಲ ಲೇಖನದಲ್ಲಿ ಪೂರ್ವ ಪಕ್ಷ ಸಿದ್ಧಾಂತ ಕ್ರಮದಿಂದ ಚರ್ಚಿಸಲ್ಪಟ್ಟಿರುವದು. ಈ ಪರಿವರ್ತನೆಯಲ್ಲಿ ಶಾಸ್ತ್ರೀಯ ವಿಷಯವು ಬಿಡಲ್ಪಟ್ಟಿವೆ)

ವಾತ, ಪಿತ್ತ ಶ್ಲೇಷ್ಮಗಳೆಂದು ಮೂರು ದೋಷಗಳು ಈ ಶರೀರದಲ್ಲಿರುವವು. ಇವುಗಳ ಸಂಸೆಸ್ಪತೆಯಿಂದ ದೇಹವು ಬೆಳೆಯುತ್ತಿರುವದು ಇದರ ವಿಷಮ ಸ್ಥಿತಿಯಿಂದ ವ್ಯಾಧಿಯುಂಟಾಗುವದು. ಧಾತುರೂಪವಾದ ವಾತ ಪಿತ್ತ ಶ್ಲೇಷ್ಮಗಳ ಧಾತುರೂಪವಾದ ವಾಯು ಅಗ್ನಿ ಜಲಗಳಿಂದ ಉಂಟಾಗಿದ್ದರೂ ಅವುಗಳಿಂದಲೇ ಬೇರೆಯಾಗಿರುವವು. ಗೌತುಮ ಕಣಾದ, ಕಪಿಲ, ಪತಂಜಲಿ ಋಷಿಗಳು ಸೂಕ್ಷ್ಮಕ್ಕಿಂತ ಸೂಕ್ಷ್ಮವನ್ನು ವರ್ಣಿಸಿರುವರು. ಆಯುರ್ವೇದ ಶಾಸ್ತ್ರಜ್ಞರು ಸ್ಥೂಲಕ್ಕಿಂತ ಸೂಕ್ಷ್ಮವನ್ನು ವರ್ಣಿಸಿರುವರು. ವೇದದಲ್ಲಿ ಕೂಡ ತ್ರಿಸ್ಥೂ ಅಶ್ವಿನಾ ಋಕ್ಕಿನಲ್ಲಿ ಸಾಯಣಾಚಾರ್ಯರು ವಾತಪಿತ್ತಶ್ಲೇಷ್ಮಗಳೆಂದು ನಿರೂಪಿಸಿರುವದರಿಂದ ಇದು ವೇದದಲ್ಲಿಯೂ ಇದ್ದಂತಾಯಿತು. ಸ್ವಾಸ್ಥ್ಯರಕ್ಷಣಕ್ಕೆ ಈ ವಾತಪಿತ್ತ ಕಫಗಳ ಸಮಸ್ಥಿತಿಯೇ ಮೂಲ ಕಾರಣಗಳು.

ಈಗ ಆಯುರ್ವೇದ ಸಮ್ಮಂಧವಾಗಿ ಸ್ವಲ್ಪ ಹೇಳಬೇಕಾಗಿದೆ, ಹಿಂದೆ ಬ್ರಹ್ಮ ಸ್ಮೃತಿಯು ಆಯುರ್ವೇದಿಕ ಮೂಲವೆಂದು ಹೇಳಿದರೂ ಸ್ವತಂತ್ರನಾದ ಒಬ್ಬನ ಬುದ್ಧಿ ಚಮತ್ಕೃತಿಯಿಂದ ಆಗುವದು ಶಕ್ಯವಲ್ಲ ಆದರೆ ಸಮಸ್ತ ನಿರ್ದಿಷ್ಟ ದ್ರವ್ಯಗಳಿಗೆ ಮನೆಯಂತಿರುವ ವೇದ ಪುರುಷನ ಪ್ರಕಟನೆಯೇ ಬ್ರಹ್ಮನಿಂದ ಭಾಷಾಂತರ ಮಾಡಲ್ಪಟ್ಟ ಕೃತಿಯಾಗಿವೆ. ವೇದಗಳಲ್ಲಿಯೂ ವಿಶೇಷವಾಗಿ ಅಥರ್ವಣವೇದದಲ್ಲಿ ಚಿಕಿತ್ಸಾ ವಿಷಯಗಳು ಕಂಡು ಬರುತ್ತವೆ. ನಾಲ್ಕು ವೇದಗಳಲ್ಲಿಯೂ ಚಿಕಿತ್ಸಾ ಇದ್ದರೂ ಅಥರ್ವಣ ವೇದದಲ್ಲಿ ಸ್ವಸ್ತ್ಯೆನ, ಬಲಿ, ಮಂಗಲ, ಹೋಮ, ನೇಮ, ಪ್ರಾಯಶ್ಚಿತ್ತಾದಿ ಮಂತ್ರಾದಿಗಳು ಹೇಳಿ ಚಿಕಿತ್ಸೆಗಳು ಹೇಳಲ್ಪಟ್ಟಿವೆ ಮೂರು ವಿಧಚಿಕಿತ್ಸೆಗಳಲ್ಲಿ ಇದು ದೈವ ಆಶ್ರಯವಾದ ಚಿಕಿತ್ಸೆಯನ್ನು ಬೋಧಿಸುತ್ತಿರುವದು ದೈವ ವ್ಯಪಾಶ್ರಯವೆನೆ ಮಂತ್ರ ಔಷಧಿ ಮಣಿ ಮಂಗಳ ಬಲಿ, ಉಪಹಾರ, ಹೋಮ, ನಿಯಮ, ಪ್ರಾಯಶ್ಚಿತ್ತ, ಉಪಹಾಸ ತೀರ್ಥಗಮನಾದಿ ಇವುಗಳಾಗಿವೆ. ಚರಕಾಚಾರ್ಯರು ಇದಕ್ಕೆ ವಿಶೇಷ ಮಾನಕೊಡುತ್ತಾರೆ, ಇವರಿಂದ ಆಯುರ್ವೇದ ವಿಷಯಗಳು ವೇದಗಳಲ್ಲಿ ಉಪಲಬ್ಧವಾಗುತ್ತವೆ. ಈ ವೇದದಲ್ಲಿ ಕಾಯಚಿಕಿತ್ಸೆ ಮಾತ್ರವಲ್ಲದೆ ಶಸ್ತ್ರ ಚಿಕಿತ್ಸೆಯೂ ನಿರೂಪಿಸಲ್ಪಟ್ಟಿದೆ. ಇದೇ ಸಂದರ್ಭದಲ್ಲಿ ರಸಶಾಸ್ತ್ರ ವಿಷಯದಲ್ಲಿ ಕೆಲವು ಮಾತು ಹೇಳುವೆನು ಈ ರಸಶಾಸ್ತ್ರವನ್ನು ಸಿದ್ಧರೂ ಲೋಕಾಯತಿಕರು ಪ್ರಚಾರಕ್ಕೆ ತಂದವರಾಗಿದ್ದಾರೆ. ರಸ, ಮಹಾರಸ, ಉಪರಸ ರತ್ನ ಲೋಹಗಳ ವಿಜ್ಞಾನ ವಿಷಯಗಳು ರಸಾರ್ಣವ ರಸಸಮುಚ್ಚಯಾದಿತಂತ್ರಗಳಲ್ಲಿಯೂ ಅರ್ಥ ಶಾಸ್ತ್ರಗಳಲ್ಲಿಯೂ ತಿಳಿಸಲ್ಪಟ್ಟಿವೆ. ಈ ರಸಪ್ರಯೋಗವು ಶರೀರಕ್ಕೆ ನಿರ್ಜರಾಮರತ್ವವನ್ನು ದೀರ್ಘಕಾಲಾನುಬಂಧ ಧಾರಣವನ್ನು ಉಂಟು ಮಾಡುವದು ಎಂದರೆ ಸ್ವಾಸ್ಥ್ಯಸಂರಕ್ಷಣೆಯೂ ಜೀವನ್ಮುಕ್ತಿಯೂ ಆಗುವವು. ತಂತ್ರಶಾಸ್ತ್ರವು ರಸಖಂಡ ಪ್ರಯೋಗಖಂಡವಾದ ಖಂಡ, ರಸಾಯನ ಖಂಡ, ಮಂತ್ರಖಂಡವೆಂದು ೫ ವಿಧವಾಗಿರುವದು. ನಮ್ಮ ಚಿಕಿತ್ಸಾ ಪ್ರಯೋಜನಗಳಲ್ಲಿ ರಸಪ್ರಯೋಗ ಖಂಡ ಉಪಯುಕ್ತವಾಗುತ್ತವೆ. ಈ ಖಂಡಗಳಲ್ಲಿ ಹೇಳಲ್ಪಟ್ಟ ವಿಷಯಗಳನ್ನು ಆಯುರ್ವೇದ ಮಹಾ ಮಂಡಲದ ೬ನೇ ಸಮ್ಮೇಲನದ ಸಭಾಪತಿಗಳಾದ ಲಕ್ಷ್ಮೀರಾಮಸ್ವಾಮಿಗಳೂ ಯಥೋಚಿತವಾಗಿ ವಿವರಿಸಿರುವರು. ಕ. ವೈಭವ

ಸ್ವತಂತ್ರ ಮುಂಬಯಿಯು–

ಶ್ರೀ ಪಟೇಲರು ಬಾದಶಹರನ್ನು ಕಂಡು ಬಂದ ಬಳಿಕ ಮುಂಬಯಿ ಇಲಾಖೆಯಲ್ಲಿ ಕೆಲಸ ಮಾಡಿದ್ದ ದೊಡ್ಡ ದೊಡ್ಡ ಯುರೋಪಿಯನ್ನರು ಇವರನ್ನು ಭೋಜನದಿಂದ ಸತ್ಕರಿಸಿದರು. ಭೋಜನೋತ್ತರದಲ್ಲಿ ಶ್ರೀ ಪಟೇಲರು—

ಸ್ವತಂತ್ರವಾಗಿ ಸ್ವರಾಜ್ಯ ಸಂಪಾದಿಸಿದ ಭಾರತವನ್ನು ಪಡೆಯುವ ಹಿಂದುಸ್ಥಾನದಲ್ಲಿ ಸ್ವತಂತ್ರ್ಯ ಪಡೆದ ಮುಂಬಯಿ ಇಲಾಖೆಯನ್ನು ಬೇಗನೆ ನೋಡಬಹುದೆಂದು

ಭಾಷಣ ಮಾಡಿದ್ದಾರೆ. ಬರುವ ಕಾಯಿದೆ ಕಮಿಶನದಿಂದ ಹಿಂದುಸ್ಥಾನಕ್ಕೆ ಇಷ್ಟು ಸ್ವಾತಂತ್ರ್ಯ ದೊರೆಯುವದೇ?

ಜಾಹೀರ ನೋಟೀಸು

—೦—

ರಾಘವೇಂದ್ರರಾವ ಶಾಮರಾವ ದೇಶಪಾಂಡೆ ಮುಕ್ಕಾಲ ಕಾರಡಗಿ ಇವರ ಕಡೆಯಿಂದಾ ಕೆಳಗೆ ಬರೆದ ಹಳ್ಳಿಗಳಲ್ಲಿರತಕ್ಕ ನಮ್ಮ ಜಮೀನು ಮಾಡುವ ಯಾವತ್ತು ರೈತ ಜನರಿಗೆ ತಿಳಿಸುವದೇನಂದರೆ-

ನೀವು ನನ್ನ ಕಡೆಯಿಂದ ಜಮೀನು ಲಾವಣಿಗೆ ಮಾಡಿಕೊಂಡ ಬಾಬತ ಹಸ್ತೆದ ರೂಪಾಯಿ ಸನ್ ೧೯೩೬-೩೭ನೇ ಇಸ್ವಿಯ ಬಾಬತ ನಿಮ್ಮ ಕಡೆಗೆ ಬಾಕಿ ಇದ್ದೀವು ಈ ನೋಟೀಸಿನ ತಾರೀಖಿನಿಂದ ೮ ದಿವಸದಲ್ಲಿ ನಮ್ಮ ಕಡೆಗೆ ಮುಟ್ಟಿಸಿ ಪಾವತಿ ತೆಗೆದುಕೊಂಡು ಹೋಗಬೇಕು. ಮತ್ತು ಸನ್ ೧೯೩೭-೩೮ನೇ ಇಸ್ವಿಯ ಬಾಬತ ಮುಂದಿನ ಲಾ[illegible] ಮಾಡಿಕೊಂಡು ಕಬುಲಾಯತಿ ಬರೆದುಕೊಟ್ಟು ಹೋಗಬೇಕು ಮೇಲೆ ಬರೆದಂತೆ ಮಾಡದಿದ್ದರೆ ನೀವು ಜಿಲ್ಹಾಲ ಜಮೀನಿಯಲ್ಲಿ ರಂಟೆ ಕುಂಟೆ ವಗೈರೆ ಹೊಡೆಯಬಾರದು ಅಂತಾ ಈ ನೋಟೀಸಿನಿಂದಾ ತಿಳಿಸಿರುತ್ತೇನೆ.

ಗ್ರಾಮಗಳ ವಿವರ

೧ ಬುಳ್ಳಪ್ಪನ ಕೊಪ್ಪ	೨ ಮತ್ತಿಕಟ್ಟಿ
೩ ರಾಮಾಪೂರ	೪ ಹುಲಗೂರು
೫ ತಿಸವಿನಹಾಳ	೬ ಕಾರಡಗಿ
೭ ಹಿರೇಮಲ್ಲೂರ	೮ ಶಿಗ್ಗಿನಹಳ್ಳಿ
೯ ಜೇಕಿನಕಟ್ಟಿ	೧೦ ತೊಂಡೂರು
೧೧ ಹಳೇರಿತ್ತಿ	೧೨ ಕುಂಕೂರು
೧೩ ಕ್ಯಾಲಕೊಂಡ	೧೪ ಕಲ್ಮಡವು

ತಾ. ೩೦-೫-೩೭

ರಾಘವೇಂದ್ರರಾವ ಶಾಮರಾವ ದೇಶಪಾಂಡೆ

—

ನೋಟೀಸು

—೦—

ರಾ. ಹಸನಸಾಬ ರಾಜೇಸಾಬ ಇಟಿ ಸಾ. ನರಗುಂದ ಇವರಿಗೆ—

ಕೆಳಗೆ ಸಹಿ ಮಾಡುವವಳ ಕಡಿಂದಾ ತಿಳಿಸುವದೇನಂದರೆ ನೀನು ನನ್ನ ಗಂಡನಿದ್ದು ನನಗೆ ಬಿಟ್ಟು ಕೊಟ್ಟದ್ದಿ ನಿನ್ನ ಹಕ್ಕು ಹೆಂಡತಿ ಅಂಬುವ ಒಗ್ಗ ಹೋಗಬೇಕಾಗಿ ನಾಲ್ಕು ನೋಟೀಸು ಮಾಡಿದ ಅದಕ್ಕೆ ಏನೂ ಉತ್ತರ ಕೊಡಲಿಕ್ಕೆ ನಿನಗೆ ಸಾಧಿಸಲ್ಲಿಲ್ಲಾ ಆದರಿಂತೆ ಮೆ. ಪ್ರಾಂತ ಸಾ|| ಒ|| ಜಿಲ್ಹಾ ಧಾರವಾಡ ಇವರ ಕಡಿಗೆ ಅರ್ಜಿ ಮಾಡಿ ಕಲಸ ನಡಿಸಿದೆ ಅದಕ್ಕೆ ನಿನ್ನ ಪಕ್ಕು ಇದೊ ದರಿಂದಾ ಸಿಕಾಲೆಯಲ್ಲಿ ಹೆಗಿಗೊಡಲಿಲ್ಲಾ ನಾನು ನಿನ್ನ ಗೂಡಾ ಒಳ್ಳೆ ರೀತಿಯಿಂದಾ ಪ್ರಪಂಚ ಮಾಡಬೇಕು ಈ ಇರಾದೆಯಿಂದಾ ಕೆಲಸ ನಡಿಸಿದ್ದೆ ವಂದಕ್ಕೂ ನೀನು ಕಬೂಲ ಮಾಡಲಿಲ್ಲಾ ಆದರೆ ನಾನು ನಿನಗೆ ಬ್ಯಾಡಾದಂತೆ ಆಯಿತು ಕಾರಣಾ ನಾನು ಈಗ ನನ್ನ ಜಾತಿ ರಿವಾಜ ಪ್ರಕಾರ ಧರ್ಮ ಶಾಸ್ತ್ರಾಂತಿ ಹಜರತ್ತನಾಬ ಪ|| ಹುಸೇನಸಾಬ ಗೊತಿ ನಾಯ್ಕರ ಸಾ|| ಯಕ್ಕುಂಡಿ ಇವನಿಗೆ ಕುತಬಿ ಹೆಚ್ಚಿದಲ್ಲಿ ಉದ್ಕಿ ಮಾಡಿಕೊಳ್ಳುವದು ರಾವ ಆಗಿದೆ ನೀನು ಅಗ್ಗೆ ಒಂದು ಉದ್ಕಿ ಕಾರಣ ಮಾಡಿ ಕೊಟ್ಟು ಹೋಗಬೇಕು ತಿಳಿಯುವದು ತಾ. ೨೬-೫-೩೭

ಈ ಎಡಗೈ ಹೆಬ್ಬಟ್ಟಿನ ಗುರ್ತ ಪಲ್ಲಿಮಾ ಕೋಮ ಹಸನಸಾಬ ಇಟಿ ಇರಿದು ಆದೆ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ [illegible] ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ [illegible] ನಿಮ್ಮ ಮನಸ್ಸಿಗೆ "[illegible]" ಅನ್ನಿಸಿದರೆ [illegible] ಆದಲ್ಲಿ ಇದು [illegible] ನ ಕಳಿಸಿ ಕೊಡತ್ತೇವೆ. [illegible]

[ತಿರುವ ಪತ್ತೆ]

ಏಜಂಟ —

ಗಣಪತ ಭವಾನರಾವ [illegible] ಜೋಶಿ [illegible] ಧಾರವಾಡ

ಮತ್ತು,

ಜನಾರ್ದನ ರಾಮಚಂದ್ರರಾವ ಪಿಕಾರಿ,

[illegible] ಹುಬ್ಬಳ್ಳಿ.

ನೋಟೀಸು

ಧಾರವಾಡ ಜಿಲ್ಹಾ ನವಲಗುಂದ ತಾಲೂಕ ಪಡೆಸೂರಲ್ಲಿರುವ ಯಲ್ಲಿ ಕೋಂ ಯಲ್ಲಾ ವಾಲೀಕಾರ ಸಾಕೀನ ಬೆಳಗಲಿ ತಾಲೂಕ ಬಂಕಾಪೂರ ತಾಲ್ಲೂ ನವಲಗುಂದ ಈಕಿಗೆ—

ಕೆಳಗೆ ಸಹಿ ಮಾಡಿದ ಯಲ್ಲಾ ತಾಯಿ ಯಲ್ಲವ್ವಾ ವಾಲಿಕಾರ ಸಾಕೀನ ಬೆಳಗಲಿ ಇವನು ಕೊಟ್ಟ ನೋಟೀಸು ಏನಂದರೆ-

ನೀನು ನನ್ನ ಮದವಿಯ ಹೆಂಡತಿ ಇದ್ದು ಲಗ್ನ ಆಗಿ ೮-೧೦ ತಿಂಗಳ ನನ್ನ ಕೂಡಾ ಬಾಳ್ವೆ ಮಾಡಿದಿ ಮುಂದೆ ಅಂದರೆ ವರ್ಷ ನವ್ವಾ ವರ್ಷದ ಕೆಳಗೆ ತವರ ಮನಿಗೆ ಹೋದಾಕಿ ಈವರಿಗೂ ೩-೪ ಸಾರೆ ಕರಿಯಲಿಕ್ಕೆ ಹೋದರೂ ಬರಲಿಲ್ಲಾ ನಾನು ಕರಿಯಲಿಕ್ಕೆ ಹೋದಾಗ್ಗೆ ನಿನ್ನ ತಾಯಿ ವ ನೀನು ಓಡಿ ಹೋಗಿರತೀದಿ ವ ಪಡೆಸೂರಲ್ಲಿ ಇರತೀದಿ ಅಂತಾ ತಿಳಿಸಿದರು. ಈಗ ಈ ನೋಟೀಸಿನ ವ [illegible] ತಿಳಿಸುವದೇನಂದರೆ ನೀನು ನೋಟೀಸು ಮುಟ್ಟಿದ ೧೫ ದಿವಸದಲ್ಲಿ ಒಂದು ಸಂಸಾರ ಬಾಳ್ವೆ ಮಾಡಿಕೊಂಡು ಹೋಗಬೇಕು ಇಲ್ಲವಾದರೆ ನೀನು ನನ್ನ ಕಡಿಯಿಂದ ಒಯ್ದ ದಾಗೀನಗಳನ್ನು ಅಂದರೆ ಒಂದಿ ೨ ವಟ್ಟಿ ೧ ಕಾಲ [illegible] ಕೊರಳಗಿನ ಸರಾ ೧ ಈ ಪ್ರಕಾರ ಸಾಮಾನ ಕೊಟ್ಟು ನಿನ್ನ ಮನಸ್ಸಿನಲ್ಲಿ ಇದ್ದದ್ದನ್ನು ತಿಳಿಸಬೇಕು ಮತ್ತು ಇದೇ ಸೋಡಚೀಟಿ ಅಂತಾ ತಿಳಿಯಬೇಕು. ಈ ನೋಟೀಸಿನ ಖರ್ಚ ನಿನ್ನ ತಲೆ ಮೇಲೆ ಬಿದ್ದ ತಿಳಿಯುವದು.

ತಾರೀಖು ೧-೬-೧೯೩೭ ನೇ ಇಸ್ವಿ

ಸಹಿ ಯಲ್ಲಪ್ಪಾ ತಾಯಿ ಯಲ್ಲವ್ವಾ ವಾಲಿಕಾರ

—

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೩ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಗುರುವಾರ ತಾರೀಖು ೨ ನೇ ಜೂನ ೧೯೩೨ | ಸಂಚಿಕೆ ೧೧೪

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಅರೆ ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಇದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ಒಯ್ಯುತ್ತದೆ. ಇದಕ್ಕೆ ನೀರಿನ ಕೊಳ ಕೆಯು ಎಲ್ಲಿ ಇದೆಗೂ ಉಂಟು. ಇದರಿಂದ ದೂರದಿಂದ ನೀರು ತರುವುದಕ್ಕಾಗಿ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆ ಒಂದಕ್ಕೆ ೬೯|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸಧ್ಯಕ್ಕೆ ಧಾರವಾಡ ಕಾಲೇಜಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಅರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಪ್ರ ಮಾಡಲ್ಪಡುವದು. ಕಾಯಿಮುಮುತ್ತು ಮೇತಿ ಕರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವ ರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ದೇಶಾಯಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರಾತು ದರಗಳು.

—o—

ತಿಂಗಳು ಕಾಲಮ್‌ನ ಇಂಚು ೧ಕ್ಕೆ ಒಂದು ರೂಪಾಯಿ ಮುಂದೆ ಪ್ರತಿ ಮುಂದು ಕಡಿಮೆ ಒಂದುಸಾರಿ ಅಣೆ ಇಂಗ್ಲಿಷ ಪ್ರತಿಯೊಂದು ಒಳಗೆ ಒಂದು ಆಣೆ ಸ ಕಾರಿ, ಮ್ಯುನಿಸಿಪಾಲಿಟಿ ಲೋಕಲ್‌ಬೋರ್ಡ ರೀತಿ ಬ್ಯಾಂಕ ಮೊದಲಾದ ಸಾರ್ವಜನಿಕ ಸಂಸ್ಥೆಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಾಗಿ ಇಪ್ಪತ್ತು ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಕಾಲರಾ ಪಿಲ್ಸ.

—(o)—

ಕಾಲರಾ (ಮಾರಿಕಾ) ರೋಗದ ಮೇಲೆ ಔಷಧವು ಬಹಳ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ನೂರು ಸ್ವರೂಪದ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೋಘ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೨೪ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ. ಪತ್ತಾ:- ಮ್ಯಾ. ಆರೋಗ್ಯವರ್ಧಿ ಕಾರಖಾನಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

—ooo—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨-೬-೨೭ ನೇ ಇಸ್ವಿ

ನಾಗಪೂರದ ಸತ್ಯಾಗ್ರಹದ ಸಡಗರ.

ನಾಗಪೂರದ ಕಾಯದೆಭಂಗಕ್ಕೆ ಮಹಾತ್ಮರ ಅನುಕೂಲಮತವುಂಟೆಂದು ಪ್ರಾರಂಭದಲ್ಲಿ ಶ್ರೀ. ಅವರಿಯವರು ಜಾಹೀರ ಮಾಡಿದರು. ಆನಂತರ ಕಾಂಗ್ರೆಸ ಕಮಿಟಿಯವರು ಇದರ ಸತ್ಯ ಪರೀಕ್ಷೆ ಮಾಡಲೋಸುಗ ಶ್ರೀ ಪಟೇಲರನ್ನು ನೇಮಿಸಿದರು. ಇವರು ಅಲ್ಲಿಗೆ ಹೋಗುವಷ್ಟರಲ್ಲಿ ಸರಕಾರದವರು ಶ್ರೀ ಅವರಿಯನ್ನು ಹಿಡಿದರು. ಇವರು ವೀರ ವಾಮನರಾಯರಿಗಿಂತ ವೀರಾಧಿವೀರರು. ವಾಮನರಾಯರು ಇಂಗ್ರೇಜಿ ಸರಕಾರದ ಅನ್ನ ತಕ್ಕೊಂಡರು. ಅವರ ಕೆಲಸ ಮಾಡಲಿಲ್ಲ. ಆದರೆ ಶ್ರೀ ಅವರಿಯವರು ಪರಕೀಯವಾದ ಸರಕಾರದ ಅನ್ನ ತಕ್ಕೊಳ್ಳದೆ, ನೀರು ಮಾತ್ರ ತಕ್ಕೊಂಡು, ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಇದರಿಂದ ಇವರ ಪ್ರಕೃತಿಯು ನಿತ್ರಾಣವಾಗಿದೆ. ಕೋರ್ಟಿಗೆ ಬರುವಂಥ ತ್ರಾಣ ಉಳಿದಿಲ್ಲ. ಆದ್ದರಿಂದ ವಿಚಾರಣೆಯನ್ನು ತುರಂಗದಲ್ಲಿಯೇ ನಡಿಸುವರು.

ಈ ಚಳವಳಿಯಲ್ಲಿ ಸುಶಿಕ್ಷಿತರಾದಂಥ ೩೫. ಜನರು ಸೇರಿದ್ದಾರೆ. ಮಧ್ಯಮ ಹಾಗು ಕನಿಷ್ಠ ವರ್ಗದವರು ಉತ್ಸಾಹಭರಿತರಾಗಿದ್ದಾರೆ. ಆದರೆ ದುಡ್ಡಿನ ಕೊರತೆಯುಂಟು. ದುಡ್ಡಿನ ಸಹಾಯವಾದರೆ- ಚಳವಳಿಯು ಅಭ್ಯುದಯವಾಗುವದು. ಕಾಯದೆಭಂಗ ಮಾಡಿದನಂತರ ಇವರು ಈ ವರೆಗೆ ೮೦ ಜಾಹೀರ ಸಭೆಗಳನ್ನು ಕೂಡಿಸಿ, ಪ್ರಚಂಡವಾದಂಥ ಹತ್ತು ಮೆರವಣಿಗೆಗಳನ್ನು ತೆಗೆದಿದ್ದಾರೆ. ಇವರ ಸೇನೆಯಲ್ಲಿ ಈವರೆಗೆ ೩೫೦ ಜನ ಸ್ವಯಂಸೇವಕರಿದ್ದಾರೆ. ೨೫ ಜನ ಸ್ವಯಂಸೇವಕರಿಗೆ ಶಿಕ್ಷೆಯಾಗಿದೆ. ಏಳು ಜನ ಸ್ತ್ರೀ ವ್ಹಾಲಂಟಿಯರರಿದ್ದಾರೆ. ಇವರು ಕಾಯದೆಭಂಗ ಮಾಡಿದರೂ- ಸರಕಾರವು ಇವರನ್ನು ಹಿಡಿದಿಲ್ಲ. ಸ್ವಯಂಸೇವಕರು ನಿರ್ಭೀತಿ ಮತ್ತು ನಿರ್ದಾಕ್ಷಿಣ್ಯದಿಂದ ಕತ್ತಿ, ಬರ್ಚಿ ಮತ್ತು ಕಠಾರ ಕೈಯಲ್ಲಿ ತಕ್ಕೊಂಡು ಪಟ್ಟಣಗಳಲ್ಲಿ ಮೆರೆಯುವರು. ಆದರೂ ಇವರು ಸಂಪೂರ್ಣವಾಗಿ ಅಹಿಂಸೆಯ ಅನುಯಾಯಿಗಳಾಗಿದ್ದಾರೆ.

ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ಮೆಂಬರರಾದ ಮಿ. ತಿವಾರಿ, ವಕೀಲ ಶ್ರೀಯುತರಾದ ರುಯಿಕರ ಮತ್ತು ಧವಳೆಯವರು ಚಳವಳಿಯ ಪುರಸ್ಕರ್ತರಾಗಿದ್ದಾರೆ. ಮೆಸರ್ಸ ಪ್ರಕಾಶಮ, ಸಾಂಬಮೂರ್ತಿ ಮತ್ತು ಹಾರ್ಡಿಕರನ್ನರಂಥ ಗೃಹಸ್ಥರು ತಮ್ಮಲ್ಲಿಗೆ ಬಂದು, ಈ ಚಳವಳಿಯನ್ನು ಬಲಪಡಿಸಬೇಕೆಂದು ಇವರ ಮತವಾಗಿರುತ್ತದೆ.

ರಶಿಯರು ಇಂಗ್ಲಿಷರಿಗೆ ಕೊಟ್ಟ ಕೆಡವಿನ ಉತ್ತರ.

ಬ್ರಿಟಿಶ ಸರಕಾರವನ್ನು ಬುಡಮೇಲು ಮಾಡುವದಕ್ಕಾಗಿ ರಶಿಯರು ಅರಕಾಸ ವರ್ತಕಮಂಡಳದ ದುರುಪಯೋಗ ಮಾಡಿದರೆಂಬ ಆರೋಪಕ್ಕೆ ರಶಿಯರು ಇಂಗ್ಲಿಷರ ಕಣ್ಣಿನಲ್ಲಿ ಅಂಜನ ಹಾಕಿದಂಥ ಉತ್ತರಕೊಟ್ಟಿದ್ದಾರೆ. ಅದೇನಂದರೆ-

ಚೀನದಲ್ಲಿ ಇಂಗ್ಲಿಷರಿಗೆ ಅಪಯಶ ಬಂತು. ಅದನ್ನು ಮುಚ್ಚಿಕೊಳ್ಳುವದಕ್ಕಾಗಿ ಇವರು ಇದೊಂದು ಕಪಟನಾಟಕ ಹೂಡಿದ್ದಾರೆ. ಇವರು ದೊರೆಕಿಸಿದ ಸಂಗತಿಗಳು ತಳಬುಡ ಇಲ್ಲದಂಥವು. ಇವರಿಗೆ ದೊರೆತ ಕಾಗದಪತ್ರಗಳು ಸುಳ್ಳು ಮಾಡಿದ್ದು. ರಶಿಯರು ಯಾವ ಪ್ರಕಾರದಿಂದಲೂ ವ್ಯಾಪಾರದ ಕರಾರ ಕಟ್ಟಳೆಗಳನ್ನು ಮುರಿಯಲಿಲ್ಲ. ರಶಿಯರ ಪ್ರಭುತ್ವವೆನಿಸಿದಂಥ ಅರಕಾಸ ಮನೆಯ ಮೇಲೆ ದಾಳಿಯಿಟ್ಟು ಹೋಗುವ ಕಾರಣವೇನೂ ಇದ್ದಿಲ್ಲ. ಒಡಂಬಡಿಕೆಯನ್ನು ರದ್ದು ಮಾಡಬೇಕಾದರೆ- ಮುಂದಾಗಿ ಆರು ತಿಂಗಳ ಸೂಚನೆ ಕೊಡಬೇಕಾಗುತ್ತದೆ. ಆ ಪ್ರಕಾರ ಸೂಚನೆ ಕೊಡಲಿಲ್ಲ. ಇವೆಲ್ಲ ಅಕ್ರಮವಾದ ಕೃತ್ಯಗಳು. ಚೀನದಲ್ಲಿ ಕಾನ್ಸರ್ವೆಟಿವ್ ಪಕ್ಷದ ರಾಜನೀತಿಗೆ ಅಪಯಶ ಬಂತು. ಅದಕ್ಕೆ ಗವಸಣಿಗೆ ಹಾಕುವದಕ್ಕಾಗಿ ರಶಿಯರ ಮೇಲೆ ಕಣ್ಣು ಕಿಸಿದಿದ್ದಾರೆ. ಜಾಯಿನಸನ್ ಹಿಕ್ಸಸಾಹೇಬರು ಅನ್ಯಾಯವಾಗಿ ಅರಕಾಸ ಮನೆಯ ಮೇಲೆ ತೆಗೆದ ದಾಳಿಯ ಸಮರ್ಥನ ಮಾಡುವದಕ್ಕಾಗಿಯೂ ಅವರ ಅಪಮಾನವನ್ನು ಮುಚ್ಚುವದಕ್ಕಾಗಿಯೂ ಇವೆಲ್ಲ ಗೊಂದಲಗಳನ್ನು ಎಬ್ಬಿಸಿದ್ದಾರೆ. ರಶಿಯವು ಇಂದಿಗೂ ಇಂಗ್ಲಂಡದ ಕೂಡ ಸ್ನೇಹವಾಗಿ ನಡೆಯಲಪೇಕ್ಷಿಸುತ್ತದೆ. ಒಡಂಬಡಿಕೆಯನ್ನು ಮುರಿದ ಜವಾಬದಾರಿಯು ಇಂಗ್ಲಿಷರ ಮೇಲುಂಟು. ಇವರ ವರ್ತನವು ಬೇರೆ ಬೇರೆ ದೇಶಗಳ ಪರಸ್ಪರವಾದ ರಾಜಕೀಯ ಮತ್ತು ವ್ಯಾಪಾರದ ವಿಷಯಕವಾದ ಸಂಬಂಧಗಳಿಗೆ ವಿಘ್ನ ತರುವದು. ಬ್ರಿಟಿಶ ಪ್ರಜರಿಗೆ ಬೇಗನೆ ಈ ಕೃತ್ಯದ ಮನದಟ್ಟಾಗಿ ಅವರು ಬೇಗನೆ ರಶಿಯಾದ ಕೂಡ ಸ್ನೇಹವಾಗಿ ನಡೆಯುವರೆಂದು ಆಶಿಸುತ್ತೇವೆ.

ಇಂಗ್ಲಿಷರ ವಿರುದ್ಧವಾಗಿ ಇಜಿಪ್ತದಲ್ಲೆದ್ದ ಧೂಮಕೇತು !!

ಇಜಿಪ್ತದಲ್ಲಿ ಪುನಃ ಇಂಗ್ಲಿಷ ಸರಕಾರದ ವಿರುದ್ಧ ಧೂಮಕೇತು ಎದ್ದಿರುತ್ತದೆ. ಇಜಿಪ್ತವು ಸ್ವತಂತ್ರವೋ? ಪರತಂತ್ರವೋ? ಎಂಬದನ್ನು ಒರೆಗೆ ಹಚ್ಚಬೇಕೆಂಬದೇ ಗೊಂದಲವೇಳಲು ಕಾರಣವಾಗಿದೆ. ಆ ದೇಶದ ಪಾರ್ಲಮೆಂಟ ಸಭೆಯವರು ದಂಡಿನಖಾತೆಯ ಆದಾಯ ವೆಚ್ಚ ಪತ್ರಿಕೆಯನ್ನು ಮಂಜೂರ ಮಾಡುವಾಗ- ಸರ್ವಸೇನಾಧಿಪತಿಯ ಸ್ಥಳವನ್ನೇ ಕಡಿಮೆ ಮಾಡಿದರು. ಮಂತ್ರಿಗಳೂ ಯುದ್ಧಖಾತೆಯವರೂ ದಂಡಿನ ಮೇಲ್ವಿಚಾರಣೆ ಮಾಡುತ್ತಿರುವದರಿಂದ ಸೇನಾಧಿಪತಿಯು ಅವಶ್ಯಕತೆಯಿಲ್ಲೆಂದು ಇವರು ತೋರಿಕೆಯಲ್ಲಿ ಹೇಳಿದರೂ, ಸೇನಾಧಿಪತಿಯಾದ ಇಂಗ್ಲಿಷ ಕಾಮದಾರನನ್ನು ತೆಗೆದು ಹಾಕುವದೇ ಇವರ ಇಂಗಿತವಾಗಿದೆಂದು ಇಂಗ್ಲಿಷರ ಮತವು. ಇಜಿಪ್ತದಲ್ಲಿರುವ ಬ್ರಿಟಿಶ ಮತ್ತು ಬೇರೆ ಪರದೇಶಗಳ ಜನರ ಸಂರಕ್ಷಣೆಯ ಭಾರವು ಇಂಗ್ಲಿಷರ ಮೇಲಿರುವ ಕಾರಣ, ಸೇನಾಧಿಪತಿಯು ದೊಡ್ಡ ಯೋಗ್ಯತೆಯ ಇಂಗ್ಲಿಷ ಮನುಷ್ಯನೇ ಆಗಬೇಕೆಂದು ಇಂಗ್ಲಿಷ ದರಬಾರದ ಆಗ್ರಹವು. ಅಲ್ಲಿ ಈ ಹುದ್ದೇದಾರನಿಗೆ ಸರದಾರನೆನ್ನುತ್ತಾರೆ. ಸರದಾರನನ್ನು ತೆಗೆಯುವದೆಂದರೆ- ಬ್ರಿಟಿಶ ಸರಕಾರದ ವರ್ಚಸ್ಸನ್ನೇ ನಷ್ಟ ಮಾಡುವಂತಾಗುತ್ತದೆ. ಈ ಪ್ರಕಾರದ ಠರಾವಿನ ಬಗ್ಗೆ ಬ್ರಿಟಿಶ ಸರಕಾರದವರು ಸಂತಾಪಗೊಂಡು, ಮುಂಜಾಗ್ರತೆಯ ಉಪಾಯವೆಂದು ಅಲ್ಲಿಗೆ ಮಾಲ್ಟಾದಿಂದ ನಾಲ್ಕು ಯುದ್ಧದ ಹಡಗಗಳನ್ನು ಕಳಿಸಿದ್ದಾರೆ.

ಇಂಗ್ಲಿಷರಂತೆ ಇಜಿಪ್ತರೂ ಸಿಟ್ಟಾಗಲು ಕಾರಣವಾಗಿದೆ. ಹಾಯಕಮಿಶನರೆಂದು ತಾವೇ ಹೆಸರಿಟ್ಟುಕೊಂಡಿರುವ ಲಾರ್ಡ ಜಾರ್ಜ ಲಾಯಿಡ ಸಾಹೇಬರು ಅಗಾಂತುಕರೆನಿಸುವಂತೆ ಆ ಪ್ರಾಂತದಲ್ಲಿ ಪ್ರವಾಸ ಮಾಡಿ, ಅಲ್ಲಿಯ ಅರಸರಿಗೆ ಸಲ್ಲತಕ್ಕ ಬಹುಮಾನಪಡೆದರು. ಇಜಿಪ್ತರು ಈ ಕೃತ್ಯವನ್ನು ತೀವ್ರಶಬ್ದಗಳಿಂದ ನಿಷೇಧಿಸಿ ಇವರ ಹಾಯಕಮಿಶನಂವೆಂತಹದು! ಈ ಬಿರುದು ಯಾರು ಕೊಟ್ಟರು? ನಮ್ಮ ರಾಜ್ಯದಲ್ಲಿ ಮೆರೆಯುವದಕ್ಕೆ ಇವರಾರು? ಎಂಬ ಪ್ರಶ್ನೆ ಕೇಳಿದ್ದಾರೆ. ಈ ತೆರವಾಗಿ ಮೂಡಿದ ಧೂಮಕೇತು ಮುಂದೆ ಹೀಗೆ ಬೆಳೆಯುವದೆಂಬದನ್ನು ನೋಡಬೇಕಾಗಿದೆ.

ನಿಮಗೆ ಜನಸಂಖ್ಯೆಯ ಪ್ರಮಾಣದಿಂದ ಸರಕಾರಿ ಕೆಲಸಗಳು ದೊರೆಯಬೇಕಾದರೆ- ಶಿಕ್ಷಣ ಹೊಂದಿ, ಆಯಾ ಕೆಲಸಗಳಿಗೆ ಪಾತ್ರರಾಗಿರೆಂದು ಬಂಗಾಲದ ಗವರ್ನರಸಾಹೇಬರು ಮುಸಲ್ಮಾನರಿಗೆ ಉಪದೇಶ ಮಾಡಿದ್ದಾರೆ.

ಇಂಗ್ಲಂಡದಲ್ಲಿ ವರ್ಣಭೇದ-

ಇಂಗ್ಲಿಷ ಸಾಮ್ರಾಜ್ಯಕ್ಕೆ ಸೇರಿದ ಕೆಲವು ಸಂಸ್ಥಾನಗಳಲ್ಲಿ ಕರೇ ಮತ್ತು ಕೆಂಪು ಬಣ್ಣದವರೆಂಬ ವರ್ಣ ಪಕ್ಷಪಾತವನ್ನು ಕೆಂಪು ಜನರು ಮಾಡುತ್ತಿದ್ದಾರೆ. ಆದರೆ ಅದರ ಪ್ರತ್ಯಕ್ಷಭೇದವು ಇಂಗ್ಲಂಡದಲ್ಲಿಯೂ ಪ್ರಕಟವಾಗಿದೆ. ಅಲ್ಲಿಯ ಕೆಲ ಉಪಹಾರ ಗೃಹಗಳಲ್ಲಿಯೂ, ನೃತ್ಯಶಾಲೆಗಳಲ್ಲಿಯೂ ಕರೇ ಬಣ್ಣದ ಜನರನ್ನು ಬರಗೊಡಬಾರದೆಂದು ಕಟ್ಟಳೆ ಮಾಡಿದ್ದಾರೆ. ಇವರಲ್ಲಿ ಹಿಂದೀ ಜನರೂ ಬಂದರು. ಹಿಂದೀ ಜನಾಂಗದವರಿಗೆ ಮಾತ್ರವಲ್ಲ; ಚೀನ-ಸಿದ್ದಿ, ಅರಬ ಮೊದಲಾದ ಎಲ್ಲ ಜಾತಿಯವರಿಗೂ ಈ ಪ್ರತಿಬಂಧವುಂಟೆಂದು ಹೇಳಿ, ಬಿಳೀ ಜನರ ಮೋರೆಯ ಮೇಲೆ ಕೈ ಎಳೆದಿದ್ದಾರೆ. ಹಿಂದೂ ಮತ್ತು ಯುರೋಪಿಯನ್ನರೆಂಬ ಭೇದವಾಗಿದೆ- ನಿಮ್ಮ ಸಾಮ್ರಾಜ್ಯವೆಂತಹದೆಂದು ಅಲ್ಲಿ ಓದುತ್ತಿರುವ ಹಿಂದೀ ವಿದ್ಯಾರ್ಥಿಗಳು ಸಾಮ್ರಾಜ್ಯದ ಉತ್ಸವದ ದಿವಸವೇ ಇಂಗ್ಲಿಷ ಜನರಿಗೆ ಸವಾಲು ಹಾಕಿದ್ದಾರೆ. ಮಿ. ಅಂಡ್ರ್ಯೂಜರಂತೆ ಕೆಲ ಮಿತ್ರರೂ ಉಂಟು. ಅವರು ಮಾತ್ರ ಈ ಭೇದಾಭೇದವನ್ನು ಹಳಿದು, ಈ ತರದ ಶ್ರೇಷ್ಠ ಕನಿಷ್ಠವೆಂಬ ವಿಶ್ವಾಸಘಾತುಕದ ಭಾವನೆಯಿಂದ ಬ್ರಿಟಿಶ ಸಾಮ್ರಾಜ್ಯದ ಒಡವೇ ಆದರುವದೆಂದು ಉದ್ಗಾರ ತೆಗೆದಿದ್ದಾರೆ. ಇವರ ಬುದ್ಧಿವಾದವು ಆ ದುರಭಿಮಾನಿಗಳ ಮುಂದೆ ಕನ್ನಡಿ ಬಾರಿಸುವಂತಾಗುವದೇ ದಿಟ.

ಡಾಕ್ಟರು ಹುಕುಮು ಮುರಿದರು-

ಹಿನ್ನಿನ ಸಂಚಿಕೆಯಲ್ಲಿ ಬರೆದ ಪ್ರಕಾರ ಡಾಕ್ಟರ ಮುಂಜೆಯವರು ಅಂಕಲೇಶ್ವರದಿಂದ ಸೂರತಕ್ಕೆ ಬಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹುಕುಮನ್ನು ಮುರಿದು, ಗಾಂಧೀ ಬಜಾರದಲ್ಲಿ ಪ್ರಚಂಡವಾದ ಹಿಂದೂ ಜನಸಮೂಹದ ಮುಂದೆ ಸ್ವಾತಂತ್ರ್ಯಪರವಾದ ಭಾಷಣ ಮಾಡಿ, ಒಡೋದಗೆ ಹೋದರು. ಈ ಸಭೆಯಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಕೊಟ್ಟ ಹುಕುಮನ್ನು ಅತ್ಯಂತವಾದ ತೀವ್ರ ಶಬ್ದಗಳಿಂದ ನಿಷೇಧಿಸಿದರು. ಶುದ್ಧಿ ಮತ್ತು ಸಂಘಟನ ಮಾಡಿ, ಹಿಂದೂ ಜನಾಂಗದಲ್ಲಿ ಒಗ್ಗಟ್ಟು ಮಾಡಿಕೊಂಡರೇ ನಿಮಗೆ ತೀವ್ರ ಸ್ವರಾಜ್ಯ ದೊರೆಯುವದೆಂದು ಡಾಕ್ಟರರು ಪ್ರೇಕ್ಷಕರಿಗೆ ಉಪದೇಶ ಮಾಡಿದರು.

ಸಿಂಧ ವಿಭಾಗ-

ಸಿಂಧವನ್ನು ಸ್ವತಂತ್ರ ಮಾಡುವ ವಿಷಯವಾಗಿ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯು ತೀರ್ಮಾನದ ಪ್ರಕಾರ ಸಿಂಧದ ಕಾಂಗ್ರೆಸ ಕಮಿಟಿಯವರು ತಮಗೆ ಅನುಕೂಲವಾಗಿ ಲೋಕಮತವನ್ನುಂಟು ಮಾಡಿಕೊಳ್ಳಲು ಚಳವಳಿ ನಡೆಸಿದ್ದಾರೆ. ಹಿಂದೂ ಮುಸಲಮಾನ ಮಿಶ್ರ ಚುನಾವಣೆಯಾಗುವದರಿಂದ ಸಿಂಧಕ್ಕೆ ಒಲಬರುವದು. ಮುಂಬಯಿ ಇಲಾಖೆಯು ನಾಯಿಯಾಗಿ ನಡೆಯುವ ಹೀನದೆಸೆ ಹೋಗುವದು. ಹಿಂದೂ ಮುಸಲಮಾನರ ಐಕ್ಯವಾದರೇ ಬೇಗನೆ ಸ್ವರಾಜ್ಯ ದೊರೆಯುವದೆಂದು ಕಾಂಗ್ರೆಸ ಕಮಿಟಿಯು ಹೇಳುವದು. ಹಿಂದೂ ಮಹಾಸಭೆಯ ಮೆಂಬರರು ಇದನ್ನು ವಿರೋಧಿಸುತ್ತಿದ್ದಾರೆ.

ಕರ ಕಟ್ಟುವ ಹೊಸ ಮಾದರಿ-

ಕಲಕತ್ತೆಯಲ್ಲಿ ಪ್ರಾಪ್ತಿಯ ಕರಕಟ್ಟುವ ಅಮಲದಾರರು ಪ್ರತಿಯೊಂದು ಮನೆಗೆ ಹೋಗಿ ಅದರ ಯಜಮಾನನ ಉದ್ಯೋಗ, ಸಂಬಳ ಅಥವಾ ಪ್ರಾಪ್ತಿಯ ವಿಚಾರ ಮಾಡಿ, ಅವನಿಗೆ ಕರ ಹಾಕಬಹುದೇ? ಇಲ್ಲವೆ ಎಂಬ ವಿಚಾರ ಮಾಡುವರು. ಮನೆ ಮನೆಯ ತಪಾಸಣೆಯಿಂದ ಈ ವರೆಗೆ ಕರ ಕೊಡಬಂಧರ ಮೇಲೆ ಕರದ ಶುಲ್ಕದಷ್ಟು ಬೆನ್ನು ಹತ್ತಿರುತ್ತದೆ.

ಜರ್ಮನಿಗೆ ಬಂದ ಪೀಕಲಾಟ

ಇಂಗ್ಲಂಡದಲ್ಲಿದ್ದ ರಶಿಯಾದ ರಾಯಭಾರಿಯು ಹೋಗಿ ಬಿಟ್ಟ ಬಳಿಕ, ಅಲ್ಲಿರುವ ರಶಿಯಾದ ಪ್ರಜರ ಹಿತ ಸಂಬಂಧಗಳನ್ನು ನೋಡಬೇಕೆಂದು ರಶಿಯಾ ಸರಕಾರದವರು ಜರ್ಮನ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಲು ಇದನ್ನು ಅವರು ಒಪ್ಪಿದ್ದಾರೆ. ಜರ್ಮನಿಯು ರಶಿಯಾದ ಹಿತಕರ್ತೃವಾದ್ದನ್ನು ಕಂಡು ರಾಜಕಾರಣ ಪಟುಗಳು ಮನಬಂದಂತೆ ಮಾತಾಡಲಾರಂಭಿಸಿದ್ದಾರೆ. ರಶಿಯವೂ ಜರ್ಮನಿಯೂ ಒಂದಾಯಿತೆಂಬ ಭಾವವನ್ನೂ ಸಾರುತ್ತಿದ್ದಾರೆ. ಇದು ಪ್ರಕೃತದ ಜರ್ಮನಿಯ ಸೂಕ್ಷ್ಮ ಪರಿಸ್ಥಿತಿಯ ಮೂಲಕ ಪೀಕಲಾಟವಾಗಿದೆ. ಹಾದೀ ಹೋಗುವ ವೇಶ್ಯಾಳನ್ನು ಮನೀ ಹೊಗಿಸಿಕೊಂಡಂತಾಗಿದೆ. ರಶಿಯವು ಜರ್ಮನಿಯ ಹೊರ್ತು ಬೇರೊಂದು ದೇಶವನ್ನು ಹುಡುಕಿ, ಅದಕ್ಕೆ ಈ ಕೆಲಸ ಒಪ್ಪಿಸಬೇಕೆಂದು ಜರ್ಮನ ಪತ್ರಗಳು ಧಾರಾಳವಾಗಿ ಹೇಳುತ್ತಲಿವೆ.

ರಂಗೂನದ ನಾಟಕೋಟಿ ಸಾಹುಕಾರರು ಅಲ್ಲಿಯ ವಿಶ್ವ ವಿದ್ಯಾಲಯಕ್ಕೆ ಒಂದು ಲಕ್ಷರೂಪಾಯಿ ಕೊಟ್ಟರು. ಒಬ್ಬ ಒಡಿಯಾ ಗೃಹಸ್ಥರು ಎರಡು ಲಕ್ಷ ರೂಪಾಯಿ ವೆಚ್ಚ ಮಾಡಿ, ಯುನಿವ್ಹರ್ಸಿಟಿಗಾಗಿ ಕಟ್ಟಡ ಕಟ್ಟಿಕೊಡುವರು.

ವಿವಿಧ ವರ್ತಮಾನಗಳು

—o—

ಮೈಸೂರಿನ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿಯ ಹೆಸರು ಬರಲಿಲ್ಲ. ಪರೀಕ್ಷೆ ನಾಪಾಸಾದ ಬಗ್ಗೆ ಖತಿಗೊಂಡು ವಿದ್ಯಾರ್ಥಿಯು ಆತ್ಮಹತ್ಯ ಮಾಡಿಕೊಂಡನು. ಚಮತ್ಕಾರವೇನಂದರೆ- ಪರೀಕ್ಷಕರು ಪರಿಣಾಮದ ಕಾಗದವನ್ನು ಪುನಃ ಶೋಧಿಸಲಾಗಿ ಈತನು ಪಾಸಾಗಿದ್ದನು. ಈತನ ಮರಣಕ್ಕೆ ಹೊಣೆಯಾರು. ?

ಅನಂತಶಯನದಲ್ಲಿ ಒಬ್ಬ ವಕೀಲನು ತನ್ನ ಬಳಗದವರೊಂದಿಗೆ ಮಾತಾಡುತ್ತಾ ಕುಳಿತಾಗ ಸಿಡ್ಲುಬಿದ್ದು ವಕೀಲ ಸಹಿತವಾಗಿ ನಾಲ್ವರು ಸತ್ತರು.

ಮದ್ರಾಸದಲ್ಲಿರುವ ಮ್ಯಾಕ ಕಂಪನಿಯ ಮುದ್ರಾಲಯದಲ್ಲಿ ಕೆಲಸ ಮಾಡುವ ಜನರು ಹೆಚ್ಚಿಗೆ ಸಂಬಳಕ್ಕಾಗಿ ಸಂಪು ಮಾಡಿದ್ದಾರೆ. ಕಂಪನಿಯವರು ಸಂಪುಗಾರರ ಬೇಡಿಕೆಯನ್ನು ಪೂರ್ಣ ಮಾಡದಿದ್ದರೆ- ಆ ಪಟ್ಟಣದಲ್ಲಿರುವ ಎಲ್ಲ ಮುದ್ರಾಲಯಗಳ ಕೆಲಸಗಾರರು ಸಂಪು ಮಾಡುವ ಪೂರ್ಣ ಸಿದ್ಧತೆ ನಡೆದಿದೆ.

ಬಂಗಾಲ ಸರಕಾರದವರು ಸುಭಾಷ ಬಾಬು ಎಂಬವರನ್ನು ಜಡ್ಡಿನ ನಿಮಿತ್ಯದಿಂದ ದೋಷಮುಕ್ತ ಮಾಡಿದರು.

ತಿನ್ನೆವಲ್ಲಿಯ ಪ್ರಾಥಮಿಕ ಶಾಲೆಯ ಹೆಡ್ಡ ಮಾಸ್ತರರು ವಿದ್ಯಾರ್ಥಿಗಳಿಗೆ ಚೀಪೆ ಮತ್ತು ಬುಟ್ಟಿ ಹೆಣೆಯುವ ಹಾಗು ಮಣ್ಣಿನ ಪದಾರ್ಥಗಳನ್ನು ಕಲಿಸುವದಕ್ಕೆ ಪ್ರಾರಂಭಿಸಿದ್ದಾರೆ. ಡಿಸ್ಟ್ರಿಕ್ಟ ಬೋರ್ಡಿನವರು ಇವರ ಉದ್ದೇಶವನ್ನು ಒಪ್ಪಿ, ಇದಕ್ಕೆ ಬೇಕಾಗುವ ಪದಾರ್ಥಗಳನ್ನು ಕೊಳ್ಳಲು ಹಣದ ಸಹಾಯವನ್ನೂ ಮಾಡಿದ್ದಾರೆ.

ಲೋಕಲ ಪ್ರಬಂಧಕ ಕಮಿಟಿಯ ಅಪ್ಪಣೆಯ ಪ್ರಕಾರ ೧೩ ಜನ ಲೋಕಲ ಉಮೇದವಾರರಲ್ಲಿ ಹತ್ತು ಜನರು ರಾಜೀನಾಮೆ ಕೊಟ್ಟಿದ್ದಾರೆ. ಇವರೇ ಪುನಃ ಚುನಾವಣೆಗಾಗಿ ನಿಲ್ಲುವರು. ಮತ್ತು ರಾಜೀನಾಮೆ ಕೊಡುವರು. ಸರಕಾರಕ್ಕೆ ಇದೊಂದು ನಿತ್ಯ ಪೀಕಲಾಟ!!

ವಿಜಾಪೂರದಲ್ಲಿ ಕೂಡಿದ ವೈದ್ಯರ ಸಮ್ಮೇಲನದಲ್ಲಿ ಸ್ವದೇಶಿ ಔಷಧಗಳ ಹಾಗು ವನಸ್ಪತಿಗಳ ಪ್ರದರ್ಶನವನ್ನು ಮಾಡಿದ್ದಾರೆ. ಪ್ರಣಿಯ ಡಾಕ್ಟರರಾದ ಮಿ. ನಾಯಿಲರು ಇದನ್ನು ಕೆಟಿಸುವ ಸಮಾರಂಭ ಮಾಡಿದನು.

ಜಾಹೀರಾತು.

—೦—

ಗಂದಿಗವಾಡದಲ್ಲಿ ಹೊಲದ ಹರಾಜು.

ಬೆಳಗಾವ ಜಿಲ್ಹಾ ಖಾನಾಪೂರ ತಾಲೂಕ ಮೋಜೆ ಗಂದಿಗವಾಡದಲ್ಲಿರುವ ನಮ್ಮ ಮಾಲ್ಕಿಯು ಕೈತಾಪೆ ಜಮೀನ ರಿ| ಸ| ನಂಬರ ೧೮೩ ಪೈಕಿ ಕೆಳಗೆ ಸಹಿ ಮಾಡುವವರ ನಮ್ಮ ಸಮಾಯಿಕ ಅರ್ಧ ಅಂದರೆ ಯಕರೆ ೭.೭ ಆಕಾರ ರೂಪಾಯಿ ೪೧-೯-೭ ಇದನ್ನು ಮಾರುವದದೆ. ಕೊಳ್ಳಲಿಚ್ಛಸುವವರು ನಮಗೆ ಸಮಕ್ಷಮಾ ಭೆಟ್ಟಿಯಾಗಿ ಇಲ್ಲವೆ ರಿಪ್ಲಾಯ್ ಕಾರ್ಡ ಒರೆದು ಬೆಲೆ ಮೊದಲಾದ್ದನ್ನು ತಿಳುಕೊಳ್ಳಬಹುದು.

ಉಪ್ಪಿನ ಬೆಟಗೇರಿ } ನರಸಿಂಗರಾವ ಭೀಮರಾವ
ತಾ. ೨೭-೫-೩೭ } ದೇಶಪಾಂಡೆ

ಹಣಮಂತರಾವ ಭೀಮರಾವ ದೇಶಪಾಂಡೆ
ಪೋ. ಉಪ್ಪಿನಬೆಟಗೇರಿ
ಜಿ ಧಾರವಾಡ

ನೋಟೀಸು.

ನೀಲವ್ವಾ ಬಾರಿಕೇರ ಸಾ. ಯಲವಿಗಿ ಈತನಿಗೆ ಕೊಡುವಾ ನೋಟೀಸು ಎನಂದ್ರೆ-

ನನ್ನ ಹಿರೆಮಗಾ ಗುಡ್ಡಪ್ಪಾ ಈತಗೆ ನಿನ್ನ ಮಗಳು ಹನಮವ್ವಾ ಈಕಿನ್ನ ಕೊಟ್ಟು ಲಗ್ನ ಆಗಿ ಅಜಮಾಸ ೪ ವರ್ಷ ಆಯಿತು ನಂತರಾ ವಂದು ವರ್ಷದ ಮೇಲೆ ನಮ್ಮ ಜ್ಯಾತಿ ರಿವಾಜ ಪ್ರಕಾರ ಋತುಶಾಂತಿಕಾರ್ಯ ಮಾಡಿಕೊಟ್ಟೆ. ನಂತರ ನಿನ್ನ ಮಗಳು ನನ್ನ ಮನೆಯಲ್ಲಿ ೨-೩ ತಿಂಗಳು ಚಲೋ ರೀತಿಯಿಂದ ಬಾಳೇ ಮಾಡಿಕೊಂಡು ಇದ್ದಳು ಅಲ್ಲಿಂದಾ ನಿನ್ನ ಹೆಂಡತಿ ತೀರಿಕೊಂಡದ್ದರಿಂದಾ ನನ್ನ ಮನಿಯಲ್ಲಿ ಯಾರೂ ಇಲ್ಲಾ ೧-೨ ತಿಂಗಳ ಮಟ್ಟಿಗೆ ಮಗಳನ್ನೇ ಕಳ್ಸಿಕೊಡು ಅಂತಾ ನಿನ್ನ ಮಗಾ ಹೆಗ್ಗಪ್ಪಾ ಅಂಬುವವನು ಶಾಯಿಗೆ ದಿನಾ ಮಾಡುತ್ತೇನೆ ಕಳಿಸಿಕೊಡು ಅಂತಾ ಕರಿಯಲಿಕ್ಕೆ ಒಂದದರಿಂದಾ ನಾನು ನಿಮ್ಮ ಮಾತಿನ ಪ್ರಕಾರ ಕಳ್ಸಿಕೊಟ್ಟೆನು ನಿನ್ನ ಮನಿಗೆ ಕಳಿಸುವಾಗ ಮೈಮೇಲೆ ಕೆಳಗೆ ಬರೆದ ಪ್ರಕಾರ ನಮ್ಮ ಮನಿ ಡಾಗೀನಗಳನ್ನು ಇಟ್ಟು ಕಳಿಸಿಕೊಟ್ಟದ್ದರ ವಿವರ

೧ ಭಂಗಾರದ ಒಳೆ ಜೋಡು ೧ ತೂಕಾ ೫ ಅಜಮಾಸ ವಂ ಇಕ್ಕೇರಿ ಕಿ. ರೂ. ೧೨೦
೨ ಭಂಗಾರದ ಕರ್ಣಫೂಲ ಜೋಡು ೧ ಅಜಮಾಸ ಕಿ|| ರೂ. ೬
೩ ಬೆಳ್ಳಿ ಕಡಗ ೧ ಅಜಮಾಸ ಕಿ|| ರೂ. ೮
೪ ಬೆಳ್ಳಿ ಪಟ್ಟಿ ಟೊಂಕಧೋಳಕೆ ಇಡೋದು ೧. ಕಿ|| ರೂ ೧೨

ಆ ನಂತರಾ ನನ್ನ ಸೊಸಿ ನೀಲವ್ವಾ ಈಕಿನ್ನ ನನ್ನ ಮನಿಗೆ ಕಳಿಸಿಕೊಡು ಅಂತಾ ಪುಷ್ಕಳ ಸಾರೆ ನಿನ್ನ ಮನಿಗೆ ಬಂದು ಹೇಳಿದ್ದಕ್ಕೆ ಇದುವರಿಗೂ ಕಳಿಸಿಕೊಡಲಿಲ್ಲಾ ಕಳಸ ಗ್ರಾಮದ ಪಂಚರ ಸಮಕ್ಷಮ ಕಳಿಸಿಕೊಡಲಿಕ್ಕೆ ನಿನಗೆ ಹೇಳಿದರೂ ನೀನು ಕಳಸದೆ ವಿನಃಕಾರಣಾ ನನಗೆ ಹಲ ಕಟ್ಟ ಮಾತಾಡಿ ಕಳಸಲಿಲ್ಲಾ ಇದರ ಮೇಲಿಂದ ನೋಡಲಾಗಿ ನೀನು ನಿನ್ನ ಮಗಳನ್ನು ಗಂಡನ ಮನಿಯಲ್ಲಿ ಸುಸೂತ್ರ ಬಾಳುವೆ ಮಾಡಲಿಕ್ಕೆ ಕಳ್ಸದೆ ದುಷ್ಟ ಹಟಕ್ಕೆ ಹಚ್ಚಿದಂತೆ ತೋರುತ್ತದೆ.

ನೀನು ಈ ನೊಟೀಸು ಮುಟ್ಟಿದ ೮ ದಿವಸದೊಳಗಾಗಿ ನಿನ್ನ ಮಗಳ ಮೈಮೇಲೆ ಮೇಲೆ ಬರೆದ ಪ್ರಕಾರ ಇಟ್ಟ ಡಾಗೀನ ಸಹಿತಾ ನನ್ನ ಮನಿಗೆ ಬಾಳುವೆ ಮಾಡಲಿಕ್ಕೆ ಕಳಿಸಿ ಕೊಡಬೇಕು. ಬರೆ ಇದರಂತೆ ಮಾಡದಿದ್ದರೆ ನಿನ್ನ ಮಗಳನ್ನು ಇದೇ ನೋಡಬೇಟಿಯಂತಾ ತಿಳಿದು ಬಿಟ್ಟು ನನ್ನಮಗನಿಗೆ ಎರಡನೆ ಕಡಿಗೆ ಲಗ್ನ ಮಾಡುತ್ತೇನೆ ಮುಂದೆ ನನ್ನ ವ ನನ್ನ ಮಗನ ಮೇಲೆ ನಿನ್ನ ಮಗಳ ಸಂಬಂಧಿ ಕಾಯದೆಶೀರ ಯಾವತರದದ್ದು ಇಲಾಜ ನಡಿಯಲಿಕ್ಕಿಲ್ಲಾ

ಮತ್ತು ಮೇಲೆ ಬರೆದ ಪ್ರಕಾರ ನಿನ್ನ ಮಗಳ ಮೈಮೇಲೆ ಇಟ್ಟ ಡಾಗೀನಗಳನ್ನು ೮ ದಿವಸಗಲ್ಲಿ ಪರತ ಕೊಟ್ಟು ಪಾವತಿ ತಗೊಬೇಕು. ಬರ ತಗೊಳ್ಳದಿದ್ದರೆ ನಿನ್ನ ಮೇಲೆ ಕಾಯದೆಶೀರ ಇಲಾಜ ಮಾಡಿ ತಗೊಳ್ಳುವದರಲ್ಲಿ ಬರುವದು ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದ ತಿಳಿಯುವದು ತಾರೀಖು ೨-೬-೩೭

ಈ ಎಡಗೈ ಹೆಬ್ಬಟ್ಟಿನ ಗುರ್ತ ಫಕೀರಪ್ಪಾ ಬಸಪ್ಪಾ ಬಾರಿಕೇರ ಸಾ. ಯಲವಿಗಿ ತಾ. ಬಂಕಾಪೂರ ಇವನ ಕೈದು ಇರುತ್ತದೆ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬಿಳಿ ಚಹಾ ಮತ್ತು ಕಾಫೀ ಸೊಪ್ಪಿನ ಪುಡಿ [illegible] ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವೇಳೆಯಾದರೂ ನಮ್ಮ ಚಹಾ [illegible] ಮನಸ್ಸಿಗೆ " ಉತ್ತಮ " ಅನ್ನಿಸದೆ [illegible] ಪತ್ರಿಕೆ ಬರೆದು [illegible] ನ ಕಳಿಸಿ ಕೊಡುತ್ತೇವೆ, [illegible].

[ಶಿಗಾವ ಪತ್ತೆ

ವಿ ಜೇ —

ಗಣಪತ ಭವಾನರಾವ [illegible] ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಕೆಕಾರೆ,

[illegible], ಹುಬ್ಬಳ್ಳಿ,

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಸುವರು

ಇದೇ ತಿಂಗಳಲ್ಲಿ ನಹಸಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು।

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ | ಧಾರವಾಡ ಶುಕ್ರವಾರ ತಾರೀಖು ೩ ನೇ ಜೂನ ೧೯೨೭ | ಸಂಚಿಕೆ ೧೧೫

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ದಬ್ಬಾಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಅಡಿ [illegible] ಗಳುಂಟು. ಗಾಲಿಯ ವ್ಯಾಸವು ೩೨ ಇಂಚು ಇರುತ್ತದೆ. ಆದ್ದರಿಂದ ಹಾಗೆ [illegible] ನೀರಿನ ಭಾರವನ್ನು ಬಹು ಹಗುರವಾಗಿ [illegible]. ನಳಕ್ಕೆ ನೀರಿನ [illegible] ಎಲ್ಲ [illegible]. ಆದ್ದರಿಂದ [illegible] ನೀರು [illegible]. [illegible]. ನಮ್ಮ ಗಾಡಿಯು [illegible].

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ಶಾಲೆಯಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಯಾದ ಶ್ರೀಯುತ [illegible] ಇವರನ್ನಾಗಲೀ ಅಥವಾ ಕಾರಖಾನೆಗೆ [illegible] ಒದರಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬ್ರದರ್ಸ ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ನೋಟೀಸಿನ ದರಗಳು.

—೦—

೩ ತಿಂಗಳ ಕಾಲದ ಪತ್ರ ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೇಟಿವ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ ಇಂಗಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಹೆಚ್ಚಿನಕಾಲದ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಕಾಲರಾ ಪಿಲ್ಸ.

—(೦)—

ಕಾಲರಾ (ಮಾರಿಕಾ) ರೋಗದ ಮೇಲೆ ಈ ಪಿಲ್ಸು ಒಳ್ಳೇ ಗುಣಕಾರಿ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವರು ಸಹಸ್ರಾವಧಿ ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೋಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೩೨ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ. ಪತ್ತಾ:- ಮ್ಯಾ. ಆರೋಗ್ಯಔಷಧ ಕಾರಖಾನಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

—೦೦—

ಜೂನ ೩೦ರಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಭಂಡವಲು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ನಡೆಯಲ್ಪಡುವವು. ಠೇವು (ಮುದ್ದತ್ತು) ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಜಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು, [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಚನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಚೀನದ ಯುದ್ಧಕ್ಕೆ ಕಳೆಯೇರಿತು.

---೦---

ಎರಡು ತಿಂಗಳಾಯಿತು. ಚೀನದ ಯುದ್ಧವು ನಿದ್ದೆ ಮಾಡುತ್ತಿತ್ತು. ಈಗ ಅದು ಎಚ್ಚತ್ತು ತನ್ನ ಪ್ರಭಾವ ತೋರಿಸಲಾರಂಭಿಸಿದೆ. ಕಂತಾನದ ಬೊಲ್ಶೆವಿಕರು ಹಾಂಕಾವಿನಿಂದ ಪೇಕಿಂಗದ ದಾರೀ ಹಿಡಿದು ಹೊರಟಿದ್ದು, ದಾರಿಯಲ್ಲಿ ಉತ್ತರ ದೇಶಿಯರನ್ನು ಸೋಲಿಸಿ, ಅವರ ದಂಡಿನಲ್ಲಿ ರಕ್ತದ ಕಾಲುವೆ ಹರಿಸಿದ್ದಾರೆ. ಈ ಗೆಲವಿನಿಂದ ಕಂತಾನರಿಗೆ ಪೇಕಿಂಗದ ದಾರಿಯು ನಿರಾತಂಕವಾಗುವದೇ ಹೆಚ್ಚು ಸಂಭವನೀಯವಾಗಿರುತ್ತದೆ. ಇದುದರಿಂದ ಪರರಾಷ್ಟ್ರೀಯರು ಪೇಕಿಂಗದ ಹತ್ತರದ ಟೆಂಟಿಶೆನದಲ್ಲಿರುವ ತಮ್ಮ ಜನರ ಹಾಗು ಜಿಂದಗಿಯ ಸಂರಕ್ಷಣೆಗಾಗಿ ದಂಡು ಕಳಿಸುತ್ತಿದ್ದಾರೆ ಸಂಘಾಯಿಯನ್ನು ನಾವು ಸಂರಕ್ಷಿಸಿದ್ದೇವೆ. ಸ್ವಮ್ಮಸ್ಸು ಸೇನೆಯನ್ನು ಯಾವ ದೇಶಿಯರೂ ತಂದಿಲ್ಲ. ಆದ್ದರಿಂದ ಜಪಾನ-ಫ್ರಾನ್ಸ, ಅಮೇರಿಕೆಗಳವರು ಪೇಕಿಂಗದ ಭಾಗವನ್ನು ತಮ್ಮ ಜವಾಬದಾರಿಯ ಮೇಲೆ ನೋಡಿಕೊಳ್ಳಬೇಕೆಂದು ಇಂಗ್ಲಿಷರು ನಿಶ್ಚಿಂತವಾಗಿ ಹೇಳುತ್ತಿದ್ದಾರೆ. ಇದೇ ವಿಚಾರದಿಂದಾಗಲಿ, ಇನ್ನಾವ ವಿಚಾರದಿಂದಾಗಲಿ ಜಪಾನರು ಸದ್ಯದಲ್ಲಿ ಟೆಂಟಿಶೇನಕ್ಕೆ ಎರಡು ಸಾವಿರ ಸೈನ್ಯ ಕಳಿಸುವ ಏರ್ಪಾಡು ಮಾಡಿದ್ದಾರೆ.

ಪೆಕಿಂಗ ಮತ್ತು ಟೆಂಟಿಶೇನ ಸೇರಿ ಪರಕೀಯರ ಸಂರಕ್ಷಣೆಗಾಗಿ ೧೬೦೦೦ ಸೈನ್ಯ ಬೇಕೆಂದು ಅಂದಾಜು ಮಾಡಲ್ಪಟ್ಟಿದೆ. ಈಗ ಅಲ್ಲಿ ಬೇರೆ ಬೇರೆ ದೇಶಗಳ ಏಳು ಸಾವಿರ ದಂಡುಂಟು. ಪೆಕಿಂಗ ಮತ್ತು ಟೆಂಟಿಶೇನದ ಮಧ್ಯದಲ್ಲಿರುವ ರೇಲ್ವೆಯ ರಕ್ಷಣೆಯನ್ನು ವಿಮಾನಗಳಿಂದ ಮಾಡುವ ವಿಚಾರ ನಡೆದಿದೆ. ಆ ಯಾ ದೇಶಗಳ ವಕಾಲತಿಗಳ ರಕ್ಷಣ ಕೆಲಸವನ್ನು ಎರಡು ಸಾವಿರ ದಂಡಿಗೆ ಒಪ್ಪಿಸುವರು. ಈ ದಂಡು ಐದೂ ದೇಶಗಳ ಸೈನಿಕರಿಂದ ಕೂಡಿದ್ದಾಗುವದು. ಪೆಕಿಂಗ ಪಟ್ಟಣದಲ್ಲಿ ವಕಾಲತಿಯ ಹೊರಗೆ ವಾಸವಾಗಿರುವಂಥ ಇಂಗ್ಲಿಷ ಸ್ತ್ರೀಯರೂ ಹುಡುಗರೂ ವಕಾಲತಿಯಲ್ಲಿ ಸೇರಬೇಕೆಂದು ಇಂಗ್ಲಿಷ ವಕೀಲನು ಹುಕುಮು ಮಾಡಿದ್ದಾನೆ. ಜಪಾನದ ವಕೀಲನಾಗಿರುವ ಬ್ಯಾರನ ಓಸಿಶಿಮ್ಯಾ ಎಂಬವನು ಸ್ವದೇಶಕ್ಕೆ ಹೊರಟಿದ್ದನು. ಆದರೆ ಅಲ್ಲಿನ ಬಿಕ್ಕಟ್ಟಾದ ಪರಿಸ್ಥಿತಿಯು ದೆಸೆಯಿಂದ ಜಪಾನ ಸರಕಾರದವರು ಈತನನ್ನು ಅಲ್ಲೇ ಇಟ್ಟಿದ್ದಾರೆ. ಕಂತಾನರು ಪೆಕಿಂಗ ಪಟ್ಟಣವನ್ನು ಆಕ್ರಮಿಸಿದ ಬಳಿಕ, ಇಡೀ ಚೀನ ರಾಜ್ಯದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಿರ ಪಡಿಸಲಿಕ್ಕೆ ಕನಿಷ್ಠ ಎರಡು ವರ್ಷವಾದರೂ ಬೇಕು. ಅವರಿಗಾಗುವ ಅನಾಯಕತನದಿಂದಾಗುವ ವ್ಯಾಪಾರ ವ್ಯವಹಾರದ ಹಾನಿಯು ಹಾಗು ಪ್ರಜಾ ಪೋಷಣೆಯು ದೊಡ್ಡ ಚಿಂತೆಯು ಚೀನರಿಗಿಂತ ಪರಕೀಯರಿಗೇ ಹೆಚ್ಚಾಗಿರುತ್ತದೆ.

---

೮೦೦ ಟಾಂಗೆಯವರ ಸಂಪು!!

ಪುಣೆಯಲ್ಲಿರುವ ಎಂಟು ನೂರು ಟಾಂಗೆಗಳ ಜನರು ಸಂಪು ಮಾಡಿ, ಟಾಂಗಾ ಹೊಡೆಯುವದನ್ನು ಬಂದು ಮಾಡಿದ್ದಾರೆ. ಇವರಿಂದ ಏನಾದರೂ ತಪ್ಪಾದರೆ- ಮ್ಯಾಜಿಸ್ಟ್ರೇಟರು ನಾಲ್ಕಾಣೆ ದಂಡ ಮಾಡುತ್ತಿದ್ದರು. ಆದರೆ ಈಗ ಮೂವತ್ತು ರೂಪಾಯಿ ದಂಡ ಮಾಡಲಾರಂಭಿಸಿದ್ದಾರೆ. ಇಂಥ ಭಾರೀ ದಂಡ ಕೊಡುವದಕ್ಕಾಗುವದಿಲ್ಲೆಂದೂ, ಪ್ರಾಣಿ ಹಿಂಸೆ ಪ್ರತಿಬಂಧಕ ಕಮಿಟಿಯವರಿಂದ ಇಲ್ಲದ ತಾಪವಾಗುತ್ತದೆಂದೂ ಮುಖ್ಯವಾಗಿ ಟಾಂಗೆಯವರ ದೂರುಗಳಿರುತ್ತವೆ.

ವಿವಿಧ ವರ್ತಮಾನಗಳು

---೦---

ಮುಂದಿನ ತಿಂಗಳಲ್ಲಿ ಲಾರ್ಡ ಅಯರ್ವಿನಸಾಹೇಬರು ನೀಲಗಿರಿಗೆ ದಯಮಾಡಿಸುವರು. ಆಗ ಅಲ್ಲಿಯ ರಹಿವಾಸಿಗಳು ನೀಲಗಿರಿ ಜಿಲ್ಹೆಯನ್ನು ಸ್ವತಂತ್ರ ಮಾಡಿ, ಅದಕ್ಕೆ ದಿಲ್ಲಿ ಪ್ರಾಂತಕ್ಕೆ ಕೊಟ್ಟಂಥ ಅಧಿಕಾರ ಕೊಡಬೇಕೆಂಬ ವಿನಂತಿ ಮಾಡಿಕೊಳ್ಳತಕ್ಕವರಿದ್ದಾರೆ.

ನೀಲಗಿರಿಗೆ ಬೇಸಿಗೆಯ ಹವೆಯ ದೆಸೆಯಿಂದ ಬರುವಂಥ ಜನರ ಸಂಖ್ಯೆಯು ಪ್ರತಿವರ್ಷ ಬೆಳೆಯುತ್ತಲಿದೆ ೧೯೨೫ ರಲ್ಲಿ ೯೦೦೦, ೨೬ ರಲ್ಲಿ ೧೦,೦೦೦ ಮತ್ತು ಈ ವರ್ಷ ೧೧೦೦೦ ಆಗಿದೆ.

ಮೈಸೂರಿನ ಇಬ್ಬರು ವೀರಶೈವ ಗೃಹಸ್ಥರು ಉತ್ತರಮಂಡಲಕ್ಕೆ ಹೋದರು. ರಾತ್ರಿ ಮಲಗಿದ ಕೋಣೆಯಲ್ಲಿ ಉರಿ ಹಾಕಿ ಬಾಗಿಲ ಗಟ್ಟಿಹಾಕಿ ಮಲಗಿದರು. ಬೆಳಗು ಮುಂಜಾನೆ ನೋಡುವಾಗ ಉಸುರುಗಟ್ಟಿ ಸತ್ತು ಹೋಗಿದ್ದರು.

ಕುಂಭಕೋಣೆಯಲ್ಲಿ ಒಬ್ಬ ಪೋಲಿಸ ಸಬ್ಬ ಇನ್ಸಪೆಕ್ಟರನು ತನ್ನ ಸ್ವಾಧೀನದಲ್ಲಿ ಕೈದಿಯನ್ನು ಹೊಡೆದನು. ಈ ಅಪರಾಧಕ್ಕಾಗಿ ಈತನನ್ನು ಬರತರ್ಫ ಮಾಡಿದ್ದಾರೆ.

ರಂಗೂನ ಪ್ರಾಂತದಲ್ಲಿ ಕಳ್ಳರನ್ನು ಹಿಡಿಯುವದಕಾಗಿ ಒಬ್ಬ ಸಬ್ಬ ಇನ್ಸಪೇಕ್ಟರನು ಹೋದನು. ಕಳ್ಳರು ಈತನನ್ನು ಕೊಂದು ನದಿಯಲ್ಲಿ ಚಲ್ಲಿದರು.

ನಾಗಪೂರದ ಸತ್ಯಾಗ್ರಹದಲ್ಲಿ ಇಬ್ಬರು ಚಿಕ್ಕ ಹುಡುಗರು ಶಸ್ತ್ರಗಳನ್ನು ಹಿಡಕೊಂಡು ಕಾಯದೇಭಂಗ ಮಾಡಿದರು. ಪೋಲಿಸರು ಇವನ್ನು ಕಸಗೊಂಡು ಇವರನ್ನು ಹೋಗಗೊಟ್ಟರು.

ಮುಂಬಯಿಯಲ್ಲಿ ನಡೆದಿರುವ ಹಾರವೆ- ನರಿಮನ್ನ ಪ್ರಕರಣದಲ್ಲಿ ಮಿ. ನರಿಮನ್ನರ ವತಿಯಿಂದ ಪಂಡಿತ ಮೋತಿಲಾಲರು ಡಿಫೆನ್ಸ ಹೇಳಲಿಕ್ಕೆ ಬರುವರು.

ಸ್ವಾಮಿ ಶ್ರದ್ಧಾನಂದರ ಕೊಲೆ ಮಾಡಿದ ಆರೋಪಿ ಅಬ್ದುಲ ರಶೀದನು ಪ್ರಿವ್ಹೀ ಕೌನ್ಸಿಲಕ್ಕೆ ಅಪೀಲು ಮಾಡುವನು. ದಿಲ್ಲಿಯ ಮುಸಲಮಾನರು ದ್ರವ್ಯ ಸಹಾಯ ಮಾಡುವರು.

ಪ್ರತಿ ವರ್ಷ ಬೆಂಗಳೂರಿಗೆ ೧ ಕೋಟಿ ೧೫ ಲಕ್ಷದ ಬಟ್ಟೆ ಬರುತ್ತದೆ. ಇದು ವಿಲಾಯತಿ ಮತ್ತು ಹಿಂದುಸ್ಥಾನದ ಗಿರಣಿಗಳಲ್ಲಿ ಹುಟ್ಟಿದ್ದಾಗಿರುತ್ತದೆ.

ಬಕರೀದ ಹಬ್ಬದ ದಿವಸ ಮುಸಲಮಾನರು ಆಕಳ ಮೆರವಣಿಗೆ ತೆಗೆಯಬಾರದು. ಅಥವಾ ಹಿಂದೂ ಜನರ ಮನಸ್ಸೊಯ್ಯುವಂಥ ಯಾವ ಕೃತ್ಯ ಮಾಡಬಾರದೆಂದು ಸುರತದ ಪ್ರಮುಖರಾದಂಥ ನಾಲ್ವತ್ತು ಜನ ಮುಸಲಮಾನರು ತಮ್ಮ ಜನರನ್ನುದ್ದೇಶಿಸಿ ಒಂದು ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಲಾಹೋರಿನಲ್ಲಿ ಒಂದು ಹಿಂದೂ ದೇವಾಲಯಕ್ಕೆ ಬೆಂಕಿ ಹಚ್ಚಿದ ಆರೋಪದಿಂದ ನಾಲ್ವರು ಮುಸಲಮಾನರನ್ನು ಹಿಡಿದಿದ್ದಾರೆ.

ಧಾರವಾಡ-

೧೫ ನೇ ತಾರೀಖಿನ ದಿವಸ ಇಲ್ಲಿಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಕಟ್ಟಡವನ್ನು ತೆರೆಯುವ ಸಮಾರಂಭವು ಮಿ. ಪೆಂಟರಸಾಹೇಬರಿಂದ ನೆರವೇರಿಸಲ್ಪಡುವದೆಂದು ತಿಳಿಯುತ್ತದೆ.

ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸ್ಕೂಲ ಕಮಿಟಿಯವರು ಮಿ. ಚಿಟಗೇರಿಯವರನ್ನೇ ಡ್ಯಪುಟಿ ಇನ್ಸ್ಪೇಕ್ಟರರಾಗಿ ನೇಮಿಸಿಕೊಳ್ಳುವಂತೆ ಮಂಜೂರಿ ಕೊಡಬೇಕೆಂದು ವಿದ್ಯಾಖಾತೆಯ ಮಂತ್ರಿಗಳಿಗೆ ಬರೆದುಕೊಂಡಿರುತ್ತಾರೆ.

ನೋಟೀಸಿನ ಉತ್ತರಾ

ರಾ॥ ರಾ॥ ಚಿಕ್ಕಪ್ಪಾ ಬಿನ ಫಕೀರಪ್ಪಾ ಕಮ್ಮಾರ ಸಾ॥ ಕರಿಮುತ್ತಿಹಳ್ಳಿ ತಾಲೂಕ ಕರಜಗಿ ಇವರಿಗೆ—

ನಿಂಗಪ್ಪಾ ಬಿನ್ನ ಸಣ್ಣಫಕೀರಪ್ಪಾ ಕಮ್ಮಾರ ಸಾ॥ ಶೀಲವಂತ ಆಲದಕಟ್ಟಿ ತಾಲ್ಕು ಕರಜಗಿ ಈತನು ಕೊಟ್ಟ ನೋಟೀಸು ಉತ್ತರವೇನಂದರೆ—

ನೀನು ತಾರೀಖು ೧೫-೫-೨೭ ನೇ ದಿವಸ ನನಗೆ ಕೊಟ್ಟ ನೋಟೀಸು ಧಾರವಾಡ ವಿಜಯ ವೃತ್ತ ಪತ್ರ ತಾರೀಖು ೨೪-೫-೨೭ ನೇದ್ದು ರಜಿಸ್ಟರ ಮೂಲಕ ಕಳಿಸಿದ್ದು ತಾರೀಖು ... ನೇ ದಿವಸ ಮುಟ್ಟಿ ಅದರ ಮಜಕೂರು ತಿಳಿದೆನು ಆದರೆ ನೀವು ಕೊಟ್ಟ ನೋಟೀಸು ಖರೇ ಸುಳ್ಳು ಆದೆ ನಮ್ಮ ನಿಮ್ಮ ... ದ್ವೇಷದ ಮೂಲಕಾ ಸುಳ್ಳು ಮಜಕೂರಿನ ನೋಟೀಸು ಕೊಟ್ಟಿರು ತ್ತೀರಿ ನಾನು ನಮ್ಮ ಅಕ್ಕ ನಿಂಗವ್ವಾ ಕೋಮ ರುದ್ರಪ್ಪಾ ಇವರ ಮಗಳಾದ ದ್ಯಾಮವ್ವಾ ಈಕಿನ್ನ ನಿಮಗೆ ... ಮಾಡಿ ಕೊಡೋದು ಕರಿಮುತ್ತಿಹಳ್ಳಿ ವ ಆಲದಕಟ್ಟಿ ಪಂಚರ ವಿದ್ಯಮಾನ ಮಾಡುವದೂ ಆಗಿಲ್ಲಾ ೨ ವರುಷ (ಯರಡು) ಬಿಟ್ಟಿ ಗೊತ್ತು ಮಾಡಿಲ್ಲಾ ಹಸರು ವಿಳ್ಯವು ಆಗಿಲ್ಲಾ ಜೇಷ್ಟ ಮಾಸದಲ್ಲಿ ಲಗ್ನ ಅಂಬೋದು ಆಗಿಲ್ಲಾ ಹೀಂಗೆ ಇದ್ದು ನೀನು ನಮಗೆ ಆಗದವರ ಮಾತು ಕೇಳಿ ಕೊಂಡು ವಿನಹಕಾರಣ ತಂಟೇದ ಮೂಲಕಾ ಸುಳ್ಳು ಮಜಕೂರು ನಮೂದಿಸಿ ಬಂಗಾರದ ದಾಗೀನಗಳು ತೀರಿ ತಂದಾನು ಸಹಾ ಕೊಟ್ಟಿಲ್ಲಾ ನೀನು ಕೊಟ್ಟ ಯಾವತ್ತು ಮಜಕೂರು ಸುಳ್ಳು ಅದೆ. ಮತ್ತು ಹಸರು ವಿಳೇನು ಆಗಿಲ್ಲಾ ವಿನಹಕಾರಣ ನೀನು ದಾವೇ ಮಾಡಿದರೆ ಆ ಖರ್ಚು ನಾನು ಕೊಡಲಿಕ್ಕೆ ಕಾರಣ ಇಲ್ಲಾ ನೀನು ಸುಳ್ಳು ನೋಟೀಸು ಕೊಟ್ಟು ನಮ್ಮನ್ನು ಬದನಾಮಿ ಮಾಡಿದ್ದರಿಂದ ನಿಮ್ಮ ಮೇಲೆ ನಮ್ಮ ಅಬರು ಲುಕಸಾನ ಮಾಡಿದ್ದರ ವಸಿಯಿಂದ ದಾವೇ ಮಾಡತೇವೆ ಆ ಖರ್ಚು ನೀನು ಕೊಡಬೇಕಾದೀತು ತಿಳಿಯೋದು.

ತಾರೀಖು ೩೦-೫-೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ನಿಂಗಪ್ಪಾ ಬಿನ ಸಣ್ಣಫಕೀರಪ್ಪಾ ಕಮ್ಮಾರ ಆಲದಕಟ್ಟಿ ಈತ ಮಾಡಿದ್ದು ಅದೆ.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
	೭—೦—೦ ರೂ
	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಿಸುವ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಶ್ರೀದತ್ತ ಮಂದಿರ ಧಾರವಾಡ.

ಹಾಲಗೇರಿ ಹತ್ತರ ಇರುವ ಶ್ರೀ ದತ್ತಾತ್ರಯ ದೇವರ ಬಾಬತು:—

ಸೆಪ್ಟಂಬರ ೧೯೨೩ ರಿಂದ ೩೧ ನೇ ಮಾರ್ಚ ೧೯೨೭ ಇಸ್ವಿ ವರೆಗೆ ಆದ ಜಮಾ ಖರ್ಚಿನ ತಖ್ತೆ

ಜಮಾ		ಖರ್ಚ	
೭೧೦-೦-೦	ನಾಟಕ ಮಂಡಳಿ ಕಡಿಂದಾ	೪೪-೭-೦	ದೇವಸ್ಥಾನದ ರಿಪೇರಿ.
೧೯೯೩-೧-೭	ವರ್ಗಣಿದಾರ ಕಡಿಂದಾ ವಸೂಲ ಆದದ್ದು.	೧೮೫-೦-೦	ಪೂಜಾರಿ ಪಗಾರ.
೨೮೦-೫-೧	ಕಾಣಿಕೆ ಬಾಬತ ವಸೂಲ ಬಂದದ್ದು.	೯-೬-೦	ಯಂತ್ರಿಯವರಿಗೆ.
೧೫೯-೦-೦	ಬ್ಯಾಂಕಿನಿಂದ ವಸೂಲ ಆದ ಬಡ್ಡಿ	೭-೮-೬	ಸದರ.
		೨೪೬-೫-೬	
		೩೦೯೬-೧-೨	ಶಿಲ್ಲಕು
೩೩೪೨-೬-೮		೩೩೪೨-೬-೮	

ಶಿಲ್ಕಿನ ತಪಶೀಲ.

೨೦೦೦-೦-೦	ಬ್ಯಾಂಕಿನಲ್ಲಿ ಫಿಕ್ಸ್ಡ್ ಡಿಪಾಜಿಟ್
೭೮೧-೧೩-೭	ಬ್ಯಾಂಕಿನಲ್ಲಿ ಕರಂಟ ಡಿಪಾಜಿಟ್
೧೭-೪-೭	ರೋಖ
೨೮೯೯-೧-೨	

ಮೇಲೆ ಬರೆದ ಲೆಖ್ಖಾ ಪಾವತಿ, ಕಿರ್ದಿ, ಬ್ಯಾಂಕಿನ ಪಾಸ ಬುಕ್ಕ, ಪಾವತಿ ವಗೈರೆ ತಪಾಸ ಮಾಡಿ ನೋಡಿದಲ್ಲಿ ಬರೋಬರಿ ಅದೆ.

ಟೀಪು ದೇವಸ್ಥಾನದ ಬಾಬತ ರಕಮು ಬಳವಂತರಾವ ಬಿಜಾಪೂರ ಇವರ ಕಡಿಗೆ ಅಜಮಾಸ ೨೫೦೦ ರೂಪಾಯಿ ಇದ್ದಂತೆ ಕಾಣುತ್ತದೆ. ಲೆಖ್ಖಾ ನೋಡಿ ಅದರಲ್ಲಿ ಇದ್ದ ರಕಮು ತಾಬಾ ತಗೋತೇವೆ. ಹಿಂದುಗಡೆಯಿಂದ ಆ ಬಾಬತ ಲೆಖ್ಖಾ ಪ್ರಸಿದ್ಧ ಮಾಡತೇವೆ.

ವಾಸುದೇವರಾವ ಘಾಟಕ

ಭೀಮಾಜಿ ತಿಮ್ಮಾಜಿ ಹಲ್ಯಾಳ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಚಿನ್ನ ಚಹಾ ಮತ್ತು ಕಾಫೀ ಪೂಡೀ ದೊರೆಯುವದಲ್ಲದೆ, ಚಿಲ್ಲರ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾನಾ ಕಡೆಗೆ ಮಾರಾಟವಾಗುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ನಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಟಪಾಲ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ತಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಪೋತಿ ಕಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಟಿಕಾರೆ,

ಮಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ಶನಿವಾರ ತಾರೀಖು ೪ ನೇ ಜೂನ ೧೯೩೨ ಸಂಚಿಕೆ ೧೧೬

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು [illegible] ಇದಕ್ಕೆ [illegible] ದೊಡ್ಡ ಗಾಲಿಗಳಿದ್ದು ಆರು ನೀರಿನ ಬಟ್ಟಿಗಳನ್ನು ಹಿಡಿಸುವ [illegible] ಗಾಡಿ ಇರುವದು. ಕಬ್ಬಿಣ [illegible] ಗಳುಂಟು. ಗಾಲಿಯ [illegible] ಇರುತ್ತದೆ. ಒಟ್ಟಿನ ಬಾರಿಗೆ ೨೪ ಗ್ಯಾಲನ್ ನೀರಿನ [illegible] ತರುತ್ತದೆ. [illegible] ನೀರಿನ [illegible] ಒಟ್ಟಿನ [illegible] ನೀರು [illegible] ನಮ್ಮ ಗಾಡಿಯು [illegible] ಬೆಲೆಯೊಂದಕ್ಕೆ ೨೯|| ರೂಪಾಯಿ.

ಹೆಚ್ಚಿನ ಸಂಗತಿ ಬಗ್ಗೆ [illegible] ಧಾರವಾಡ ಶಾಖೆಯಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ [illegible] ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ನಡೆಯುತ್ತದೆ. ಕ್ಯಾಶಿಯಾಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ ರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರ ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ಬಡ್ಡಿ ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ತಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರು ಆಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಹತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಕಾಲರಾ ಪಿಲ್ಸ.

—(೦)—

ಕಾಲರಾ (ಮಾರಿಕಾ) ರೋಗದ ಮೇಲೆ ಔಷಧವು ಬಹಳ ಗುಣಕಾರಕ ಇರುತ್ತದೆ. ೧೯೨೬ ನೇ ಇಸ್ವಿಯಿಂದ ನಮ್ಮ ಕರ್ನಾಟಕದ ಎಲ್ಲ ಭಾಗದಲ್ಲಿ ನಮ್ಮ ಔಷಧ ಉಪಯೋಗಿಸುತ್ತಿರುವದು ನೂರು ನೂರಾರು ರೋಗಿಗಳು ಗುಣ ಹೊಂದುತ್ತಿರುವರು. ಇಂಥ ಅಮೌಲ್ಯ ಔಷಧ ತರಿಸಿ ಗುಣ ಹೊಂದಿರಿ. ಕಿಮ್ಮತ್ತು ೨೫ ಗುಳಿಗೆಗೆ ೧ರೂ. ೧೦೦ಕ್ಕೆ ೩ರೂ. ಪತ್ತಾ:— ಮ್ಯಾ. ಆಯೌಷಧಿ ಕಾರಖಾನಾ ಕಿತ್ತೂರ ಪೋ. ಕಿತ್ತೂರ ಜಿ. ಬೆಳಗಾವ.

ಚಂದಾದಾರರಿಗೆ ಸೂಚನೆ.

—೦೦೦—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮ್ಮ ಮಟ್ಟು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೪-೬-೨೭ ನೇ ಇಸ್ವಿ

ವಿದ್ಯಾಖಾತೆಯ ಸುಲ್ತಾನಶಾಹಿ
ಅಂದರೆ
ಕರ್ನಾಟಕದ ಅಪಮಾನ.

ನಿನ್ನಿನ ಸಂಚಿಕೆಯಲ್ಲಿ ಪ್ರಸಿದ್ಧವಾದ ಇಲ್ಲಿಯ ಟ್ರೇನಿಂಗ ಕಾಲೇಜದ ಅಂಶವಾಗಿಯುಳಿದಿರುವ ಟ್ರೇನಿಂಗ ಸ್ಕೂಲಿನ ಮೇಲೆ ವಿದ್ಯಾಖಾತೆಯವರು ಕಂಡ ದಾಳಿಯ ವರ್ತಮಾನವನ್ನು ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ವಿದ್ಯಾಖಾತೆಗೆ ಸಂಬಂಧಿಸಿದವರೂ, ಸುಶಿಕ್ಷಿತರೂ ಓದಿ ದಿಗಿಲು ಬಿದ್ದಿದ್ದಾರೆ. ಇವರಂತೆ ಬೇರೆ ಊರವರೂ ಬೀಳುವದು ಸಹಜವದೆ. ಮಿ. ಡಾಯರೆಕ್ಟರಸಾಹೇಬರು ವೆಚ್ಚ ಕಡಿಮೆ ಮಾಡುವ ನಿಮಿತ್ತದಿಂದ ಈ ಟ್ರೇನಿಂಗ ಸ್ಕೂಲಿಗೆ ಮಣ್ಣು ಕೊಡುವ ಪೂರ್ವಾಲೋಚನೆ ಮಾಡಿದ್ದಾರೆಂದು ಹೇಳುವದಕ್ಕೆ ಯಾವ ಅಡ್ಡಿಯೂ ಇಲ್ಲ. ಒಂದು ತಿಂಗಳ ಹಿಂದೆ ಈ ಶಾಲೆಯ ಬಾಗಿಲ ಹಾಕುವ ವಿಚಾರವು ಆ ಸಾಹೇಬರ ದಿವ್ಯ ಮಿದುಳಿನಲ್ಲಿದ್ದಂತೆ ತೋರುವದಿಲ್ಲ. ಏಕಂದರೆ- ಈ ವರ್ಷ ೩೫ ವಿದ್ಯಾರ್ಥಿಗಳನ್ನು ತಕ್ಕೊಳ್ಳಬೇಕೆಂದು ಹುಕುಮು ಕಳಿಸಿದ್ದಲ್ಲದೆ, ಸ್ಕೂಲಿನಲ್ಲಿಯ ಶಿಕ್ಷಕರಿಗೆ ಬೆಳಗಾವಿ ಮತ್ತು ವಿಜಾಪೂರ ಜಿಲ್ಲೆಗಳಿಗೆ ಹೋಗಿ, ಟ್ರೇಂಡ ಅಲ್ಲದಂಥವರು ಹೇಗೆ ಕಲಿಸುತ್ತಾರೆಂಬದನ್ನು ನೋಡಲು ಸೂಚಿಸಿದ ಸಂಗತಿಯನ್ನು ನಮ್ಮ ಕೇಳಿಕೆಯಲ್ಲಿ ಬಂದಿತ್ತು. ಹುಬ್ಬಳ್ಳಿಯ ಮ್ಯುನಿಸಿಪಾಲಿಟಿಯವರು ಒಂಬತ್ತು ಜನ ಶಿಕ್ಷಕರನ್ನು ಇಲ್ಲಿಗೆ ಕಳಿಸಲು ಸಿದ್ಧತೆ ಮಾಡಿ, ಇದಕ್ಕೂ ಹೆಚ್ಚು ಜನರನ್ನು ತಕ್ಕೊಳ್ಳುವಿರಾ ಎಂಬದಾಗಿ ಜವಾಬದಾರ ಅಧಿಕಾರಿಯನ್ನು ಬಂದೇ ವಾರದ ಹಿಂದೆ ಕೇಳಿದ್ದರು. ಈ ಸಂಗತಿಯಿಂದ ಸ್ಕೂಲನ್ನು ಮುರಿಯುವ ವಿಚಾರವು ಬಹಳ ದಿವಸದ್ದಾಗದೆ, ಬೇಸಿಗೆ ಕಾಲದ ಬಿಡುಗಡೆಯ ಮತ್ತು ಅಡ್ಡ ಮಳೆಯಂತಾಗಿರುತ್ತದೆಂದು ಧ್ವನಿತವಾಗುತ್ತದೆ.

ಶಾಲೆ ಮುರಿಯುವಾಗ ತಾವು ಕರ್ನಾಟಕದ ಹಾನಿಯನ್ನು ಹೇಗೆ ಮಾಡುತ್ತೇವೆ? ಅದರಿಂದ ಕನ್ನಡಿಗರಿಗೆ ವ್ಯಸನವಾಗುವದೋ? ಅಪಮಾನವಾಗುವದೋ? ಎಂಬದನ್ನು ಡಾಯರೆಕ್ಟರಸಾಹೇಬರು ಮಾಡಿದಂತೆ ತೋರುವದಿಲ್ಲ. ಎಜ್ಯುಕೇಶನಲ ಇನ್ಸಪೆಕ್ಟರಸಾಹೇಬರು ಈ ಬಗ್ಗೆ ಅವರಿಗೆ ಯೋಗ್ಯ ಅಭಿಪ್ರಾಯ ಹೇಳಿದಂತೆ ಅಥವಾ ಆ ದೊಡ್ಡ ಸಾಹೇಬರು ಇವರನ್ನು ಕೇಳಿದಂತೆ ತೋರುವದಿಲ್ಲ. ಶಾಲೆ ತೆಗೆದು ಹಾಕುವಂಥ ಜವಾಬದಾರಿಯು ಲಷ್ಕರೀ ಕಾಯದೆಯಂತೆ ಹುಕುಮು ಮಾಡಿದ ಡಾಯರೆಕ್ಟರಸಾಹೇಬರ ಮೇಲೊಬ್ಬರ ಮೇಲೆಯೇ ಉಂಟೆಂದೂ ನಾವು ಹೇಳಲಾರೆವು. ಮಂತ್ರಿಗಳಿಗೆ ತಿಳಿಸಿ, ಅವರ ಅನುಮತಿ ಪಡಕೊಂಡು ಜರಾಸಂಧನ ಗದೆಯನ್ನು ಶಾಲೆಯ ಮೇಲೆ ಬೀಸಿದರೆಂದು ಹೇಳುವದು ಅಪ್ರಸ್ತುತವಾಗಲಾರದು.

ಮರಾಟಿ, ಗುಜರಾಥಿ ಮತ್ತು ಸಿಂಧಿ ಕಾಲೇಜಗಳು ಊರ್ಜಿತಾವಸ್ಥೆಯಲ್ಲಿರುವಾಗ- ಮತ್ತು ಅವಕ್ಕೆ ಯಾವ ಬಾಧೆಯೂ ಇರದಾಗ ಕರ್ನಾಟಕದ ಕಾಲೇಜವೇಕೆ ಸಾಯಬೇಕು? ಅದರ ಮರಣ ಕಂಪಿನಲ್ಲಿ ಹುಟ್ಟಿದ್ದ ಟ್ರೇನಿಂಗ ಸ್ಕೂಲೇಕೆ ಸಾಯಬೇಕೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ. ಕೌನ್ಸಿಲದಲ್ಲಿ ವಿದ್ಯಾಖಾತೆಯ ಮಂತ್ರಿಯಾದ ನಾಮದಾರ ದೇಸಾಯಿಯವರು ಉತ್ತರ ಕೊಟ್ಟ ಹೊರತು ಅಂತರಂಗವು ತಿಳಿಯಲಾರದು. ಕೌನ್ಸಿಲದಲ್ಲಿ ಎಷ್ಟೋ ಪ್ರಶ್ನೋತ್ತರಗಳು ನಡೆಯುತ್ತವೆ. ಪ್ರಶ್ನಗಳಿಗೆ ಬರುವ ಉತ್ತರಗಳು ಒಂದು ಬೆರಳಿನ ಮೇಲಿನ ಉಗುರನ್ನು ಮತ್ತೊಂದು ಬೆರಳಿನ ಮೇಲೆ ತರಿಸುವಂಥ ಕಣ್ಣುಕಟ್ಟು ಮಾತ್ರ ಆಗುತ್ತದೆಂಬ ಅನುಭವದ ಮಾತು. ಕರ್ನಾಟದ ಪರಿಯಿಂದ ಆರು ಜನ ಮೆಂಬರರಿದ್ದಾರೆ. ಇದು ಕರ್ನಾಟಕಕ್ಕಷ್ಟೇ ಪ್ರತ್ಯೇಕವಾಗಿರುವದರಿಂದ, ಆರೂ ಮೆಂಬರರು ಮಂತ್ರಿಗಳಿಗೆ ಪ್ರಶ್ನ ಮಾಡಬಹುದು. ಇವರು ಪ್ರಶ್ನ ಕೇಳುವರು. ಅವರು ಉತ್ತರ ಕೊಡುವರೆಂದು ಈ ನಾಡಿನವರು ಸುಮ್ಮನೆ ಕೂತರೆ- ಟ್ರೇನಿಂಗ ಸ್ಕೂಲು ಪುನರ್ಜನ್ಮ ಹೊಂದುವದೆಂದು ಬಗೆಯುವದು ತೀರ ತಪ್ಪು. ಆದುದರಿಂದ ಪ್ರಾಥಮಿಕ ಶಾಲೆಗಳ ಶಿಕ್ಷಣದ ಪ್ರತ್ಯಕ್ಷ ಸಂಬಂಧವುಳ್ಳಂಥ ಪ್ರತಿಯೊಂದು ಮ್ಯುನಿಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ ಲೋಕಲಬೋರ್ಡು ಈ ವಿಷಯವನ್ನು ಸರಕಾರದ ಮುಂದಿಡಬೇಕು. ಮತ್ತು ಅಲ್ಲಲ್ಲಿಯ ನಾಗರಿಕರು ಜಾಹೀರ ಸಭೆಗಳನ್ನು ಮಾಡಿ, ಇಂದು ಟ್ರೇನಿಂಗ ಸ್ಕೂಲನ್ನು ಉಗುಳಿ ಹಾಕುವರೆ, ಮುಂದೆ ಟ್ರೇನಿಂಗ ಕಾಲೇಜವನ್ನು ಸ್ಥಾಪಿಸುವಂತೆ ಸರಕಾರವನ್ನು ಒತ್ತಾಯಪಡಿಸಬೇಕು. ಅಂದರೆ ಟ್ರೇನಿಂಗ ಸ್ಕೂಲಿಗೆ ಬಂದ ಭ್ರಮರೋಗದ ಪರಿಹಾರವಾದೀತು.

ಜಪಾನದ ವರ್ತಮಾನಪತ್ರವಾದ ನಿಚಿನಿಚಿ ಎಂಬುವದು ಚೀನದಲ್ಲಿ ಇಂಗ್ಲಂಡಕ್ಕೂ ರಶಿಯಾಕ್ಕೂ ಯುದ್ಧವಾಗುವದೆಂದು ಸಾರುತ್ತದೆ.

ಮಾವಿನ ಹಣ್ಣಿನ ಪ್ರದರ್ಶನ.

ಈ ಮೊದಲು ಪ್ರಸಿದ್ಧ ಮಾಡಿದಂತೆ ನಿನ್ನಿನ ದಿವಸ ಶ್ರೀ. ಹುಲಕೋಟಿಯವರ ಅಧ್ಯಕ್ಷತೆಯಲ್ಲಿ ಮಾವಿನ ಹಣ್ಣಿನ ಪ್ರದರ್ಶನವು ತೆರೆಯಲ್ಪಟ್ಟಿತು. ಬೇರೆ ಬೇರೆ ಸ್ಥಳಗಳಿಂದ ೬೨ ಜಾತಿಯ ಹಣ್ಣುಗಳೂ ಕಾಯಿಗಳೂ ಬಂದಿರುತ್ತವೆ. ಇವುಗಳಲ್ಲಿ ಕಸಿ ಮಾಡಿದವೂ ಸ್ವಭಾವಸಿದ್ಧವಾಗಿ ಹುಟ್ಟಿದ ಗಿಡಗಳ ಹಣ್ಣುಗಳುಂಟು. ಕಸಿ ಮಾಡಿದ ಹಣ್ಣುಗಳಲ್ಲಿ ಮುಂಬಯಿಯಿಂದ ಬಂದ ಕಾವಸಜಿ ಎಂಬ ಹಣ್ಣುಗಳು ಒಂದೊಂದು ಎಂಟೆಂಟು ಸೇರುಂಟು. ಇವಕ್ಕೆ ನಮ್ಮಲ್ಲಿಯ ಸಣ್ಣೆಲ್ಲಿಯ ಕಾಯಿಯು ಎಡೆವಾಗಿ ಸರಿಗಟ್ಟಿವವು. ಕಸಿಮಿ ಹಣ್ಣುಗಳಲ್ಲಿ ಈ ದೇಶದಲ್ಲಿ ಆಲ್ಫಾನ್ಸೋ, ಫರನ್ಯಾಂಡೀಜ ಪಿಲ್ಲಿಪ ಸಂದವೆಂಬ ಹಣ್ಣುಗಳೇ ಪ್ರಸಿದ್ಧವಾಗಿವೆ. ಇವುಗಳಂತೆ ತೋಟಿಗರು ಮಲಗೋವಾ, ದೇವಗುಡ, ಲಂಗಡಾ ಬನಾರಸಿ, ಮತ್ತು ಪಾಯರಿ ಜಾತಿಗಳನ್ನೂ ಬೆಳೆಯಬಹುದು.

ದೇಶೀ ಹಣ್ಣುಗಳಲ್ಲಿ ಸಣ್ಣೆಲ್ಲಿ, ಗುಂಗಿಮಾವು ಬಾಳೆಮಾವು ಈ ಊರಲ್ಲಿ ಪ್ರಸಿದ್ಧವವೆ. ಕಣಬರಗಿಯಿಂದ ಗಾಂಧಿ, ಲಿಂಗರಾಜ, ಉತ್ಕೃಷ್ಟ ಜಾತಿಯ ಹಣ್ಣುಗಳು ಬಂದಿವೆ. ಇವು ರುಚಿಕಟ್ಟಿನಲ್ಲಿ ಆಲ್ಫಾನ್ಸೋದಂತಿರುತ್ತವೆ. ಕಣಬರಗಿಯವರು ಇವುಗಳ ಮೊದಲಿನ ಹಳ್ಳಿಗಾಡಿನ ಹೆಸರು ತೆಗೆದು, ಇವಕ್ಕೆ ಗಾಂಧಿ, ಲಿಂಗರಾಜ ಮುಂತಾದ ಪ್ರಸಿದ್ಧ ಹೆಸರುಗಳನ್ನು ಕೊಟ್ಟಿದ್ದಾರೆ.

ಹಲವು ಹಣ್ಣುಗಳು ನೋಡುವಂತಿವೆ. ಕವದಿಯ ಹಣ್ಣು. ಇದರ ಮೈತುಂಬ ಕವದಿಯಂತೆ ಅಲ್ಲಲ್ಲಿ ಛಿದ್ರಗಳುಂಟು. ಪಾಯಪೋಸ. ಇದು ಪಾದರಕ್ಷೆಯಂತುಂಟು. ಫೋಟಾಚಿ ಅಂದರೆ ಡೊಳ್ಳು ಹೊಟ್ಟೆಯಂತಿರುವದು. ಬಾಟಲಿಹಣ್ಣು ಇದು ಸೀಸೆಯಂತೆ ಇರುವದು. ಸುಗಂಧಿಯು ವಾಸನೆಯು ಸುಗಂಧವಾಗಿರುತ್ತದೆ.

ಈ ಪ್ರಕಾರ ಬಗೆಬಗೆಯ ಜಾತಿಯ ಹಣ್ಣುಗಳಿವೆ. ಧಾರವಾಡದ ತೋಟಗಳಿಂದ ಕೆಲವು ದೇಶೀ ಹಣ್ಣುಗಳು ಬಂದಿದ್ದು, ಇವು ಕಾಸವಜಿಯಷ್ಟೇ ಗಡುತರವಾಗಿರುತ್ತವೆ.

ಮಾವಿನ ಗಿಡಗಳನ್ನು ಹಚ್ಚಿ, ಅವುಗಳಿಂದ ದ್ರವ್ಯಸಂಪಾದನೆ ಮಾಡುವಂಥವರಿಗ ಪ್ರದರ್ಶನವು ಒಂದು ವಸ್ತುಪಾಠದಂತಾಗಿರುತ್ತದೆ.

ನಾಗಪೂರದ ಸತ್ಯಾಗ್ರಹಿಗಳಿಗೆ ಸಹಾಯವಾಗಿ ಮಧುರೆಯಲ್ಲಿ ತಮಿಳ ನಾಡಿನ ಸ್ವಯಂಸೇವಕರು ಕಾಯದೆಭಂಗವನ್ನು ತೀವ್ರವಾಗಿ ಪ್ರಾರಂಭಿಸತಕ್ಕೊಂಡಿದ್ದಾರೆ.

ಸೇನಾಧಿಪತಿ ಆವರಿಯ ವಿಚಾರಣೆ.

ನಾಗಪೂರದ ಕಾಯದೆಭಂಗದ ಸೈನ್ಯದ ಮುಖ್ಯಸ್ಥನಾದ ಶ್ರೀ ಮಂಚರಶಹಾ ಆವರಿಯ ವಿಚಾರಣೆಯು ತುರುಂಗದಲ್ಲಿ ನಡೆದಿದೆ. ಸರಕಾರದ ಪತಿಯಿಂದ ಐವರ ಸಾಕ್ಷಿಗಳಾದವು. ಇವರೆಲ್ಲರೂ ಆವರಿಯು ಭಯಂಕರ ಭಾಷಣ ಮಾಡಿದನೆಂದು ತಮ್ಮ ಜವಾಬಿನಲ್ಲಿ ಹೇಳಿದ್ದಾರೆ. ಆವರಿಯು ಡಿಫೆನ್ಸ ಕೊಟ್ಟಿಲ್ಲ. ವಿಚಾರಣೆ ನಡೆದಾಗ ಆನಂದ ವೃತ್ತಿಯಲ್ಲಿದ್ದನು. ಸಾಕ್ಷಿದಾರರಿಗೆ ಸವಾಲು ಹಾಕುವದಿಲ್ಲ. ಅಥವಾ ಕೋರ್ಟಿನಿಂದ ಏನಾದರು ಪ್ರಶ್ನೆ ಮಾಡಿದರೆ- ಅದಕ್ಕೆ ಉತ್ತರ ಕೊಡುವದಿಲ್ಲ. ವಿಚಾರಣೆ ಮುಗಿದ ಬಳಿಕ ಜವಾಬು ಬರೆದು ಕೊಡುವನು ಮತ್ತು ಭಾಷಣ ಮಾಡುವನು.

ಪಟ್ಟಣದ ಕೊತ್ತವಾಲನ ಮೊದಲನೆಯ ಸಾಕ್ಷಿಯಾಯಿತು. ಆತನು ಹೇಳಿದ್ದೇನಂದರೆ- ಆವರಿಯು ಪ್ರಜಾಸತ್ತಾತ್ಮಕ ಸೈನ್ಯ ಕಟ್ಟಿದ್ದಾನೆ. ಹ್ವಾಲಂಟಿಯರರನ್ನು ಸೇರಿಸಿಕೊಂಡಿದ್ದಾನೆ. ಈ ಸೈನ್ಯದ ಕಪ್ತಾನನೆಂದು ನಾಮಧಾರಣ ಮಾಡಿ, ಆಮದ್ದಿಯ ಕೆಳಗೆ ಜಾಹೀರ ಸಭೆಗಳ ನೋಟೀಸು ತೆಗೆದಿದ್ದಾನೆ. ಶಸ್ತ್ರದ ಕಾಯದೆಯನ್ನು ಮುರಿದು ಆ ವಿಷಯಕವಾದ ಚಳವಳಿ ಪ್ರಾರಂಭಿಸಿದ್ದಾನೆ. ಪ್ರಜಾಸತ್ತಾತ್ಮಕರು.

ನಹಿರಖನಿ, ನಹಿರಖನಿ
ಅಂಗರೇಜ ಜಾತೀವು ನಹಿರಖನಿ
ಅಂಗರೇಜ ಡಾಕು ನಹಿರಖನಿ

ಎಂಬದಾಗಿ ಹಾಡುತ್ತಾರೆ. ಇದರ ಪರಿಣಾಮವು ಹುಡುಗರ ಮೇಲಾಗಿ, ಅವರು ಊರ ತುಂಬ ಈ ಹಾಡನ್ನು ಹಾಡುತ್ತಾರೆ

ಇವರ ನಂತರ ಸಬನಾಯಿಕರ ಸಾಕ್ಷಿಯಾಯಿತು. ಇವರು ಪೋಲೀಸ ಇನ್ಸಪೇಕ್ಟರರಾಗಿದ್ದಾರೆ ಇವರು ಆವರಿಯ ಭಾಷಣವನ್ನು ಪೂರಾ ಬರಕೊಳ್ಳಲಿಲ್ಲ. ಮುದ್ದೆಯ ಮಾತುಗಳನ್ನಷ್ಟೇ ಬರಕೊಂಡಿದ್ದಾರೆ.

"ಯುದ್ಧ ಮಾಡದೆ ಯಾರು ಸ್ವರಾಜ್ಯ ಗೆದೆಯರು? ನಾವು ಬಂಡಾಯ ಮಾಡಿ, ಬ್ರಿಟಿಶ ಸರಕಾರವನ್ನು ಡಬ್ಬು ಹಾಕುವದು ನಮ್ಮ ಹಕ್ಕು ಆಗಿರುತ್ತದೆ. ಇಂಗ್ಲಿಷ ಜನರು ನಮ್ಮ ಜನರನ್ನು ಕೊಲ್ಲುತ್ತಾರೆ. ಅಂದ ಬಳಿಕ ಅವರನ್ನು ನಾವೇಕೆ ಕೊಲ್ಲಬಾರದು?"

ಎಂಬದಾಗಿ ಆವರಿಯು ಭಾಷಣ ಮಾಡಿದ್ದಾರೆಂದು ತಮ್ಮ ಜವಾಬಿನಲ್ಲಿ ಹೇಳಿದ್ದಾರೆ

ಮೈಸೂರಿನ ಎದ್ಯಾಖಾತೆ [illegible] ಕ ಶಾಲೆಗಳಲ್ಲಿ ಧರ್ಮಶಿಕ್ಷಣ [illegible] ಮಾಡುತ್ತಿದ್ದಾರೆ.

ಜೈನ ತರುಣರಿಗೆ ಮುನಿ ದೀಕ್ಷೆ.

—o—

ಗುಜರಾಥ ಪ್ರಾಂತದಲ್ಲಿ ಜೈನ ಮುನಿಗಳು ವಿವಾಹಿತ ತರುಣರಿಗೆ ಸನ್ಯಾಸಿಯ ಆಶ್ರಮ ಕೊಟ್ಟು, ಅವರನ್ನು ವಿರಕ್ತ ಮಾಡುವ ದೊಡ್ಡ ಗೊಂದಲವೆದ್ದಿದೆ; ಅನೇಕ ತರುಣರು ಮುನಿಗಳ ಮರುಳು ಮಾಡುವ ಮಾತಿಗೆ ಮೋಹಪಟ್ಟು, ಮುನಿಯಾಗಿ, ಸರ್ವಸಂಗತ್ಯಾಗ ಮಾಡಿ ಕೂತಿದ್ದಾರೆ. ಹೀಗಾಗಿ ಅನೇಕ ಕುಟುಂಬಗಳ ಮೇಲೆ ಆಕಾಶದ ಕೊಡ್ಡೆ ಕಡಕೊಂಡು ಬಿದ್ದಂತಾಗಿದೆ. ಅಹಮದಾಬಾದಿನಲ್ಲಿ ವೃದ್ಧ ಮುನಿಗಳು ತರುಣರಿಗೆ ದೀಕ್ಷೆ ಕೊಟ್ಟು, ಅವರನ್ನು ಖಂಬಾಯತ ಮೊದಲಾದ ಸಂಸ್ಥಾನಗಳಿಗೆ ಕರಕೊಂಡು ಹೋಗಿದ್ದಾರೆ. ಕುಟುಂಬಘಾತವಾದ ಜನರು ಮುಖ್ಯವಾಗಿ ಅವರ ಹೆಂಡಂದಿರು ತಮ್ಮ ಗಂಡಂದಿರನ್ನು ತಮ್ಮ ವಶಕ್ಕೆ ಕೊಡಬೇಕೆಂದು ಅಧಿಕಾರಿಗಳ ಕಡೆಗೆ ಅರ್ಜಿ ಮಾಡಿಕೊಂಡಿದ್ದಾರೆ.

ಪಾಯೋನಿಯರ ಬ್ಯಾಂಕಿನ ಸಭೆಯಲ್ಲಾದ ಗಲಭೆ.

—o—

ಬೆಳಗಾವಿಯಲ್ಲಿ ಪಾಯೋನಿಯರವೆಂಬ ಹೆಸರಿನ ಸಹಕಾರದ ಬ್ಯಾಂಕೊಂದು. ಇದರ ವಾರ್ಷಿಕ ಸಭೆಯು ನಾಮದಾರ ಬೆಳವಿಯವರ ಅಧ್ಯಕ್ಷತೆಯಲ್ಲಾಯಿತು. ಸಾವಿರ ಜನ ಮೆಂಬರರು ಸಭೆಗೆ ಬಂದಿದ್ದರು.

ನೂರು ರೂಪಾಯಿಗಿಂತ ಕಡಿಮೆ ಸಂಬಳವಿದ್ದವರಿಗೆ ಬೋನಸ ಕೊಡಬೇಕೆಂದು ಬಹುಮತದಿಂದ ಠರಾವಾಯಿತು. ಧರ್ಮಾದಾಯ ರಕಮೂ ಕಡಿಮೆ ಮಾಡಲ್ಪಟ್ಟಿತು

ಇದರ ಡಾಯರೆಕ್ಟರ ಚುನಾವಣೆಯು ಮ್ಯುನಿಸಿಪಾಲಿಟಿಯ ಚುನಾವಣೆಯಂತಾಗುತ್ತದೆ. ಡಾಯರೆಕ್ಟರರಾಗುವಂಥವರು ಕುದುರೆ- ಆನೆ, ಕತ್ತಿ, ಮುಂತಾದ ಚಿನ್ಹಗಳನ್ನಿಟ್ಟುಕೊಂಡು, ಮತಪತ್ರಿಕೆಗಳನ್ನು ಮೆಂಬರರ ಕಯ್ಯಲ್ಲಿ ಕೊಡುವರು. ಈ ಪ್ರಕಾರ ಆಗಬೇಕಾಗಿದ್ದ ಚುನಾವಣೆಯು ಕಾಲಕ್ಕೆ ಗೊಂದಲವೆದ್ದು, ಚುನಾವಣೆಯಾಗದೆ, ಸಭೆಯು ವಿಸರ್ಜನವಾಯಿತು.

ಆಸಾಮದಲ್ಲಿಯೂ ಮಲಿಯಾಳ-

ಆಸಾಮ ದೇಶದಲ್ಲಿ ಮಲಿಯಾಳಕ್ಕಿಂತ ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯ ಮತ್ತು ದಾಯಾದಿ ಹಕ್ಕು ಉಂಟು. [illegible] ವಿವಾಹದ ಪೂರ್ವದಲ್ಲಿ [illegible] ದ್ರವ್ಯವು ತಾಯಿಗೆ ಹೋಗುವದು. [illegible] ಹೆಂಡತಿಗೆ ಹೋಗುವದು. ಈತನ ಹಕ್ಕು ಸ್ಥಾವರ ಜಂಗಮ ಆಸ್ತಿಯ ಮೇಲೆ ಹೆಚ್ಚು ಇರುವದಿಲ್ಲ. ಮಲಿಯಾಳದಲ್ಲಿ ಅಳಿಯ ಸಂತಾನಕ್ಕೆ ಅಂದರೆ- ಗಂಡಸರಿಗೆ ಆಸ್ತಿ ಹೋಗುವದು. ಆದರೆ ಅಲ್ಲಿ ಎಲ್ಲ ಬಾಧ್ಯತೆಯು ಸ್ತ್ರೀಯರದೇ ಆಗುತ್ತದೆ.

ಅಧ್ಯಕ್ಷರ ಮೇಲೆ ಬಾಂಬು-

ಆಯರ್ಲಂಡದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆ ನಡೆದಿದೆ. ಅಧ್ಯಕ್ಷರಾದ ಮಿ. ಕಾಸಗ್ರೇವ್ಹ ಸಾಹೇಬರು ಚುನಾವಣೆಯ ಸಂಬಂಧವಾಗಿ ಭಾಷಣ ಮಾಡುತ್ತಿದ್ದಾಗ, ಪ್ರೇಕ್ಷಕರು ದೊಡ್ಡ ಗೊಂದಲವೆಬ್ಬಿಸಿ, ಅವರನ್ನು ಹರವೀಸೊಪ್ಪು ಮಾಡಿದರು. ಒಬ್ಬ ಹುಡುಗನಂತೂ ಇವರ ಮೇಲೆ ಹೊಗೆ ಮುಸುಕುವ ಬಾಂಬು ಚಲ್ಲಿದನು. ಪೋಲೀಸರು ಬಲವಂತಿಕೆಯಿಂದ ಜನರನ್ನು ಚದರಿಸಿ; ಹುಡುಗನನ್ನು ದಸ್ತಗಿರ ಮಾಡಿದ್ದಾರೆ.

ಶ್ರೀಮನ್ಮೈಸೂರ ಮಹಾರಾಜರು ನಂದೀಬೆಟ್ಟಕ್ಕೆ ಹೋಗಿ, ಮಹಾತ್ಮರ ಕೂಡ ಪುಷ್ಕಳ ಹೊತ್ತಿನ ತನಕ ಸಂಭಾಷಣೆ ಮಾಡಿದರು. ಮಹಾತ್ಮರು ಬೆಂಗಳೂರಿಗೆ ಬಂದನಂತರ, ಮಹಾರಾಜರ ಬಂಗಲೆಯಲ್ಲಿ ವಾಸವಾಗಿ, ಅವರಿಂದಲೇ ಆತಿಥ್ಯಸತ್ಕಾರ ಹೊಂದುವರು.

ಬಡೋದೆ ರಾಜ್ಯದಲ್ಲಿ ಅನೇಕ ಜನ ಮುಸಲಮಾನರು ಒಮ್ಮೆಯಲೆ ಹಿಂದೂ ಧರ್ಮ ಸ್ವೀಕಾರ ಮಾಡಿದರು. ನೌರೋಜಿ ಕ್ಯವನ್ನು ಡಾಕ್ಟರ ಮುಂಜೆಯವರು ಸ್ವೀಕರಿಸಿದ್ದರು. ದಂಗೆಯಾಗಬಾರದೆಂದು ಸರಕಾರದವರು ಪೋಲೀಸ ಬಂದೋಬಸ್ತು ಇಟ್ಟಿದ್ದರು.

ಮನೆಯ ಮಾರಾಟ-

ಧಾರವಾಡ ಹಾಲಗೇರಿಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೯೮ನೆಯ ಮನಿ ಶ್ರೀ. ಸೌ|| ಗಂಗಾಬಾಯಿ ಕೌಲಗಿ ಇವರ ಹೆಸರಿನಿಂದಿರುವದನ್ನು ಮಾರತಕ್ಕದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳುಳ್ಳದ್ದಿರುತ್ತದೆ ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹೀ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ ಆರ. ಕುಲಕರ್ಣಿ.
c/o ಬಿ ಆರ.. ಕೌಲಗಿ.
ಮೋತಿಲಾಲಗಲ್ಲಿ, ಧಾರವಾಡ

ನೋಟೀಸು

—o—

ಫಕೀರಪ್ಪ ತಂದಿ ಗದಿಗೆಪ್ಪಾ ಅಣ್ಣಿಗೇರಿಯವರ ಸಾಕೀನ ಯಲಗುಪ್ಪಿ ಈತನಿಗೆ–

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡಿದ ಬಸವ್ವಾ ಕೋಂ ಫಕೀರಪ್ಪ ಅಣ್ಣಿಗೇರಿಯವರ ಹಾಲಿವಸ್ತಿ ಶಿರೋಳ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ–

ನೀನು ನನ್ನ ಮದವಿಯ ಗಂಡನಿದ್ದು, ನಿನ್ನಿಂದ ನನಗೆ ಮೂರು ಮಕ್ಕಳಾಗಿವೆ. ನೀನು ಕೆಟ್ಟ ಹಾದಿಗೆ ಬಿದ್ದು, ನನ್ನನ್ನು ಮನೀಬಿಟ್ಟು ಹೊರಗೆ ಹಾಕಿದ ಆಗಿನಿಂದ ನಾನು ಸಾಹುಕಾರರಲ್ಲಿ ಗೇಣಿ ಮಾಡಿ, ಹೊಟ್ಟಿ ತುಂಬಿಕೋತಾ ಇದ್ದೇನೆ. ನಿನಗೆ ದೈವದವರು ಮತ್ತು ಬೇರೆ ಸಂಭಾವಿತರು ನನ್ನನ್ನು ಮತ್ತು ನನ್ನ ಮಕ್ಕಳನ್ನು ಕರಕೊಂಡು ಹೋಗಿ ಪ್ರಪಂಚ ಮಾಡಲಿಕ್ಕೆ ಪುನ್ಹಃ ಬುದ್ಧೀ ಹೇಳಿದರು. ಆದರೆ– ನೀನು ದಿನಮೇಕ ಮಾಡತಾ ಬಂದಿ ನೀನು ಇಂದಿಲ್ಲ ನಾಳೆ ಕರಕೊಂಡು ಹೋಗುವಿಯೆಂದು ಸಾಹುಕಾರರಲ್ಲಿ ಸಾಲಾ ಮಾಡಿ ಹೊಟ್ಟಿ ತುಂಬಿಕೊಂಡಿರತೇನೆ ಆ ಸಾಲದ ರಕಮು ಮೂರು ನೂರು ರೂಪಾಯಿಯಾಗಿದೆ ಈಗ ಸಾಲಗಾರರ ತಗಾದಿ ಆಗಿರತದೆ ಮುಂದೆ ಸಾಲ ಹುಟ್ಟವಲ್ಲದು ಆದ್ದರಿಂದ ಈ ನೋಟೀಸು ಕೊಡುವ ಅಗತ್ಯವುಂಟಾಯಿತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಸಾಲಾ ತೀರಿಸಿ, ನನ್ನನ್ನು ಮತ್ತು ಮಕ್ಕಳನ್ನು ಚಲೋ ರೀತಿಯಿಂದಾ ಇಟ್ಟುಕೊಂಡು ಪ್ರಪಂಚ ಮಾಡತೇನೆಂದು ಪಂಚರ ಜಾಮೀನು ಕೊಟ್ಟು, ಕರಕೊಂಡು ಹೋಗಬೇಕು ಇದಕ್ಕೆ ತಪ್ಪಿದರೆ– ನಾನು ಎರಡನೆಯವನನ್ನು ಉಡಿಕೆ ಮಾಡಿಕೊಳ್ಳುವೆನು ಆ ನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಹೆಣ್ಣುಮಕ್ಕಳ ಮೇಲೆ ಬಿಲಕೂಲ ನಡೆಯಲಾರದು. ಮತ್ತು ಗಂಡು ಮಗನ ಪಾಲಕೀ ಹಕ್ಕು ನಿನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಇರುತ್ತದೆ. ನಿನ್ನ ಕಡೆಯಿಂದ ನನ್ನ ಸಾಲಾ ತೀರಿಸುವದಾಗದಿದ್ದರೆ– ನಾನು ಕಾಯದೇಶೀರ ಇಲಾಜ ಮಾಡುವೆನು ಆ ಬಾಬತು ಹತ್ತುವ ಯಾವತ್ತು ಖರ್ಚಿನ ಬೋಜಾ ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲುಂಟು ತಿಳಿಯುವದು.

ತಾ॥ ೩ ಜೂನ ೧೯೩೭ ನೇ ಇಸವಿ

ಈ ಎಡ್ಡ ಹೆಬ್ಬಟ್ಟಿನ ಗುರ್ತ ಬಸವ್ವಾ ಕೋಂ ಫಕೀರಪ್ಪ ಅಣ್ಣಿಗೇರಿಯವರ ಈಕಿ ಕೈದು ಇರುತ್ತದೆ.

ಒಕ್ಕಲಿಗನು ನೇಗಿಲ ಹಿಡಿದಂತೆ.

ದಿ ಮೈಸೂರ ಅಗ್ರಿಕಲ್ಚರಲ್ ಡೇರಿಫಾರಂ ಕಂಪನಿ ಲಿಮಿಟೆಡ್ ಆರ್ಗನಾಯಿಜಿಂಗ ಇನಸ್ಪೇಕ್ಟರ ಜಿಲ್ಲಾ ಧಾರವಾಡ ಡಿಸ್ಟ್ರಿಕ್ಟ ಹೆಡಕ್ವಾರ್ಟರ ಹುಬ್ಬಳ್ಳಿ ಇವರ ಆಫೀಸಿನಿಂದ ತಿಳಿಸುವದೇನಂದರೆ—

೧ ನಮ್ಮ ಡಿಪಾರ್ಟಮೆಂಟ ಮೂಲಕ ಇಡೀ ಜಿಲ್ಲೆಯಲ್ಲಿ ನಮ್ಮ ಅಗ್ರಿಮೆಂಟ ಪ್ರಕಾರ ಕೆಲಸ ಮಾಡಿದಲ್ಲಿ ದರ ತಿಂಗಳಿಗಂದಕ್ಕೆ ರೂಪಾಯಿ ನಾಲ್ವತ್ತು (೪೦—೦—೦) ರಂತೆ ಪಗಾರ ದೊರಿಯುತ್ತದೆ. ಇಷ್ಟು ಇದ್ದವರು ಲಾಯಖಿ ಸರ್ಟಿಫಿಕೇಟಿನಿಂದ ಈ ತಿಂಗಳ ಆಖೈರ ವರೆಗಾಗಿ ನಮ್ಮ ಮಾ ಅಗರ ಪತ್ರದ್ವಾರ ತಿಳಿದುಕೊಳ್ಳಬಹುದು.

೨ ಇದಲ್ಲದೆ ಈ ಹಿಂದೆ ಇದೇ ಡಿಪಾರ್ಟಮೆಂಟಿನಲ್ಲಿ ದನಕರುಗಳನ್ನು ವ ಶೇರುಗಳನ್ನು ಕೊಂಡ ಬಗ್ಗೆ ಯಾರಿಗೆ ಪಕ್ಕಾ ಪಾವತಿಗಳು ವ ಸರ್ಟಿಫಿಕೇಟುಗಳು ಮಸ್ಥಿರ ಮುಟ್ಟಿರುವದಿಲ್ಲವೋ ಅಂಥವರು ಕೂಡಲೆ ಒಂದು ತಿಂಗಳೊಳಗಾಗಿ ತಮ್ಮ ತಂಟೆಗಳನ್ನು ಸಮಕ್ಷಮ ಅಗರ ಲೇಖಿ ಮೂಲಕ ನಮ್ಮ ಆಫೀಸಿಗೆ ತಿಳಿಸಿದಲ್ಲಿ ಯೋಗ್ಯ ತಜವೀಜು ಮಾಡಿಸಿ ಕೊಡಲಾಗುತ್ತದೆ. ಹಣ ಮೊದಲೇ ಪಾವತಿಯಾದದ್ದು ಇದೇ ಡಿಸ್ಟ್ರಿಕ್ಟ ಹದ್ದಿನಲ್ಲಿದ್ದು, ಹುಬ್ಬಳ್ಳಿ ಅರ್ಬನ ಕೋ. ಅಪರೇಟಿವ್ಹ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಲಾಗುತ್ತದೆ. ತಿಳಿಯುವದು.

ಸ್ಪೇಶಲ ಸೂಚನೆ— ಒಂದು ತಿಂಗಳಲ್ಲಿ ೫೦ ದನಗಳ ವಿಕ್ರಿ ಇಳಿಸುವಂಥ ನಮ್ಮ ಏಜಂಟರಿಗೆ ಒಂದು ಬಂಗಾರದ ಪದಕವನ್ನು ಬಹುಮಾನವಾಗಿ ಕೊಡುವೆವು. ಏಜಂಟರಾಗುವಂಥವರಿಗೆ ಬಂಗಾರದಂಥ ಸಮಯ.

ಹುಬ್ಬಳ್ಳಿ
೧—೬—೧೯೩೭

A Laxmanrao
Organising Inspector,
Dharwar District
[Harapanally Street. Hubli]

ಜಾಹೀರಾತು.

ಪ್ರಿಯ ಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೆಳ್ಳಿ ಚಹಾ ಮತ್ತು ಕಾಫೀ ಸೋಮೀ ದರದಿಂದ ಸಿಗುವದಲ್ಲದೆ ಚಿಲ್ಲರೆ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲತ್ತು ಕಡೆಗೆ ಸಿಗುವದಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೪ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ—

ಬಸಪತ ಭವಾನರಾವ ಲೋಖಂಡೆ ಜೋತಿ ಕಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಕರ್ನಾಟಕ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ರವಿವಾರ ತಾರೀಖು ೫ ನೇ ಜೂನ ೧೯೩೨ | ಸಂಚಿಕೆ ೧೧೭

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಬಕೆಟ್ಟುಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಕಾಲುಗಳುಂಟು. ಗಾಲಿಗಳು ವ್ಯಾಸವು ೩೦ ಇಂಚು ಇರುತ್ತದೆ. ಅದರಿಂದ ಹಾದಿಗೆ ೩೪ ಗ್ಯಾಲನ್ ನೀರಿನ ಭಾರವನ್ನು ಒಬ್ಬ ಹುಡುಗನಾಗಿ ತರುತ್ತದೆ. ಗಾಡಿಕ್ಕೆ ನೀರಿನ ಕೊಡ ಕೇಲು ಎಲ್ಲ ಕಡೆಗೂ ಉಂಟು. ಅದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—०००—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟೀವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹೊಂದಿಗೆಯು ಆರು ಲಕ್ಷದ ಮೇಲುಂಟು, ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ನಡೆಯುವವು. ಕಾಯಮ್ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವವು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಪಂಢರರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—०—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—०—

ತಿಂಗಳ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದಾವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ದುಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಮನೆಯ ಮಾರಾಟ.

—(०)—

ಧಾರವಾಡ ಹಾಲಗೇರಿಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೯೮ನೆಯ ಮನಿ ಶ್ರೀ. ಸೌ॥ ಗಂಗಾಬಾಯಿ ಕೌಜಗಿ ಇವರ ಹೆಸರಿನಿಂದಿರುವದನ್ನು ಮಾರಾಟಕ್ಕಿಡಲಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳುಳ್ಳದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹಿ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ,
c/o ಬಿ ಆರ. ಕೌಜಗಿ.
ಮೋತಿತಲಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ- ೫-೬-೨೭ ನೇ ಇಸ್ವಿ

ಟ್ರೇನಿಂಗ ಕಾಲೇಜದ ಕೊಲೆ.

ಕನ್ನಡಿಗರು ಬುದ್ಧಿವಂತರಾಗಬಾರದೇ ?

ಡಾಕ್ಟರ ಪರಾಂಜಪೆಸಾಹೇಬರು ವೆಚ್ಚ ಕಡಿಮೆ ಮಾಡುವ ಭರದಲ್ಲಿ ಧಾರವಾಡದ ಟ್ರೇನಿಂಗ ಕಾಲೇಜದ ಕೊಲೆ ಮಾಡಿದ್ದು, ಮತ್ತು ಈಗಿನ ಮಂತ್ರಿವರ್ಯರು ಟ್ರೇನಿಂಗ ಸ್ಕೂಲನ್ನು ಮೂರಾಬಟ್ಟೆ ಮಾಡುವದು ಕರ್ನಾಟಕದ ಸಾಮಾನ್ಯ ಹಾನಿಯಲ್ಲ. ಕನ್ನಡಿಗರು ಯಾವಾಗಲು ಬುದ್ಧಿವಂತರಾಗಬಾರದು. ಅವರು ಅಜ್ಞಾನ ಸ್ಥಿತಿಯಲ್ಲಿಯೇ ಇರಬೇಕೆಂದು ಅವರ ಮನೇಚ್ಛೆಯಾಗಿರುತ್ತದೆಂದು ಸಹಜವಾಗುತ್ತದೆ. ಟ್ರೇನಿಂಗ ಕಾಲೇಜ ಮುರಿಯುವದರಿಂದ, ಕನ್ನಡಿಗರು ದಡ್ಡ ದಬಕರಾಗುವದು ಹೇಗೆಂದು ಯಾರಾದರು ಪ್ರಶ್ನೆ ಮಾಡಿದರೆ- ಅವರು ನಿಃಸಂಶಯವಾಗಿ ಬುದ್ಧಿಗೇಡಿಯಾಗುತ್ತಾರೆ.

ಟ್ರೇನಿಂಗ ಕಾಲೇಜವೆಂದರೆ- ಇಂಗ್ರೇಜಿಯ ಆರ್ಟ್ಸ ಕಾಲೇಜವೆಂದಾಗುತ್ತದೆ. ಬಿ. ಎ. ಪರೀಕ್ಷೆಯು ಇಂಗ್ಲಿಷದಲ್ಲಿ ಪಾಂಡಿತ್ಯವನ್ನು ದೊರೆಕಿಸಿದ ಸರ್ಟಿಫಿಕೇಟು ಆಗುತ್ತದೆ. ಅದೇ ಪ್ರಕಾರ ಟ್ರೇನಿಂಗ ಕಾಲೇಜದಲ್ಲಿ ಮೂರನೇ ವರ್ಷ ಪಾಸಾದವರು ಕನ್ನಡದಲ್ಲಿ ಬಿ. ಎ. ಆಗಿ ಪಾಂಡಿತ್ಯ ಸಂಪಾದನೆ ಮಾಡಿದಂತಾಗುತ್ತದೆಂದು ತಿಳಿಯತಕ್ಕದ್ದು. ಕನ್ನಡಿಗರು ಈ ತರದ ವಿದ್ವತ್ತೆಯನ್ನು ಹೊಂದಿ, ಕನ್ನಡ ಭಾಷೆಗಳಲ್ಲಿ ವಿದ್ವಾಂಸರೆನಿಸಿಕೊಳ್ಳಬಾರದೆಂದು ಡಾಕ್ಟರ ಸಾಹೇಬರು ಈ ಕಾಲೇಜವನ್ನು ಕೊಂದರೆಂದು ಏಕೆ ಹೇಳಬಾರದು?

ಸರಕಾರದವರು ಹೊಸದಾಗಿ ಒಂದು ನಿಯಮ ಮಾಡಿ, ಕುಲಕರ್ಣಿಯಾಗತಕ್ಕವರು ಕನ್ನಡದಲ್ಲಿ ಮುಲಕೀ ಪರೀಕ್ಷೆ ಪಾಸಾಗಲಿಕ್ಕೇ ಬೇಕೆಂದು ನಿರ್ಬಂಧಪಡಿಸಿದ್ದಾರೆ. ಸರಕಾರದ ಈ ಠರಾವಿನ ದೆಸೆಯಿಂದ ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳ ಸಂಖ್ಯೆಯು ಸಾವಿರದ ತನಕ ಬಂದಿರುತ್ತವೆ. ಪ್ರತಿವರ್ಷ ಈ ಸಂಖ್ಯೆಯು ಬೆಳೆಯಬಹುದಾಗಿದೆ. ಇವರೆಲ್ಲರಿಗೂ ಕಲಿಸುವಂಥ ಶಿಕ್ಷಕರು ಎಲ್ಲಿಂದ ಬರುವರು? ಟ್ರೇನಿಂಗ ಕಾಲೇಜದಲ್ಲಿ ಎರಡನೇ ಮತ್ತು ಮೂರನೆಯ ವರ್ಷ ಪಾಸಾದವರು ಅಲ್ಲಲ್ಲಿ ಅನೇಕ ಜನ ಶಿಕ್ಷಕರಿದ್ದಾರೆ. ಅವರ ಸಂಖ್ಯೆಯು ಪ್ರತಿವರ್ಷ ಕಡಿಮೆಯಾಗುತ್ತಾ ಹೋಗುವದು. ಕೆಲವರು ಪೆನ್ಶನ ತಕ್ಕೊಳ್ಳುವರು. ಕೆಲವರು ಅಕಾಲ ಮೃತ್ಯು ಹೊಂದುವರು. ಕೆಲವರು ಫರ್ಲೋ ತಕ್ಕೊಳ್ಳುವರು. ಕೆಲವರು ಬೇರೆ ಬೇರೆ ಕೆಲಸ ಹಿಡಿಯುವರು. ಹೀಗೆ ಒಂದಿಲ್ಲೊಂದು ರೀತಿಯಿಂದ ಟ್ರೇನ್ಡ ಶಿಕ್ಷಕರ ಸಂಖ್ಯೆಯು ಪ್ರತಿವರ್ಷ ಕಡಿಮೆಯಾಗಿ, ಹತ್ತೆಂಟು ವರ್ಷಗಳಲ್ಲಿ ಇವರ ಅಂಶ ಕೂಡ ಇಲ್ಲದಂತಾಗುತ್ತದೆ. ಇವರ ಕೊರತೆಯೆಂದರೆ- ಮುಲಕೀ ಪರೀಕ್ಷೆಯ ಅಭ್ಯಾಸ ಮಾಡಿಸುವಂಥ ಶಿಕ್ಷಕರ ಅಭಾವವು.

ಕನ್ನಡ ಮುಲಕೀ ಪರೀಕ್ಷೆಯು ಇಂಗ್ರೇಜಿ ಮ್ಯಾಟ್ರಿಕ್ಯುಲೇಶನಕ್ಕೆ ಸರಿಯಾಗಿರುತ್ತದೆ. ಮ್ಯಾಟ್ರಿಕ್ಯುಲೇಶನ ಪರೀಕ್ಷೆಗೆ ಕೂಡುವಂಥವರಿಗೆ ಕಲಿಸುವದಕ್ಕಾಗಿ ಬಿ. ಎ. ಮತ್ತು ಎಮ್. ಎ. ಪಾಸಾದವರು ಬೇಕಾಗುತ್ತಾರೆ ಮ್ಯಾಟ್ರಿಕಕ್ಕೆ ಮ್ಯಾಟ್ರಿಕ ಪಾಸಾದವರನ್ನೇ ಮ್ಯಾಟ್ರಿಕದ ವಿಷಯಗಳನ್ನು ಕಲಿಸಲು ಏಕೆ ನೇಮಿಸಬಾರದು? ಇದಕ್ಕೆ ಮಾತ್ರ ಬಿ. ಎ. ಎಮ್. ಎ. ಪಾಸಾದಂಥವರು ಬೇಕು ಕನ್ನಡ ಮುಲಕೀ ಪರೀಕ್ಷೆಗೆ ಮಾತ್ರ ಅಂಥ ಯೋಗ್ಯತೆಯುವರು ಬೇಡೆಂಬದು ಎಲ್ಲಿಯ ನ್ಯಾಯ? ಮುಲಕೀ ಪರೀಕ್ಷೆಯವರಿಗೆ ಅದೇ ಪರೀಕ್ಷೆ ಕೊಟ್ಟವರು ಕಲಿಸಬೇಕಾದ ಹೊತ್ತು ಬಂದದ್ದು ಅತ್ಯಂತ ವಿಷಾದದ ಸಂಗತಿಯೇ ಸರಿ.

ಟ್ರೇನಿಂಗ ಕಾಲೇಜವಿರುವ ತನಕ ಒಬ್ಬರಾದರೂ ಕನ್ನಡ ಪಂಡಿತರು ಇರುತ್ತಿದ್ದರು ಇವರ ಕೈಕೆಳಗೆ ಅನೇಕರು ಕನ್ನಡದಲ್ಲಿ ಪ್ರಗತಿ ಹೊಂದಿ ಮುಂದೆ ಮೈಸೂರಿಗೆ ಹೋಗಿ, ಪಂಡಿತ ಪರೀಕ್ಷೆ ಪಾಸಾಗಿ ಬರುತ್ತಿದ್ದರು. ಬಿ. ಎ. ಪಾಸಾದ ಕೂಡಲೆ ಕೆಲವರಿಗೆ ಫೆಲೋಶಿಪ್ಪು ಕೊಟ್ಟು, ಅವರು ಎಮ್. ಎ. ಆಗಿ ಹೆಚ್ಚಿನ ಪಾಂಡಿತ್ಯ ಸಂಪಾದನೆ ಮಾಡುವಂತೆ ದ್ರವ್ಯಾನುಕೂಲತೆ ಮಾಡಿಕೊಡುವರು ಆ ಪ್ರಕಾರ ಕನ್ನಡದಲ್ಲಿ ವಿದ್ಯೆಯ ಬೆಳವಣಿಗೆಯಾಗುವದರ ಬದಲು- ಕನ್ನಡಿಗರು ಅಬಸೀನಿಯಾದ ಸಿದ್ದಿಗಳಂತೆ ಕಾಡುಸ್ಥಿತಿಯಲ್ಲಿರಬೇಕೆಂದು ವಿದ್ಯಾಖಾತೆಯ ಮಂತ್ರಿಯು ಹಾಗು ಅವರ ದ್ವಾರದಿಂದ ಸರಕಾರದ ಉದ್ದೇಶವಾಗಿರುತ್ತದೆಂದು ಏಕೆ ಹೇಳಬಾರದು?

ವಿದ್ಯಾಖಾತೆಯ ಮಂತ್ರಿಯೆಂದರೂ ಒಂದೇ! ಸರಕಾರವೆಂದರೂ ಒಂದೇ! ಇಬ್ಬರೂ ಕೂಡಿ ಟ್ರೇನಿಂಗ ಕಾಲೇಜದ ಕೊಲೆ ಮಾಡಿ, ಕನ್ನಡಿಗರು ಬುದ್ಧಿವಂತರಾಗಬಾರದೆಂಬ ದುರಿಚ್ಛೆಯುಳ್ಳವರಾಗಿದ್ದಾರೆಂದು ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಮರಾಠಿ, ಗುಜರಾಥಿ ಮತ್ತು ಸಿಂಧದ ಕಾಲೇಜವಿರಬೇಕು? ಕರ್ನಾಟಕದ ಕಾಲೇಜ ಮಾತ್ರವಿರಬಾರದೆಂಬದು ಎತ್ತಣದ ನ್ಯಾಯವು! ಅವರು ಸರಕಾರಕ್ಕೆ ಹಿರಿಯಗಪ್ಪನ ಮಕ್ಕಳಲ್ಲ? ಕನ್ನಡಿಗರು ಮಲಮಕ್ಕಳಲ್ಲ! ಸರಕಾರವು ಎಲ್ಲರನ್ನೂ ಸಮದೃಷ್ಟಿಯಿಂದಲೂ ನ್ಯಾಯ ನಿಷ್ಪಕ್ಷಪಾತ ದೃಷ್ಟಿಯಿಂದಲೂ ನೋಡತಕ್ಕದ್ದು. ಪ್ರತ್ಯಕ್ಷವಾಗಿ ಆಗುತ್ತಿರುವ ಅನ್ಯಾಯದ ಜವಾಬ ಕೊಡಿರೆಂದು ಮುಂಬಯಿ ಸರಕಾರದ ಕೈ ಹಿಡಿದು ಕೇಳುವಂಥ ಗಟ್ಟಿಗರಾರಾದ ಕನ್ನಡಿಗರು ಯಾರೂ ಇಲ್ಲವೇ?

ಯಾರಪ್ಪನ ಮನೆಗಂಟು?

ವಿಜಾಪೂರದ ಕರ್ನಾಟಕ ವೈಭವದ ಸಂಪಾದಕರು ಯಾರಪ್ಪನ ಮನೆಗಂಟು? ಎಂಬ ತಿರೋಲೇಖದಲ್ಲಿ ಅಲ್ಲಿಯ ಮ್ಯುನಿಸಿಪಾಲಿಟಿಯ ಮೇಲೆ ಕಡುತರವಾದ ಲೇಖವನ್ನು ಬರೆದಿರುತ್ತಾರೆ. ಈ ಲೇಖವು ಯೋಗ್ಯವಾಗಿರುತ್ತದೆಂದೇ ವಿಜಯದ ಮತವು. ಅಲ್ಲಿಯ ಮುನಿಸಿಪಾಲಿಟಿಯು ಬ್ರಾಹ್ಮಣೇತರರ ಕಯ್ಯಲ್ಲಿ ಸೇರಿದೆ. ಎಲ್ಲ ಮ್ಯುನಿಸಿಪಾಲಿಟಿಗಳು ಬ್ರಾಹ್ಮಣೇತರರ ಕಯ್ಯಲ್ಲಿ ಸೇರಿದಂತೆ ಅದೂ ಸೇರಿದೆ. ಆದರೆ ಅದು ತನಗೆ ಅಧಿಕಾರ ದೊರೆತಿರುತ್ತದೆಂದು ಮನಸ್ಸಿಗೆ ಬಂದಂತೆ ವರ್ತಿಸಿದರೆ- ಲೋಕನಿಂದ್ಯೆಯು ಮಾತ್ರ ಉಡಿಯಲ್ಲಿ ಬರುವದು.

ಮ್ಯುನಿಸಿಪಾಲ್ಟಿಯು ಕೆಲಸಗಳನ್ನು ಮುದ್ರಿಸುವದಕ್ಕಾಗಿ ನ್ಯೂ ಪ್ರಿಂಟಿಂಗ ವರ್ಕ್ಸ ಮುದ್ರಾಲಯಕ್ಕೆ ಗುತ್ತಿಗೆ ಕೊಟ್ಟರು. ಇದರ ಹಣ ಸಲ್ಲಿಸಲಿಲ್ಲ. ಮುದ್ರಾಲಯದವರು ದಾವೇ ಮಾಡಿದರು. ರೂಪಾಯಿ ಕೊಡುವತನಕ ನೂರಕ್ಕೆ ವರ್ಷಕ್ಕೆ ಆರರಂತೆ ಬಡ್ಡೀ ಕೊಡಬೇಕೆಂದು ಕೋರ್ಟಿನ ಹುಕುಮು ಆಗಿದೆ. ಮ್ಯುನಿಸಿಪಾಲಿಟಿಯು ಹಣ ಕೊಡಲಾರದೆ- ಬಡ್ಡೀ ತೆತ್ತುತ್ತಿರುವದು. ನ್ಯೂ ಪ್ರಿಂಟಿಂಗ ಮುದ್ರಾಲಯದಂತೆ ಗ್ರಾಮಾಧಿಕಾರಿಯವರೂ ದಾವೆ ಮಾಡತಕ್ಕವರಿದ್ದಾರೆ. ಏಕೆಂದರೆ- ಕೆಲಸ ಮಾಡಿಸಿಕೊಂಡು, ದುಡ್ಡು ಕೊಡದೆ ಒಳಗೆ ತೆಗೆದಿರುತ್ತದೆ.

ತನ್ನ ಎಡಿಯಲ್ಲಿ ಈ ಪ್ರಕಾರ ಹೊಲಸು ಬಿದ್ದಿದ್ದರೂ ಮ್ಯುನಿಸಿಪಾಲಿಟಿಯು ಟೆಂಡರ ಬೇಡಿತು ಹೋದ ವರ್ಷಕ್ಕಿಂತ ಈ ವರ್ಷ ನೂರಿನ್ನೂರು ರೂಪಾಯಿ ಕಡಿಮೆಗೆ ಕೆಲಸ ಮಾಡುವಂತೆ ಮುದ್ರಾಲಯಗಳು ಮುಂದಾದವು. ಆದರೆ ಬ್ರಾಹ್ಮಣೇತರರೆಂಬ ಅಭಿಮಾನದಿಂದ ಮುಂದಾಳು ಮುದ್ರಾಲಯಕ್ಕೆ ಕೆಲಸ ಕೊಟ್ಟಿದ್ದಲ್ಲದೆ, ಅದಕ್ಕೆ ಸಹಾಯವಾಗಿ ನಿನ್ನೂರು ರೂಪಾಯಿಗಳನ್ನು ಮುಂಗ

ಕೊಡುವಂತೆ ಠರಾವು ಮಾಡಿದೆ

ಮುಂದಾಳುವಿಗೆ ಈ ಪ್ರಕಾರ ಮಾಡಿದ ಸಹಾಯ ಮತ್ತು ಪಕ್ಷಪಾತವು ಸಾರ್ವಜನಿಕ ಹಿತದೃಷ್ಟಿಯಿಂದ ತೀರ ಹೇಯವಾಗಿ, ಇದರಿಂದ ಯಾರ ಪ್ಪನ ಮನಸಿಗೆ ಏನು ಎಂಬ ಪ್ರಶ್ನವು ತಾನಾಗಿ ಹೊರಡುತ್ತದೆ. ಮುಂದಾಳು ಮುಂದೆ ಬರಬೇಕೆಂಬ ಇಚ್ಛೆ ಇದ್ದರೆ- ಸಾಹುಕಾರರಿಂದ ಅದಕ್ಕೆ ಸಾಲಾ ಕೊಡಿಸಬಹುದು. ಆದರೆ ಸಾರ್ವಜನಿಕ ಹಣದ ದುರುಪಯೋಗ ಮಾಡತಕ್ಕದ್ದಲ್ಲ. ಒಂದರ ಸಾಲ ಹೊತ್ತು ಮತ್ತೊಂದರ ದಾವೆಯು ತಲೆಯ ಮೇಲೆ ಬಂದಿರುವಾಗ, ಮೂರನೆಯವರಿಗೆ ದ್ರವ್ಯಸಹಾಯ ಮಾಡುವದು ರೇವಡಿಗಾರನ ಅಂಗಡಿಯ ಮೇಲೆ ಬ್ರಹ್ಮಾರ್ಪಣವೆನ್ನುವಂತಾಗುತ್ತದೆ.

ಎಲ್ಲಾದರೂ ಕೆಲಸ ಮಾಡಿಸಿಕೊಳ್ಳುವವರು ಟೆಂಡರದಾರರಿಂದ ಹಣವನ್ನು ಡಿಪಾಜಿಟ್ಟು ಇಡಿಸಿಕೊಳ್ಳುವರು. ಆದರೆ ಅವರಿಗೆ ಮುಂಗಡ ಹಣಗಾರಿ ಕೊಡುವದಿಲ್ಲ. ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ಮುದ್ರಾಲಯದವರಿಂದ ಇನ್ನೂರು ರೂಪಾಯಿ ಡಿಪಾಜಿಟ್ಟ ಇಡಿಸಿಕೊಳ್ಳುತ್ತಾರೆ. ಮುಂದಾಳು ಮುದ್ರಾಲಯವು ವೇಳೆಗೆ ಸರಿಯಾಗಿ ಕೆಲಸ ಮಾಡದಿದ್ದರೆ- ಅಥವಾ ಆಗುವದಿಲ್ಲೆಂದು ಪೊಗ್ಗಾಲು ಹೂಡಿದರೆ- ಈ ಹಣಕ್ಕೆ ಜವಾಬದಾರರಾರು? ಧಾರವಾಡ ಮ್ಯುನಿಸಿಪಾಲಿಟಿಯು ಕಾರಭಾರದ ದೆಸೆಯಿಂದ ಆಡಿಟರರು ಮಾಡಿದ ರಿಪೋರ್ಟಿನಿಂದ ವಿಚಾರಪೂರಿತರು ಬುದ್ಧಿಗಲಿಯದೆ, ಇಷ್ಟಿಗೇ ಪ್ರವೃತ್ತರಾದದ್ದು ಆಶ್ಚರ್ಯವು. ಆಡಿಟರರೂ ಮಿ. ಕಲೆಕ್ಟರಸಾಹೇಬರೂ ಚೆನ್ನಾಗಿ ಸಮಜೂತು ಕೊಡುವರೆಂದು ತಿಳಿಯುತ್ತೇವೆ.

ನಾಗಪೂರದ ಕಾಯದೆಭಂಗದ ಸೇನಾಧ್ಯಕ್ಷನಿಗೆ ಶಿಕ್ಷೆಯಾಗುವದು ನಿಜ. ಈತನು ಬಂಗಾಲದ ಕೈದಿಗಳನ್ನು ಬಂಧಮುಕ್ತ ಮಾಡುವ ತನಕ ಮತ್ತು ತನ್ನ ಕತ್ತಿಯನ್ನು ತಿರಿಗಿ ಕೊಡುವ ತನಕ ಅನ್ನ ವರ್ಜ ಮಾಡುವನು.

ತ್ರಿವೇಂದ್ರಮದಲ್ಲಿ ನಾಯರ ಜಾತಿಯ ಐದು ವರ್ಷದ ಒಬ್ಬ ಹುಡುಗನು ಸನ್ಯಾಸಿಯಾಗಿ ನಿತ್ಯ ಯೋಗಾಭ್ಯಾಸ ಮಾಡಿ, ಸಮಾಧಿ ಕೂಡುವನು. ಲೋಕಾಪೂರದ ಭುಜಂಗಸ್ವಾಮಿಯೋ ಸ್ವೆ !!

ಸೇಲಮದ ಇಬ್ಬರು ಶ್ರೀಮಂತ ಅಣ್ಣ ತಮ್ಮಂದಿರು ಸ್ಟೇಶನಕ್ಕೆ ಬರುತ್ತಿದ್ದಾಗ, ಹಿಂದಿನಿಂದ ಗುಂಡು ಹಾಕಿ ಇವರನ್ನು ಕೊಂದರು. ಒಬ್ಬ ದಾರಿಕಾರನು ಇವರ ನೆರವಿಗೆ ಹೋಗಲು ಆತನಿಗೂ ಗುಂಡು ಹಾಕಿ, ಘಾಯ ಪಡಿಸಿದ್ದಾರೆ.

ಇಜಿಪ್ತ ಪ್ರಕರಣದ ಎರಡನೆಯ ಪ್ರವೇಶ.

—o—

ಇಂಗ್ಲಿಷರ ಆತ್ಮರಕ್ಷಣೆಯ ಪೂರ್ವೋಪಾಯ.

ಇಜಿಪ್ತದಲ್ಲಿದ್ದ ಧೂಮಕೇತುವಿನ ವಿಷಯವಾಗಿ ಪರರಾಷ್ಟ್ರಗಳ ಪ್ರಧಾನರಾದ ಮಿ. ಚೆಂಬರಲೇನ್ನಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಒಂದು ಭಾಷಣ ಮಾಡಿದ್ದಾರೆ. ಅದರ ಮೇಲೆ ಲಂಡನ ಟಾಯಿಮ್ಸ ಪತ್ರವು ಭಾಷ್ಯ ಮಾಡಿರುತ್ತದೆ. ಇಂಗ್ಲಿಷ ಸರಕಾರದವರು ೧೯೨೨ರಲ್ಲಿ ಇಜಿಪ್ತಕ್ಕೆ ಸ್ವಾತಂತ್ರ್ಯ ಕೊಟ್ಟರು. ಅದು ಸ್ವತಂತ್ರ ದೇಶವೆಂದು ಜಾಹೀರ ಮಾಡಿದರು. ಆ ಸ್ವಾತಂತ್ರ್ಯವು ಹುರುಳಿಲ್ಲದ ಸೌಭಾಗ್ಯಕ್ಕಿಂತ ವೈಧವ್ಯ ನೆಟ್ಟಗೆನ್ನುವಂತಾಗಿರುತ್ತದೆ. ಇಗುಪ್ತರು ದಂಡು ಬೆಳೆಸುವದು ಬೇಡ. ಹಡಗುಪಡೆ ಇಡುವದು ಬೇಡ. ಮತ್ತು ತಮ್ಮ ದಂಡಿನ ಹುದ್ದೇದಾರರು ಸ್ವದೇಶೀಯರೇ ಇರುವದು ಬೇಡ. ಎಂಬ ಮೂರು ಮಂತ್ರಗಳನ್ನು ಇಂಗ್ಲಿಷ ಮುತ್ಸದ್ದಿಗಳು ಜಪಿಸಿ, ಅವರಿಗೆ ಸ್ವಾತಂತ್ರ್ಯದಾನ ಕೊಟ್ಟಿದ್ದಾರೆ. ಇಜಿಪ್ತದ ದಂಡು ಪೂರಾ ಅವರ ಕಯ್ಯಲ್ಲಿ ಇದ್ದರೆ- ಸುಯೇಜ ಕಾಲುವೆಯ ಬಂದೋಬಸ್ತು ತಪ್ಪುವದು ಮತ್ತು ಅಲ್ಲಿ ವಾಸವಾಗಿರುವ ಪರಕೀಯರ ಸಂರಕ್ಷಣೆಯು ತಪ್ಪಿ, ಅವರ ಮೇಲೆ ಸಂಕಟ ಬರುವದೆಂದು ಇಂಗ್ಲಿಷರಿಗೆ ಭಯವಾಗಿದೆ. ಈ ಭಯಗಳ ದೆಸೆಯಿಂದ ದಂಡಿನ ಪ್ರಭುತ್ವವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳಬೇಕೆಂದಿದ್ದಾರೆ. ಇಗುಪ್ತರು ಈ ಮಾತಿಗೆ ಒಪ್ಪುವ ತನಕ ಇವರು ಸುಮ್ಮನೆ ಕೂಡ್ರಲಾರರು. ಇದೇ ಉದ್ದಿಶ್ಯವಾಗಿ ಸಾರವತ ಪಾಚ್ಛಾನಿಗೆ ಪತ್ರ ಬರೆದಿದ್ದಾರೆ. ಈ ಪತ್ರದ ವಿಚಾರವಾಗುವ ತನಕ ಸಾರವತ ಪಾಚ್ಛಾನು ದಂಡಿನ ವೆಚ್ಚ ಮತ್ತು ಸೇನಾಧಿಪತಿಯ ನೇಮಣೂಕಿಯ ಪ್ರಶ್ನವನ್ನು ಮುಂದೆ ಹಾಕಿದ್ದಾನೆ. ಬಲಾಢ್ಯರಾದ ಇಂಗ್ಲಿಷರು ಏನು ಬೇಕಾದ್ದನ್ನು ಮಾಡಬಹುದು. ಆದರೆ- ಅವರು ಯುದ್ಧದ ಹಡಗಗಳ ಬೆಂಬಲದಿಂದ ಪತ್ರ ಮಂತ್ರಿಗೆ ಬರೆದದ್ದು ಸೋಜಿಗವಾಗಿರುತ್ತದೆಂದೂ, ೧೯೨೨ನೆಯ ಇಸವಿಯ ಜಾಹೀರನಾಮೆಗೆ ಅನುಸರಿಸಿ, ಈ ಪತ್ರವಾಗಿರುವದಿಲ್ಲೆಂದೂ ಇಜಿಪ್ತದ ವರ್ತಮಾನಪತ್ರಗಳು ಅಂದಿರುತ್ತವೆ. ಯುದ್ಧದ ಹಡಗ ಕಳಿಸುವದು ಪುಂಡ ಜನರು ದಂಗೆ ಮಾಡಬಾರದೆಂದಿದೆ. ಇದರ ಹೊರ್ತು ಎಲ್ಲವೂ ಸ್ನೇಹವಾಗಿರುತ್ತದೆಂದು ಇಂಗ್ಲಿಷ ಮುತ್ಸದ್ದಿಗಳು ಆತ್ಮಸಮರ್ಥನ ಮಾಡಿಕೊಂಡಿದ್ದಾರೆ. ಬ್ರಿಟಿಶ ಮುತ್ಸದ್ದಿಗಳು ಈ ಪ್ರಕಾರ ಮಾನಭಾವಕತನದ ಭಾಷಣ ಮಾಡಿದರೂ- ದಂಗೆಯಾಗಬಹುದೆಂಬ ಪೂರ್ಣ ಹೆದರಿಕೆಯಿಂದ ಸ್ವಜನರ ರಕ್ಷಣೋಪಾಯಗಳ ಪೂರ್ವ ಸಿದ್ಧತೆ ಮಾಡಿದ್ದಾರೆ. ಇಂಗ್ಲಿಷ ಹಡಗಪಡೆಯು ಅಲೆಕ್ಝಾಂಡ್ರಾ ಮತ್ತು ಪೋರ್ಟ ಸಯ್ಯದವನ್ನು ಆಕ್ರಮಿಸಿ, ಅಲ್ಲಿ ದಂಡು ಇಳಿಸುವದು. ಇಂಗ್ಲಿಷ ದಂಡು ರಾಜಧಾನಿಯಾದ ಕೆಯಿರೋ ಪಟ್ಟಣವನ್ನು ಆಕ್ರಮಿಸುವದು ವಿವಿಧ ನಗರಗಳು ಮೊದಲಾದ ಸ್ಥಳಗಳ ಮೇಲೆ ಕಾವಲಿಡುವರು. ಮತ್ತು ರೇಲ್ವೆ ದಾರಿಗುಂಟ ಇರುವಂಥ ಬ್ರಿಟಿಶ ಜನರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವರು. ಆದರೂ ಇಗುಪ್ತರೊಂದಿಗೆ ಸ್ನೇಹವೇ ಸ್ನೇಹ !!!

ಹೊಸ ಪದವಿಗಳು.

—o—

ಬಾದಶಹರ ವರ್ಧಂತಿಯ ಸ್ಮರಣೆಗಾಗಿ ವಾರ್ಷಿಕ ಪದ್ಧತಿಯ ಪ್ರಕಾರ ಸುಮಾರು ಒಂದು ಸಾವಿರ ಜನಕ್ಕೆ ಪದವಿಗಳು ದೊರೆತಿವೆ. ದೊಡ್ಡದೊಡ್ಡ ಪದವಿಗಳು ಪಟ್ಟಣ ಸೇರುವವು. ರಾವಬಹಾದ್ದೂರ ರಾವಸಾಹೇಬ, ಖಾನಬಹಾದ್ದೂರ ಖಾನಸಾಹೇಬ ಕನಿಷ್ಠ ಪ್ರತಿಯ ಪದವಿಗಳು ಜಿಲ್ಲೆಗಳ ಪಾಲಿಗೆ ಬರುವವು. ದೊಡ್ಡ ಪದವಿಗಳಲ್ಲಿ ಮುಂಬಯಿ ಕೌನ್ಸಿಲಿನ ಮೆಂಬರರಾದ ಮಿ. ಜಹಾಂಗೀರರು ಕೆ. ಸಿ. ಐ. ಈ. ಆದರು. ನ್ಯಾಯಮೂರ್ತಿ, ಫಾಸೆಟ, ಮನಮೋಹನದಾಸ ರಾಮಜಿ, ಜೆನವಾಲಾ ಇವರು ಸರ ಆದರು. ದಕ್ಷಿಣ ಆಫ್ರಿಕೆಯ ಡೆಪ್ಯುಟೇಶನದ ಮುಖ್ಯಸ್ಥರಾಗಿದ್ದ ಹಬಿಬುಲ್ಲಾ ಸಾಹೇಬರಿಗೆ ಕೆ. ಸಿ. ಎಸ ಐ ಕಿತಾಬು ದೊರೆಯಿತು.

ಮುಂಬಯಿ ಕರ್ನಾಟಕದಲ್ಲಿ ಬೆಳಗಾವಿಯಲ್ಲಿ ವನಗಾಪಲ ಖಾತೆಯಲ್ಲಿ ಎಕ್ಸ್ಟ್ರಾ ಆ॥ ಕನ್ಸರವೇಟರರಾಗಿರುವ ಮಿ. ಯನ್ನಿಮಡಿಯವರು ಮಾತ್ರ ರಾವಸಾಹೇಬರಾಗಿದ್ದಾರೆ. ಇವರ ಜೊತೆಗೆ ಹಿಂದೂ ಮುಸಲಮಾನ ಪದವಿ ಲೋಲುಪರ ತೀವ್ರ ವಾದ ನಿರಾಶೆಯಾಗಿರುತ್ತದೆ. ಕರ್ನಾಟಕದಲ್ಲಿ ಪದವಿಗಳನ್ನೂ ಬರಬಿತ್ತೆಂದು ಹೇಳಬಹುದು.

ತ್ರಿವೇಂದ್ರಮದಲ್ಲಿ ಓರ್ವ ನಾಯರ ಸ್ತ್ರೀಯು ಸ್ಯಾನಿಟರಿ ಇನ್ಸಪೆಕ್ಟರಳಾಗಿ ನೇಮಿಸಲ್ಪಟ್ಟಿದ್ದಾಳೆ.

ಕಾಲಿಕತ್ತದ ಒಬ್ಬ ವಿದ್ಯಾರ್ಥಿಯು ಇಂಟರ ಪರೀಕ್ಷೆಯಲ್ಲಿ ನಾಪಾಸಾದೆನೆಂಬ ದುಃಖದಿಂದ ಮೈಮೇಲೆ ಕಲ್ಲೆಣ್ಣೆ ಸುರುವಿಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯ ಮಾಡಿಕೊಂಡನು.

ಧಾರವಾಡ-

ಇಲ್ಲಿಯ ಮಾರ್ಕೇಟಿನಲ್ಲಿ ಕಿರಾಣಿಯ ಪ್ರಸಿದ್ಧ ವ್ಯಾಪಾರಸ್ಥರಾಗಿದ್ದ ರಾ. ರಾ. ಬನ್ನೂರ ಆಡಿವೆಪ್ಪನವರು ಪರಲೋಕವಾಸಿಗಳಾದರೆಂದು ಬರೆಯಲು ವಿಷಾದವೆನಿಸುತ್ತದೆ.

ನೋಟೀಸು

ಗಂಗವ್ವಾ ಕೋಂ ಭೀಮಪ್ಪಾ ಅಣ್ಣೀಗೇರಿ ಸಾಕೀನ ಹೊಸಕಟ್ಟಿ ತಾಲೂಕ ಶಿಗ್ಗಾವಿ ಇವಳಿಗೆ—

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಚನ್ನಬಸವ್ವಾ ತಂದಿ ನರಸಪ್ಪಾ ನವಲಗುಂದ ಸಾಕೀನ ಹೊಸಕಟ್ಟಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ಸದರ ಹೊಸಕಟ್ಟಿ ಗ್ರಾಮದಲ್ಲಿ ನಾನು ಕಟ್ಟಿಸತಕ್ಕ ಗೋಡೆಗೆ ನೀನು ವಿನಹಕಾರಣ ಹರಕತ ಮಾಡತೀದಿ ನಾನು ನನ್ನ ಜಾಗಾದಲ್ಲಿ ಗೋಡೆ ಕಟ್ಟಿಸುತ್ತಾ ಇದ್ದೇನೆ ನೀನು ಸುಳ್ಳೇ ಜಾಗಾ ಸಾಧಿಸುವದಕ್ಕಾಗಿ ನನಗೆ ಆಗದವರ ಮಸಲತ್ತಿನಿಂದ ಹರಕತು ಮಾಡಲಿಕ್ಕೆ ಪ್ರಯತ್ನಿಸುತ್ತೀದಿ ನೀನು ಹೆಣ್ಣುಮಗಳಾದ್ದರಿಂದ, ನಾನು ಮತ್ತು ನೆರೆಹೊರೆಯವರು ನಿನಗೆ ಬೇಕಾದಷ್ಟು ಸಮಜೂತ ಹೇಳಿದರೂ ನೀನು ಕೇಳಲೊಲ್ಲಿ ಆದ್ದರಿಂದ ಧಾರವಾಡದ ತನಕ ವಿನಹಕಾರಣ ಖರ್ಚು ಮಾಡಿಕೊಂಡು ಬಂದು ನಿನಗೆ ಈ ನೋಟೀಸು ಕೊಡಬೇಕಾಯಿತು. ನೀನು ನನಗೆ ಹರಕತು ಮಾಡಬೇಕೆಂದಿರುವ ಜಾಗೆಯು ನಿನ್ನ ಮಾಲಕಿಯದು ಮತ್ತು ವಹಿವಾಟಿಯದು ಆಗಿರುತ್ತದೆಂದು ನಿನ್ನ ಹತ್ತಿರ ಕಾಗದ ಪತ್ರಗಳ ಪುರಾವೆಯಿದ್ದರೆ- ಈ ನೋಟೀಸು ಮುಟ್ಟಿದ ನಾಲ್ಕು ದಿವಸಗಳಲ್ಲಿ ತೋರಿಸಬೇಕು ಅಥವಾ ದಿವಾಣಿ ಕೋರ್ಟಿನಲ್ಲಿ ಹೋಗಿ ನಿನ್ನ ಹಕ್ಕು ಸ್ಥಾಪಿಸಬೇಕು ಈ ಎರಡಕ್ಕೂ ನೀನು ತಪ್ಪಿದರೆ ನಿನ್ನ ಮೇಲೆ ಆಗಳಿಕ ಮಾಡುವ ಅಪರಾಧದ ಮೇಲೆ ನಾನು ಫೌಜದಾರಿ ಮಾಡಬೇಕಾದೀತು ಆ ಸಂಬಂಧದಿಂದ ನಿನಗೆ ಆಗುವ ಲುಕಸಾನ ಮತ್ತು ತ್ರಾಸಕ್ಕೆ ನಾನು ಜವಾಬದಾರನಲ್ಲ ನೀನು ಹೆಣ್ಣುಮಗಳಾದ್ದರಿಂದ ನಿನಗೆ ಮುಂದೆ ಯಾವ ಪ್ರಕಾರದ ತಾಪವಾಗಬಾರದೆಂದು ಮುಂದಾಗಿ ನೋಟೀಸಿನಿಂದ ತಿಳಿಸಿರುತ್ತೇನೆ. ಈ ನೋಟೀಸಿನ ಖರ್ಚು ಮತ್ತು ನನ್ನ ಧಾರವಾಡಕ್ಕೆ ಹೋಗಿಬರುವ ಖರ್ಚು ನಿನ್ನ ಮೇಲುಂಟು. ತಿಳಿಯುವದು

ತಾ|| ೪ ಜೂನ ೧೯೨೭ ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಚನ್ನಬಸವ್ವಾ ತಂದಿ ನರಸಪ್ಪಾ ನವಲಗುಂದದವರ ಈತನ ಕೈದು ಇರುತ್ತದೆ.

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ವ್ಯಾನೇಜರ ವಿಜಯ ಧಾರವಾಡ

ಒಕ್ಕಲಿಗನು ನೇಗಿಲ ಹೊಡೆದಂತೆ.

ದಿ ಮೈಸೂರ ಅಗ್ರಿಕಲ್ಚರಲ್ ಡೇರಿಫಾರಂ ಕಂಪನಿ ಲಿಮಿಟೆಡ್ ಆರ್ಗನಾಯಿಜಿಂಗ ಇನಸ್ಪೇಕ್ಟರ ಜಿಲ್ಲಾ ಧಾರವಾಡ ಡಿಸ್ಟ್ರಿಕ್ಟ ಹೆಡಕ್ವಾರ್ಟರ ಹುಬ್ಬಳ್ಳಿ ಇವರ ಪ್ರಕಟಿಸಿದ [illegible] ದೇನಂದರೆ—

೧ ನಮ್ಮ ಡಿಪಾರ್ಟಮೆಂಟ ಮೂಲಕ ಇಡೀ ಜಿಲ್ಹೆಯಲ್ಲಿ ನಮ್ಮ ಅಗ್ರಿಕಲ್ಚರ [illegible] ಕೆಲಸ ಮಾಡಿದಲ್ಲಿ ದರ ತಿಂಗಳಿಗೊಂದಕ್ಕೆ ರೂಪಾಯಿ ನೂರಿಪ್ಪತ್ತು (೧೨೦—೦—೦) ರಂತೆ ಪಗಾರ ದೊರಿಯುತ್ತದೆ. ಇಷ್ಟು ಇದ್ದವರು [illegible] ಸರ್ಟಿಫಿಕೇಟಿನಿಂದ ಈ ತಿಂಗಳ ಅಖೇರ ವಳಗಾಗಿ ನಮ್ಮನ್ನು ಬೇಟಿಯಾಗಿ ಅಥವಾ ಪತ್ರದ್ವಾರ ತಿಳಿದುಕೊಳ್ಳಬಹುದು.

೨ ಇದಲ್ಲದೆ ಈ ಹಿಂದೆ ನಮ್ಮ ಡಿಪಾರ್ಟಮೆಂಟಿನಲ್ಲಿ ದರಕಾಸುಗಳನ್ನು [illegible] ಕಳಿಸಿ ಅದಕ್ಕೆ ಯಾರಿಗೆ [illegible] ಸರ್ಟಿಫಿಕೇಟುಗಳು [illegible] ಬಂದಿರುವದಿಲ್ಲವೋ ಅಂಥವರು ಕೂಡ್ಲೆ ಒಂದು ತಿಂಗಳೊಳಗಾಗಿ ತಮ್ಮ ತಕರಾರುಗಳನ್ನು [illegible] ಆಗಲಿ [illegible] ಮೂಲಕ ನಮ್ಮ ಆಫೀಸಿಗೆ ತಿಳಿಸಿದಲ್ಲಿ ಯೋಗ್ಯ ವಿಚಾರ ಮಾಡಿಸಿ ಕೊಡಲಾಗುತ್ತದೆ. ಹಣ ಎಲ್ಲರೆ ವಸೂಲಾದದ್ದು ಇದೇ ಡಿಸ್ಟ್ರಿಕ್ಟ ಹದ್ದಿನಲ್ಲಿರುವ, ಹುಬ್ಬಳ್ಳಿ [illegible] ಕೋ [illegible] ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಲಾಗುತ್ತದೆ. ತಿಳಿಯುವದು

ಸ್ಪೇಶಲ ಸೂಚನೆ— ಒಂದು ತಿಂಗಳಲ್ಲಿ ೫೦ ದನಗಳ ವಿಮೆ ಇಳಿಸುವಂಥ ಸಬ್ ಏಜಂಟರಿಗೆ ಬಂಗಾರದ ಪದಕವನ್ನು ಬಹುಮಾನವಾಗಿ ಕೊಡುವೆವು. ಏಜಂಟರಾಗುವಂಥವರಿಗೆ ಬಂಗಾರದಂಥ ಸಮಯ.

ಹುಬ್ಬಳ್ಳಿ
೧—೬—೧೯೨೭

A. L[illegible] rao
Organi[illegible] Inspector,
Dharwa[illegible] District
[Hanapanally Street, Hubli]

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೂಕ್ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋಟ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಕು ಕಡೆಗೆ ಪಸಾರವಾಗಿರುತ್ತದೆ. ಆದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಪೇಠ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಪ್ಪಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಸೋಮವಾರ ತಾರೀಖು ೬ ನೇ ಜೂನ ೧೯೨೭ | ಸಂಚಿಕೆ ೧೧೮

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯು ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೬೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀಲಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಮನೆಯು ಮಾರಾಟ.

—(೦)—

ಧಾರವಾಡ ಹಾಲಗೇರಿಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೯೮ನೇಯ ಮನಿ ಶ್ರೀ. ಸೌ॥ ಗಂಗಾಬಾಯಿ ಕೌಲಗಿ ಇವರ ಹೆಸರಿನಿಂದಿರುವದನ್ನು ಮಾರತಕ್ಕದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳುಳ್ಳದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹೀ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ.
c/o ಬಿ ಆರ. ಕೌಲಗಿ.
ಮೋತಿಲಾಲಗಲ್ಲಿ, ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—೦೦೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಗಲಿಯು ಆರು ಲಕ್ಷದ ಮೇಲುಂಟು, ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಪ್ರ ಎಂ ದಿಪ್ಪಡುವದು. ಕಾಯಮುತ್ತ ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಸಿದ್ದಪ್ಪ ವರೂಪ. ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು,

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಸನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೬-೬-೨೭ ನೇ ಇಸ್ವಿ

ಟ್ರೇನಿಂಗ ಕಾಲೇಜದ ವಿಷಯ.

ಸರಕಾರ, ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡಿನ ಕರ್ತವ್ಯಕರ್ಮ.

ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡಿನವರು ದೊಡ್ಡ ಸಂಬಳದ ಟ್ರೇನ್ಡ ಶಿಕ್ಷಕರು ತಮಗೆ ಬೇಡ. ಮುಲಕೀ ಪರೀಕ್ಷೆ ಪಾಸಾದವರು ಸಹ ವಿದ್ಯಾಖಾತೆಯ ಸ್ಕೇಲಿಗಿಂತ ಕಡಿಮೆ ಸಂಬಳದ ಮೇಲೆ ಬರಬೇಕೆಂದು ಹೇಳುತ್ತಾ ಹಾಗೆ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಾ ಇದ್ದಾರೆ. ಟ್ರೇನಿಂಗ ಸ್ಕೂಲಿಗೆ ಕೆಲ ಶಿಕ್ಷಕರನ್ನು ಕಳಿಸಿದರೂ, ಅದು ಪ್ರಮಾಣಕ್ಕೆ ತೀರ ಕಡಿಮೆಯಾಗುತ್ತದೆ. ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳಿಗೇ ಶಿಕ್ಷಿತರಾದ ಶಿಕ್ಷಕರು ಬೇಡಾದ ಬಳಿಕ, ನಾವೇಕೆ ಟ್ರೇನಿಂಗ ಕಾಲೇಜದ ಗೊಂದಲದಲ್ಲಿ ಬಿದ್ದು ದುಡ್ಡು ಕಳೆಯಬೇಕೆಂದು ಸರಕಾರದವರು ಅನ್ನಲಿಕ್ಕೆ ಮಾರ್ಗವುಂಟು. ಸರಕಾರಕ್ಕೆ ಈ ನೆವನ ಸಿಗದಂತೆ ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳವರೂ ಬಹಳ ಎಚ್ಚರದಿಂದಿರಬೇಕು. ಆರನೇ ಇಯತ್ತೆಯಿಂದ ಏಳನೆಯ ಇಯತ್ತೆಯ ತನಕ ಎಲ್ಲರೂ ಟ್ರೇನ್ಡ ಶಿಕ್ಷಕರಿದ್ದರೇ ಉತ್ತಮವೆಂಬ ಭಾವದಿಂದಲೇ ಇವರು ಶಾಳಾಖಾತೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಮ್ಯುನಿಸಿಪಾಲಿಟಿಗಳು ಈ ತತ್ವದ ಪ್ರಕಾರ ಈ ವರೆಗೂ ನಡೆಯುತ್ತಾ ವಿದ್ಯಾಖಾತೆಯ ಸ್ಕೇಲಿನ ಪ್ರಕಾರ ಸಂಬಳ ಕೊಡುತ್ತಾ ಬಂದಿವೆ. ಈ ಪದ್ಧತಿಯನ್ನು ತೆಗೆದು ಹಾಕಲಿಕ್ಕೆ ಯಾವ ಕಾರಣವೂ ಇರುವದಿಲ್ಲ. ಲೋಕಲಬೋರ್ಡುಗಳಲ್ಲಿ ಆರ್ಜನ ಮತ್ತು ರೂಲರವೆಂಬುದು ಪ್ರಕಾರವಿದ್ದು, ದೊಡ್ಡ ದೊಡ್ಡ ಊರುಗಳಲ್ಲಿ ಮುಲಕೀ ಪರೀಕ್ಷೆಯ ತನಕ ಕಲಿಸುವ ವರ್ಗಗಳುಂಟು. ಇಂಥ ವರ್ಗಗಳನ್ನು ಬಂದು ಮಾಡಿದರೆ- ಈ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳ ಬೊಗಳೆಯಾಗುವವು. ಅದರಿಂದ ಲೋಕಲಬೋರ್ಡು ಬಣವಿಗೆ ಬೆಂಕಿ ಹಚ್ಚಿ ಅದರ ಹುರಕೊಳ್ಳುವಂಥ ಕೃತಿ ಮಾಡಲಾಗದು ಇವರದಂತೆ ಈ ಕರ್ತವ್ಯದಲ್ಲಿ ಸರಕಾರ ಕಯ್ಯೂ ಕಟ್ಟಿರುತ್ತದೆ. ಕುಲಕರ್ಣಿಯಾಗಲಿಕ್ಕೆ ಮುಲಕೀ ಪರೀಕ್ಷೆ ಪಾಸಾಗಬೇಕಾಗುತ್ತದೆ. ಈ ಪರೀಕ್ಷೆ ಪಾಸಾಗಲಿಕ್ಕೆ ಅವಶ್ಯವಾದ ಸೋಯಿಯನ್ನು ಮಾಡಿಕೊಡುವದು ಸರಕಾರದ ಕರ್ತವ್ಯ ಕರ್ಮವಾಗುತ್ತದೆ. ಐದು, ಆರು ಮತ್ತು ಏಳನೆಯ ಇಯತ್ತೆಯನ್ನು ಕಲಿಸುವಂಥ ಟ್ರೇನ್ಡ ಶಿಕ್ಷಕರು ಇರದಿದ್ದರೆ- ಕುಲಕರ್ಣಿಯರ ಮಕ್ಕಳು ಎಲ್ಲಿ ಓದಬೇಕು? ಹೇಗೆ ಪರೀಕ್ಷೆ ಪಾಸಾಗಬೇಕು? ಸರಕಾರವು ಮೊದಲು ಸಾಧನ ಮಾಡಿಕೊಡಬೇಕು. ಅನಂತರ ಪರೀಕ್ಷೆಯ ಬಲವಂತಿಕೆ ಮಾಡಬೇಕೆಂಬದು ಸಹಜವಾಗುತ್ತದೆ. ಆದುದರಿಂದ ಟ್ರೇನಿಂಗ ಕಾಲೇಜಕ್ಕೆ ಪುನಃ ಜೀವ ಕಳೆ ತುಂಬುವ ಜವಾಬದಾರಿಯು ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡಿನಂತೆ ಸರಕಾರದ ಮೇಲೂ ಇರುತ್ತದೆ. ಸರಕಾರವು ಏನಾದರೂ ಪಾರಿಸಿಕೊಳ್ಳುವ ಯುಕ್ತಿ ಮಾಡಿದರೆ- ಅದು ತನ್ನ ಕೊರಳಿಗೇ ಬೀಳುವದೆಂದು ಧ್ಯಾನಕ್ಕೆ ತರತಕ್ಕದ್ದು.

ಅಧ್ಯಕ್ಷರ ಕಾಸ್ಟಿಂಗ ಹೋಟಿನ ಅಧಿಕಾರ.

ಮುಂಬಯಿ ಮ್ಯುನಿಶಿಪಾಲಿಟಿಯಲ್ಲಿ ಕಳೆದ ಎಪ್ರಿಲ ತಿಂಗಳಲ್ಲಿ ಅಧ್ಯಕ್ಷರ ಚುನಾವಣೆಯಾಯಿತು. ಚುನಾವಣೆಗಾಗಿ ಮೂವರು ಉಮೇದವಾರರಿದ್ದರು. ಮೊದಲನೆಯ ಸಾರೆ ಹೋಟು ತಕ್ಕೊಂಡು ಕಡೆಯ ಉಮೇದವಾರರನ್ನು ರದ್ದು ಮಾಡಿದರು. ಇಬ್ಬರು ಉಳಿದರು, ಇವರ ದೆಸೆಯಿಂದ ಹೋಟು ತಕ್ಕೊಳ್ಳಲು ಇಬ್ಬರಿಗೂ ಸಮ ಮತಗಳು ಬಿದ್ದವು. ಇವರಲ್ಲಿ ಯಾರಿಗೆ ಕಾಸ್ಟಿಂಗ ಹೋಟು ಕೊಡಬೇಕೆಂಬವಾಗಿ ಅಧ್ಯಕ್ಷರಾದ ಚಿನಾಯಿಸಾಹೇಬರಿಗೆ ಬುದ್ಧಿ ಹರಿಯಲಿಲ್ಲ. ಮೊದಲು ಬ್ಯಾಲಟ ಹಾಕಬೇಕೆಂದು ಕೆಲವು ಮತಪತ್ರಿಕೆ ತೆಕ್ಕೊಂಡರು. ಅವನ್ನು ಎಣಿಸುವದಕ್ಕೆ ಪ್ರಾರಂಭ ಮಾಡುವಷ್ಟರಲ್ಲಿ ಈ ವಿಚಾರವನ್ನು ರಹಿತ ಮಾಡಿ ಕಾಸ್ಟಿಂಗ ಹೋಟು ಕೊಟ್ಟರು. ಈ ಹೋಟು ಕೊಟ್ಟದ್ದು ಯಾರಿಗೂ ತಿಳಿಯಲಿಲ್ಲ. ಗದ್ದಲನೆದ್ದಿತ್ತು ಒಬ್ಬರ ಮಾತು ಮತ್ತೊಬ್ಬರಿಗೆ ಕೇಳಿಸುತ್ತಿದ್ದಿಲ್ಲ. ಇಂಥ ಗದ್ದಲದಲ್ಲಿ ಅಧ್ಯಕ್ಷರು ಬಾಟಲಿವಾಲಾ ಇವರು ಅಧ್ಯಕ್ಷರಾದಂತೆ ಜಾಹೀರ ಮಾಡಿದರು. ಈ ರೀತಿ ಹೋಟು ಕೊಟ್ಟದ್ದು ಅನ್ಯಾಯ ಮತ್ತು ಅಕ್ರಮವೆಂದು ಎರಡನೆಯ ಉಮೇದವಾರನು ಹಾಯಕೋರ್ಟಿನಲ್ಲಿ ದಾವೇ ತಂದು ಮಿ. ಬಾಟಲಿವಾಲಾ ಇವರಿಗೆ ಅಧ್ಯಕ್ಷರಾದಂತೆ ತಡಕೂಡು ಹುಕುಮು ಕೊಡಬೇಕೆಂದು ಬೇಡಿಕೊಂಡನು. ಅಧ್ಯಕ್ಷರ ಸ್ಥಳವನ್ನು ತೆರವಿಡುವದರಿಂದ ಕೆಲಸಕ್ಕೆ ತೊಂದರೆಯಾಗುವದೆಂದು ನ್ಯಾಯಮೂರ್ತಿಯು ಹೇಳಿದ್ದರಿಂದ ಈ ವಿಚಾರವು ರಹಿತ ಮಾಡಲ್ಪಟ್ಟಿತು. ಇದರ ವಿಚಾರಣೆಯು ಕಳೆದ ಹದಿನೈದು ದಿವಸಗಳಿಂದ ನ್ಯಾಯಮೂರ್ತಿ ಬ್ಲಾಕವೆಲ್ಲಸಾಹೇಬರ ಮುಂದೆ ನಡೆಯಿತು. ಸಾಹೇಬರು ಹಳೇ ಅಧ್ಯಕ್ಷರಾದ ಮಿ. ಚಿನಾಯಿಯವರ ವರ್ತನವನ್ನು ಒಪ್ಪಿ, ವಾದಿಯ ದಾವೆಯನ್ನು ರದ್ದು ಮಾಡಿ, ಪ್ರತಿ ಪ್ರತಿವಾದಿಯ ಕೋರ್ಟು ಖರ್ಚು ಕೊಡಬೇಕೆಂದು ತೀರ್ಪು ಹೇಳಿದ್ದಾರೆ.

ಈ ತೀರ್ಪಿನ ಮೇಲೆ ವರ್ತಮಾನಪತ್ರಗಳಲ್ಲಿ ಟೀಕೆ ನಡೆದಿದೆ. ಅಧ್ಯಕ್ಷರಿಗೆ ಕಾಸ್ಟಿಂಗ ಹೋಟು ಕೊಡುವ ಅಧಿಕಾರವಿರುವದು ನಿಜ. ಆದರೆ ವಾಸ್ತವೀಕವಾಗಿ ಅಂಥ ಪ್ರಸಂಗವೇ ಇರಲಿಲ್ಲ. ಮೊದಲು ಮೂವರು ಉಮೇದವಾರರಿದ್ದರಷ್ಟೇ; ಇವರಲ್ಲಿ ಹೆಚ್ಚು ಮತವಿದ್ದವರು ಅಧ್ಯಕ್ಷರೆಂದು ಜಾಹೀರ ಮಾಡಬೇಕಾಗಿತ್ತು. ಇದನ್ನು ಬಿಟ್ಟು, ಕಡೆಯ ಉಮೇದವಾರನನ್ನು ಹಾರಿಸಿ, ಇಬ್ಬರಿಗೆ ಹೋಟು ಹಾಕಬೇಕೆಂಬದು ಹೇಳಿದ್ದು ತಪ್ಪು. ಹಾಗೆ ಹೇಳಿದ ಬಳಿಕ ಪುನಃ ಬ್ಯಾಲಟ ಹಾಕ ತೊಡಗಿ, ಕೊನೆಯಲ್ಲಿ ಕಾಸ್ಟಿಂಗ ಹೋಟು ಹಾಕಿದವೆಂದು ಸಾರಿದ್ದು ತಪ್ಪಿನ ಮೇಲೆ ತಪ್ಪೆಂದು ಯಾರಿಗಾದರೂ ಸಹಜವಾಗಿ ಅನಿಸುತ್ತದೆ. ಆದರೆ ನ್ಯಾಯಮೂರ್ತಿ ಬ್ಲ್ಯಾಕವೆಲಸಾಹೇಬರು ಇವರ ಈ ಎರಡೂ ಕೃತಿಗಳು ಯೋಗ್ಯವಾಗಿರುತ್ತವೆಂದು ಅಂದಿದ್ದಾರೆ. ಮ್ಯುನಿಶಿಪಾಲಿಟಿ ಆಕ್ಟಿನಲ್ಲಿ ಇಂಥ ಪ್ರಸಂಗದಲ್ಲಿ ಇದೇ ಪ್ರಕಾರ ಅಧ್ಯಕ್ಷರು ನಡೆಯಬೇಕೆಂದು ಹೇಳಿಲ್ಲ. ಆದ್ದರಿಂದ ಮಿ. ಚಿನಾಯಿಯವರು ಮಾಡಿದ್ದೇ ಸರಿಯೆಂದು ಸಾಹೇಬರ ಮತವು. ಮ್ಯುನಿಸಿಪಾಲ್ಟಿಯ ಆಕ್ಟಿನಲ್ಲಿ ಇದೊಂದು ದೊಡ್ಡ ದೋಷ ಕಂಡು ಬಂತು. ಸರಕಾರವು ಅದನ್ನು ದುರಸ್ತ ಮಾಡಬೇಕಾಯಿತು. ಕಾಯದೆ ಮಾಡುವವರು ಸಾಮಾನ್ಯರಿರುವದಿಲ್ಲ. ಸಾವಿರಾರು ರೂಪಾಯಿ ಸಂಬಳ ತಿನ್ನುತ್ತಾರೆ. ಇವರಿಗೆ ಸಹಾಯವಾಗಿ ವಕೀಲರಾದಂಥ ಕೌನ್ಸಿಲ ಮೆಂಬರರು ಪ್ರತಿಯೊಂದು ಕಲಮಿನಲ್ಲಿರುವ ಅಕ್ಷರಗಳ ಬಗ್ಗೆ ರಾಮಾಯಣ ಮಹಾಭಾರತ ಮಾಡುತ್ತಾರೆ. ಆದರೂ ಮುಂಬಯಿಯಲ್ಲಿ ಕಂಡುಬಂದಂಥ ಪರ್ವತ ಗಾತ್ರವಾದ ದೋಷಗಳು ಉಳಿಯುತ್ತವೆ. ಅಂತೇ ಕೌನ್ಸಿಲಕಾಯ್ದೆ ಪಂಡಿತರಿಗೂ ನಿತ್ಯ ಕೆಲಸವಾಗುತ್ತಿರುವದು.

ಗ್ರೀಸ ದೇಶದಲ್ಲಿರುವ ಸಾಲೋನಿಕಾ ಪಟ್ಟಣದಲ್ಲಿ ಬೊಲ್ಶೆವಿಕ ಸಂಪ್ರದಾಯಿಗಳು ಶಸ್ತ್ರಧಾರಿಯಾಗಿ ಅರಮನೆಯ ಮೇಲೆ ದಾಳೀ ಮಾಡಿ ಗುಂಡು ಹಾರಿಸಿದರು. ಪೋಲೀಸರಿಗೂ ಇವರಿಗೂ ಹೊಡೆದಾಟವಾಯಿತು. ಪೋಲೀಸರು ೧೩೫ ಜನರನ್ನು ದಸ್ತಗೀರ ಮಾಡಿದ್ದಾರೆ.

ಹಿಂದುಸ್ಥಾನಕ್ಕೆ ಎಂಥ ಬ್ಯಾಂಕು ಬೇಕು.

—೦—

ಹಿಂದುಸ್ಥಾನದಲ್ಲಿ ಮೊದಲು ಪ್ರತಿಯೊಂದು ಇಲಾಖೆಯ ಮುಖ್ಯ ಸ್ಥಳದಲ್ಲಿ ಸರಕಾರದ ವ್ಯವಹಾರ ನಡಿಸುವ ಒಂದು ಬ್ಯಾಂಕು ಇರುತ್ತಿತ್ತು. ಮುಂಬಯಿ ಬ್ಯಾಂಕು, ಮದ್ರಾಸಬ್ಯಾಂಕ, ಬಂಗಾಲ ಬ್ಯಾಂಕವೆಂಬ ಬ್ಯಾಂಕುಗಳು ಇಂದಿಗೂ ಪ್ರಸಿದ್ಧವಿವೆ. ಇವುಗಳ ಮೇಲೆ ಇಂಪೀರಿಯಲ ಬ್ಯಾಂಕು ಬಂತು. ಇದು ಹಿಂದುಸ್ಥಾನದ ದೊಡ್ಡ ದೊಡ್ಡ ಪಟ್ಟಣಗಳನ್ನು ಆಕ್ರಮಿಸಿತು. ಸರಕಾರದ ದುಡ್ಡು ಇಲ್ಲಿ ಸೇರಿ, ಟ್ರೆಝರಿಯ ಪುಷ್ಕಳ ಕೆಲಸ ಕಡಿಮೆಯಾಯಿತು. ಈ ಬ್ಯಾಂಕಿನ ಮೇಲೆ ಇನ್ನೊಂದು ರಿಝರ್ವ್ಹ ಬ್ಯಾಂಕು ಆಗಬೇಕೆಂಬ ದೊಡ್ಡ ವಾದವಿವಾದ ನಡೆದಿದೆ. ಈ ಬ್ಯಾಂಕಿನ ಪಾಲುಗಾರರು ಶೇರ ಹೋಲ್ಡರರಾಗಬೇಕೆಂದು ಹಿಂದುಸ್ಥಾನ ಸರಕಾರದ ವಿಚಾರವು. ಶೇರುಗಳನ್ನು ತಕ್ಕೊಳ್ಳುವದರಿಂದ ಬ್ಯಾಂಕು ಬಂಡವಲಗಾರರದಾಗುತ್ತದೆ. ಸರಕಾರದ್ದೇ ದುಡ್ಡು. ಸರಕಾರವೇ ವ್ಯವಹಾರ ಮಾಡತಕ್ಕದ್ದೆಂದು ಹಿಂದೀ ಮೆಂಬರರ ಮತವಾಗಿರುತ್ತದೆ. ಈ ಬಗ್ಗೆ ವಿಚಾರ ಮಾಡಲು ಕೌನ್ಸಿಲ ಆಫ ಸ್ಟೇಟ ಮತ್ತು ಅಸೆಂಬ್ಲಿಯ ಮೆಂಬರರ ಒಂದು ಸಿಲೆಕ್ಟ ಕಮಿಟಿ ನೇಮಿಸಿದ್ದಾರೆ. ಈ ಕಮೀಟಿಯವರು ಬಹುಮತದಿಂದ ಕೋಶಾಧ್ಯಕ್ಷರಾದ ಸರ ಬ್ಲಾಕೆಟಸಾಹೇಬರ ಯೋಜನೆಯನ್ನು ಒಪ್ಪದೆ, ಬ್ಯಾಂಕು ಸರಕಾರದ್ದೇ ಆಗಬೇಕೆಂಬ ಠರಾವು ಮಾಡಿದ್ದಾರೆ. ಈ ಠರಾವಿನಿಂದ ಸರ ಬ್ಲಾಕೆಟ್ಟಸಾಹೇಬರು ಹೌಹಾರಿ ಹೋಗಿದ್ದಾರೆ. ಭಾರತ ಮಂತ್ರಿಯಾದ ಲಾರ್ಡ ಬರ್ಕನಹೆಡ್ಡಸಾಹೇಬರ ತನಕ ದೂರಿಕೊಂಡು, ಅವರ ಹುಕುಮ ಪ್ರಕಾರ ಮುಂದೆ ನಡೆಯುವರು. ಆದುದರಿಂದ ಈ ಮಹತ್ವದ ಪ್ರಶ್ನವನ್ನು ಒಂದು ತಿಂಗಳು ಮುಂದೆ ಹಾಕಿ, ಕಿರುಕಳ ಕಲಮುಗಳ ಮಟ್ಟಿಗೆ ವಿಚಾರ ನಡೆಸಿದ್ದಾರೆ. ಕಮೀಟಿಯು ಮುಂಬಯಿಯಲ್ಲಿ ಕೂಡಿದ್ದು, ರಾಷ್ಟ್ರೀಯ ಪಕ್ಷದ ಮೆಂಬರರಾದ ಶ್ರೀ. ಕೇಳಕರ, ಪುರಷೋತ್ತಮದಾಸ, ಪಂಡಿತ ಮಾಲವಿಯಾ ಮೊದಲಾದವರು ರಿಝರ್ವ್ಹ ಬ್ಯಾಂಕಿನ ಘಟನಾಂತರವಾಗಿ ಆದಷ್ಟು ಹಿಂದುಸ್ಥಾನದ ಹಿತಸಾಧಿಸುವ ಯತ್ನ ನಡೆಸಿದ್ದಾರೆ.

———

ಜಿನವ್ಹಾ ಪರಿಷತ್ತಿನವರು ಆಶಿಯಾ ಖಂಡದ ಕೂಲಿಕಾರರ ದೆಸೆಯಿಂದ ಕಲಕತ್ತೆಯಲ್ಲಿ ಒಂದು ಶಾಖೆ ಸ್ಥಾಪಿಸುವರು. ಇದರ ವ್ಯವಸ್ಥಾಪಕರು ಹಿಂದೀ ಗೃಹಸ್ಥರಾಗುವರು. ಹಿಂದುಸ್ಥಾನದಲ್ಲಿ ಪ್ರಸಿದ್ಧ ಪತ್ರಿಕೆಗಳನ್ನು ಮುದ್ರಿಸುವರು.

ಜಗತ್ತಿನ ತುಂಬ ತಾರು ಕಳಿಸುವ ಚಮತ.

—೦—

ಇಂಗ್ಲಂಡದಲ್ಲಿ ಪ್ರತಿವರ್ಷ ಜೂನ ತಿಂಗಳ ೧ ನೆಯ ವಾರದಲ್ಲಿ ಇಪಸಮ ಪಟ್ಟಣದಲ್ಲಿ ಡರ್ಬಿಯೆಂಬ ಹೆಸರಿನ ಕುದುರೆಗಳ ಪಂದ್ಯ ನಡೆಯುತ್ತದೆ. ಈ ಪಂದ್ಯಕ್ಕೆ ನಕಲ ಹಯದಂಥ ಕುದುರೆಗಳು ಬಂದರೇ ಮಾನವು. ಬ್ರಿಟಿಶ ಸಾಮ್ರಾಜ್ಯದಲ್ಲಿ ಪಂದ್ಯಕ್ಕಾಗಿ ಬೆಳೆದ ಕುದುರೆಗಳಲ್ಲಿ ಶ್ರೇಷ್ಠವಾದಂಥವೇ ಇಲ್ಲಿಗೆ ಬರುವವು. ಅಂಥ ೨೩ ಕುದುರೆಗಳು ಈ ಸಾರೆಯ ಶರ್ಯತಿಗೆ ಬಂದಿದ್ದವು. ಕಾಲಬಾಯವೆಂಬ ಕುದುರೆಯು ೧ ನೆಯ ನಂಬರು ಬಂದು, ಜಗತ್ತಿನ ತುಂಬ ಅದರ ಪ್ರಶಂಸೆ ನಡೆದಿರುತ್ತದೆ.

ಯಾವ ಕುದುರೆ ಗೆದ್ದಿತೆಂಬದನ್ನೂ ಇವರ ಲಾಟರಿಯಲ್ಲಿ ಯಾರ ದೈವ ತೆರೆಯಿತೆಂಬದನ್ನೂ ಕೇಳಲು ಜಗತ್ತೇ ಉತ್ಸುಕವಾಗುತ್ತದೆ. ತಾರಿನ ಕಂಪನಿಯವರು ಶರ್ಯತಿನ ವೇಳೆಯಲ್ಲಿ ಕೆಲ ಹೊತ್ತು ಮಿಕ್ಕ ವ್ಯವಹಾರವನ್ನು ಬಂಡಿಟ್ಟು, ಇದೇ ಸುದ್ದಿಗಾಗಿ ದಾರಿಯನ್ನು ತೆರೆಯುವರು. ಕಾಲಬಾಯ ಗೆದ್ದಕೂಡಲೆ ಕಳಿಸಿದ ತಾರು ಇಜಿಪ್ತ ಮತ್ತು ದಕ್ಷಿಣ ಆಫ್ರಿಕೆಗೆ ಒಂದೂವರೆ ಸೆಕಂದು, ಹಿಂದುಸ್ಥಾನಕ್ಕೆ ಐದು ಸೆಕಂದಗಳಲ್ಲಿ ಬಂತು. ೫೧ ಸೆಕಂದಗಳಲ್ಲಿ ಚೀನ ಜಪಾನ, ಆಸ್ಟ್ರೇಲಿಯಾ ದೇಶಗಳಲ್ಲಿ ಸಹ ಮುಟ್ಟಿತು. ತಾರಿನ ಕಂಪನಿಯವರು ಜನರೇಟರವೆಂಬ ಹೊಸ ಯಂತ್ರವನ್ನು ಶೋಧಿಸಿ ತೆಗೆದಿದ್ದು, ಅದರ ಶಕ್ತಿಯಿಂದ ಸುದ್ದಿಯು ಐದು ಸೆಕಂದುಗಳಲ್ಲಿ ಮುಂಬಯಿ ತಲ್ಪಿತು. ಜಗತ್ತಿನಲ್ಲಿ ಇದಕ್ಕೂ ಹೆಚ್ಚಿನ ಚಮತ್ಕಾರವದು ಇರುವದು.

ದೊಡ್ಡ ಇನಾಮುಗಳು ದಕ್ಷಿಣ ಆಫ್ರಿಕೆ, ಇಂಗ್ಲಂಡ ಹೇಶಿಯರಿಗೆ ದೊರೆತು ೩೮೦೦೦ ಸಾವಿರದ ಒಂದು ಇನಾಮು ಕಲಕತ್ತೆಯವನಿಗೆ ದೊರೆತಿರುವದು.

— —

ನಾವಿಗ ಮೇದಾರ ಜಗಳ-

೭೫ ವರ್ಷಗಳ ಹಿಂದೆ ಸಾತಾರೆಯ ಆರ ಮನೆಯಲ್ಲಿ ಒಬ್ಬ ಮೇದಾರನು ನಾವಲಿಗನ ಅಪಮಾನ ಮಾಡಿದನು. ಆಗಿನಿಂದ ನಾವಲಿಗರು ಮೇದಾರರ ಕಷ್ಟ ಮಾಡುತ್ತಿರಲಿಲ್ಲ. ನಡುವೆ ಇದು ತುಸು ಸಡಿಲ ಬಿದ್ದಿತ್ತು. ಈಗ ಪುಣೆಯಲ್ಲಿ ಪುನಃ ಈ ಗೊಂದಲವೆದ್ದಿದೆ. ನಾವಿಗರು ಮೇದಾರರ ಕಷ್ಟ ಮಾಡಲಾರದೆಂದು ಹಟ ತೊಟ್ಟಿದ್ದಾರೆ ಮೇದಾರರು ಮೊದಲಿನಂತೆ ತಮ್ಮ ಕಷ್ಟವನ್ನು ತಾವೇ ಮಾಡಿಕೊಳ್ಳಬೇಕು. ಅಥವಾ ಕಂಡಿಯಂತೆ ಕೂದಲು ಬೆಳೆಸಬೇಕೆಂಬ ಹೊತ್ತು ಬಂದಿದೆ.

ವಿಚಿತ್ರ ಜಾಹೀರಾತು-

ಲಂಡನದ ಒಂದು ಊಟದ ಮನೆಯ ಮುಂದೆ ಕೆಳಗಿನ ಜಾಹೀರಾತೆನ್ನು ಹಚ್ಚಿದ್ದಾರೆ.

ನಿಮ್ಮ ಹೆಂಡತಿಗೆ ಅಡಿಗೆ ಮಾಡಲಿಕ್ಕೆ ಬರದಿದ್ದರೆ- ಆಕೆಗೆ ಸೋಡಪತ್ರ ಕೊಡಬೇಡಿರಿ ಇಲ್ಲಿ ಹೆಂಡತಿಸಹಿತವಾಗಿ ಊಟ ಮಾಡು ಆಕೆಯನ್ನು ಪ್ರೀತಿಯ ನಾಯಿಯಂತೆ ಇಟ್ಟುಕೊಳ್ಳು!!

———

ವಿಲಾಯತಿಯ ಸುದ್ದಿಗಳು.

---೦—

ಬಂಗಾಲದ ಗವ್ಹರ್ನರರಾಗಿದ್ದ ರೋನಾಲ್ಡಶಾಸಾಹೇಬರು ರಾಯಲ ಕಮೀಶನದ ಅಧ್ಯಕ್ಷರಾಗುವರೆಂದು ಲಂಡನದಲ್ಲಿ ಸುದ್ದಿಯಾಗಿದೆ.

———

ಹಿಂದುಸ್ಥಾನದಲ್ಲಿ ಸಮ್ಮತಿ ವಯದ ಕಾಯದೆಯನ್ನು ೧೬ ವರ್ಷ ಮಾಡಬೇಕೆಂದು ಪಾರ್ಲಮೆಂಟ ಸಭೆಯಲ್ಲಿ ಒಬ್ಬ ಮೆಂಬರರು ಸೂಚಿಸಿದ್ದಾರೆ.

———

ಇಂಗ್ಲಂಡದಲ್ಲಿ ಹುಟ್ಟಿದ ವರ್ಣಭೇದವನ್ನು ಎಡಿಸಬರೋದ ಲಾರ್ಡ ಪ್ರೊವ್ಹೆಸ್ಟಸಾಹೇಬರು ತೀವ್ರ ಶಬ್ದಗಳಿಂದ ನಿಷೇಧಿಸಿದ್ದಾರೆ.

———

ಬೂಧಿಯಾನಾದ ಒಬ್ಬ ದಳವಾಯಿಯು ಬೋಲ್ಶೆವಿಕರಿಗೆ ಗುಪ್ತ ಪತ್ರ ಕೊಡುತ್ತಿದ್ದಾಗ ಆತನನ್ನು ಹಿಡಿದರಷ್ಟೆ; ಆ ಸರಕಾರದವರು ಈತನಿಗೆ ಗಲ್ಲಿನ ಶಿಕ್ಷೆ ವಿಧಿಸಿ ಜೀವ ತಕ್ಕೊಂಡರು.

———

ಇಂಗ್ಲಿಷರು ವ್ಯಾಪಾರ ವಿಷಯಕವಾಗಿ ರಶಿಯಾದ ಪಾಲು ಬಿಟ್ಟದ್ದು, ಯುದ್ಧದ ಪೂರ್ವೋಕ್ತ ಮವಾಗಿರುತ್ತದೆಂದು ರಶಿಯಾದ ದೊಡ್ಡ ದೊಡ್ಡ ಜನರು ಅನ್ನುತ್ತಿದ್ದಾರೆ.

———

ಜಿನೆವ್ಹಾದ ಪರಿಷತ್ತಿನವರು ಸರ ಅತುಲ ಚಟರಜಿಯವರನ್ನು ಅಧ್ಯಕ್ಷರಾಗಿ ಆರಿಸಿದ್ದಾರೆ. ಇವರ ಸ್ಥಳದಲ್ಲಿ ಡಾಕ್ಟರ ಪರಾಂಜಪೆಯವರು ಡೆಲಿಗೇಟರಾಗಿ ಹೋದರು.

ಎಂಥ ಪ್ರಸಂಗ ಬಂದರೂ ಪರದೇಶಗಳ ವಕೀಲರು ಪೇಕಿಂಗ ಪಟ್ಟಣದಲ್ಲಿಯೇ ಇರಬೇಕೆಂದು ಗಟ್ಟಿ ಮನಸ್ಸು ಮಾಡಿದ್ದಾರೆ. ಅಮೇರಿಕೆಯವರು ತಮ್ಮ ವಕೀಲನನ್ನು ಅಲ್ಲಿಂದ ಎಬ್ಬಿಸಬೇಕೆಂದು ಮಾಡಿದ್ದರು. ಉಳಿದವರ ಮಾತಿಗೆ ಒಪ್ಪಿ, ತಮ್ಮ ವಕೀಲನಿಗೆ ಅಲ್ಲಿಯೇ ಇರಲು ಅಪ್ಪಣೆ ಮಾಡಿದ್ದಾರೆ ಎಲ್ಲರೂ ತಮ್ಮವರ ರಕ್ಷಣೆಗಾಗಿ ದಂಡು ಕಳಿಸಿದ್ದಾರೆ.

ನೋಟೀಸು

ಶ್ರೀಮತಿ ರಾ|| ರಾ|| ೧ ಮುರಿಗೆಪ್ಪಾ ಬಿನ ಮಲ್ಲಪ್ಪಾ ಗೊಡ್ಡೆಮ್ಮಿ, ೨ ನಿಂಗಪ್ಪಾ ಬಿನ ಮಲ್ಲಪ್ಪಾ ಗೊಡ್ಡೆಮ್ಮಿ, ೩ ಬಸಪ್ಪಾ ಬಿನ ಪರಪ್ಪಾ ಗೊಡ್ಡೆಮ್ಮಿ, ೪ ಈರಬಸಪ್ಪಾ ಬಿನ ಪರಪ್ಪಾ ಗೊಡ್ಡೆಮ್ಮಿ ಸಾ|| ಹೊಸಹಳ್ಳಿ ತಾಲ್ಲೂಕ ಕರ್ಜಗಿ ಇವರಿಗೆ—

ರಂಗಾಚಾರ್ಯ, ಬಿನ ಶ್ರೀನಿವಾಸಾಚಾರ್ಯ ನವರತ್ನ ವರ್ಫೆ ಸವಣೂರ ವ ಶ್ರೀನಿವಾಸಾಚಾರ್ಯ ಬಿನ ರಂಗಾಚಾರ್ಯ ಅ|| ಪ|| ಸಂ|| ದಾರ ತಂದಿ ರಂಗಾಚಾರ್ಯ ನವರತ್ನ ಸಾ| ಬ್ಯಾಡಗಿ ತಾಲ್ಲೂಕ ರಾಣೇಬಿನ್ನೂರ ಇವರ ತರ್ಫೆ ವಕೀಲ ಮಿ ಗೋಪಾಳರಾವ ಬೆಳಗಾಂವಕರ ವಕೀಲ ಹಾವೇರಿ ಈ ನೋಟೀಸಿನಿಂದ ತಿಳಿಸುವದೇನಂದರೆ—

ಮೇಲೆ ನಮ್ಮ ಪಕ್ಷಕಾರರ ಕಡಿಂದಾ ನಿಮಗೆ ತಿಳಿಸೋದೇನಂದರೆ— ಕರ್ಜಗಿ ತಾಲ್ಲೂಕ ಹಳ್ಳಿಹಳ್ಳಿ ಗ್ರಾಮ ರಿ| ಸ| ನಂಬರ ೪೨ ಎಕರೆ ೧೫/೧೩ ತರಮ ರೂಪಾಯಿ ೨೬ — ಇದು ನಮ್ಮ ಮಾಲ್ಕೀದು ಇದ್ದು ಇದನ್ನು ನೀವು ನಾಲ್ವರು ಗೈರ ಹಕ್ಕಿನಿಂದ ವಹಿವಾಟ ಮಾಡುತ್ತಿದ್ದು ಅದನ್ನು ಪರತ ಬಿಡಿಸಿಕೊಡಲಿಕ್ಕೆ ಅವರು ಇಲಾಜ ಮಾಡತಕ್ಕವರು ಇದ್ದು ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ಸದರಿ ನಮ್ಮ ಜಮೀನು ನಮಗೆ ಬಿಟ್ಟುಕೊಟ್ಟ ನಮ್ಮ ಕಡಿಂದಾ ಪಾವತಿ ಪಡಕೋಬೇಕು ಇಲ್ಲದಿದ್ದರೆ ಕಾಯದೇಶೀರ ಇಲಾಜ ಮಾಡೋ ಕುರಿತು ನಮಗೆ ವಕೀಲಿ ಪತ್ರ ಕೊಟ್ಟದ್ದು ಈ ಬಗ್ಗೆ ನಿಮಗೆ ಈ ನೋಟೀಸಿನಿಂದ ತಿಳಿಸಿರುತ್ತೇವೆ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ಮೇಲೆ ಬರೆದಂತೆ ನಮ್ಮ ಜಮೀನು ಬಿಟ್ಟುಕೊಡದೆ ಇದ್ದಲ್ಲಿ ಕಾಯದೆ ಪ್ರಕಾರ ನಿಮ್ಮ ಮೇಲೆ ಇಲಾಜ ಮಾಡುವದರಲ್ಲಿ ಬರುವದು.

ಹಾವೇರಿ — ಜಿ. ಎಸ್. ಬೆಳಗಾಂವಕರ
ತಾ|| ೫-೬-೩೭ — ವಕೀಲ, ಹಾವೇರಿ

ನೋಟೀಸು

ಮುದಕವ್ವಾ ಕೋಮ ಲಿಂಗಪ್ಪಾ ಮುಳಗಾವಿ ಹಾಲಿವಸ್ತಿ ಅಬ್ಬೀಗೇರಿ ತಾಲ್ಲೂಕ ರೋಣ ಜಿಲ್ಲಾ ಧಾರವಾಡ ಈಕೆಗೆ—

ಕೆಳಗೆ ಸಹಿ ಮಾಡಿದವನು ಈ ನೋಟೀಸಿನಿಂದ ನಿನಗೆ ತಿಳಿಸುವದೇನಂದರೆ— ನೀನು ನನ್ನ ಉಡಿಕೆ ಹೆಂಡತಿ ಇದ್ದು ಉಡಿಕೆ ಆಗಿ ಅಜಮಾಸು ಎಂಟು ವರ್ಷಗಳಾದವು ಈಗ ಎರಡು ವರ್ಷಗಳ ಹಿಂದೆ ನಿಮ್ಮ ಕಕ್ಕನಾದ ನಾಗಪ್ಪಾ ಬಿಲ್ಲವರ ಈತನು ಬಂದು ಯಲ್ಲಮ್ಮನ ಜಾತ್ರೆಗೆ ಹೋಗಬೇಕಾಗಿದೆ ಜಾತ್ರಿ ತೀರಿದ ಕೂಡಲೆ ತಿರುಗಿ ನಾನೇ ಬಂದು ನಿಮ್ಮ ಮನೆಗೆ ಕಳಿಸಿ ಹೋಗುತ್ತೇನೆಂದು ಹೇಳಿ ನಿನ್ನನ್ನು ಕರೆದುಕೊಂಡು ಹೋದಾ ತಿರುಗಿ ನೀನು ಆ ಪ್ರಕಾರ ಬಾರದೇ ಇದ್ದ ಕಾರಣ ಎರಡು ಮೂರು ಸಾರೆ ಕರಿಯಲಿಕ್ಕೆ ಕಳಿಸಿದೆನು ಆದರೂ ನೀನು ನಿಮ್ಮ ತಾಯಿಗೆ ಜಡ್ಡು ಆಗಿದೆಂದು ನೆವ ಹೇಳಿ ಬರಲಿಲ್ಲ ಪುನಃ ನಾನೇ ಸ್ವತಃ ನಿನ್ನನ್ನು ಕರಿಯಲಿಕ್ಕೆ ನಿಮ್ಮ ಊರಿಗೆ ಬಂದು ನಾಲ್ಕು ಮಂದಿ ಸಂಭಾವಿತರನ್ನು ಕೂಡಿಸಿ ಅವರ ಸಮಕ್ಷಮ ಹೇಳಿದೆನು ಆದಾಗ್ಯೂ ನಿಮ್ಮ ಕಕ್ಕನಾದ ನಾಗಪ್ಪನು ಕಳಿಸುವದಿಲ್ಲೆಂದು ಹೇಳಿದನು ಮತ್ತು ನೀನೂ ಬರಲಿಕ್ಕೆ ಒಪ್ಪಲಿಲ್ಲಾ ನನ್ನ ಮನೆಯಿಂದ ಜಾತ್ರಿ ದೆಸೆಯಿಂದ ನಿಮ್ಮ ಊರಿಗೆ ಹೋಗುವಾಗ್ಗೆ ನೀನು ನಿಮ್ಮ ಕಕ್ಕನಾದ ನಾಗಪ್ಪನು ಹೇಳಿ ತೆಗೆದುಕೊಂಡು ಹೋದ ಸಾಮಾನುಗಳ ವಿವರಾ—

- ೨ ಬೆಳ್ಳಿಬಂದಿ ಅಜಮಾಸ ತೊಲಿ ೩೨ ಕಿಮ್ಮತ್ತು ೨೦ ರೂಪಾಯಿ
- ೧ ಭಂಗಾರದ ಚುರಿ ಟೀಕಿ ತೊಲಿ ೧|| ಕಿಮ್ಮತ್ತು ೩೦ ರೂಪಾಯಿ
- ೧ ತಾಳೀ ಸಾಮಾನ ಭಂಗಾರದ್ದು ತೊಲಿ ೨|| ಕಿಮ್ಮತ್ತು ೫೦ ರೂಪಾಯಿ
- ೨ ಭಂಗಾರದ ಬಳಿ ತೊಲಿ ೭ ಕಿಮ್ಮತ್ತು ರೂಪಾಯಿ ೧೪೦
- ೨ ಬೆಂಡವಾಲಿ ಭಂಗಾರದವು ಕಿಮ್ಮತ್ತು ೮
- ೧ ಬೆಳ್ಳಿ ಕಡಗ ಕಿಮ್ಮತ್ತು ೬ ರೂಪಾಯಿ
- ೨ ಹೊಸ ಶೀರಿ ಕಿಮ್ಮತ್ತು ೫೦ ರೂಪಾಯಿ
- ೧ ಗುಡಾರ ಕಿಮ್ಮತ್ತು ೧೮ ರೂಪಾಯಿ

ಈ ಪ್ರಕಾರ ಒಟ್ಟು ೩೨೨ ರೂಪಾಯಿ ಕಿಮ್ಮತ್ತಿನ ಸಾಮಾನಗಳನ್ನು ಪ್ಯೆಯ್ದು ಈ ವರೆಗೂ ಬಾರದ್ದರಿಂದಾ ನಿನಗೆ ಈ ನೋಟೀಸು ಕೊಡುವ ಭಾಗಬಿತ್ತು ಕಾರಣ ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ಮೇಲೆ ಬರೆದ ಸಾಮಾನಗಳ ಸಹಿತವಾಗಿ ಬಂದು ನನ್ನ ಮನೆಯಲ್ಲಿ ಚಲೋ ರೀತಿಯಿಂದ ಬಾಳ್ವೆ ಮಾಡಬೇಕು. ಒಂದು ವೇಳೆ ನೀನು ಬಾರದೇಯಿದ್ದರೆ ಇದೇ ಸೋಡಚೀಟಿಯೆಂದು ತಿಳಿಯಬೇಕು ಅನಂತರ ನಿನ್ನದು ನನ್ನ ಮೇಲೆ ಯಾವ ತರದ ಸಂಬಂಧ ಉಳಿಯಲಾರದು ಮತ್ತು ನೀವು ಪೈದ ಸಾಮಾನುಗಳ ಸಲುವಾಗಿ ರೀತಿಪ್ರಕಾರ ಇಲಾಜು ಮಾಡಲಾದೀತು ಅಂತಾ ಕೊಟ್ಟ ನೋಟೀಸು

ತಾರೀಖು ೧-೬-೧೯೩೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಲಿಂಗಪ್ಪಾ ತಂದಿ ರಾಮಪ್ಪಾ ಮುಳಗಾವಿ ಸಾ॰ ದ್ಯಾಂಪುರ ತಾ| ಯಲಬುರ್ಗಾ ಜಿಲ್ಲಾ ಕೊಪ್ಪಳ (ನಿಜಾಮಯಿಲಾಖಾ)

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬೊನ್ನ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವವಲ್ಲದೆ, ಕೋಟಿ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನಿಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲಬಿಕಪಡೆ ನ ಜಾರಿವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರತ್ತದೆ ಪರಸ್ಥಳದವರು ತಮಗೆ ಬೇಕಾದರೆ ಕೆಳಗಿನ ವಿಳಾಸಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡ್ವಾನ್ಸ ಕಳಿಸತಕ್ಕದ್ದು.

[ಶಿಗಾವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೬ ರೂ
ವಾರ ಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1445

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊ

ಪು ೩೯ ೮ | ಧಾರವಾಡ ಬುಧವಾರ ತಾರೀಖು ೮ ನೇ ಜೂನ ೧೯೩೨ | ಸಂಚಿಕೆ ೧೧೯

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ರಸ್ತೆಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಕಾಲುಗಳುಂಟು. ಗಾಲಿಯು ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ಎಳೆಯುತ್ತದೆ. ಗಡ್ಡಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸಿನ ದರಗಳು.

—೧—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೀತಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—೦೦೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಯಮವು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬಹುದು.

ವಾಸುದೇವರಾವ ಬಿ. ಬಳ್ಳಾರಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೧—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಮನೆಯು ಮಾರಾಟ-

—(೦)—

ಧಾರವಾಡ ಶಾಲಗೆರಿಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೭೯ರ ಮನೆಯು ಮ. ಶ್ರೀ. ಸೌ|| ಗಂಗಾಬಾಯಿ ಕೌಲಗಿ ಇವರ ಹೆಸರಿನಿಂದಿರುವದನ್ನು ಮಾರತಕ್ಕದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳು ಳ್ಳದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹೀ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ ಆರ. ಕುಲಕರ್ಣಿ.
c/o ಬಿ. ಆರ. ಕೌಲಗಿ.
ಮೋತಿಕೆರಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ- ೮-೬-೩೭ ನೇ ಇಸ್ವಿ

ಸೇನಾಪತಿ ಅವರಿಯವರಿಗೆ ನಾಲ್ಕು ವರ್ಷದ ಶಿಕ್ಷೆ.

ನಾಗಪೂರದ ಕಾಯದೆಭಂಗದ ಜನಕರೂ, ಮುಖ್ಯಸ್ಥರೂ ಆದಂಥ ಶ್ರೀ ಮಂಚರಶಹಾ ಅವರಿಯವರಿಗೆ ಮ್ಯಾಜಿಸ್ಟ್ರೇಟರಾದ ಮಿ. ಜೋಶಿಯವರು ನಾಲ್ಕು ವರ್ಷದ ಕಠಿಣ ಶಿಕ್ಷೆ ವಿಧಿಸಿದರು. ಸ್ವತಃ ಶ್ರೀ ಅವರಿಯವರು ಈ ಶಿಕ್ಷೆಯು ಅದೇನೂ ಬಹಳವಲ್ಲೆಂದು ನಕ್ಕರು. ಏಕೆಂದರೆ- ಮಹಾತ್ಮರಿಗೆ ಆರು ವರ್ಷವಾಗಿತ್ತು. ಆದರೂ ಮ್ಯಾಜಿಸ್ಟ್ರೇಟರು ಇಂಥ ಕಠಿಣ ಶಿಕ್ಷೆ ವಿಧಿಸುವಾಗ ಶ್ರೀ ಅವರಿಯವರ ದೆಸೆಯಿಂದ ಅಂತಃಕರಣ ಕರಗಿದವರಾಗಬೇಕಾಗಿತ್ತು. ಏಕೆಂದರೆ- ಇವರು ಕೇವಲ ಒಂದು ತತ್ವದ ದೆಸೆಯಿಂದ ಕಾಯದೆಭಂಗ ಮಾಡಿದ್ದಾರೆ. ಮತ್ತು ತಮ್ಮ ಮೇಲೆ ಬಂದೊದಗಿದ ಗಂಡಾಂತರದ ದೆಸೆಯಿಂದ ತುಸುವಾದರೂ ಹೆದರದೆ, ಅಪ್ಪಿಬಿಟ್ಟಿದ್ದಾರೆ. ಇವರಲ್ಲಿ ಶಕ್ತಿಯಿರಲಿಲ್ಲೆಂದು ತುರಂಗದಲ್ಲಿಯೇ ವಿಚಾರಣೆ ಮಾಡಿದರು. ಮತ್ತು ಇವರ ಕಟ್ಟಿಗಳಲ್ಲಿ ಕೈ ಹಾಕಿ, ಇಬ್ಬರು ವಾರ್ಡರರು ಇವರನ್ನು ಮ್ಯಾಜಿಸ್ಟ್ರೇಟರ ಹತ್ತಿರ ತಂದರು. ಮತ್ತು ಶಿಕ್ಷೆ ಹೇಳಿದ ಬಳಿಕ ಇದೇ ಪ್ರಕಾರ ಇವರನ್ನು ಕರಕೊಂಡು ಹೋದರು. ಶ್ರೀ ಅವರಿಯವರು ಈ ಪ್ರಕಾರ ಅತ್ಯಂತ ನಾಜೂಕ ಸ್ಥಿತಿಯನ್ನು ಪ್ರತ್ಯಕ್ಷ ನೋಡಿದ ಮ್ಯಾಜಿಸ್ಟ್ರೇಟರು ಶಿಕ್ಷೆಯ ಸ್ವರೂಪವನ್ನು ಕಡಿಮೆ ಮಾಡಬೇಕಾಗಿತ್ತು. ಈ ಪ್ರಕಾರ ಮನಸ್ಸು ಕರಗುವದೊಂದೆಕಡೆಯಲ್ಲಿರಲಿ; ಇವರ ಮೇಲೆ ತೀರ್ಪಿನಲ್ಲಿ ಬಹಳ ಉಗ್ರವಾದ ಟೀಕೆ ಮಾಡಿದ್ದಾರೆ. ತೀರ್ಪು ಬರೆಯುವಾಗ ಇವರ ದೇಶಾಭಿಮಾನವು ಅವರ ಊಹೆಯಲ್ಲಿ ಸಹ ಬರಲಿಲ್ಲ. "ಇವರ ಭಾಷಣಗಳು ರಾಜದ್ರೋಹಾತ್ಮಕವಾಗಿ ಜನರನ್ನು ಸರಕಾರದ ವಿರುದ್ಧ ಬಂಡಾಯ ಮಾಡಿಸಲು ಹುರಿದುಂಬಿಸುವಂಥವಾಗಿವೆ. ಇವರು ಕೈಯಲ್ಲಿ ಹಿಡಿದ ಕತ್ತಿಯ ಹಿಡಿದದ್ದು ಜನರು ಶಸ್ತ್ರಧಾರಿಯಾಗಬೇಕು; ಬಾಂಬು ಮಾಡಬೇಕು; ಮತ್ತು ಇದರಿಂದ ಇಂಗ್ಲಿಷ ಜನರಿಗೆ ಮರಣಕಾಲ ಬಂತೆಂದು ತಿಳಿಯಬೇಕೆಂದಿಷ್ಟೇ" ಮ್ಯಾಜಿಸ್ಟ್ರೇಟರು ತೀರ್ಪಿನಲ್ಲಿ ಬರೆದಿದ್ದಾರೆ. ಅವರಿಯವರ ನಾರುವಿಕೆಗೂ ಈ ತೀರ್ಪಿಗೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಬಂಗಾಲದ ದಬ್ಬಾಳಿಕೆಯಲ್ಲಿ ಸಿಕ್ಕವರು ಬಂಧಮುಕ್ತರಾಗುವ ವರೆಗೆ ತಮ್ಮ ಕಾಯದೆಭಂಗವಾಗಿರುತ್ತದೆಂದು ಸಾರಿ ಹೇಳಿದ್ದಾರೆ. ಬಂಗಾಲದ ಕೈದಿಗಳ ಬಿಡುಗಡೆಯಾದಬಳಿಕ ಶ್ರೀ ಅವರಿಯವರು ಕತ್ತಿ ಹಿಡಿದು ಪುಂಡನಂತೆ ಊರೊಳಗೆ ತಿರುಗಾಡಿದರೆ- ಅವರ ಉದ್ದೇಶವು ರಾಜ್ಯಕ್ರಾಂತಿಯನ್ನು ಮಾಡಿಸುವದಾಗಿತ್ತೆಂದು ಹೇಳಬೇಕಾಗುತ್ತಿತ್ತು. ಹಾಗೇನೂ ಇರದೆ, ಕಾಯದೆಭಂಗದಿಂದ ಇಂಗ್ಲಿಷ ಜನರ ಹೆಸರಿನಿಂದ ಮರಣದ ಗಂಟೆ ಹೊಡೆಯಿತೆಂದು ನುಡಿಯುವದು ಯಾರಿಗೂ ಸಮಂಜಸವೆನಿಸಲಾರದು.

ಶ್ರೀ ಅವರಿಯವರ ಅಭಿನಂದನ.

—[೦][೦]—

ಮ್ಯಾಜಿಸ್ಟ್ರೇಟರು ತುರಂಗದಲ್ಲಿ ಶಿಕ್ಷೆ ಹೇಳಿದ ಕೂಡಲೆ, ಅವರ ಹಿತೈಷಿಗಳೂ ದೇಶಭಕ್ತರೂ ಅವರ ಕೊರಳೊಳಗೆ ಹೂವಿನ ಹಾರ ಹಾಕಿ, ಗೌರವಿಸಿ, ಅನ್ನವರ್ಜ ಮಾಡಿದ ಸಂಧಬಿಡಿರೆಂದು ವಿನಂತಿ ಮಾಡಿಕೊಂಡರು. ಆದರೆ ಇದಕ್ಕೆ ಅವರು ಒಪ್ಪಲಿಲ್ಲ. ಮತ್ತು ತಾವು ತುರಂಗದ ಒಟ್ಟೆ ಹಾಕತಕ್ಕವರಲ್ಲೆಂದು ಬಂಟತನದಿಂದ ಹೇಳಿದರು. ತುರಂಗದಲ್ಲಿ ಈ ಪ್ರಕಾರ ಬಹುಮಾನವಾದ ಬಳಿಕ, ಪಟ್ಟಣದಲ್ಲಿ ಅಂದೇ ಸಾಯಂಕಾಲದಲ್ಲಿ ಜಾಹೀರ ಸಭೆ ಕೂಡಿಸಿದರು. ಅದೇ ದಿನ ಕಾಂಗ್ರೆಸದ ವರ್ಕಿಂಗ ಕಮೀಟಿ ಸೇರಿ, ಶ್ರೀ ಅವರಿಯವರ ಸ್ವಾರ್ಥತ್ಯಾಗವನ್ನು ಪ್ರಶಂಸಿಸಿ, ಇವರನ್ನು ಹಿಡಿದ ಬಗ್ಗೆ ಸರಕಾರದ ಕೃತ್ಯ ದೂಷಿಸಿದ ಬಗ್ಗೆ ಠರಾವು ಮಾಡಲ್ಪಟ್ಟಿತು. ಕಾಂಗ್ರೆಸದ ವರ್ಕಿಂಗ ಕಮೀಟಿಯ ಪ್ರತಿನಿಧಿಯು ಬಂದು, ಸದ್ಯಃಸ್ಥಿತಿಯ ಅವಲೋಕನ ಮಾಡಿ, ರಿಪೋರ್ಟು ಮಾಡುವ ತನಕ ಕಾಯದೆಭಂಗವನ್ನು ತಡೆಯಬೇಕೆಂದು ಶೇಟ ಪೂನಾಚಂದರೆಂಬವರು ಈ ಕಮೀಟಿಯಲ್ಲಿ ಸೂಚನೆ ತಂದರು. ಆದರೆ ಅದು ಪಾಸಾಗಲಿಲ್ಲ. ಮತ್ತು ಈ ಸತ್ಯಾಗ್ರಹವನ್ನು ಮುಂದೆ ನಡಿಸುವಂತೆ ಶ್ರೀಯುತ ಧವಳೆ, ಗಾಯಕರ ಮತ್ತು ತಿಜಾರೆ ತ್ರಯರ ಒಂದು ಕಮೀಟಿ ನೇಮಿಸಿದರು.

ಆಲ ಇಂಡಿಯಾ ಕಾಂಗ್ರೆಸ ಕಮೀಟಿಯ ಮೆಂಬರರಾದ ಶ್ರೀ ರಂಗಸ್ವಾಮಿ ಅಯ್ಯಂಗಾರರು ಮುಂಬಯಿ- ಸರದಾರ ಗೃಹದಲ್ಲಿ ತಲೆಗಿಂಬಿಗೆ ಐನೂರು ರೂಪಾಯಿಗಳ ನೋಟುಗಳನ್ನಿಟ್ಟುಕೊಂಡು ಮಲಗಿದ್ದರು. ಅವು ಅಲ್ಲಿಯೇ ಮಟಮಾಯವಾಗಿರುತ್ತವೆ.

ಭೂಕಂಪ.

ಶೇಷನ ತಲೆ ನಡುಗಿತು.

—೦—

ಗುರುವಾರ ಮಧ್ಯರಾತ್ರಿಯ ಸಮಯದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಅನೇಕ ಪಟ್ಟಣ ಹಳ್ಳಿಗಳಲ್ಲಿ ಭೂಕಂಪವಾಯಿತು. ಸಿಮಲಾ, ಕಲಕತ್ತಾ, ಗಯಾ, ನಾಗಪೂರ, ಸಿಂಕದರಾಬಾದ ಮುಂತಾದ ಪಟ್ಟಣಗಳಲ್ಲಿ ಭೂಕಂಪವಾಗುವದನ್ನು ತಿಳಿಯುವ ಯಂತ್ರಗಳುಂಟು. ಈ ಯಂತ್ರಗಳಿಂದ ನಾಲ್ಕುಸಾವಿರ ಮೈಲಿನಷ್ಟು ವಿಸ್ತಾರವಾದ ದೇಶದಲ್ಲಿ ಭೂಮಿಯು ನಡುಗಿದಂತೆ ಕಂಡು ಬಂದಿದೆ. ಜಬಲಪೂರ, ಕಾನಪೂರ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳ ಗೋಡೆಗಳಿಗೆ ಬೀರು ಬಿದ್ದವೆ. ಬಿಂದವಾರಾದಲ್ಲಿ ಹಂಚುಗಳು ಅರಳು ಹುರಿದಂತೆ ಪಟಪಟನೆ ಹಾರಿದವು ಈ ಪಟ್ಟಣಗಳಿಗಿಂತ ಕಲಕತ್ತೆಯಲ್ಲಿ ಭೂಮಿಯು ಹೆಚ್ಚು ಕಸವಿನಿಂದ ಕಂಪಿಸಿತು. ಮಲಗಿದವರು ಎಚ್ಚರನ್ನು ತನ್ನ ಬೆಲೆಯುಳ್ಳ ಒಡವೆಗಳ ಆಶೆ ಸಹ ಮಾಡದೆ, ಮೈಮೇಲಿದ್ದ ಬಟ್ಟೆಯೊಂದಿಗೆ ಹೊರಬಿದ್ದರು. ಅಲ್ಲಿಯ ಪದ್ಧತಿಯ ಪ್ರಕಾರ ಜನರು ಶಂಖನಾದ ಮಾಡಿ; ಜನರನ್ನು ಎಚ್ಚರಿಸಿದರು. ವಿದ್ಯುತ್ತಿನ ಬೀಸಣಿಕೆಗಳು ಮೈಮೇಲೆ ಕರಕೊಂಡು ಬೀಸುತ್ತವೆನ್ನುವಷ್ಟು ಭಯಾನಕವಾಗಿ ಜೋಲಿ ಹೊಡೆದವು. ಗೋಡೆಗೆ ಹಚ್ಚಿದ್ದ ದೊಡ್ಡ ದೊಡ್ಡ ಕನ್ನಡಿಯ ಚಿತ್ರಗಳು ನೆಲಕ್ಕೆ ಅಪ್ಪಳಿಸುವಂತೆ ಹೊಯ್ದಾಡಿದವು. ಹೆಣ್ಣುಮಕ್ಕಳ ಮೈ ಮೇಲಿನ ದಾರದಲ್ಲಿ ಪೋಣಿಸಿದ ಒಡವೆಗಳು ಹರಿದು ನೆಲಕ್ಕೆ ಬಿದ್ದವು.

ಕೊಲೆ ಮತ್ತು ಸರಕಾರ-

ಮದ್ರಾಸ ಹಾಯಕೋರ್ಟಿನ ಜಡ್ಜರಾಗಿದ್ದ ಸರ ಸದಾಶಿವ ಅಯ್ಯರರು ಉತ್ತರಮಂಡಲದಲ್ಲಿ ಒಂದು ಭಾಷಣ ಮಾಡಿದರು. ಅದರಲ್ಲಿ ಅವರು ಅಂದದ್ದೇನಂದರೆ,

ಹದಿನಾರು ವರ್ಷಗಳ ತನಕ ನಾನು ಜಡ್ಜಿಯ ಕೆಲಸ ಮಾಡಿದೆನು. ನನ್ನ ಅನುಭವದ ಪ್ರಕಾರ- ಈ ದೇಶದಲ್ಲಾಗುವ ಕೊಲೆಗಳಲ್ಲಿ ನೂರಕ್ಕೆ ೯೫ ರಷ್ಟು ಶರೆಕುಡಿಯುವದರಿಂದಾಗುತ್ತವೆ ಕುಡಿಯುವಿಕೆಯು ಬಡವನ ವೈರಿಯಾಗಿರುತ್ತದೆ. ಈ ವೈರಿಯನ್ನು ಹೊಡೆದು ಹಾಕಲಿಕ್ಕೆ ಸರಕಾರವು ಹಣವಿಲ್ಲೆಂದು ನೆವನ ಹೇಳಬಾರದು. ಸಾಲ ತೆಗೆದಾದರೂ ಈ ವ್ಯಸನವನ್ನು ನಿಲ್ಲಿಸಬೇಕು.

ಕೊಲೆ ಮಾತ್ರವಲ್ಲ. ಕುಡುಕರ ಮನೆಯಲ್ಲಿ ನಿತ್ಯ ಜಗಳ, ಗಡಿಗೆ ಮಡಿಕೆಯೊಡೆಯುವದು,

ಮತ್ತು ದರಿದ್ರತನವು ಕಠಿಣದಿಯಿಂದಲೇ ಉಂಟಾಗುತ್ತದೆ. ಸರಕಾರವು ಪ್ರಜೆಗೆ ರಾಜಕೀಯ ಸ್ವಾತಂತ್ರ್ಯ ಕೊಡಲಿಕ್ಕೆ ಮಾತ್ರ ಗಟ್ಟಿಯಾಗಿ ಕೈಬಿಗಿಹಿಡಿದು, ಪಾನ ಸ್ವಾತಂತ್ರ್ಯಕ್ಕೆ ಮಾತ್ರ ದಶದಿಕ್ಕುಗಳನ್ನು ತೆರೆದಿಡುವದು!!

ಮಂಗಳೂರಲ್ಲಿ ಕೂಡಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರು ಮಾಡಿದ ಭಾಷಣದ ಮಹತ್ವದ ಭಾಗಗಳು.

೧ ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿತೆಂದು ಒಂದು ಕಡೆಯವರು ವಾದಿಸುತ್ತಾರೆ. ಮತ್ತೊಂದೆಡೆಗೆ ತೆಲುಗಿನಿಂದ ಬಂದುದೆಂದು ಕೆಲವರ ವಾದ. ಒಬ್ಬ ತಮಿಳನು ಕನ್ನಡ ತೆಲುಗು ಮಲೆಯಾಳ ಮೊದಲಾದ ಭಾಷೆಗಳಿಗೆ ಹೆತ್ತತಾಯಿ ತಮಿಳೆಂದು ಸ್ವಭಾಷಾಮಾತೆಯನ್ನು ಸ್ತುತಿಸಿರುವನು. ನಮ್ಮ ಕರ್ನಾಟಕ ಮಂಡಲಿಯಲ್ಲಿ ಬಹು ಭಾಷಾವಿಶಾರದರು ಹಲವರು ಇರುವುದರಿಂದ ಇವರು ಈ ವಿಷಯವನ್ನು ಎತ್ತಿಕೊಂಡು ಒಂದು ಚರ್ಚೆಯನ್ನು ನಡೆಯಿಸಿ ಇತ್ಯರ್ಥ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಬೌದ್ಧಮತದಿಂದ ಜೈನಮತವು ಹುಟ್ಟಿತೆಂದು ಹೇಳುವ ಚರಿತ್ರಕಾರರಂತೆ ತಮಿಳಿನಿಂದ ಕನ್ನಡವು ಹುಟ್ಟಿತೆಂದು ನಮ್ಮ ಮಕ್ಕಳಿಗೆ ಕಲಿಸುವದೋ? ತಮ್ಮ ಅಭಿಪ್ರಾಯವೇನು?

ಕನ್ನಡ, ತಮಿಳು, ತೆಲುಗುಗಳಿಗೆ ಸಾಮಾನ್ಯವಾದ ಅಕ್ಷರವಾದರೂ ಶಬ್ದಗಳಲ್ಲಿ ಸಂದೇಹ ಒದಗಿದೆಂದು ಕನ್ನಡದ ತಮಿಳನ್ನು ಅನುಸರಿಸಿರುವುದೋ?

ಕನ್ನಡಕ್ಕೂ ತಮಿಳಿಗೂ ಸಮಾನವಾದ ಅಕ್ಷರವಾದರೂ ಶಬ್ದಗಳಲ್ಲಿ ಭೇದವುಂಟೇ? ಸಂಶಯವಾದ ಅಂತಹ ಶಬ್ದಗಳಲ್ಲಿ ತಮಿಳೇ ಸರಿಯೆಂದು ಎಮರ್ಸನಾದಿನವರಾದ ನಾವುಗಳು ಅಂಗೀಕರಿಸಬಹುದೋ ?

೪ ಕನ್ನಡ ಲಿಪಿಗೂ ತೆಲುಗಿನ ಲಿಪಿಗೂ ಇರುವ ಸಾಮ್ಯದಿಂದ ಕನ್ನಡಲಿಪಿ ತೆಲುಗಿನಿಂದ ಬಂದಿತೆಂದು ಹೇಳಲಿಕ್ಕೆ ಸಾಕು ತಾನೇ ? ಇದಲ್ಲದೆ ಇನ್ನೇನಾದರೂ ಪ್ರಬಲವಾದ ಆಧಾರವಿದೆಯೋ?

೫ ವಿದ್ಯಾನಗರದ ಅರಸುಗಳಲ್ಲಿ ಕೃಷ್ಣದೇವರಾಯನು ಕನ್ನಡ ವಂಶದವನೋ? ಸಾಳ್ವವಂಶದವನೋ? ಇವನ ಸ್ವಭಾಷೆ ಕನ್ನಡವೋ? ತೆಲುಗೋ, ತುಳುವೋ? ಇವನ ಕಾಲದಲ್ಲಿ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹವು ಹೆಚ್ಚಾಗಿತ್ತೋ?

೬ ಕನ್ನಡನಾಡಿನ ಮೇರೆಗಳು ಕಾವೇರಿಯಿಂದ ಗೋದಾವರಿಯ ವರೆಗೆ, ಎಂದರೆ ಮೂಡು ಪಡುವಣ ಮೇರೆಗಳನ್ನು ಕಾಲಕಾಲಕ್ಕೆ ನಿರ್ಣಯಿಸಿರುವ ಆಧಾರಗಳಾವವು? ಈ ಕೆಳಗಣ ಪದ್ಯಗಳು ಬರಿಯ ಪ್ರತಾಪದ ಮಾತುಗಳೋ, ಇಲ್ಲದಿದ್ದರೆ ಸಾರ್ಥಕವಾದುವೋ ?

(೫ ಪದ್ಯಗಳನ್ನು ಉದಹರಿಸಿರುವರು.)

೭ ಕರ್ನಾಟಕ ಗತವೈಭವದಲ್ಲಿ ದೇಶಚರಿತ್ರೆಯ ಕೆಲವು ಹೆಗ್ಗುರುತುಗಳು ಕಾಣುತ್ತವೆ. ಇತರ ವಿದ್ಯಾವಂತರು ಚರಿತ್ರೆಯನ್ನು ಬರೆಯುವ ಕಾರ್ಯವನ್ನು ಕೈಕೊಳ್ಳಬೇಕೆಂದು ಗ್ರಂಥಕಾರರು ಸಾರಿಸಾರಿ ಹೇಳುತ್ತಿರುವರು. ನಮ್ಮ ಕನ್ನಡ ದೇಶದ ಚರಿತ್ರೆಯ ಕಾರ್ಯವನ್ನು ಕೈಕೊಂಡಿರುವ ಮಹಾಶಯರ ಆ ಚರಿತ್ರೆ ಎಂದಿಗೆ ನಮಗೆ ಓದಲಿಕ್ಕೆ ದೊರೆಯುವುದು?

೮ ಕನ್ನಡ ದೇಶದ ಸ್ಥಿತಿಗತಿಗಳನ್ನು ಅನುಭವಿಸಿ ಈಗಿನ ಕಾಲದಲ್ಲಿ ಕಾದಂಬರಿಗಳಾಗಲಿ ನಾಟಕಗಳಾಗಲಿ ಆಗಿವೆಯೇ? ಆಗುವ ಸಂಭವವೆಂದು? ಹೇಳಿ.

೯ ಕನ್ನಡ ಭಾಷೆಯಲ್ಲಿ ಈಗಿನ ಕಾಲಕ್ಕೆ ತಕ್ಕ ವ್ಯಾಕರಣವೊಂದಾಗಬೇಕೆಂದು ಪರಿಷತ್ಪತ್ರಿಕೆಯಲ್ಲಿ ಒದೆಡೆಯಲ್ಲಿ ಸೂಚನೆ ಹೊರಟಿದೆ, ಈ ಕೆಲಸವು ಪರಿಷತ್ತಿನ ಸಂಬಂಧವಾಗಿದ್ದರೆ. ಅದನ್ನು ಪರಿಷತ್ತಿನವರು ಕೈಕೊಳ್ಳಬಹುದಾದರೂ ಮಲ್ಲಪ್ಪನವರ ಶಬ್ದಾರ್ಥವು ಸಾಕೆಂದು ತೋರುವುದು. ಅದು ಸಾಲದಿದ್ದಲ್ಲಿ ಮತ್ತೊಮ್ಮೆ ಪುನರಾವೃತ್ತಿ ಆದರೆ ಸಾಕು.

೧೦ ನಿಘಂಟುವಿನ ಕೆಲಸವು ಅಷ್ಟು ಶೀಘ್ರದಲ್ಲಿ ಆಗುವಂತೆ ತೋರುವುದಿಲ್ಲ. ಪುರಾತನ ಗ್ರಂಥಗಳ ವಿಷಯದಲ್ಲಿ ಬೇಕಾದರೆ ತ್ವರೆಗೊಳಿಸಬಹುದು. ಪ್ರಕೃತದಲ್ಲಿ ಹೊಸಗನ್ನಡಕ್ಕೆ ನಿಘಂಟೆಂದರೆ ಒಂದು ಪಾರಿಭಾಷಿಕ ನಿಘಂಟು (Scientific glossary) ಅವಶ್ಯಕವಾಗಿ ತೋರುವದು. ಈ ಕೆಲಸವನ್ನು ಪ್ರಾಜ್ಞರಿಂದ ಮಾಡಿಸಬೇಕಾಗಿರುವುದು.

೧೧ ನವೀನ ಗ್ರಂಥಗಳ ಪ್ರೋತ್ಸಾಹಕ್ಕಾಗಿ ಸರಕಾರದವರು ಅನುಗ್ರಹದಿಂದ ಬಹುಮಾನ ಸ್ಪರ್ಧೆಗಳನ್ನು ಏರ್ಪಡಿಸಿರುವದು ಶ್ಲಾಘನೀಯವಾಗಿರುವುದು.

೧೨ ನಾಟಕಗಳಲ್ಲಿ ಪುರಾತನ ಸಂಸ್ಕೃತ ಕವಿಗಳಾದ, ಕಾಳಿದಾಸ, ಭಾಸ ಮೊದಲಾದವರ ನಾಟಕಗಳ ಪರಿವರ್ತನೆಗಳಾಗಿವೆ; ಇನ್ನೂ ಆಗುತ್ತಿವೆ ಇವುಗಳಿಂದ ಕನ್ನಡ ಭಾಷೆಗೆ ಆಗುವ ಅಭಿವೃದ್ಧಿ ಸಾಕೆ? ನಮ್ಮ ನಾಡಿನ ಚರಿತ್ರೆಗೆ ಸಂಬಂಧಪಟ್ಟ ನಾಟಕಗಳೂ ಕಾದಂಬರಿಗಳೂ ಇತಿಹಾಸಗಳೂ ಅತಿ ವಿರಳವಾಗಿವೆ. ಈ ಪ್ರಾಂತದಲ್ಲಿ ಬರೆದಿರುವ "ಕೋಟಿ-ಚನ್ನಯ್ಯ" ಎಂಬ ಪುಸ್ತಕವು ಶ್ಲಾಘನೀಯವಾದುದೆಂದು ವಿದ್ವಜ್ಜನರ ಸಭೆಯಲ್ಲಿ ಅವಿವೇಕನಂತೆ ನುಡಿಯುದಕ್ಕೆ ನನಗೆ ಸಂಕೋಚವಾಗುತ್ತಿಲ್ಲ. ಯಾದುದಲ್ಲದೆ, ಗ್ರಂಥಕರ್ತರ ವಿಷಯದಲ್ಲಿಯೂ ಗಹಗಹಿಕೆಯಾಗಿ ಪರಿಣಮಿಸಿರುವುದು ಕೇವಲ ಶೋಚನೀಯವಾಗಿದೆ. ಹೀಗೆಯೇ ಎಷ್ಟೋ ಸದುದ್ಯಮಗಳು ಉತ್ಸಾಹಭಂಗವಾಗಿ ದುಷ್ಪರಿಣಾಮವನ್ನು ಹೊಂದಬೇಕಾಗಿದೆ.

೧೩ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುವ ಉದ್ದೇಶವು ಆಧುನಿಕ ಗತಿಗೆ ವಾಹನವಾಗಿರಬೇಕೆಂದು ಪ್ರಬಲವಾಗಿ ಘೋಷಿಸುವುದರಿಂದ ಅಂತಹ ವಾಚಕ ಕಾವ್ಯವನ್ನು ನಿರ್ವಹಿಸಲಾರದ ಗ್ರಂಥಗಳನ್ನು ದೂರೀಕರಿಸುವುದೇ ಯುಕ್ತವೆಂದೂ ಕೆಲವೆಡೆಗಳಲ್ಲಿ ಸೂಚನೆಗಳಿವೆ. ಈ ವಿಷಯದಲ್ಲಿ ಕೇವಲ ಉಪಯುಕ್ತತಾವಾದ ಅಭಿಪ್ರಾಯವನ್ನೇ ಇಟ್ಟುಕೊಂಡು ಜ್ಞಾನಲಾಭದ ದೃಷ್ಟಿಯಿಲ್ಲದೆ ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಬಾರದು ಎಂಬುದು ಕೆಲವರ ಅಭಿಪ್ರಾಯ. ಕಾವ್ಯಮೂರ್ತಿ ಕಾವ್ಯ ಕಲಾನಿಧಿಗಳು ಪ್ರೋತ್ಸಾಹವಿಲ್ಲದೆ ತೆಪ್ಪನಾದ ಬಳಿಕ ಪ್ರಾಚೀನ ಗ್ರಂಥಗಳ ಉದ್ಧಾರಕ್ಕೆ ಮಿಕ್ಕವರು ಮಾಡುವ ಪ್ರಯತ್ನಗಳ ಗತಿಯೇನು? ಪುರಾತನ ಗ್ರಂಥಗಳ ರಚನೆಯನ್ನು ಕೈಕೊಳ್ಳುವವನು ಎಗ್ಗನಾಗಿರಲಿಕ್ಕೆ ಸಾಕು. ಆಗರೆ ಶಿಥಿಲವಾಗಿ ಹೋಗಿ ತೌಡಿನಂತೆ ಧೂಳಾಗಿರುವ ತಾಳೆಯ ಪತ್ರದ ಗ್ರಂಥಗಳು ಇನ್ನೂ ಎಷ್ಟು ಶತಮಾನಗಳಿರಬೇಕೆಂದು ನಾವು ಹಾರೈಸುತ್ತಿರಬೇಕು? ಅತ್ತಿಮಬ್ಬೆಯ ಕಾಲಕ್ಕೆ ಶಾಂತಿ ಪುರಾಣದ ಪ್ರತಿಗಳೇನಾದುವು? ದಾನ ಚಿಂತಾಮಣಿಯೆನಿಸಿದ ಆ ಮಹನೀಯಳು ಮಾಡಿದುದೇನು? ಈಗ ನಾವು ಮಾಡುವುದೇನು?

ರಶಿಯುರ ಹುರಾ ಹುರಾ-

ಇಂಗ್ರೇಜಿ ಸರಕಾರದವರು ರಶಿಯರಿಗೆ ಕೊರಗಿ ಹಾಕಿದರೂ. ಇವರ ಅಭಿನಂದನ ಮಾಡಿ, ಇವರ ಪ್ರಯಾಣವು ಸುಖರೂಪದಿಂದಾಗಲೆಂದೂ ಇದರಲ್ಲಿ ತಮ್ಮ ಪೂರ್ಣ ವಿಶ್ವಾಸವಿರುತ್ತದೆಂದೂ ತೋರಿಸುವದಕ್ಕಾಗಿ ಕೂಲಿಕಾರ ಪಕ್ಷದ ಪ್ರಮುಖ ಸಭಾಸದರಾದ ಮೆಸರ್ಸ್ ಲ್ಯಾನ್ಸಬರಿ, ಸುಂದರಸನ್ನ ಮತ್ತು ನಬಶಿಯಾಂತ ಬೋಲ್ಶೆವಿಕರಾದ ಶ್ರೀ ಶಂಲಾತವಾಲಾ ಇವರು ಸ್ಟೇಶನಕ್ಕೆ ದಯಮಾಡಿಸಿದ್ದರು. ಇವರಂತೆ ಜರ್ಮನ ಮತ್ತು ಜಪಾನದ ರಾಯಭಾರಿಗಳ ಪ್ರತಿನಿಧಿಗಳೂ ಬಂದಿದ್ದರು. ಮಿ. ಲ್ಯಾನ್ಸಬರಿಯವರು ರಶಿಯರ ಹೆಸರಿನಿಂದ ಮೂರು ಸಾರೆ ಜಯಘೋಷ ಮಾಡಿದರು. ಹಾಗು ಮಿಕ್ಕ ಜನರು ರಾಜ್ಯಕ್ರಾಂತಿ ದ್ಯೋತಕವಾದ ಕೆಂಪು ನಿಶಾನೆಯ ಹಾಗೆ. ಅಂತರ್ರಾಷ್ಟ್ರೀಯ ಗೀತೆಗಳನ್ನು ಹಾಡಿದರು.

ನಿನ್ನಿನ ದಿವಸ- ಪ್ಯಾಗಪ್ರವೇಶವು ಉರಿಬಿಸಿಲಿನ ಸೂರ್ಯ ಪ್ರಕಾಶದಲ್ಲಾಯಿತು.

ಜಾಹೀರ ನೋಟೀಸು.

ಲಕ್ಷ್ಮಿ ಕೋಮ ಸಂಗಪ್ಪಾ ಅಗಸಿಂಡಿಯವರ ಹಾಲಿವಸ್ತಿ ಕುಸುಗಲ್ಲ ಇಕಿಗೆ—

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವವನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದುವಿಯ ಹೆಂಡತಿಯಾಗಬೇಕು ನನ್ನಿಂದ ನಿನಗೆ ಒಂದು ಹೆಣ್ಣು ಹುಟ್ಟಿದೆ ಅದು ಅಜಮಾಸು ನಾಲ್ಕು ವರ್ಷದ್ದು ಇರುತ್ತದೆ. ಮದಿವೆಯಾಗಿ ಪ್ರಬುದ್ಧಳಾದ ಒಳಕ ನೀನು ಯಾವಾಗಲು ನನ್ನ ಕೂಡ ಚಲೋ ರೀತಿಯಿಂದ ಪ್ರಪಂಚ ಮಾಡಲಿಲ್ಲ ಮನೆತನದ ಬಾಳಿವೆ ಮಾಡಲಿಲ್ಲ ಹಗಲೆಲ್ಲ ತವರ ಮನಿಗೆ ಹೋಗುತ್ತಿದ್ದಿ ಮತ್ತು ನಿನ್ನ ತಾಯಿಯು ನನ್ನ ಮಾಲಕಿಯು ನಿನ್ನ ಪೈಮೋಲಿನ ದಾಗೀನ ಕೊಡದೆ ಒಬ್ಬ ಗೈ ಮತ್ತು ಒರೇ ಕೋಳಿನಿಂದ ನನ್ನ ಮನಿಗೆ ಜುಲುಮೆಯಿಂದ ನಿನ್ನನ್ನು ಕಳಿಸುತ್ತಿದ್ದಳು ನಾನು ಬಹಳ ಜುಲುಮೆ ಮಾಡಿದಾಗ ಕಳಿಸುತ್ತಿದ್ದಳು ಆದರೆ ಏಳಿಕಡಿಗೆ ಎಳೆಂಟು ತಿಂಗಳಾಯಿತು ನಿನ್ನನ್ನು ಕಳಿಸಲೇ ಒಲ್ಲಳು ದೈವದವರು ಹೇಳಿದರೂ ಕಳಿಸಲಿಲ್ಲ ಈಗಿನ ನಿನ್ನ ಹಾಗು ನಿನ್ನ ತಾಯಿಯ ನಡತೆ ನೋಡಿದರೆ- ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಪ್ರಪಂಚ ಮಾಡುವದು ಇದ್ದಂತೆ ಬಿಲಕೂಲ ತೋರಲಿಲ್ಲ ಆದ್ದರಿಂದ ಈ ನೋಟೀಸು ಕೊಟ್ಟಿದ್ದೇನೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ದಾಗೀನೆ ಅಂದರೆ-

೧ ಬಂಗಾರದ ಬಳಿ ಜೋಡು ಆರು ತೊಲಿ
೨ ಬಂಗಾರದ ಟೀಕಿ ಕಿ|ರೂ|೫೦
೩ ತೋಳಬಂದಿ ಜೋಡು ಕಿ|ರೂ|೨೦
೪ ಬೆಳ್ಳಿ ಸರಪಳಿ ಅರು ಸೇರು
೫ ಬೆಳ್ಳಿ ಪಟ್ಟಿ ಅಚ್ಛೇರು
೬ ಪವಳಾ ಕಿ|ರೂ|೧೦
೭ ಮದವೆಯ ಸೀರಿ ಕಿ|ರೂ|೪೦

ಇಷ್ಟು ತಕ್ಕೊಂಡು ಮಗಳ ಸಹಿತವಾಗಿ ನನ್ನ ಮನಿಗೆ ಬಂದು ಸುಶೀಲವಾಗಿ ಬಾಳಿವೆ ಮಾಡಿಕೊಂಡಿರಬೇಕು ಒರ ಇದಕ್ಕೆ ತಪ್ಪಿದರೆ ನೀನು ನನ್ನ ಕೂಡ ಬಾಳಿವೆ ಮಾಡಲಿಕ್ಕೆ ಕಬೂಲ ಮಾಡುವದಿಲ್ಲೆಂದು ತಿಳಿದು ನಾನು ಎರಡನೆಯವಳನ್ನು ಮದುವೆ ಮಾಡಿಕೊಳ್ಳುವೆನು ಮತ್ತು ನಿನ್ನ ಬಾ|| ಯಾವತ್ತು ಸಂಬಂಧ ಬಿಟ್ಟುಕೊಡುವೆನು ಆದ್ದರಿಂದ ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು ಮತ್ತು ನಿನ್ನ ಹಕ್ಕು ಈ ತಾರೀಖಿನಿಂದ ನನ್ನ ಮೇಲೆ ಮತ್ತು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಯಾವ ತರದಿಂದಲೂ ಉಳಿಯಲಾರದು ಇದರ ಶಿವಾಯಿ ನಾನು ನಿನ್ನ ಹಾಗು ನಿನಗೆ ಲಗ್ನದಾಗ ಕೊಡಿವಿ ನಿನ್ನ ತಾಯಿಯ ಮೇಲೆ ನನ್ನ ದಾಗೀನೆ ಮತ್ತು ನನ್ನ ಕೂಸಿನ ಕಬಜಾದ ಬಗ್ಗೆಯಿಂದ ಇಲಾಜ ನಡಿಸುವೆನು. ಈ ಬಾಬತು ಕೋರ್ಟಿನ ಖರ್ಚಿನ ಬೋಜಾ ನಿಮ್ಮ ಮೇಲೆ ಉಳಿಯುವದು ನೀನು ಈ ನೋಟೀಸಿಗೆ ಉತ್ತರವೆಂದೂ ಸಾಹುಕಾರರಲ್ಲಿ ಸಾಲವಾಗಿರುತ್ತವೆಂದೂ ಥಳಥಳತೆ ನೋಟೀಸು ಕೊಟ್ಟರೆ ಅದನ್ನು ನಾನು ಹಿಡಿಯುವದಿಲ್ಲ ಮತ್ತು ಆ ನೋಟೀಸಿನಿಂದ ನಾನು ಯಾವ ತರದಿಂದಲೂ ಬಾಂಧಾಯಿಸುವದಿಲ್ಲ. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ದಾಗೀನೆ ಮತ್ತು ಕೂಸು ಸಹಿತವಾಗಿ ಬರದಿದ್ದರೆ- ಇದೇ ನೋಟೀಸು ಖಂಡಿತವಾದ ಸೋಡಪತ್ರವೆಂದು ತಿಳಿಯಬೇಕು ಮತ್ತು ಇಂದಿನಿಂದ ನನ್ನ ಹಾಗು ನಿನ್ನ ಗಂಡ ಹೆಂಡತಿ ನಾತೆಯು ಉಳಿಯಲಿಲ್ಲೆಂದು ಪೂರಾ ತಿಳಿಯಬೇಕು ನೀನು ನನ್ನ ಮನಿಬಿಟ್ಟು ಹೋಗುವಾಗ ಗರ್ಭಿಣಿ ಇದ್ದಿಲ್ಲ. ಆ ದಿವಸದಿಂದ ನೀನು ಗರ್ಭಿಣಿ ಇದ್ದೇನೆಂದು ಸಾಧಿಸಿದರೆ- ಅದು ನನ್ನ ಗರ್ಭದಿಂದ ಆಗದಕಾರಣ ಆ ಗರ್ಭದಿಂದ ಹುಟ್ಟಿದ ಕೂಸಿನ ವಾರಸಾ ನನ್ನ ಮೇಲೆ ಬಿಲಕೂಲ ಉಂಟಾಗಲಾರದು. ಅಂತಾ ಕೊಟ್ಟ ನೋಟೀಸು

ತಾರೀಖು ೬ ಜೂನ ೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಸಂಗಪ್ಪಾ ತಂದಿ ಬಸಪ್ಪಾ ಅಗಸಿಂಡಿಯವರ ಈತನ ಕೈದು ಇರುತ್ತದೆ.

ನೋಟೀಸು.

ವಿನಂತಿ! ವಿನಂತಿ!! ವಿನಂತಿ!!!

ದಿ ಸದರ್ನ ಮರಾಠಾ ಅರ್ಬನ್ ಕೋ. ಆ. ಕ್ರೆ. ಬ್ಯಾಂಕ ಲಿಮಿಟೆಡ್ ಧಾರವಾಡ, ಇದರ ವಾರ್ಷಿಕ ಜನರಲ್ ಸಭೆಯು ಕೆಳಗೆ ವಿವರಿಸಿದ ವಿಷಯಗಳ ನಿರ್ಣಯ ಕುರಿತು, ತಾರೀಖು ೧೩ನೇ ಮಾಹೆ ಜೂನ ಸನ್ ೧೯೩೭ನೇ ಇಸ್ವಿ (ಆದಿತ್ಯವಾರ ದಿವಸ) ಸಾಯಂಕಾಲದ ೪ ಘಂಟೆಕ್ಕೆ ಮೇಲ್ಕಂಡ ರಜಿಸ್ಟರ್ಡ ಬ್ಯಾಂಕ ಕಛೇರಿಯಲ್ಲಿ ಕೂಡುವದು. ಕಾರಣ, ದಯಮಾಡಿ ಬ್ಯಾಂಕಿನ ಎಲ್ಲ ಮೆಂಬರರು, ಸದರೀ ಸ್ಥಳಕ್ಕೆ, ಸದರೀ ಮೇಲ್ಕಂಡ ದಿವಸ, ಸದರೀ ವೇಳೆಕ್ಕೆ ಅವಶ್ಯ ಬರಬೇಕಾಗಿ ವಿನಂತಿ ಅದೆ.

ವಿಷಯಗಳು.

೧ ಸನ್ ೧೯೩೭ನೇ ಮಾರ್ಚ ೩೧ಕ್ಕೆ ಮುಗಿಯುವ ವರ್ಷದ ಸಂಬಂಧವಾಗಿ ಬ್ಯಾಂಕಿನ ಡಾಯರೆಕ್ಟರರ ರಿಪೋರ್ಟನ್ನು ಅಂಗೀಕರಿಸಲಿಕ್ಕೆ.

೨ ಸನ್ ೧೯೩೭ನೇ ಇಸ್ವಿ ಮಾರ್ಚ ೩೧ಕ್ಕೆ ಮುಗಿಯುವ ವರ್ಷದ ಬ್ಯಾಂಕಿನ ಅಢಾವೆ ಪತ್ರಿಕೆಗಳನ್ನು ಅಂಗೀಕರಿಸಲಿಕ್ಕೆ.

೩ ಡಿವ್ಹಿಡೆಂಡ ಠರಾಯಿಸಲಿಕ್ಕೆ.

೪ ಸನ್ ೧೯೩೭-೩೮ನೇ ಸಾಲಿನ ಬಾಬತು, ಆಡಿಟರರನ್ನು ನೇಮಿಸಲಿಕ್ಕೆ, ಹಾಗೂ ಅವರ ಮೆಹನತಾನೆ ಠರಾಯಿಸಲಿಕ್ಕೆ.

೫ ಸುಪರವಾಯಿಜಿಂಗ ಬೋರ್ಡಿನ ಮೆಂಬರರನ್ನು ಆರಿಸಲಿಕ್ಕೆ.

೬ ಬಾಯಲಾ ನಂ. ೪೪ನೇ ಪ್ರಕಾರ ಯಾವ ಮೆಂಬರ ಜನರಿಗೆ, ೫೦೦೦ (ಐದು ಸಾವಿರ ರೂ,)ಗಳ ತನಕ ಮ್ಯಾನೇಜಿಂಗ ಕಮಿಟಿಯವರಿಗೆ ಯೋಗ್ಯ ಕಂಡು ಬಂದಲ್ಲಿ, ಸಾಲ ಕೊಡತಕ್ಕ ಬಗ್ಗೆ, ನಿರ್ಣಯ ಮಾಡುವದಕ್ಕೆ, ವ ಈ ಮೊದಲನೇ ಮ್ಯಾನೇಜಿಂಗ ಕಮಿಟಿಯವರು ಜನರಲ್ ಕಮಿಟಿಯ ಮಂಜೂರಿಯನ್ನೂ ಅಪೇಕ್ಷಿಸಿ ಕೊಟ್ಟ ಇಂಥ ಸಾಲಗಳನ್ನು ಮಂಜೂರ ಮಾಡುವದಕ್ಕೆ.

೭ ಮ್ಯಾನೇಜಿಂಗ ಕಮಿಟಿ ಚೇರಮನ್ನರು ಸೂಚಿಸಿದ ಇತರ ವಿಷಯಗಳನ್ನು ಕುರಿತು ವಿಚಾರ ಮಾಡುವದಕ್ಕೆ.

೮ ಸನ್ ೧೯೩೭-೩೮ನೇ ಸಾಲಿನ ಬಾಬತು ಮ್ಯಾನೇಜಿಂಗ ಕಮಿಟಿ ಮೆಂಬರರನ್ನು ಆರಿಸಲಿಕ್ಕೆ.

ಸಹಿ:— ವಿಶ್ವನಾಥರಾವ ನಾರಾಯಣರಾವ ಜೋಗ,
ಬಿ. ಎ. ಎಲ್‌ಎಲ್. ಬಿ. ಎಮ್. ಎಲ್. ಸಿ.
ಚೇರಮನ್ (ಮ್ಯಾ. ಕ.)
ಸ. ಮ. ಅ. ಕೋ. ಆ. ಕೆ. ಬ್ಯಾಂಕ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಗುರುವಾರ ತಾರೀಖು ೯ ನೇ ಜೂನ ೧೯೨೭ | ಸಂಚಿಕೆ ೧೨೦

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಇಂಚು ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೪೫|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ಕಾಲೇಜಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀ ... ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿ ಒಂದಾಣೆ. ಇಂಗ್ಲಿಷ ಪ್ರತಿಯೊಂದು ಪಂಕ್ತಿಗೆ ಎರಡು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಕೋರ್ಟ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ. ಡಬಲ್ ಕಾಲಮಿನ ಪಂಕ್ತಿಗಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—೦೦೦—

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯಿಸಲ್ಪಡುವದು. ಕಾಯಂ ಮುತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಸಿ. ಕಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಮನೆಯು ಮಾರಾಟ.

—(೦)—

ಧಾರವಾಡ ಹಾಲಗೆರೆಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೮ನೇಯ ಮನೆ ಶ್ರೀ. ಸೌ|| ಗಂಗಾಬಾಯಿ ಕೌಲಗಿ ಇವರ ಹೆಸರಿನ್ಮೇಲಿರುವದನ್ನು ಮಾರಬೇಕಾಗಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳುಳ್ಳದ್ದಿರುತ್ತದೆ. ಕೊಳ್ಳಬಯಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹಿ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ
c/o ಪಿ ಆರ. ಕೌಲಗಿ.
ಮೋತಿತಲಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ- ೯-೬-೩೭ ನೇ ಇಸ್ವಿ

ಅರ್ಲ ವಿಂಟರಟನಸಾಹೇಬರ ವಿರುದ್ಧ ಶ್ರೀ. ಸುಭಾಷಚಂದ್ರಬೋಸ.

ಬಂಗಾಲ ಸರಕಾರದವರು ದಬ್ಬಾಳಿಕೆಯ ಕಾಯುದೆಯನ್ನು ಪಾಸ ಮಾಡಿದ ಕೂಡಲೆ, ಅನೇಕ ಜನ ಪ್ರತಿಷ್ಠಿತ ಬಂಗಾಲಿಗಳನ್ನು ಹಿಡಿದು ಸೆರೆಮನೆಯಲ್ಲಿ ಹಾಕಿದರು. ಮುಂದೆ ಕೆಲವರನ್ನು ಬಿಟ್ಟರು. ಆದರೆ ಶ್ರೀ. ಸುಭಾಷಚಂದ್ರರನ್ನು ಬಿಡುವ ತನಕ-ದಬ್ಬಾಳಿಕೆಯು ಬಿಡದಲ್ಲಿ ಕೃಷ್ಣಕಾರಸ್ಥಾನವು ಹೇಗೆ ನಡೆಯಬಹುದು ತಿಳಿಯಲು ಮಾರ್ಗವಿದ್ದಿಲ್ಲ. ಗವ್ಹರ್ನರ, ಗವ್ಹರ್ನರ ಜನರಲ, ಸ್ಟೇಟ ಸೇಕ್ರೆಟರಿ ಅವರ ಅಂಡರ ಸೇಕ್ರೆಟರಿ ಮೊದಲಾದವರೆಲ್ಲರು- ಈ ದಬ್ಬಾಳಿಕೆಯ ಆರೋಪದಿಂದ ಹಿಡಿಯಲ್ಪಟ್ಟವರು ಸರಕಾರದ ಭಯಂಕರ ಅಪರಾಧಿಗಳೆನ್ನು, ಅವರು ಬಂಡುಗಾರರೇ ಇರುತ್ತಾರೆಂದು ಹೇಳುತ್ತಾ ಸಾಕ್ಷಿಗೆ ಇಲ್ಲದೆ ನುಡಿಯುತ್ತಾ ಬಂದರು. ಇವರ ಈ ತರದ ಆಡಿಕೆಯಲ್ಲಿ ಎಳ್ಳಷ್ಟು ಹುರುಳಿಲ್ಲೆಂಬುದನ್ನು ಶ್ರೀ. ಬೋಸರು ಸಪ್ರಮಾಣ ಸಿದ್ಧ ಮಾಡಿದ ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ.

ಪಾರ್ಲಮೆಂಟ ಸಭೆಯಲ್ಲಿ ಕಾರ್ಮಿಕರ ಪಕ್ಷದ ಮೆಂಬರರಾದ ಮಿ. ಅ್ಯಾಸ್ಟಬರಿಸಾಹೇಬರು ಶ್ರೀ ಬೋಸರ ದಸ್ತಗಿರಿ ಮತ್ತು ಬಿಡುಗಡೆಯ ಪ್ರಶ್ನವೆತ್ತಿದಾಗ, ಅಂಡರ ಸೇಕ್ರೆಟರಿಯಾದ ಮಿ. ಅರ್ಲ ವಿಂಟರಟನ್ನಸಾಹೇಬರು- ಬೋಸರ ಮೇಲೆ ಕಾಯುದೆ ಮುರಿದ ಆರೋಪ ಹೊರಿಸಿದ್ದಲ್ಲದೆ, ಅವರು ರಾಜ್ಯಕ್ರಾಂತಿ ಪ್ರವೃತ್ತರಾಗಿದ್ದಾರೆಂದೂ, ಮನುಷ್ಯನು ಶೋಕಾದಷ್ಟು ದೊಡ್ಡ ಯೋಗ್ಯತೆಯುಳ್ಳವನಿದ್ದರೂ- ಕಾಯುದೆಯ ದೃಷ್ಟಿಯಿಂದ 'ಉತ್ತಮರು ಮತ್ತು ಕನಿಷ್ಠರು ಎಂಬ ಭೇದ ಮಾಡಲಿಕ್ಕೆ ಬರುವದಿಲ್ಲೆಂದೂ, ಹಾಯಕೋರ್ಟಿನ ಇಬ್ಬರು ಜಡ್ಜರ ಮುಂದೆ ವಿಚಾರಣೆ ಆದ ಬಳಿಕ, ಜನರನ್ನು ಹಿಡಿದಿರೆಂದೂ- ಉತ್ತರ ಕೊಟ್ಟಿದ್ದಾರೆ. ಅರ್ಲಸಾಹೇಬರ ಭಾಷಣದ ಪ್ರತಿಯೊಂದು ಭಾಗವನ್ನು ಶ್ರೀ. ಬೋಸರು ಖಂಡಿಸಿದ್ದಾರೆ.

"ನನ್ನ ವಿಚಾರಣೆಯು ಯಾವ ಹಾಯಕೋರ್ಟಿನ ಜಡ್ಜಿಯ ಮುಂದೆ ಆಗಲಿಲ್ಲ. ಅವರ ಹೆಸರು ಇಂದಿಗೂ ತಿಳಿಯಲಿಲ್ಲ. ನನ್ನ ಮೇಲೆ ಹೊರಿಸಿದ ಆರೋಪಗಳ ವಿಷಯವಾಗಿ ಎರಡು ಸಾರೆ ಪೋಲಿಸ ಕಾಮದಾರರು ನನ್ನ ಹತ್ತರ ಬಂದು, ಆರೋಪಗಳ ಒಂದು ಯಾದಿಯನ್ನು ಓದಿದರು. ಅವಕ್ಕೆ ನಾನು ಒಪ್ಪಲಿಲ್ಲ. ನಿರಪರಾಧಿ ಇದ್ದೇನೆಂದು ಹೇಳಿದೆನು. ಒಬ್ಬ ದೊಡ್ಡ ಪೋಲಿಸ ಕಾಮದಾರನಿಗೂ ನನಗೂ ಇರುವ ದ್ವೇಷದ ಮೂಲಕ ನನ್ನ ಮೇಲೆ ಈ ಪ್ರಸಂಗ ಬಂತು. ಮುಖ್ಯವಾಗಿ ನಾವು ಮಾಡುತ್ತಿರುವ ರಾಷ್ಟ್ರ ಜಾಗೃತಿಯ ರಾಜಕೀಯ ಚಳವಳಿಯು ನನ್ನ ಮೇಲೆ ಸಂಕಟ ತಂದಿತು. ನನ್ನ ಮೇಲಿನ ಆರೋಪಗಳು ಕಲ್ಪನಾಮಯವಾಗಿ ಕೃತಕವಾಗಿರುತ್ತವೆಂದು ನಾನು ಅನ್ನುವಾಗ ಅವರ ಬಾಯಿಯೇ ಏಳುತ್ತಿದ್ದಿಲ್ಲ. ನಾನೊಬ್ಬ ದೊಡ್ಡ ಕಾಮದಾರನಾದ ಮೂಲಕ ನನ್ನ ವಿಚಾರಣೆಯು ಬೇರೆ ರೀತಿಯಿಂದಾಗಬೇಕೆಂದು ನಾನೆಂದೂ ಹೇಳಲಿಲ್ಲ. ಸರಕಾರವು ರಾಜ್ಯಕ್ರಾಂತಿಯ ವಿಚಾರವನ್ನು ದೊಡ್ಡ ಬಾವುಗ ಮಾಡಿದೆ. ಯಾವನೊಬ್ಬ ಗೃಹಸ್ಥನು ಸಂಕಾರದ ಪ್ರೀತಿ ಸಂಪಾದನೆಗಾಗಿ ಒಂದು ಮುರುಕ ಕತ್ತಿ, ಒಡಕ ಬಾಂಬು, ಎಲ್ಲಾದರೊಂದು ಸ್ಥಳದಲ್ಲಿ ಬಿದ್ದ ರಿವ್ಹಾಲ್ವರ ತೆಗೆದು ಆಳರಸರನ್ನು ತುಷ್ಟ ಮಾಡುವನು. ಅದನ್ನು ಅವರು ಬದನೀಕಾಯಿ ಭೂತ ಮಾಡುವರು. ನಾನೆಂದೂ ಕಾಯುದೆ ಮುರಿದಿಲ್ಲ ನನ್ನ ಮೇಲಿನ ಆರೋಪವನ್ನು ಸಿದ್ಧ ಮಾಡುವದಕ್ಕಾಗಿ ನ್ಯಾಯ ಕೋರ್ಟಿನಲ್ಲಿ ವಿಚಾರಣೆ ನಡಿಸಿರಿ ಎಂದು ಹೇಳಿದ್ದೇನೆ. ಕಾಯುದೆಯನ್ನು ಮುರಿಯಬೇಕಾದರೆ- ಅಸಹಕಾರದ ಚಳವಳಿಯಲ್ಲಿ ಹೇಗೆ ಮುರಿದಂತೆ ಕಾಯುದೆ ಮುರಿಯುವೆನು ಕದ್ದು ಮುಚ್ಚಿ ವ್ಯವಹಾರ ಬೇಕಾಗಿಲ್ಲ"

ಈ ಪ್ರಕಾರ ಶ್ರೀ ಬೋಸರು ಪ್ರತಿಪಕ್ಷೀಯರು ನಿರುತ್ತರರಾಗುವಂಥ ಉತ್ತರ ಕೊಟ್ಟಿದ್ದಾರೆ. ಹಾಯಕೋರ್ಟಿನ ಜಡ್ಜರು ವಿಚಾರ ಮಾಡಿದ್ದಾರೆಂದು ಆಳರಸರ ಹೇಳುವದನ್ನು ಕೇಳಿ ನಗೆ ಬರುತ್ತದೆ. ಆರೋಪಿಯು ಎದುರಿಗಿಲ್ಲದೆ, ಅವರ ವಕೀಲರ ಕ್ರಾಸ ಅಥವಾ ಡಿಫೇನ್ಸ ಇಲ್ಲದೆ, ಆರೋಪಿಯ ಮೇಲೆ ಅಪರಾಧ ಹೊರಿಸುವ ಜಡ್ಜರಿಗೆ ದೂರಿಂದಲೇ ಶರಣೆಂದು ಹೇಳಬೇಕಾಗುತ್ತದೆ. ಏಕಪಕ್ಷೀಯವಾದ ತೀರ್ಪು ಒಪ್ಪಿಗೆಯಾಗಬೇಕಾದರೆ-ದಿವಾಣಿ ಕೋರ್ಟುಗಳಲ್ಲಿ ವಕೀಲರೇಕೆ ಬೇಕು? ಪುರಾವೆಗಳೇತಕ್ಕೆ ಬೇಕು? ಸಾಕ್ಷಿದಾರರ ತಪಾಸಣೆ ಏತಕ್ಕೆ ಬೇಕು? ಸರಕಾರದ ಏಕಪಕ್ಷೀಯವಾದ ವರ್ತನವೇ ಅದರ ಹೊಟ್ಟೆಯಲ್ಲಿ ಹುಳ ಹುಳಿವೆನುತ್ತದೆಂಬುದನ್ನು ತೋರಿಸುತ್ತದೆ.

ಬೆಂಗಳೂರಿಗೆ ಮಹಾತ್ಮರ ಆಗಮನ.

ಮಹಾತ್ಮರು ನಂದಿಬೆಟ್ಟ ಬಿಟ್ಟು, ಮೊನ್ನಿನ ದಿವಸ ಬೆಂಗಳೂರಿಗೆ ದಯಮಾಡಿಸಿದರು. ಮಹಾರಾಜಾ ಸರಕಾರದವರು ಇವರಿಗಾಗಿ ಸರ ಶೇಷಾದ್ರಿಯವರು ಕಟ್ಟಿಸಿದ ಕುಮಾರವೆಂಬ ಸಕಲ ಸೋಯಿಗಳಿಂದಿರುವ ಭವನವನ್ನು ಸಿದ್ಧ ಮಾಡಿಕೊಟ್ಟಿದ್ದಾರೆ. ಮಹಾತ್ಮರು ಇಲ್ಲಿಗೆ ಬಂದಕೂಡಲೆ ಡಾಕ್ಟರ ದ್ವಯರಾದ ಸುಬ್ಬರಾವ ಮತ್ತು ಕೃಷ್ಣಸ್ವಾಮಿರಾಯರು ಇವರ ಪ್ರಕೃತಿಯ ಪರೀಕ್ಷೆ ಮಾಡಿ, ಆರೋಗ್ಯವಾಗಿದೆಂದು ಅಭಿಪ್ರಾಯಪಟ್ಟರು. ಆದರೂ ಈ ತಿಂಗಳ ಕೊನೆಯ ತನಕ ಸಂಪೂರ್ಣ ವಿಶ್ರಾಂತಿ ಬೇಕೆಂದು ಹೇಳಿದ್ದಾರೆ. ಮಹಾತ್ಮರಾದರೂ ಡಾಕ್ಟರರ ಹೇಳಿಕೆಯಂತೆ ನಡಿಯುವಂತೆ ವಾಚಾಬದ್ಧರಾಗಿದ್ದಾರೆ.

ಮಹಾತ್ಮರು ನಂದಿಬೆಟ್ಟ ಇಳಿದು, ಚಿಕ್ಕಮಗಳೂರಿಗೆ ಬಂದರು. ಇಲ್ಲಿಯವರೇ ಬೆಟ್ಟದಲ್ಲಿ ಇವರ ಆರೈಕೆಗಾಗಿ ಎಲ್ಲ ವ್ಯವಸ್ಥೆ ಇಟ್ಟಿದ್ದರು. ಪಟ್ಟಣಿಗರು ಮಾನಪತ್ರ ಕೊಟ್ಟು, ನಿಧಿಯನ್ನು ಅರ್ಪಿಸಿದರು. ಮಾನಪತ್ರಕ್ಕೆ ಉತ್ತರವಾಗಿ ಮಹಾತ್ಮರು ಅಂದದ್ದು-

ನನ್ನ ಆರೈಕೆ ಮತ್ತು ಸುಖಕ್ಕಾಗಿ ನೀವು ಮಾಡಿದ ವ್ಯವಸ್ಥೆಗಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ನನಗೆ ಬೇಕಾಗುವ ಪದಾರ್ಥಗಳ ದೆಸೆಯಿಂದ ನೀವು ದುಂದುಗಾರಿಕೆಯಿಂದ ದ್ರವ್ಯ ವೆಚ್ಚ ಮಾಡಿದಿರಿ. ಈ ದೇಶದಲ್ಲಿಯ ತೀರ ದರಿದ್ರರ ದೆಸೆಯಿಂದ ಸಂದೇಶ ಹೇಳುವದಕ್ಕಾಗಿಯೇ ನಾನು ಮೈಸೂರ ನಾಡಿನಲ್ಲಿ ವಾಸವಾಗಿರುವೆನು. ಅದು ಖಾದಿಯು. ನೀವು ಸ್ವತಃ ನೂತು, ಖಾದೀ ಮಾಡಿ, ಅದನ್ನು ಹೊದೆಯುವರೆಂದು ಕೇಳಿದ ದಿವಸ ನನಗೆ ಆನಂದವಾಗುವದು"

ಮಹಾತ್ಮರು ಬೆಂಗಳೂರಿಗೆ ಬರುವ ಮುಂಚಿತವಾಗಿ ಖಾದಿಯ ವ್ಯಾಪಾರಕ್ಕೆ ತೇಜಿ ಬಂತು. ಜನರು ಬಹುವಾಗಿ ಖಾದಿಯನ್ನು ಕೊಳ್ಳುತ್ತಿರುವರು. ಮುಂದಿನ ತಿಂಗಳಲ್ಲಿ ಮಹಾತ್ಮರು ಅಲ್ಲಿ ಖಾದಿಯ ಪ್ರದರ್ಶನ ತೆರೆಯುವ ಸಮಾರಂಭ ಮಾಡುವರು.

ಬ್ರಾಹ್ಮಣ- ಬ್ರಾಹ್ಮಣೇತರ-

ಅಸೆಂಬ್ಲಿಯ ಮೆಂಬರರಾದ ಶ್ರೀ. ದೊರೆಯಸ್ವಾಮಿ ಅಯ್ಯಂಗಾರರು ನಂದಿಬೆಟ್ಟಕ್ಕೆ ಮಹಾತ್ಮರನ್ನು ಕಾಣಲಿಕ್ಕೆ ಹೋಗಿದ್ದರು. ಇವರ ಕೂಡ ಶ್ರೀ. ದೊರೆಯಸ್ವಾಮಿ ಮೊದ್ಲಿಯಾರರೂ ಹೋಗಿದ್ದರು. ಆಗ ನಡೆದ ಪ್ರಶ್ನೋತ್ತರಗಳು-

ದೊರೆ- ದಕ್ಷಿಣ ಹಿಂದುಸ್ಥಾನದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ವಾದ ಬೆಳೆದಿದೆ. ತಾವು

ಉಭಯತರಲ್ಲಿ ಐಕ್ಯವನ್ನು ಹುಟ್ಟಿಸಿ, ಈ ರಾಷ್ಟ್ರೀಯ ಕಾರ್ಯ ಸಾಧಿಸಬೇಕು.

ಮಹಾ- ಈ ಮೊದಲು ನಾನು ಪ್ರಯತ್ನ ಮಾಡಿದೆನು. ಯಶಬರಲಿಲ್ಲ.

ದೇವ- ತಮ್ಮಂಥವರಿಂದಲೇ ಈ ಕಾರ್ಯ ವಾಗದ ಬಳಿಕ, ಇನ್ನಾರಿಂದ ಆಗುವದು?

ಮಹಾ- ಯಶ ಬರದಿದ್ದರೆ- ಮಹಾತ್ಮರೆನಿಸಿ ಕೊಳ್ಳುವ ದೊಡ್ಡಸ್ತನವು ಎಲ್ಲಿಂದು?

ಮದ್ರಾಸಕ್ಕೆ ಹೋದ ಬಳಿಕ, ಈ ವಿಷಯ ವಾಗಿ ಪ್ರಯತ್ನ ಮಾಡುವಂತೆ ಮಹಾತ್ಮರು ಆಶ್ವಾಸನ ಕೊಟ್ಟದ್ದರಿಂದ ಈ ಪ್ರಶ್ನೋತ್ತರವು ಅಲ್ಲಿಗೆ ಮುಗಿಯಿತು.

ಚೀನಕ್ಕೆ ಹೋಗುವ ಅಂಬ್ಯುಲನ್ಸ.

ಕರ್ನಾಟಕ

ಡಾಕ್ಟರ ಕೊಕಟನೂರರ ಉತ್ಸಾಹ.

—[o][o]—

ಚೀನ ದೇಶಕ್ಕೆ ಹಿಂದುಸ್ಥಾನ ಸೇವಾದಳದ ವತಿಯಿಂದ ಹೋಗುವ ಅಂಬುಲನ್ಸದಲ್ಲಿ ಕೆಲಸ ಮಾಡುವಂಥ ಅಪೇಕ್ಷೆಯ ಅರ್ಜಿಗಳು ಡಾಕ್ಟರ ಹರ್ಡೀಕರರ ಕಡೆಗೆ ಬಹುವಾಗಿ ಬರುತ್ತಲಿವೆ. ಸೇವಾದಲದ ಅಧ್ಯಕ್ಷರಾದ ಶ್ರೀ ಗೋಸಾವಿ ಮತ್ತು ಡಾಕ್ಟರದ್ವಯರಾದ ಅನಸಾರಿ ಮತ್ತು ಕ್ವರೇಸಿಯವರು ಈ ಅರ್ಜಿಗಳ ಯೋಗ್ಯಾಯೋಗ್ಯತೆಯ ಪರೀಕ್ಷೆ ಮಾಡುವದಲ್ಲದೆ, ಹೋಗತಕ್ಕಂಥ ಜನರಿಗಾಗಿ ಪಾಸಪೋರ್ಟಗಳನ್ನು ದೊರೆಕಿಸುವ ಕೆಲಸದಲ್ಲಿ ತೊಡಗಿದ್ದಾರೆ. ಅಂಬ್ಯುಲನ್ಸದ ಕೂಡ ಡಾಕ್ಟರ ಕೊಕಟನೂರರು ಹೋಗಲಿಕ್ಕೆ ಸಿದ್ಧರಾಗಿದ್ದಾರೆ. ಇವರ ಪ್ರಸಿದ್ಧಿಯು ಕರ್ನಾಟಕದಲ್ಲಿ ಸಾಕಷ್ಟು ಆಗಿರುವದರಿಂದ, ಇವರ ವಿಷಯವಾಗಿ ಹೆಚ್ಚಿಗೆ ಬರೆಯುವ ಅಗತ್ಯವಿಲ್ಲ. ಇವರನ್ನು ಅಗತ್ಯವಾಗಿ ಕಳಿಸಬೇಕೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ ಸಿಫಾರಸ್ಸು ಮಾಡಿದ್ದಾರೆ.

ಸಿಂಧದ ಹಿಂದೂ ಜನರು-

ಸಿಂಧದ ಹಿಂದೂ ಜನರು ಸ್ವತಂತ್ರ ಸಿಂಧ ಪ್ರಾಂತದ ವಿರುದ್ಧ ಚಳವಳಿ ನಡೆಸಿದ್ದಾರೆ. ಇದನ್ನು ಸ್ವತಂತ್ರ ಮಾಡಿ, ಬೇರೆ ಪ್ರಾಂತಗಳಿಂದ ಪರತಂತ್ರ ಮಾಡಬಾರದು. ಈ ದೇಶದಲ್ಲಿ ಹಿಂದೂ ಜನರು ಅಲ್ಪ ಸಂಖ್ಯಾಕರಾಗಿದ್ದಾರೆ. ಇವರಿಗೆ ಸಕ್ಕರದ ಕಾಲುವೆಯ ಕೆಳಗಣ ಭೂಮಿಯನ್ನು ಹೆಚ್ಚಾಗಿ ಕೊಡಬೇಕೆಂದು ಸರಕಾರಕ್ಕೆ ಸೂಚಿಸಿದ್ದಾರೆ.

ಸರದಾರರ ಬಂಧಮುಕ್ತತೆ-

ಪಂಜಾಬ ಸರಕಾರದವರು ಗುರುದ್ವಾರದ ಆರೋಪಿಗಳನ್ನು ಬಂಧಮುಕ್ತ ಮಾಡದ್ದರಿಂದ, ಶೀಖರಪದ ಕೌನ್ಸಿಲದ ಮೆಂಬರರು ರಾಜೀನಾಮೆ ಕೊಟ್ಟಿರುವರು. ಇವರ ಮೋರೆಯ ಮೇಲೆ ಕಯ್ಯು ಹೆಯುವದಕ್ಕಾಗಿ ಸರಕಾರದವರು ಸರದಾರ ಖರಕಸಿಂಗರನ್ನು ಬಂಧಮುಕ್ತ ಮಾಡಿದ್ದಾರೆ. ಇವರು ಅಮೃತಸರದ ಬಂಗಾರದ ದೇವಾಲಯ ಕಮಿಟಿಯ ಅಧ್ಯಕ್ಷರು, ಇಂಥವರನ್ನು ಸರಕಾರದವರು ತುರಂಗದಲ್ಲಿ ಹಾಕಿದರು. ಏಕೆಂದರೆ- ಅರ್ಲವಿಂಟರಟನ್ನರ ವಿಚಾರದಿಂದ ದೊಡ್ಡವ ಸಣ್ಣವನೆಂಬ ಭೇದವೇನು, ಇಲ್ಲ!! ಆದರೂ ಕಮಿಟಿಯವರು ಇವರನ್ನೇ ಅಧ್ಯಕ್ಷರಾಗಿ ಆರಿಸುವರು. ಇವರ ಕೆಲಸವನ್ನು ಉಪಾಧ್ಯಕ್ಷನು ಮಾಡುವನು. ಬಂಧಮುಕ್ತರಾದಂಥ ಸರದಾರರಿಗೆ ಲಾಹೋರ ಮತ್ತು ಅಮೃತಸರದ ಮ್ಯುನಿಸಿಪಾಲಿಟಿಗಳು ಮಾನಪತ್ರ ಕೊಡುವವು. ಅಮೃತಸರದ ಸಮಾರಂಭವು ಜಾಲಿನವಾಲಾಬಾಗದಲ್ಲಾಗುವದು.

ಕಾಬೂಲದಲ್ಲಿ ಶಿಕ್ಷಣದ ಪ್ರಸಾರ-

ಕಾಬೂಲದ ಅಮೀರ ಸಾಹೇಬರು ಸ್ವದೇಶ ಸುಧಾರಣೆಯಲ್ಲಿ ಸರ್ವಾಂಗದಲ್ಲಿಯೂ ಪ್ರಯತ್ನಿಸುತ್ತಿದ್ದಾರೆ. ಚೀನ ಮತ್ತು ಜಪಾನದ ವಿದ್ಯಾರ್ಥಿಗಳು ಪರದೇಶಗಳಿಗೆ ವಿದ್ಯಾರ್ಥಿಗಳನ್ನು ಕಳಿಸಿ, ದೇಶ ಸುಧಾರಣೆ ಮಾಡಿಕೊಂಡರು. ಈ ದೇಶಗಳ ಅನುಕರಣವನ್ನೇ ಅಮೀರಸಾಹೇಬರು ಮಾಡುತ್ತಿರುವದು ಸ್ತುತ್ಯವಾಗಿರುತ್ತದೆ. ಕಳೆದ ವಾರದಲ್ಲಿ ೧೪ ಜನ ವಿದ್ಯಾರ್ಥಿಗಳೂ ಒಬ್ಬಳು ವಿದ್ಯಾರ್ಥಿನಿಯೂ ಮುಂಬಯಿಯಲ್ಲಿ ಹಡಗವೇರಿ ವಿಲಾಯತಿಗೆ ಹೋದರು. ವಿದ್ಯಾರ್ಥಿನಿಯು ಹೋದದ್ದು ವಿಶೇಷವೇ ಸರಿ.

ಬಂಗಾಲಿಗಳ ಸಾಹಸ-

ಬಂಗಾಲಿ ಜನರೂ ಶಿಕ್ಷಣ ಕಾರ್ಯದಲ್ಲಿ ಮುಂದೊರೆದಿದ್ದಾರೆ. ಇವರೊಂದು ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದು, ಅದರ ವಿಶ್ವಮಾನವಾಗಿ ಪ್ರತಿ ವರ್ಷ ೪೦-೫೦ ಜನ ವಿದ್ಯಾರ್ಥಿಗಳನ್ನು ಇಂಗ್ಲಂಡ, ಅಮೇರಿಕೆ ಮತ್ತು ಜರ್ಮನಿಗೆ ಕಳಿಸುವರು. ಇವರಿಗೆ ಉದ್ಯೋಗಿಕ ಶಿಕ್ಷಣ ಕೊಡುವದೇ ಸಂಸ್ಥೆಯ ಹೆಗ್ಗುರಿಯಾಗಿದೆ. ಈ ಪರ್ಯಂತರ ಶಿಕ್ಷಣ ಹೊಂದಿ ಬಂದವರು ದೊಡ್ಡ ದೊಡ್ಡ ಕೆಲಸಗಳಲ್ಲಿ ತೊಡಗಿದ್ದಾರೆ. ಮತ್ತು ಇಪ್ಪತ್ತು ಕಾರಖಾನೆಗಳನ್ನು ತೆಗೆದಿದ್ದಾರೆ. ಈ ವರ್ಷ ೪೬ ಉಮೇದವಾರರನ್ನು ಕಳಿಸುವರು. ಬಂಗಾಲಿಗಳ ಈ ಕೆಲಸವು ಸ್ತೋತ್ರಾರ್ಹವಾಗಿದೆ. ಇಂಥದೊಂದು ಸಂಸ್ಥೆಯು ಮುಂಬಯಿ ಇಲಾಖೆಯಲ್ಲಿ ಹೊರಡುವದೂ ಅವಶ್ಯವಾಗಿದೆ.

ಧಾರವಾಡದಲ್ಲಿ ಸುವೃಷ್ಟಿ-ಸುವರ್ಣವೃಷ್ಟಿಯು

—o—

ನಿನ್ನಿನ ದಿವಸ ಸಾಯಂಕಾಲದ ೪॥ ಗಂಟೆಗೆ ಒಮ್ಮಿಂದೊಮ್ಮೆ ಮಳೆಯು ಸುರಿಯಲಿಕ್ಕೆ ಪ್ರಾರಂಭವಾಯಿತು. ನಡುವೆ ಮೇಘಗರ್ಜನೆಯಾಗುತ್ತಾ ತುಸು ತಡೆಯುತ್ತಾ ಹೆಚ್ಚೆಚ್ಚು ಕಸವಿನಿಂದ ಸುರಿಯಹತ್ತಿತ್ತು. ೬॥ ಇಂದು ಆಯಿತು ದೊಡ್ಡ ದೊಡ್ಡ ಬೀದಿಗಳಲ್ಲಿರುವ ಆಳವಾದ ಕಾಲುವೆಗಳು ತುಂಬಿ ಹೊರಚಲ್ಲಿ ನಡುವಿನ ದಾರಿ ತೋರದಾಯಿತು. ತಗ್ಗಿನಲ್ಲಿದ್ದ ಬೀದಿಗಳಲ್ಲಿಯ ಮನೆಗಳಲ್ಲಿ ನೀರು ಹೊಕ್ಕಿತು. ಸಣ್ಣ ಕೆರೆಗಳು ತುಂಬಿದವು. ಹಾಲಗೇರಿಯ ಕಾಲುವೆಯಿಂದ ಬರುತ್ತಿದ್ದ ನೀರು ಧಬಧಬೆಯಂತೆ ಮನೋಲ್ಹಾದವಾಗಿ ಕಾಣಿಸುತ್ತಿತ್ತು. ಹೊಲಗಳಲ್ಲಿ ಮಹಾಜಲದಂತೆ ನೀರು ನಿಂತಿತು. ಕನಿಷ್ಠ ನಾಲ್ಕು ತಿಂಗಳ ನೀರು ಬಂದಿರುತ್ತದೆ. ಇಂಥ ಮಳೆಯು ಮೂರು ನಾಲ್ಕು ವರ್ಷಗಳಲ್ಲಾಗಿದ್ದಿಲ್ಲ. ಸುವರ್ಣವೃಷ್ಟಿಯೆಂದೇ ನಾಗರಿಕರು ಅಂದು ಆನಂದಪಟ್ಟಿರುತ್ತಾರೆ.

ಥ್ಯಾಕರೆನ ಗೋರಿಯ ಹತ್ತರ ಒಂದು ಗಿಡಕ್ಕೆ ಸಿಡ್ಲು ಬಡಿದಿದೆ.

ಮ್ಯಾಜಿಸ್ಟ್ರೇಟ- ನೀನು ಕರೆ ಕುಡಿದದ್ದಕ್ಕಾಗಿ ಹತ್ತು ರೂಪಾಯಿ ದಂಡ ಮಾಡಿದೆ.

ಆರೋಪಿ- ದಂಡ ಕೊಡುವೆನು ಪಾವತಿ ಕೊಡಿರಿ.

ಮ್ಯಾಜಿಸ್ಟ್ರೇಟ- ಪಾವತಿ ಏಕೆ?

ಆರೋಪಿ- ನನ್ನನ್ನು ಯಮದೇವರ ಮುಂದೆ ನಿಲ್ಲಿಸಿದಾಗ ಪಾವತಿ ತೋರಿಸಿದರೆ- ಕುಡಿದ ಆರೋಪದ ಶಿಕ್ಷೆಯಾಗದು. ಆಗ ಪಾವತಿ ತೋರಿಸಿದರೆ ಸ್ವರ್ಗಕ್ಕೆ ಹೋಗುವದನ್ನು ಬಿಟ್ಟು, ನಿಮ್ಮನ್ನು ಹುಡುಕುತ್ತಾ ನಾನಲ್ಲಿ ನರಕ ಲೋಕಕ್ಕೆ ಬರಲಿ,

---

ಹಿಂದುಸ್ಥಾನದ ಗವ್ಹರ್ನರ ಜನರಲರಾಗಿದ್ದ ಲಾರ್ಡ ಲ್ಯಾನ್ಸಡೌನಸಾಹೇಬರು ಪರಲೋಕವಾಸಿಯಾದರು.

ಅಬ್ದುಲರಸೀದನ ವಕಿಲಿಯಿಂದ ಅಪೀಲು ಮಾಡುವದಕ್ಕಾಗಿ ಆಸಬರ್ನರೆಂಬ ದಿಲ್ಲಿಯ ಬ್ಯಾರಿಸ್ಟರರು ವಿಲಾಯತಿಗೆ ಹೋದರು.

ನೀಲಗಿರಿ ಬೆಟ್ಟದ ಸುತ್ತಲಿರುವ ಕೋರನೂರ ನೀಲಾಂಬರ ರೇಲ್ವೆಯ ಮಧ್ಯದಲ್ಲಿ ಅಂಗಡಿಪ್ಪರಮದ ಹತ್ತರ ಬಹಳ ಮಳೆಯಾಗಿ, ರೇಲ್ವೆಯ ದಾರಿಯು ಹರಿದು, ಹೊಗೆಬಂಡಿಯ ಓಡಾಟವು ನಿಂತು ಹೋಗಿದೆ.

ಧಾರವಾಡ

ನೋಟೀಸು

ಗಂಗಿ ಕೋಮ ಶಿದ್ದಪ್ಪ ಗುಡಗುಂಟಿಯ ವರ ಸಾ। ಲಕ್ಷ್ಮೇಶ್ವರ ಕುರುಬಗೇರಿ ಇವಳಿಗೆ- ಕೆಳಗೆ ಹೆಬ್ಬೆಟ್ಟಿನ ಗುರುತಾ ಮಾಡುವ ಶಿದ್ದಪ್ಪಾ ತಂದಿ ಅಮರಪ್ಪಾ ಗುಡಗುಂಟಿಯವರ ಲಕ್ಷ್ಮೇಶ್ವರ ಇವನು ನಿನಗೆ ಈ ನೋಟೀಸು ಕೊಟ್ಟು ತಿಳಿಸುವದೇನಂದರೆ-

ನೀನು ನನ್ನ ಮದಿವೆಯಾಗಿ ಹತ್ತು ಹನ್ನೆರಡು ವರ್ಷವಾಯಿತು ನೆರದು ಐದಾರು ವರ್ಷವಾಗಿತ್ತು ಒಂದು ಕೂಸು ಹುಟ್ಟಿತ್ತು, ಅದು ಸತ್ತಿದೆ ಕೂಸು ... ಹೋಗುತ್ತಿದ್ದಿ ನನ್ನ ಮನಿಗೆ ಕಾಲ ಹಾಕಿಲ್ಲ ಹಿರಿಯರು ಬೇಕಾದಷ್ಟು ಹೇಳಿದರೂ ಕೇಳಿಲ್ಲ ಅನೇಕಸಾರೆ ನಾನು ಸ್ವತಃ ಕರೆದರೂ ಬರಲಿಲ್ಲ ಇದರಿಂದ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾಳುವೆ ಮಾಡುವದು ಇದ್ದಂತೆ ತೋರುವದಿಲ್ಲ ಆದ್ದರಿಂದ ಈ ನೋಟೀಸು ಕೊಟ್ಟಿರುತ್ತೇನೆ ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಮಾಲಕಿಯ ದಾಗೀನೆ ನಿನಗೆ ಕೊಟ್ಟದ್ದು ಅಂದರೆ-

೧ ಜೋಡು ಬಂಗಾರದ ಒಳೆ ತೊಲಿ ಐದು

೨ ಕರ್ಣಪೂಲು ಕಿ। ರೂ. ೧೨

೩ ಬೆಳ್ಳಿ ಪಟ್ಟಿ ಕಿ। ರೂ. ೬

೪ ತೋಳಬಂದಿ ಜೋಡು ಕಿ। ರೂ. ೨೫

೫ ಒಂದು ಶೀರಿ ಕಿ। ರೂ. ೨೫

ಇಷ್ಟು ತಕ್ಕೊಂಡು ನನ್ನ ಮನೆಗೆ ಬಂದು ಸುರಕ್ಷಿತ ಪ್ರಪಂಚ ಮಾಡಿಕೊಂಡಿರಬೇಕು ಇದಕ್ಕೆ ತಪ್ಪಿದರೆ ನನ್ನ ಪ್ರಪಂಚ ಸಾಗುವದಕ್ಕಾಗಿ ನಾನು ಎರಡನೆಯವಳನ್ನು ಮದಿವೆ ಮಾಡಿಕೊಳ್ಳುವೆನು ಆನಂತರ ನಿನ್ನ ಹಕ್ಕು ನನ್ನ ಹಾಗು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡಿಯಲಾರದು ನೀನು ಇದಕ್ಕೆ ಏನಾದರೂ ನೆವನ ತೆಗೆದು ಧಂತೆ ಮಜಕೂರಿನ ಉತ್ತರಾ ಕೊಟ್ಟರೆ ಅದು ನನಗೆ ಬಾಧ್ಯಾಯಿಸಲಾರದು ನೀನು ಮೇಲಿನ ಮುದ್ದತಿನಲ್ಲಿ ಬರದಿದ್ದರೆ ನೀನು ಈ ನೋಟೀಸೇ ನೋಡಪತ್ರವೆಂದು ತಿಳಿಯಬೇಕು ಮತ್ತು ನನ್ನ ದಾಗೀನೆಗಳ ಬಗೆಯಿಂದ ನಿನ್ನ ಮೇಲೆ ಮತ್ತು ನಿನಗೆ ಪುಸಲಾಯಿಸಿ ಕೊಡುವ ನಿನ್ನ ತಂದೆಯ ಮೇಲೆ ದಿವಾಣಿ ಕೋರ್ಟಿನಲ್ಲಿ ಕಾಯದೆಶೀರ ಇಲಾಜ ಮಾಡುವೆನು ಈ ನೋಟೀಸಿನ ಖರ್ಚು ನಿನ ಹಾಗು ನಿನ್ನ ತಂದೆಯ ಮೇಲುಂಟು ತಿಳಿಯುವದು

ತಾ॥ ೬-೬ ೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರುತಾ ಶಿದ್ದಪ್ಪಾ ತಂದಿ ಅಮರಪ್ಪಾ ಗುಡಗುಂಟಿಯವರ ಈತನ ಕೈದು ಇರುತ್ತದೆ

ನೋಟೀಸು.

ವಿನಂತಿ! ವಿನಂತಿ!! ವಿನಂತಿ!!!

ದಿ ಸದರ್ನ ಮರಾಠಾ ಅರ್ಬನ್ ಕೋ. ಆ. ಕ್ರೆ. ಬ್ಯಾಂಕ ಲಿಮಿಟೆಡ್ ಧಾರವಾಡ, ಇದರ ವಾರ್ಷಿಕ ಜನರಲ್ ಸಭೆಯು ಕೆಳಗೆ ವಿವರಿಸಿದ ವಿಷಯಗಳ ನಿರ್ಣಯ ಕುರಿತು, ತಾರೀಖು ೧೯ನೇ ಜೂನ ಸನ್ ೧೯೩೭ನೇ ಇಸ್ವಿ (ಆದಿತ್ಯವಾರ ದಿವಸ) ಸಾಯಂಕಾಲದ ೪ ಘಂಟೆಕ್ಕೆ ನೋಂದಾಯಿತ ಬ್ಯಾಂಕಿನ ರಜಿಸ್ಟರ್ಡ ಬ್ಯಾಂಕ ಕಚೇರಿಯಲ್ಲಿ ಕೂಡುವದು. ಕಾರಣ, ದಯಮಾಡಿ ಬ್ಯಾಂಕಿನ ಎಲ್ಲ ಮೆಂಬರರು, ಸದರೀ ಸ್ಥಳಕ್ಕೆ, ಸದರೀ ಮುಕ್ಕಾಂ ದಿವಸ, ಸದರೀ ವೇಳೆಕ್ಕೆ ಅವಶ್ಯ ಹಾಜರಾಗಬೇಕಾಗಿ ವಿನಂತಿ ಅದೆ.

ವಿಷಯಗಳು.

೧ ಸನ್ ೧೯೩೭ನೇ ಮಾರ್ಚ ೩೧ಕ್ಕೆ ಮುಗಿದ ವರ್ಷದ ಸಂಬಂಧವಾಗಿ ಬ್ಯಾಂಕಿನ ಡಾಯರೆಕ್ಟರರ ರಿಪೋರ್ಟನ್ನು ಅಂಗೀಕರಿಸಲಿಕ್ಕೆ

೨ ಸನ್ ೧೯೩೭ನೇ ಇಸ್ವಿ ಮಾರ್ಚ ೩೧ಕ್ಕೆ ಮುಗಿಯುವ ವರ್ಷದ ಬ್ಯಾಂಕಿನ ಆಥಾವೆ ಪತ್ರಿಕೆಗಳನ್ನು ಅಂಗೀಕರಿಸಲಿಕ್ಕೆ.

೩ ಡಿವ್ಹಿಡೆಂಡ ಠರಾಯಿಸಲಿಕ್ಕೆ.

೪ ಸನ್ ೧೯೩೭-೩೮ನೇ ಸಾಲಿನ ಬಾಬತು, ಆಡಿಟರರನ್ನು ನೇಮಿಸಲಿಕ್ಕೆ, ಹಾಗೂ ಅವರ ಮೆಹನತಾನ ಠರಾಯಿಸಲಿಕ್ಕೆ.

೫ ಸುಪರವಾಯಿಜಿಂಗ ಬೋರ್ಡಿನ ಮೆಂಬರರನ್ನು ಆರಿಸಲಿಕ್ಕೆ

೬ ಬಾಯಲಾ ನಂ. ೪೪ನೇ ಪ್ರಕಾರ ಬ್ಯಾಂಕಿನ ಮೆಂಬರ ಜನರಿಗೆ, ೫೦೦೦ (ಐದು ಸಾವಿರ ರೂ.)ಗಳ ತನಕ ಮ್ಯಾನೇಜಿಂಗ ಕಮಿಟಿಯವರಿಗೆ ಯೋಗ್ಯ ಕಂಡು ಬಂದಲ್ಲಿ, ಸಾಲ ಕೊಡತಕ್ಕ ಬಗ್ಗೆ, ನಿರ್ಣಯ ಮಾಡುವದಕ್ಕೆ, ವ ಈ ಮೊದಲನೇ ಮ್ಯಾನೇಜಿಂಗ ಕಮಿಟಿಯವರು ಜನರಲ್ ಕಮಿಟಿಯ ಮಂಜೂರಿಯನ್ನು ಅಪೇಕ್ಷಿಸಿ ಕೊಟ್ಟ ಇಂಥ ಸಾಲಗಳನ್ನು ಮಂಜೂರ ಮಾಡುವದಕ್ಕೆ.

೭ ಮ್ಯಾನೇಜಿಂಗ ಕಮಿಟಿ ಚೇರಮನ್ನರು ಸೂಚಿಸಿದ ಇತರ ವಿಷಯಗಳನ್ನು ಕುರಿತು ವಿಚಾರ ಮಾಡುವದಕ್ಕೆ.

೮ ಸನ್ ೧೯೩೭-೩೮ನೇ ಸಾಲಿನ ಬಾಬತು ಮ್ಯಾನೇಜಿಂಗ ಕಮಿಟಿ ಮೆಂಬರರನ್ನು ಆರಿಸಲಿಕ್ಕೆ.

ಸಹಿ — ವಿಶ್ವನಾಥರಾವ ನಾರಾಯಣರಾವ ಜೋಗ,
ಬಿ. ಎ. ಎಲ್‌ಎಲ್ ಬಿ ಎಮ್. ಎಲ್ ಸಿ
ಚೇರಮನ್ (ಮ್ಯಾ. ಕ.)
ಸ. ಮ. ಅ ಕೋ. ಆ. ಕೆ. ಬ್ಯಾಂಕ, ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅನ್ನಾಚಾರ್ಯ ಬಳೀಬಾಳ ಯರ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತ್ರಾಕರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ಸಾಪ್ತಿಕ ಪತ್ರ | ಬಿಡಿ ಅರ್ಧ ಆಣೆ

ಸಂಪಾದಕರು:- ಆನಂದ ಬಾಲಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶುಕ್ರವಾರ ತಾರೀಖು ೧೦ ನೇ ಜೂನ ೧೯೩೨ | ಸಂಚಿಕೆ ೧೨

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಫೂ. ೩ ಗಾಲಿಗಳು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೮|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—o—

ತಿಂಗಳು ಕಾಲವಿನ ಪತ್ರ ಪತ್ರಿಕೆಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಾರಕ್ಕೆ ಒಂದಾಣೆ ಇದೇ ಪ್ರಕಾರ ಪ್ರತಿಯೊಂದು ಒಳಗೆ ಆದು ಇದೆ ಸ ಕರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಸೇಲಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಜಾಹೀರಾತಿನ ಒಳಗಳಿಗೆ ಇವ್ಯಾದಿ ಬಾಬ್ತ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o०o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಹುಂಡಿಗೆಯು ಆರು ಲಕ್ಷದ ಮೇಲುಂಟು. ಟಿಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಡೆಗೆಯೂ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಮನೆಯ ಮಾರಾಟ.

—(o)—

ಧಾರವಾಡ ಹಾಲಗೇರಿಯ ಕೆಳಗಿನ ಓಣಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೯೮ನೆಯ ಮನೆ ಶ್ರೀ. ಸೌ|| ಗಂಗಾಬಾಯಿ ಕೌಂಗಿ ಇವರ ಹೆಸರಿನಿಂದಿರುವದನ್ನು ಮಾರಾಟಕ್ಕಿದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳು ಇದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹೀ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು. ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ.
c/o ಬಿ. ಆರ. ಕೌಂಗಿ
ಮೋತಿತಲಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ಶು-೧೦-೬-೨೭ ನೇ ಇಸ್ವಿ

ಟ್ರೇನಿಂಗ ಸ್ಕೂಲಿನ ದುರ್ವಿಪಾಕ.

ವಿದ್ಯಾರ್ಥಿಗಳ ನಿರಾಶೆ.

ಸರಕಾರದವರು ಟ್ರೇನಿಂಗ ಕಾಲೇಜ, ಆನಂತ ಟ್ರೇನಿಂಗ ಸ್ಕೂಲನ್ನು ಬಂದು ಮಾಡಿದ್ದರಿಂದಾದ ವಿದ್ಯಾರ್ಥಿಗಳ ಹಾನಿಯು ಅಪರಿಮಿತವಾಗಿರುತ್ತದೆ. ಆ ಕಾರಿಯಲ್ಲಿ ಟ್ರೇನಿಂಗ ಸ್ಕೂಲಿಗಾಗಿ ಹೊಸದಾಗಿ ಈ ವರ್ಷ ವಿದ್ಯಾರ್ಥಿಗಳನ್ನು ತೆಕ್ಕೊಂಡಿಲ್ಲ. ಆದರೂ ಅಲ್ಲಿ ಆಕ್ಕಲುಂಟು. ಅಧಿಕಾರಿಗಳ ಕೃಪೆಯಿಂದ ಜೀವಂತವಿರುವದು. ಧಾರವಾಡದ ಸ್ಕೂಲಿಗಾಗಿ ವಿದ್ಯಾರ್ಥಿಗಳಿದ್ದರೂ, ಅದಕ್ಕೆ ಒಂದು ವರ್ಷದ ಅಜ್ಞಾತವಾಸದ ಶಿಕ್ಷೆ ವಿಧಿಸಿ, ವಿದ್ಯಾರ್ಥಿಗಳ ಹಾನಿ ಮಾಡಿದ್ದು ಪಕ್ಷಪಾತವೂ ಆಶ್ಚರ್ಯವೂ ಅಲ್ಲ. ಕರ್ನಾಟಕ ಭಾಗದ ವತಿಯಿಂದ ಈ ವರ್ಷ ದೆಸೆಯಿಂದ ೧೫೦ ಅರ್ಜಿಗಳು ಬಂದಿದ್ದವು. ಇಷ್ಟು ಮ್ಯುನಿಸಿಪಾಲಿಟಿಗಳು ಕಳಿಸಿಕೊಟ್ಟವು. ಅವುಗಳಲ್ಲಿ ೩೫ ಜನರನ್ನು ಆರಿಸಿಕೊಳ್ಳಬೇಕೆಂದು ಹುಕುಮು ಮಾಡಿ, ಯಕ್ಷಿಣಿಯು ಕೇತಿರಿವಿದಂತೆ, ಒಮ್ಮಿಂದೊಮ್ಮೆ ಉಪ್ಪರಿಗೆಯು ತಿಪ್ಪಿ ಮಾಡಿದಂಥ ಕೃತ್ಯವನ್ನು ವಿದ್ಯಾಖಾತೆಯ ಅಧಿಕಾರಿಗಳು ಮಾಡಿದ್ದು ಶುದ್ಧ ನಗೆಗೀಡಾಗುತ್ತದೆ.

ಇಂಗ್ರೇಜಿಯಲ್ಲಿ ಉಚ್ಚಪ್ರತಿಯ ಶಿಕ್ಷಣ ದೊರೆಯಾಗುವಂತೆ ಕನ್ನಡದಲ್ಲಿಯೂ ಬೇಕಾಗುತ್ತದೆ. ಅದಕ್ಕೆ ಸರಕಾರವು ಕುಲಕರ್ಣಿಯರ ಮೇಲೆ ಮುಲಕೀ ಪರೀಕ್ಷೆ ಪಾಸಾಗಲಿಕ್ಕೇ ಬೇಕೆಂದು ಮಾಡಿದ ಕಟ್ಟಳೆಯು ಅಗತ್ಯಪಡಿಸುವದಾಗುತ್ತದೆ. ಈ ವರೆ ಸರಕಾರದವರು ಟ್ರೇನಿಂಗ ಕಾಲೇಜದಲ್ಲಿ ಓದುವಂಥ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ಕೊಡುವರು. ಅವರಿಗೆ ಕೆಲಸ ಕೊಡುವ ಜವಾಬದಾರಿ ಹೊಂದುವರು. ಅಂಥ ಒತ್ತಾಯವು ಸದ್ಯಕ್ಕಿಲ್ಲ. ಮುಂದೆ ಈ ಸಂತರ ಸರಕಾರದ ಮೇಲಿರುವದಿಲ್ಲ. ಇಂಗ್ಲಿಷ ಕಾಲೇಜವಿಟ್ಟಂತೆ ಕನ್ನಡ ಟ್ರೇನಿಂಗ ಕಾಲೇಜವಿಟ್ಟರೆಯುಕ್ತ. ವಿದ್ಯಾರ್ಥಿಗಳು ತಾವಾಗಿ ತಮ್ಮ ವೆಚ್ಚದಿಂದ ಕಲಿಯುವರು. ತಮ್ಮ ಕೆಲಸದ ಸೋಯಿಯನ್ನು ತಾವೇ ಮಾಡಿಕೊಳ್ಳುವರು. ಸರಕಾರದ ಮೇಲೆಷ್ಟು ಜವಾಬದಾರಿಯು ಇರುವದಿಲ್ಲ. ಇದೇನು ಸಾಮಾನ್ಯ ಲಾಭವಲ್ಲ.

ಇಂಗ್ರೇಜಿ ಕಾಲೇಜಕ್ಕೆ ಬೇಕಾಗುವ ಪ್ರಿನ್ಸಿಪಾಲ, ಪ್ರೊಫೇಸರ ಮೊದಲಾದವರು ಹೆಡಿಗೆ ತುಂಬ ರೂಪಾಯಿ ಮತ್ತು ಕಿಸೆ ತುಂಬ ನೋಟುಗಳನ್ನು ಬೇಡುವರು. ಅಷ್ಟು ಸಂಬಳವನ್ನು ಟ್ರೇನಿಂಗ ಕಾಲೇಜದ ಶಿಕ್ಷಕರು ಬೇಡುವದಿಲ್ಲ. ಇತರರ ಸಂಬಳದಲ್ಲಿ ಆನೆಯ ಹಾಗು ಆಡಿನ ಭಾರದಷ್ಟು ಅಂತರವುಂಟೆಂಬದು ಒಂದೊಂದು ತಿಂಗಳದ ಪ್ರಮಾಣ ನೋಡಿದರೂ ಸಾಕು. ಕಾಲೇಜದ ಶಿಕ್ಷಣ ದೊರೆತ ಹೊರ್ತು ಮ್ಯುನಿಸಿಪಾಲಿಟಿಗಳ ಶಾಲೆಗಳು ನಡೆಯುವಂತಿಲ್ಲವೇ ಇಲ್ಲ! ಏಕೆಂದರೆ- ಪ್ರತಿಯೊಂದು ಮ್ಯುನಿಸಿಪಾಲಿಟಿಯ ಊರಲ್ಲಿ ಒಂದಾದರೂ ಎಳೆಯ ಹಾಗು ಮುಲಕೀ ಪರೀಕ್ಷೆಗೆ ಕಳಿಸುವಂಥ ಶಾಲೆಯು ಇರುತ್ತದೆ. ಈ ಶಾಲೆಗೆ ಬೇಕಾಗುವ ಶಿಕ್ಷಕರನ್ನೊದಗಿಸಿಕೊಡುವ ಕರ್ತವ್ಯಕರ್ಮವು ಸರಕಾರದ್ದೇ ಆಗುತ್ತದೆ.

ಸುಶಿಕ್ಷಿತರಲ್ಲಿ ಕೆಲಸವಿಲ್ಲದಂಥವರ ಸಂಖ್ಯೆಯು ಮಿತಿಮೀರಿ ಬೆಳೆದು, ಅವರಲ್ಲಿ ಅಸಂತೋಷವುಂಟಾಗಿರುತ್ತದೆಂದು ಸರಕಾರವು ಕಬೂಲಿ ಜವಾಬು ಕೊಟ್ಟಂತೆ ಒಪ್ಪಿರುತ್ತದೆ. ಇಂಗ್ಲಿಷವಾದರೂ ಅಷ್ಟೇ! ಕನ್ನಡವಾದರೂ ಅಷ್ಟೇ!! ಇಬ್ಬರೂ ಎಲ್ಲಾದರೂ ಕೆಲಸ ಹುಡುಕುವರು. ಹೆಚ್ಚಿನ ಸಂಬಳದ ಆಶೆ ಮಾಡುವರು. ಕನ್ನಡದ ಮುಲಕೀ ಪರೀಕ್ಷೆ ಪಾಸಾದವರು ಉಚ್ಚಪ್ರತಿಯ ಶಿಕ್ಷಣ ಹೊಂದಬೇಕೆಂದು ಅಭಿಲಾಷೆಪಡುವದು ಸ್ವಾಭಾವಿಕವು. ಅವರಿಗೆ ಇಂಥ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡಿಕೊಡುವದು ಸರಕಾರದ ಧರ್ಮವು. ಮೊದಲು ಇಂಥ ವ್ಯವಸ್ಥೆ ಮಾಡಿ, ಅದರ ರುಚಿಯನ್ನು ಹಚ್ಚಿ, ಈಗ ಮನೋಭಂಗ ಮಾಡುವದು ಎತ್ತಣ ನ್ಯಾಯವು!

ಮುಂದಿನ ತಿಂಗಳಲ್ಲಿ ಮುಂಬಯಿ ಕೌನ್ಸಿಲ ಸಭೆಯು ಕೂಡುವದು. ಆಗ ಪ್ರಶ್ನೆ ಕೇಳುವದಿದ್ದರೆ ತಮಗೆ ತಿಳಿಸಬೇಕೆಂದು ವಿಜಾಪೂರದ ಶ್ರೀಮಂತ ಸರದೇಸಾಯರು ನಮಗೊಂದು ಪತ್ರ ಬರೆದಿದ್ದಾರೆ. ಶ್ರೀಮಂತ ದೇಸಾಯರು ಟ್ರೇನಿಂಗ ಕಾಲೇಜದ ವಿಷಯವನ್ನು ಮುಂದಿಟ್ಟುಕೊಂಡು, ಅದು ಪುನರ್ಜನ್ಮ ಹೊಂದುವಂತೆ ಶಕ್ಯವಾದ ಪ್ರಯತ್ನವನ್ನು ಠರಾವು ಅಥವಾ ಪ್ರಶ್ನೆಯ ರೂಪದಿಂದ ಮಾಡಬೇಕೆಂದು ನಾವು ಸೂಚಿಸುತ್ತೇವೆ. ಇವರಿಗೆ ಕರ್ನಾಟಕ ಪ್ರಾಂತದ ಬೇರೆ ಮೆಂಬರರು ಅಭಿಮಾನಪೂರ್ವಕವಾಗಿ ಸಹಾಯ ಮಾಡುವರೆಂಬದು ನಿರ್ವಿವಾದವು. ಯಾವದೊಂದು ಅಂಗತ್ಯದ ಪ್ರಶ್ನದ ವಿಚಾರಣೆಯಾಗಬೇಕೆಂಬ ಸಮಯ ಬಂದಾಗ ಕೌನ್ಸಿಲದ ಮಿಕ್ಕ ಕೆಲಸಗಳನ್ನು ತಹಕೂಬ ಮಾಡಿ, ಇದನ್ನೇ ಪ್ರಸ್ತಾಪಿಸಬೇಕೆಂಬ ಠರಾವನ್ನು ತರುವ ಪದ್ಧತಿಯೂ ಉಂಟು. ಈ ತರವಾಗಿ ಶ್ರೀಮಂತ ಸರದೇಸಾಯಿಯವರು ಉದ್ಯೋಗಿಸಿ, ಮುಂದಾಗಿ ಸರಕಾರಕ್ಕೆ ಸೂಚಿಸುವದೂ ಯೋಗ್ಯವಾಗುತ್ತದೆ.

ಬೆಳಗಾವಿಯಲ್ಲಿ ಕೂಡಿದ್ದ ಪೋಸ್ಟಮನ್ನರ ಪರಿಷತ್ತು.

ಕಳೆದ ವಾರದಲ್ಲಿ ಬ್ಯಾರಿಸ್ಟರ ಜಯಕರರ ಅಧ್ಯಕ್ಷತೆಯಲ್ಲಿ ಪೋಸ್ಟಮನ್ನರ ಪರಿಷತ್ತು ಕೂಡಿತ್ತು. ಪೋಸ್ಟಮನ್ನರಿಗೆ ಹಿತವಾಗುವಂಥ ಕೆಲವು ಠರಾವುಗಳು ಪಾಸಾದವು. ಪೋಸ್ಟಖಾತೆಯಿಂದ ಸರಕಾರಕ್ಕೆ ಯಾವಾಗಲು ಲಾಭವುಂಟು. ಪೋಸ್ಟದಂತೆ ತಾರು ಮತ್ತು ಟೆಲಿಫೋನ ಖಾತೆಯಿಂದಿರುವದಿಲ್ಲ. ಪೋಸ್ಟಿನ ಉಳಿತಾಯದಿಂದ ಇವುಗಳ ಹಾನಿ ತುಂಬುತ್ತಾರೆ. ಪೋಸ್ಟವಾಗಲಿ, ಟೆಲಿಗ್ರಾಫವಾಗಲಿ ಮೇಲಧಿಕಾರಿಗಳ ಸಂಬಳವು ಬಹಳವಾಗಿ ಕೆಳ ಪ್ರತಿಯ ಜನರು ಅರಹೊಟ್ಟೆಯಿಂದಿರುವಷ್ಟು ತುಸು ಇರುವದು. ಸರಕಾರವು ಪೋಲಿಸಖಾತೆಯ ಸಿಪಾಯರ ಯೋಗಕ್ಷೇಮ ತಕ್ಕೊಳುವಂತೆ ಪೋಸ್ಟಮನ್ನರ ವಿಷಯವಾಗಿ ತಕ್ಕೊಳ್ಳುವದಿಲ್ಲ. ಇದೇ ಖಾತೆಯಲ್ಲಿ ಇಂಗ್ಲಂಡದಲ್ಲಿಯ ಕಾಮದಾರರ ಇಮ್ಮಡಿಯಷ್ಟು ಸಂಬಳವು ಹಿಂದುಸ್ಥಾನದಲ್ಲುಂಟು. ಆದುದರಿಂದ ಕಾರ್ಡ ಪಾಕೀಟಿನ ಹಾಸಿಲು ಇಮ್ಮಡಿಸಿತು. ಪೋಸ್ಟಮನ್ನರು ದರಿದ್ರರಾಗಿರುವರು. ಸರಕಾರವು ತಲೆಭಾರರಾಗಿರುವ ಕಾಮದಾರರ ಸಂಬಳ ಕಡಿಮೆ ಮಾಡಿ, ಪೋಸ್ಟಮನ್ನರ ಸಂಬಳ ಹೆಚ್ಚುವಂತೆ ಅಧ್ಯಕ್ಷರಾದ ಬ್ಯಾರಿಸ್ಟರ ಸಾಹೇಬರು ಅಸೆಂಬ್ಲಿಯಲ್ಲಿ ಪ್ರಯತ್ನ ಮಾಡಿ ಯಶಪಡೆಯತಕ್ಕದ್ದು. ಮುಂದಿನ ವರ್ಷದ ಸಭೆಯು ಬಡೋದೆಯಲ್ಲಿ ಕೂಡುವದು.

ಮುಂಬಯಿಯಲ್ಲಿ ಇಂದಿನ ದಿವಸ ಶ್ರೀ ವೆಂಕಟೇಶದೇವರ ಪ್ರತಿಷ್ಠಾಪನೆಯಾಗುವದು. ಹತ್ತು ಲಕ್ಷ ರೂಪಾಯಿ ವೆಚ್ಚ ಮಾಡಿ ದೇವಾಲಯ ಕಟ್ಟಿದ್ದಾರೆ.

ಬಕರೀದ ಹಬ್ಬದಲ್ಲಿ ದಂಗೆಯಾಗಿ ಅಂಗಡಿಗಳ ಲೂಟಿಯಾದೀತೆಂದು ದಿಲ್ಲಿಯ ಹಿಂದೂ ಅಂಗಡಿಕಾರರು ಅಂಗಡಿಗಳ ಎಮೆ ಇಳಿಸಿದ್ದಾರೆ. ಹಿಂದೂ ಮುಸಲಮಾನರ ಐಕ್ಯವಾದ್ದರಿಂದ ದಂಗೆಯಾಗಲಾರದೆಂದು ಡಾಕ್ಟರ ಅನಸಾರಿಯವರು ಜಾಹೀರ ಮಾಡಿದ್ದಾರೆ.

ಅಧ್ಯಕ್ಷರಿಗೆ ಉಡಾವಿಗೆಯ ಹೊಡತ.

—೦—

ಸುರತದಲ್ಲಿ ಕಾಂಗ್ರೆಸ ಸಭೆಯ ಪ್ರಾರಂಭದಲ್ಲಿ ಒಂದು ಪಾದರಕ್ಷೆಯು ಸಭಾಸ್ಥಾನದ ಮೇಲೆ ಬಂದದ್ದು, ಸರ ಸುರೇಂದ್ರನಾಥರು ಅದನ್ನು ಪಾರಿತೋಷಕವಾಗಿ ತಮ್ಮ ಮನೆಯಲ್ಲಿಟ್ಟುಕೊಂಡದ್ದೂ ಪ್ರಸಿದ್ಧವಾದ ಸಂಗತಿಯು. ಇದೇ ಪ್ರಕಾರದ ಒಂದು ಕೃತ್ಯವು ನಾಗಪಟ್ಟಣದಲ್ಲಿ ಸಂಭವಿಸಿದೆ. ಅಲ್ಲಿ ಕಾಂಗ್ರೆಸ ಸಭೆಯು ಸಾರ್ವಜನಿಕ ಸಭೆಯು ಕೂಡಿತ್ತು. ಜಸ್ಟೀಸ ಪಕ್ಷದ ಅನೇಕ ಜನರು ಸಭೆಗೆ ಬಂದು, ಕುಚೇಷ್ಟೆ ಮತ್ತು ತಿರಸ್ಕಾರ ವರ್ತನದಿಂದ ಸಭೆಯ ಕೆಲಸಕ್ಕೆ ವ್ಯತ್ಯಾಸ ತಂದರು. ಎಂ. ಹನೀಫಖಾನನೆಂಬ ಮುಸಲಮಾನ ಗೃಹಸ್ಥರು ಕಾಂಗ್ರೆಸ ಪರವಾಗಿ ಭಾಷಣ ಮಾಡುತ್ತಿದ್ದಾಗ- ಯಾವನೋ ಒಬ್ಬನು ಉಡಾವಿಗೆಯನ್ನು ಬೀಸಿ ಒಗೆಯಲು- ಅದು ಇವರ ಎದೆಗೆ ಬಂದು ಬಡಿಯಿತು. ಆಗ ಸಭೆಯು ತುಂಬ ಗೊಂದಲವಾಯಿತು. ಕೂಲಿಕಾರ ಸಂಘದ ಅಧ್ಯಕ್ಷರಾದ ಶ್ರೀ. ಕೃಷ್ಣಸ್ವಾಮಿ ಪಿಳ್ಳೆಯವರು ಗೊಂದಲವನ್ನು ಶಾಂತಪಡಿಸಿ ಈ ಅನಾಹುತದ ಬಗ್ಗೆ ಸಾಹೇಬರ ಕ್ಷಮೆ ಬೇಡಿಕೊಂಡರು. ಮತ್ತು ಉಡಾವಿಗೆಯನ್ನು ಜಸ್ಟೀಸ ಪಕ್ಷದಿಂದ ದೊರೆತ ಉಡುಗರೆಯಾಗಿ ಭಾವಿಸಿ, ಅದನ್ನು ತಮ್ಮ ಸಭೆಯಲ್ಲಿ ತೂಗು ಹಾಕುವರು.

ಮುಂಬಯಿಯಲ್ಲಿ ಭಯಂಕರ ಕೊಲೆ.

—೦—

ಮುಂಬಯಿಯಲ್ಲಿ ಬೇಕಾದಷ್ಟು ಬಂದೋಬಸ್ತ ಇದ್ದರೂ ಪಠಾಣರ ರಾಜ್ಯವಾಗಿದೆ. ದಿನಾಲು ಎಲ್ಲಾದರೂ ಇವರು ಕೊಲೆ ಮಾಡುವರು. ಅಂಗಡಿಗಳನ್ನು ಹೊಕ್ಕು, ಅಲ್ಲಿದ್ದವರನ್ನು ಕೊಂದು ದ್ರವ್ಯಾಪಹಾರ ಮಾಡಿ, ಪಲಾಯನ ಸೂಕ್ತ ವಾಗುವದು (?) ಮೊನ್ನಿನ ಒಂದೇ ದಿವಸದಲ್ಲಿ ಭಯಂಕರವಾದ ಎರಡು ಕೃತ್ಯ ಮಾಡಿದರು. ಒಬ್ಬನು ಔಷಧ ಅಂಗಡಿಯಲ್ಲಿ ಹೊಕ್ಕು, ತನಗೆ ಔಷಧ ಕೊಟ್ಟ ಹುಡುಗನನ್ನು ಚೂರಿಯಿಂದ ಇರಿದು ಕೊಂದು, ಗಲ್ಲೆದಲ್ಲಿದ್ದ ರೂಪಾಯಿಗಳನ್ನು ತಕ್ಕೊಂಡು ನಿರ್ಭಯದಿಂದ ಹೊರಟು ಹೋದನು. ಹೊರಗೆ ನೂರಾರು ಜನರು ನಿಂತು ಕೌತುಕದಿಂದ ಇದನ್ನು ನೋಡುತ್ತಿದ್ದರೂ, ಒಬ್ಬನೂ ಎದೆಗಾರನಾಗಿ ಹುಡುಗನನ್ನು ಉಳಿಸಿಕೊಳ್ಳಲಿಲ್ಲ. ಅಥವಾ ಕೊಲೆಗಾರನನ್ನು ಹಿಡಿಯಲಿಲ್ಲ. ಮತ್ತಾ ಗ್ರಾಮದಲ್ಲಿ ಕೆಲವರು ಒಬ್ಬ ಮಾರವಾಡಿಯ ಅಂಗಡಿಯಲ್ಲಿ ಹೊಕ್ಕು, ರಿವಾಲ್ವರದ ಭಯ ತೋರಿಸಿ, ಮನೆಯವನನ್ನು ಸುಮ್ಮನೆ ಕೂಡ್ರಿಸಿ, ದುಡ್ಡು ಮತ್ತು ಆಭರಣಗಳನ್ನು ತಕ್ಕೊಂಡು ಹೊರಗೆ ತಮಗಾಗಿ ಸಿದ್ಧವಾಗಿದ್ದ ಮೋಟಾರದಲ್ಲಿ ಕೂತು ವಾಯುವೇಗದಿಂದ ಪಲಾಯನ ಹೇಳಿಸಿದರು.

ರಶಿಯಾದ ರಾಯಭಾರಿಯ ಭಯಂಕರ ಕೊಲೆ.

—೦—

ಇಂಗ್ಲಿಷ ಮಂತ್ರಿಗಳಿಂದ ಹೊರಗೆ ಹಾಕಿಸಿಕೊಂಡ ರಶಿಯಾದ ರಾಯಭಾರಿ ಮೊದಲಾದವರು ಜರ್ಮನಿ ಮಾರ್ಗವಾಗಿ ವಾರಸಾಕ್ಕೆ ಬಂದರು. ಅಲ್ಲಿ ತಮ್ಮ ವಕಾಲತಿಯಲ್ಲಿಳಿದು, ವಿಶ್ರಾಂತಿ ತಕ್ಕೊಂಡು ಮುಂದೆ ಹೊರಡಲು ಸ್ಟೇಶನಕ್ಕೆ ಬಂದರು. ಅಲ್ಲಿದ್ದ ರಶಿಯಾದ ರಾಯಭಾರಿಯಾದ ವಾಯಕೋಫಸಾಹೇಬನು ಬಂಡಿಯ ದಾರೀ ನೋಡುತ್ತ ಅತ್ತಿಂದ ಇತ್ತ ಇತ್ತಿಂದ ಅತ್ತ ತಿರುಗಾಡುತ್ತಿದನು. ಆಗ ಝೂಂಪಕ್ಷೀಯನಾದ ೧೯ ವರ್ಷ ಪ್ರಾಯದ ಯುವಕನು ರಿವಾಲ್ವರ ತೆಗೆದವನೇ ಇವರ ಮೇಲೆ ಅರಳು ಹುರಿದಂತೆ ಗುಂಡು ಹಾರಿಸಿದರು. ಎಂಟು ಗುಂಡುಗಳು ಇವರ ... ತುಂಬ ಇವರು ಬಡೆದು, ನೆಲಕ್ಕೆ ಬಿದ್ದರು. ಜನರು ತರುಣನನ್ನು ಹಿಡಿದರು. ತಾನು ರಾಜಪಕ್ಷೀಯನು. ಕೊಲೆಗೆ ರಾಜಕೀಯವೇ ಕಾರಣ. ತನ್ನ ಹೆಸರು ಬೋರಿಸ ಕಾವ್ರೇಡಾ ಎಂದು ಈತನು ಹೇಳಿದ್ದಾನೆ.

ನಿಜಾಮರ ಸೈನ್ಯದ ಅಧಿಪತಿಯಾದ ಆಫಸರ ಉಲ್- ಮುಲ್ಕರ ಪತ್ನಿಯವರು ನೀಲಗಿರಿಯಲ್ಲಿ ಪರಲೋಕವಾಸಿಯಾದರು.

ಬ್ರಹ್ಮದೇಶದ ಸರಕಾರದವರು ಕಲಕತ್ತೆಯ ಫಾರವರ್ಡ ಪತ್ರವು ತಮ್ಮ ದೇಶದಲ್ಲಿ ಬರದಂತೆ ಅದಕ್ಕೆ ಬಹಿಷ್ಕಾರ ಹಾಕಬೇಕ್ಕವರಿದ್ದಾರೆ.

ಆಯರ್ಲಂಡದಲ್ಲಿ ಬ್ಲಾಯಥರೆಂಬ ಸಾಹೇಬರು ಚುನಾವಣೆಯ ಮೇಲೆ ಭಾಷಣ ಮಾಡುತ್ತಿದ್ದಾಗ ಪ್ರೇಕ್ಷಕರು ಇವರ ಮೇಲೆ ಕತ್ತಿಗಳ ಸುರಿಮಳೆ ಮಾಡಿದರು.

ಪರೀಕ್ಷೆಯ ಪ್ರಶ್ನೆಗಳನ್ನು ಒಡೆದರೆಂದು ಹೈದರಾಬಾದಿನ ಉಸ್ಮಾನಿಯಾ ಯುನಿವ್ಹರ್ಸಿಟಿಯು ಪ್ರೋಫೇಸರರಾದ ರಹಿಮುದ್ದೀನಸಾಹೇಬರಿಗೆ ಬರತರ್ಫ ಮಾಡಿದರು.

ಪಂಡಿತ ಮಾಲವೀಯಾಯವರು ದೇಹಾರೋಗ್ಯಕ್ಕಾಗಿ ನೀಲಗಿರಿಗೆ ಬರುವರು.

ಇಂಟರ ಪರೀಕ್ಷೆಯ ಪರಿಣಾಮವು.

ಕರ್ನಾಟಕ ಕಾಲೇಜ, ಧಾರವಾಡ.

ಆರ್ಟ್ಸ್.

ಕುಮಟಾ ಜಿ. ಎನ್. ಸಾವಟೆ ಆರ್. ಎನ್. ಪರೋಪಿ ಎಮ್. ಎಚ್. ಬೆಂಗೇರಿ ಕೆ. ಪಿ. ಹಕೀಮ ಬಿ. ಜಿ. ಸಂಗಲಾಡ ಕೆ. ಬಿ. ಆನೇಗುಂದಿ ಬಿ. ವಾಯ. ಚಿಮಡೆ ಎನ್. ಆಯ. ಪೋತದಾರ ವ್ಹಿ. ಬಿ. (೨ ನೇ ಕ್ಲಾಸ) ಸಿಗ್ಗಾಂವ ಎಸ್. ಎಲ್. ಅಷ್ಟಗಿ ಎಮ್, ಕೆ. ಕೆಂಡಾಮಠ ಎಸ್. ಬಿ. ಸಾಸನೂರ ಎ ಟಿ ಮಲ್ಲೇಶಪ್ಪಾ ಹಣಮಪ್ಪಾ ಬಳ್ಳಾರಿ, ಗುರುಬಸಪ್ಪಾ ಚನಮಲಪ್ಪಾ ಧೂಸಾಸವರ, ಶಂಕರ ಭೀಮರಾವ ದೇಶಪಾಂಡೆ, ವಿನಾಯಕ ಕೃಷ್ಣರಾವ ಗೋಕಾಕ, ಲಕ್ಷ್ಮಣ ವಿಠ್ಠಲ ಗುಳವಾಡಿ, ವಾಸುದೇವ ಗೋವಿಂದ ಹಣಮಸಾಗರ, ರಾಮಚಂದ್ರ ಗಣಪತಿ ಹೆಗಡೆ, ವಿಠ್ಠಲ ಶೇಷಗಿರಿರಾವ ಹೊಸಕೋಟೆ, ಬಸೆಟ್ಟೀ ವಿರೂಪಾಕ್ಷ ಹುಬ್ಬಳ್ಳಿ, ರಾಮಚಂದ್ರ ಕೃಷ್ಣಾಜಿ ಇಂಗಳಗಿ, ಮಲ್ಲಪ್ಪಾ ಅಯ್ಯಪ್ಪಾ ಕಾಡಿ, ಸುಬ್ರಮ್ಹಣ್ಯ ಗೋಪಾಳಾಚಾರ್ಯ ಕಲ್ಲಾಪೂರ, ಹೇಮಪ್ಪಾ ವೀರಭದ್ರಪ್ಪಾ ಕೌಜಲಗಿ, ಭೀಮಸೇನ ಕಾಶೀನಾಥ ಕುಲಕರ್ಣಿ, ನಾಗನಗೌಡಾ ಸಿವಬಸನಗೌಡಾ ಕುಲಕರ್ಣಿ, ಮುರಲೀಧರ ಚಿಂತಾಮಣಿ ಲಿಮಯೆ, ಮಧ್ವ ವೆಂಕಟೇಶ ಮೆಳೆಗಟ್ಟಿ, ಲಕ್ಷ್ಮಣ ದುಗ್ಗೋ ನಾಡಿಗೇರ, ಶಿವರಾಮ ಶ್ರೀಧರ ನಾಗರಕರ, ಸ್ವಾಮಿ ವೆಂಕಟೇಶ ನಾಯಿಕ, ನಾರಾಯಣ ವೆಂಕಟೇಶ ಪಾಚಲಾಗ, ಭೀಮಾಜಿ ಸುಬ್ರಾವ ಪಾಟೀಲ, ಶಾಂತಪ್ಪಾ ಪದಮಪ್ಪಾ ಪತ್ರಾವಳಿ, ಪಾಂಡುರಂಗ ಮಂಜುನಾಥ ಪ್ರಭು, ವೀರನಗೌಡಾ ಗಿರಿಯಪ್ಪಗೌಡಾ ಸಾಲಮನಿ, ಬಾಲಕೃಷ್ಣ ರಂಗರಾವ ಸುಂಥನಕರ, ರಾಮನಗೌಡಾ ಫಕೀರಗೌಡಾ ತುಪ್ಪದ, ಸಿದ್ದಪ್ಪಾ ಕಲ್ಲಪ್ಪಾ ಅಂಗಡಿ, ವಿಶ್ವೇಶ್ವರ ಗಣಪತಿ ಭಟ್ಟ, ಸ್ವಾಮಿ ವಾಜಿರಾವ ಕಲಘಟಗಿ, ತಿಮ್ಮರೆಡ್ಡಿ ಹನಮರೆಡ್ಡಿ ಕುರಪಟ್ಟಿ, ಗೋವಿಂದ ನರಸಿಂಗರಾವ ಮಹಿಷಿ, ಕೇಶವ ನರಸಿಂಹ ಮಹಿಷಿ, ವಾಸುದೇವ ಭಗವಾನರಾವ ಮುರಾಳಿ, ನಾರಾಯಣ ಕೃಷ್ಣ ನಾಗಪೂರ, ರಾಘವೇಂದ್ರ ಸುಬ್ರಾವ ಫಡ್ನಿಸ, ಮಿಸ್ ಆಲಿಸ ಡೊರೊಥೀ ಪಾಟೀಲ, ಕದರಮೋಹಿಂದರ ವಲ್ಲದ ಇಸ್ಮಾಯಿಲಸಾಹೇಬ ಹಿಪ್ಪರಗಿ, ಮೊಹಿಯುದ್ದೀನ ಫಕರುದ್ದೀನಸಾಹೇಬ ಕಮದೋಡ, ಮಹಮ್ಮದ ಹುಸೇನ ಮಹಮ್ಮದ ಯುಸುಫ ಶೇಖ.

ಕಲಕತ್ತೆಯಲ್ಲಿ ಮಳೆಯಾಗಿ ಬೀದಿಗಳಲ್ಲಿ ಒಂದೊಂದು ಕಡೆಗೆ ಎದೆಮಟ ನೀರು ನಿಂತಿತು.

ನೋಟೀಸು

ಗದಗ ತಾಲ್ಲೂಕ ಹಂಬಳದಲ್ಲಿರುವ ಮಂಟೆಯುಲ್ಲಾ ಬಿಂಚ್ಯ ಮುದುಕಪ್ಪಾ ದೊಡ್ಡಮನಿ ಮಾದರ ಈತನಿಗೆ—

ನಾನು ಕೆಳಗೆ ಸಹಿ ಮಾಡಿದವಳು ಅಂದರೆ ದುರಗವ್ವಾ ಕೋಮ ಮಂಟೆಯುಲ್ಲಾ ದೊಡ್ಡಮನೀ ಮಾದರ ಸಾಕೀನ ಕಳಸ ಈಕೆಯು ಈ ನೋಟೀಸಿನಿಂದ ತಿಳಿಸುವದೇನಂದರೆ— ನೀನು ನನ್ನ ಲಗ್ನದ ಗಂಡನಿದ್ದು ನೀನು ನನ್ನನ್ನು ಕನ್ಯಾವಳಿದ್ದಾಗ ಲಗ್ನ ಮಾಡಿಕೊಂಡಿದ್ದಿ ಮುಂದೆ ಕೆಲವು ದಿವಸಗಳ ಮೇಲೆ ನಾನು ಮೈನೆರೆದ ನಂತರ ನಿನ್ನ ಸಂಗಡ ಪ್ರಪಂಚ ಮಾಡಲಿಕ್ಕೆ ನಿನ್ನ ಮನಿಗೆ ಬಂದು ಚಲೋ ರೀತಿಯಿಂದ ಪ್ರಪಂಚ ಮಾಡಿಕೋತಾ ಬಂದೆ ಹೀಗೆ ಇರತಾ ನೀನು ಇಟ್ಟುಕೊಂಡ ರಂಡೀ ಮಾತು ಕೇಳಿ ನನ್ನನ್ನು ಹೊಡೆದು ಬಡಿದು ಮಾಡಿ ನನ್ನ ತವರ ಮನಿಯವರು ಮಾಡಿದ ಭಂಗಾರದ ದೀಡು ತೊಲಿ ೧|| ಗುಂಡಿನ ಟೀಕಿ ಇದರ ಅಜಮಾಸ ಕಿಮ್ಮತ್ತು ೩೬ ರೂಪಾಯಿ ವ ಭಂಗಾರದ ಸಂಡಾಳೀ ಸರಾ ಒಂದು ಇದರ ಅಜಮಾಸು ಕಿಮ್ಮತ್ತು ೨೪ ರೂಪಾಯಿ ವ ಭಂಗಾರದ ಮೂಗುತಿ ಒಂದು ಇದರ ಅಜಮಾಸು ಕಿಮ್ಮತು ೫ ರೂಪಾಯಿ ವ ಭಂಗಾರದ ಬೆಂಡವಾಲಿ ಜೋಡು ಒಂದು ಇದರ ಅಜಮಾಸು ಕಿಮ್ಮತ್ತು ೪ ರೂಪಾಯಿ ವ ಬೆಳ್ಳೀ ತೋಳಬಂದೀ ಜೋಡು ಒಂದು ಇವುಗಳ ಅಜಮಾಸು ಕಿಮ್ಮತ್ತು ೨೦ ರೂಪಾಯಿ ವ ಬೆಳ್ಳೀ ಕಡಗ ಒಂದು ಇದರ ಅಜಮಾಸು ಕಿಮ್ಮತ್ತು ೪ ರೂಪಾಯಿ ವ ಒಂದು ಹೊಸ ಸೀರಿ ಇದರ ಅಜಮಾಸ ಕಿಮ್ಮತ್ತು ೧೬ ರೂಪಾಯಿ ಅಂತೂ ರೂಪಾಯಿಗಳ ಕಿಮ್ಮತ್ತಿನ ದಾಗಿನೆಗಳು ವ ಸೀರಿ ಸಹಿತಾ ಕಸಕೊಂಡು ವುಟ್ಟ ಸೀರಿ ದರಕೇ ಹೊರಗೆ ಹಾಕಿದಿ ಆಗಿನಿಂದಾಗಾಯತ ಇವತ್ತಿನವರಿಗೆ ಅಜಮಾಸು ೬-೭ ವರ್ಷದ ವರಿಗೆ ನಾನು ನನ್ನ ಹೊಟ್ಟಿ ಖರ್ಚಿನ ಪಕಿಂದಾ ೨ ನೇ ಕಡಿಗೆ ೩೦೦ ರೂಪಾಯಿಗಳನ್ನು ಸಾಲಾ ಮಾಡಿರುತ್ತೇನೆ ಈಗ ನನಗೆ ಸಾಲಗಾರರ ತಗಾದಿ ಬಹಳ ಆಗಿರುತ್ತದೆ ಅದ್ದರಿಂದ ನಾನು ನಿನಗೆ ಈ ನೋಟೀಸು ಕೊಡುವ ಭಾಗಬಿತ್ತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಬಂದು ಮೇಲೆ ಬರೆದ ಪ್ರಕಾರ ಸದರ ದಾಗೀನಗಳು ವ ಸೀರಿ ಸಹಿತ ವಟ್ಟು ಸಾಲಾ ಮಾಡಿದ ಬಾ|| ೩೦೦ ರೂಪಾಯಿಗಳನ್ನು ಸಹಿತ ಕೊಟ್ಟು ನನ್ನನ್ನು ಕರಕೊಂಡು ಹೋಗಿ ಚಲೋ ರೀತಿಯಿಂದ ಪ್ರಪಂಚ ಮಾಡಿಸಿಕೋಬೇಕು. ಜಾ ಒಂದು ವೇಳೆ ನೀನು ಈ ನೋಟೀಸಿನಲ್ಲಿ ಬರಿದ ಪ್ರಕಾರ ಮಾಡದೆ ಇದ್ದರೆ ನಾನು ನನ್ನ ಮುಡಿಗೆ ಬಂಧವನನ್ನು ಉಡಿಕಿ ಮಾಡಿಕೊಳ್ಳುತ್ತೇನೆ ಆ ಮೇಲೆ ನನ್ನ ವ ನನ್ನನ್ನು ಉಡಿಕಿ ಮಾಡಿಕೊಂಡ ಗಂಡನ ಮೇಲೆ ಸಹಾ ನಿನ್ನ ಯಾವ ತರದ ಹಕ್ಕು ಹಿಡಿಯಲಿಕ್ಕಿಲ್ಲ ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ ತಿಳಿಯುವದು.

ತಾ|| ೯-೬-೧೯೩೮ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ದುರಗವ್ವಾ ಕೋಮ ಮಂಟೆಯುಲ್ಲಾ ದೊಡ್ಡಮನಿ ಮಾದರ ಈಕೆಯದು ಅದೆ.

ನೋಟೀಸು.

ವಿನಂತಿ! ವಿನಂತಿ!! ವಿನಂತಿ!!!

ದಿ ಸದರ್ನ ಮರಾಠಾ ಅರ್ಬನ್ ಕೋ. ಆ. ಕ್ರೆ. ಬ್ಯಾಂಕ ಲಿಮಿಟೆಡ್ ಧಾರವಾಡ, ಇದರ ವಾರ್ಷಿಕ ಜನರಲ್ ಸಭೆಯು ಕೆಳಗೆ ವಿವರಿಸಿದ ವಿಷಯಗಳ ನಿರ್ಣಯ ಕುರಿತು, ತಾರೀಖು ೧೯ನೇ ಮಾಹೆ ಜೂನ ಸನ್ ೧೯೩೮ನೇ ಇಸ್ವಿ (ಆದಿತ್ಯವಾರ ದಿವಸ) ಸಾಯಂಕಾಲದ ೪ ಘಂಟೆಕ್ಕೆ ಮೇಲ್ಕಂಡ ರಜಿಸ್ಟರ್ಡ ಬ್ಯಾಂಕಿನ ಕಚೇರಿಯಲ್ಲಿ ಕೂಡುವದು. ಕಾರಣ, ದಯಮಾಡಿ ಬ್ಯಾಂಕಿನ ಎಲ್ಲ ಮೆಂಬರರು, ಸದರೀ ಸ್ಥಳಕ್ಕೆ, ಸದರೀ ಮೇಲ್ಕಂಡ ದಿವಸ, ಸದರೀ ವೇಳೆಕ್ಕೆ ಅವಶ್ಯ ಹಾಜರಾಗಬೇಕಾಗಿ ವಿನಂತಿ ಅದೆ.

ವಿಷಯಗಳು.

೧ ಸನ್ ೧೯೩೮ನೇ ಮಾರ್ಚ ೩೧ಕ್ಕೆ ಮುಗಿಯುವ ವರ್ಷದ ಸಂಬಂಧವಾಗಿ ಬ್ಯಾಂಕಿನ ಡಾಯರೆಕ್ಟರರ ರಿಪೋರ್ಟನ್ನು ಅಂಗೀಕರಿಸಲಿಕ್ಕೆ.

೨ ಸನ್ ೧೯೩೮ನೇ ಇಸ್ವಿ ಮಾರ್ಚ ೩೧ಕ್ಕೆ ಮುಗಿಯುವ ವರ್ಷದ ಬ್ಯಾಂಕಿನ ಆಢಾವೆ ಪತ್ರಿಕೆಗಳನ್ನು ಅಂಗೀಕರಿಸಲಿಕ್ಕೆ.

೩ ಡಿವಿಡೆಂಡ ಠರಾಯಿಸಲಿಕ್ಕೆ.

೪ ಸನ್ ೧೯೩೮-೩೯ನೇ ಸಾಲಿನ ಬಾಬತು, ಆಡಿಟರರನ್ನು ನೇಮಿಸಲಿಕ್ಕೆ, ಹಾಗೂ ಅವರ ಮೆಹನತಾನ ಠರಾಯಿಸಲಿಕ್ಕೆ.

೫ ಮ್ಯಾನೇಜಿಂಗ ಬೋರ್ಡಿನ ಮೆಂಬರರನ್ನು ಆರಿಸಲಿಕ್ಕೆ.

೬ ಬಾಯಲಾ ನಂ. ೪೪ನೇ ಪ್ರಕಾರ ಯಾವ ಮೆಂಬರ ಜನರಿಗೆ, ೫೦೦೦ (ಐದು ಸಾವಿರ ರೂ.)ಗಳ ತನಕ ಮ್ಯಾನೇಜಿಂಗ ಕಮಿಟಿಯವರಿಗೆ ಯೋಗ್ಯ ಕಂಡು ಬಂದಲ್ಲಿ, ಸಾಲ ಕೊಡತಕ್ಕ ಬಗ್ಗೆ, ನಿರ್ಣಯ ಮಾಡುವದಕ್ಕೆ, ವ ಈ ಮೊದಲನೇ ಮ್ಯಾನೇಜಿಂಗ ಕಮಿಟಿಯವರು ಜನರಲ್ ಕಮಿಟಿಯ ಮಂಜೂರಿಯನ್ನು ಅಪೇಕ್ಷಿಸಿ ಕೊಟ್ಟ ಇಂಥ ಸಾಲಗಳನ್ನು ಮಂಜೂರ ಮಾಡುವದಕ್ಕೆ.

೭ ಮ್ಯಾನೇಜಿಂಗ ಕಮಿಟಿ ಚೇರಮನ್ನರು ಸೂಚಿಸಿದ ಇತರ ವಿಷಯಗಳನ್ನು ಕುರಿತು ವಿಚಾರ ಮಾಡುವದಕ್ಕೆ.

೮ ಸನ್ ೧೯೩೮-೩೯ನೇ ಸಾಲಿನ ಬಾಬತು ಮ್ಯಾನೇಜಿಂಗ ಕಮಿಟಿ ಮೆಂಬರರನ್ನು ಆರಿಸಲಿಕ್ಕೆ.

ಸಹಿ:— ವಿಶ್ವನಾಥರಾವ ನಾರಾಯಣರಾವ ಜೋಗ,
ಬಿ. ಎ. ಎಲ್‌ಎಲ್ ಬಿ. ಎಮ್. ಎಲ್. ಸಿ.
ಚೇರಮನ್ (ಮ್ಯಾ. ಕ.)
ಸ. ಮ. ಅ. ಕೋ. ಆ. ಕ್ರೆ. ಬ್ಯಾಂಕ, ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತ್ಸಾರಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ ಧಾರವಾಡ ಶನಿವಾರ ತಾ. ೨೧ ನೇ [illegible] ೧೯೨೨ ಸಂಚಿಕೆ ೧೩೨

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರ ನೀರಿನ [illegible] ಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈ [illegible] ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಜಾಲಿಗೆ [illegible] ಭಾರವನ್ನು ಒಬ್ಬ ಹಗುರಾಗಿ ತರುತ್ತದೆ. ನದ್ಯಕ್ಕೆ ನೀರಿನ ಕೊಡ [illegible] ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ [illegible] ಗಾಡಿಯು ಒಳ್ಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

[illegible] ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ [illegible] ಜಾಗಲು ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು [illegible] ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—೦—

ಹೊಸ ಯಲ್ಲಾಪುರ ರೋಡ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ [illegible] ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಪ್ರಮುಖವಾದ ಸ್ಥಾನ.

ಶೇರುಗಳು ಒಂದು ಲಕ್ಷದ ಕಿಮ್ಮತ್ತು. ಚಿಕ ಡುಸ್ಕೌಂಟ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮಾಡಲಾಗುವದು. ಠೇವಿಯನ್ನು ಬೇರೆ ತರದ [illegible] ಕ್ಕಿಂತ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಪುಟ್ಟಪ್ಪ ವರೆಪ್ಪ ಹ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಮಾರಾಟಕ್ಕೆ ಇರುವ ಬದಗಳು.

—೦—

ಸಿಂಗಳ ಬಂದಿಪದ ಹತ್ತು ವರ್ಷಗಳ [illegible] ಗಳು [illegible]. ಮ್ಯುನಿಸಿಪಾಲಿಟಿ ಲೋಕಲಬೋರ್ಡ [illegible] ಬ್ಯಾಂಕ ಮುಂತಾದ ಸಾರ್ವಜನಿಕ ಸೊಸಾಯಟಿಗಳಿಗೆ [illegible] ದಿಂದ ಲಖಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ [illegible] ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಮನೆಯ ಮಾರಾಟ.

—(೦)—

ಧಾರವಾಡ ಹಾಲಗೇರಿಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ [illegible] ನೆಯ ಮನೆ ಶ್ರೀ. ಸೌ॥ ಗಂಗಾಬಾಯಿ ಕೌಲಗಿ ಇವರ ಹೆಸರಿನಿಂದಿರುವದನ್ನು ಮಾರಾಟಕ್ಕಿಟ್ಟಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳು ಳ್ಳದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹೀ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ.
c/o ಬಿ ಆರ. ಕೌಲಗಿ.
ಮೋತಿತಲಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ-೧೧-೬-೨೭ ನೇ ಇಸ್ವಿ

ಬ್ರಾಹ್ಮಣೇತರರ ಪರೀಕ್ಷೆಯ ಸಮಯ.

ಧಾರವಾಡ ಟ್ರೇನಿಂಗ ಕಾಲೇಜ ಮುರಿಯುವಾಗ ಈ ಪ್ರಾಂತದ ಬ್ರಾಹ್ಮಣೇತರರು ಒಂದು ಚಳವಳಿ ಎಬ್ಬಿಸಿದ್ದರು. ಪ್ರತಿಯೊಂದು ಊರಲ್ಲಿ ಸಕ್ತಿಯ ಪ್ರಾಥಮಿಕ ಶಾಲೆ ಸ್ಥಾಪಿಸಬೇಕೆಂದೂ ಈ ಮನೋರಥವನ್ನು ಪೂರ್ಣ ಮಾಡಹಂಥ ಡಾಕ್ಟರ ಪರಾಂಜಪೆಯುವರನ್ನು ನಿಷೇಧಿಸಬೇಕೆಂದೂ ಈ ಚಳವಳಿ ಇತ್ತು. ಈ ಚಳವಳಿಯು ಆಗಿನ ಅಸಹಕಾರವನ್ನು ನಿಂದಿಸುವ ಹಾಗು ಅದರ ಬಲಗುಂದಿಸುವದಕ್ಕಾಗಿತ್ತೆಂದರೂ ಸಲ್ಲುವದು. ಈ ಚಳವಳಿಯು ಅಂತಃಕರಣಪೂರ್ವಕವಾದದ್ದಿರಲಿಲ್ಲ. ಕಲಿಸಿದ ಮಾತಾಗಿತ್ತು. ಹಳ್ಳಕ್ಕೆ ಬಂದ ನೆರವು ಎಷ್ಟು ಹೊತ್ತು ಇರುವದು? ಎಂತು ಮೂರು ತಿಂಗಳಲ್ಲಿ ಇದರ ಸದ್ದೇ ಅಡಗಿ ಹೋಯಿತು. ದಿವಾನ ಪರಾಂಜಪೆಯುವರು ಹೋದರು. ಬ್ರಾಹ್ಮಣೇತರರೇ ಆದಂಥ ಜಾಧವರಾಯರು ಬಂದರು. ಇವರ ಕಾಲದಲ್ಲಿ ಒಂದು ಶಾಲೆ ಹೆಚ್ಚಾಗಲಿಲ್ಲ. ಬೆಳಗಾವಿಯಲ್ಲಿ ಶ್ರೀ. ಚಿಕ್ಕೋಡಿಯವರು ಶಾಲೆಗಳನ್ನು ಹೆಚ್ಚಿಸಿದರೆ- ಅದಕ್ಕೆ ಪ್ರತಿಫಲವೆಂದು ಶಪಥಾಕಿ ಪೆಟ್ಟು ಮಾತ್ರ ಬಂತು.

ದಿವಾನ ಜಾಧವರಾಯರು ನಿಪ್ಪಾಣಿಯಲ್ಲಿ ಕೂಡಿದ್ದ ಬ್ರಾಹ್ಮಣೇತರ ಸಭೆಯಲ್ಲಿ ತಮಗೆ ಸಂಸ್ಕೃತವೇ ಬೇಡ. ಕುತಾಡಾಮನ ಪಾಲ್ಕು ಅಧಂಗಗಳಿದ್ದರೆ ಸಾಕೆಂದು ಭಾಷಣ ಮಾಡಿ, ಉಚ್ಚಪ್ರತಿಯ ಶಿಕ್ಷಣದ ಅಗತ್ಯವೇ ಇಲ್ಲೆಂದು ಖಂಡಿತವಾಗಿ ತೋರಿಸಿ ಕೊಟ್ಟರು. ಅವರ ಅನುವಾದವನ್ನೇ ಪರ್ಯಾಯದಿಂದ ಈ ಪ್ರಾಂತದ ಬ್ರಾಹ್ಮಣೇತರರು ಮಾಡುತ್ತಿದ್ದಾರೆಂದು ಹೇಳಬಹುದು. ಲೋಕಲಬೋರ್ಡಿನವರು ತಮಗೆ ಟ್ರೇನ್ಡ ಶಿಕ್ಷಕರೇ ಬೇಕಾಗಿಲ್ಲೆಂದಿರುತ್ತಾರೆ. ಕಾರಭಾರವು ತಮ್ಮ ಪಕದಲ್ಲಿ ಬಂದುದಕ್ಕೆ ಇವರು ವಿದ್ಯಾಪ್ರಸಾರದ ಧುರಿಯ ಬಾಯಿ ಬಂದುಮಾಡುವ ಅಭ್ಯಾಸವನ್ನು ತೊಟ್ಟರು. ಸರಕಾರದ ವೆಚ್ಚ ಕಡಿಮೆ ಮಾಡುವ ಉದ್ದೇಶಕ್ಕೆ ಇವರು ಸರಕಾರಕ್ಕೆ ಅನಾಯಾಸವಾಗಿ ಸಹಾಯ ಮಾಡಿದರು. ಸರಕಾರದ ಕೂಡ ಸಹಕಾರದ ಅಪೂರ್ವ ಮಾಧುರಿಯೇ ಸೈ!! ಡಾಕ್ಟರ ಪರಾಂಜಪೆಯವರು ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದ್ದಕ್ಕೆ ಅವರ ಮೇಲೆ ಪುಷ್ಪಾಂಜಲಿ ಎಂಸಿದರು. ಆದರೆ- ಅವರು ಕಾಲೇಜದ ಬಾಗಿಲಕ್ಕೆ ಕೀಲಿಹಾಕಿದರೂ ಅದರ ವಿರುದ್ಧ ಒಂದಕ್ಷರ ಕೂಡ ನುಡಿಯಲಿಲ್ಲ. ಏಕೆಂದರೆ- ಇದು ಬೇರಾದ ವಿಷಯವಾಗಿತ್ತು. ಡಾಕ್ಟರ ಪರಾಂಜಪೆಯವರ ತರುವಾಯ ಈಗಿನ ಮಂತ್ರಿಯಾದ ದೇಸಾಯಿ ಸಾಹೇಬರು ಟ್ರೇನಿಂಗ ಸ್ಕೂಲಿಗೆ ಮಣ್ಣು ಕೊಡುತ್ತಿರುವದನ್ನು ಕಂಡು, ಈಗ ಕಣ್ಣು ತೆರೆದಿದ್ದಾರೆ. ಬರೇ ಕಣ್ಣು ತೆರೆದು ಪ್ರಯೋಜನವೇನು? ಬ್ರಾಹ್ಮಣೇತರರ ಹಿತೈಷಿಗಳೆಂದು ಶಿಕ್ಷಣರೂಪದಿಂದ ಬ್ರಾಹ್ಮಣೇತರರ ಹಾನಿಯನ್ನು ಎಷ್ಟು ಭಯಂಕರವಾಗಿ ಮಾಡಿರುತ್ತೇವೆಂಬದನ್ನು ಇವರು ಅವಶ್ಯವಾಗಿ ನೋಡತಕ್ಕದ್ದು.

ಲೋಕಲಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳು ಬಹುತೇಕವಾಗಿ ಬ್ರಾಹ್ಮಣೇತರರ ಕೈಸೇರಿವೆ. ಇವರು ಬ್ರಾಹ್ಮಣೇತರರನ್ನೇ ಶಿಕ್ಷಕರಾಗಿ ನೇಮಿಸಿಕೊಳ್ಳುವರು. ಕೆಲವು ವರ್ಷಗಳಲ್ಲಿ ಅಸಿಸ್ಟಂಟ ಮಾಸ್ತರರಿಂದ ಹೆಡ್ಡ ಮಾಸ್ತರ ತನಕ ಎಲ್ಲರೂ ಬ್ರಾಹ್ಮಣೇತರರಾಗುವರು. ಈ ಶಿಕ್ಷಕರ ಸಾಂಪತ್ತಿಕ ಸ್ಥಿತಿಯು ಮುಂದೆ ಹೇಗಾಗುವದೆಂದು ಇವರು ವಿಚಾರ ಮಾಡಲೇ ಇಲ್ಲ. ಅಥವಾ ಈ ವಿಷಯವು ಇನ್ನೂ ಇವರ ಮಿದುಳಿನಲ್ಲಿ ಚನ್ನಾಗಿ ಸೇರಿದಂತೆ ತೋರುವದಿಲ್ಲ. ಟ್ರೇನಿಂಗ ಕಾಲೇಜ ಬಂದಾಗ ಅದರ ಕರ್ತವ್ಯವು ಟ್ರೇನಿಂಗ ಸ್ಕೂಲು ಭೂತಮಸಕ್ಕೆ ಹಾಕಿದ್ದರಿಂದ, ಬ್ರಾಹ್ಮಣೇತರ ಶಿಕ್ಷಕರು ಭಾಷಾ ಪಂಡಿತರಾಗಿ, ೫೦-೬೦ ರೂಪಾಯಿ ಸಂಬಳ ಸಂಪಾದನೆ ಮಾಡದಂತಾಯಿತು. ಪ್ರತಿಯೊಬ್ಬ ಶಿಕ್ಷಕನು ಅಲ್ಪಸಂತುಷ್ಟನಾಗಿ ಬಹಳವಾದರೆ- ೩೫-೪೦ ರೂಪಾಯಿ ಕಾಣುವಂಥ ಹೊತ್ತು ಬಂದೊದಗಿದೆ. ಬ್ರಾಹ್ಮಣೇತರರ ಕಯ್ಯಲ್ಲಿ ದೊರೆತ ಅಧಿಕಾರದಿಂದ ಮತ್ತು ಅವರಲ್ಲಿ ದೂರದರ್ಶಿತನವಿಲ್ಲದ್ದರಿಂದ, ಹೀಗೆ ಶಿಕ್ಷಕರ ಅಪರಿಮಿತ ಹಾನಿಯಾಗಿರುತ್ತದೆ. ಈ ಹಾನಿಯನ್ನು ಎಂದಾದರೂ ತುಂಬಿ ಕೊಡುವ ಶಕ್ತಿಯು ಇವರಲ್ಲುಂಟೇ?

ಬ್ರಾಹ್ಮಣೇತರರ ವಶವಾದ ಲೋಕಲಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳು ಶಿಕ್ಷಣದ ಅಕ್ಷಮ್ಯವಾದಂಥ ತಪ್ಪಾಗಿರುತ್ತದೆಂಬದನ್ನು ಈಗಾದರೂ ತಿಳಿದುಕೊಳ್ಳಲಿ; ಬ್ರಾಹ್ಮಣೇತರರದೇ ರಾಜ್ಯವಾಯಿತೆಂದು ಆನಂದಪಟ್ಟಂಥ ಶಿಕ್ಷಕರು ತಮ್ಮನರಿಂಬಲೇ ತಮ್ಮ ಜೀವನದ ಹಾಗು ಸೌಖ್ಯದ ಹಾನಿಯು ಹೇಗಾಯಿತೆಂದು ತಿಳಿದುಕೊಂಡು ಬುದ್ಧಿ ಕಲಿಯಲಿ. ಕರ್ನಾಟಕ ಪ್ರಾಂತದಲ್ಲಿ ಶಿಕ್ಷಣದ ಪ್ರಗತಿಯಾಗಬೇಕು. ಶಿಕ್ಷಕರು ಸುಖವಾಗಿರಬೇಕು. ಅವರ ಶಿಕ್ಷಣ ಕಾರ್ಯವು ನಿಶ್ಚಿಂತೆಯಿಂದ ಸಾಗಬೇಕೆಂದು ಬ್ರಾಹ್ಮಣೇತರ ಮೆಂಬರರಲ್ಲಿ ಅಭಿಮಾನವಿದ್ದರೆ- ಅವರು ಟ್ರೇನಿಂಗ ಕಾಲೇಜಕ್ಕೆ ಪುನರ್ಜನ್ಮ ಕೊಡಿಸಲಿಕ್ಕೇ ಬೇಕು. ಇಂದು ಅವರು ಈ ಪರ್ಯಂತರ ಸಹಕಾರವೆಂದು ಜಪಿಸುತ್ತಾ ಬಂದದ್ದರ ಪರೀಕ್ಷೆಯ ಕಾಲವಾಗಿರುತ್ತದೆ.

ಇಜಿಪ್ತ.

ಒಂದು ವಾರದ ನಂತರ ಇಜಿಪ್ತದ ಪ್ರಕರಣವು ಮುಸುಗುರಿಯುತ್ತಾ ಎದ್ದಿರುತ್ತದೆ. ಹಾಯ ಕಮಿಶನರರಾದ ಲ್ಯಾರನ ಲಾಯಿಡಸಾಹೇಬರು ನಾಲ್ಕನೆಯ ತಾರೀಖಿನ ದಿವಸ ಮಂತ್ರಿಗೆ ಪತ್ರ ಬರೆದು, ಇಜಿಪ್ತರು ಹೇಳಿದ ಶರ್ತುಗಳನ್ನು ಒಪ್ಪಲಿಕ್ಕಾಗುವದಿಲ್ಲೆಂದೂ ಏಳನೆಯ ತಾರೀಖಿನೊಳಗಾಗಿ ಇಂಗ್ಲಿಷ ಶರ್ತುಗಳನ್ನು ಒಪ್ಪಬೇಕೆಂದೂ ತಿಳಿಸಿದರು. ಇಂಗ್ಲಿಷ ಜನರು ಬಲವಂತಿಕೆಯಿಂದ ಹೇಳುವ ಕಟ್ಟಳೆಗಳನ್ನೊಪ್ಪಲು- ಇಜಿಪ್ತರು ಎಷ್ಟೂ ಇಚ್ಛಿಸುವದಿಲ್ಲ. ಬಲಾಢ್ಯರೆಂಬ ಅಹಂಕಾರದಿಂದ ಇಂಗ್ಲಿಷರು ತಮ್ಮ ಕರಾರುಗಳನ್ನು ಹೇರಹೋದರೆ- ಮಂತ್ರಿಗಳು ತಮ್ಮ ಮೇಲೆ ಯಾವ ಜವಾಬದಾರಿ ತಕ್ಕೊಳ್ಳದೆ, ಪಾರ್ಲಮೆಂಟದ ಕಡೆಗೆ ಬೆರಳು ತೋರಿಸುವರು. ಪಾರ್ಲಮೆಂಟ ಸಭೆಯವರು ಹೊಸ ಚುನಾವಣೆಯಾಗಲೆಂದು ಲೋಕಮತದ ಹವಾಲಿ ಕೊಡುವರು.

ಇಜಿಪ್ತ ಸರಕಾರದ ಪತ್ರವು ಸಾವಧಾನದ್ದಿರುತ್ತದೆ. ಕಲಹವೆಬ್ಬಿಸುವ ವಾಸನೆಯು ಸ್ವಲ್ಪವೇ ಇಲ್ಲ. ಆದರೆ ಕೆಲವು ಕಲಮು ಅಸ್ಪಷ್ಟವಾಗಿವೆ. ಅವುಗಳ ಸ್ಪಷ್ಟೀಕರಣಬೇಕೆಂದು ಇಂಗ್ಲಿಷರೆನ್ನುತ್ತಾರೆ. ಈಯುದ್ದೇಶವಿಟ್ಟುಕೊಂಡು ಇಂಗ್ಲಿಷ ಮಂತ್ರಿಗಳು ಇಜಿಪ್ತದ ಮಂತ್ರಿಗಳಿಗೆ ಇನ್ನೊಂದು ಪತ್ರ ಬರೆಯುತಕ್ಕವರಿದ್ದಾರೆ. ಕಾಗದ ಪತ್ರಗಳ ಕುದುರೆಗಳು ಎಷ್ಟೇ ಓಡಾಡಿದರೂ, ಇಜಿಪ್ತರು ಸೋತು ನಡೆಯುವ ಲಕ್ಷಣವಿಲ್ಲ. ಸೈನ್ಯಖಾತೆಯ ಸ್ವಾತಂತ್ರ್ಯ ಕಳಕೊಂಡರೆ- ಸ್ವರಾಜ್ಯ ಸ್ವಾತಂತ್ರ್ಯವೆಂತಹುದೆಂದೇ ಅವರು ಅನ್ನುತ್ತಾರೆ.

ಭಾವೀ ಸ್ವರಾಜ್ಯದಲ್ಲಿ ಸಂಸ್ಥಾನಗಳ ಹಿತಸಂಬಂಧದ ಬಗ್ಗೆ ವಿಚಾರ ಮಾಡುವದಕ್ಕಾಗಿ ಕೆಲ ಸಂಸ್ಥಾನಗಳ ಪ್ರತಿನಿಧಿಗಳು ಲಂಡನಕ್ಕೆ ಹೋಗಿದ್ದಾರೆ.

ಇಟಲಿಯಲ್ಲಿ ನಾರಿನ ಗಿರಣಿಗೆ ಬೆಂಕಿ ಹತ್ತಿ, ಕೋಟಿಯ ಹಾನಿಯಾಯಿತು. ಸಾವಿರಾರು ಬೆಳುಗಳು ಸುಟ್ಟು ಬೂದಿಯಾದವು.

ವಿಲಾಯತಿಗೆ ಹೋಗಿ ಬಂದವರ ಮೇಲೆ ಋದ್ರಾವಕಾ!!!

ಬಂಗಾಲ ಇಲಾಖೆಯಲ್ಲಿ ಖುಲ್ನಾ ಜಿಲ್ಲೆಯ ರಾಜಕೀಯ ಪರಿಷತ್ತು ಸಾತಖೀರಾ ಎಂಬ ಊರಲ್ಲಿ ಕೂಡಿತ್ತು. ಆಚಾರ್ಯ ಪ್ರಫುಲ್ಲಚಂದ್ರ ರಾಯರು ಅಧ್ಯಕ್ಷರಾಗಿದ್ದರು. ಇವರು ತಮ್ಮ ಭಾಷಣದಲ್ಲಿ ಕೌನ್ಸಿಲ ಮತ್ತು ಅಸೆಂಬ್ಲಿಯ ನಿರುಪಯೋಗವನ್ನು ಹೇಳಿ, ಇವುಗಳಿಗಾಗಿ ವ್ಯರ್ಥವಾಗಿ ಆಯಾಸಪಡಬಾರದು ಮತ್ತು ದ್ರವ್ಯ ಕಳಕೊಳ್ಳಬಾರದೆಂದು ಉಪದೇಶ ಮಾಡಿ, ಕೌನ್ಸಿಲಗಳಿಗಾಗಿ ಮಾಡುವಂಥ ಶ್ರಮವನ್ನೇ ಹಳ್ಳಿಗಳ ಅಭಿವೃದ್ಧಿಗಾಗಿ ಮಾಡಬೇಕೆಂದು ಸೂಚಿಸಿದ್ದಾರೆ. ಆಚಾರ್ಯರು ಖಾದಿಯ ಭಕ್ತರಿದ್ದಾರೆ. [illegible] ಲು ಭಾರತೀಯರು ಸಂತೋಷದಿಂದ ಒಪ್ಪುತ್ತಾರೆ. ಆದರೆ- ವಿಲಾಯತಿಗೆ ಹೋಗಿ ಬಂದವರು ಮಾತ್ರ ಫ್ಯಾಶನನೆಂಬ ಬಾಹ್ಯಾಡಂಬರದ ದೆಸೆಯಿಂದ ಅದನ್ನು ಕೊಡುವದಿಲ್ಲ. ಇವರು ವಿಲಾಯತಿಯ ವ್ಯಸನಗಳನ್ನು ತಂದಿರುತ್ತಾರೆ. ಸಿಗರೆಟ್ಟಿನ ವ್ಯಾಪಾರ ನೋಡಿರಿ. ಮೋಟಾರ ನೋಡಿರಿ. ಇವೆಲ್ಲ ಮನೆಮುರುಕವಾಗಿರುತ್ತವೆ. ಆದುದರಿಂದ ಸುಶಿಕ್ಷಿತರೆಂಬವರು ಇಂದ್ರಿಯನಿಗ್ರಹ ಮಾಡಿ, ಸಾತ್ವಿಕವೃತ್ತಿಯಿಂದ ನಡೆದು, ಅನ್ಯರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕೆಂದಿರುತ್ತಾರೆ.

ಸರದಾರ ಖರಕಸಿಂಗರ ಸ್ವಾಗತ ಸಮಾರಂಭ.

ಶೀಖರ ಮುಂದಾಳುಗಳಾದ ಸರದಾರ ಖರಗಸಿಂಗರ ಸ್ವಾಗತವನ್ನು ಅಮೃತಸರವಾಸಿಗಳು ಬಹು ಸಡಗರದಿಂದ ಮಾಡಿದರು. ಇದು ಅಭೂತಪೂರ್ವವೆಂದರೂ ಸಲ್ಲುವದು. ಇವರನ್ನು ಹಿಂದಿನ ಸ್ಟೇಶನದಲ್ಲಿಯೇ ಇಳಿಸಿಕೊಂಡು, ಮೋಟಾರಿನಿಂದ ಪಟ್ಟಣಕ್ಕೆ ಕರೆತಂದರು. ಕಾಂಗ್ರೆಸ, ಖಿಲಾಫತ, ಶೀಖ ಲೀಗ ಮತ್ತು ಗುರುದ್ವಾರ ಕಮೀಟಿಯವರು ಸ್ವಾಗತದ ಸಿದ್ಧತೆ ಮಾಡಿದ್ದರು. ಪರಸ್ಥಳಗಳಿಂದ ಸಾವಿರಾರು ಜನರು ಬಂದಿದ್ದರು. ಬಾಲಚಮು, ಕಾಂಗ್ರೆಸ ಮತ್ತು ಖಿಲಾಫತದ ವ್ಹಾಲಂಟಿಯರ, ಮತ್ತು ಅಶ್ವಾರೂಢರಾದ ಅಕಾಲಿಗಳಲ್ಲದೆ, ಶೀಖ ಸ್ತ್ರೀಯರೂ ಸ್ವಯಂಸೇವಿಕೆಯರಾಗಿ ಮೆರವಣಿಗೆಯಲ್ಲಿದ್ದರು. ಪಟ್ಟಣವನ್ನು ಶೃಂಗರಿಸಿದ್ದರು. ಸರದಾರ ಖರಕಸಿಂಗ, ಸರದಾರಬಹಾದ್ದೂರ ಮಹತಾಬಸಿಂಗ, ಡಾಕ್ಟರ ಕಿಚಲು ಮತ್ತು ರೂಪಲಾಲ ಪುರಿಯವರು ಒಂದೇ ಮೋಟಾರಿನಲ್ಲಿ ಕುಳಿತಿದ್ದರು. ಮೆರವಣಿಗೆಯಲ್ಲಿ ೫೦ ಸಾವಿರಕ್ಕಿಂತ ಹೆಚ್ಚು ಜನ ಕೂಡಿತ್ತು. ಮೆರವಣಿಗೆಯು ಸುವರ್ಣಮಂದಿರಕ್ಕೆ ಬಂದು, ವಿಸರ್ಜನೆ ಹೊಂದಿತು.

ಪೋಲಂಡದ ಮೇಲೆ ರಶಿಯರ ಆರೋಪ—

ವಾರಸಾದ ಸ್ಟೇಶನದಲ್ಲಿ ತಮ್ಮ ರಾಯಭಾರಿಯ ಕೊಲೆಯಾದ ಬಗ್ಗೆ ರಶಿಯಾ ಸರಕಾರದವರು ಪೋಲಂಡ ಸರಕಾರಕ್ಕೆ ಕಟುತರವಾದ ಪತ್ರ ಬರೆದಿದ್ದಾರೆ. ಈ ಕೊಲೆಯು ವ್ಯಕ್ತಿಯದಲ್ಲ. ರಶಿಯಾ ಸರಕಾರದ ವಿರುದ್ಧ ಜಗತ್ತಿನಲ್ಲಿದ್ದ ಚಳವಳಿಯ ಅಂಶವಾಗಿರುತ್ತದೆ. ಪೆಕಿಂಗದಲ್ಲಿ ರಶಿಯರ ವಕಾಲತಿಯ ಮೇಲೆ ಧಾಡಿ ಬಂತು. ಶಾಂಘಾಯಿಯಲ್ಲಿ ರಶಿಯರು ಬಂದುಕಟ್ಟಿನಲ್ಲುಳಿದರು. ಇಂಗ್ಲಂಡದ ಆರಕಾಸದ ದಬ್ಬಾಳಿಕೆಯಂತೂ ಸರಿ. ಇವೆಲ್ಲ ಕೃತ್ಯಗಳು ಸಾಮ್ರಾಜ್ಯವಾದಿಗಳಿಗೆ ಚೈತನ್ಯವನ್ನುಂಟು ಮಾಡಿವೆ. ರಶಿಯಾದ ರಾಯಭಾರಿಗಳ ಸಂರಕ್ಷಣೆ ಮಾಡುವ ಭಾರವು ಪೋಲಂಡದ್ದಾಗಿದ್ದು, ಅದು ತನ್ನ ಕರ್ತವ್ಯದಲ್ಲಿ ಜಾಗರೂಕವಾಗಲಿಲ್ಲ. ಸರಕಾರದ ವಿರುದ್ಧ ಬಂಡುಗಾರರ ಗುಂಪುಂಟು. ಅದನ್ನು ಸದೆಬಡಿಯಲು ಪೋಲಂಡವು ಅವಶ್ಯವಾದ ಕರ್ತವ್ಯ ಮಾಡಲಿಲ್ಲೆಂದು ರಶಿಯರು ಪೋಲಂಡದ ಮೇಲೆ ಆರೋಪ ಹೊರಿಸಿದ್ದಾರೆ.

ಕೊಲೆಯ ಸಹಾಯಕರ ಶೋಧ-

ಸ್ವಾಮೀ ಶ್ರದ್ಧಾನಂದರ ಕೊಲೆ ಮಾಡಿದಂಥ ಅಬ್ದುಲ ರಶೀದನಿಗೆ ದ್ರವ್ಯ ಸಹಾಯ ಮಾಡಿ, ಆತನ ವತಿಯಿಂದ ಪ್ರಿವ್ಹಿ ಕೌನ್ಸಿಲಕ್ಕೆ ಬ್ಯಾರಿಸ್ಟರನನ್ನು ಕಳಿಸಿದ್ದನ್ನು ನೋಡಲಾಗಿ, ಆತನಿಗೆ ಸಹಾಯವಾಗಿ ಅನೇಕ ಶ್ರೀಮಂತರಿದ್ದಂತೆ ತೋರುತ್ತದೆ. ಇವರ ಶೋಧ ಮಾಡಿ, ಇವರಿಗೆ ಶಿಕ್ಷೆ ಮಾಡಿಸದ ವಿನಹ ಮಾಲವೀಯಾ, ಮುಂಜೆ, ಲಜಪತರಾಯ, [illegible]ದಾನಂದ ಮೊದಲಾದವರು ಬದುಕಲಾರರೆಂದು ದಿಲ್ಲಿಯ ಶುದ್ಧಿ ಸಭೆಯವರು ವ್ಹಾಯಿಸರಾಯಸಾಹೇಬರಿಗೆ ತಾರಿನಿಂದ ತಿಳಿಸಿದ್ದಾರೆ.

ಸಾಹೇಬರಿಗೆ ಸವಾಲು-

ರಾಯಲ ಕಮಿಶನ ಕಮಿತಿ ಬಳಿಕ, ಅದರ ನಿರ್ಣಯದ ಪ್ರಕಾರ ಹಿಂದುಸ್ಥಾನಕ್ಕೆ ವಿಶೇಷವಾದ ರಾಜಕೀಯ ಹಕ್ಕುಗಳು ದೊರೆಯುವವು. ಆ ಪರಿಸ್ಥಿತಿಯಲ್ಲಿ ನೀವು ಕೆಲಸ ಮಾಡುವಿರಾ- ಅಥವಾ ಪೆನಶನ ತಕ್ಕೊಂಡು ಸ್ವದೇಶಕ್ಕೆ ಹೋಗುವಿರಾ ಎಂಬ ಪ್ರಶ್ನಾವಳಿಯನ್ನು ಹಿಂದುಸ್ಥಾನ ಸರಕಾರದವರು ಯುರೋಪಿಯನ್ನರಾದಂಥ ಸರಕಾರೀ ಕಾಮದಾರರ ಕಡೆಗೆ ಕಳಿಸಿದ್ದಾರೆಂದು ಕಲಕತ್ತೆಯ ಸ್ಟೇಟ್ಸಮನ್ನ ಪತ್ರವು ಹೇಳುತ್ತದೆ.. ಇವರು ಪೆನಶನ ತಕ್ಕೊಂಡು ವಿಲಾಯತಿಗೆ ಹೋಗಿ ಮಾಡುವದೇನು? ಹೊತ್ತು ಬಂದಂತೆ ನಡೆದು, ಜೀವನಾಧಾರ ಮಾಡಿಕೊಳ್ಳುವದೇ ವಾಸಿಯು.

ವಿವಿಧ ವರ್ತಮಾನಗಳು

ಸಿಂಧದಲ್ಲಿರುವ ಥಾರ ಮತ್ತು ಪಾರಕರದ ಒಬ್ಬ ಸಿಪಾಯಿಯು ಇನ್ನೊಬ್ಬ ಸಿಪಾಯಿ ಮತ್ತು ಆತನ ಹೆಂಡತಿಯನ್ನು ಕೊಂದು, ತಾನು ಪೋಲಿಸರ ವಶವಾಗಿದ್ದಾನೆ,

---

ಕಾನಪೂರದಲ್ಲಿ ಸುಂಟರಗಾಳಿ ಬೀಸಿ, ಅನೇಕ ಮರಗಳು ಕಿತ್ತಿಬಿದ್ದವು. ವಿದ್ಯುತ್ತಿನ ಕಂಬಗಳು ತಂತಿಗೆ ಜೋತಾಡಿ ನಿಂತವು. ಅನೇಕ ಮನೆಗಳಿಗೆ ನಷ್ಟ ಸಂಭವಿಸಿತು.

ಕಾನಪೂರದಲ್ಲಾದ ಭೂಕಂಪದಿಂದ ಒಂದು ಮನೆ ಬಿದ್ದು, ಒಂದು ಮುದುಕಿ ಸತ್ತಿತು.

ಕೋಚಿನದ ದರಬಾರದವರು ಸಂಸ್ಥಾನದಲ್ಲಿ ಲೆಜಿಸಲೇಟಿವ್ಹ ಅಸೆಂಬ್ಲಿ ಸ್ಥಾಪಿಸುವರು. ಶಿಕ್ಷಣದ ಬಿಲ್ಲನ್ನು ಪಾಸ ಮಾಡುವರು.

ಸ್ವಾಮಿ ಕುಮಾರಾನಂದರೆಂಬವರು ಮೊದಲು ರಾಜ್ಯಕ್ರಾಂತಿ ಪ್ರವರ್ತಕರಾಗಿದ್ದರು. ಈಗ ಅಹಿಂಸೆಯ ಅಸಹಕಾರಿಯಾಗಿದ್ದಾರೆ. ನಾಗಪೂರದ ಕಾಯದೆಭಂಗದಲ್ಲಿ ಸೇರಬೇಕೆಂದು ತರುಣರಿಗೆ ಉಪದೇಶ ಮಾಡುತ್ತಿದ್ದಾರೆ.

ಲಾಹೋರಿನ ತುರಂಗದಲ್ಲಿ ಗಚ್ಚಿನ ಗೋಡೆಯನ್ನು ಒಡೆದು, ಕನ್ನಕೋಡಿ, ಮೂವರು ಕಳ್ಳರು ಪಲಾಯನ ಹೇಳಿಸಿದರು. ಒಬ್ಬನೂ ಸಿಕ್ಕಿರುತ್ತಾನೆ.

ಕೊಲೊಂಬೋದಲ್ಲಿ ಅದ್ಭುತ ಮಳೆಯಾಗಿ ನಳದ ಕೆರೆಯ ಬಂಡಿಯು ಒಡೆದು, ಅದರ ಕೆಳಗಿದ್ದ ಯಂತ್ರಗಳು ಕೇಳಿ ಹೋದವು. ಕಟ್ಟಡಗಳು ನೆಲಸಮವಾದವು. ಮಣ್ಣು ಬಿದ್ದು ಮೋಟಾರದ ಐದು ಅಂಗಡಿಗಳು ಮುಚ್ಚಿಹೋದವು.

ದಿಲ್ಲಿಯಲ್ಲಿ ಬಕರೀದ ಹಬ್ಬದ ದೆಸೆಯಿಂದ ಶಾಂತತೆಯನ್ನು ಕಾಯುವದಕ್ಕಾಗಿ ಪೋಲಿಸರು ನ್ನೂರು ಪಟ್ಟಣಿಗರನ್ನು ಸ್ಪೇಶಲ ಪೋಲಿಸ ಕಾಗಾರರಾಗಿ ನೇಮಿಸಿಕೊಂಡಿದ್ದಾರೆ.

ನೋಟೀಸಿನ ಉತ್ತರ

—೦—

ಫಕೀರಪ್ಪಾ ಬಸಪ್ಪಾ ಬಾರಕೇರ ಸಾಕೀನ ಯಲವಗಿ ತಾಲ್ಕು ಬಂಕಾಪೂರ ಈತನಿಗೆ-

ಕೆಳಗೆ ಸಹೀ ಮಾಡುವ ನೀಲಪ್ಪಾ ತಂದೆ ಶಿದ್ದಪ್ಪಾ ಬಾರಕೇರ ಸಾ|| ಕಳಸ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ಕೊಟ್ಟ ನೋಟೀಸು ಮುಟ್ಟಿ ಮಜ಼ಕೂರು ತಿಳಿಯಿತು ಅದರಲ್ಲಿ ಬರೆದ ಬಹುತೇಕ ಮಜಕೂರು ಸುಳ್ಳು ಇದ್ದುತ್ತದೆ. ನನ್ನ ಕುಟುಂಬ ತೀರಿಕೊಂಡಾಗ ನೀನು ನನ್ನ ಮಗಳನ್ನು ಕಳಿಸಿದ್ದು ನಿಜ. ಆದರೆ- ನೀನು ಆಕಿಯು ಮೈಮೇಲಿನ ಯಾವತ್ತೂ ದಾಗೀನೆ ತಕ್ಕೊಂಡು ಕಳಿಸಿದ್ದಿ ನಾನು ತವರು ಮನೆಯ ಪದ್ಧತಿಯ ಪ್ರಕಾರ ನನ್ನ ಮಗಳಿಗೆ ಕೊಟ್ಟ ದಾಗೀನೆ ಅಂದರೆ-

೧ ಗುಂಡಿನ ಟೀಕಿ ೨ ತೊಲಿ

೨ ಸರಾ ೧|| ತೊಲಿ

೩ ಒಗಚಿ ಜೋಡು ಕಿಮ್ಮತ್ತು ನಾಲ್ಕು ವರಾ

೪ ಮಂಚಿ ೭|| ರೂ|| ೫೦ ರೂಪಾಯಿ

ಇವನ್ನು ಸಹ ಕೊಡದೆ ಕಳಿಸಿದಿ. ಒಂದೆರಡು ತಿಂಗಳಾದ ಬಳಿಕ ನೀನು ಕರಿಯಲಿಕ್ಕೆ ಬಂದಿ ನನ್ನ ಸೊಸೆಯು ಋತುಮತಿಕಾರ್ಯವಾಗುವದದೆ ಆದ ಕೂಡಲೆ ಕಳಿಸುತ್ತೇನೆಂದು ಹೇಳಿದಿ ಆ ಮಾತಿಗೆ ಒಡಂಬಟ್ಟು ಹೋದಿ ಆದರೆ ನನ್ನ ಕಳ್ಳಬಳ್ಳಿಯವರಾದ ನನ್ನ ಬೀಗರ ಮನೆಗೆ ಹೋಗಿ ಋತುಮತಿಕಾರ್ಯ ಮಾಡಿಕೊಡದಂತೆ ಹರಕತ್ತು ಮಾಡಿದಿ ಆಗಿನಿಂದ ಇಲ್ಲಿವರೆಗೆ ಮೂರು ವರ್ಷವಾಯಿತು ನಾನು ನನ್ನ ಮಗಳನ್ನು ಕಳಿಸಲಿಕ್ಕೆ ತಯಾರಿದ್ದರೂ ನೀನು ಕರಕೊಂಡು ಹೋಗಲಿಲ್ಲ ಮತ್ತು ಈಗ ನೀನು ಫಲಭಲತೆ ೫.೬.೩೭ರಿನ ನೋಟೀಸು ಕೊಟ್ಟಿರುತ್ತೀದಿ ನಾನು ನನ್ನ ಮಗಳನ್ನು ಕಳಿಸಲಿಕ್ಕೆ ಯಾವಾಗಲು ಸಿದ್ಧನಿದ್ದೇನೆ ನೀನು ನನ್ನ ಮಗಳನ್ನು ಚಲೋ ರೀತಿಯಿಂದ ಇಟ್ಟುಕೊಳ್ಳುತ್ತೇನೆಂದು ಪಂಚರ ಜಾಮೀನು ಕೊಡಬೇಕು ಮತ್ತು ಹುಡುಗಿಯ ಮೈಮೇಲಿನ ಲಗ್ನ ಕಾಲದ ಹಾಗು ನಾನು ಕೊಟ್ಟ ಯಾವತ್ತು ದಾಗೀನೆ ತಿರಿಗಿ ಕೊಡಬೇಕು ಈ ಪ್ರಕಾರ ನೀನು ಮಾಡುವದಲ್ಲದೆ, ಈಗ ಮೂರು ವರ್ಷ ಆಕೆಯ ದೆಸೆಯಿಂದಾದ ಖರ್ಚು ಮುನ್ನೂರು ರೂಪಾಯಿ ಕೊಡಬೇಕು. ಈ ಖರ್ಚು ನೀನು ಕೊಡದ ಹೊರ್ತು ನಾನು ಹುಡುಗಿಯನ್ನು ಕಳಿಸಲಿಕ್ಕೆ ಬಾಂಧಾಯಿಸುವದಿಲ್ಲ ನೀನು ಮೇಲಿನ ಶರ್ತುಗಳಿಗೆ ಅಂದರೆ- ಚಲೋ ರೀತಿಯಿಂದ ಇಟ್ಟುಕೊಳ್ಳುವದು ದಾಗೀನೆ ಕೊಡುವದು ಮತ್ತು ನನ್ನ ಖರ್ಚು ಕೊಡುವದಕ್ಕೆ ತಪ್ಪಿದರೆ- ನಾನು ನನ್ನ ಮಗಳ ಸಂರಕ್ಷಣೆಗಾಗಿ ನಿನ್ನ ಮೇಲೆ ಪೋಟಗಿಯ ದಾವೇ ಮಾಡುವೆನು ಮತ್ತು ಈಗಾದ ಮುನ್ನೂರು ರೂಪಾಯಿಗಳ ಬೇಬಾಕೂ ನಿನ್ನ ಮೇಲುಂಟು. ಈ ಬಗ್ಗೆ ಆಗುವ ಯಾವತ್ತು ಖರ್ಚು ಮತ್ತು ಈ ನೋಟೀಸಿನ ಖರ್ಚು ನಿನ್ನ ಮೇಲಿರುತ್ತದೆ. ತಿಳಿಯುವದು.

ತಾ|| ೧೦-೬-೧೯೩೭ ನೇ ಇಸವಿ

ಸಹಿ ನೀಲಪ್ಪಾ ಶಿದ್ದಪ್ಪಾ ಬಾರಕೇರ ಸಾಕಿನ ಕಳಸ



ದಿ ಮೈಸೂರ ಅಗ್ರಿಕಲ್ಚರಲ್ ಡೇರಿಫಾರಂ ಕಂ. ಲಿಮಿಟೆಡ್

ಆರ್ಗನಾಯಿಜಿಂಗ ಇನ್ಸಪೇಕ್ಟರ ಜಿಲ್ಲಾ ಧಾರವಾಡ ಡಿಸ್ಟ್ರಿಕ್ಟ
ಹೆಡ್ಡ ಕ್ವಾರ್ಟರ ಹುಬ್ಬಳ್ಳಿ ಇವರ ಆಫೀಸಿನಿಂದ
ತಿಳಿಸಿ ಕಡಿಸುವದೇನಂದರೆ—

೧ ನಮ್ಮ ಡಿಪಾರ್ಟಮೆಂಟ ಮೂಲಕ ಇದೇ ಜಿಲ್ಲೆಯಲ್ಲಿ ನಮ್ಮ ಅಗ್ರಿಮೆಂಟ ಪ್ರಕಾರ ಕೆಲಸ ಮಾಡಿದಲ್ಲಿ ದರ ತಿಂಗಳವಂದಕ್ಕೆ ರೂಪಾಯಿ ನೂವತ್ತು (೩೦—೦—೦) ರಂತೆ ಪಗಾರ ದೊರಿಯುತ್ತದೆ. ಇಷ್ಟ ಇದ್ದವರು ಲಾಯಖಿ ಸರ್ಟಿಫಿಕೇಟನಿಂದ ಈ ತಿಂಗಳ ಅಖೈರ ವಳಗಾಗಿ ನಮ್ಮ ಮಾ ಅಗರ ಪತ್ರದ್ವಾರ ತಿಳಿದುಕೊಳ್ಳಬಹುದು.

೨ ಇದಲ್ಲದೆ ಈ ಹಿಂದೆ ಇದೇ ಡಿಪಾರ್ಟಮೆಂಟಿನಲ್ಲಿ ದನಕರುಗಳನ್ನು ವ ಪೇರುಗಳನ್ನು ತೆಗಿಸಿ ಆಬಗ್ಗೆ ಯಾರಿಗೆ ಪಕ್ಕಾ ಪಾವತಿಗಳು ವ ಸರ್ಟಿಫಿಕೇಟುಗಳು ವಗೈರೆ ಮುಟ್ಟಿರುವದಿಲ್ಲವೋ ಅಂಥವರು ಕೂಡ್ಲೆ ಒಂದು ತಿಂಗಳೊಳಗಾಗಿ ತಮ್ಮ ತಕರಾರುಗಳನ್ನು ಸಮಕ್ಷಮ ಅಗರ ಟಪಾ ಮೂಲಕ ನಮ್ಮ ಆಫೀಸಿಗೆ ತಿಳಿಸಿದಲ್ಲಿ ಯೋಗ್ಯ ತಜವೀಜು ಮಾಡಿಸಿ ಕೊಡಲಾಗುತ್ತದೆ. ಹಣ ವಗೈರೆ ವಸೂಲಾದದ್ದು ಇದೇ ಡಿಸ್ಟ್ರಿಕ್ಟ ಪಟ್ಟಿನಲ್ಲಿದ್ದು, ಹುಬ್ಬಳ್ಳಿ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಲಾಗುತ್ತದೆ. ತಿಳಿಯುವದು.

ಸ್ಪೇಶಲ ಸೂಚನೆ— ಒಂದು ತಿಂಗಳಲ್ಲಿ ೫೦ ರಸಗಳ ವಿಮೆ ಇಳಿಸುವಂಥ ಸಬ್ ಏಜಂಟರಿಗೆ ಬಂಗಾರದ ಪದಕವನ್ನು ಬಹುಮಾನವಾಗಿ ಕೊಡುವೆವು. ಏಜಂಟರಾಗುವಂಥವರಿಗೆ ಬಂಗಾರದಂಥ ಸಮಯ.

ಹುಬ್ಬಳ್ಳಿ
೧—೬—೧೯೩೭

A. Laxmanrao
Organising Inspector,
Dharwar District
[Harapanally Street, Hubli]

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತಾರ್ಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬಿಡಿ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮. | ಧಾರವಾಡ ರವಿವಾರ ತಾರೀಖು ೧೩ ನೇ ಜೂನ ೧೯೩೭ | ಸಂಚಿಕೆ ೧೩೩

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಕೊಂಡಿಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಗಾಡಿಗೆ ೬೪ ಗ್ಯಾಲನ್ ನೀರಿನ ಭಾರವನ್ನು ಒಯ್ಯಲು ಹಗುರವಾಗಿ ಹೋಗುತ್ತದೆ. ಇದಕ್ಕೆ ನೀರಿನ ಕೊಡ ಕೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೬೪|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ಕಾಲೇಜಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಜಿಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವವು. ಕಾಯಮಮುತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—o—

ತಿಂಗಳು ಕಾಲುಪಿನ ಹತ್ತು ಪಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಕ್ತಿಗೆ ಒಂದಾಣೆ ಅದೆ ಇಲ್ಲದ ಪ್ರತಿಯೊಂದು ಪಕ್ತಿಗೆ ಎರಡು ಆಣೆ ಸರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೋಕಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರು ಕಾ— ಇಂ ಗ್ಲಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಅದೆ ದಬಲ್ ಕಾಲಮಿನ ಒಳಗಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಮನೆಯು ಮಾರಾಟ.

—(o)—

ಧಾರವಾಡ ಹಾಲಗೆರೆಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೬೬೮ನೆಯ ಮನೆ ಶ್ರೀ. ಸೌ|| ಗಂಗಾಬಾಯಿ ಕಾಳಗಿ ಇವರ ಹೆಸರಿನಲ್ಲಿ ಇರುವದನ್ನು ಮಾರತಕ್ಕದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳು ಇದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹಿ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ.
c/o ಬಿ. ಆರ. ಕಾಳಗಿ.
ಮೋತಿತಲಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ-೧೩-೬-೩೭ ನೇ ಇಸ್ವಿ

ಹಿಂದುಸ್ಥಾನದ ಗಿರಣಿಗಳಿಗೆ ಬಂದ ಆಪತ್ಕಾಲ.

ಹಿಂದುಸ್ಥಾನದಿಂದ ಇಂಗ್ಲಂಡದಕ್ಕೆ ಅರಳೆಯನ್ನು ಒಯ್ದು ಅಲ್ಲಿ ನೂಲು ಮತ್ತು ಬಟ್ಟೆಗಳನ್ನು ಮಾಡುವ ಗಿರಣಿಗಳನ್ನು ಅಸಂಖ್ಯವಾಗಿ ತೆಗೆದರು. ವು. ಅವುಗಳಂತೆ ಮುಂಬಯಿ, ಅಹಮದಾಬಾದದಲ್ಲಿಯೂ ಬೇರೆ ಪಟ್ಟಣಗಳಲ್ಲಿಯೂ ಗಿರಣಿಗಳಾದವು. ಇವುಗಳಲ್ಲಿ ಮುಂಬಯಿಯಲ್ಲಿಯೇ ಬಹಳವಾಗಿರುವವು. ಚೀನ ದೇಶದಲ್ಲಿ ಬೆಳ್ಳಿಯ ನಾಣ್ಯ ನಡೆದು, ಅಲ್ಲಿ ಹಿಂದುಸ್ಥಾನದ ನೂಲಿಗೆ ಗಿರಾಕಿಗಳು ಹೆಚ್ಚಾಗಹತ್ತಿದವು. ಅಲ್ಲಿ ಬೇಡಿಕೆ ಬೆಳೆದಂತೆ ಇಲ್ಲಿ ಗಿರಣಿಗಳ ಸಂಖ್ಯೆಯು ಬೆಳೆಯಿತು. ಬರಬರುತ್ತಾ ಚೀನರು ಸ್ವಂತ ಗಿರಣಿಗಳನ್ನು ಕಟ್ಟಿದರು. ಜಪಾನ ಮೊದಲಾದ ಪರದೇಶಿಯರೂ ಅಲ್ಲಿ ತಮ್ಮ ಗಿರಣಿಗಳನ್ನು ಕಟ್ಟಿದರು. ಹೀಗಾಗಿ ಈ ದೇಶದ ಗಿರಣಿಗಳ ದೊಡ್ಡ ಪಡಿಮೂಲಿಯು ಕೈಬಿಟ್ಟು ಇವು ತತ್ತರಿಸ ಹತ್ತಿದವು. ಇಷ್ಟರಲ್ಲಿ ಜಪಾನವು ತನ್ನ ದೇಶದಲ್ಲಿ ಅನೇಕವಾಗಿ ಗಿರಣಿಗಳನ್ನು ಕಟ್ಟಿ, ಪರದೇಶಗಳಲ್ಲಿ ಬಹಳ ಅಗ್ಗದಿಂದ ನೂಲು ಮತ್ತು ಅರಿವೆ ಮಾರಲಾರಂಭಿಸಿತು. ಈ ನೂಲು ಮತ್ತು ಅರಿವೆಯು ಹಿಂದುಸ್ಥಾನಕ್ಕೂ ಬಂದು, ಇಲ್ಲಿಯ ನೂಲು ಮತ್ತು ಅರಿವೆಗಿಂತ ಅಗ್ಗವಾಗಿ ಮಾರತೊಡಗಿತು ಇದರಿಂದ ಇಲ್ಲಿಯ ಗಿರಣಿಗಳು ವಿಶೇಷವಾಗಿ ಮುಂಬಯಿಯ ಗಿರಣಿಗಳು ಲಟಪಟಿಸಿದವು

ಮುಂಬಯಿಯಲ್ಲಿ ಗಿರಣಿಗಳ ವ್ಯಾಪಾರಕ್ಕೆ ಕೇಡು ಬಂದಾಗ ಮ್ಯಾಂಚೆಸ್ಟರದ ಗಿರಣಿಗಳ ವ್ಯಾಪಾರ ಮಂದವಾಯಿತು. ಆ ದೇಶದ ಅಂಧರೆ ಸ್ವದೇಶದ ಅಭಿಮಾನ ಹಿಡಿದು ಇಲ್ಲಿಯ ಗವ್ಹರ್ನರ ಜನರಲ್ಲರು ಇಲ್ಲಿಯ ಗಿರಣಿಗಳ ಮೇಲೆ ಜಕಾತಿ ಕೂಡ್ರಿಸಿದರು. ಇದನ್ನು ಎಬ್ಬಿಸಬೇಕೆಂದು ಕಳೆದ ಇಪ್ಪತ್ತು ವರ್ಷಗಳಿಂದ ಸತತವಾಗಿ ಪ್ರಯತ್ನವಾಯಿತು. ಗಿರಣಿಗಳು ಬಾಗಿಲ ಹಾಕುವ ದುರ್ಧರ ಪ್ರಸಂಗ ಬಂದದ್ದನ್ನು ಕಂಡು ಹೋದ ವರ್ಷ ಜುಲುಮೆ ರಾಮರಾಮವೆನ್ನುವಂತೆ ಈ ಜಕಾತಿಯನ್ನು ತೆಗೆದು ಹಾಕಿದರು.

ಈ ಜಕಾತಿ ತೆಗೆದುಹಾಕಿದ್ದು ಹೊಟ್ಟೆನೋವಿಗೆ ಮೇಲೆ ಗಂಧ ಸವರಿದಂತಾಯಿತು. ಪರದೇಶದ ಸರಕಾರಗಳಂತೆ ಇವಕ್ಕೆ ವಿಪುಲವಾಗಿ ದ್ರವ್ಯ ಸಹಾಯ ಮಾಡಿ, ಪರದೇಶದ ಬಟ್ಟೆಗಳ ಮೇಲೆ ಇಲ್ಲಿ ಮಾರಲಿಕ್ಕೆ ಪೂರೈಸದಷ್ಟು ಜಕಾತಿ ಹೇರುವ ತನಕ ಗಿರಣಿಗಳ ವಿಪತ್ತು ಹೋಗದೆಂದು ಕಂಡು ಬಂತು. ಅನಿವಾರ್ಯವಾಗಿ ಹಿಂದುಸ್ಥಾನ ಸರಕಾರದವರು ಒಂದು ಕಮಿಶನ ನೇಮಿಸಿದರು. ಯಾವ ಕಮಿಶನದಿಂದ ಹಿತವಾಗಿರುತ್ತದೆಂದು ಈ ಕಮಿಶನದಿಂದಾಗಬೇಕು? ಕಮಿಶನವು ಆರು ತಿಂಗಳು ಕೆಲಸ ಮಾಡಿ, ಒಂದೂವರೆ ಲಕ್ಷ ರೂಪಾಯಿಗಳ ಧ್ವಂಸ ಮಾಡಿತು. ಇದರ ರಿಪೋರ್ಟು ಬಂದ ಆರು ತಿಂಗಳ ನಂತರ, ಹಿಂದುಸ್ಥಾನ ಸರಕಾರದವರು ವಿಲಾಯತಿ ಸರಕಾರದ ಮತ ಪಡಕೊಂಡು, ರಿಪೋರ್ಟನ್ನು ಅಂಗೀಕರಿಸಲಿಕ್ಕಾಗುವದಿಲ್ಲೆಂದು ಹೇಳಿದ್ದಾರೆ. ಯಾವದೊಂದು ಕಮಿಟಿಯಲ್ಲಿ ಬಹುಮತ, ಅಲ್ಪಮತವಾಗುವದಷ್ಟೇ; ಸರಕಾರದವರು ಈ ಪ್ರಸಂಗದಲ್ಲಿ ಮೇಜಾರಟಿ ಮತ್ತು ಮಾಯನಾರಟಿ ರಿಪೋರ್ಟುಗಳೆರಡನ್ನೂ ನಿರಾಕರಿಸಿದ್ದಾರೆ!! ಪ್ರತಿಯೊಂದು ಕಲಮಿಗೂ ಒಂದೊಂದು ತರದ ನೆವನ ಹೇಳಿ, ಪರದೇಶದಿಂದ ಬರುವ ಯಂತ್ರ ಸಾಮುಗ್ರಿಗಳ ಮೇಲೆ ಮಾತ್ರ ಜಕಾತಿ ತಕ್ಕೊಳ್ಳಬಾರದೆಂಬ ಉದಾರ ಬುದ್ಧಿಯನ್ನು ಪ್ರಕಟ ಮಾಡಿದ್ದಾರೆ.

ಈ ರಿಪೋರ್ಟ ನೋಡಿ ಮುಂಬಯಿಯ ಗಿರಣಿಯವರು ಹಾಹಾಕಾರಿದ್ದಾರೆ. ಇಂಗ್ರೇಜಿ ಸರಕಾರದಿಂದ ತಮಗೆ ಹಿತವಾಗುವದು ಶಕ್ಯವೇ ಇಲ್ಲೆಂದು ನಿರ್ದಾಕ್ಷಿಣ್ಯದಿಂದ ಹೇಳಿದ್ದಾರೆ. ಗಿರಣಿಗಳು ಸಾಯುವಾಗ, ಹೊಸ ಗಿರಣಿಗಳೆಲ್ಲಿ! ಅವುಗಳಿಗಾಗಿ ಯಂತ್ರಗಳನ್ನು ತರಿಸುವವರಾರೆಂದು ಪ್ರಶ್ನೆ ಮಾಡಿ, ಸರಕಾರದ ಉದಾರ ಬುದ್ಧಿಯ ತಿರಸ್ಕಾರ ಮಾಡಿದ್ದಾರೆ. ಬ್ಯಾರೆ ಅನ್ನ ಮತ್ತೊಬ್ಬರಿಗೆ ವಿಷವೆನ್ನುವಂತೆ, ಸರಕಾರದ ನರ್ತನವಾಗಿದೆ. ಸರಕಾರದ ಠರಾವನ್ನು ನೋಡಿ, ಮ್ಯಾಂಚೇಸ್ಟರ ಮತ್ತು ಜಪಾನದ ಗಿರಣಿಗಳ ವರ್ತಕರು ಬದುಕಿಕೊಂಡೆವೆಂದು ಆನಂದ ತುಂದಿಲರಾಗಿದ್ದಾರೆ.

ವಿಲಾಯತಿಯ ಗಿರಣಿಗಳಿಗೆ ಕೈ ಹಚ್ಚಿದರೆ ಮಂತ್ರಿ ಪದಕ್ಕೇ ಧಾಳಿ ಬರುವದಾದ್ದರಿಂದ ಮಂತ್ರಿಗಳು ಈ ಪರ್ಯಂತರ ಸಾವಧಾನದಿಂದಿರುತ್ತಿದ್ದರು. ಇದರಲ್ಲಿ ಚೀನದ ಗಲಭೆಯಲ್ಲಿ ಜಪಾನದ ಪ್ರೀತಿ ಮತ್ತು ಸಹಾಯವನ್ನು ಸಂಪಾದಿಸಬೇಕಾದುದರಿಂದ, ಅದರ ವ್ಯಾಪಾರಕ್ಕೂ ಹಾನಿ ಬರದಂತೆ ಜಾಗರೂಕರಾಗಿರುವರು. ಬ್ರಿಟಿಶ ಪ್ರಜರ ಸ್ವಾರ್ಥ ಮತ್ತು ರಾಜಕಾರಣದ ಸ್ವಾರ್ಥದ ದೆಸೆಯಿಂದ ಹಿಂದುಸ್ಥಾನದ ಗಿರಣಿಗಳ ಭಂಗಾ ಬಂದಾಗಿ ಲಕ್ಷಾವಧಿ ಕೂಲಿಕಾರರು ಅನ್ನನುಗತಿಯಾಗುವಂಥ ಹೀನ ದೀನ ಪರಿಸ್ಥಿತಿಯು ಬಂದೊದಗಿದೆ.

ಸರಕಾರದವರು ಬುದ್ಧಿಪೂರ್ವಕವಾಗಿ ತಮ್ಮನ್ನು ಅಣಗಿಸಿದ್ದರ ನುಯ್ಯಕ್ಕೆ ಉಚಿತೋಪಾಯವನ್ನು ಹೇಗೆ ಮಾಡಬೇಕೆಂದು ಮುಂಬಯಿ ಗಿರಣಿಯವರು ಸಭೆಗೂಡಿದರು. ಸಭೆಯಲ್ಲಿ ಬೇಕಾದಷ್ಟು ಬಿರುಸಿನ ಭಾಷಣಗಳನ್ನು ಮಾಡಿದರು. ಕೊನೆಯಲ್ಲಿ ಹೊಡೆಸವರ ಕಡಿಗೆ ಡೆಪುಟೇಶನ ವಯ್ಯಬೇಕೆಂದು ಗೊತ್ತು ಮಾಡಿದರು.!!! ಒಬ್ಬ ಗಿರಣಿಯವರಾಧಸರ ಜೆವಿತಸಹೂನರು ಕೂಲಿಕಾರರ ಕೂಲಿಯನ್ನು ಕಡಿಮೆ ಮಾಡಬೇಕೆಂಬದಾಗಿ ಸೂಚಿಸಿದ್ದಾರೆ. ಹೀಗೆ ಮಾಡಿದರೆ ಕೂಲಿಕಾರರ ಸಂಪು ಮಾಡಿಸಿ, ನಿಮ್ಮನ್ನು ದಸೆಗೇಡು ಮಾಡಿಸುವೆವೆಂದು ದಿವಾನ ಚಮುಲಲಾಲರು ಇವರಿಗೆ ಭಯ ಹಾಕಿದ್ದಾರೆ.

ಬಕರೀದದ ಭಚ್ರೋಪಾಯಗಳು.

—o—

ಬಕರೀದ ಹಬ್ಬದಲ್ಲಿ ಆಕಳಿಗೆ ಬಣ್ಣ ಬರೆದು ಶ್ರಿಂಗರಿಸಿ, ಅದನ್ನು ವಾದ್ಯದಿಂದ ಮೆರೆಸುತ್ತಾ ವಧಸ್ಥಾನಕ್ಕೆ ವಯ್ಯುವದರಿಂದ, ಉತ್ತರ ಹಿಂದುಸ್ಥಾನದಲ್ಲಿ ಹಿಂದೂ ಮುಸಲಮಾನರ ನಡುವೆ ಭಯಂಕರ ದಂಗೆಗಳಾಗುತ್ತಾ ಬಂದಿವೆ. ಈ ದಂಗೆಗಳಾಗಬಾರದೆಂದು ಸರಕಾರದವರು ಈ ವರ್ಷ ವಿಶೇಷವಾದ ದಕ್ಷತೆ ತಕ್ಕೊಂಡು ಮುಂಜಾಗ್ರತೆಯ ಭದ್ರೋಪಾಯಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಮಹತ್ವಾದಂಥವನ್ನು ಇದರಡಿ ಕೊಡುತ್ತೇವೆ

ದಿಲ್ಲಿ- ಪ್ರತಿಯೊಂದು ಮಹತ್ವದ ಕೂಟಿಗೆ ಸ್ಪೇಶಲ ಪೋಲೀಸರ ಕಾವಲನ್ನು ಎರಡು ದಿವಸ ಮುಂಚಿತವಾಗಿ ಇಟ್ಟಿರುವರು. ಇನ್ನೂರು ಜನ ನಾಗರೀಕರನ್ನು ಸ್ಪೇಶಲ ಪೋಲೀಸ ಕೆಲಸದಲ್ಲಿ ತಕ್ಕೊಂಡು, ಅವರಿಗೆ ಡಗಲಿ ಪಟ್ಟಿ ಕೊಟ್ಟು ನಗರ ರಕ್ಷಕ ಮಾಡುತ್ತಾರೆ ರಾಜಪುತರು ಸಂದಿಗೊಂದಿಗಳಲ್ಲಿ ತಿರುಗ್ಯಾಡುವರು. ಯುದ್ಧದ ಕವಚದ ಬಂಡಿಗಳನ್ನು ಪಟ್ಟಣದಲ್ಲಿ ತಂದಿರುವರು. ಮತ್ತು ಸೋಲ್ಜರರ ಕಂಪನಿಗಳನ್ನು ತುರುಮು ಬಿದ ಕೂಡಲೆ ಹೊರಡುವಂತೆ ಸಿದ್ಧ ಮಾಡಿರುವರು. ಧಂಗೆಯಾದರೆ ಗುಂಡು ಹಾಕಲಿಕ್ಕೆ ಕೂಡಲೆ ಪೋಲೀಸರಿಗೆ ಅಪ್ಪಣೆ ಕೊಡುವದಕ್ಕಾಗಿ ಒಂದೊಂದು ಸ್ಥಳದಲ್ಲಿ ಇಬ್ಬಿಬ್ಬರು ಒಂದನೆಯ ವರ್ಗದ ಮ್ಯಾಜಿಸ್ಟ್ರೇಟರನ್ನು ಕೂಡಿಸಿದ್ದಾರೆ.

ಕಾನಪೂರದಲ್ಲಿ ಶಸ್ತ್ರಧಾರಿಯಾದ ಪೋಲೀಸರು ಬೀದಿ ಬೀದಿಗೆ ನಿಂತಿರುವರು. ಇವರಿಗೆ ಸ

ಹಾಯವಾಗಿ ಸ್ವಾರರು ಪಟ್ಟಣದ ತುಂಬ ತಿರುಗಾಡುವರು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಶಾಂತತಾ ಭಂಗದ ಗಲಭೆಯ ಕಲಮಿನ ಜಾಹೀರನಾಮೆ ಹಚ್ಚಿದ್ದಾರೆ.

ಒಕರೀದದ ಬಂದೋಬಸ್ತಾಯಿತು. ಆರು ತಿಂಗಳ ತನಕ ಶಾಂತತೆಯನ್ನು ಕಾಯ್ದುಕೊಳ್ಳಾಯಿತೆಂದು ಪಂಜಾಬ ಸರಕಾರದವರು ಲಾಹೋರ ಪಟ್ಟಣದಲ್ಲಿ ೩೫೦ ಸಿಪಾಯರು ೫೭ ನಾಯಿಕ ಹವಾಲದಾರರು ಹತ್ತು ಸಬ್ ಇನ್ಸಪೇಕ್ಟರರು ೧ ಇನ್ಸಪೇಕ್ಟರ ಈ ಪ್ರಕಾರ ಪೋಲೀಸರನ್ನು ಹೆಚ್ಚಿಸುವರು. ಇವರ ವೆಚ್ಚವು ಒಂದುಲಕ್ಷ ರೂಪಾಯಿಯಾಗುವದು.

ಬಕರೀದದಲ್ಲಿ ಆಕಳ ಮೆರವಣಿಗೆಯು ಕಚ್ಚಾ ನವಾಬ ಬೀದಿಯಿಂದ ಹಾಯಬಾರದೆಂದು ವಿನಂತಿ ಮಾಡಿಕೊಳ್ಳಲು ದಿಲ್ಲಿಯಲ್ಲಿ ಹಿಂದೂ ಹೆಂಗಸರೂ ಹುಡುಗರೂ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕಡೆಗೆ ಹೋಗಿದ್ದರು. ನೀವು ಬಹಳ ತಡ ಮಾಡಿ ಬಂದದ್ದರಿಂದ, ಈಗೇನೂ ಮಾಡಲಿಕ್ಕಾಗುವದಿಲ್ಲೆಂದ ಈ ಸಾಹೇಬರು ಇವರಿಗೆ ಉತ್ತರ ಕೊಟ್ಟರು.

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಹುಕುಮಿನ ನಿಷೇಧವೆಂದು ಈ ಭಾಗದಲ್ಲಿರುವ ಹಿಂದೂ ಜನರು ಈದ ಹಬ್ಬ ಮುಗಿಯುವ ತನಕ ತಮ್ಮ ಮನೆಗಳಿಗೆ ಬೀಗಹಾಕಿ, ಬೇರೊಂದು ಭಾಗದಲ್ಲಿರಬೇಕೆಂದು ಗೊತ್ತು ಮಾಡಿದ್ದಾರೆ.

ನೀವು ಮಸೀದೆಗಳ ಮುಂದೆ ವಾದ್ಯ ಬಾರಿಸುವ ಹಟ ಹಿಡಿದರೆ ನಾವು ಆಕಳುಗಳ ಮೆರವಣಿಗೆ ತೆಗೆಯುವೆವೆಂದು ಮೈಸೂರಿನ ಮುಸಲ್ಮಾನರು ಹಿಂದೂ ಜನರ ಮೇಲೆ ಟೊಮ್ಮೆ ಹೇರಿದ್ದಾರೆ

ನಾಮದಾರ ಶಾಸ್ತ್ರಿಯವರ ಪ್ರಯಾಣ-

ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ಹಿಂದುಸ್ಥಾನ ಸರಕಾರದ ಏಜಂಟ ಜನರಲ್ಲರಾಗಿ ದಕ್ಷಿಣ ಆಫ್ರಿಕೆಗೆ ಪ್ರಯಾಣ ಮಾಡಿದರು. ಇಲ್ಲಿಯ ಗವ್ಹರ್ನರರು, ಸ್ಥಾನಿಕರು ಶ್ರೇಷ್ಠರಾದ ನಾಗರಿಕರು ಇವರ ಗೌರವ ಮಾಡಿ, ಇವರನ್ನು ಸ್ವಾಗತಗೊಳಿಸಿದರು. ಇಂಗ್ರೇಜಿ ರಾಜ್ಯವಾದ ಹಿಕಿಲ ಹಿಂದಿ ಗೃಹಸ್ಥರು ಬೇರೊಂದು ದೇಶಕ್ಕೆ ಹಿಂದುಸ್ಥಾನದ ಪ್ರತಿನಿಧಿಯಾಗಿ ಹೋದದ್ದು ಇದೇ ನೆಲೆಯಲ್ಲು. ಇದೇ ಪ್ರಕಾರ ಪ್ರತ್ಯಕ್ಷ ಹಿಂದುಸ್ಥಾನ ಸರಕಾರದ ಪ್ರತಿನಿಧಿಯಾಗಿ, ಹಿಂದೀ ಜನರ ಹಕ್ಕು ಬಾಧ್ಯತೆಗಳ ಸಂರಕ್ಷಣೆಮಾಡಲು ರಾಯಭಾರಿಯಾಗಿ ಹಿಂದೂ ಜನರು ಪ್ರತಿಯೊಂದು ದೇಶಕ್ಕೂ ಹೋಗುವದರಿಂದ ಹಿಂದುಸ್ಥಾನ ಯೋಗ್ಯತೆಯು ಹೆಚ್ಚುವದು. ಹಿಂದುಸ್ಥಾನವು ಜೀವಂತ ರಾಷ್ಟ್ರವೆನಿಸುವದು. ಸ್ಟೇಟ ಸೇಕ್ರೆಟರಿಯವರ ಮುಖಾಂತರ ಈಗ ನಡೆಯುವ ಕಾರಭಾರವು ವೈಕುಂಠಕ್ಕೆ ಹೋಗಲು ಕುಂಟ ದಾಸನ ಅಪ್ಪಣೆಯೇ ಎನ್ನುವಂತಾಗುತ್ತದೆ.

ಮಿಶ್ರ ಶಿಕ್ಷಣ-

ಪುರುಷರಿಗೂ ಸ್ತ್ರೀಯರಿಗೂ ಬೇರೆ ಬೇರೆ ಸ್ಥಳಗಳಲ್ಲಿ ಶಿಕ್ಷಣ ಕೊಡುವರು. ಈ ಪ್ರಕಾರ ಪ್ರತ್ಯೇಕ ಶಿಕ್ಷಣ ಕೊಡದೆ, ಇಬ್ಬರಿಗೂ ಒಂದೇ ಸ್ಥಳದಲ್ಲಿ ಶಿಕ್ಷಣ ಕೊಡಬೇಕೆಂದು ನಾಮದಾರ ಶಾಸ್ತ್ರಿಯವರ ಮತವು. ಇಬ್ಬರಿಗೂ ಒಂದೇ ಸ್ಥಳದಲ್ಲಿ ಶಿಕ್ಷಣ ಕೊಡಬೇಕೆಂಬ ವಿಷಯದಲ್ಲಿ ಈ ಪರ್ಯಂತರ ಮತಭೇದವಾಗಿದೆ ಅಪಯಶವೂ ಬಂದಿದೆ. ಆದರೂ ಈ ಶಿಕ್ಷಣವು ಸಾಧ್ಯವೆಂದು ಇವರ ಮತವು. ಏಕಂದರೆ ಇಬ್ಬರ ಜನ್ಮದ ಉದ್ದೇಶ, ಮನೋಭಾವನೆ, ಕರ್ತವ್ಯ ಮತ್ತು ಅನುಭವಗಳೆಲ್ಲ ಒಂದೇ ಆಗಿರುತ್ತವೆ ಅಂದ ಬಳಿಕ ಇವರ ಶಿಕ್ಷಣದಲ್ಲಿ ಭೇದವೇಕಿರಬೇಕೆಂದು ನಾಮದಾರರು ಪ್ರಶ್ನೆ ಮಾಡುತ್ತಾರೆ.

ಮಂತ್ರಿ ಏನು ಮಾಡಬಲ್ಲನು?

ಸರಕಾರದ ಸಹಾಯವಿಲ್ಲದೆ ಮದ್ರಾಸ ಇಲಾಖೆಯಲ್ಲಿ ವರ್ಷದಲ್ಲಿ ೨೫ ಲಕ್ಷದ ಖಾದಿಯ ಮಾರಾಟವಾಗುತ್ತದೆ. ಕಾಂಗ್ರೆಸದ ಮಂತ್ರಿಯು ರಾಟಿಯ ಉದ್ಯೋಗಕ್ಕೆ ಆಶ್ರಯ ಕೊಟ್ಟು, ಕೋಟಿಯ ವ್ಯಾಪಾರ ಮಾಡಿಸಬಹುದು. ಮದ್ಯಪಾನ ಪ್ರತಿಬಂಧಕ್ಕಾಗಿ ಕಾನೂನು ಜಾರಿಗೆ ಕೊಡಿಸಿ, ಅದರಂತೆ ಕಾದಿಟ್ಟ ಜಾತಿಯವರು ನಡೆಯಲು ಹೇಳಬಹುದು, ಅವರು ಹಾಗೆ ಮಾಡದಿದ್ದರೆ ರಾಜೀನಾಮೆ ಕೊಡಬೇಕು. ರಾಜೀನಾಮೆಯು ಸರಕಾರದ ಮೇಲೆ ಇಷ್ಟ ಪರಿಣಾಮವನ್ನು ಮಾಡುವದೆಂದು ಮಧುರೆಯ ಬ್ಯಾರಿಸ್ಟರ ಜೊಸೆಫ ಸಾಹೇಬರು ಅನ್ನುತ್ತಾರೆ.

ಕೊಲ್ಹಾಪೂರದಲ್ಲಿ ಜೈನ ಪರಿಷತ್ತು ಕೂಡಿತ್ತು. ಉಪಭೇದಗಳಲ್ಲಿ ವಿವಾಹಗಳು ನಡೆಯಬೇಕೆಂಬ ಠರಾವು ಮಾಡಿದರು. ಡಾ ಬ. ಲಟ್ಠೆಯವರನ್ನು ದಿವಾನರಾಗಿ ನೇಮಿಸಿಕೊಂಡ ಬಗ್ಗೆ ಮಹಾರಾಜರಿಗೆ ಮಾನಪತ್ರ ಕೊಟ್ಟು, ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದರು.

ವಿವಿಧ ವರ್ತಮಾನಗಳು

—:೦:—

ಮುಂಬಯಿಯ ಚೌಪಾತಿಯ ಬೈಲಿನಲ್ಲಿ ಲೋಕಮಾನ್ಯರ ಶಿಲಾಪ್ರತಿಮೆಯನ್ನು ನಿಲ್ಲಿಸುವ ವಿಚಾರ ನಡೆದಿದೆ. ಈ ಸತ್ಕಾರ್ಯಕ್ಕೆ ಫಂಡು ಕೊಡಬೇಕೆಂದು ದೇವಿ ಸರೋಜಿನಿಯವರು ಒಂದು ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಪೇಶಾವರ ಪ್ರಾಂತದಲ್ಲಿ ಖಾದೀ ಪ್ರಸಾರಕರನ್ನು ಹಿಡಿದು, ಒಂದು ತಿಂಗಳ ತನಕ ವಿಚಾರಣೆಯಿಲ್ಲದೆ, ತುರಂಗದಲ್ಲಿ ಹಾಕಿದ್ದರು. ಈಗ ಇವರನ್ನು ಪೋಲೀಸ ಕಾವಲಿನಲ್ಲಿ ಅವರವರ ಗ್ರಾಮಕ್ಕೆ ಒಯ್ದು, ನಜರ ಬಂದಿಯಲ್ಲಿಟ್ಟಿದ್ದಾರೆ.

ಭಾವನಗರದ ಮಹಾರಾಜರ ವರ್ಧಂತಿಯಾಯಿತು. ಈ ಆನಂದಕ್ಕಾಗಿ ೧೨ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವರು. ಬಡವರಾದ ೧೨ ಜನ ವಿಧವೆಯರಿಗೆ ಮಾಶಾಸನ ಮಾಡಿಕೊಟ್ಟರು.

ಬೆಂಗಳೂರಿಂದ ಸೇಲಮುವ ರೇಲ್ವೆಯಲ್ಲಿ ಹೊಸೂರ ತನಕ ರೇಲ್ವೆ ಹಾಕುವಂತೆ ಮಹಾರಾಜಾ ಸರಕಾರದವರು ಗೊತ್ತು ಮಾಡಿದ್ದಾರೆ.

ಬೆಂಗಳೂರಿನಲ್ಲಿರುವ ಮಹಾರಾಜಾ ಗಿರಣಿಯಲ್ಲಿ ಕೆಲಸ ಮಾಡುವ ಮೂರು ಸಾವಿರ ಕೂಲಿಕಾರರು ಸಂಪು ಮಾಡಿದ್ದರಿಂದ, ಗಿರಣಿಯು ಬಂದಾಗಿದೆ. ಶಸ್ತ್ರಧಾರಿ ಪೋಲೀಸರು ಗಿರಣಿಯನ್ನು ರಕ್ಷಿಸುತ್ತಿದ್ದಾರೆ.

ಪುಣೆಯಲ್ಲಿದ್ದ ದಂಡಿನ ಮುಖ್ಯ ಸ್ಥಳವನ್ನು ಸಿಕಂದರಾಬಾದಿಗೆ ಒಯ್ಯುವರು. ಕಾವಹಾರ ಮತ್ತು ಸೋಲ್ಜರ ದೆಸೆಯಿಂದ ಕಟ್ಟಡಗಳನ್ನು ಕಟ್ಟಲಾರಂಭಿಸಿದ್ದಾರೆ.

ರಂಗೂನ ಮ್ಯುನಿಸಿಪಾಲಿಟಿಯವರು ೧೯೧೧ನೇ ಇಸವಿಯಿಂದ ಮನುಷ್ಯರು ಎಳೆಯುವ ರಿಕಶಾ ಬಂಡಿಯ ವ್ಯವಹಾರವನ್ನು ಬಂದು ಮಾಡುವಂತೆ ಠರಾವು ಮಾಡಿದ್ದಾರೆ.

ತಮ್ಮ ಪ್ರಾಂತವನ್ನು ಮುಂಬಯಿ ಇಲಾಖೆಯಿಂದ ಅಗಲಿಸಬಾರದೆಂದು ಸಿಂಧದ ಹಿಂದೂ ಜನರು ಊರೂರಿಗೆ ಸಭೆ ಮಾಡಿ, ಠರಾವು ಮಾಡುತ್ತಿದ್ದಾರೆ.

ಜಾಹೀರ ನೋಟೀಸು

ಕೆಳಗೆ ಹೆಬ್ಬಟ್ಟಿನ ಗುರ್ತು ಮಾಡುವ ಬಸವ್ವಾ ತಂದಿ ನಿಂಗಪ್ಪಾ ಕುಪ್ಪಗಿ ಸಾ|| ನರೇಗಲ್ಲು ತಾಲೂಕ ರೋಣ ಈತನು ಈ ಜಾಹೀರ ನೋಟೀಸಿನಿಂದ ಪ್ರಸಿದ್ಧ ಮಾಡುವದೇನಂದರೆ—.

ನನ್ನ ಹೆಂಡತಿ ಚನ್ನಿ ಕೋಂ ಬಸವ್ವಾ ಕುಪ್ಪಗಿಯವರ ಈಕೆಯು ನನ್ನ ಕೂಡ ಯಾವಾಗಲು ಸುಶೀಲ ರೀತಿಯಿಂದ ಪ್ರಪಂಚ ಮಾಡಲಿಲ್ಲ ಈ ಗಂಡೂ ಎರಡು ವರ್ಷವಾಯಿತು. ನನ್ನ ಮನೀ ಬಿಟ್ಟು ಹೋಗಿದ್ದಾಳೆ ಮತ್ತು ಕೆಟ್ಟ ರೀತಿಯಿಂದ ನಡೆದು, ಮಾನಮಾನೆ ವರ್ತಿಸುತ್ತಿದ್ದಾಳೆ ಇದೇ ಅಪರಾಧಕ್ಕಾಗಿ ಆಕೆಗೆ ೩|| ಪೋಲಿಸ ಆಕ್ಟಿನ ಪ್ರಕಾರ ದಂಡ ಸಹ ಆಗಿರುತದೆ ಈಗ ಆಕೆಯು ಗರ್ಭಿಣಿಯು ಇದ್ದಾಳೆಂಬ ಬಾತಮೀ ಕೇಳತೇನೆ ಈಕೆಯು ನರೇಗಲ್ಲ ಮಜರೆ ತೋಟಗಂಟಿಯಲ್ಲಿರತಾಳೆ ಈಕೆಯು ತನಗೆ ಬೇಕಾದ ಜನರ ಮಿಲಾಫಿ ಮಾಡಿಕೊಂಡು, ಹುಟ್ಟಿದ ಕೂಸಿಗೆ ಜನಕ ತಂದಿಯೆಂದು ನನ್ನ ಹೆಸರು ಹಚ್ಚಿಸಿ, ಅದರ ವಾರಸಾ ಹಕ್ಕನ್ನು ನನ್ನ ಮೇಲೆ ಮತ್ತು ನನ್ನ ಮನೆತನದ ಆಸ್ತಿಯ ಮೇಲೆ ಸ್ಥಾಪನ ಮಾಡತಕ್ಕವಳಿದ್ದಾಳೆ ಅದ್ದರಿಂದ ಈ ಜಾಹೀರ ನೋಟೀಸು ಕೊಡಬೇಕಾಯಿತು ಸದರ ನನ್ನ ಹೆಂಡತಿಯು ಹಡಿಯುವ ಕೂಸು ವ್ಯಭಿಚಾರದ್ದಾಗುತ್ತದೆ ಆದಕಾರಣ ಅದರ ವಾರಸಾ ಹಕ್ಕು ನನ್ನ ಮೇಲೆ ಬಿಲಕೂಲ ಉಂಟಾಗಲಾರದು ಮತ್ತು ಸದರ ನನ್ನ ಹೆಂಡತಿಯಾಗಿದ್ದ ಚನ್ನಿಯು ಕೆಟ್ಟ ಹಾದಿಗೆ ಬಿದ್ದದರಿಂದ ಆಕೆಯು ಯಾವ ತರದಿಂದಲೂ ನನ್ನ ಮನೆತನದವಳಾಗಲಾರಳು ಇದರಿಂದ ಆಕೆಗೆ ನನ್ನಿಂದ ಪೋಟಗಿ ಮತ್ತು ವಾರಸಾ ಹಕ್ಕು ದೊರೆಯಲಾರದು, ಆಕೆ ಮತ್ತು ಈ ನಂತರ ಆಕೆಗಾಗುವ ಸಂತತಿಯು ಯಾವ ಸಂಬಂಧವೂ ನನ್ನ ಮನೆತನದ ಮೇಲೆ ಉಳಿಯಲಿಲ್ಲ ಅಂತಾ ಜಾಹೀರ ಮಾಡಿದ್ದೇನೆ.

ಇದೇ ನೋಟೀಸಿನಿಂದ ತೋಟಗಂಟಿಯ ಪೋಲಿಸಪಾಟೀಲರಿಗೆ ವಿನಂತಿ ಮಾಡಿಕೊಳ್ಳುವದೇನಂದರೆ—

ಸದರ ನನ್ನ ಹೆಂಡತಿಯಾಗಿದ್ದ ಚನ್ನಿ ಅಥವಾ ಆಕೆಯ ತರ್ಫಿನಿಂದ ಯಾರಾದರೂ ಆಕೆಯ ಹೊಟ್ಟೆಯಿಂದ ಹುಟ್ಟಿದ ಗಂಡು ಅಥವಾ ಹೆಣ್ಣು ಕೂಸಿಗೆ ಜನಕ ತಂದಿ ಎಂದು ನನ್ನ ಹೆಸರು ಬರಸಲಿಕ್ಕೆ ಬಂದರೆ ಬರೆಕೊಳ್ಳಬಾರದು. ಏಕೆಂದರೆ- ಜನನ ರಜಿಸ್ಟರದಲ್ಲಿ ಬರಿಸುವ ಹಕ್ಕು ಕಾಯದೆಯಿಂದ ಗಂಡನಿಗೆ ಇರುತ್ತದಲ್ಲದೆ ಹೆಂಡತಿಗೆ ಇರುವದಿಲ್ಲ ಆದ್ದರಿಂದ ನನ್ನ ಹೆಸರು ಜನಕ ತಂದಿ ಎಂದು ಬರೆಕೊಳ್ಳಬಾರದೆಂದು ವಿನಂತಿ ಮಾಡಿಕೊಂಡಿರುತ್ತೇನೆ. ತಿಳಿಯುವದು.

ತಾ|| ೧೩ ಜೂನ ೧೯೨೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಬಸವ್ವಾ ತಂದಿ ನಿಂಗಪ್ಪಾ ಕುಪ್ಪಗಿಯವರ ಈತನ ಕೈದು ಇರುತ್ತದೆ.



ದಿ ಮೈಸೂರ ಅಗ್ರಿಕಲ್ಚರಲ್ ಡೇರಿಫಾರಂ ಕಂ. ಲಿಮಿಟೆಡ್

ಆರ್ಗನಾಯಿಜಿಂಗ ಇನ್ಸಪೇಕ್ಟರ ಜಿಲ್ಹಾ ಧಾರವಾಡ ಡಿಸ್ಟ್ರಿಕ್ಟ ಹೆಡ್ಡ ಕ್ವಾರ್ಟರ ಹುಬ್ಬಳ್ಳಿ ಇವರ ಆಫೀಸಿನಿಂದ ತಿಳಿಯ ಪಡಿಸುವದೇನಂದರೆ—

೧ ನಮ್ಮ ಡಿಪಾರ್ಟಮೆಂಟ ಮೂಲಕ ಇದೇ ಜಿಲ್ಹೆಯಲ್ಲಿ ನಮ್ಮ ಅಗ್ರಿಮೆಂಟ ಪ್ರಕಾರ ಕೆಲಸ ಮಾಡಿದಲ್ಲಿ ದರ ತಿಂಗಳವಂದಕ್ಕೆ ರೂಪಾಯಿ ಮೂವತ್ತು (೩೦— ೦— ೦) ರಂತೆ ಪಗಾರ ದೊರೆಯುತ್ತದೆ. ಇಷ್ಟ ಇದ್ದವರು ಲಾಯಖಿ ಸರ್ಟಿಫಿಕೇಟಸಹಿತ ಈ ತಿಂಗಳ ಆಖೈರ ವಳಗಾಗಿ ನಮ್ಮ ಮಾ ಅಗರ ಪತ್ರದ್ವಾರ ತಿಳಿದುಕೊಳ್ಳಬಹುದು.

೨ ಇದಲ್ಲದೆ ಈ ಹಿಂದೆ ಇದೇ ಡಿಪಾರ್ಟಮೆಂಟಿನಲ್ಲಿ ದಸಕರುಗಳನ್ನು ನ ಕೇರುಗಳನ್ನು ಶೇರಿಸಿ ಅಬಗ್ಗೆ ಯಾರಿಗೆ ಪಕ್ಕಾ ಪಾವತಿಗಳು ವ ಸರ್ಟಿಫಿಕೇಟುಗಳು ವಗೈರೆ ಮುಟ್ಟಿಗುವದಿಲ್ಲವೋ ಅಂಥವರು ಕೂಡಲೆ ಒಂದು ತಿಂಗಳೊಳಗಾಗಿ ತಮ್ಮ ತಕರಾರುಗಳನ್ನು ಸಮಕ್ಷಮ ಅಗರ ಲೇಖಿ ಮೂಲಕ ನಮ್ಮ ಆಫಿಸಿಗೆ ತಿಳಿಸಿದಲ್ಲಿ ಯೋಗ್ಯ ತಜವೀಜು ಮಾಡಿಸಿ ಕೊಡಲಾಗುತ್ತದೆ. ಹಣ ವಗೈರೆ ಮಾಡಲಾದದ್ದು ಇದೇ ಡಿಸ್ಟ್ರಿಕ್ಟ ಹದ್ದಿನಲ್ಲಿದ್ದು, ಹುಬ್ಬಳ್ಳಿ ಅರ್ಬನ ಕೋ. ಅಪರೇಟಿವ್ಹ ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಲಾಗುತ್ತದೆ. ತಿಳಿಯುವದು.

ಸ್ಪೇಶಲ ಸೂಚನೆ— ಒಂದು ತಿಂಗಳಲ್ಲಿ ೫೦ ದನಗಳ ವಿಮೆ ಇಳಿಸುವಂಥ ನಬ್ಬ ಏಜಂಟರಿಗೆ ಒಂ ಗಾರದ ಪದಕವನ್ನು ಬಹುಮಾನವಾಗಿ ಕೊಡುವೆವು. ಏಜಂಟರಾಗುವಂಥವರಿಗೆ ಬಂಗಾರದಂಥ ಸಮಯ.

ಹುಬ್ಬಳ್ಳಿ
೧—೬—೧೯೨೭

A. Laxmanrao
Organising Inspector,
Dharwar District
[Hárapanally Street, Hublí]

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಪಿಟಹುವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಆಚಾರ್ಯ ಬಾಲಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಸೋಮವಾರ ತಾರೀಖು ೧೩ ನೇ ಜೂನ ೧೯೩೭ | ಸಂಚಿಕೆ ೧೩೪

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಚಕ್ಕಡಿ ತರದಿನ ಗಾಡಿ ಇರುವದು. ಕಬ್ಬಿಣ ಎರಡು ಈಲು ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಬಾಣಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ಕರುತ್ತದೆ. ಸದ್ಯಕ್ಕೆ ನೀರಿನ ಕೊರ ತೆಯು ಎಲ್ಲಾ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—೧—

ಸಿಂಗಲ ಕಾಲಮಿನ ಹತ್ತು ಓಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಮನೆಯು ಮಾರಾಟ-

—(೦)—

ಧಾರವಾಡ ಹಾಲಗೇರಿಯ ಕೆಳಗಿನ ಬೀದಿಯ ಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೯೮ನೆಯ ಮನೆ ಶ್ರೀ. ಸೌ॥ ಗಂಗಾಬಾಯಿ ಕೌಲಗಿ ಇವರ ಹೆಸರಿನಿಂ ದಿರುವದನ್ನು ಮಾರುತ್ತಕ್ಕದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳು ಳ್ಳದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾ ಹಿತಿಯ ಬಗ್ಗೆ ಕೆಳಗೆ ಸಹೀ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಬೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ.
c/o ಬಿ. ಆರ. ಕೌಲಗಿ.
ಮೋತಿತಲಾವಗಲ್ಲಿ, ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—೧—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

೧೯ ವಂತಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಕಾಯಿಮುತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವ ರಿಂದ ತಿಳಕೊಳ್ಳಬೇಕು.

ಮಾಧ್ವವರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿ ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಪತ್ತೇ ಇ ಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿಂತಿರುತ್ತದೆ.

ಎ. ಇ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೧೩-೬-೨೭ ನೇ ಇಸ್ವಿ

ಮೌಲಾನಾ ಮಹಮುದಲ್ಲಿಯವರ ಸಿಡ್ಡು ಕೊಡಿದ ಭಾಷಣ.

ಹಿಂದೂ ಶುದ್ಧಿ, ಸಂಘಟನ, ಮಸೀದೆಗಳ ಮುಂದೆ ವಾದ್ಯ, ಗೋಹತ್ಯ ಮುಂತಾದವುಗಳನ್ನು ಕುರಿತು ಹಿಂದೂ ಜನರಿಗೆ ಉತ್ತರವಾಗಿ ಮೌಲಾನಾ ಮಹಮುದಲ್ಲಿಯವರು ಅಕೋಲೆಯಲ್ಲಿ ಸಿಡ್ಡು ಹೊಡೆದ ಭಾಷಣ ಮಾಡಿದ್ದಾರೆ. ಅದೇನಂದರೆ—

ಮಸೀದೆಗಳ ಮುಂದೆ ವಾದ್ಯ ಬಾರಿಸಬಾರದೆಂದು ಕುರಾಣದಲ್ಲಿ ಹೇಳಿಲ್ಲ. ಬಾರಿಸತಕ್ಕವರೇ ಎಂದು ಹಿಂದೂ ಜನರು ತಮ್ಮ ಹಕ್ಕು ನಡಿಸಲಿಲ್ಲ. ಮುಸಲಮಾನರು ಧರ್ಮದಂತೆ ನಡೆದರೆ— ಬರೀ ಹಿಂದೂಗಳಷ್ಟೇ ಏಕೆ? ಬೇರೆ ಧರ್ಮದವರೂ ಇಸ್ಲಾಮದ ದೀಕ್ಷೆ ತಕ್ಕೊಳ್ಳುವರು.

ಮುಸಲಮಾನ ಧರ್ಮದಲ್ಲಿ ಸೇರಬೇಕೆನ್ನುವ ಪ್ರತಿಯೊಬ್ಬನು ಆ ಧರ್ಮದಲ್ಲಿಯೇ ಇರುವನೆಂಬ ವಿಶ್ವಾಸಪೂರ್ವಕವಾದ ಶ್ರದ್ಧೆಯಿಂದ ಬರಬೇಕು. ಜಗತ್ತಿನಲ್ಲಿ ಮುಸಲಮಾನ ಧರ್ಮವೇ ನಿಜವಾದ ಧರ್ಮವು. ತಗಲಿಕವು ಅವಶ್ಯವಾದದ್ದು. ಅದರಲ್ಲಿ ನನ್ನ ನಂಬಿಗೆಯುಂಟು. ಆದರೆ ಯಾವನೊಬ್ಬನನ್ನು ಮೋಸದಿಂದ ಅಥವಾ ಬಲಾತ್ಕಾರದಿಂದ ಇಸ್ಲಾಮ ಧರ್ಮದಲ್ಲಿ ತಕ್ಕೊಳ್ಳಲಿಕ್ಕಾಗದು. ಮುಸಲಮಾನರು ಧೈರ್ಯಶಾಲಿಗಳಾಗಿ, ಪ್ರಾಮಾಣಿಕತನದಿಂದ ಇಸ್ಲಾಮ ಧರ್ಮ ಶಿಕ್ಷಣದಂತೆ ನಡಿಯಬೇಕು.

ಹಿಂದೂ ಜನರು ಸಾರ್ವಜನಿಕ ದಾರಿಗಳ ಮೇಲೆ ವಾದ್ಯ ಬಾರಿಸುವ ಹಕ್ಕನ್ನು ಆಗ್ರಹಪಡಿಸಿ ಹೇಳುವದಾದರೆ— ಅದೇ ದಾರಿಯಲ್ಲಿ ಕುರಬಾನಿಗಾಗಿ ಆಕಳ ಮೆರೆಸುವ ಹಕ್ಕನ್ನು ಮುಸಲಮಾನರು ಹೇಳುವರೆಂದು ಖಂಡಿತವಾಗಿ ತಿಳಿಯಬೇಕು. ಮುಸಲಮಾನರು ಹಿಂದೂ ಜನರಿಂದ ಬರುವಂಥ ಆಘಾತಗಳನ್ನು ತಾಳ್ಮೆಯಿಂದ ಸಹಿಸತಕ್ಕದ್ದು. ಅಂದರೇ ಹಿಂದೂ ಜನರು ಇಸ್ಲಾಮ ಧರ್ಮ ದೀಕ್ಷೆ ತಕ್ಕೊಳ್ಳುವರು.

ಡಾಕ್ಟರ ಮುಂಜೆಯವರ ಶುದ್ಧಿ, ಸಂಘಟನೆಗೆ ನಾನೇನಷ್ಟು ಹೆದರುವದಿಲ್ಲ. ಅಸ್ಪೃಶ್ಯರ ದೆಸೆಯಿಂದ ಮಾತ್ರ ಕನಿಕರಪಡುತ್ತೇನೆ. ಹಿಂದೂ ಜನರು ಇವರನ್ನು ಅನ್ಯಾಯದಿಂದ ನಡಿಸಿಕೊಳ್ಳುತ್ತಾರೆ. ಇವರು ಮುಸಲಮಾನರಾದರೆ, ನಾವು ಇವರನ್ನು ಸಮಬಂಧುಗಳಾಗಿ ನಡಿಸಿಕೊಳ್ಳುವೆವು.

ನಮಗೆ ಅತ್ಯಂತ ಪ್ರಿಯವಾದ ಪದಾರ್ಥದ ಕುರಬಾನಿ ಮಾಡಬೇಕೆಂದು ಕುರಾಣದ ಆಜ್ಞೆಯು. ಆಕಳವು ಅಗ್ಗಪ್ರಾಣಿಯಾದ್ದರಿಂದ ಅದರ ಕುರಬಾನಿ ಮಾಡುತ್ತೇವೆ. ಆಕಳದ್ದೇ ಕುರಬಾನಿ ಮಾಡಬೇಕೆಂಬದರಲ್ಲಿ ಅರ್ಥವಿಲ್ಲ. ನಾನು ಸ್ವತಃ ಈದ ಹಬ್ಬದಲ್ಲಿ ಗೋಹತ್ಯ ಮಾಡುವದನ್ನು ಬಿಟ್ಟಿದ್ದೇನೆ. ನಾನಾಗಿ ಎಂದೂ ಗೋಮಾಂಸ ತಿನ್ನಲಪೇಕ್ಷಿಸುವದಿಲ್ಲ. ಹಿಂದೂ ಜನರು ಕಟುಕರಿಗೆ ಆಕಳನ್ನೇ ಮಾರಬಾರದು. ಆಕಳು ತುಟ್ಟಿ; ಅದು ಅಗ್ಗ ಮಾರುವಂತೆ ಮಾಡಬೇಕು. ಇದರಿಂದ ಗೋಹತ್ಯದ ತೊಡಕು ಬಿಡುವದು. ನಮಗೆ ಸ್ವರಾಜ್ಯವಿದ್ದರೆ— ಒಂದೇ ವರ್ಷದಲ್ಲಿ ಹೀಗೆ ಅಮಲಿನಲ್ಲಿ ತರುತ್ತಿದ್ದೆವು.

ನಾಗಪೂರದಲ್ಲಿ ಪ್ರಮೀಳೆಯು ಅವತಾರ.

—೦—

ನಾಗಪೂರದ ಕಾಯದೆಭಂಗದಲ್ಲಿ ಪುರುಷರಂತೆ ಸ್ತ್ರೀಯರೂ ಉತ್ಸಾಹಾಸಕ್ತಿಯುಳ್ಳವರಾಗಿದ್ದಾರೆ. ಶ್ರೀ ಅವರಿಯವರಿಗೆ ಶಿಕ್ಷೆಯಾದ ಬಳಿಕ ಪುರುಷರ ಕಾಯದೆಭಂಗವು ಹಿಂದೆ ಬಿದ್ದದೆ. ಶ್ರೀ ಪಟೇಲರು ಅಲ್ಲಿಗೆ ಹೋಗಿ ಬಂದ ಬಳಿಕ, ಪುನಃ ಪ್ರಾರಂಭವಾಗುವದು. ಗಂಡಸರು ಈ ಪ್ರಕಾರ ಪರಾವಲಂಬಿಯಾದದ್ದು ಚತುರಬಾಯಿ ಎಂಬವಳಿಗೆ ಸರಿಯೆನಿಸಲಿಲ್ಲ. ಇವಳು ಸ್ವಂತದ ಪ್ರಜಾಸತ್ತಾತ್ಮಕ ಸೇನೆ ಕಟ್ಟಿದ್ದಾಳೆ. ೧೨ ಜನ ಸ್ತ್ರೀಯರು ಈಗಾಗಲೆ ಇವಳ ದಂಡಿನಲ್ಲಿ ಸೇರಿದ್ದಾರೆ. ಬಿಚ್ಚುಗತ್ತಿಯನ್ನು ಹಿಡಕೊಂಡಂಥ ಐವರು ಸ್ತ್ರೀಯರು ಚತುರಬಾಯಿಯ ಸೇನಾಧಿಪತ್ಯದಲ್ಲಿ ಪಟ್ಟಣದಿಂದ ಸೀತಾಬಲಡಿಯ ತನಕ ಮೆರವಣಿಗೆ ಹೊರಡಿಸಿದರು. ಈ ಸೇನೆಯನ್ನು ನೋಡಿ, ಪಟ್ಟಣಿಗರು ಕೌತುಕಪಟ್ಟರು. ಮೆರವಣಿಗೆಯು ಸೀತಾಬಲಡಿಗೆ ಹೋದ ನಂತರ, ಸಭೆಯಾಯಿತು. ಪ್ರಮೀಳೆಯು ೨೦ ನಿಮಿಷಗಳ ಪರ್ಯಂತರ ಅಬಲೆಯರು ಪ್ರಬಲೆಯರಾಗಬೇಕೆಂಬ ವೀರಾವೇಶದ ಭಾಷಣ ಮಾಡಿದಳು. ಇದೇ ವೇಳೆಯ ನ ಮಿ. ಕಾರುಜೆ ಎಂಬವರು ಅಂದದ್ದೇನಂದರೆ—

ಕಾಂಗ್ರೆಸ ಕಮಿಟಿಯವರು ಘ್ವಾಲಂಟಿಯರರನ್ನು ಏಕೆ ತಂಬಿ ಕೂಡಿಸಿದ್ದಾರೆಂಬದು ತಿಳಿಯುವದಿಲ್ಲ. ಹಿಂದುಸ್ಥಾನದೊಳಗಿನ ಎಲ್ಲಾ ಸುರಂಗಗಳು ತುಂಬಿದ ನಿನಸ ಸರಕಾರದ ಮೇಲೆ ಯಾವ ಪರಿಣಾಮವೂ ಆಗಲಾರದು. ಸ್ವದೇಶ ಸ್ವಾತಂತ್ರ್ಯ ದೊರೆಯಬೇಕಾದರೆ— ಅಸಾಧಾರಣವಾದ ಸ್ವಾರ್ಥತ್ಯಾಗ ಮಾಡಬೇಕಾಗುತ್ತದೆ. ಕೋಪ ಹಚ್ಚಿ ನಮ್ಮ ಸಭೆಗಳನ್ನು ಮುರಿಯುವ ಹೊತ್ತು ಬರುವದು. ಬಂಗಾಲದ ಕೈದಿಗಳನ್ನು ಮುಕ್ತ ಮಾಡುವ ಮಟ್ಟಿಗೆ ಕಾಯದೆಭಂಗ ಮಾಡಲಾಗದು. ಸ್ವರಾಜ್ಯ ಸ್ವಾತಂತ್ರ್ಯ ದೊರೆಯುವ ತನಕ ಈ ಚಳವಳಿಯನ್ನು ಅವಿರಾಯ ನಡಿಸತಕ್ಕದ್ದು.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಬರುವ ತೀರ್ಮಾನಗಳು.

೧ ಮಿಲರ ಕಮಿಟಿಯ ರಿಪೋರ್ಟಿನ ಪ್ರಕಾರ ನೂರಕ್ಕೆ ೫೦ ಸ್ಥಳಗಳನ್ನು ಹಿಂದುಳಿದವರಿಗೆ ಕೊಡಬೇಕೆಂಬ ತೀರ್ಮಾನವಾಗಿದೆ. ಈ ಸಂಖ್ಯೆಯನ್ನು ೭೫ ಮಾಡಬೇಕು. ಮತ್ತು ಶ್ರೇಷ್ಠ ಮತ್ತು ಕನಿಷ್ಠ ಸ್ಥಳಗಳೂ ದೊರೆಯತಕ್ಕದ್ದು.

೨ ಪ್ರತಿಯೊಂದು ಮಹತ್ವದ ಸ್ಥಳದಲ್ಲಿ ಬೇಸಾಯ ಮತ್ತು ವ್ಯವಸಾಯದ ಶಾಲೆಗಳನ್ನಿಡಬೇಕು. ನಿರುದ್ಯೋಗಿಗಳ ಸಂಖ್ಯೆಯು ಕಡಿಮೆಯಾಗುವಂತೆ ಮಿಡಲ ಸ್ಕೂಲುಗಳಲ್ಲಿ ನೂಲುವದನ್ನು ಕಲಿಸಬೇಕು.

೩ ಕಚೇರಿಗಳ ಸಿಪಾಯರ ಹಾಗು ಜೇಲ ಮತ್ತು ಆಸ್ಪತ್ರಿಗಳಲ್ಲಿಯ ಜನರ ದೆಸೆಯಿಂದ ಖಾದಿಯನ್ನೇ ಉಪಯೋಗಿಸಬೇಕು.

೪ ಶ್ರೀಮನ್ಮಹಾರಾಜರ ಜುಬಿಲಿಯ ದೆಸೆಯಿಂದ ಎರಡು ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಿ, ಪ್ರತಿಯೊಂದು ಸ್ಥಳದಲ್ಲಿಯೂ ಈ ಹಣವನ್ನು ವೆಚ್ಚ ಮಾಡುವ ಏರ್ಪಾಡು ಮಾಡಬೇಕು.

೫ ನ್ಯಾಯಾಧೀಶರು ಹಿಂದೂ ಧರ್ಮಶಾಸ್ತ್ರದ ಅರ್ಥವನ್ನು ಬೇರೆ ಬೇರೆ ರೀತಿಯಾಗಿ ಮಾಡುವದರಿಂದ, ನ್ಯಾಯಗಳು ನ್ಯಾಯಾಧೀಶರ ಇಚ್ಛೆಯ ಪ್ರಕಾರ ನಿರ್ಣಯವಾಗುತ್ತವೆ. ಆದ್ದರಿಂದ ಹಿಂದೂ ಲಾ ದಲ್ಲಿ ತಿದ್ದುಪಡೆಯಾಗುವದಕ್ಕಾಗಿ ಒಂದು ಕಮಿಟಿ ನೇಮಿಸಬೇಕು.

೬ ಮದುವೆಯ ವಯಸ್ಸಿನ ಪ್ರಮಾಣವನ್ನು ಗಂಡಸರಿಗೆ ೨೦ ಮತ್ತು ಹೆಂಗಸರಿಗೆ ೧೪ರಂತೆ ಹೆಚ್ಚಿಸಬೇಕು.

೭ ಆಯುರ್ವೇದಿಕ ಕಾಲೇಜದಂತೆ ಮುಸಲ್ಮಾನ ಹಕೀಮರ ದೆಸೆಯಿಂದ ಯುನಾನಿ ಕಾಲೇಜವನ್ನೂ ಸ್ಥಾಪಿಸಬೇಕೆಂದು ಒಬ್ಬ ಮುಸಲಮಾನ ಮೆಂಬರರು ಠರಾವು ಕಳಿಸಿದ್ದಾರೆ.

ಇಂಗ್ಲಂಡದ ವಿರುದ್ಧ ರಶಿಯಾದಲ್ಲಿ ಚಳವಳಿ.

—ooo—

ವಾರಸಾ ಸ್ಟೇಶನದಲ್ಲಾದ ರಶಿಯಾದ ರಾಯಭಾರಿಯ ಕೊಲೆಯ ಬಗ್ಗೆ ಪೋಲಂಡ ಸರಕಾರದವರು ಅನುತಾಪ ಪಟ್ಟು ಈ ಕೊಲೆಗೆ ತಮ್ಮದೇನೂ ಸಂಬಂಧವಿಲ್ಲೆಂದು ತೋರಿಸುತ್ತಾರೆ. ರಾಯಭಾರಿಗೆ ಪೋಲೀಸ ಅಂಗರಕ್ಷಕರನ್ನು ಕೊಟ್ಟರೂ ಬೇಡೆಂದನು. ಅದಕ್ಕಾಗಿ ಮರಣ ತಂದುಕೊಂಡನು. ಈತನ ಹೆಂಡತಿಗೆ ಜೀವನಾಂಶವನ್ನು ಮಾಡಿಕೊಡುವೆವೆಂದು ಪೋಲಂಡ ಸರಕಾರದವರು ರಶಿಯರಿಗೆ ತಿಳಿಸಿ, ಕೊಲೆಗಡಕನಿಗೆ ಸಂಬಂಧವಿದ್ದವರನ್ನು ಹಿಡಿಯ ಹತ್ತಿದ್ದಾರೆ. ಇವರಲ್ಲಿ ಝಾರಶಾಹಿಯ ಹಾಗು ರ್‍ಯಾಂಗಲನ ಅಭಿಮಾನಿಗಳೂ ಇದ್ದಾರೆ. ಕೊಲೆಗಡಕನ ಪರಿಯಿಂದ ವಕೀಲಿ ಕೊಡಬೇಕಾಗಿದೆ. ಫಂಡು ಕೊಡಿರೆಂದು ಪ್ರಸಿದ್ಧ ಮಾಡಿದ ವರ್ತಮಾನ ಪತ್ರಕಾರರನ್ನೂ ದಸ್ತಗಿರ ಮಾಡಿದ್ದಾರೆ.

ಈ ಕೊಲೆಯ ವಿರುದ್ಧ ರಶಿಯಾ ರಾಜ್ಯದ ತುಂಬ ಅದ್ಭುತವಾದ ಚಳವಳಿ ನಡೆದಿದೆ. ಕೊಲೆಯ ಸಂಬಂಧವನ್ನು ಇಂಗ್ಲಿಷರ ತನಕ ಹೈದು ದ್ವೇಷವನ್ನು ವ್ಯಕ್ತ ಪಡಿಸುತ್ತಿದ್ದಾರೆ. ಮಾಸ್ಕೋ ಪಟ್ಟಣದಲ್ಲಿ ಇಂಗ್ಲಿಷರ ವಿರುದ್ಧ ಆದ ಚಳವಳಿಯಲ್ಲಿ ಲಕ್ಷಾವಧಿ ಜನರಿದ್ದರು. ರಾಯಭಾರಿಯ ಕೊಲೆಗೂ ಇಂಗ್ಲಿಷರು ರಶಿಯರಿಗೆ ಕೊಟ್ಟ ಎದ್ದಲಗಾಟಕ್ಕೂ ಸಂಬಂಧವಿರುತ್ತದೆಂಬ ಠರಾವನ್ನು ಪ್ರತಿಯೊಂದು ದೊಡ್ಡ ಊರಲ್ಲಿ ಮಾಡಿದ್ದಾರೆ.

ಸಂಚುಗಾರರಾದ ಇಪ್ಪತ್ತು ಜನ ರಶಿಯರಿಗೆ ಗಲ್ಲು!!!

ರಶಿಯಾದ ಬೋಲ್ಶೆವಿಕ ಸರಕಾರದವರು ತಮ್ಮ ವಿರುದ್ಧ ಚಳವಳಿ ಮಾಡುತ್ತಿದ್ದಂಥ ಮತ್ತು ಇಂಗ್ಲಿಷ ಸರಕಾರಕ್ಕೆ ಸಹಾಯ ಮಾಡುತ್ತಿದ್ದಂಥ ಇಪ್ಪತ್ತು ಜನರನ್ನು ಹಿಡಿದು, ಲಷ್ಕರೀ ಕಾಯದೆಯಿಂದ ಅವರನ್ನು ಗಲ್ಲಿಗೆ ಹಾಕಿದರು. ಗಲ್ಲಿಗೆ ಹೋದವರಲ್ಲಿ ಒಬ್ಬನು ದೇಶಾಂತರಕ್ಕೆ ಹೋಗಿದ್ದನು, ಬೋಲ್ಶೆವಿಕ ಸರಕಾರದ ಅಪ್ಪಣೆಯಿಲ್ಲದೆ ರೋಮಾನಿಯಾದ ಮಾರ್ಗವಾಗಿ ರಶಿಯಾಕ್ಕೆ ಬಂದನು. ರಶಿಯರ ಡೆಲಿಗೇಟನು ಜಿನೆವ್ಹಾದ ಪರಿಷತ್ತಿಗೆ ಹೋಗುವಾಗ ಆತನ ಜೀವದ ಮೇಲೆ ಸಂಕಟ ತರುವದಕ್ಕಾಗಿ ಇಂಗ್ಲಿಷ ಸಂಚುಗಾರರಿಗೆ ಸಹಾಯ ಮಾಡಿದಂಥ ಮತ್ತು ಇರಾಣದಲ್ಲಿ ಇಂಗ್ಲಿಷರ ವಕೀಲತಿಯಲ್ಲಿ ಕೆಲಸ ಹಿಡಿದು, ರಶಿಯಾದ ದ್ರೋಹಿಯು ಸ್ಮಿರ್ನೊವನು, ಝಾರಶಾಹಿಯಲ್ಲಿ ಪರದೇಶದಲ್ಲಿ ವಕೀಲನಾಗಿದ್ದವನು, ಗ್ರ್ಯಾಂಡ ಡ್ಯೂಕ ನಿಕೋಲಸನಿಗಾಗಿ ಕೆಲಸ ಮಾಡುತ್ತಿದ್ದವನು ಮತ್ತು ರಾಜಪಕ್ಷೀಯರಾದ ಬೇರೆ ಜನರು ಗಲ್ಲಿಗೆ ಹೋದವರಾಗಿದ್ದಾರೆ. ರಶಿಯರಿಗೆ ಗುಪ್ತ ಕಾಗದ ಪತ್ರಗಳನ್ನು ಕೊಟ್ಟರೆಂದು ಇಂಗ್ಲಿಷರು ತಮ್ಮವರಿಗೆ ಶಿಕ್ಷೆ ಕೊಟ್ಟರೆ- ರಶಿಯರು ತಮ್ಮ ದ್ರೋಹಿಗಳ ಜೀವವನ್ನೇ ತಕ್ಕೊಂಡರು.

ಉಪಚಾರಕರಾದ ಶಿಕ್ಷಕರು-

ಸರಕಾರದವರು ಪ್ರಾಥಮಿಕ ಶಾಲೆಗಳ ಕೆಲ ಶಿಕ್ಷಕರನ್ನು ಅಸ್ಪತ್ರೆಗೆ ಕಳಿಸಿ, ಅವರಿಗೆ ವೈದ್ಯಕಿಯ ಜ್ಞಾನವನ್ನು ಒಂದು ವರ್ಷದ ಮಟ್ಟಿಗೆ ಮಾಡಿಕೊಟ್ಟದ್ದು, ಶಾಲಾ ಖಾತೆಯ ಶಿಕ್ಷಕರಿಗೆ ಗೊತ್ತುಂಟು. ಇವರು ಕಲಿತು ಹೋದ ಮೇಲೆ ಇವರು ಒಂದು ವರ್ಷದಲ್ಲಿ ಮಾಡಿದ ಕೆಲಸದ ವರದಿಯನ್ನು ವೈದ್ಯಕಿ ಖಾತೆಯವರು ಪ್ರಸಿದ್ಧ ಮಾಡಿದ್ದಾರೆ. ಪುಣೆ, ಸೊಲ್ಲಾಪೂರ, ವಿಜಾಪೂರ ಮತ್ತು ಧಾರವಾಡ ಜಿಲ್ಲೆಯಲ್ಲಿ ಈ ಶಿಕ್ಷಕರು ಅನುಕ್ರಮವಾಗಿ ೩೨೯೯೩, ೫೪೭೯೯, ೧೯೯೭೩ ಮತ್ತು ೨೩೦೭೭ ಜನ ರೋಗಿಗಳಿಗೆ ಔಷಧ ಕೊಟ್ಟದ್ದಲ್ಲದೆ, ಫಸ್ಟ್ ಏಡಿನಂತೆ ಗಾಯವಾದವರ ಆರೈಕೆ ಮಾಡಿದ್ದಾರೆ. ಧಾರವಾಡ ಮತ್ತು ವಿಜಾಪೂರದ ಶಿಕ್ಷಕರು ಮಾಡಿದ ಕೆಲಸದ ಪರೀಕ್ಷಣೆಯನ್ನು ವಿಜಾಪೂರದ ಸಿವ್ಹಿಲ ಸರ್ಜನರು ಲಕ್ಷ್ಯಪೂರ್ವಕ ಮಾಡಿ, ಇವರ ಪ್ರಶಂಸೆ ಮಾಡಿ, ಇವರಿಂದ ಬಡಬರಿಗೆ ಬಹಳ ಉಪಯೋಗವಾಗಿರುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯದ ಪ್ರಕಾರ ಸರಕಾರದವರು ಹೆಚ್ಚಿಗೆ ಜನ ಉಪಚಾರಕರನ್ನು ಸಿದ್ಧ ಮಾಡುವ ಆಲೋಚನೆಯಲ್ಲಿದ್ದಾರೆ.

ಬ್ರಾಹ್ಮಣರಿಗೆ ವ್ಯವಸಾಯ-

ವಿಲಾಯತಿಯ ವೆಂಬಲೆ ಮತ್ತು ಅಮೇರಿಕೆಯ ಫಿಲಡೆಲ್ಫಿಯಾದ ಪ್ರದರ್ಶನಕ್ಕೆ ಹೋಗಿದ್ದ ಪುಣೆಯ ಬಿ. ಭಾವೆಯವರು ಮರಳಿ ಪುಣೆಗೆ ಬಂದರು ಇವರನ್ನು ಗೌರವಿಸುವದಕ್ಕಾಗಿ ಪುಣೆಯಲ್ಲಿ ಸಭೆ ಕೂಡಿತ್ತು. ಈ ಸಮಯದಲ್ಲಿ ಶ್ರೀ. ಭಾವೆಯವರು- "ಬ್ರಾಹ್ಮಣರು ಸರಕಾರೀ ಕೆಲಸವೆಂದು ಮೂರಿ ಹಿಡಿದು ಕೂಡ್ರದೆ, ಉದ್ಯೋಗ ವ್ಯವಸಾಯಗಳಲ್ಲಿ ತೊಡಗಬೇಕೆಂದು ಸುಶಿಕ್ಷಿತರು ಕೈಕೊಳ್ಳುವ ನವೀನವಾದ ವ್ಯವಸಾಯಗಳಿಂದ ಲಾಭವಾಗಿ, ಹಿಂದುಸ್ಥಾನದ ವ್ಯಾಪಾರವು ದಿಗ್ಮಂಡಲವನ್ನು ವ್ಯಾಪಿಸುವದೆಂದು"- ಭಾಷಣ ಮಾಡಿದ್ದಾರೆ. ಬ್ರಾಹ್ಮಣೇತರರು ವಿರೋಧ ಭಕ್ತಿಯಿಂದ ಬ್ರಾಹ್ಮಣರಿಗೆ ಈ ಹಾದಿಯನ್ನು ತೋರಿಸಿ ಕೊಟ್ಟದ್ದಾರೆ.

ಜರ್ಮನಳ ಕೂಡ ವಿವಾಹ-

ತ್ರಾವಣಕೋರದ ಒಬ್ಬ ಪ್ರೊಫೇಸರರು ಜರ್ಮನ ಯುವತಿಯ ಕೂಡ ಮದಿವೆಯಾದ ವರ್ತಮಾನವನ್ನು ಈ ಮೊದಲು ಬರೆದಿದ್ದೇವೆ. ಕಲಕತ್ತೆಯ ಓರ್ವ ವರ್ತಕರಾದ ಲಕ್ಷ್ಮಿನಾರಾಯಣರೆಂಬವರು ಜರ್ಮನ ಕನ್ನಿಕೆಯನ್ನು ಶುದ್ಧ ಮಾಡಿ, ಅವಳಿಗೆ ಹಿಂದೂ ಧರ್ಮ ದೀಕ್ಷೆ ಕೊಟ್ಟು ಆಕೆಯನ್ನು ಮದಿವೆ ಮಾಡಿಕೊಂಡರು. ಜರ್ಮನ ಕನ್ನಿಕೆಯು ತಿಲಕ ಕುಮಾರಿದೇವಿ ಎಂಬ ಅತ್ತೆಯ ಮನೆಯ ಹೆಸರಿಟ್ಟುಕೊಂಡಿದ್ದಾಳೆ.

ಮಳೆಗಾಲ-

ಕೊಲಂಬೋದಲ್ಲಿ ಜಡಿಮಳೆಗೆ ಪ್ರಾರಂಭವಾಗಿ ಒಂದು ವಾರದ ನಂತರ ಮುಂಬಯಿಯಲ್ಲಿ ಮಳೆಗಾಲ ಪ್ರಾರಂಭವಾಗುವದು. ಕೊಲೊಂಬೋದಲ್ಲಿಯೇ ಇನ್ನೂ ಮಳೆ ಪ್ರಾರಂಭವಾಗಿಲ್ಲ. ಆದ್ದರಿಂದ ಮೃಗ ಮಳೆಯು ಆಗುವ ಲಕ್ಷಣವಿಲ್ಲ. ಈ ಪ್ರಾಂತದಲ್ಲಿ ಮಳೆಯ ಲಕ್ಷಣವಿಲ್ಲವೇ ಇಲ್ಲ. ಮುಂಜಾನೆ ಗೊಡ್ಡ ಮೋಡ ಹಾಕುವದು. ಈ ಮೋಡವು ಬಿಸಿಲು ಏರಿದಂತೆ ಹರಿದು ಹೋಗುವದು. ಮೃಗ ಪ್ರವೇಶವು ಉರಿಯುವ ಬಿಸಿಲಿನಲ್ಲಾಯಿತು. ಅಂತ್ಯವೂ ಹಾಗೇ ಆಗುವಂತೆ ತೋರುತ್ತದೆ.

ವಿವಿಧ ವರ್ತಮಾನ.

ದಬ್ಬಾಳಿಕೆಯಿಂದ ಹಿಡಿದಂಥ ಬಂಗಾಲಿಗಳನ್ನು ಬಂಧಮುಕ್ತ ಮಾಡಿಸುವದಕ್ಕಾಗಿ ವಿಲಾಯತಿಯ ಸಿಗರೇಟ ಮತ್ತು ಸಕ್ಕರೆಗೆ ಬಹಿಷ್ಕಾರ ಹಾಕಬೇಕೆಂದು ಖುಲ್ನಾದಲ್ಲಿ ಕೂಡಿದ ಜಿಲ್ಲಾ ಪರಿಷತ್ತಿನವರು ಠರಾವು ಮಾಡಿದ್ದಾರೆ. ವಿಲಾಯತಿಯ ಬಟ್ಟೆ ಏಕೆ ಬೇಡ ?

ಮುಂಬಯಿಯಲ್ಲಿ ಮೋಟಾರದಿಂದ ದರೋಡೆ ಮಾಡಿದ ನಾಲ್ವರನ್ನು ಹಿಡಿದಿದ್ದಾರೆ. ಆಶ್ಚರ್ಯವೆಂದರೆ- ದರೋಡೆಗಾರರಲ್ಲಿ ಒಬ್ಬ ಪೋಲೀಸ ಸಿಪಾಯಿಯು ಇದ್ದಾನೆ!!

ಸಾರ್ವಜನಿಕ ಶಾಂತತೆಭಂಗವಾಗುವಂಥ ಮತ್ತು ಜಾತಿಜಾತಿಗಳಲ್ಲಿ ದ್ವೇಷ ಹೇಳುವಂಥ ಲೇಖಗಳನ್ನು ಬರೆದ ಬಗ್ಗೆ ಬಂಗಾಲ ಸರಕಾರದವರು ಒಂದು ವರ್ಷದಲ್ಲಿ ೮೩ ವರ್ತಮಾನಪತ್ರಕಾರರ ಮೇಲೆ ಖಟ್ಲೆ ಮಾಡಿದರು.

ಪೇಶಾವರದ ವಾಯುವ್ಯ ಸರಹದ್ದಿನಲ್ಲಿ ಒಬ್ಬ ಫಕೀರನು ಇಂಗ್ಲಿಷ ಸರಕಾರದ ವಿರುದ್ಧ ಜಹಾದ ಸಾರಿ ಕೆಲ ಜನರನ್ನು ಕೂಡಿಸಿಕೊಂಡು ದಾಳೇ ಎಬ್ಬಿಸಿದನು. ಇಂಗ್ಲಿಷ ಸೈನಿಕರು ಇವರ ಮೇಲೆ ಬಾಂಬು ಚಲ್ಲಿ ಇವರನ್ನು ದಸಗೇಡು ಮಾಡಿ, ದಾಳಿಯು ಧ್ವಂಸಮಾಡಿದರು.

ಕನ್ನಡ ಕೋಗಿಲೆ.

(ಲೇಖಕ ಮುದ್ದಿವಾಳೇಶ್ವರ ಸುತ ಕುರಗುಂದ)

ಭಾಮಿನಿ॥

(ಕೋಕಿಲಾಷ್ಟಕ)

ಎಲೆಲೆ! ಕನ್ನಡ ಸರಸ ಕೋಗಿಲೆ ,
ನಲಿದು ಮಾಡುವ ನಿಂನ ಗಾನವ |
ನಲಿ! ಕೇಳಲು ಚಿತ್ತವೆಂಬುದು ಹರುಷ ಶರಧಿ
ಯಲಿ ||
ಮುಳುಗಿ ತಾ ತಲ್ಲೀನವಾಯಿತು |
ಭಲರೆ! ಭಲರೇ! ಇಂದುಗೊರಳನೆ! |
ಲಲಿತ ಸ್ವರವನು ಮಾಡು ಮಾಡೆಲೊ! ನೀನ್
ಮುದದಿಂದ || ೧ ||

ಅಂದ ಕೋಗಿಲೆ! ಮಂದಹಾಸದಿ |
ಒಂದು ಬೇಗನೆ ಪಾಡು ಪಾಡೆಲೊ |
ಚಂದ ಗಾನವ ಕೇಳಿ ನನಗಾನಂದವೆಂಬುವದು ||
ಕುಂದುದೇಗಲೆ ತಿರುವುದು |
ಬಂಧು ಭಗಿನೀ ವೃಂದನೆಲ್ಲರ |
ದುಂದುಗೊಳಿಸಿದೆ! ಅಹಹ! ನಿನ್ನಯ ಗಾನರವ
ದಿಂದ || ೨ ||

ಮುದ್ದು ಕೋಗಿಲೆ ಮಧುರ ಕಂಠದಿ |
ಶುದ್ಧ ಕನ್ನಡ ಶ್ರೇಷ್ಠವೆನ್ನುತ |
ಶ್ರದ್ಧೆಯಿಂದಲೆ ಕೂಗು ಕೂಗೆಲೊ! ಗಂಡುಗೋ
ಗಿಲೆಯೇ! ||
ತಿದ್ದು ತಿದ್ದೆಲೊ ಸಕಲ ಜನಗಳ |
ಮುದ್ದುಲಿಯು ರವದಲ್ಲಿ ಪಾಡುವ |
ಬದ್ಧಮನುಜರು ನಿನ್ನ ಪಾಸಟೆಯಾಗ ಬಲ್ಲಿದರೇ
|| ೩ ||

ಎನ್ನ ನಲ್ಮೆಯ ಪೆಣ್ಣು ಕೋಗಿಲೆ |
ನಿನ್ನ ಮಂಜುಲ ಮಧುರ ಕಂಠದಿ |
ನಿನ್ನ ಗನ್ನಡ ನುಡಿಯುತಾನದು ಪೆಚ್ಚು ಪೆಚ್ಚೆಂದು||
ಉನ್ನತೋನ್ನತ ಗಾನಮಾಡುತ |
ಚನ್ನ ರನ್ನಳೆ! ಮಾನ್ಯಧನ್ಯಳೆ! |
ನನ್ನತೊಂಗಿಯೆ! ಉಲಿಯು ಉಲಿಯಾ! ಪ್ರೇಮಭ
ರದಿಂದ || ೪ ||

ಗಾನಲೋಲಳೆ ಪಾಡು ಪಾಡಾ |
ಮಾನಪಂತಿಕೆ ಉಲಿಯು ಉಲಿಯಾ |
ನಾನುರಾಗದಿ ಕೂಗು ಕೂಗಾ ನೀನು ಭರದಿಂದ ||
ನಾನು ತಾನೆಂಬುವದ ಬಿಸುಡುತ |
ಜ್ಞಾನ ಮೂರ್ತಿಯ ಪಾದಪದ್ಮವ |
ಧ್ಯಾನ ಮಾಡುತ ಮೌನಿಯಂದದಿ ಕುಳಿತು ಕೇ
ಳುವೆನು || ೫ ||

ರಸಗನ್ನಡ ಪರಮ ಕೋಕಿಲೆ |
ರುತ-ಸಿಂಜನಯ ಸರಲಕೊರಲಿಂ |
ದದಿಪೇಳಾ ರನ್ನಗನ್ನಡ ಶ್ರೇಷ್ಠವೆಂದೆನುತ ||
ಇಧೆ ಜವುದಿಂಧೂದರ! ಬಿದರಾ |
ಪರರ ಭಾಷೆಗೆ ಮೋಹಗೊಳ್ಳುತ |
ಮರುಳರಾಗುತ ದುಃಖ ಪಡುತಿಹ ನಿನ್ನ ಮಕ್ಕ
ಳಿಗೇ || ೬ ||

ತಿಳಿಯ ಕನ್ನಡ ಬರಹ ಕಲಿಯಿರಿ |
ತಿಳಿಯ ಕನ್ನಡ ನುಡಿಯ ನಡಿಯಿರಿ |
ತಿಳಿಯ ಕನ್ನಡದಿಂದ ಬರೆಯಿರಿಲೆಕ್ಕಪತ್ರವನು ||
ತಿಳಿಯ ಕನ್ನಡ ಪತ್ರ ತರಿಸಿರಿ |
ತಿಳಿಯ ಕನ್ನಡ ಕವಿತೆಯೋದಿರಿ |
ತಿಳಿದು ನೋಡಿರಿ ಎಮಗ ಭರದಿಂ ಸೌಖ್ಯದೊರೆ
ಯುವದ್ಕೆ || ೭ ||

ಎನ್ನ ಕನ್ನಡ ಸರಸ ಕೋಗಿಲೆ |
ನನ್ನಿಯಿಂದಲಿ ಪೇಳುತಿರುತಿಹ |
ಗನ್ನನುಡಿಯನು ಭರದಿ ಕೇಳುತ ಭಗಿನಿ ಬಾಂಧವರೇ ||
ಇನ್ನು ಬಿಡದಲೆ ನೀವು ಮಾಡಿರಿ |
ರನ್ನಗನ್ನಡ ಪರಮ ಸೇವೆಯ |
ಚನ್ನಶಂಕರ ಕರುಣೆಯಿಂದಲಿ ಸೌಖ್ಯದೊರೆಯು
ವದು || ೮ ||

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.
೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಗಿರುವದು.
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಜಾಡ್ಯದ ರೋಗ
ಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ನ ಚಹಾ ಮತ್ತು ಕಾಫೀ ಸೋವಿ ದರದಿಂದ ಸಿಗುವದಲ್ಲದೆ, ಕೋರಾ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ “ ಉತ್ತಮ ” ಅನಿಸಿದರೆ ತೆಗೆದುಕೊಳ್ಳಬಹುದು. ನಮ್ಮ ಕಡೆ ಊರಲ್ಲಿ ಎಲ್ಲ ತರದ ಚಹಾ ಸಾಲಿಯ ಕಡೆಗೆ ಪಸಾರವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಟಪಾಲದ ಪೂರ್ವಕ ನಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ
ಮತ್ತು
ಜನಾರ್ದನ ರಾಮಚಂದ್ರರಾವ ಟಿಕಾರೆ,
ವ್ಯಾಪಾರಿಗಳು ಜವಳಿ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ವಿಜಯದ ವರ್ಗಣೀ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ		೧೨—೮—೦ ರೂ
೬	,,	೬—೦—೦ ರೂ
೪	,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿಹೊಸ ವರ್ಷ ಪ್ರಾರಂಭವಾ ಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಬಾಲಾಚಾರ್ಯ ಬಳೀಹಾಳ ರ್ F ಹೂನಾಳ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾ ಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮। ಧಾರವಾಡ ಬುಧವಾರ ತಾರೀಖು ೧೫ ನೇ ಜೂನ ೧೯೩೨ । ಸಂಚಿಕೆ ೧೩೫

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಕಾಲು ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಹು ಹಗುರಾಗಿ ಒಯುತ್ತದೆ. ಗಾಡಿಕ್ಕೆ ನೀರಿನ ಚೂರ ತೆಯು ಎಲ್ಲಿ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೪೫॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಗಾಡಿಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—o—

ತಿಂಗಳು ಕಾಲಮಿನ ಪಟ್ಟು ಪತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಣಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ್ಲಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಭಂಡವಾಳ ಐದು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಕಾಯಿಮಮುತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ ರಿಂದ ತಿಳಕೊಳ್ಳಬೇಕು.

ವಾಮನ ವಸಂತ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿ ಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೀ ಇ ಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ರ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಮನೆಯು ಮಾರಾಟ.

—(೦)—

ಧಾರವಾಡ ಹಾಲಗೆರೆಯ ಕೆಳಗಿನ ಬೀದಿಯ ಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೪೮ನೆಯ ಮನೆ ಶ್ರೀ. ಸೌ॥ ಗಂಗಾಬಾಯಿ ಕೌಲಗಿ ಇವರ ಹೆಸರಿನ ಲ್ಲಿರುವದನ್ನು ಮಾರತಕ್ಕದ್ದಿದೆ. ಮನೆಯು ದೊಡ್ಡ ಕುಟುಂಬದವರಿಗೆ ಇರುವದಕ್ಕೆ ಎಲ್ಲ ಸೋಯಿಗಳ ಳ್ಳದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾ ಹಿತಿಯ ಬಗ್ಗೆ ಕೆಳಗೆ ಸಹಿ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ.
c/o ಬಿ. ಆರ. ಕೌಲಗಿ.
ಮೋತಿತಲಾವಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ-೧೫-೬-೨೭ ನೇ ಇಸ್ವಿ

ಶಾಳಾಖಾತೆಯ ಕಾರಕೂನರ ಹೊಟ್ಟೆಯ ಮೇಲೆ ಕಾಲು ಬಂತು.

ಧಾರವಾಡದ ಟ್ರೇನಿಂಗ ಕಾಲೇಜದ ಕೂಡ ಟ್ರೇನಿಂಗ ಸ್ಕೂಲು ಹೋದ ಅನಿಷ್ಟ ವರ್ತಮಾನದಲ್ಲಿ ದಕ್ಷಿಣ ಭಾಗದ ಶಾಳಾಖಾತೆಯಲ್ಲಿರುವ ಎಲ್ಲ ಕಾರಕೂನರ ಮೇಲೆ ಅರಿಷ್ಟ ಬಂದ ಸುದ್ದಿಯನ್ನು ಬರೆಯುವದಕ್ಕೆ ಅತ್ಯಂತವಾಗಿ ವಿಷಾದಿಸುತ್ತೇವೆ. ಮೊನ್ನೆ ೧೩ನೆಯ ತಾರೀಖು ಮಧ್ಯಾಹ್ನದ ತನಕ ತಮ್ಮ ಹೊಟ್ಟೆಯ ಮೇಲೆ ಕಾಲು ಬಂದು, ಇರಿವೆಯ ಹುತ್ತಿಗೆ ಬೆಂಕಿ ಹತ್ತುವಂಥ ದುರ್ಧರ ಪ್ರಸಂಗ ಬರುವದೆಂದು ಯಾವ ಕಾರಕೂನನೂ ಸ್ವಪ್ನದಲ್ಲಿ ಸಹ ಊಹಿಸಿದ್ದಿಲ್ಲ. ಎಜ್ಯುಕೇಶನಲ ಇನ್ಸಪೇಕ್ಟರರಾದ ಮಿ. ಸದರಲ್ಯಾಂಗಿಣಿಯವರು ಒಂದು ಸರಕ್ಯುಲರ ತೆಗೆದು ಕಾರಕೂನರೆಲ್ಲರನ್ನೂ ಗಾಬರಿಗೊಳಿಸಿ ಬಿಟ್ಟಿದ್ದಾರೆ. ಸರಕ್ಯುಲರವು ಮುಂದೆ ಕೊಟ್ಟಂತಿರುತ್ತದೆ:—

"Please give a warnig immediately to all the clerks and menials serving under you that they are liable to be discharged from service with effect from 1st July 1927.

೧ನೆಯ ಜುಲೈ ೧೯೨೭ನೆಯ ಇಸವಿಯಿಂದ ನಿಮ್ಮ ಕೈ ಕೆಳಗಿನ ಕಾರಕೂನರಿಗೆ ಮತ್ತು ಆಳುಗಳಿಗೆ ಕೆಲಸದಿಂದ ನಿವೃತ್ತ ಮಾಡಲಾದೀತೆಂಬ ತಾಕೀದಿಯನ್ನು ಈ ಕ್ಷಣವೇ ದಯವಿಟ್ಟು ತಿಳಿಸಿರಿ"

ಹಾಯಸ್ಕೂಲುಗಳ ಹೆಡ್ಡ ಮಾಸ್ತರರು, ಫೀಮೇಲ ಟ್ರೇನಿಂಗ ಸ್ಕೂಲಿನ ಲೇಡಿ ಸುಪರಿಂಟೆಂಡೆಂಟರು, ಉರ್ದು ಹಾಯಸ್ಕೂಲಿನ ಹೆಡ್ಡ ಮಾಸ್ತರರು ಡಿಪುಟಿಯವರು, ಲೋಕಲಬೋರ್ಡಿನ ಅ್ಯಡಮಿನಿಸ್ಟ್ರೇಟರು ಇವರೆಲ್ಲರಿಗೂ ಸಾಹೇಬರು ಪತ್ರ ಬರೆದಿದ್ದಾರೆ. ಈ ಭಾಗದಲ್ಲಿ ಒಟ್ಟು ೫೦ ಜನ ಕಾರಕೂನರಿದ್ದು ಇವರೆಲ್ಲರಿಗೂ ಒಂದೇ ಹದಿನೈದು ದಿವಸಗಳಲ್ಲಿ ಮನೆಗೆ ಹೋಗುವ ಹೊತ್ತು ಬಂದ ವರ್ತಮಾನ ಕೇಳಿ, ಎಂಥ ವ್ಯಂಗರಾದರೂ ದುಃಖಿಸದಿರಲಿಕ್ಕಿಲ್ಲವೆಂದು...

ಈ ಖಾತೆಯಲ್ಲಿ ಕೆಲಸ ಮಾಡುವಂಥವರು ಇಂದಿನವರಲ್ಲ; ನಿನ್ನೆಯವರಲ್ಲ. ೨೫ ವರ್ಷಗಳಿಂದಲೂ ಕೆಲಸ ಮಾಡುತ್ತಾ, ಫರ್ಲೋ ಪೆನಶನದ ಮಾರ್ಗ ನೋಡುವಂಥವರಾಗಿದ್ದಾರೆ. ಹತ್ತು ವರ್ಷದೊಳಗಿನ ಜನರು ತೀರ ಕಡಿಮೆ ಇದ್ದು, ಇದೇ ಖಾತೆಯಲ್ಲಿ ದೇಹ ಸವಿಸಿ, ಗಡ್ಡ ಬೆಳ್ಳಗಾದವರೇ ಬಹಳ. ಎಲ್ಲಿ ಹೋಗಬೇಕು? ಹೇಗೆ ಉಪಜೀವನ ಮಾಡಿಕೊಳ್ಳಬೇಕೆಂಬ ಹೃದ್ರೋಗವು ಇವರಿಗೆ ಹತ್ತುವದು ಸಹಜವಾದದ್ದು. ಪ್ರಾಥಮಿಕ ಶಾಲೆಗಳನ್ನು ಲೋಕಲಬೋರ್ಡಿಗೆ ಕೊಟ್ಟಾಗ ಈ ಕಾರಕೂನರಿಗೆ ಮನೆಗೆ ಹೋಗಬೇಕಾದೀತೆಂದು ಹೇಳಲಿಲ್ಲ. ೧೯೨೫ನೆಯ ಇಸವಿಯಲ್ಲಿ ಒಂದು ಸರಕ್ಯುಲರ ತೆಗೆದು, ವರ್ಗ ಮಾಡಿದಲ್ಲಿಗೆ ಹೋಗಬೇಕಾದೀತೆಂದು ತಿಳಿಸಿದ್ದರು. ಆದರೆ ಈಗ ತಮ್ಮ ಮಾತಿನಲ್ಲಿ ಕಾವೇ ಇಲ್ಲದವರಾಗಿ ಒಮ್ಮಿಂದೊಮ್ಮೆ ಮನೆಗೆ ಹೋಗಿರೆಂದು ಹೇಳುವ ಸರಕ್ಯುಲರ ತೆಗೆಯುವದು ತೀರ ಅನುಚಿತವಾಗುತ್ತದೆ.

ಪ್ರಾಥಮಿಕ ಶಾಲೆಗಳನ್ನು ಲೋಕಲಬೋರ್ಡಿಗೆ ಕೊಡುವಾಗ- ಬೋರ್ಡಿನವರು ಇದೇ ಕಾರಕೂನ, ಇದೇ ಅ್ಯಡಮಿನಿಸ್ಟ್ರೇಟರರ ಮತ್ತು ಇದೇ ಸುಪರವಾಯಜರರನ್ನು ಇಟ್ಟುಕೊಳ್ಳುವರೆಂದು ವಿದ್ಯಾಖಾತೆಯವರು ನಂಬಿದ್ದರು. ಆದರೆ ಅವರ ಊಹೆಗೆ ತೀರ ವಿರುದ್ಧ ಕೃತ್ಯ ಸಂಭವಿಸಿತು. ಈ ಪ್ರಕಾರ ನಡೆದರೂ ಸುಪರವಾಯಜರರಾಗಿರುವಂಥ ಆಸಿಸ್ಟಂಟ ಡಿಪುಟಿಯವರಿಗೆ ಹಾಯಸ್ಕೂಲುಗಳಲ್ಲಿ ಕೆಲಸ ಕೊಟ್ಟು, ಅವರ ಯೋಗಕ್ಷೇಮ ನೋಡುವರು. ಇವರಿಗೆ ಮನೆಗೆ ಹೋಗಿರೆಂಬ ನೋಟೀಸು ಇರುವದಿಲ್ಲ. ಇಂದಿಲ್ಲ ನಾಳೆ ಇವರಿಗೆ ಸ್ಥಳ ಮಾಡಬೇಕಾದೀತೆಂಬ ಮುಂದಣ ವಿಚಾರ ಹುಟ್ಟಿದಂತೆ ಕಾರಕೂನರ ಪೆಸೆಯಿಂದ ಹುಟ್ಟಲಿಲ್ಲವಲ್ಲ!! ಹಾಯಸ್ಕೂಲಿನಲ್ಲಿ ಅನೇಕ ಜನ ಗ್ರ್ಯಾಜುಯೇಟರು ಆರೇಳು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ, ಅವರು ಹಂಗಾಮಿಯಾಗಿದ್ದಾರೆ. ಸುಪರವಾಯಜರರು ಇಲ್ಲಿಗೆ ಬಂದ ಕೂಡಲೆ ಇವರೂ ಮನೆಯ ದಾರಿ ಹಿಡಿಯಬೇಕಾಗುತ್ತದೆ. ಇದು ಗೊತ್ತಿದ್ದ ಸಂಗತಿಯು. ಆ ಪ್ರಕಾರ ಕಾರಕೂನರ ವಿಷಯವಲ್ಲ. ಕಾಯಮವಾದವರು; ಸ್ಕೇಲ ಪ್ರಕಾರ ಹತ್ತಾರು ವರ್ಷಗಳಿಂದ ಬಡತಿ ಹೊಂದುತ್ತಾ ಬಂದವರು. ಇಂಥವರಿಗೆ ಮನೆಗೆ ಹೋಗಲಿಕ್ಕೆ ಹೇಗೆ ಹೇಳಲಿಕ್ಕಾಗುತ್ತವೆಂಬುದು ಗೂಢವೇ ಸರಿ. ಸರಕಾರೀ ಕೆಲಸವೆಂದರೆ- ಕಾಯಮವಾದದ್ದು. ಪ್ರಾಮಾಣಿಕತನದಿಂದ ದುಡಿದರೆ- ಪೆನಶನ ದೊರೆತು ಮುಪ್ಪಿನಲ್ಲಿ ನಿಶ್ಚಿಂತೆಯಿಂದ ಕಾಲ ಕಳೆಯುವಂಥಾದ್ದೆಂದೇ ತಿಳಿದು, ಸರಕಾರೀ ಕೆಲಸದಲ್ಲಿ ಸೇರಲು ಜನರು ಹಾತೊರೆಯುವರು. ಪ್ರತ್ಯಕ್ಷದಲ್ಲಿ ಒಮ್ಮೆಲೆ ೫೫ ಜನರಿಗೆ ಹೊರಟ ಅಪ್ಪಣೆಯ ಚೀಟಿಯಿಂದ ಈ ವಿಶ್ವಾಸವು ಏಕೆ ಹಾರಬಾರದು? ತಪ್ಪು ಯಾರದು? ಕಾರಕೂನರದೋ? ವಿದ್ಯಾಖಾತೆಯವರದೋ? ತಮ್ಮ ತಪ್ಪಿಗಾಗಿ ಬಡಜನರ ಹೊಟ್ಟೆಯ ಮೇಲೆ ಕಾಲು ಕೊಡಬೇಕೆ? ಡಾಯರೆಕ್ಟರರೂ ಮಂತ್ರಿಗಳೂ ಕಡಿಮೆ ಶಾಂತತನದಿಂದ ವಿಚಾರ ಮಾಡುವಂಥ ಪ್ರಶ್ನವು.

ಸರಕಾರದವರು ವಿದ್ಯಾಖಾತೆಯನ್ನು ಮಂತ್ರಿಗಳಿಗೆ ಒಪ್ಪಿಸಿದಂತೆ ಬೇರೆ ಖಾತೆಗಳನ್ನೂ ಒಪ್ಪಿಸಿದ್ದಾರೆ. ಬೇರೆ ಖಾತೆಗಳಲ್ಲಿ ದುಡಿಯುವ ಕಾರಕೂನರು ಸಿಪಾಯಿ ಮುಂತಾದವರು ನಿಶ್ಚಿಂತೆಯಿಂದಿದ್ದಾರೆ. ಅವರಿಗೆ ಜುಲೈ ೧ ನೆಯ ತಾರೀಖಿನ ಭಯವಿರುವದಿಲ್ಲ. ಪ್ರತಿವರ್ಷ ಜುಲೈ ೧ ನೆಯ ತಾರೀಖು ಬಂದರೂ ಭಯವಿಲ್ಲ. ಏಕೆಂದರೆ- ಕೆಲಸ ಹೋಗುವ ಹೆದರಿಕೆಯಿಲ್ಲ. ಸರಕಾರದಿಂದ ಮಂತ್ರಿಗಳಿಗೆ ಒಪ್ಪಿಸಲ್ಪಟ್ಟಂಥ ಖಾತೆಗಳಲ್ಲಿ ವಿದ್ಯಾಖಾತೆಯು ಹೊರ್ತು ಮಿಕ್ಕ ಯಾವ ಖಾತೆಯವರಿಗೂ ಅಧಿಕಾರಿಗಳ ಒತ್ತಾಯದ ಮೂಲಕ ಕೆಲಸದಿಂದ ನಿವೃತ್ತರಾಗುವಂಥ ಕಠಿಣಕಾಲ ಬಂದೊದಗಿಲ್ಲ. ವಿದ್ಯಾಖಾತೆಯವರೇ ಮಾಡಿದ ಪಾಪವೇನು? ಎರಡು ವರ್ಷಗಳ ಹಿಂದೆ ಕಳಿಸಿದಲ್ಲಿಗೆ ಹೋಗಬೇಕೆಂದು ಹುಕುಮು ಮಾಡಿದಂತೆ, ಅವರನ್ನು ಇಂದು ಬೇಕಾದಲ್ಲಿಗೆ ಕಳಿಸಬಹುದು. ಹೋಗಲು ಸಿದ್ಧರಿದ್ದಾರೆ. ಹತ್ತತ್ತು ವರ್ಷ ದುಡಿದು, ಅನುಭವ ಪಡೆದವರಾಗಿರುವದರಿಂದ, ವಿದ್ಯಾಖಾತೆಯೇ ಏಕೆ ಯಾವದೊಂದು ಖಾತೆಯಲ್ಲಿಯೂ ಬೇಗನೆ ಅನುಭವ ಪಡೆದುಕೊಂಡು ಆ ಖಾತೆಗಳ ಕೆಲಸವನ್ನು ನಿರ್ವಿಘ್ನದಿಂದ ನಿರಾಯಾಸವಾಗಿ ಸಾಗಿಸಬಹುದು. ಆನೇಕ ಖಾತೆಗಳಲ್ಲಿ ಪ್ರತಿವರ್ಷ ಹೊಸ ಹೊಸ ಉಮೇದವಾರರನ್ನು ತಕ್ಕೊಳ್ಳುವರು. ಅವರಿಗೆ ಕಾಯಮ ಮಾಡುವರು. ವಿದ್ಯಾಖಾತೆಯಲ್ಲಿ ತೆರವಾಗುವಂಥ ಕಾರಕೂನರಿಗೆ ನೌಕರಿಯಾಗುವ ತನಕ, ಬೇರೆ ಖಾತೆಗಳಲ್ಲಿ ಹೊಸದಾಗಿ ಉಮೇದವಾರರನ್ನು ತಕ್ಕೊಳ್ಳುವದನ್ನು ಬಂದು ಮಾಡಿದರೆ- ಸಾಕು. ಇವರೆಲ್ಲರ ನೌಕರಿಯಾಗುತ್ತದೆ. ಮಂತ್ರಿತ್ರಯರು ಕಮಿಟಿ ಕೂಡಿ, ತಂತಮ್ಮೊಳಗೆ ಸಹಜವಾಗಿ ಇಷ್ಟು ಮಾಡಿಕೊಳ್ಳುವಂತಿದೆ. ಶ್ರಮವಿಲ್ಲದೇ ಆಗುವಂಥ ವ್ಯವಸ್ಥೆಗಾಗಿ ಏಕೆ ಅಪಕೀರ್ತಿ ಹೊಂದುವದು?

ಆಳುಗಳ ವಿಷಯವು ದೊಡ್ಡದಲ್ಲ. ಅವರನ್ನು ಎಲ್ಲಾದರೂ ಸೇರಿಸಬಹುದು. ಸಂಬಳ ಕಡಿಮೆಯಾದ್ದರಿಂದ ಹೆಚ್ಚಿನ ಬಾಬು ಮುಂದೆ ಬರಲಿಕ್ಕಿಲ್ಲದು. ಕಾರಕೂನರಂತೆಯೇ ಇವರ ಹಿತ ನೋಡಬೇಕಾದ್ದು ತೀರ ಅವಶ್ಯಕ.

ರಶಿಯರು ಪೋಲಂಡಕ್ಕೆ ಬರೆದ ಪತ್ರ.

—೦—

ಬೇಗೆ ಹತ್ತುವ ಲಕ್ಷಣ.

ವಾರಸಾ ಪಟ್ಟಣದ ಸ್ಟೇಶನದಲ್ಲಾದ ರಶಿಯಾದ ರಾಯಭಾರಿಯ ಕೊಲೆಯಲ್ಲಿ ಸರಕಾರದ ಸಂಬಂಧವಿಲ್ಲೆಂದೂ, ಇದು ವ್ಯಕ್ತಿಯ ಕೃತ್ಯವೆಂದೂ ಪೋಲಂಡದವರು ರಶಿಯಾಕ್ಕೆ ಬರೆದ ಪತ್ರದಿಂದ ರಶಿಯಾ ಸರಕಾರದ ಸಮಾಧಾನವಾಗಿಲ್ಲ. ಇವರು ಪೋಲಂಡಕ್ಕೆ ಕೆಳಗಿನ ಶರ್ತುಗಳ ಪತ್ರ ಬರೆದಿದ್ದಾರೆ.

೧ ಪೋಲಂಡವು ಈ ಕೊಲೆಗೆ ಸಂಬಂಧವಿದ್ದಂಥವರ ತಪಾಸಣೆ ಮಾಡಿ, ಅವರಿಗೆ ಯೋಗ್ಯ ಶಿಕ್ಷೆ ಮಾಡಬೇಕು.

೨ ಈ ಅಪರಾಧಿಗಳ ವಿಚಾರಣೆ ಮಾಡುವಾಗ ಜಜ್ಜರ ಕಮಿಟಿಯಲ್ಲಿ ರಶಿಯಾದ ಒಬ್ಬ ಜಡ್ಜಿಯೂ ಇರಬೇಕು.

೩ ರಶಿಯಾದ ವಿರುದ್ಧ ಪೋಲಂಡದಲ್ಲಿ ಸಂಘ ಸ್ಥಾಪಿಸುವಂಥ ಮತ್ತು ಬೇರೆ ರೀತಿಯಿಂದ ಸಹಾಯ ಮಾಡುತ್ತಿರುವಂಥ ಸಂಘಗಳನ್ನು ಮುರಿದು, ಆ ಜನರನ್ನು ದೇಶಬಿಟ್ಟು ಹೊರಗೆ ಹಾಕಬೇಕು.

೪ ಕೊಲೆಯನ್ನು ಒಬ್ಬ ತಲೆತಿರುಕನು ಮಾಡಿದನೆಂಬದನ್ನು ರಶಿಯವು ಒಪ್ಪುವದಿಲ್ಲ.

೫ ಇದು ವ್ಯಕ್ತಿಯ ಕೃತ್ಯವಾಗದೆ, ಜಗತ್ತಿನ ಶಾಂತತೆಗೆ ಭಂಗ ತರಬೇಕೆಂದು ಪ್ರಯತ್ನಿಸುವಂಥ ಕೃಷ್ಣಕಾರಸ್ಥಾನಿಗಳ ಕೃತ್ಯವಾಗಿರುತ್ತದೆ.

ರಶಿಯಾದ ಈ ಪತ್ರಕ್ಕೆ ಪೋಲಂಡವು ಜಗಳ ನಿಂದುವಂಥ ಉತ್ತರ ಕೊಟ್ಟಿಲ್ಲ. ರಾಯಭಾರಿಯ ಹೆಂಡತಿಗೆ ಪೋಟಿಗಿ ಕೊಡುವೆವು. ಆದರೆ ರಶಿಯಾ ಸರಕಾರದ ನಷ್ಟ ತುಂಬಿ ಕೊಡುವದಿಲ್ಲೆಂದು ಹೇಳುತ್ತಾರೆ.

ರಾಯಭಾರಿಯ ಪ್ರೇತವನ್ನು ಮಾಸ್ಕೋ ಪಟ್ಟಣಕ್ಕೆ ತಂದರು. ಅಲ್ಲಿ ಮಂತ್ರಿಗಳೇ ಈತನ ಶವವನ್ನು ಸಿದ್ದಿಗೆಯ ಮೇಲಿಟ್ಟರು. ಮತ್ತು ಮಣ್ಣು ಕೊಡುವಾಗ ತೋಫಿನ ಸಲಾಮು ಆಯಿತು.

ಪೋಲಂಡದ ಪೋಲೀಸ ಖಾತೆಯ ಇನ್ಸಪೇಕ್ಟರ ಜನರಲನು ತನ್ನ ಸೀಮೆ ದಾಟಿ, ತುಸು ರಶಿಯಾದ ಹದ್ದಿನಲ್ಲಿ ಹೋದನು. ಕೂಡಲೆ ರಶಿಯರು ಅವನನ್ನು ದಸ್ತಗಿರ ಮಾಡಿದರು,

---

ರಶಿಯಾ ಮತ್ತು ಇಂಗ್ಲಂಡದ ಒಡಂಬಡಿಕೆ ಮುಗಿದದ್ದರಿಂದಲೇ ಕೊಲೆ ಆಯಿತು. ಇದರಲ್ಲಿ ಇಂಗ್ಲಿಷ ಸರಕಾರದ ಅಂಗವಿರುತ್ತದೆಂದು ರಶಿಯರು ಆರೋಪ ಹೊರಿಸುತ್ತಿದ್ದಾರೆ. ಇಂಥ ಆರೋಪವು ಪೂರ್ಣ ನಿರಾಧಾರವಾದದ್ದೆಂದು ಇಂಗ್ಲಿಷ ಸರಕಾರದವರು ಪ್ರಸಿದ್ಧ ಮಾಡಿದ್ದಾರೆ.

ಅಮೇರಿಕೆಯಲ್ಲಿ ರ‍್ಯಾಡಿಕಲ ಮತ್ತು ಬೋಲ್ಸೆವಿಕ ಪಂಥದ ಜನರು ಚೀನದಲ್ಲಿಯ ಇಂಗ್ಲಿಷರ ಕೃತ್ಯ ನಿಷೇಧಿಸುವದಕ್ಕಾಗಿ ಮೆರವಣಿಗೆ ತೆಗೆದಿದ್ದರು. ಇಂಗ್ಲಿಷ ವಕಾಲತಿಗೆ ಕೇಡು ಬಂದೀತೆಂದು ಅಲ್ಲಿ ವಿಶೇಷವಾದ ಬಂದೋಬಸ್ತು ಇಟ್ಟಿದ್ದರು. ಮೆರವಣಿಗೆಯು ಬಲವಾಗಿ ಬೆಳೆಯಲು ಪೋಲೀಸರು ಇದನ್ನು ಮುರಿದರು.

ಇಂಗ್ಲಿಷರು ಹಿಂದುಸ್ಥಾನವನ್ನು ಬಿಟ್ಟು ಹೋದರೆ-?

—[೦][೦]—

ರಾಯಲ ಕಮಿಶನ ಬರುವದು; ಹಿಂದುಸ್ಥಾನಕ್ಕೆ ಹೆಚ್ಚಿಗೆ ರಾಜಕೀಯ ಹಕ್ಕುಗಳು ದೊರೆಯುವವು. ಆ ಮೂಲಕ ರಾಜ್ಯ ಕಾರಭಾರವು ಹಿಂದೀ ಜನರ ಕೈ ಸೇರಿದರೆ- ಗೌರಕಾಯಸ್ಥರಾದ ಸಿವ್ಹಿಲ ಸರ್ವಂಟರ ಸಂಖ್ಯೆ ಕಡಿಮೆಯಾಗುವದು. ಮತ್ತು ಈಯೊಳಗಾಗಿ ನೀವು ಇರುವಿರಾ? ಹೋಗುವಿರಾ ? ಎಂಬ ಪ್ರಶ್ನವನ್ನು ಈ ಸಿವ್ಹಿಲ ಸರ್ವಂಟರಿಗೆ ಕೇಳಿರುವರು. ಈ ವರ್ತಮಾನ ಕೇಳಿ, ಸಿವ್ಹಿಲ ಸರ್ವಂಟರ ಕಿಸೆ ತುಂಬಿದ ಲಾರ್ಡ ಲೀನಾಹೇಬರಿಗೆ ಕಸವಿಸಿಯಾಗಿರುತ್ತದೆ. ಇಂಗ್ರೇಜಿ ಸಿವ್ಹಿಲ ಸರ್ವಂಟರು ಹಿಂದುಸ್ಥಾನವನ್ನು ಬಿಟ್ಟು ಹೋದ ಮರುದಿವಸವೇ ದೇಶದ ತುಂಬ ಅನಾಯಕತನವಾಗುವದು ಕಾಯದೆ ಮುರಿಯುವವು. ಅನರ್ಥ ಪರಂಪರೆಯುಂಟಾಗುವದು. ರಕ್ತ ಹರಿಯುವದು. ಈ ಮಾತು ನಾನೊಬ್ಬನೇ ಹೇಳುತ್ತೇನಂತಲ್ಲ. ಅತ್ಯಂತವಾದ ಸ್ವರಾಜ್ಯ ಪ್ರೇಮಿಗಳು ಸಹ ಹೇಳುತ್ತಾರೆಂದು ಈ ಸಾಹೇಬರು ಲಂಡನದಲ್ಲಿ ಭಾಷಣ ಮಾಡಿದ್ದಾರೆ. ಸಾಹೇಬರು ತಮಗೆ ತೋರಿದಂತೆ ಮಾತಾಡುವದು ಆಶ್ಚರ್ಯವಲ್ಲ. ಸ್ವರಾಜ್ಯವಾದಿಗಳು ಸಹ ಅವರಂತೆ ಅಭಿಪ್ರಾಯಪಡುತ್ತಾರೆಂಬದು ಮಾತ್ರ ಅತ್ಯಂತ ಸೋಜಿಗ. ಸಾಹೇಬರು ಇಂಥ ಒಬ್ಬಿಬ್ಬರ ಹೆಸರು ಹೇಳುವರೇ? ಸಾಹೇಬರು ಲಂಡನದಲ್ಲಿ ಕೂತು ಮಾತಾಡದೆ, ಹಿಂದುಸ್ಥಾನದಲ್ಲಿ ಮಾತಾಡಿದ್ದರೆ- ಆ ಕ್ಷಣವೇ ಸಮರ್ಪಕ ಉತ್ತರ ದೊರೆಯುತ್ತಿತ್ತು.

ವಿವಿಧ ವರ್ತಮಾನಗಳು.

—೦—

ಪಂಡಿತ ಮಾಲವಿಯಾಯವರು ದೇಹಾರೋಗ್ಯದ ದೆಸೆಯಿಂದ ಧಾರವಾಡ ಮಾರ್ಗವಾಗಿ ಬೆಂಗಳೂರಿಗೆ ಹೋದರು. ಅಲ್ಲಿ ಇವರಿಗೂ ಮಹಾತ್ಮರಿಗೂ ಸಂಭಾಷಣೆ ನಡೆಯಿತು. ಪಂಡಿತರು ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವಕ್ಕೂ ಹೋಗಿದ್ದರು: ಆಗ ಶುದ್ಧ ಖಾದಿಯ ಬಟ್ಟೆ ಧರಿಸಿದ್ದರು.

ನಾಗಪೂರದ ಕಾಯದೆಭಂಗ ನೋಡಿ, ಆ ವಿಷಯವಾಗಿ ರಿಪೋರ್ಟ ಮಾಡುವದಕ್ಕಾಗಿ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯಿಂದ ನೇಮಿಸಲ್ಪಟ್ಟ ಶ್ರೀ ಪಟೇಲರು ಅಲ್ಲಿಗೆ ಹೋಗುವದನ್ನು ರಹಿತ ಪಡಿಸಿದರು. ಏಕೆಂದರೆ- ಡಾಕ್ಟರ ಮುಂಜೆ ಮೊದಲಾದವರಿಂದ ಇವರಿಗೆ ಹುಕುಮಿನ ಪತ್ರವೇ ಬರಲಿಲ್ಲ.

ಹಿಂದುಸ್ಥಾನಕ್ಕೆ ಸ್ವರಾಜ್ಯದ ಎರಡನೆಯ ಕಂತ ಕೊಡಲಿಕ್ಕೆ ಬರುವ ರಾಯಲ ಕಮಿಶನಕ್ಕೆ ಬಹಿಷ್ಕಾರ ಹಾಕಿರಿ. ಅದರ ಮುಂದೆ ಸಾಕ್ಷೀ ನುಡಿಯಬೇಡಿರಿ. ಇವೆಲ್ಲರು ಇದೇ ಪ್ರಕಾರ ಬಹಿಷ್ಕಾರ ಹಾಕಿದ್ದನ್ನು ಲಕ್ಷ್ಯಕ್ಕೆ ತನ್ನಿರೆಂದು ಶ್ರೀ. ಪ್ರಕಾಶಮರು ಹೇಳುತ್ತಾರೆ.

ಬಕರೀಗ ಹಬ್ಬವು ಸುರಕ್ಷಿತ ಸಾಂಗವಾಯಿತು. ಪಾಟಣಾದ ಹತ್ತರ ಒಂದು ಹಳ್ಳಿಯಲ್ಲಿ ಮಾತ್ರ ದಂಗೆಯಾಗಿ, ಒಬ್ಬ ಹಿಂದೂ ಮತ್ತು ಒಬ್ಬ ಮುಸಲಮಾನನ ಕುರಬಾನಿಯಾಯಿತು.

ಸರಕಾರದವರು ಅಕಾಲಿ ಕೈದಿಗಳನ್ನು ಬಂಧಮುಕ್ತ ಮಾಡಬೇಕು. ಗುರುದ್ವಾರದ ಬಿಲ್ಲನ್ನು ಅಕಾಲಿಗಳಿಗೆ ಅನುಕೂಲವಾಗಿ ಪಾಸ ಮಾಡಬೇಕು. ಇಲ್ಲವಾದರೆ- ಕಾಲೋಚಿತವಾಗಿ ಕಾಯದೆಭಂಗ ಮತ್ತು ಸತ್ಯಾಗ್ರಹವನ್ನು ಪುನಃ ಪ್ರಾರಂಭಿಸುವಂತೆ ಸರದಾರ ಖರಕಸಿಂಗರು ಅಮೃತಸರದಲ್ಲಿ ಭಾಷಣ ಮಾಡಿದ್ದಾರೆ.

ವಿಲಾಯತಿಯ ಮತ್ತು ಇಂಗ್ಲಂಡದ ಯಾವ ಯಾವ ಸರಕುಗಳಿಗೆ ಬಹಿಷ್ಕಾರ ಹಾಕಬೇಕೆಂಬದನ್ನು ವಿಚಾರ ಮಾಡಲು ಆಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ಗೊತ್ತು ಮಾಡಿದ ಪ್ರಕಾರ, ಈ ಬಗ್ಗೆ ಅವರು ತಮಗೆ ಅವಶ್ಯವಾದ ಸಂಗತಿಗಳನ್ನು ತಿಳಿಸಬೇಕೆಂದು ವರ್ತಕರನ್ನುದ್ದೇಶಿಸಿ, ಒಂದು ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಕೂಳಸೂರ (ತವರ ಮನೆಯ ಹೆಸರು) ಕಮಲಾ ಬಾಯಿ ಜಮಖಂಡಿ (ಅತ್ತೆಯ ಮನೆಯ ಹೆಸರು) ಇವರು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿದ್ದಾರೆ.

ಎರಡು ದಿವಸಗಳಿಂದ ಚಿಟಿಚಿಟಿ ಮಳೆಯು ಹತ್ತಿರುತ್ತದೆ.

ಮಗು- ಅವ್ವಾ- ಅಪ್ಪನ ತಲೆಯ ಮೇಲೆ ಕೂದಲೇಕಿಲ್ಲ?

ಉತ್ತರ- ಮಗುವೇ- ಅವರು ಬಹಳ ಮಾತಾಡುತ್ತಾರೆಂದು.

ಮಗು- ಹಾಗಾದರೆ ನಿನ್ನ ತಲೆತುಂಬ ಏಕಿವೆ?

ಉತ್ತರ- ಮಗುವೇ ತಕ್ಕೋ ಈ ಮಾವಿನಹಣ್ಣು

ಮಡಮ- ಸರ- ನಾನು ಸತ್ತ ಬಳಿಕ ನನ್ನ ಗೋರಿಯ ಮೇಲೆ ಸ್ವರ್ಗದಲ್ಲಿ ಶಾಂತಿ ಸಾಮ್ರಾಜ್ಯವುಂಟೆಂದು ಬರಿಯುವಿರಾ?

ಸಾಹೇಬ- ಡಿಯರ- ಇತ್ತೆಂದು ಬರಿಯುವೆನು!!

ಸ್ಮರಣ ಶಕ್ತಿಯ ಪ್ರೊಫೇಸರ- ವಿದ್ಯಾರ್ಥಿಗಳೇ ಈ ಸಿಸೆ ನೋಡಿರಿ, ಇದರೊಳಗಿನ ಒಂದು ಹನಿಯನ್ನು ಬೆಕ್ಕಿನ ನಾಲಿಗೆಯ ಮೇಲಿಟ್ಟರಾಯಿತು ಮನುಷ್ಯನು ಸತ್ತು ಹೋಗುತ್ತಾನೆ

ಜಾಹೀರ ನೋಟೀಸು.

ಬಸವ್ವಾ ಕೋಮ ಶಿವಪ್ಪಾ ಸಂಗೂರ ಕಾ|| ಹಾನಗಲ್ಲ- ಹಾಲಿವಸ್ತಿ ನರೆಗಲ್ಲ ಇವಳಿಗೆ-

ಕೆಳಗೆ ಸಹಿ ಮಾಡಿದವನ ಕಡಿಂದಾ ಈ ನೋಟೇಸಿನ ಮೂಲಕಾ ತಿಳಿಸೋದೇನಂದರೆ—

ನೀನು ನನ್ನ ಉಡಕಿ ಹೆಂಡತಿಯಿದ್ದು ನೀನು ನಿನ್ನ ತವರ ಮನಿಗೆ ಹೋಗಿ ಬಂದು ಮಾಡಿಕೋತಾ ಇದ್ದು ಅಜಮಾಸ ೫-೬ ತಿಂಗಳ ಛಲೋರೀತಿಯಿಂದಾ ಬಾಳ್ವೆ ಮಾಡಿದಿ. ಈಗ ಅಜಮಾಸ ೧|| ವರ್ಷದ ಕೆಳಗೆ ತವರ ಮನೆಗೆ ಹೋಗಿ ಅಲ್ಲೇ ಇದ್ದು ನಾನು ನಿನ್ನನ್ನು ೭-೮ ಸಾರೆ ಕರಿಲಿಕ್ಕೆ ಬಂದೆ ಮತ್ತು ನಮ್ಮ ಊರ ಕೆಲವು ಜನರನ್ನು ಸಹಾ ಕಳಿಕೊಂಡು ನಿನ್ನನ್ನು ಕರಿಲಿಕ್ಕೆ ಬಂದರೂ ಸಹಾ ಬರಲಿಲ್ಲಾ ಕಾರಣಾ ನೀನು ನಿನ್ನ ಮೇಲೆ ಇರತಕ್ಕ ನನ ಮಾಲ್ಕಿವುಳ್ಳ ದಾಗೀನೆಗಳು ಅದರ ವಿವರಾ-

೧ ಭಂಗಾರದ ಸರಗಿ ತೊಲಿ ೮ ಕಿಮ್ಮತ್ತು		೧೬೦
೧ ಭಂಗಾರದ ಬೆಳೆ ಜೋಡು ೫ ಕಿ||		೧೦೦
೧ ಬೆಳ್ಳಿ ಚವಕಾ	ಕಿ||	೮
೧ ಕರ್ಣಫೂಲು	ಕಿ||	೪
೧ ಕಡಗಾ	ಕಿ||	೪
೧ ಶೀರ ಛಲೋದು	ಕಿ||	೨೪
		೩೦೦

ಶೀಘ್ರ ಪಡೆಯಿರಿ. **ಮಾರಿಕಾ ಬೇನೆಗೆ** ಅಲಕ್ಷ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಬಂದು ಪ್ರಾಣ ಉಳಿಗಿರುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋಳ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಾಲ್ಕು ಕಡೆಗೆ ಪಸಾರವಾಗಿರುತ್ತದೆ. ಅದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೪ ಹಣವನ್ನು ಅಡವಾನ್ಸ ಕಳಿಸತಕ್ಕದ್ದು.

[ತಿಳಿಯುವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದರಾವ ಟಿಕಾರೆ,

ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ಈ ಪ್ರಕಾರ ದಾಗೀನೆಗಳು ಸಹಾ ತೆಗೆದುಕೊಂಡು ನಿನ್ನ ತವರ ಮನಿಗೆ ಹೋಗಿರತೀ ಅಷ್ಟೇ ಅದರೆ ಈಗ ಈ ನೋಟೀಸು ಮುಟ್ಟಿದ ೮ ದಿವಸದ ಒಳಗೆ ನಿನ್ನ ಮೇಲೆ ಇರತಕ್ಕ ದಾಗೀನೆಗಳು ಸಹಿತಾ ತೊಗೊಂಡು ಬಂದು ನನ್ನ ಸಂಗಡಾ ಛಲೋರೀತಿಯಿಂದಾ ಬಾಳ್ವೆ ಮಾಡಬೇಕು. ಇಲ್ಲದಿದ್ದರೆ- ಇದೇ ನೋಡಟೀಸ ಅಂತಾ ತಿಳಿತಕ್ಕದ್ದು ನಾನು ಮುಂದೆ ಯಾರಡನೇದವಳನ್ನ ಲಗ್ನ ಅಗರ ಉಡಕಿ ಮಾಡಿಕೊಳ್ಳುವದಕ್ಕೆ ನಿನ್ನ ತಕರಾರ ನಡೀಲಿಕ್ಕಿಲ್ಲಾ ನೀನು ನಿನ್ನ ಮರ್ಜಿ ಪ್ರಕಾರ ಉಡಕಿ ವಗೈರೆ ಮಾಡಿಕೊಳ್ಳಲಿಕ್ಕೆ ನನ್ನ ತಕರಾರ ಇಲ್ಲಾ ನೀನು ಬರದಿದ್ದರೆ ಮೇಲೆ ಬರದ ದಾಗೀನೆಗಳು ನನಗೆ ಮುಟ್ಟಿಸಿ ನನ್ನ ಕಡಿಂದಾ ಪಾವತಿ ತೊಗೋಬೇಕು ಇಲ್ಲದಿದ್ದರೆ ರೀತಿ ಪ್ರಕಾ ನಿನ್ನ ಮೇಲೆ ಕೋರ್ಟಿನಲ್ಲಿ ಇಲಾಜ ನಡಸತೇನೆ ಈ ನೋಟೀಸಿನ ಖರ್ಚು ನಿನ್ನ ತಲೀ ಮೇಲೆ ಅದೆ. ತಿಳಿಯಬೇಕು ತಾ. ೧೩-೬-೩೭

ಈ ಎಡಗೈ ಹೆಬ್ಬಟ್ಟಿನ ಗುರ್ತ ಶಿವಪ್ಪಾ ಬಿನ್ನ ಹನಬಸಪ್ಪಾ ಸಂಗೂರ ಈತ ಮಾಡಿದ್ದು ಅದೆ.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಚ್ಯುತರಾವ ಕುಲಕರ್ಣಿ ಹೊಸಬಾವಿ ಇವರು ಧಾರವಾಡದಲ್ಲಿರುವ ಸ್ವಮ್ಯ ವಾಗ್ದೇವಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ಸಿಕ್ತ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಗುರುವಾರ ತಾರೀಖು ೧೬ ನೇ ಜೂನ ೧೯೨೭ (ಸಂಚಿಕೆ ೧೨

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಗ ಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಬ್ಬ ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೭೫|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟೀಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಂತಿಗೆಯು ಎರಡು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವು ಮಾಡಲ್ಪಡುವದು. ಠೇವಿಮುತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡಲಿಕ್ಕೆ ತಕ್ಕೊಳ್ಳಲಾಗುವದು. ದರವನ್ನು ನಮ್ಮಿಂದ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು ತಕ್ಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಗ. ಶಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪಕ್ತಿ, ಒಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೀಕಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ನಾ ೧ ಗೆ ಮೂ ರಾ ಣೆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪಕ್ಷೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಮನೆಯು ಮಾರಾಟ.

ಧಾರವಾಡ ಪಾಲಗೆರೆಯ ಕೆಳಗಿನ ಬೀದಿಯಲ್ಲಿ ಮ್ಯುನಿಸಿಪಾಲಿಟಿ ನಂಬರ ೧೮೫೮ನೆಯ ಮನೆ ಶ್ರೀ. ಸೌ|| ಗಂಗಾಬಾಯಿ ಕೌಲಗಿ ಇವರ ಹೆಸರಿನಿಂದಿರುವದನ್ನು ಮಾರಲಿಕ್ಕಿದ್ದಿದೆ. ಮನೆಯು ದೊಡ್ಡ ಕಟ್ಟಡದವಾಗಿ ಇರುವದಕ್ಕೆ ಎಲ್ಲ ಸೋಯಿಗಳಿದ್ದಿರುತ್ತದೆ. ಕೊಳ್ಳಲಿಚ್ಛಿಸುವವರು ವಿಶೇಷ ಮಾಹಿತಿಯ ಬಗ್ಗೆ ಕೆಳಗೆ ಸಹಿ ಮಾಡುವವರ ಕೂಡ ಪತ್ರವ್ಯವಹಾರ ಮಾಡಬೇಕು ಅಥವಾ ಸಮಕ್ಷಮ ಭೆಟ್ಟಿಯಾಗಿ ತಿಳಕೊಳ್ಳಬೇಕು.

ಪಿ. ಆರ. ಕುಲಕರ್ಣಿ
c/o ಬಿ. ಆರ. ಕೌಲಗಿ.
ನೇಕಾರಪಗಲ್ಲಿ, ಧಾರವಾಡ

ವಿಜಯ.

ಧಾರವಾಡ ತಾ-೧೬-೬-೨೭ ನೇ ಇಸ್ವಿ

ಶಾಳಾಖಾತೆಯು ಕಾರಕೂನರ ಮೇಲೆ ಬಂದ ಸಂಕಟವು.

ಸರಕಾರದವರು ಶಾಳಾಖಾತೆಯನ್ನು ಲೋಕಲಬೋರ್ಡಿಗೆ ಒಪ್ಪಿಸುವಾಗ ಶಿಕ್ಷಕರ ವಿಚಾರ ಮಾಡಿದರು. ಆದರೆ ಕಾರಕೂನರ ವಿಚಾರ ಮಾಡಲಿಲ್ಲ. ಲೋಕಲಬೋರ್ಡಿನವರಿಗೆ ಶಿಕ್ಷಕರ ಅವಶ್ಯಕತೆಯು ಕಂಡು ಬಂದಂತೆ, ಕಾರಕೂನರ ಅವಶ್ಯಕತೆಯುಂಟಾಗಲಿಲ್ಲ. ಏಕೆಂದರೆ- ಇವರು ಬೇಕಾದಷ್ಟು ಜನರು ದೊರೆಯುತ್ತಾರೆಂಬ ಭಾವನೆಯು. ಮುಂಬಯಿ ಕರ್ನಾಟಕ ಪ್ರಾಂತದಲ್ಲಿ ನಾಲ್ಕು ಜಿಲ್ಹೆಗಳಿರುವವು ಇವುಗಳಲ್ಲಿ ಧಾರವಾಡ ಮತ್ತು ವಿಜಾಪೂರ ಜಿಲ್ಹೆಗಳಿಗೇ ತಮಗೆ ಕಾರಕೂನರು ಬೇಡವೆಂದಿರುತ್ತವೆ. ಕಾರವಾರದವರು ಕಾರಕೂನರ ವಿರುದ್ಧ ಶಸ್ತ್ರ ಹಿಡಿದಿಲ್ಲ. ಬೆಳಗಾವಿಯಲ್ಲಿ ಜಗಳವೇ ಇರುವದರಿಂದ, ಅದಕ್ಕೆ ಈ ವಿಚಾರಕ್ಕೆ ಸಮಯವೇ ಇಲ್ಲ. ಈ ನಾಲ್ಕು ಜಿಲ್ಹೆಗಳ ಹೊರ್ತು ದಕ್ಷಿಣ ಭಾಗದಲ್ಲಿ ರತ್ನಾಗಿರಿ ಮತ್ತು ಕುಲಾಬಿ ಜಿಲ್ಹೆಗಳುಂಟು. ಈ ಜಿಲ್ಹೆಯವರು ತಮಗೆ ಕಾರಕೂನರು ಬೇಡೆಂದಿರುವದಿಲ್ಲ. ಹಾಗಿದ್ದರೆ- ಮ. ಸದರಾಂಗಿಣಿಯವರು ಈ ಜಿಲ್ಹೆಗಳ ಹೆಡ್ಡಮಾಸ್ತರರಿಗೂ, ಡಿಪುಟಿಯವರಿಗೂ, ಆ್ಯಡಮಿನಿಸ್ಟ್ರೇಟರರಿಗೂ ನಿಮ್ಮ ಕಾರಕೂನರಿಗೆ ಮನೆಗೆ ಹೋಗಬೇಕಾಗುವ ಕಾಕೀದಿ ಕೊಡಿರೆಂದು ಸರಕ್ಯೂಲರ ಕಳಿಸುತ್ತಿದ್ದರು. ಧಾರವಾಡ ಮತ್ತು ವಿಜಾಪೂರದವರ ಠರಾವು ಉಳಿದೆಂಡು ಜಿಲ್ಹೆಗಳ ಶಿಕ್ಷಕರ ಮೇಲೂ ಸಂಕ್ರಾಂತಿ ತಂದಿರುತ್ತದೆ. ಮನೆಗೆ ಬೆಂಕಿ ಹತ್ತಿದರೆ ನೆರೆಮನೆಗೂ ಕಿಡಿ ಹತ್ತುವದುಂಟು.

ಲೋಕಲಬೋರ್ಡಿನವರು ಕಚೇರಿ ಕೆಲಸಕ್ಕಾಗಿ ಕಾರಕೂನರನ್ನು ಇಟ್ಟುಕೊಂಡಿದ್ದಾರೆ. ಆದರೆ ಶಾಳಾಖಾತೆಯು ಮಟ್ಟಿಗೆ ಮಾತ್ರ ಅ॥ ಡಿಪುಟಿಯವರೂ ಬೇಡ. ಕಾರಕೂನರೂ ಬೇಡೆಂದು ಹೇಳುವದು ವ್ಯವಹಾರದೃಷ್ಟಿ ರೀತಿಗೂ ಅನುಸರಿಸಿದ ವಿಷಯವಾಗುವದಿಲ್ಲ. ಆಫೀಸಿನ ಕಾಮದಾರರು ಕಾಯಮೆಯಾದಂತೆ ತಮಗ ಬೇಕಾದವರನ್ನು ನೇಮಿಸಿಕೊಳ್ಳುವಂತೆ, ಡಿಪುಟಿ ಮತ್ತು ಕ್ಲಾರ್ಕರನ್ನು ನೇಮಿಸಿಕೊಳ್ಳುತ್ತಾ ಹೋಗಿದ್ದರೆ- ಡಿಪಾರ್ಟಮೆಂಟಿನ ದೊಡ್ಡ ಘಾತವಾಗುತ್ತಿದ್ದಿಲ್ಲ. ಅನನುಭವಿಕರಾದಂಥವರನ್ನು ಆ್ಯಡಮಿನಿಸ್ಟ್ರೇಟರರಾಗಿ ನೇಮಿಸಿಕೊಳ್ಳಲಿಕ್ಕೆ ಬಹುಮತದಿಂದ ಪುಂಡಾಟಿಕೆ ಹಾಕುವಂಥವರು ಅನುಭವಿಕರಾದಂಥ ಅ॥ ಡಿಪುಟಿ ಮತ್ತು ಕಾರಕೂನರನ್ನು ನೇಮಿಸಿಕೊಳ್ಳುವದು ಶಕ್ಯವೇ ಅಲ್ಲ.

ಮ್ಯುನಿಸಿಪಾಲಿಟಿಯ ಚೀಫ ಆಫೀಸರನು ಗ್ರ್ಯಾಜ್ಯುಯೇಟನಾಗಿರಬೇಕೆಂದು ಕೌನ್ಸಿಲದಲ್ಲಿ ಪುರವಣಿ ಠರಾವು ತಂದಂತೆ, ಈಗಿದ್ದ ಕಾರಕೂನ ಮತ್ತು ಡಿಪುಟಿಯವರೂ ಇರಬೇಕು. ಹೊಸದಾಗಿ ನೇಮಿಸಿಕೊಳ್ಳುವಂಥವರು ಮಾತ್ರ ಬೋರ್ಡಿಗೆ ಒಪ್ಪಿಗೆಯಾದವರಿರಬಹುದೆಂದು ಸರಕಾರದವರು ಲೋಕಲಬೋರ್ಡುಗಳಿಗೆ ಹೇಳಬೇಕು. ಅಥವಾ ಉಪಕಾಯದೆ ಪಾಸಮಾಡಬೇಕು. ಹೀಗೆ ಮಾಡದೆ, ಅನೇಕ ಜನ ಕಾರಕೂನರನ್ನು ತಮ್ಮ ತಪ್ಪಿಗಾಗಿ ಮನೆಗೆ ಕಳಿಸುವದು ಮೊಗಲಾಯಿಯಾಗುತ್ತದೆ. ಮೊಗಲಾಯಿಗೇ ಏಕೆ ಹೆಸರಿಡುವದು?

ಸ್ವರಾಜ್ಯ ಮತ್ತು ಹಿಂದುಸ್ಥಾನ.

ರಾಯಲ ಕಮಿಶನ ಬರುವದು ಖಂಡಿತವಾಗಿದೆ. ಲಾರ್ಡ ರೀಡಿಂಗ ಅಥವಾ ಲಾರ್ಡ ರೋನಾಲ್ಡಶೆಸಾಹೇಬರು ಅಧ್ಯಕ್ಷರಾಗುವರೆಂದು ವಿಲಾಯತಿಯಲ್ಲಿ ದಟ್ಟ ವರ್ತಮಾನವಾಗಿದೆ. ಲಾರ್ಡ ರೀಡಿಂಗಸಾಹೇಬರ ಖ್ಯಾತಿಯು ಸ್ಮರಣೆಯು ಹೋಗಿಲ್ಲ. ಲಾರ್ಡ ರೋನಾಲ್ಡಶಸಾಹೇಬರು ಬಂಗಾಲದ ಗವ್ಹರ್ನರರಾಗಿದ್ದರು. ಇಬ್ಬರೂ ಸಾಮ್ರಾಜ್ಯವಾದಿಗಳು. ಹಿಂದುಸ್ಥಾನವು ಇಂಗ್ಲಂಡದ ಇಕ್ಕಳದಲ್ಲಿಯೇ ಸಿಕ್ಕು ಹೇಗೆ ವಿಲಿವಿಲಿಯಾಗಿರಬೇಕೆಂಬ ಧ್ಯೇಯವುಳ್ಳವರು. ಇಂಥವರಿಂದ ಸ್ವರಾಜ್ಯದ ಪ್ರಗತಿಯು ಹೇಗಾಗುವದೆಂಬದು ದೊಡ್ಡ ಸಂಶಯವಾಗುತ್ತದೆ. ಇಜಿಪ್ತದವರು ಅಲ್ಲಿಗೆ ಹೋದ ರಾಯಲ ಕಮಿಶನಕ್ಕೆ ಬಹಿಷ್ಕಾರ ಹಾಕಿ, ಬಹುಮಟ್ಟಿಗೆ ತಮ್ಮ ಉದ್ದೇಶವನ್ನು ಕೊನೆಗಾಣಿಸಿಕೊಂಡರು. ಅದೇ ಪ್ರಕಾರ ಹಿಂದೂ ಜನರೂ ಮಾಡಬೇಕೆಂದು ಅನೇಕರಾಂಗಳ ಮತವು. ಹಿಂದುಸ್ಥಾನದಲ್ಲಿ ೧೮ ತರದ ಜನರಿದ್ದು, ೧೮ ತರದ ಮತಗಳಾಗಿರುವದರಿಂದ, ರಾಯಲ ಕಮಿಶನಕ್ಕೆ ಪೂರಾ ಬಹಿಷ್ಕಾರ ಹಾಕುವದು ಶಕ್ಯವಲ್ಲ, ಆದರ ಮುಂದೆ ಅನೇಕರು ಸಾಕ್ಷೀ ನುಡಿಯುವರು. ಅದರಲ್ಲಿ ತಾವು ಸ್ವರಾಜ್ಯಕ್ಕೆ ಪಾತ್ರರಿರುವಂತೆ ಹೇಳುವರೆಂಬದೇ ವಿಶೇಷ.

ಹಿಂದುಸ್ಥಾನವು ಸ್ವರಾಜ್ಯಕ್ಕೆ ಪೂರ್ಣವಾಗಿ ಪಾತ್ರವಾಗಿರುತ್ತದೆಂದು ಅಸೆಂಬ್ಲಿಯಲ್ಲಿ ಈ ಮೊದಲು ತಂದ ಠರಾವುಗಳನ್ನು ಪುನಃ ಅಸೆಂಬ್ಲಿಯಲ್ಲಿ ಪಾಸ ಮಾಡಬೇಕೆಂದು ಕೆಲವರೂ, ರಾಯಲ ಕಮಿಶನವೇ ಬೇಡ; ರಾವುಂಡ ಟೇಬಲ ಪರಿಷತ್ತನ್ನು ಕೂಡಿಸಬೇಕೆಂದು ಕೆಲವರೂ ಬರುವ ಅಸೆಂಬ್ಲಿಯಲ್ಲಿ ಠರಾವು ತರತಕ್ಕವರಿದ್ದಾರೆ. ಅಸೆಂಬ್ಲಿಯವರು ರಾಷ್ಟ್ರೀಯ ಬೇಡಿಕೆಗಳ ಠರಾವು ಮಾಡಿ ಬೇಸತ್ತರು. ಸರಕಾರವು ಲಕ್ಷ್ಯ ಮಾಡಲಿಲ್ಲ. ಆದ್ದರಿಂದ ದೇಶದಲ್ಲಿ ಅಸಂತೋಷ ಹೆಚ್ಚಾಗಿದೆಂಬ ಠರಾವನ್ನು ಶ್ರೀ. ಎಮ. ಕೆ. ಆಚಾರ್ಯರು ತರಬೇಕೆಂದಿದ್ದಾರೆ. ಇವರಿಗಿಂತ ಹೆಚ್ಚಿನ ಠರಾವನ್ನು ಶ್ರೀ. ರಂಗಯ್ಯರರು ತರುವರು. ಇವರು ಅನ್ನುವದೇನಂದರೆ-

"ಹಿಂದುಸ್ಥಾನವು ಸ್ವರಾಜ್ಯಕ್ಕೆ ಸಂಪೂರ್ಣ ಪಾತ್ರವಾಗಿದೆ. ಸುಧಾರಣೆಯ ವಿಷಯವಾಗಿ ಯಾವದೊಂದು ಕಮೀಶನ ಕೂಡಿಸುವದೆಂದರೆ- ಹಿಂದುಸ್ಥಾನದ ಯೋಗ್ಯತೆಗೆ ಕುಂದು ತರುವಂತಾಗುತ್ತದೆ. ಆದುದರಿಂದ ಒಂದು ರಾವುಂಡಟೇಬಲ ಪರಿಷತ್ತನ್ನು ಲಂಡನ ಅಥವಾ ದಿಲ್ಲಿಯಲ್ಲಿ ಕೂಡಿಸಬೇಕು [illegible]ರ್ಧ ಮೆಂಬರರನ್ನು ಅಸೆಂಬ್ಲಿ ಮತ್ತು ರಾಷ್ಟ್ರೀಯ ಸಭೆಯವರು ಆರಿಸಬೇಕು. ಮತ್ತು ಅರ್ಧ ಜನರನ್ನು ಸರಕಾರದವರು ನೇಮಿಸಬೇಕು"

ಶ್ರೀ ದಾಸ, ಕುಮಾರ ಗಂಗಾರಾಮ ಮೊದಲಾದವರು ಕೆಲವು ತಿದ್ದುವದೆ [illegible] ಸ್ವರಾಜ್ಯ ಬೇಡುವರು. ಕಾನಪೂರದ ಕಾಂಗ್ರೆಸ ಸಭೆಯಲ್ಲಿ ಪಾಸಾದಂಥ ಠರಾವನ್ನು ಪುನಃ ಅಸೆಂಬ್ಲಿಯಲ್ಲಿ ಪಾಸ ಮಾಡಬೇಕೆಂದು ಕುಮಾರ ಗಂಗಾರಾಮರ ಮತವಾಗಿರುತ್ತದೆ.

ಅಸೆಂಬ್ಲಿಯಲ್ಲಾಗುವ ಠರಾವಿನಿಂದ ಸರಕಾರದವರು ರಾವುಂಡಟೇಬಲ ಪರಿಷತ್ತು ಕೂಡಿಸಲಾರರು. ತಮ್ಮ ಕಮೀಶನದ ಕುದುರೆಯನ್ನೇ ಮುಂದೆ ಹಾಕುವರು. ಇದರ ಮುಂದೆ ಸಾಕ್ಷೀ ನುಡಿಯುವವರಿಗೆ ಮಾತ್ರ ಈ ಠರಾವುಗಳು ಮಾರ್ಗದರ್ಶಕವಾಗುವವು.

ಸತ್ತವಳು ಬದುಕಿದಳು-

ಕೊಲ್ಹಾಪೂರದಲ್ಲಿ ಒಬ್ಬ ಹೆಣ್ಣುಮಗಳಿಗೆ ಮಾರಿಕಾ ಬಂತು. ನಾಡಿಗಳೆಲ್ಲ ನಿಂತವು. ಕೈಕಾಲು ತಣ್ಣಗಾದವು. ಕಣ್ಣು ಮುಚ್ಚಿದಳು ಬಾಯಿ ತೆರೆದಳು. ಸತ್ತಳೆಂದು [illegible] ಗೂಟ ಬಡಿದು ಕೂಡ್ರಿಸಿದರು. ಅಂತ್ಯಕಾಲಕ್ಕೆ ಮಾಡತಕ್ಕ ಎಲ್ಲ ವಿಧಿ ಮಾಡಿದರು. [illegible] ವಿಮಾನ ಸಿದ್ಧವಾಯಿತು. ಎತ್ತಿ ಹೊರಗೆ ಒಯ್ಯುವ ಹೊತ್ತಿನಲ್ಲಿ ಕೈ ಅಗಳಾಡಿತು. ಕಣ್ಣು ಪಿಳಿ ಪಿಳಿ ಬಿಡಹತ್ತಿದವು. ಹತ್ತಿರ ಕೂತವರು ದೆವ್ವ ದೆವ್ವ ಎಂದು ಚೀರಿದರು. ಆದರೆ ದೆವ್ವವಾಗಲಿಲ್ಲ. ಜೀವ ತಿರುಗಿ ಬಂತು. ಸಿದ್ಧಿಗೆ ಮಾಡಿದ್ದನ್ನು ದೂರ [illegible]ದು ಚೆಲ್ಲಿದರು. ಅಳುವವರು ನಗುತ್ತ [illegible]

ಮನೆಗೆ ಹೋದರು. ಎರಡು ಮೂರು ತಾಸುಗಳ ನಂತರ ಪೂರಾ ಎಚ್ಚರಿಕೆ ಹುಟ್ಟಿತು. ಮನೆಯವರಿಗೆಲ್ಲ ಆನಂದವೇ ಆನಂದವಾಯಿತು.

ರಾಯಲ ಕಮೀಶನದ ಅಧ್ಯಕ್ಷರು-

ಹಿಂದುಸ್ಥಾನಕ್ಕೆ ಬರುವ ರಾಯಲ ಕಮೀಶನದ ಅಧ್ಯಕ್ಷರಾಗಲು ಲಾರ್ಡ ರೀಡಿಂಗಸಾಹೇಬರನ್ನು ಕೇಳಿದ್ದಾರೆಂದು ಲಂಡನದ ಒಂದು ಪತ್ರ ಹೇಳುತ್ತದೆ. ಈ ದೇಶದಲ್ಲಿ ಸಾಹೇಬರು ಆರು ವರ್ಷ ರಾಜ್ಯಭಾರ ಮಾಡಿದರು. ಮಹಾತ್ಮಾ ಗಾಂಧಿ, ದೇಶಬಂಧು ದಾಸ, ಪಂಡಿತ ಮೋತಿಲಾಲ, ಲಾಲಾ ಲಜಪತರಾಯ, ಕೊಂಡಾ ವೆಂಕಟಪ್ಪಯ್ಯ ಮೊದಲಾದವರನ್ನೂ ನಾಲ್ವತ್ತು ಸಾವಿರ ಸ್ವಾಲಂಟಿಯರರನ್ನೂ ಸೆರೆಮನೆಗೆ ಕಳಿಸಿದ ಶ್ರೇಯಸ್ಸು ಕಟ್ಟಿಕೊಂಡರು. ಸ್ವರಾಜ್ಯ ವಿಷಯವಾಗಿ ಮಹಾತ್ಮರ ಕೂಡ ಆರು ದಿವಸ ಭಾಷಣ ಮಾಡಿದ್ದರ ಫಲವು ಮಹಾತ್ಮರು ಸೆರೆಮನೆಗೆ ಹೋಗುವದಾಯಿತು. ಸ್ವರಾಜ್ಯದ ದಾರಿಯು ಇಂದಿಗೂ ಮುಂದೆ ಸರಿಯಲಿಲ್ಲ. ಇಂಥವರು ಅಧ್ಯಕ್ಷರಾಗಿ ಬರುವದರಿಂದ, ಹಿಂದುಸ್ಥಾನಕ್ಕೆ ಲಾಭವಾಗುವದುಂಟೇ?

---

೧೫ ಲಕ್ಷದ ಸಹಾಯ —

ಬರಮಾ ಆಯಿಲ ಕಂಪನಿಯವರು ರಂಗೂನದ ವಿಶ್ವವಿದ್ಯಾಲಯಕ್ಕೆ ಒಂದು ಲಕ್ಷ ಪವನು ಅಂದರೆ- ೧೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ಹಣದಿಂದ ಖನಿಜ ಮತ್ತು ಇಂಜನಿಯರಿಂಗ ಶಿಕ್ಷಣ ಕೊಡುವ ಕಾಲೇಜ ಸ್ಥಾಪಿಸಬೇಕು. ಮತ್ತು ಅದಕ್ಕೆ ಕಂಪನಿಯ ಹೆಸರಿಡಬೇಕೆಂದು ಡಾಯರೆಕ್ಟರರು ಗವರ್ನರ ಸಾಹೇಬರಿಗೆ ತಿಳಿಸಿದ್ದಾರೆ. ಗವರ್ನರಸಾಹೇಬರು ಈ ಕರಾರುಗಳನ್ನು ಒಪ್ಪಿ, ದ್ರವ್ಯ ಸ್ವೀಕಾರ ಮಾಡಿ, ಕಂಪನಿಯ ಉಪಕಾರ ಸ್ಮರಿಸಿದ್ದಾರೆ.

ಆಕಾಶಾಧಿಪತಿಯು-

ಕ್ಯಾಪ್ಟನ ಲಂಡಬರ್ಗನೆಂಬ ವೈಮಾನಿಕನು ಪಾರೀಸದಿಂದ ಅಮೇರಿಕೆಯ ನ್ಯೂಯಾರ್ಕ ಪಟ್ಟಣದ ತನಕ ನಡುವೆ ಎಲ್ಲಿಯೂ ನಿಲ್ಲದೆ ೩೩ ತಾಸು ೩೧ ನಿಮಿಷಗಳಲ್ಲಿ ವಿಮಾನ ತಂದು ಬಿಟ್ಟನು. ಅಂತರವು ೩೬೦೦ ಮೈಲುಗಳುಂಟು. ತಾಸಿಗೆ ನೂರು ಮೈಲುಗಳಿಗಿಂತ ಪ್ರವಾಸ ಮಾಡಿದಂತಾಯಿತು. ಈತನು ಈ ಪ್ರಕಾರ ಮಾಡಿದ ಸಾಹಸಕ್ಕಾಗಿ ಅಮೇರಿಕೆಯವರು ಈತನನ್ನು ಬಹಳವಾಗಿ ಕೊಂಡಾಡಿದ್ದಾರೆ, ಧೈರ್ಯವಂತ ನಾಗರಿಕ, ಆಕಾಶದ ಬಾಯುಶಾಲಿ, ದೂರ ದೂರ ದೇಶಗಳ ನಡುವೆ ಬಾಂಧವ್ಯ ಬೆಳೆಸುವಂಥ ಮಿತ್ರನು ಎಂಬದಾಗಿ ಹೊಗಳಿ ಈತನ ಮೇಲೆ ಪುಷ್ಪವೃಷ್ಟಿ ಮಾಡಿದ್ದಾರೆ.

ವಿಮಾನಗಳಿಂದಲೇ ಉತ್ತರ-

ಇಂಗ್ಲಿಷ ಜನರು ಆರಕಾಸ ಮನೆಯ ಜಪ್ತಿಯ ಹಾಗು ತಪಾಸಣೆಯ ನಿಮಿತ್ಯದಿಂದ ರಶಿಯದವನ್ನು ಹೊರಗೆ ಹಾಕಲಿ; ಅವರಿಗೆ ಮುಯ್ಯಕ್ಕೆ ಮುಯ್ಯವನ್ನ ಬೇಕಾದರೆ- ವಿಮಾನಗಳ ಸಂಖ್ಯೆ ಬೆಳೆಸುವದೊಂದೇ ಉಪಾಯವು. ರಶಿಯಾ ರಾಜ್ಯದ ತುಂಬ ಅಸಂಖ್ಯವಾಗಿ ವಿಮಾನಗಳಾಗಬೇಕು. ಆದುದರಿಂದ ವಿಮಾನ ಕಟ್ಟುವದಕ್ಕಾಗಿ ದ್ರವ್ಯ ಕೊಡಿರೆಂದು ರಶಿಯಾದ ವಿಮಾನೋತ್ಕರ್ಷ ಸಂಘದವರು ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ.

ಇರಬೇಕು ಇಂಥ ಸರದಾರ-

ಈದ ಹಬ್ಬದ ದಿವಸ ಲಂಡನದಲ್ಲಿ ಮುಸಲಮಾನರ ಸಭೆಯಾಯಿತು. ಪಂಜಾಬದ ಗವರ್ನರರಾಗಿದ್ದ ಸರ ಓ ಡ್ವಾಯರಸಾಹೇಬರು ಅಧ್ಯಕ್ಷರಾಗಿದ್ದರು. ಸರದಾರ ಇಕಬಾಲ ಅಲ್ಲಿಖಾನರೆಂಬವರು ವ್ಯಾಖ್ಯಾಕರಾಗಿದ್ದರು. ಮುಸಲಮಾನರು ಬ್ರಿಟಿಶ ಸಾಮ್ರಾಜ್ಯದ ರಾಜನಿಷ್ಠ ಪ್ರಜರಾಗಿದ್ದಾರೆ. ಖಿಲಾಫತವು ನಡುವೆ ಬಂದು ಹೋದ ಅಪ್ಪಗಾಳಿಯು. ಇದರಿಂದ ಅದರ ಕಾರ್ಯಕರ್ತರಾಗಿದ್ದವರಿಗೆ ಮಾತ್ರ ಧನ ಪ್ರಾಪ್ತಿಯಾಯಿತು. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆತರೆ- ಅದು ಹಿಂದೂ ಜನರ ಸ್ವರಾಜ್ಯವಾಗುವದು. ಇಂಗ್ಲಿಷರು ಹೋಗಿ ಹಿಂದೂ ಜನರು ಬರುವರು. ಮುಸಲಮಾನರೂ ಇಂಗ್ಲಿಷರೂ ಒಂದಾದರೇ- ಹಿಂದುಸ್ಥಾನದಲ್ಲಿ ಶಾಂತತೆಯುಳಿಯುವದು. ಎಂಬದಾಗಿ ಸರದಾರರು ಮಾಡಿದ ಭಾಷಣವನ್ನು ಮೆಚ್ಚಿ ಡ್ವಾಯರಸಾಹೇಬರು ಇದ್ದರೆ ಇರಬೇಕಿಂಥ ಸರದಾರನೆಂದು ಇವರ ಬೆನ್ನು ಚಪ್ಪರಿಸಿದರು.

ಅಮಾನುಷ ಕೊಲೆಯು.

ಇಲ್ಲಿಯ ಕಾಟಬ್ಬಾಜಿ ಬಜಾರದಲ್ಲಿ ಕಾಶಿ ಎಂಬ ಹೆಸರಿನ ಹೆಂಗಸೊಬ್ಬಳು ಖಾನಾವಳಿಯನ್ನು ಇಟ್ಟಿದ್ದಳು. ಬುಧವಾರ ದಿವಸ ರಾತ್ರಿ ಯಾರೋ ಈಕೆಯ ಮನೆ ಹೊಕ್ಕು ಮೂಗು ಕೊಯ್ದಿರುವರು. ಮೊಲೆ ಕತ್ತರಿಸಿರುವರು. ಕುತ್ತಿಗೆಯನ್ನು ಕೊಯ್ದಿರುವರು. ಒಟ್ಟಿನಮೇಲೆ ಈಕೆಯ ಶರೀರದ ಮೇಲೆ ಮಾಡಬಾರದ ಕೆಲಸಗಳನ್ನು ಮಾಡಿದ್ದರಿಂದ ಕಾಶಿಯು ಘಾತಿಯಾಗಿ ಸ್ವರ್ಗ ಕಂಡಳು. ಈ ನೋಟವನ್ನು ನೋಡಲಿಕ್ಕೆ ಸಾವಿರಾರು ಜನರು ಮುಗಿಬಿದ್ದಿದ್ದರು. ತಿಂಗಳಿಂದ ತಿಂಗಳಿಂದ ಊರಲ್ಲಿ ಕೆಲವು ಕೊಲೆಗಳು ಎಡಬಿಡದೆ ನಡೆದದ್ದರಿಂದ ಪೋಲಿಸರ ಕರ್ತವ್ಯ ದಕ್ಷತೆಯ ಬಗ್ಗೆ ಜನರು ತಮ್ಮತಮ್ಮೊಳಗೆ ಆಡಿಕೊಳ್ಳುತ್ತಿರುವರು.

ಪ್ರತಿನಿಧಿಯು.

ಪ್ರಜಾ ಸ್ವಾತಂತ್ರ್ಯಕ್ಕೆ ವಿಘ್ನ.

ಸಂಸ್ಥಾನಿಕರ ಸುಲ್ತಾನಶಾಹಿ.

—[o][o]—

ಈದರ ಸಂಸ್ಥಾನದಲ್ಲಿಯ ಪ್ರಜರು ಪ್ರಜಾಪರಿಷತ್ತನ್ನು ಕೂಡಿಸಿದರು; ಮುಂಬಯಿ ಸರಕಾರದವರು ಸಂಸ್ಥಾನಕ್ಕೆ ಕೊಟ್ಟ ದಿವಾನರಾದ ರಾ. ಬ. ಕೊಪಟಸಾಹೇಬರು ಪರಿಷತ್ತಿಗೆ ಅಪ್ಪಣೆ ಕೊಟ್ಟರು. ಎಲ್ಲವೂ ಸಿದ್ಧವಾಯಿತು. ಅಧ್ಯಕ್ಷರು ಬಂದರು. ಪ್ರತಿನಿಧಿ ಪ್ರೇಕ್ಷಕರು ಸಭಾಸ್ಥಾನದಲ್ಲಿ ಕೂಡಿದರು. ಸ್ವಾಲಂಟಿಯರರು ಮಂಟಪ ರಕ್ಷಕರಾಗಿ ನಿಂತರು. ಆಗ ಮಹಾರಾಜರು ಈ ಸಭೆಯ ಅವಶ್ಯಕತೆ ಇಲ್ಲೆಂದು, ಇದನ್ನು ಬಲವಂತಿಕೆಯಿಂದ ಮುರಿಸುವ ದುರಿಚ್ಛೆಯುಳ್ಳವರಾಗಿ, ಅಂದು ಈದ ಹಬ್ಬವಿತ್ತು. ಮುಸಲಮಾನರನ್ನು ... ತಮ್ಮ ಕಾಯಕ ಮಾಡಿಕೊಳ್ಳಬೇಕೆಂದರು. ... ಬಾನಿ ಮುಗಿಸಿದ್ದರೂ, ಅನೇಕ ಆಡು ಮತ್ತು ... ಕುಗಳನ್ನು ಹತ್ತರವೇ ಇದ್ದ ಮಸೀದಿಯ ವಧ ನಡಿಸಿದರು. ಸಭೆಯಲ್ಲಿ ಮಾತು ಕೇಳಿಸಬಾರದೆಂದು ದೊಡ್ಡ ನಗಾರಿ ತಂದು ಅದನ್ನು ಬಡೆಯ ಹತ್ತಿದರು. ಕೆಲ ಮುಸಲಮಾನರು ಕತ್ತಿ ಹಿಡಕೊಂಡು, ಸಭಾ ಮಂದಿರದ ಸುತ್ತಲು ತಿರುಗಾಡಿ, ಭಯೋತ್ಪಾದನೆ ಮಾಡಿದರು. ಸ್ವಾಲಂಟಿಯರರ ಮೇಲೆ ಕಲ್ಲು, ಮಾಂಸ ತೂರಿದರು. ಆದರೂ ಸಭೆಯ ಕೆಲಸವು ಶಾಂತ ಮತ್ತು ಗಂಭೀರ ವೃತ್ತಿಯಿಂದ ನಡೆಯಿತು. ಹೀಗೆ ಸಭೆಯು ನಿರ್ವಿಘ್ನದಿಂದ ನಡೆದದ್ದನ್ನು ಕಂಡು, ಮಹಾರಾಜರು ಪರಿವಾರ ಸಹಿತ ಬಿಚ್ಚುಗತ್ತಿ ಹಿಡಕೊಂಡು ಸಭಾಸ್ಥಾನಕ್ಕೆ ಬಂದು ತಿರುಗಾಡಿ ಹೋದರು. ಮಹಾರಾಜರು ಎಷ್ಟೇ ಕೋಪ ಪರವಶರಾದರೂ ಈದ ಹಬ್ಬದ ದಿನ ಪ್ರಜರ ಕುರಬಾನಿ ಮಾಡಲಿಲ್ಲೆಂಬದು ನಮಗೆ ದಲ್ಲಿ ಸಂತೋಷವು.

ಶಾಂಘಾಯಿಯಲ್ಲಿರುವ ಹಿಂದೂ ಸೈನ್ಯವನ್ನು ಫಿತೂರ ಮಾಡಿ, ಇಂಗ್ಲಿಷರ ವಿರುದ್ಧ ಬಂಡಾಯ ಮಾಡಲು ಮಸಲತ್ತು ಮಾಡಿದರೆಂದು ಅಲ್ಲಿಯ ಹದಿನಾರು ಜನ ಹಿಂದುಗಳ ಮೇಲೆ ಖಟ್ಲೆ ಮಾಡಿದ್ದಾರೆ.

ಧಾರವಾಡ—

ಶ್ರೀಮದುತ್ತರಾದಿ ಮಠದ ಶ್ರೀ ಪಾದಂಗಳವರು ನಾಳಿನ ದಿವಸ ಹುಬ್ಬಳ್ಳಿಗೆ ಪ್ರಯಾಣ ಮಾಡಿ, ಚಾತುರ್ಮಾಸ್ಯಕ್ಕೆ ಮರಳಿ ಧಾರವಾಡಕ್ಕೆ ಬರುವರು.

ಇಲ್ಲಿಯವರಾದ -ಶ್ರೀ ಸಾ|| ಲಕ್ಕುಬಾಯಿ

ನೋಟೀಸು

ಶಿವನಗವಡಾ ತಂದಿ ರುದ್ರಗವಡಾ ಪಾಟೀ ಸಾ|| ದೇವರಶೀಗಿಹಳ್ಳಿ ತಾಲ್ಕು ಬಯಿಲಹೊಂಗಲ ಈತನಿಗೆ-

ಕೆ ಳ ಗೆ ಹೆ ಬ್ಬ ಟ್ಟಿ ನ ಗು ತಾ ಮಾ ಡು ವ ವ ರ ಕ ಡಿಂ ದಾ ತಿ ಳಿ ಸು ವ ದೇನೆಂದರೆ- ನೀನು ನನ್ನ ಲಗ್ನದ ಗಂಡನಿದ್ದು ನನ್ನನ್ನು ಕರಕೊಂಡು ಹೋಗಿ ಚಲೋ ರೀತಿಯಿಂದಾ ನೀನು ನನ್ನ ಕೂಡ ಪ್ರಪಂಚ ಮಾಡದೆ ಹೊಡದು ಬಡದು ನನ್ನ ತವರ ಮನಿಯವರು ನನಗೆ ಕೊಟ್ಟ ದಾಗೀನೆಗಳನ್ನು ಕಸಗೊಂಡಿರುತ್ತೀದಿ ಅವುಗಳು-

೧ ಭಂಗಾರಬಳಿ ೨ ತೊಲಿ ೬
೧ ಸರಗಿ ೧ ತೊಲಿ ೧೨
೧ ಭಂಗಾರದ ಸರಾ ೧ ತೊಲಿ ೪
೧ ಗೆಜ್ಜಿ ಟೀಕಿ ೧ ತೊಲಿ ೮
೧ ಗುಂಡಿನ ಟೀಕಿ ೧ ತೊಲಿ ೨

ಈ ಪ್ರಕಾರ ದಾಗೀನೆಗಳನ್ನು ಕಸಕೊಂಡು ಕಳಸಿಕೊಟ್ಟೀರತ್ತಿದಿ ಮೇಲೆ ಬರೆದ ದಾಗೀನೆಗಳನ್ನು ನನಗೆ ಕೊಟ್ಟು ನೀನು ಸರಕಾರದಲ್ಲಿ ವ ಪಂಚರ ಳಿಗೆ ಯೋಗ್ಯ ಜಾಮೀನು ಕೊಟ್ಟು ನನ್ನನ್ನು ಕರಕೊಂಡು ಹೋಗಿ ಉತ್ತಮ ರೀತಿಯಿಂದಾ ಪ್ರಪಂಚ ಮಾಡಬೇಕು ಇಲ್ಲವೆ ಇದೇ ಪಾರೀನುತ್ತ ಅಂತಾ ತಿಳಿಯುತಕ್ಕದ್ದು ನನ್ನ ದಾಗೀನೆಗಳ ಬಗ್ಗೆ ನಿನ್ನ ಮೇಲೆ ದಾವೇ ಮಾಡುವದರಲ್ಲಿ ಬರುವದು ನೀನು ನನ್ನ ಮೇಲೆ ದಾಂಡಗಾಯಿ ವಗೈರೆ ಮಾಡಿದರೆ ನಿನ್ನ ಮೇಲೆ ಫಿರ್ಯಾದಿ ಮಾಡಲಾದೀತು.

ತಾರೀಖು ೧೬-೬-೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಶಿದ್ದವ್ವಾ ಕೋಂ ಶಿವನಗವಡಾ ಈಕಿಯ ಕೈಟು ಅದೆ.

ನೋಟೀಸು

ಶಿದ್ದಾ ತಂದಿ ನಿಂಗಪ್ಪಾ ಬೆಳವಡಿಯವರ ಸಾ|| ಉಪ್ಪಿನಬೆಟಗೇರಿ ಈತನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಮಲ್ಲವ್ವಾ ಕೋಮ ಶಿದ್ದಾ ಬೆಳವಡಿಯವರ ಹಾಲಿವಸ್ತಿ ಅರಾಪೂರ ತಾಲೂಕ ಧಾರವಾಡ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದಿವೆಯ ಗಂಡನಾಗಬೇಕು. ಮದಿವೆಯಾಗಿ ಎಳೆಂಟು ವರ್ಷವಾಯಿತು ದೊಡ್ಡವಳಾಗಿ ನಾಲ್ಕೈದು ವರ್ಷವಾಯಿತು ನಿನ್ನ ಹೊಟ್ಟಿಯಿಂದ ನನಗೆ ಮಕ್ಕಳಾದವು ಆದರೆ ಸತ್ತು ಹೋದವು ನೀನು ಯಾವಾಗಲು ನನ್ನ ಕೂಡ ನೆಟ್ಟಗೆ ಇರಲಿಲ್ಲ. ತಾಯಿ ಸಾಯುವ ತನಕ ತವರ ಮನಿಗೆ ಕಳಿಸಲಿಲ್ಲ. ಬಹಳ ಜುಲುಮೆಯಿಂದ ತಾಯಿಯ ಮಣ್ಣಿಗೆ ನೀನು ನನ್ನನ್ನು ಕರಕೊಂಡು ಬಂದಿ ಆ ಮಾತಿಗೆ ಎಂಟೇ ದಿವಸವಾಯಿತು ನಾನೂ ನೀನೂ ಮಣ್ಣಿಗೆ ಬಂದೆವು ಮಣ್ಣು ಕೊಡುವ ಕೆಲಸ ತೀರಿದ ಬಳಿಕ ನೀನು ಆಗಿಂದಾಗ ನನ್ನನ್ನು ಕಳಿಸಿಕೊಡಲಿಕ್ಕೆ ಹೇಳಿದಿ ಆದರೆ ನನ್ನ ಸೋದರಮಾವನು ನಾಲ್ಕು ದಿವಸ ತಡಿ, ಕಳಿಸಿಕೊಡತೇವೆಂದರು ಆದರೆ ನೀನು ಈಗಿಂದೀಗ ಕಳಿಸಿಕೊಡಬೇಕೆಂದು ದಂಗೆ ಮಾಡಿ, ನನ್ನನ್ನು ಹೊಡೆದು ಬಡೆದು ದುಖಾಪತ ಮಾಡಿ, ಕೊರಳೊಳಗಿನ ಗುಳದಾಳಿ ಸರಾ ಹರಿದು ಹೋದಿ ಮತ್ತು ಈ ನಂತರ ನನ್ನ ಬಾಳಿವೆ ಮಾಡುವದಿಲ್ಲೆಂದು ಊರ ತುಂಬ ಹೇಳಿ ನಿನ್ನೂರಿಗೆ ಹೋದಿ ಆದ್ದರಿಂದ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಊರಿಗೆ ಬಂದು, ಪಂಚರ ಜಾಮೀನು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಯಾಕಂದರೆ ನನ್ನ ಸಂರಕ್ಷಣೆ ಮಾಡುವಂಥ ತಂದೆತಾಯಿಗಳಿಬ್ಬರೂ ಇರುವದಿಲ್ಲ ನಿನ್ನ ಕೂಡ ನಾನು ನನ್ನ ತಾಯಿಗೆ ಮಣ್ಣಿಗೆ ಬಂದಾಗ ದಾಗೀನ ವಗೈರೆ ತಂದಿಲ್ಲ ಬರಿ ಮೈಯಿಂದ ಹಳೇ ಶೀರಿಯ ಮೇಲೆ ಬಂದಿರುತ್ತೇನೆ ತಿಳಿಯುವದು

ತಾ|| ೧೫ ಜೂನ ೧೯೩೭ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಮಲ್ಲವ್ವಾ ಕೋಮ ಶಿದ್ದಾ ಬೆಳವಡಿಯವರ ಈಕಿ ಕೈದು ಇರುತ್ತದೆ.

ಪ್ಲೇಗ ಮಾರಿಕಾ ಬೇನೆಗೆ ಆಲಕ್ಷ್ಯವು ಅನರ್ಥಕ್ಕೆ ಕಾರಣವು.

ಮಾರಿಕಾ ಬೇನೆಗೆ

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.
೨-೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿದಿರುವದು.
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯು
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಜಾಹೀರಾತು.

ಪ್ರಿಯಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ನ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋರ ವ್ಯಾಪಾರಸ್ಥರಿಗೆ ಕಮೀಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ " ಉತ್ತಮ " ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ಸಾಲಾತಿ ಕಡೆಗೆ ಪಸಾರವಾಗಿರುತ್ತದೆ. ಆದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ತೆಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಆಗಾವೂ ಕಳಿಸತಕ್ಕದ್ದು.

[ಸಿಗುವ ಪತ್ತೆ]

ಏಜಂಟ-

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಟಿಕಾರೆ,
ವಾಚ ರಿಪೇರರ ವ ಡೀಲರ ಬೆಳಗಾವಿಗಲ್ಲಿ, ಹುಬ್ಬಳ್ಳಿ.

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨-೮-೦ ರೂ
೬ "	೭-೦-೦ ರೂ
೪ "	೪-೦-೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ಸಮ್ಮಾರ್ತಾರ್ಥಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ಸತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮} ಧಾರವಾಡ ಶುಕ್ರವಾರ ತಾರೀಖು ೧೭ ನೇ ಜೂನ ೧೯೩೨ {ಸಂಚಿಕೆ ೧೨೭

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸು ಗಳುಂಟು. ಗಾಲಿಯ ವ್ಯಾಸವು ೪೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರ ತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತಾರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸ ರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು,

ಮ್ಯಾನೇಜರ ವಿಜಯ ಧಾರವಾಡ

—

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರ ಕಿಂಮತೆಯು ಆರು ಲಕ್ಷದ ಮೇಲುಂಟು. ಶೇರ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ನಡೆಸಲ್ಪಡುವವು. ಕಾಯಿ(ಂ)ಮತ್ತು ಚಾಲ್ತಿ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವ ರಿಂದ ತಿಳಕೊಳ್ಳಬೇಕು.

ಮಂಡ್ಯ ವರಿಾವ ಬಿ. ಜಕಾತಿ, ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇ ಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

—(೦)—

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆ ರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾ ಲಪರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷ ಕ್ಕೆ ಆರುವರಿ ರೂಪಾಯಿ ಬಡ್ಡಿ ದೊರೆಯುವದು ಹೆಚ್ಚು ಕಾಲದ ಠೇವಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನಗಳನ್ನು ಒತ್ತೀ ಇ ಟ್ಟುಕೊಳ್ಳಲ್ಪಡುವವು ಪಕ್ಕಾ ವ ಹುಂಡಿಯ ವ್ಯವಹಾ ರ ಮಾಡಲ್ಪಡುವದು

ಮೆಸರ್ಸ ದೇಶಪಾಂಡೆ ಮತ್ತು ಅಣ್ಣಾಚಾರ್ಯ ಶೆಟ್ಟಿ ಕಂಪನಿ ಮ್ಯಾನೇಜಿಂಗ ಏಜಂಟ್ಸ. ಚೇರಮನ.

ವಿಜಯ.

ಧಾರವಾಡ ತಾ-೧೯-೮-೨೭ ನೇ ಇಸ್ವಿ

ನಿಜಾಮ ಹೈದರಾಬಾದಿನಲ್ಲಿ ಹಿಂದೂ ಜನರ ಚಳವಳಿಯು.

ಹೈದರಾಬಾದದ ರಾಜರು ಮುಸಲಮಾನರು. ಪ್ರಜರು ಹಿಂದೂ ಜನರು. ನೂರಕ್ಕೆ ೮೫ ರಷ್ಟು ಹಿಂದೂ ಜನರಿದ್ದಾರೆ. ಆದರೆ ಜನಸಂಖ್ಯೆಯ ಪ್ರಮಾಣದಿಂದ ರಾಜ್ಯಕಾರಭಾರದಲ್ಲಿ ಹಿಂದೂ ಜನರಿಗೆ ಅಧಿಕಾರವಿರುವದಿಲ್ಲೇ ಇಲ್ಲ. ಸ್ವತಃ ನಿಜಾಮಸಾಹೇಬರಿಗೆ ಧರ್ಮದ ಬಹಳ ಅಭಿಮಾನವಿರುತ್ತದೆ. ರಾಜರಿದ್ದವರು ಎಲ್ಲ ಪ್ರಜರನ್ನು ಸಮದೃಷ್ಟಿಯಿಂದ ನೋಡತಕ್ಕದ್ದು. ಹತ್ತರವೇ ಇದ್ದ ನ್ಯಾಯಾಲಯದಲ್ಲಿರುವ ಆಡಳಿತೆಯನ್ನು ಕಣ್ತೆತ್ತಿ ನೋಡುವದಿಲ್ಲ. ದೇಶ ತಮ್ಮದಾದರೂ, ಹಿಂದೂ ಜನರು ಅನೇಕವಾಗಿ ತಾಪಗಳನ್ನೂ ಹಿಂಸೆಗಳನ್ನೂ ಹೊಂದುತ್ತಿರುವರು. ಬ್ರಿಟಿಶ ರಾಜ್ಯದಲ್ಲಿರುವಷ್ಟು ಹಕ್ಕುಗಳು ಕೂಡ ಹಿಂದೂ ಜನರಿಗಿರುವದಿಲ್ಲ. ಹಿಂದುಸ್ಥಾನ ಸರಕಾರದ ಒತ್ತಾಯದ ಮೂಲಕ ರಾಜಾ ಸರ ಕಿಶನಪ್ರಸಾದರು ಮಂತ್ರಿಯಾಗಿದ್ದಾರೆ. ಹಾಯಕೋರ್ಟಿನ ಜಡ್ಜರಲ್ಲಿ ಪಂಡಿತ ಕೇಶವರಾಯರಿದ್ದರು. ನೌಕರಿ ಸಿಕ್ಕ ಕೂಡಲೆ, ಅವರನ್ನು ಮನೆಗೆ ಕಳಿಸಿದರು. ಬ್ಯಾರಿಸ್ಟರ ವಾಮನನಾಯಿಕರು ಹಿಂದೂ ಜನರಿಗಾಗಿ ರಾಜಕೀಯ ಮತ್ತು ಧಾರ್ಮಿಕ ಹಕ್ಕುಗಳನ್ನು ಪಡೆಯಬೇಕೆಂದು ಹಿಂದೂ ಸಭಾ ಸ್ಥಾಪನೆ ಮಾಡಿ, ಚಳವಳಿ ನಡಿಸಿದ್ದಾರೆ. ಸ್ವಾಮೀ ಶ್ರದ್ಧಾನಂದರನ್ನು ಕೊಂದಂತೆ ಇವರನ್ನೂ ಕೊಲ್ಲಲು ರೋಹಿಲೆಯರು ಪ್ರಯತ್ನಿಸಿದರು. ಯಾವ ಬಗೆಯಿಂದ ನೋಡಿದರೂ ಹಿಂದೂ ಜನರು ತಲೆ ಎತ್ತುವಂತಿಲ್ಲ. ನೂರಕ್ಕೆ ಮೂವರಿಗೆ ಶಿಕ್ಷಣ ಹೊಂದಿದವರ ಸಂಖ್ಯೆಯುಂಟು. ಈ ಅನವಸ್ಥೆಯನ್ನು ದೂರ ಮಾಡುವದಕ್ಕಾಗಿ ಹಿಂದೂ ಜನರು ಅನೇಕ ಬಗೆಯ ಕೋಪ ಕಷ್ಟಗಳಿಗೆ ತಲೆಗೊಟ್ಟು, ಈ ಚಳವಳಿ ನಡಿಸಿದ್ದಾರೆ.

ಹಿಂದೂ ಜನರು ರಾಜಕೀಯ ಮಾತ್ರವಲ್ಲ, ಧಾರ್ಮಿಕ ವಿಷಯಗಳಲ್ಲಿಯೂ ಸ್ಪರ್ಧೆಗೊಂಡಿದ್ದಾರೆ. ರಾಜಕೀಯವೆಂಬ ಸರಕಾರದ ಮುಸಲಮಾನ ಅಧಿಕಾರಿಗಳು ಎಲ್ಲ ಸಭೆಗಳನ್ನು ಬಂದು ಮಾಡುತ್ತಾರೆ. ದೇವರ ಉತ್ಸವಗಳು ಸಹ ಇವರಿಗೆ ಅಸಹ್ಯವಾಗಿ ಇವು ಗುಡಿ ಬಿಟ್ಟು ಹೊರಬೀಳುವಂತಿಲ್ಲ. ಮುಸಲಮಾನ ಅಧಿಕಾರಿಗಳಿಗೆ ಹಿಂದೂ ಜನರ ನಡೆನುಡಿಗಳು ತಿಳಿಯದ ಮೂಲಕ, ಅವರಿಂದ ಅನೇಕ ಅನ್ಯಾಯ ಮತ್ತು ಅಸತ್ಕೃತ್ಯಗಳಾಗುತ್ತವೆ. ಶಾಸ್ತ್ರ ಹೇಳುವದಕ್ಕಾಗಿ ಮೌಲ್ವಿ ಜನರನ್ನು ಸಂಬಳ ಕೊಟ್ಟು ಇಟ್ಟಿದ್ದಾರೆ. ಆದರೆ ಇದೇ ಧರ್ಮಶಾಸ್ತ್ರಕ್ಕಾಗಿ ಹಿಂದೂ ಪಂಡಿತರ ಯೋಜನೆ ಮಾಡಿರುವದಿಲ್ಲ. ಬ್ರಿಟಿಶ ರಾಜ್ಯದಲ್ಲಿ ಜನಸಂಖ್ಯೆಯ ಪ್ರಮಾಣದಿಂದ ಅಸೆಂಬ್ಲಿ ಕೌನ್ಸಿಲ ಮೊದಲು ಮಾಡಿಕೊಂಡು, ಲೋಕಲಬೋರ್ಡ ಮ್ಯುನಿಸಿಪಾಲಿಟಿಗಳಲ್ಲಿ ಸಹ ತಮಗೆ ಅಧಿಕಾರವಿರಬೇಕೆಂದು ಮುಸಲಮಾನರು ಜಂಗು ಕಟ್ಟಿ ಹಿಂದೂ ಜನರ ಕೂಡ ಹೋರಾಡುತ್ತಿದ್ದಾರೆ. ಆದರೆ ನಿಜಾಮ ರಾಜ್ಯದಲ್ಲಿ ವಾಸವಾಗಿರುವಂಥ ಹಿಂದೂ ಜನರಿಗೆ ಈ ಪ್ರಮಾಣದಿಂದ ಕೆಲಸ ಕೊಡಿರೆಂದು ಒಬ್ಬರೂ ಹೇಳುವದಿಲ್ಲ. ಬ್ರಿಟಿಶ ರಾಜ್ಯದಂತೆ ತಮಗೂ ಅಧಿಕಾರ ದೊರೆಯಬೇಕೆಂದು ಹಿಂದೂ ಜನರು ಪ್ರಯತ್ನ ಮಾಡುತ್ತಿರುವದು ಸ್ತುತ್ಯವಾದದ್ದು.

ಹೋದ ವಾರದಲ್ಲಿ ಹೈದರಾಬಾದಿನಲ್ಲಿ ಹಿಂದೂ ಜನರ ಅರಸೆಯ ಪರಿಷತ್ತು ಕೂಡಿತ್ತು. ಪರಿಷತ್ತಿಗೆ ಮಹಾರಾಜಾ ಕಿಸನಪ್ರಸಾದರೂ ದಯಮಾಡಿಸಿದ್ದರು. ಕಲಕತ್ತೆಯ ಶ್ರೀಮತಿ ಸರಲಾದೇವಿಯವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ರಾಜಕೀಯ ಸಭೆಗಳ ಪ್ರತಿಬಂಧ ತೆಗೆದು ಹಾಕಬೇಕು. ಹಿಂದೂ ಪಂಡಿತರಿಗೆ ಆಶ್ರಯ ಕೊಡಬೇಕು. ಸ್ತ್ರೀಶಿಕ್ಷಣದ ಅಭಿವೃದ್ಧಿ ಮಾಡಬೇಕು. ಹಿಂದೂ ಜನರ ಉನ್ನತಿಯಾಗುವಂಥ ಕರ್ತವ್ಯಗಳನ್ನು ನಿಜಾಮ ದರಬಾರದವರು ಮಾಡಬೇಕೆಂಬ ಠರಾವುಗಳು ಪಾಸಾದವು. ಬ್ರಾಹ್ಮಣರೇ ಅಸ್ಪೃಶ್ಯತೆಯನ್ನು ಮಾಡಿದರು. ಅವರೇ ಅದನ್ನು ತೆಗೆದು ಹಾಕಬೇಕೆಂದು ಶ್ರೀ. ಸರಲಾದೇವಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಕಲಕತ್ತೆಯಲ್ಲಿ ದಂಗೆಯ ಹಾವಳಿ-

ಈದ ಹಬ್ಬದ ದಿವಸ ಮಚವಾಬಾಜಾರವೆಂಬಲ್ಲಿ ಪಶುವಧ ಮಾಡಬಾರದೆಂದು ಪೋಲೀಸರು ಮುಂದಾಗಿ ಹುಕುಮ ಮಾಡಿದ್ದರು. ಈ ಹುಕುಮಿನ ವಿರುದ್ಧ ಅಲ್ಲಿ ವಧ ನಡೆದಿರುತ್ತದೆಂದು ಸುಳ್ಳೇ ಗೆಟ್ಟ ಸುದ್ದಿ ಹಬ್ಬಿತು. ಅನೇಕ ಜನ ಮುಸಲಮಾನರು ಬಂದು ಮಸೀದಿ ಸೇರಿದರು. ದಂಗೆಯ ಭಯ ಹುಟ್ಟಿತು. ಅಂಗಡಿಕಾರರು ಲಗುಬಗೆಯಿಂದ ಅಂಗಡಿಗಳನ್ನು ಹಾಕಿದರು. ಜನರು ಮನೆಯ ಬಾಗಿಲು ಹಾಕಿದರು. ಪೋಲೀಸ ಕಮೀಶನರ ವೇಗದಿಂದಾಗಿ ಎ... ತುಕಡಿ...ರು ... ಮುಸಲಮಾನರಿಗೆ ಮನೆಗೆ ಹೋಗಲು ಹೇಳಿದರು. ಅವರು ಹಟಮಾರಿತನದಿಂದ ಅಲ್ಲಿಯೇ ನಿಂತರು. ಕುದರೆ ದಂಡು, ತೋಫು ಹೇರಿದ ಕವಚದ ಬಂಡಿ, ಕೈದಿಗಳನ್ನು ಹಾಕುವ ಮೋಟಾರ ಬಂದದ್ದನ್ನು ಕಂಡು ಮುಸಲಮಾನರು ಹಿತ್ತಲ ಬಾಗಿಲಿನಿಂದ ಪಲಾಯನ ಹೇಳಿಸಿದರು. ದಂಗೆಯ ಸದ್ದು ಅಡಗಿ, ಎಲ್ಲ ಕಡೆಗೂ ಶಾಂತವಾಯಿತು.

ಹೈದರಾಬಾದಿನಲ್ಲಿ ದಂಗೆ-

ನಿಜಾಮ ಹೈದರಾಬಾದಿನಲ್ಲಿ ಹುಶೇನಸಾಗರ ಕೆರೆಯ ಹತ್ತರಿರುವ ಕಾಬಿಲಗೂಡವೆಂಬ ಗ್ರಾಮದಲ್ಲಿ ಹಿಂದೂ ಜನರ ಲಗ್ನದ ಮೆರವಣಿಗೆ ಹೊಂಟಿತ್ತು. ಮಸೀದೆಯ ಮುಂದೆ ವಾದ್ಯ ಬಾರಿಸಬೇಡಿರೆಂದು ಮುಸಲಮಾನರು ಪ್ರಾರ್ಥನೆಬಿಟ್ಟು ಬಂದು, ಅಡ್ಡಿ ಮಾಡಿದರು. ಆಗ ಇಬ್ಬರ ನಡುವೆ ದಂಗೆಯಾಯಿತು. ಐದಾರು ಜನ ಮುಸಲಮಾನರು ಪ್ರಾಣಾಪಾಯವಾಗುವಂಥ ಘಾಯ ಹೊಂದಿದ್ದಾರೆ. ಹೈದರಾಬಾದಿನಿಂದ ಪೋಲೀಸರು ಹೋಗಿ, ದಂಗೆಗಾರರೆಂದು ಕೆಲವರನ್ನು ಹಿಡಿದಿದ್ದಾರೆ.

ಕಾಂಗ್ರೆಸ ಮತ್ತು ಬ್ರಾಹ್ಮಣೇತರರು-

ಮದ್ರಾಸದ ಬ್ರಾಹ್ಮಣೇತರರು ರಾಷ್ಟ್ರೀಯ ಸಭೆಯಲ್ಲಿ ಸೇರಬೇಕೆಂಬ ವಿಚಾರ ಮಾಡಿದ್ದಾರಷ್ಟೇ. ಇವರು ಕಾಂಗ್ರೆಸ ಸೇರುವದು ಯೋಗ್ಯವು. ಶ್ರೀ. ಶ್ರೀನಿವಾಸ ಅಯ್ಯಂಗಾರರನ್ನು ಹೊರಗೆ ಹಾಕಬೇಕು. ಕಾಂಗ್ರೆಸವನ್ನು ಜಸ್ಟಿಸ ಪಕ್ಷದ ಮುಖಮಾಡಬೇಕೆಂದು ಇವರ ಹೃದ್ಗತವಾಗಿದ್ದರೆ- ಇವರಿಗೆ ತೀರ ಹುಚ್ಚರೆನ್ನಬೇಕಾಗುತ್ತದೆಂದು ಬ್ಯಾರಿಸ್ಟರ ಜೋಸೆಫರು ಮದ್ರಾಸದಲ್ಲಿ ಭಾಷಣ ಮಾಡಿದ್ದಾರೆ. ಬ್ರಾಹ್ಮಣೇತರರು ಈ ಉದ್ದೇಶವಿಟ್ಟುಕೊಂಡು ಕಾಂಗ್ರೆಸ ಸೇರುವದಾದರೆ- ಸಣ್ಣ ಬಾಯಿಯ ದೊಡ್ಡ ತುತ್ತು ನುಂಗುವಂತಾಗುತ್ತದೆ.

ಸ್ವರಾಜ್ಯ ಸಾಧನೆ-

ಬ್ರಾಹ್ಮಣೇತರರನ್ನೇ ಉದ್ದೇಶಿಸಿ ಬ್ಯಾರಿಸ್ಟರ ಸಾಹೇಬರು ಇನ್ನೂ ಅನ್ನುವದೇನಂದರೆ-

“ಬ್ರಾಹ್ಮಣೇತರರ ಕೃತಿಯು ಬಹ್ವಂಶವಾಗಿ ಆಕ್ಷೇಪಾರ್ಹವಾಗಿರುತ್ತದೆ. ಬ್ರಾಹ್ಮಣರನ್ನು ಮೂಲೆಗೊತ್ತುವದರಿಂದ ಸ್ವರಾಜ್ಯ ಸ್ವಾತಂತ್ರ್ಯ ದೊರೆಯುವದೆಂದು ಇವರ ಭಾವನೆಯಾದದ್ದು ತೀರ ಹಾಸ್ಯಾಸ್ಪದವು. ಈ ವಿಷಯವಾಗಿ ಬ್ರಾಹ್ಮಣೇತರರ ವಿಯತ್ಥವಾಗಿ ನನ್ನ ಮತವುಂಟು. ಸ್ವರಾಜ್ಯ ಸ್ವಾತಂತ್ರ್ಯ ದೊರೆತರೇ ಬ್ರಾಹ್ಮಣ ಬ್ರಾಹ್ಮಣೇತರ ಐಕ್ಯವಾಗುವದು. ಬ್ರಾಹ್ಮಣೇತರರು ಕಾಂಗ್ರೆಸ ಸೇರುವದರಿಂದ, ಅವರ

ಮೊದಲಿನ ರಾಜಕೀಯ ವಿಚಾರಗಳ ದಿವಾಳಿ ಹೊರಡಿತೆಂದೇ ಅರ್ಥವಾಗುತ್ತದೆ. ಇವರು ಬ್ರಾಹ್ಮಣೇತರವೆಂಬ ಹಟ್ಟಾಟವನ್ನು ಬಿಟ್ಟು ಕಾಂಗ್ರೆಸ ಸೇರಿ ಸ್ವರಾಜ್ಯಕ್ಕಾಗಿ ಮುಂದೊರೆದರೆ- ನಾನು ಸ್ವತಃ ಈ ಕೆಲಸದಲ್ಲಿ ಬ್ರಾಹ್ಮಣರನ್ನು ದೂರೀಕರಿಸುವದಕ್ಕೆ ಸಿದ್ಧನಿದ್ದೇನೆ"

ಬ್ರಾಹ್ಮಣೇತರರು ಕಾಂಗ್ರೆಸದ ಧ್ಯೇಯದಿಂದ ವರ್ತಿಸಿ, ಸ್ವರಾಜ್ಯ ದೊರಕಿಸುವದಾದರೆ- ಬ್ರಾಹ್ಮಣರು ಬೇಕಾದಂಥ ಸ್ವಾರ್ಥತ್ಯಾಗ ಮಾಡಲು ಸಿದ್ಧರಿದ್ದಾರೆಂದು ನಾವು ಎದೆತಟ್ಟಿ ಹೇಳುತ್ತೇವೆ.

ಚೀನದ ಆಂಬ್ಯುಲನ್ಸ-

ಚೀನಕ್ಕೆ ಹೋಗುವ ಆಕ್ಸಿಕೆಯ ಆಂಬ್ಯುಲನ್ಸಕ್ಕೆ ಹೋಗಲು ೧೪೫ ಅರ್ಜಿಗಳು ಬಂದಿವೆ. ಕಾಯದೆ ಕೌನ್ಸಿಲ ಮತ್ತು ಅಸೆಂಬ್ಲಿಯ ಮೆಂಬರರು, ಗಂಡ ಹೆಂಡರು, ಎಲ್ಲ ಜಾತಿಗಳ ಸ್ತ್ರೀಯರು, ಬ್ರಾಹ್ಮಣ- ಬ್ರಾಹ್ಮಣೇತರರು ಅರ್ಜಿಗಳನ್ನು ಕಳಿಸಿದ್ದಾರೆ. ಅನೇಕರು ಸ್ವಂತ ವೆಚ್ಚದಿಂದ ಹೋಗುವರು. ಕೆಲವರು ಅಲ್ಪ ಸಹಾಯ ಬೇಡಿದ್ದಾರೆ. ಇವರಲ್ಲಿ ೨೫ ಜನರನ್ನು ಆರಿಸುವದು ಒಳ್ಳೇ ಪ್ರಯಾಸವಾಗಿದೆ ಡಾಕ್ಟರ ಹರ್ಡೀಕರರು ಈ ಆಂಬ್ಯುಲನ್ಸದ ಕೂಡ ಹೋಗುವರು, ನಾಲ್ಕೂ ಕಡೆಯಿಂದ ದ್ರವ್ಯ ಸಹಾಯ ಬರುತ್ತಿರುವದು.

ಪೈಸಾ ಫಂಡ ರಾನಡೆಯವರಿಗೆ
ದಂಡ ಅಥವಾ ಶಿಕ್ಷೆ

—[೦][೦]—

ಪುಣೆಯಲ್ಲಿ ಪೈಸಾ ಫಂಡಿನ ರಾನಡೆಯವರು ಬೀದಿಗಳಲ್ಲಿ ಗಂಟೆ ಬಾರಿಸುತ್ತಾ, ಹಿಂದೂ ಮುಸಲಮಾನ ಐಕ್ಯದ ವಿಷಯವಾಗಿ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದರು. ಈ ಪ್ರಕಾರದ ಕೃತ್ಯದಿಂದ ಸಾರ್ವಜನಿಕ ರಹದಾರಿಗೆ ಅಡ್ಡೀ ಮಾಡಿದಂತಾಗುತ್ತದೆಂದು ಪೋಲೀಸರು ಇವರ ಮೇಲೆ ಕೆಲಸ ನಡಿಸಿದರು. ಮ್ಯಾಜಿಸ್ಟ್ರೇಟರು ಇವರನ್ನು ಅಪರಾಧಿ ಮಾಡಿ, ಇವರಿಗೆ ಎರಡು ರೂಪಾಯಿ ದಂಡ ಅಥವಾ ಎರಡು ದಿವಸದ ಕೈದಿನ ಶಿಕ್ಷೆ ವಿಧಿಸಿದರು. ರಾನಡೆಯವರು ದಂಡ ಕೊಡುವದಿಲ್ಲೆಂದರು. ಎರಡು ದಿವಸದ ಮಟ್ಟಿಗೆ ಇವರನ್ನು ತುರಂಗಕ್ಕೆ ಕಳಿಸಬಾರದೆಂದು ಮ್ಯಾಜಿಸ್ಟ್ರೇಟರು ದಂಡ ರದ್ದು ಮಾಡಿ, ಇವರಿಗೆ ಹೋಗಗೊಟ್ಟರು ಕೂಡಲೆ ಶ್ರೀ. ರಾನಡೆಯವರು ತಮ್ಮ ಕಾರ್ಯಕ ಪ್ರಾರಂಭಿಸಿ ಗಂಟೆ ಬಾರಿಸಿ, ಜನರನ್ನು ಕರೆಸಿಕೊಂಡು ಪೋಲೀಸರು ದಕ್ಷತಾಪೂರ್ವವೆಂದಿದ್ದ ಹಸ್ತಪತ್ರಿಕೆಗಳನ್ನು ಹಂಚಿದರು.

ನೃತ್ಯಶಾಲೆಯಲ್ಲಿ ಗೋಳೀಬಾರು.

—೦—

ಬ್ರಾಝಿಲದೇಶದಲ್ಲಿರುವ ಪೋರ್ಟೋ ಅಲಿಜೆರವೆಂಬ ಗ್ರಾಮದಲ್ಲಿಯ ಜನರು ನೃತ್ಯವಾಡಿ ಆನಂದಪಡುತ್ತಿದ್ದರು. ದಂಡಿನ ಓರ್ವ ಕಾಮದಾರನು ಒಳಗೆ ಹೋಗಬೇಕೆಂದನು. ದ್ವಾರಪಾಲಕರು ಬಿಡಲಿಲ್ಲ. ಕೂಡಲೆ ಸೈನಿಕರನ್ನು ತಂದು, ಅವರಿಗೆ ಹುಕುಮು ಮಾಡಿ, ಫಾಯರ ಮಾಡಿಸಿದನು. ಈ ಅನಾಹುತದಿಂದ ೧೧ ಜನರು ಸತ್ತರು. ೨೭ ಜನರು ಘಾಯವಾಗಿದ್ದಾರೆ. ಸರಕಾರದವರು ಗುಂಡು ಹಾಕಿದ ಸೋಲ್ಜರರನ್ನು ದಸ್ತಗಿರ ಮಾಡಿದ್ದಾರೆ.

ಪಂಡಿತ ಮಾಲವಿಯಾವರ ಚಿರಂಜೀವ ಪಂಡಿತ ಗೋವಿಂದರ ಮೇಲೆ ಪೋಲೀಸರ ಕರ್ತವ್ಯದಲ್ಲಿ ಅಡ್ಡ ಹೋದ ಆರೋಪದ ಖಟ್ಲೆಯಾಯಿತು. ಮ್ಯಾಜಿಸ್ಟ್ರೇಟರು ಇವರಿಗೆ ಒಳ್ಳೆಯ ರೀತಿಯಿಂದ ನಡೆಯೆಂದು ಬುದ್ಧಿ ಹೇಳಿ ಬಿಟ್ಟು ಬಿಟ್ಟರು.

ಪಂಡಿತ ಜವಾಹರಲಾಲ ನೆಹರು ಇವರ ಚಿರಂಜೀವಿಯು ಎಮ್. ಎ. ಪರೀಕ್ಷೆಯಲ್ಲಿ ಫರ್ಸ್ಟಕ್ಲಾಸಿನಲ್ಲಿ ಪಾಸಾದಳಷ್ಟೇ; ಎಲ್. ಎಲ್. ಬಿ. ಪರೀಕ್ಷೆಯಲ್ಲಿಯೂ ೧ನೆಯ ನಂಬರು ಬಂದಿದ್ದಾಳೆ.

ಮಹಾತ್ಮರ ಖಾದಿಯ ಫಂಡಿಗೆ ಮೈಸೂರ ದರಬಾರದಿಂದ ೨೫೦೦೦ ರೂಪಾಯಿ ಕೊಡಬೇಕೆಂದು ಶ್ರೀ ಹೊಸಕೊಪ್ಪದ ಕೃಷ್ಣರಾಯರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಠರಾವು ತರತಕ್ಕವರಿದ್ದಾರೆ.

ಲಾಯಬ್ರರಿಯ ವಾರ್ಷಿಕ ಸಭೆಯಲ್ಲಿಯೂ ರಾಜಕೀಯ ಬರುತ್ತದೆಂದು ಹೇಳಿ, ನೆಲಗುಂಡಾದ ಮ್ಯಾಜಿಸ್ಟ್ರೇಟರು ಈ ಉತ್ಸವ ಬಂದು ಮಾಡಿಸಿದ್ದರು. ಹೈದರಾಬಾದಿನ ಹಾಯಕೋರ್ಟಿನ ಜಡ್ಜರಾದ ನವಾಬ ಶಿರಾಜ ಯಾರಜಂಗ ಮತ್ತು ನವಾಬ ಮಿರಜಾ ಯಾರ ಜಂಗರು ಹುಕುಮನ್ನು ರದ್ದು ಮಾಡಿ, ದಾತು ಮಾತಿಗೆ ರಾಜಕೀಯದ ಸಂಶಯ ತಳೆಯುವ ಮ್ಯಾಜಿಸ್ಟ್ರೇಟರ ಮೇಲೆ ಟೀಕೆ ಮಾಡಿದ್ದಾರೆ.

ನಾಗಪೂರದ ಕಾಯದೆಭಂಗದಲ್ಲಿ ಈವರೆಗೆ ಸಾದಾ ಶಿಕ್ಷೆಯಾಗುತ್ತಿತ್ತು. ಮ್ಯಾಜಿಸ್ಟ್ರೇಟರು ಮೊನ್ನೆಯಿಂದ ಸಶ್ರಮದ ಶಿಕ್ಷೆ ಹೇಳಲಾರಂಭಿಸಿದ್ದಾರೆ. ಸತ್ಯಾಗ್ರಹ ಮುರಿಯುವ ವಿಕ್ರಾಳ ಸ್ವರೂಪ ಧಾರಣವೇ ಸೈ !!

ಹಿಂದೂಸ್ಥಾನೀ ಸೇವಾದಲ
ಕರ್ನಾಟಕ ಶಾಖಾ
ಪ್ರಕಟಣಾ ನಂಬರ ೧

ಕಾಂಗ್ರೇಸ ಸಭಾಸದರನ್ನೂ ದಲದ ಸಭಾಸದರನ್ನು ಕೂಡಿಸುವ ಹಾಗೂ ಕರ್ನಾಟಕ ಏಕೀಕರಣದ ವಿಷಯದಲ್ಲಿ ಸಹಾನುಭೂತಿಯುಳ್ಳವರ ಸಹಿಗಳನ್ನು ತೆಗೆದುಕೊಳ್ಳುವ ಕೆಲಸವನ್ನು ಇದೇ ಜೂನ ೧ನೇ ತಾರೀಖಿನಿಂದ ಪ್ರಾರಂಭ ಮಾಡಿರುತ್ತದೆ. ಅದು ಹೋದ ವರ್ಷದಂತೆಯೇ ಸಪ್ಟೆಂಬರ ೩೦, ೧೯೩೭ರ ವರೆಗೆ ನಡೆಯತಕ್ಕದ್ದಿರುತ್ತದೆ.

ಈ ಮೊದಲು ಧಾರವಾಡದ ಕರ್ನಾಟಕ ರಾಷ್ಟ್ರೀಯ ವಿದ್ಯಾಪೀಠದಲ್ಲಿದ್ದ ಶ್ರೀ. ಬಿಂದಾಚಾರ್ಯ ಬುರ್ಲಿ ಇವರನ್ನು ದಲದ ಪತಿಯಿಂದ ಪ್ರಾಂತಿಕ ಮೇಲ್ವಿಚಾರಕರನ್ನಾಗಿ ನೇಮಿಸಿಯದೆ. ಅವರು ಬೇರೆ ಬೇರೆ ಜಿಲ್ಹೆಗಳಲ್ಲಿಯ ಕೆಲಸಗಳ ಮೇಲ್ವಿಚಾರವನ್ನು ನಡೆಸುವರು.

ಈ ಕೆಳಗೆ ಹೆಸರು ಕಾಣಿಸಿದ ಜನರು ಅವರ ಹೆಸರ ಮುಂದೆ ತೋರಿಸಿರುವ ಜಿಲ್ಹೆಗಳಲ್ಲಿಯ ಕೆಲಸಗಳನ್ನು ನಾಗಿಸುವರು.

೧	ದಾಮು ಅಣ್ಣಾ ಲಿಂಗಡೆ	ಬೆಳಗಾವಿ
೨	ಆರ್. ವ್ಹಿ. ಕರಗುದರಿ	ಧಾರವಾಡ
೩	ಶಿವಪ್ಪ ಕುಲಕರ್ಣಿ ನೀರಲಕೇರಿ	ವಿಜಾಪೂರ
೪	ಜಿ. ಪರುಸಾಲಪ್ಪ	ಬಳ್ಳಾರಿ
೫	ಸಿ. ಎಸ್. ವೆಂಕಪ್ಪಯ್ಯ	ಕೊಡಗು

ಕರ್ನಾಟಕದ ದಲಪತಿಯಾದ ಶ್ರೀಯುತ ಹೊಸಕೊಪ್ಪ ಕೃಷ್ಣರಾವ ಇವರು ದಕ್ಷಿಣ ಕನ್ನಡ ಜಿಲ್ಹಾ ಮತ್ತು ಮೈಸೂರು ಸಂಸ್ಥಾನಗಳಲ್ಲಿಯ ಕೆಲಸಗಳನ್ನು ಸ್ವತಹ ತಮ್ಮ ಕೈಯಲ್ಲಿ ತೆಗೆದುಕೊಳ್ಳುವರು.

ಕರ್ನಾಟಕದಲ್ಲಿಯ ಎಲ್ಲಾ ಕಾಂಗ್ರೇಸ ಕೆಲಸಗಾರರು ಮೇಲಿನ ಈ ಜನರಿಗೆ ಆದಷ್ಟು ಸಹಾಯ ಮಾಡಿ ಕಾಂಗ್ರೆಸಿಗೆ ತೃಪ್ತಿಯನ್ನು ಕೊಡಬೇಕಾಗಿ ಆಗ್ರಹಪೂರ್ವಕ ವಿನಂತಿಯದೆ.

ಇತರ ಕೆಲಸಗಾರರ ಹೆಸರುಗಳು ಮುಂದೆ ಪ್ರಸಿದ್ಧ ಮಾಡಲ್ಪಡುವವು.

ಎನ್. ಎಸ್. ಹರ್ಡೀಕರ.
ಕಾರ್ಯದರ್ಶಿ

ಉತ್ಕಲ ಮಂಡಲವಾಸಿಯಾದ ವಕೀಲ ರಾಜಗೋಪಾಳ ನಾಯಡುಯವರ ಚಿ|| ಗೌರಿದೇವಿಯು ಮದ್ರಾಸದಲ್ಲಾದ ಸಂಸ್ಕೃತ ಪರೀಕ್ಷೆ ಪಾಸಾಗಿ ವಿದ್ವಾನಳೆಂಬ ಪದವಿ ಪಡೆದಳು. ಸ್ತ್ರೀಯರಲ್ಲಿ ಈ ಪದವಿ ಪಡೆದವರಲ್ಲಿ ಇವಳೇ ಮೊದಲನೆಯವಳು.

ನೋಟೀಸು

—೦೦೦—

ಯಲ್ಲಪ್ಪಗೌಡಾ ಬಿನ ಗುರುನಗೌಡಾ ಚಿಪ್ಪಗೌಡರ ಅಲ್ಪವಯ ಸಂರಕ್ಷಣದಾರ ಖಾಸ ಆಯಿ ಕಾಳವ್ವಾ ಕೋಮ ಗುರುನಗೌಡಾ ಚನ್ನಪ್ಪಗೌಡರ ಸಾಕಿನ ಮಣ್ಣೂರ ತಾಲ್ಕು ಸವಣೂರ ಇವರಿಗೆ—

ಶಾರದಾಬಾಯಿ ಭ್ರತಾರ ಭೀಮರಾವ ನಾಡಗೇರ ಇನಾಮಗ್ರಾಮ ಅಲದಟ್ಟಿ ಇವರ ಕಡೆಯಿಂದ ನೋಟೀಸು ಕೊಡುವದೇನಂದರೆ- ಸವಣೂರ ಸಂಸ್ಥಾನ ಮಣ್ಣೂರ ಗ್ರಾಮದಲ್ಲಿ ಆರೋ ದೇಶಪಾಂಡೆಗಿರಿ ಇನಾಮ ಜಮೀನ ೬|| ಸ|| ನಂಬರ ೪೩ ಯಕರೆ ೩೬-೨೦ ಆ|| ರೂಪಾಯಿ ೧೦೮ ಇದರ ಪೈಕಿ ಯಕರೆ ೧೮-೧೦ ಆ|| ರೂಪಾಯಿ ೫೪ ಇದರ ಚಕ್ಕಬಂದಿ ಪೂರ್ವಕ್ಕೆ ಸರಕಾರಿ ಹಳ್ಳಾ ಪಶ್ಚಿಮಕ್ಕೆ ಚಿಕ್ಕ ನೆಲ್ಲೂರ ಶೀಮಾಂತರಾ ಉತ್ತರಕ್ಕೆ ಸದರ ನಂಬರ ಪೈಕಿ ಸ್ವಾಮಿರಾವ ದೇಶಪಾಂಡೆ ಇವರ ಹಿಶೆದ ಜಮೀನು ದಕ್ಷಿಣಕ್ಕೆ ಮುರಿಗೆಪ್ಪಾ ಬಲಿಗಾರ ಇವರ ಜಮೀನು ಈ ಮಧ್ಯದಲ್ಲಿ ಇರತಕ್ಕ ಜಮೀನು ಇದು ರಾಘವೇಂದ್ರರಾವ ಶಾಮರಾವ ದೇಶಪಾಂಡೆ ಇವರ ವಹಿವಾಟಿದು ಇದ್ದು ಸದರಿ ಅವರ ಕಡೆಯಿಂದಾ ಸದರಿ ಜಮೀನು ಲಾವಣಿದಾರ ನಾತೆದಿಂದ ನಂನ ಕಡೆಗೆ ಅದೆ. ನೀನು ಹೋದ ಲಾವಣಿ ಜಂಗಾಮದಲ್ಲಿ ಸವಣೂರಿಗೆ ಬಂದು ಸದರಿ ಜಮೀನು ನನಗೆ ಲಾವಣಿ ಕೊಡಬೇಕು ಅಂತಾ ನನಗೆ ಕೇಳಿ ನಂನ ೧೯೨೬-೨೭ ಇಸ್ವಿ ಸಾಲಿನಿಂದ ೫ ವರ್ಷದ ವರಿಗೆ ದರಸಾಲ ಯರಡು ನೂರು ೨೦೦ ರೂಪಾಯಿ ಲಾವಣಿ ವ ೧೫೧ ರೂಪಾಯಿ ನಜರಾಣೆ ಕೊಡಬೇಕು ಅಂತಾ ಕರಾರ ಪಡಿಕೊಂಡು ಜಮೀನು ನಿಂನ್ನ ತಾಬೆಕ್ಕೆ ತಗೊಂಡಿ ಮತ್ತು ಮೇಲಿನ ಕರಾರಿನಂತೆ ನಂನ ಹೆಸರಿನ ಕಬುಲಾಯತಿ ಬರಿಸಿ ನೊಂದಣಿ ಮಾಡಿಸಿ ಕೊಡಬೇಕು ಅಂತಾ ನಿನಗೆ ಸಮಕ್ಷಮ ತಿಳಿಸಿತ್ತು ಮತ್ತು ನಜರಾಣೆ ಬಾ|| ೧೫೦ ರೂಪಾಯಿ ವ ನಂನ ೧೯೨೬-೨೭ ಇಸ್ವಿ ಸಾಲಿನ ಹಪ್ತೆದ ಬಾ|| ರೂಪಾಯಿಗಳ ಪೈಕಿ ೫೦ ರೂಪಾಯಿ ಅಂತೂ ೨೦೦ ನೂರು ರೂಪಾಯಿ ನೀನು ರಾಘವೇಂದ್ರರಾವ ಶಾಮರಾವ ದೇಶಪಾಂಡೆ ಇವರ ಕಡಿಗೆ ಕೊಟ್ಟದ್ದು ನನಗೆ ಮುಟ್ಟಿರುತ್ತವೆ ನಂನ ೧೯೨೬-೨೭ ಇಸ್ವಿ ಸಾಲಿನ ಬಾ|| ೧೫೦ ರೂಪಾಯಿಗಳು ನಿಂನ ಕಡಿಗ ಬಾಕಿ ವುಳದದವು ಈವರಿಗೂ ನೀನು ನಂನ ಕಡಿಗೆ ಮುಟ್ಟಿಸಲಿಲ್ಲ ವ ಕರಾರ ಪ್ರಕಾರ ಕಬುಲಾಯತಿ ಬರಿಸಿ ನೊಂದಣಿ ಮಾಡಿಸಿ ಕಳಿಸಲಿಲ್ಲಾ ನೋಟೀಸು ಮುಟ್ಟಿದ ೩ ದಿವಸದಲ್ಲಿ ಲಾವಣಿ ಬಾ|| ರೂಪಾಯಿಗಳು ಬೇಬಾಕು ವ ಕಬುಲಾಯತಿ ನೊಂದಣಿಗೆ ಹಾಜರ ಮಾಡಿದ ಪಾವತಿ ನಂನ ಕಡಿಗೆ ಮುಟ್ಟಿಸಿ ನಂನ ಪಾವತಿ ಪೈಯ್ಯಬೇಕು ಇದಕ್ಕೆ ಜರ ತಪ್ಪಿದರೆ ಕಾಯದೆಶೀರ ಇಲಾಜ ಮಾಡಿ ಖರ್ಚ ಸಹಿತ ನಿಂನ ಕಡೆಯಿಂದ ವಸೂಲ ಮಾಡಲಾದೀತು.

ತಾ|| ೧೪-೬-೨೭ ಇಸ್ವಿ

ಸಹಿ ಮರಾರಿ ಶಾರಾದಾಬಾಯಿ ದ|| ಖು||

ತ್ವರೆ ಮಾಡಿರಿ. **ಮಾರಕಾ ಬೇನೆಗೆ** ಆಲಕ್ಷವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ.

ನೋಟೀಸು.

—೦—

ಚನಬಸವ್ವಾ ಕೋಮ ಶಿವಪ್ಪಾ ರಾಮಣ್ಣವರ ಸಾ|| ಕಳ್ಳಿಹಾಳ ತಾಲೂಕ ಕರ್ಜಗಿ ಇವಳು ಚನಬಸವ್ವಾ ಟುಕ್ಕಣ್ಣವರ ಇವರಲ್ಲಿ ಇರುತ್ತಾಳೆ ಇವಳಿಗೆ

ಕೆಳಗೆ ಸಹಿ ಮಾಡಿದವರ ಕಡಿಂದಾ ಈ ನೋಟೀಸಿನಿಂದಾ ತಿಳಿಸೋದೇನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ನನ್ನ ಸಂಗಡಾ ವಂದು ವರ್ಷ ಬಾಳ್ವೆ ಮಾಡಿದಿ ಪುನಹಾ ನಿನ್ನ ತಾಯಿಯಾದ ಚನಬಸವ್ವಾ ಟುಕ್ಕಣ್ಣವರ ಸಾ|| ಕಳ್ಳಿಹಾಳ ಇವಳು ತವರ ಮನಿಗೆ ಕೆಳಗೆ ಬರೆದ ದಾಗೀನೆಗಳನ್ನು ಇಟ್ಟುಕೊಂಡು ಹೋಗಿರುತ್ತಿದಿ ಅದರ ವಿವರ

೧ ಬೆಳ್ಳಿ ತೋಡೆ ಜತಿ ವಂದು ತೊಲಿ ೧೦೦ ದರಾ|| ಕಿಮ್ಮತ್ತು ರೂ. ೭೫
೧ ಸೈಯಲ್ಲಿಡಕಕ್ಕ ಭಂಗಾರದ ತೋಡೆ ತೊಲಿ ೩ ದರಾ ೨೦ ಕಿ|| ರೂ. ೬೦
೧ ಭಂಗಾರದ ಬಳೆ ಜತಿ ವಂದು ತೊಲಿ ೫ ದರಾ ೨೦ ಕಿ|| ರೂ ೧೦೦
೧ ಪಟಿಗಿ ಬಂಗಾರದ್ದು ತೊಲಿ ೭ ದರಾ ೨೦ ಕಿ|| ರೂ ೧೪೦
೧ ಬೆಳ್ಳಿಪಟ್ಟಿ ವಂದು ತೊಲಿ ೧೫ ದರಾ || ಕಿ|| ರೂ. ೧೦
೧ ನೋಟನ ಶೀರಿ ವಂದು ಕಿ|| ರೂ ೩೦
[illegible]
೩ ಕಿ|| ರೂ ೫

ಈ ಪ್ರಕಾರಾ ದಾಗಿನೆ ಇಟ್ಟುಕೊಂಡು ವ ಶೀರಿ ವ ಕುಬಸಗಳು ತಕ್ಕೊಂಡು ಹೋಗಿರುತ್ತೀದಿ ಅನೇಕ ಸಾರೆ ಕರಿದರೂ ಬರದೆ ಇಲ್ಲದನ್ನೆಂದು ನಿಬತೋರಿಸುತ್ತಿದಿ ಕಾರಣ ಈ ನೋಟೀಸು ಕೊಟ್ಟದೆ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಮೇಲೆ ಬರೆದ ದಾಗಿನೆ ತಕ್ಕೊಂಡು ವ ಶೀರಿ ವಗೈರೆ ತಕ್ಕೊಂಡು ಬರಬೇಕು ಜರ ಬರದೇ ಇದ್ದರೆ ಅದೇ ನೋಟೀಸು ಅಂತಾ ತಿಳಿಯತಕ್ಕದ್ದು ಹಾಂಗೂ ಮುಂದೆ ನನ್ನ ಖಾಟತ ಸ್ಥಾವರ ವ ಜಂಗಮ ಆಸ್ತಿ ಮೇಲೆ ಯೇನೂ ಹಕ್ಕು ಸಮ್ಮಂಧ ಇರೋದಿಲ್ಲಾ ಮೇಲೆ ಬರದ ದಾಗಿನೆಗಳ ಬಗ್ಗೆ ನಿನ್ನ ವ ನನ್ನ ತಾಯಿಯ ಮೇಲೆ ದಿವಾಣಿ ಕೋರ್ಟಿನಲ್ಲಿ ಇಲಾಜ ಮಾಡಿ ಹಣಾ ವಸೂಲಿ ಮಾಡುವದರಲ್ಲಿ ಬರುವದು ಈ ನೋಟೀಸ ಖರ್ಚ ಸಹಾ ನಿನ್ನ ತಲಿಯ ಮೇಲೆ ಅದೆ ತಿಳಿಯುವದು ತಾ. ೧೦-೬-೨೭ ಇಸ್ವಿ

ಶಿವಪ್ಪಾ ತಂದಿ ಮುರಿಗೆಪ್ಪಾ ರಾಯಣ್ಣನವರ ಸಾ. ಕುರುಬಗೊಂಡ

ವಿಜಯದ ವರ್ಗಣೀ ದರ

—[○][○]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರಿಕೆಯನ್ನು [illegible] ಯ.ಗ. ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಶನಿವಾರ ತಾರೀಖು ೧೮ನೇ ಜೂನ ೧೯೩೮ (ಸಂಚಿಕೆ ೧೨೮

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಗ ಗಳುಂಟು. ಗಾಲಿಯ ವ್ಯಾಸವು ೩೦ ಇಂಚು ಇರುತ್ತದೆ. ಆದ್ದರಿಂದ ಜಾಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಹು ಹಗುರಾಗಿ ತರುತ್ತದೆ. ಇದ್ಯಕ್ಕೆ ನೀರಿನ ಕೊರ ತೆಯು ಎಲ್ಲಾ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೪|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಪ್ರಕಟನೆ.

—೦—

ನಾಳೆ ಆದಿತ್ಯವಾರ (೧೯-೬-೩೮) ಸಾಯಂಕಾಲ ೫|| ಗಂಟೇಕ್ಕೆ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ "ಟಿಳಕ ಸ್ಮಾರಕ ನಿಧಿ" ಯ ಹಣದ ವಿನಿಯೋಗವನ್ನು ಯಾವ ರೀತಿಯಿಂದ ಮಾಡಬೇಕೆಂಬ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ತಿಳಿದುಕೊಳ್ಳುವದಕ್ಕೋಸ್ಕರ ಸಾರ್ವಜನಿಕ ಸಭೆಯು ನೆರೆಯುವದು. ಈ ನಿಧಿಗೆ ಹಣ ಕೊಟ್ಟವರೂ ಕೂಡಿಸಿ ಕೊಟ್ಟವರೂ ನಿಧಿಯ ಮಂಡಳದ ಸಭಾಸದರೂ ಎಲ್ಲರೂ ಅವಶ್ಯವಾಗಿ ಬರಬೇಕೆಂದು ವಿನಂತಿ ವೇ. ಶಾ. ನಾಗೇಶಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರು.

ಸುರೇಂದ್ರ ಶಿವರಾವ ದೇಸಾಯಿ.
ಕಾರ್ಯದರ್ಶಿ
ಟಿಳಕ ಸ್ಮಾರಕ ನಿಧಿ ಮಂಡಳ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಕಾಯಮ್ ಮತ್ತು ಬೇರೆ ತರದ ಠೇವ ಪಟ್ಟಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವಿಠ್ಠಲರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನರಹ ಆಣೆಯಂತಿರುತ್ತದೆ.

ಎ. ರಾ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟ

ನೋಟೀಸಿನ ದರಗಳು.

—೦—

ತಿಂಗಳ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೇಲ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಬಲ್ ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೧೮-೬-೨೭ ನೇ ಇಸ್ವಿ

ಟ್ರೇನಿಂಗ ಸ್ಕೂಲೂ, ಕಾರಕೂನರೂ ಹೋಗಲಿಕ್ಕೆ ಲೋಕಲಬೋರ್ಡುಗಳೇ ಮೂಲ.

ಧಾರವಾಡದಲ್ಲಿದ್ದ ಟ್ರೇನಿಂಗ ಸ್ಕೂಲು ವ್ಯಸ್ತ್ರ ವಿದ್ಯಾಖಾತೆಯ ಕಾರಕೂನರು ಹೋಗಲಿಕ್ಕೆ ಲೋಕಲಬೋರ್ಡುಗಳೇ ಕಾರಣವಾಗಿರುತ್ತವೆಂದು ಧಾರಾಳವಾಗಿ ಹೇಳುವಂತಾಗಿರುತ್ತದೆ. ಲೋಕಲ ಬೋರ್ಡಿನವರು ತಮ್ಮ ಕಯ್ಯಲ್ಲಿ ಶಾಲಾಖಾತೆಯು ದೊರೆಯುತ್ತದೆಂಬದನ್ನಷ್ಟೇ ನೋಡಿದರು. ಬೆಕ್ಕು ಹಾಲು ನೋಡಿತು. ಹಿಂದಿನ ಬಡಿಗೆ ನೋಡಲಿಲ್ಲೆಂದು ಗುಜ್ಜರು ಹೇಳುವಂತೆ ಇವುಗಳ ಅವಿಚಾರವಾಯಿತು ಪ್ರಜರಿಗೆ ಉತ್ತಮವಾದ ಶಿಕ್ಷಣ ಕೊಡುವದು ಸರಕಾರದ ಕರ್ತವ್ಯಕರ್ಮವು ಸರಕಾರವು ವೆಚ್ಚದ ಭಾಗವನ್ನು ಹೊತ್ತರೇ, ನಾವು ಈ ಕೆಲಸವನ್ನು ಕೈಕೊಳ್ಳುವೆವೆಂದು ಸರಕಾರಕ್ಕೆ ಹೇಳಬೇಕಾಗಿತ್ತು. ಹಾಗೆ ಮಾಡದೆ, ಸರಕಾರದ ಪ್ರೀತಿ ಸಂಪಾದಿಸುವದಕ್ಕಾಗಿ ಮತ್ತು ತಾವು ಲೋಕ ಹಿತೈಷಿಗಳೆಂಬ ಹೆಸರು ಪಡೆಯುವದಕ್ಕಾಗಿ ಈ ಭಾರವನ್ನು ಹೊತ್ತರು, ಇವರ ಅವಿಚಾರದ ಮೊದಲನೆಯ ಕಡತವು ರೈತರಿಗೆ ತಾಗಿತು. ಧಾರವಾಡ ಜಿಲ್ಲೆಯನ್ನು ಬಿಟ್ಟು ಉಳಿದ ಮೂರೂ ಜಿಲ್ಲೆಗಳವರು ಲೋಕಲಫಂಡನ್ನು ಇಮ್ಮಡಿಸಿ, ರೈತರ ಗೋಳು ಕಟ್ಟಿಕೊಂಡರು. ಧಾರವಾಡ ಜಿಲ್ಲೆಯವರು ಮಾತ್ರ ಎಲ್ಲ ವೆಚ್ಚವನ್ನು ಸರಕಾರವೇ ಕೊಡಬೇಕೆಂದು ಇಂದಿಗೂ ಹೇಳುತ್ತಾ ಬಂದಿದ್ದಾರೆ. ಅವರಂಥ ಗಟ್ಟಿಗರನ್ನು ಉಳಿದವರಲ್ಲಿ ಇಲ್ಲ!!

ಲೋಕಲಫಂಡನ್ನು ಇಮ್ಮಡಿಸಿದರೂ, ಸರಕಾರವು ಗ್ರಾಂಟನ್ನು ಹೆಚ್ಚಿಸಿದರೂ, ವೆಚ್ಚವು ಭಾಯಿಗೂಡುವದಿಲ್ಲ. ಈ ಮೂಲಕ ಇವರು ಶಿಕ್ಷಕರ ಸಂಬಳವನ್ನು ಕಡಿಮೆ ಮಾಡುವ ಯುಕ್ತಿಯನ್ನು ಎರಡು ತರಹದಿಂದ ಮಾಡಿದ್ದಾರೆ. ವಿದ್ಯಾಖಾತೆಯು ಸ್ಕೇಲಿಗಿಂತ ಕಡಿಮೆ ಸಂಬಳ ಕೊಟ್ಟು, ಶಿಕ್ಷಕರನ್ನು ಸುಪರಮಾಯುಜಾರ ಮತ್ತು ಕೈಡಮಿಸ್ಟ್ರೇಟನನ್ನು ನೇಮಿಸಿಕೊಳ್ಳುವದು. ಮತ್ತು ಟ್ರೇನ್ಡ ಶಿಕ್ಷಕರು ಬೇಡೆನ್ನುವರು. ಟ್ರೇನ್ಡ ಶಿಕ್ಷಕರಾದರೆ- ಹೆಚ್ಚಿಗೆ ಸಂಬಳ ಕೊಡಬೇಕಾಗುತ್ತದೆಂದು ಶಿಕ್ಷಣದ ಮತ್ತು ಕನ್ನಡ ಭಾಷೆಯ ಪ್ರಗತಿಗೇ ಕುಠಾರ ಹಾಕಿದ್ದಾರೆ. ಟ್ರೇನ್ಡ ಶಿಕ್ಷಕರೇ ಬೇಡವಾದ ಬಳಿಕ ಸರಕಾರದವರು ಕಾಲೇಜಿಟ್ಟು ಪ್ರಯೋಜನವೇನ? ಈ ಪ್ರಕಾರ ಪ್ರಮಾಣಿಸಿ ನೋಡಿದರೆ- ಟ್ರೇನಿಂಗ ಕಾಲೇಜ ಮತ್ತು ಟ್ರೇನಿಂಗ ಸ್ಕೂಲು ತಳ್ಳಗೂಡಿದ ಪ್ರತ್ಯಕ್ಷ ದೋಷವು ಲೋಕಲಬೋರ್ಡುಗಳಿಗೇ ತಟ್ಟುತ್ತದೆ

ಸರಕಾರದವರು ಯಾವದೊಂದು ಇಂಗ್ಲಿಷ ಶಾಲೆಗೆ ಗ್ರಾಂಟು ಕೊಡುವಾಗ, ಶಾಲೆಯವರಮೇಲೆ ಅನೇಕ ಕರಾರು- ಕಟ್ಟಳೆಗಳನ್ನು ಹಾಕಿ ಅವನ್ನು ಪೂರ್ಣ ಮಾಡಿದರೆ- ಅದಕ್ಕೆ ಗ್ರಾಂಟು ಕೊಡುವರು. ಸರಕಾರವು ಇಂಥ ಯಾವದೊಂದು ಶರ್ತನ್ನು ಲೋಕಲಬೋರ್ಡಿಗೆ ಹೇಳಿಲ್ಲ ಮುಂದೆ ಹೇಳುವ ತಿಕ್ಷಣವಿಲ್ಲ ಟ್ರೇನ್ಡ ಶಿಕ್ಷಕರು ಬೇಡೆಂದ ಕೂಡಲೆ- ಸರಕಾರವು ವೆಚ್ಚದ ಉಳಿತಾಯ ನೋಡಿತಲ್ಲದೆ, ಶಿಕ್ಷಣದ ಹಾನಿಯನ್ನು ನೋಡಲಿಲ್ಲ. ಸರಕಾರದ ವಶದಲ್ಲಿ ಪ್ರಾಥಮಿಕ ಶಾಲೆಗಳಿರುವತನಕ ಟ್ರೇನಿಂಗ ಕಾಲೇಜ ಬೇಕಾಯಿತು. ಇವು ಕೈ ಬಿಟ್ಟ ಕೂಡಲೆ ಬೇಡ ಆಯಿತು. ಕಾಲೇಜದ ಶಿಕ್ಷಣವಿಲ್ಲದೆ, ಶಿಕ್ಷಕರು ಹೇಗೆ ಕಲಿಸುವರೆಂಬ ವಿಚಾರವನ್ನು ಸರಕಾರದವರು ಮಾಡಲೇ ಇಲ್ಲ. ಶಿಕ್ಷಕರಾಗತಕ್ಕಂಥವರ ಶಿಕ್ಷಣವು ಕೆಲವೊಂದು ದರ್ಜೆಯದಿರಬೇಕೆಂದು ವಿದ್ಯಾಖಾತೆಯವರು ಲೋಕಲಬೋರ್ಡುಗಳನ್ನು ಅಗತ್ಯಪಡಿಸುವದು ಅಗತ್ಯವಾಗಿತ್ತು ಹಿಂದೆ ತಪ್ಪಾದರೂ, ಮುಂದಾದರೂ ಅವನ್ನು ಅಗತ್ಯಪಡಿಸತಕ್ಕದ್ದು.

ಈ ವಿಷಯವಾಗಿ ಸರಕಾರ ಮತ್ತು ಲೋಕಲಬೋರ್ಡಿನ ವರ್ತನವು ಎತ್ತು! ಕೋಣಾಯಿತು. ಕೊಟ್ಟಿಗೆಯಲ್ಲಿ ಕಟ್ಟಿ ‘ಎಂಬಂತಾಗಿರುತ್ತದೆ. ಟ್ರೇನಿಂಗ ಸ್ಕೂಲನ್ನು ಮುರಿಯುವಾಗ ಸರಕಾರವು ಲೋಕಲಬೋರ್ಡುಗಳನ್ನು ಕೇಳಬೇಕಾಗಿತ್ತು. ಈ ಪ್ರಕಾರ ಕೇಳಿರುವದೇ ಇಲ್ಲ. ಲೋಕಲಬೋರ್ಡಿಗೆ ಈ ಸ್ಕೂಲು ಸಹ ಬೇಡೆಂಬ ಊಹೆಯಿಂದ ಇದರ ಒಳಗಿಲ ಹಾಕುವ ವಿಚಾರ ಮಾಡಿದ್ದಾರೆಂದು ಹೇಳಬಹುದು, ಲೋಕಲಬೋರ್ಡು ಸರಕಾರದ ಕೂಡ ಸಹಕಾರ ಮಾಡುವದಿಲ್ಲ. ಮನಸ್ಸಿಗೆ ಬಂದಂತೆ ನಡಿಯುತ್ತಿವೆ. ಅವನ್ನು ಏಕೆ ಕೇಳಬೇಕೆಂದು ಡಾಯರೆಕ್ಟರ, ಸೇಕ್ರೆಟರಿ ಮತ್ತು ಮಂತ್ರಿಯು ವಿಚಾರವಾಗಿರಬೇಕೆಂದು ತರ್ಕವಾಗುತ್ತದೆ. ಈ ತರ್ಕವು ಸುಳ್ಳಾಗುವಂತೆ ಮಂತ್ರಿಗಳು ಈಗ ಬಿಟ್ಟ ಬ್ರಹ್ಮಾಸ್ತ್ರವನ್ನು ಹಿಂದಕ್ಕೆ ತಕ್ಕೊಳ್ಳಬೇಕು ಇದನ್ನು ತಕ್ಕೊಳ್ಳಬೇಕಾದರೆ- ತಮಗೆ ಟ್ರೇನಿಂಗ ಕಾಲೇಜವೂ ಬೇಕೆಂದು ಲೋಕಲಬೋರ್ಡು ಸರಕಾರಕ್ಕೆ ಅಗತ್ಯಪೂರ್ವಕವಾಗಿ ತಿಳಿಸಿ, ಸರಕಾರದ ಕೂಡ ಸಹಕಾರದಿಂದ ನಡೆಯುವದೇ ಉಪಾಯವಾಗಿರುತ್ತದೆ. ಇವುಗಳ ಕೊರಳು ಬಿಟ್ಟಿತೆಂದರೆ- ಕಾರಕೂನರ ಕೊರಳು ತಾನಾಗಿ ಬಿಡುವದು.

ವಿದ್ಯಾಖಾತೆಯ ಮೂರು ವಿಚಿತ್ರ ಹುಕುಮುಗಳು.

ವಿದ್ಯಾಖಾತೆಯವರು ದಕ್ಷಿಣ ಭಾಗದ ಕಾರಕೂನರಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಮೂರು ತರಹದ ಹುಕುಮುಗಳನ್ನು ಮಾಡಿದ್ದಾರೆ. ಯಾವ ಕಾರಕೂನನು ಈ ಖಾತೆಯಲ್ಲಿ ಸೇರಿ ಹತ್ತು ವರ್ಷವಾಗಿಲ್ಲವೋ ? ಅಂಥವನು, ತಾನು ಕಾಯಮು ವಲ್ಲೆಂದು ತಿಳಿಯಬೇಕೆಂದು ೧೯೨೩ ನೇ ಇಸವಿಯಲ್ಲಿ ಒಂದು ಸರಕ್ಯೂಲರ ತೆಗೆದದ್ದಷ್ಟೇ ಆಯಿತು. ವಾಸ್ತವಿಕವಾಗಿ ನೋಡಿದರೆ- ಇಂಥ ಸರಕ್ಯೂಲರ ಕೂಡ ಅನ್ಯಾಯವಾದದ್ದು. ಯಾರೊಬ್ಬರನ್ನು ಕಾಯಮುವಾಗಿ ನೇಮಿಸಿಕೊಂಡ ಬಳಿಕ, ಇಂಥ ಸರಕ್ಯೂಲರದಿಂದ ಅವರ ಭವಿತವ್ಯವನ್ನು ಅಸ್ಥಿರ ಮಾಡುವದು ವಿಹಿತವಲ್ಲವೇ ಅಲ್ಲ ಸರಕ್ಯೂಲರದ ಬಿಸಿಯು ಯಾರಿಗೂ ತಟ್ಟದ್ದರಿಂದ, ಅದು ಬೇಗು ಬೇಗು ಕಣಬೇ ಇಲ್ಲ. ಇದರ ತರುವಾಯ ೧೯೨೫ ನೇ ಇಸವಿಯಲ್ಲಿ ತಾವು ಕಳಿಸಿದಲ್ಲಿಗೆ ಹೋಗಬೇಕೆಂದು ಹುಕುಮು ಮಾಡಿದರು. ಈ ಹುಕುಮಿನಿಂದ ಕೆಲಸವನ್ನು ಕಾಯಮುವೆಂದು ತಿಳಿಯಬಾರದಾಗಿ ತೆಗೆದಿದ್ದ ಮೊದಲಿನ ಹುಕುಮು ತಾನಾಗಿ ರದ್ದಾಯಿತು. ಈಗಿನ ಕಾಲದಲ್ಲಿ ಜನರು ಕಲಸದ ದೆಸೆಯಿಂದ ಎಲ್ಲಿ ಬೇಕಾದಲ್ಲಿ ಹೋಗುತ್ತಾರೆ ರೇಲ್ವೆಯು ರೇಲ್ವೆಯು ದೂರಿನ ಊರುಗಳನ್ನು ಹತ್ತಿಲ ಮುಂಚೆ ಮಾಡಿರುತ್ತವೆ ಆದುದರಿಂದ ಈ ಸರಕ್ಯೂಲರಕ್ಕೆ ಯಾರೂ ಮಹತ್ವ ಕೊಡಲಿಲ್ಲ. ಕಳಿಸಿದಲ್ಲಿಗೆ ಹೋಗಲು ಸಿದ್ಧರಾದರು. ಆದರೆ ಸರಕ್ಯೂಲರದಂತೆ ಕೃತಿಯಾಗಲಿಲ್ಲ. ಎರಡು ವರ್ಷವಾದರೂ ಕೃತಿಯಾಗದದ್ದನ್ನು ಕಂಡು ಎಲ್ಲರೂ ಸಮಾಧಾನ ವೃತ್ತಿಯಿಂದಿರುತ್ತಿದ್ದಾಗ, ಒಮ್ಮಿಂದೊಮ್ಮೆ ಮನೆಗೆ ಹೋಗುವ ಸರಕ್ಯೂಲರ ಬಂದಿತು ಹಳೇ ಮತ್ತು ಹೊಸ ಸ್ತ್ರೀರನ್ನು ಕಟ್ಟಿಕೊಂಡು ಹೋಯಿತು. ಈ ಪ್ರಕಾರ ಮೂರು ತೆರವಾಗಿ ಹೊರಟ ವಿಚಿತ್ರ ಹುಕುಮುಗಳು ಹೊರಡಲಿಕ್ಕೆ ಕಾರಕೂನರು ಯಾವ ರೀತಿಯಿಂದಲೂ ಪ್ರತ್ಯಕ್ಷಾಪ್ರತ್ಯಕ್ಷ ಸಂಬಂಧವುಳ್ಳವರಾಗಿಲ್ಲ. ಮುಂಬಯಿ ಪ್ರಾಂತದ ಹೊಂಟ ಹುಕುಮುಗಳೇ ಅಗಿರುತ್ತವೆ. ಈ ಹುಕುಮುಗಳು ಬ್ರಿಟಿಸ ಸರಕಾರದ ರಾಜ್ಯವಾಳುವ ಕ್ರಮಕ್ಕೆ ತೀರ ವಿರುದ್ಧವಾದದ್ದಾಗಿವೆ. ನ

ಷ್ಟರ್ಕಸ್ಕ್ಯಾಂಡ ಮಾದರಿಯ ಹುಕುಮು ತೆಗೆಯುವದಕ್ಕಾಗಿ ಮಂತ್ರಿ ಅಥವಾ ಡಾಯರೆಕ್ಟರರು ಬುದ್ಧಿಯನ್ನು ವೆಚ್ಚ ಮಾಡದೆ, ಈ ಕಾರಕೂನರಿಗೆ ಯಾವ ಪ್ರಕಾರದ ಸೋಯಿ ಮಾಡಿದರೆ ಅವರ ಜೀವನದ ವ್ಯವಸ್ಥೆ ಮಾಡಿದಂತಾಗುವದೆಂದು ಬುದ್ಧಿಯು ವೆಚ್ಚ ಮಾಡಬೇಕಾಗಿತ್ತು. ಇನ್ನಾದರೂ ಹಾಗೆ ಮಾಡುವರೆಂದು ನಾವು ನಂಬಿದ್ದೇವೆ.

ಮಾರಿಕಾ ನಿವಾರಣೆ-

ಬಂಗಾಲ ಸರಕಾರದವರು ಮಾರಿಕಾ ಬೇನೆಯನ್ನು ನಿಕ್ಷಿಸುವದಕ್ಕಾಗಿ ಮೂರು ಲಕ್ಷ ರೂಪಾಯಿ ಮಂಜೂರ ಮಾಡಿದ್ದಾರೆ. ಡಾಕ್ಟರರು ಊರೂರಿಗೆ ಹೋಗಿ ವ್ಯಾಖ್ಯಾನ ಕೊಡುವರು. ಕೆಟ್ಟ ನೀರನ್ನು ಕುಡಿಯಬೇಡಿರೆಂದು ಉಪದೇಶ ಮಾಡುವರು. ಮ್ಯಾಜಿಕ ಲ್ಯಾಂಟರ್ನದಿಂದ ಮಾರಿಕಾದ ಕ್ರಿಮಿಗಳನ್ನೂ ರೋಗೋತ್ಪತ್ತಿಯನ್ನೂ ತೋರಿಸುವರು.

ರಶಿಯಾಕ್ಕೆ ಬಹಿಷ್ಕಾರ-

ಇಂಗ್ಲಂಡದಿಂದ ತೀರ ಚಿಕ್ಕವರೆಂದರೆ ೧೨-೧೩ ವರ್ಷದ ಹುಡುಗ ವಿದ್ಯಾರ್ಥಿಗಳನ್ನು ರಶಿಯಾದ ವಿದ್ಯಾರ್ಥಿಗಳ ಶಿಕ್ಷಣ ನೋಡುವದಕ್ಕಾಗಿ ಕಳಿಸಬೇಕೆಂದು ಇಂಗ್ಲಂಡದಲ್ಲಿರುವ ಬೊಲ್ಶೆವಿಕ ಸಂಘದವರು ಸರ್ವ ಸಿದ್ಧತೆ ಮಾಡಿದರು. ಆದರೆ ಪರರಾಷ್ಟ್ರಗಳ ಪ್ರಧಾನರಾದ ಮಿ. ಚೆಂಬರಲೆನ್ನ ಸಾಹೇಬರು ಇವರಿಗೆ ಪಾಸಪೋರ್ಟ ಕೊಡಲಿಲ್ಲ. ವೈರಿಯ ಕೂಡ ಯಾರು ಸ್ನೇಹ ಬೆಳೆಸುವರು?

ಅಗಸರ ಸಂಪು-ಸತ್ಯಾಗ್ರಹ-

ತ್ರಾವಣಕೋರ ಸಂಸ್ಥಾನಕ್ಕೆ ಸೇರಿದ ವೋದಿನಾಯಕನೂರ ಗ್ರಾಮದ ಅಗಸರಿಗೂ ನಾವಲಿಗರಿಗೂ ಮನಸ್ತಾಪವಾಯಿತು. ಅಗಸರು ಇವರ ಬಟ್ಟೆ ಒಗೆಯದಾದರು. ಪಂಚಾಯಿತು ನಡೆಯಿತು. ಅಗಸರು ಪಂಚರ ಮುಂದೆ ತಮ್ಮ ಕೈಫಿಯತ್ತು ಕೊಡಲಿಲ್ಲ. ಇವರಿಗೆ ಶಿಕ್ಷೆ ಎಂದು ಪರಸ್ಥಳದಿಂದ ಅಗಸರನ್ನು ತಂದರು. ಆಗ ಅಗಸರು ಸುತ್ತಲಿನ ಗ್ರಾಮಗಳಿಗೆ ಹೋಗಿ ಯಾರೂ ಯಾವ ಜಾತಿಯವರ ಬಟ್ಟೆ ಒಗೆಯಬಾರದೆಂದು ಕಟ್ಟು ಮಾಡಿದರು. ಇದಕ್ಕೆ ಮುಯ್ಯವೆಂದು ಅಗಸರಿಗೆ ಯಾರೂ ಯಾವ ಪದಾರ್ಥ ಕೊಡಬಾರದು. ಅವರ ಕೂಡ ಮಾತಾಡಬಾರದು. ಸತ್ತರೂ ಕೇಳಬಾರದೆಂದು ಕಟ್ಟು ಮಾಡಿದ್ದರು. ಹೀಗಾಗಿ ಅಗಸರ ಆಟ ನಿಂತು, ಸಂಪು ಮುರಿದು ಪೂರ್ವದಂತೆ ಒಟ್ಟಿಗೆ ಬಾಳಲಾರಂಭಿಸಿದರು.

ತರ್ಕ ಶಾಸ್ತ್ರದ ನಿರೂಪಣೆ-

ಪಂಡಿತ ಮಾಲವಿಯಾಯವರು ದಿವಾನ ಇಸ್ಮಾಯಿಲಸಾಹೇಬರು, ಲಿಂಗರಾಜ ಅರಸರು ಮುಂತಾದವರನ್ನು ಕರಕೊಂಡು, ಮೈಸೂರಲ್ಲಿರುವ ಸಂಸ್ಕೃತ ಪಾಠಶಾಲೆಗೆ ಹೋದರು. ಮಹಾಮಹೋಪಾಧ್ಯಾಯ ವಿರೂಪಾಕ್ಷಶಾಸ್ತ್ರಿಯವರು ತರ್ಕಶಾಸ್ತ್ರದ ಮೇಲೆ ಉಪನ್ಯಾಸ ಮಾಡಿದರು. ಬೇರೆ ಪಂಡಿತರೂ ವಿಷಯ ವಾದ ಮಾಡಿದರು. ಈ ಪಂಡಿತರ ವಿದ್ವತ್ತಿಯ ಬಗ್ಗೆ ಪಂಡಿತರು ಆನಂದಪಟ್ಟು, ಸಂಸ್ಕೃತ ವಿದ್ಯೆಗೆ ಆಶ್ರಯ ಕೊಟ್ಟ ಬಗ್ಗೆ ಮಹಾರಾಜರ ಶ್ಲಾಘನೆ ಮಾಡಿದರು.

ಹಿಂದೂ ಮುಸಲಮಾನ ವಿವಾಹ-

ಬಿ. ಎ. ಬಿ. ಟಿ. ಪರೀಕ್ಷೆ ಪಾಸಾದಂಥ ಕುಶೆಯ ಕುಮಾರಿ ಪಾಲಿಸಿ ಪಾಂಡೇಕರಳು ಬಿ. ಎ. ಬಿ. ಟಿ. ಪರೀಕ್ಷೆ ಪಾಸಾದಂಥ ಮುಸಲಮಾನ ಗೃಹಸ್ಥರಾದ ಮಿ. ಗುಲಾಬಖಾನ ಬದ್ರುದ್ದೀನಖಾನ ಇವರ ಒಡನೆ ವಿವಾಹವಾಗುವಳೆಂದು ಜಾಹೀರ ಮಾಡಲ್ಪಟ್ಟದೆ. ಪಾಂಡೇಕರ ಬಾಯಿಗೆ ಹಿಂದೂ ಜನರಲ್ಲಿ ಅನುರೂಪನಾದಂಥ ಪುರುಷನು ಕಂಡು ಬರಲಿಲ್ಲವೇ? ಪ್ರೀತಿಯು ಅಂಥವಾದದ್ದೇ ಸರಿ.

ನಾಗಪೂರದ ಕಾಯದೆಭಂಗ-

ಸೇನಾಪತಿ ಅವರಿಯವರಿಗೆ ಶಿಕ್ಷೆಯಾದ ಬಳಿಕ ನಾಗಪೂರದ ಕಾಯದೆಭಂಗವು ನಿಂತಿತ್ತು. ಶ್ರೀ ಪಟೇಲರು ಬಂದು ಏನು ಮಾಡುವರೆಂದು ಮಾರ್ಗ ನಿರೀಕ್ಷಣೆ ಮಾಡಿದರು. ಪಟೇಲರು ಬರುವದು ನಿಂತ ಕೂಡಲೆ, ಕಾಯದೆಭಂಗ ಪ್ರಾರಂಭಿಸಿದ್ದಾರೆ. ನಮ್ಮ ಹತ್ತರ ಸೇನಾಬಲವೂ ದ್ರವ್ಯಬಲವೂ ಉಂಟೆಂದು ಇವರು ಜಾಹೀರ ಮಾಡಿದ್ದಾರೆ.

ಸ್ತ್ರೀ ಪುರುಷ ಈರ್ಷೆ-

ಶ್ರೀ ಸೌ|| ಚತುರಬಾಯಿಯು ಸ್ತ್ರೀಯರ ಕಾಯದೆಭಂಗ ನಡಿಸಿದ್ದಾಳಷ್ಟೇ; ಇವಳು ಪುರುಷರ ಕೂಡ ಸ್ಪರ್ಧೆ ಮಾಡುವದಕ್ಕಾಗಿ ಸ್ತ್ರೀಯರ ಸ್ವತಂತ್ರ ಪಥಕವನ್ನು ನಿರ್ಮಿಸಿದ್ದಾಳೆ. ಮಿ. ಶಾಮಜಿಯವರು ಚತುರಬಾಯಿಯ ಪತಿಯು ಇವರು ಸೇನಾಧಿಪತಿ ಅವರಿಯಂತೆ ಹುರುಪಿನ ಗೃಹಸ್ಥರಾಗಿದ್ದಾರೆ. ಈ ಚಳವಳಿಯಲ್ಲಿ ಯಾರು ಮುಂದೆ ಹೋಗುವರೆಂದು ಜನರು ಕುತೂಹಲದಿಂದ ನೋಡುತ್ತಿದ್ದಾರೆ.

ಆಲಬೇನಿಯಾದಲ್ಲಿ ಯುದ್ಧ ಸಂಭವ-

ವಿಲಾಯತಿಯಲ್ಲಿರುವ ಆಲ್ಬೇನಿಯಾ ಮತ್ತು ಯುಗೋಸ್ಲಾವಿಯಾ ದೇಶಿಯರಿಗೆ ಕಳೆದ ಒಂದು ವರ್ಷದಿಂದ ಜಗಳ ಬಂದಿದೆ. ಈ ಜಗಳ ಹೊಂದಿಸಲು ಬೇರೆ ದೇಶಿಯರು ಮಾಡಿದ ಪ್ರಯತ್ನವು ನಿಷ್ಫಲವಾಯಿತು. ಈಗ ಎರಡೂ ದೇಶದವರು ತಂತಮ್ಮ ವಕೀಲರನ್ನು ಹಿಂದಕ್ಕೆ ಕರಿಸಿಕೊಂಡಿದ್ದಾರೆ. ಗುಂಡಿನ ಮೊದಲನೆಯ ಸಲಾಮು ಆಗುವದನ್ನು ಬೇಗನೆ ಕೇಳಬಹುದು.

ವಿವಿಧ ವರ್ತಮಾನಗಳು

—೦—

ಕೊಲ್ಹಾಪೂರದ ಮಹಾರಾಜರು ಹತ್ತು ಫೂಟು ಉದ್ದವಾದಂಥ ಒಂದು [illegible] ಹೊಡೆದರು. ಅದನ್ನು ಆನೆಯ ಮೇಲಿಟ್ಟು, ಪಟ್ಟಣದಲ್ಲಿ ಮೆರೆಸಿದರು.

ದಿಲ್ಲಿಯಲ್ಲಿ ಚಾಂದಣಿಚೌಕದಲ್ಲಿರುವ ಒಂದು ಮಸೀದೆಯ ತಲೆಬಾಗಿಲಕ್ಕೆ ಬೆಂಕಿ ಹಚ್ಚಿ ಸುಟ್ಟರು. ಪೋಲಿಸ ತಪಾಸಣೆ ನಡೆದಿದೆ.

ರಂಗೂನ ಮ್ಯುನಿಸಿಪಾಲಿಟಿಯವರು ಬ್ರಹ್ಮದೇಶದ ವಿಶ್ವವಿದ್ಯಾಲಯಕ್ಕೆ ಲಕ್ಷ ರೂಪಾಯಿಗಳನ್ನು ಕೊಟ್ಟರು.

ವಾರಸಾದಲ್ಲಿದ್ದ ರಶಿಯಾದ ರಾಯಭಾರಿಯ ಕೊಲೆಯ ವಿಚಾರಣೆ ನೋಡುವದಕ್ಕಾಗಿ ಇಂಗ್ಲಂಡದಿಂದ ಹೊರಗೆ ಹಾಕಿಸಿಕೊಂಡ ರಶಿಯಾದ ಪ್ರತಿನಿಧಿಯು ಹೋಗಿದ್ದಾನೆ.

ಇಜಿಪ್ತದ ಮಂತ್ರಿ ಸಾರವತ ಪಾಷಾನಿಗೂ ಬ್ಯಾರನ ಲಾಯಿಡಜಾರ್ಜಸಾಹೇಬರಿಗೂ ಪತ್ರವ್ಯವಹಾರ ನಡೆದು, ಸದ್ಯದಲ್ಲಿ ಇಜಿಪ್ತದ ಪ್ರಕರಣವು ಶಾಂತವಾಯಿತು.

ರಶಿಯಾದವರು ಈ ಮೊದಲು ೨೦ ಜನರಿಗೆ ಗಲ್ಲು ಹಾಕಿದರಷ್ಟೇ; ಪುನಃ ೧೧ ಜನರನ್ನು ಗಲ್ಲಿಗೆ ಹಾಕಿದರು.

ಅಸ್ಪೃಶ್ಯತಾನಿವಾರಣೆ ಮತ್ತು ಜಾತಿಭೇದ ಮುರಿಯುವದೆಂದು ಬಂಗಾಲದ ಕಾಂಗ್ರೆಸ ಕಮಿಟಿಯವರು ಮೊನ್ನೆ ಆದ ದೇಶಬಂಧು ದಾಸರ ಶ್ರಾದ್ಧದ ದಿವಸ ಪ್ರೀತಿ ಭೋಜನ ಮಾಡಿಸಿದ್ದರು.

ನೋಟೀಸಿನ ಉತ್ತರಾ

ನಿಂಗನಗೌಡಾ ತಂದಿ ಮಲ್ಲನಗೌಡಾ ಪಾಟೀಲ ಸಾಕೀನ ದ್ಯಾಪನೂರ ಹಾಲಿವಸ್ತಿ ಆದರಗುಂಚಿ ಕೋಸ್ಟ ಗೇಟಕಟ್ಟಿ ಇವರಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡಿದ ಈರವ್ವಾ ಕೋಂ ನಿಂಗನಗೌಡಾ ಪಾಟೀಲ ಹಾಲಿವಸ್ತಿ ಆದರಗುಂಚಿ ಈಕೆಯು ನಿಮ್ಮ ನೋಟೀಸಿಗೆ ಉತ್ತರ ಕೊಡುವದೇನಂದರೆ-

ನೀನು ನನ್ನ ವಿರುದ್ಧ ನನ್ನ ಅಪಮಾನವಾಗುವಂಥ ಮತ್ತು ಪ್ರಪಂಚದ ಲುಕಸಾನ ಆಗುವಂಥ ನೋಟೀಸು ಕೊಟ್ಟದ್ದನ್ನ ನೋಡಿದೆನು. ಸದರ ನೋಟೀಸಿನಲ್ಲಿ ಬರೆದ ಯಾವತ್ತು ಮಜಕೂರು ಸುಳ್ಳು ಮತ್ತು ಮತಲಬಿಯದು ಇರುತ್ತದೆ ನೀನು ನನ್ನ ಕೂಡ ಉಡಿಕೆ ಮಾಡಿಕೊಂಡು ಒಂದು ವರ್ಷವಾಯಿತು ನನಗೆ ಒಬ್ಬ ಹೆಂಡತಿಯು ಇರಲಿಕ್ಕೂ ನನ್ನನ್ನು ಉಡಿಕೆ ಮಾಡಿಕೊಂಡಿ ಇದಕ್ಕೆ ನಿನ್ನ ಹಾಗು ನನ್ನ ಮನೆಯವರು ಕಬೂಲಿ ಕೊಟ್ಟಬಳಿಕ ಉಡಿಕೆ ಕಾರ್ಯವಾಯಿತು ಈಗ ದೈವ ವಶಾತ ನಾನೂ ನಿನ್ನ ಹೆಂಡತಿಯೂ ಗರ್ಭಿಣಿಯಾಗಿದ್ದೇವೆ ಇತ್ತಲಾಗಿ ಒಂದೇ ತಿಂಗಳಿಂದ ನಿನ್ನ ಹೆಂಡತಿ ಮತ್ತು ಶಿವನಗೌಡಾ ಸಂಕನಗೌಡಾ ಹಿರೇಗೌಡರ ಇವರ ಮಾತು ಕೇಳಿ, ನನ್ನ ಲುಕಸಾನ ಮಾಡುವ ಇರಾದೆಯಿಂದ ಭಲಭಲತೆ ನೋಟೀಸು ಕೊಟ್ಟಿರುತ್ತೀದಿ ಈ ನೋಟೀಸಿಗೆ ನಾನು ಬಾಂಧಾಯಿಸುವದಿಲ್ಲ ನಾನು ನಿನ್ನಿಂದಲೇ ಗರ್ಭಧಾರಣ ಮಾಡಿದ್ದು, ನನ್ನ ಹೊಟ್ಟೆಯಿಂದ ಹುಟ್ಟುವ ಕೂಸಿನ ವಾರಸಾ ಹಕ್ಕು ನಿನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಕಾಯದೇಶೀರ ನಡೆಯುವದು ಮತ್ತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನ ಪ್ರಪಂಚವು ಸುರಳೀತ ರೀತಿಯಿಂದ ಸಾಗುವಂತೆ ವ್ಯವಸ್ಥಾ ಮಾಡಬೇಕು ಬೇರೆ ಮನೆ ಮಾಡಿಡಬೇಕು. ಬಾಣಂತಿತನ ಮಾಡಿಸಬೇಕು ಇದಕ್ಕೆ ತಪ್ಪಿದರೆ ನಾನು ನಿನ್ನ ಮೇಲೆ ನನ್ನ ಪೋಟಿಗಿ, ಕೂಸಿನ ಉಪಜೀವನದ ಹಕ್ಕು, ಮತ್ತು ಬಾಣಂತಿತನದ ಖರ್ಚಿನ ದೆಸೆಯಿಂದಾ ಕಾಯದೇಶೀರ ಇಲಾಜ ಮಾಡುವೆನು. ಗಂಡು ಹುಟ್ಟಿದರೆ ನಿನ್ನ ಆಸ್ತಿಯಲ್ಲಿ ಹಿಸೇದ ಬಗ್ಗೆ ಇಲಾಜ ಮಾಡುವೆನು. ಆ ಸಂಬಂಧಿ ಹತ್ತುವ ಯಾವತ್ತು ಖರ್ಚಿನ ಭೋಜಾ ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿರುತ್ತದೆ. ಮತ್ತು ನೀನು ಈ ನೋಟೀಸಿಗೆ ವಿರುದ್ಧವಾಗಿ ಆಸ್ತಿಯು ಖಿಲಲ ಮಾಡಿದರೆ ನಿನ್ನ ಮೇಲೆ ಮಾಡುವಂತೆ ಆಸ್ತಿ ತಕ್ಕೊಂಡವರ ಮೇಲೂ ಇಲಾಜ ಮಾಡುವೆನು ಅಂತಾ ಜಾಹೀರ ಮಾಡಿದ ನೋಟೀಸು

ತಾರೀಖು ೧೬ ಜೂನ ೧೯೩೭ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಈರವ್ವಾ ಕೋಂ ನಿಂಗನಗೌಡಾ ಪಾಟೀಲ ಈಕೆ ಕೈದು ಇರುತ್ತದೆ.

ತ್ವರೆ ಮಾಡಿರಿ. ಮಾರಿಕಾ ಬೇನೆಗೆ ಅಲಕ್ಷವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ನೋಟೀಸು

ತುಳಸವ್ವಾ ಕೋಂ ಅಡಿವೆಪ್ಪಾ ಕ್ವಾಟಿ ಸಾಕೀನ ಅಂತರವಳ್ಳಿ ತಾಲೂಕ ರಾಣೇಬೆನ್ನೂರ ಯಲ್ಲಪ್ಪಾ ಯಲ್ಲಾಪೂರ ಇವನ ಮನಿಯಲ್ಲಿ ಈಕೆಗೆ-

ಕೆಳಗೆ ಸಹಿ ಮಾಡಿದ ಅಡಿವೆಪ್ಪಾ ಬಿನ್ನ ನಾಗಪ್ಪಾ ಕ್ವಾಟಿ ಸಾಕೀನ ಅಂತರವಳ್ಳಿ ನಾನು ಈ ನೋಟೀಸಿನ ಮೂಲಕ ನಿನಗೆ ತಿಳಿಸುವದೇನಂದರೆ-

ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನ ಆಗಿ ೭-೮ ವರ್ಷ ಆಯಿತು, ಯೆರಡು ವರ್ಷ ನನ್ನಲ್ಲಿ ಬಂದು ಬಾಳ್ವೆ ಮಾಡಿದಿ ನಂತರ ಹೇಳದೇ ಕೇಳದೇ ನೀನು ನಿನ್ನ ತವರ ಮನಿಗೆ ೨ ಸಾರೆ ಹೋದಿ ಊರಲ್ಲಿ ಸಂಭಾವಿತ ಜನರು ೩-೪ ಸಾರೆ ನಿನಗೆ ಕರಕೊಂಡು ಬಂದು ಬಳ್ಳೇ ರೀತಿಯಿಂದಾ ಬಾಳ್ವೆ ಮಾಡಬೇಕಂತಾ ನಿನಗೆ ಹೇಳಿ ಕಳಿಸಿದರು ಆದರೂ ನೀನು ನನ್ನನ್ನು ಸೇರದೇ ನನ್ನಲ್ಲಿ ಬಾಳ್ವೆ ಮಾಡೋದು ಬಿಟ್ಟು ತವರ ಮನಿಗೆ ಹೋದಿ

ನೀನು ಅಪರಾತ್ರಿಯಲ್ಲಿ ಯಾರಿಗೂ ಹೇಳದೇ ಕೇಳದೇ ಹನ್ನೊಂದು ತಿಂಗಳ ಕೆಳಗೆ ಹೊರಟು ಹೋದವಳು ಮತ್ತು ತಿರಾಯಕರು ನಿನಗೆ ಬುದ್ಧಿ ಹೇಳಿ ಕಳಿಸಿದರೂ ಬಾಳ್ವೆ ಮಾಡದೇ ಹೋದ್ದರಿಂದಾ ನನ್ನಲ್ಲಿರುವದು ನಿನ್ನ ಖುಷಿಯಿಲ್ಲವಾದ ಕಾರಣಾ ನಿನ್ನನ್ನು ನಾನು ಬಿಟ್ಟು ಬಿಟ್ಟಿದ್ದೇನೆ. ಇದೇ ಸೋಡಚೀಟಿ ಅಂತಾ ತಿಳಿದು ನೀನು ನಿನ್ನ ಮರ್ಜಿ ಪ್ರಕಾರ ಇರತಕ್ಕದ್ದು.

ನಾನು ನನ ಮರ್ಜಿಯಂತೆ ಬೆಳೆಯುವವಳೆ, ಯರಡನೇ ಲಗ್ನ ಮಾಡಿಕೊಳ್ಳುತ್ತೇನೆ ನನ್ನ ಮೇಲೆ ವ ನಿನ್ನ ಹೊಟ್ಟೆಲೆ ಹುಟ್ಟಿದ ಮಕ್ಕಳ ಹಕ್ಕು ಸಹಾ ಇರುವದಿಲ್ಲ ತಿಳಿಯುವದು ತಾರೀಖು ೧೭ನೇ ಮಾಹೆ ಜೂನ ಸನ್ ೧೯೩೭ನೇ ಇಸ್ವಿ

ಅಡಿವಪ್ಪ ಬಿನ್ನ ನಾಗಪ್ಪಾ ಕ್ವಾಟಿ ಸಾಕೀನ ಅಂತರವಳ್ಳಿ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರ ಸಸ್ತಾ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುತ್ತೇವೆ. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಪತ್ರವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[o][o]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ”	೬—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತ್ಸರಾದ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ

ಬಿಡಿ ಅರ್ಧ ಆಣೆ

ಸಂಪಾದಕರು:– ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮: ಧಾರವಾಡ ರವಿವಾರ ತಾರೀಖು ೧೯ ನೇ ಜೂನ ೧೯೨೭ ಸಂಚಿಕೆ ೧೨೯

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಪಿಪಾಯಿಗಳನ್ನು ತಿರುಗಿಸುವ ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಅಂಗುಲದು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಅದ್ದರಿಂದ ಬಾರಿಗೆ ೫೦ ಗ್ಯಾಲನ್ ನೀರಿನ ಭಾರವನ್ನು ಒಂದು ಹಗುರಾಗಿ ಎಳೆಯುತ್ತದೆ. ನಡುವೆ ನೀರಿನ ಕೊಡ ತೆಯು ಎಲ್ಲ ಕಡೆಗೂ ಉಂಟು. ಅದ್ದರಿಂದ ರಸ್ತೆಯಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೭೫॥ ರೂಪಾಯಿ.

ನಮ್ಮ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲಕೋಟೆ ಅವರನ್ನಾಗಲೀ ಅಥವಾ ಕಾರ್ಖಾನೆಗೆ ಪತ್ರವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ಪ್ರಕಟನೆ.

—o—

ನಾಳೆ ಆದಿತ್ಯವಾರ (೧೯-೬-೨೭) ಸಾಯಂಕಾಲ ೫॥ ಗಂಟೆಗೆ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ "ಟಿಳಕ ಸ್ಮಾರಕ ನಿಧಿ"ಯ ಹಣದ ವಿನಿಯೋಗವನ್ನು ಯಾವ ರೀತಿಯಲ್ಲಿ ಮಾಡಬೇಕೆಂಬ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ತಿಳಿದುಕೊಳ್ಳುವದಕ್ಕಾಗಿ ಸಾರ್ವಜನಿಕ ಸಭೆಯು ನೆರೆಯುವದು. ಈ ನಿಧಿಗೆ ಹಣ ಕೊಟ್ಟವರೂ ಕೂಡಿಸಿ ಕೊಟ್ಟವರೂ ನಿಧಿಯ ಮಂಡಳದ ಸಭಾಸದರೂ ಎಲ್ಲರೂ ಅವಶ್ಯವಾಗಿ ಬರಬೇಕೆಂದು ವಿನಂತಿ ವೇ. ಶಾ. ನಾಗೇಶಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರು.

ಸುರೇಂದ್ರ ಶಿವರಾವ ದೇಸಾಯಿ.
ಕಾರ್ಯದರ್ಶಿ
ಟಿಳಕ ಸ್ಮಾರಕ ನಿಧಿ ಮಂಡಳ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿನ ಬಂಡವಲು ಎರಡು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವದು. ಕರೆಂಟ ಮತ್ತು ಸೇವಿಂಗ್ಸ ಡಿಪಾಝಿಟುಗಳಿಗೆ ಆಕರ್ಷಕ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಪಂಢರಿನಾಥ ಬಿ. ಬಾಕಳೆ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ಸಾಲ ತಕ್ಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳ ...ಬಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟ

ನೋಟೀಸಿನ ದರಗಳು.

—o—

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರಿ ಆಣೆ ವಾರ್ಷಿಕ ಪ್ರತಿಯೊಂದು ಒಳಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲಿಮಿಟೆಡ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಧಾರಣ ದರ— ಇಂಗ್ಲಿಷ ದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಹೆಚ್ಚಾಗುವದು ಒಳಗೆ ಇನ್ನಿತರ ಜಾಹೀರಾಯ ಪಟ್ಟಿಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೯-೬-೨೧ ನೇ ಇಸ್ವಿ

ವಿಲಾಯತಿಯವರ ಕೂಡ ಪಙ್ಕ್ತಿಭೋಜನ.

ಧಾರವಾಡದವರಾಗಿ ಕಾಶಿಯಲ್ಲಿರುವ ಹಿಂ ..ೂ ಯುನಿವ್ಹರ್ಸಿಟಿಯಲ್ಲಿ ಪ್ರೊಫೇಸರರಾಗಿರುವ ..ೀ. ಗೋಡಬೋಲೆಯವರು ಇಲ್ಲಿಗೆ ಬಂದಿದ್ದಾರೆ. ..ಫೇಸರರು ರತಿಯ ದೇಶ ಬಿಟ್ಟು ಜರ್ಮನ .ಂಬ ಪ್ರವಾಸ ಮಾಡಿದ್ದಾರೆ. ಫ್ರಾಂಕ್‌ಫೋರ್ಟ ..ಕ್ಸಫರ್ಡ- ಅಲ್ಲಿಗೂ ಹೋಗುತ್ತಿದ್ದರು ಇವರು ಕಾಶಿ ..ಲ್ಲಿದ್ದು, ಅಲ್ಲಿಯ ಪಂಡಿತರಿಗೆ ಪ್ರಿಯರಾಗಿದ್ದಾ.. ವಿಲಾಯತಿಗೆ ಹೋಗಿ ಬಂದ ಅಪರಾಧಕ್ಕಾ.. ಪಂಡಿತರು ಇವರಿಗೆ ದೇಹಾಂತ ಪ್ರಾಯಶ್ಚಿ.. ಹೇಳಿ ಹತಿಕ್ಷಂಟ್ಯನ ಘಂಟು ತೀರಿಸಲಿಲ್ಲ ..ಷ್ಟಬಾಹ್ಯರೆಂದು ಹೊರಗೆ ಹಾಕಲಿಲ್ಲ. ಯೋ.. ..ವಾದ ಪ್ರಾಯಶ್ಚಿತ್ತ ಕೊಟ್ಟು, ಇವರ ಕೂಡ ..ನ್ನೋದಕ ತಕ್ಕೊಂಡಿದ್ದಾರೆ. ಮತ್ತು ಇವರ ..ನೆಯಲ್ಲಾಗುವ ಹವ್ಯಕವ್ಯಗಳನ್ನು ಮಾಡಿಸಿ, ..ೋಜನ ಮಾಡುತ್ತಾರೆ.

ಕಾಶಿಯ ಪಂಡಿತರು ಸಾಮಾನ್ಯರಲ್ಲ. ಅ..ರು ಹೇಳುವ ಧರ್ಮಶಾಸ್ತ್ರವು ಕಾಶ್ಮೀರದಿಂದ ..ನ್ಯಾಕುಮಾರಿಯ ತನಕ ಮಾನ್ಯವಾಗುತ್ತದೆ. ..ಶಿಯಲ್ಲಿ ಅಧ್ಯಯನಕ್ಕಾಗಿರುವಷ್ಟು ವಿದ್ಯಾರ್ಥಿಗ.. ..ಹಿಂದುಸ್ಥಾನದಲ್ಲಿ ಯಾವ ಸಂಸ್ಕೃತ ಪಾಠಶಾ..ಯಲ್ಲಿಯೂ ಇರುವದಿಲ್ಲ. ಕಾಶಿಯ ಪಂಡಿತರು ..ಗಸ್ಪಂಡಿತರೆಂದು ಖ್ಯಾತಿ ಪಡೆದಿದ್ದಾರೆ. ಇಂಥ ..ರು ವಿಲಾಯತಿಗೆ ಹೋಗಿ ಬಂದವರನ್ನು ಆದರ.. .. ಅವರ ಕೂಡ ಅನ್ನೋದಕ ವ್ಯವಹಾರ ಮಾ..ತ್ತಿರುವದನ್ನು ನೋಡಿದರೆ- ಬೇರೆಯವರು ಈ ..ಗ್ಗೆ ಹೂಡುವ ವಾದವು ಝುಂಝಾಟದಂತಾಗು..ದೆಂದು ಏಕೆ ಹೇಳಬಾರದು?

ವಿಲಾಯತಿಗೆ ಹೋಗಿ ಬಂದವರ ಜಾಂಭವ.. ..ಕೂಡ ಭೋಜನ ಮಾಡಿದರೆಂಬ ಆರೋಪದಿಂದ ..ರಡಾಚಾರ್ಯ ಮುದ್ರಾಧಾರಣ ತಕ್ಕೊಂಡ ಇಲ್ಲಿಯ ..ೀ. ದೇಶಪಾಂಡೆ ಹಣಮಂತರಾವ ವಕೀಲರವ.. .. ಇದೇ ವಿಷಯವಾಗಿ ಶ್ರೀ ಮದುತ್ತರಾದಿ ಮಠ.. ..ಶ್ರೀಪಾದಂಗಳವರ ಸನ್ನಿಧಿಯಲ್ಲಿ ಒಂದು ಶಿಷ್ಯ ಮಂಡಲವನ್ನು ಕರಕೊಂಡು ಹೋಗುವ ಉದ್ಯೋಗ ನಡಿಸಿದ್ದಾರೆ. ಇದೇನು ಹೊಸ ವಿಷಯವಲ್ಲ. ಶ್ರೀಗಳವರು ಬಂದಂದಿನಿಂದ ಈ ವಿಷಯ ಚರ್ಚೆಯಾಗಿ ಹಸಿಗಟ್ಟುತ್ತದೆ. ಆದರೂ ಇವರು ಶ್ರೀಗಳವರ ಮುಂದೆ ಹೋಗಿ ಹೂಕೂರಿ ಊದುವದರಿಂದಾಗುವ ಪ್ರಯೋಜನವೇನು?

ವಿಲಾಯತಿಯವರ ಸಂಸರ್ಗ ಮತ್ತು ಸಂಪರ್ಕವು ಈ ಕಾಲದಲ್ಲಿ ಹರಿಹರ ಬ್ರಹ್ಮಾದಿಗಳಿಗೂ ತಪ್ಪಿದ್ದಲ್ಲವೆಂದು ನಾವು ಈ ಮೊದಲೇ ಬರೆದಿರುತ್ತೇವೆ. ಶ್ರೀಗಳವರು ಕೆಲ ಹೊತ್ತು ತಮ್ಮ ಅಂತಃಕರಣಕ್ಕೆ ಕೈ ಹಚ್ಚಿಕೊಂಡು ಪ್ರಶ್ನ ಮಾಡಬೇಕು? ವಿಲಾಯತಿಯ ಪ್ರತ್ಯಕ್ಷಾಪ್ರತ್ಯಕ್ಷ ಸಂಬಂಧವಿದ್ದವರ ಮನೆಯಲ್ಲಿ ಶ್ರೀ ರಾಮದೇವರ ಪೂಜೆಯಾಗಿದೆ. ಅನ್ನ ಸಂತರ್ಪಣೆಯಾಗಿದೆ. ತಮ್ಮ ಭೋಜನವಾಗಿದೆಂದು ಆತ್ಮಾಭಿರಾಮನು ಉತ್ತರ ಕೊಡುವನು. ವಿಲಾಯತಿಯ ಸಂಸರ್ಗವು ವಿಶ್ವಾಮಿತ್ರನಂತಿದ್ದು, ಯಾವದೊಂದು ದೊಡ್ಡ ಪಟ್ಟಣದಲ್ಲಿ ಅದು ಶ್ರೀಗಳವರ ಮುಂದೆ ಮೂರ್ತಿಮಂತವಾಗಿ ನಿಲ್ಲುವದೆಂದೂ ಆ ಆತ್ಮಾಭಿರಾಮನು ಹೇಳುವನು.

ಡೆಪ್ಯುಟೇಶನದವರು ತಮ್ಮಲ್ಲಿ ಗಟ್ಟಿಗತನವುಂಟೆಂದನ್ನು ತೋರಿಸಬೇಕಲ್ಲದೆ, ಮೆತ್ತಗಾಗಿ ನೋಕಷ್ಯಂದ ಅಗಿಸಿಕೊಳ್ಳುವ ಭರಿಗೆ ಬೀಳಬಾರದು. ಇವರು ಮೆತ್ತಗಿದ್ದಾರೆಂದು ಕಂಡು ಬಂದದ್ದರಿಂದಲೇ ಮೇಲಿಂದ ಮೇಲೆ ಪ್ರಾಯಶ್ಚಿತ್ತ ಮತ್ತು ಮೇಲಿಂದ ಮೇಲೆ ತಪ್ತ ಮುದ್ರೆಯ ಮಹಾಫಲ ಮಹಾಪ್ರಸಾದ ದೊರೆಯುತ್ತಿರುವದು. ಅಂಥ ಪ್ರಸಂಗ ತಂದುಕೊಳ್ಳಬಾರದೆಂದೇ ಈ ಜನಕ್ಕೆ ನಾವು ಒತ್ತಾಯದಿಂದ ಹೇಳುತ್ತೇವೆ.

ಪ್ರೀತಿಯಿಂದಲೇ ಐಕ್ಯ-

ಬಕರೀದ ಹಬ್ಬದಲ್ಲಿ ಹಿಂದೂ ಮುಸಲಮಾನ ಐಕ್ಯವಾಗಿ, ದಂಗೆಯಾಗಬಾರದೆಂದು ಧಾರ್ಕರ ಆಸಾರಿಯವರು ಹಿಂದೂ ಮುಸಲಮಾನ ಐಕ್ಯದ ಕಮೀಟಿ ಕೂಡಿಸಿದರು. ಸರಕಾರದವರೂ ಪೋಲೀಸ ತುಕಡಿಗಳಿಂದ ಬಂದೋಬಸ್ತು ಇಟ್ಟರು. ಆದರೂ ಸಂಶಯದಿಂದ ಹಿಂದೂ ಜನರು ಹಲವು ಕಡೆ ಉಪ್ಪಿನ ವ್ಯವಹಾರ ಬಂದಿಟ್ಟರು. ಇವರ ಸ್ಥಿತಿಯನ್ನು ಹಿಂದೂ ಮುಸಲಮಾನ ಬೇರೆ ಜನರು ಹೇಳಿದ್ದಾರೆ, ಸರಕಾರದ ಬಲ ಮತ್ತು ಪ್ರತಿಷ್ಠೆಯಿಂದ ಅಥವಾ ಹಿಂದೂ ಮುಸಲಮಾನರ ಶಕ್ತಿ ಸಾಮರ್ಥ್ಯದಿಂದ ಕಲಹವಿಲ್ಲದಿರದು. ಪರಸ್ಪರ ಪ್ರೀತಿವಿಶ್ವಾಸಗಳಿದ್ದರೇ ಶಾಂತತೆ ಮುಂದಾಗಿ, ಐಕ್ಯವಾಗುವದೆಂದು ಬಹಳ ಜನರು ಅಂದಿದ್ದಾರೆ. ಸಂತೋಷ, ಹಿಂದೂ ಮತ್ತು ಮುಸಲಮಾನರ .. .. .. ಪ್ರೀತಿ ನೇ..

ಲೋಕಮಾನ್ಯರ ಸ್ಮಾರಕ ನಿಧಿಯ ವ್ಯವಸ್ಥೆ.

ಲೋಕಮಾನ್ಯ ಟಿಳಕರು ನಿಧನರಾದ ಬಳಿಕ, ಧಾರವಾಡದಲ್ಲಿ ಅವರ ಸ್ಮಾರಕ ಮಾಡುವ ಕುರಿತು ಕೂಡಿದ ಸಭೆಯಲ್ಲಿ ಹತ್ತೆಂಟು ಸಾವಿರದ ಅಂಕಿಗಳು ಬಿದ್ದವು. ಅನಂತರ ಒಬ್ಬರು ೧ ಸಾವಿರ ರೂ. ಕೊಟ್ಟರು. ಇನ್ನೊಬ್ಬರು ೫೦೦ ಕೊಟ್ಟರು. ಮೂರನೆಯವರು ಐನೂರು ಕೂಡಿಸಿದರು. ಕಿರುಕಳವಾಗಿ ಐನೂರು ಕೂಡಿತು. ಅನಂತರ ವರ್ಗಣಿ ವಸೂಲಿಯ ಕೆಲಸವು ತಣ್ಣಗಾಯಿತು. ಇದಕ್ಕೂ ಹೆಚ್ಚಿನ ಚಮತ್ಕಾರವೆಂದರೆ- ಸಾವಿರ ಮತ್ತು ಐನೂರು ಕೊಟ್ಟವರು ತಮ್ಮ ಹಣವನ್ನು ಟ್ರಸ್ಟ ಕಡೆಯಿಂದ ತಿರಿಗಿ ತಕ್ಕೊಂಡರು. ಆದರೂ ಸ್ಮಾರಕ ಕಮೀಟಿಯವರು ಗಾಢನಿದ್ರೆ ಮಾಡುತ್ತಿದ್ದರು.

ಈಗ ಕಮೀಟಿಯಲ್ಲಿ ಸರಾಸರಿ ಸಾವಿರ ರೂಪಾಯಿಗಳುಂಟು. ಇವುಗಳ ವಿನಿಯೋಗ ಹೇಗೆ ಮಾಡಬೇಕೆಂಬ ವಿಚಾರ ನಡೆದಿದೆ. ಕಾರ್ಯದರ್ಶಿಯಾದ ಶ್ರೀ ಸುರೇಂದ್ರರಾವ ದೇಸಾಯಿಯವರು ಒಂದು ಸಭೆಯನ್ನು ಕರೆದಿದ್ದಾರೆ ಸಭೆಯು ಇಂದೇ ಸಾಯಂಕಾಲದಲ್ಲಿ ಶ್ರೀ ಜಗದ್ಗುರು ಶಂಕರಾಚಾರ್ಯರ ಪಾಠಶಾಲೆಯಲ್ಲಿ ಕೂಡತಕ್ಕದ್ದಿದೆ.

ಐನೂರು ರೂಪಾಯಿ ರೋಖು ಕೂಡಿಸಿದ ಗೃಹಸ್ಥರು ಲೋಕಮಾನ್ಯರ ಹೆಸರಿನಿಂದ ಒಂದು ಶಿಷ್ಯವೃತ್ತಿ ಇರಬೇಕೆಂಬ ಮತದವರಾಗಿದ್ದಾರೆ, ಕಿರುಕಳವಾಗಿ ಐನೂರು ಕೂಡಿಸಿದವರು ಲೋಕಮಾನ್ಯರ ಹೆಸರಿನಿಂದ ಗ್ರಂಥಗಳನ್ನು ಮುದ್ರಿಸಬೇಕೆಂದಿದ್ದಾರೆ. ಲೋಕಮಾನ್ಯರ ಭಾಷಣ, ಲೇಖನ, ಕಾಲಕಾಲಕ್ಕೆ ವ್ಯಕ್ತ ಮಾಡಿದ ವಿಚಾರಗಳ ಹೆಚ್ಚಿನ ಭಾಗಗಳು ಮಹಾರಾಷ್ಟ್ರ ಭಾಷೆಯಲ್ಲಾಗಿರುತ್ತವೆ. ಇವನ್ನೆಲ್ಲ ಮುದ್ರಿಸುವದರಿಂದ, ಕರ್ನಾಟಕ ಪ್ರಾಂತದಲ್ಲಿ ಲೋಕಮಾನ್ಯರ ವಿಚಾರಗಳನ್ನು ಹಬ್ಬಿಸಿ, ಜನತೆಯಲ್ಲಿ ರಾಷ್ಟ್ರೀಯ ಸ್ಫೂರ್ತಿಯನ್ನು ಹುಟ್ಟಿಸಿದಂತಾಗುತ್ತದೆಂದು ಇವರ ಮತವಾಗಿರುತ್ತದೆ.

ಇವೆರಡನ್ನೂ ಸಾಧಿಸಬಹುದೆಂದು ವಿಜಯದ ಮತವು. ಮೊದಲು ಲೋಕಮಾನ್ಯ ಗ್ರಂಥಮಾಲೆಯು ಪ್ರಾರಂಭಿಸಬೇಕು. ಅದರಿಂದ ಬರುವ ಲಾಭವನ್ನು ಸ್ವತಂತ್ರವಾಗಿಟ್ಟು, ಅದು ಐನೂರು ರೂಪಾಯಿಯಾದ ಕೂಡಲೆ, ಸ್ಕಾಲರಶಿಪ್ಪು ಕೊಡಬೇಕು. ಈಗ್ಗೆ ಇರುವ ಒಂದು ಸಾವಿರ ರೂಪಾಯಿಗಳಲ್ಲಿ ಎರಡು ಭಾಗ ಮಾಡಿದರೆ- ಗ್ರಂಥಗಳನ್ನು ಮುದ್ರಿಸುವ ಕೆಲಸವು ಬಹಳ ಹಿಂದೆ ಬೀಳುವದು. ಒಂದು ಅಥವಾ ಎರಡು ಸ್ಕಾಲರಶಿಪ್ಪುಗಳಿಗಿಂತ ಗ್ರಂಥ ಪ್ರಕಾಶನವು ಮಹತ್ವದ ಕಾರ್ಯವಾಗುತ್ತ..

...ಲೋಕಮಾನ್ಯರ ವಿಚಾರಗಳನ್ನು ಊರೂರ ಹಂಚುವಷ್ಟು ಮಹತ್ವವು ಸ್ಮಾರಕಶಿಲ್ಪಿನಲ್ಲಿರು...ಲ್ಲ. ...ದರಿಂದ ತುಸು ತಡವಾದರೂ ಸ್ಮಾರಕಶಿಲ್ಪದ ವಿಚಾರವನ್ನು ಮುಂದಿಟ್ಟುಕೊಂಡು, ...ಯದ ವಿಚಾರವನ್ನು ಮೊದಲು ಮಾಡ...ಕು.

...ಸಾವಿರ ಮತ್ತು ಐನೂರು ಕೊಟ್ಟು ತಕ್ಕೊಂ...ರು ಪುಸ್ತಕ ದ್ರವ್ಯ ಕೊಡುವಂತೆ ಪ್ರಯತ್ನ ಮಾ...ಬೇಕು. ಮತ್ತು ಇದೇ ಪ್ರಕಾರ ಉಳಿದ ಹಣ...ವು ಆದಷ್ಟು ಕೂಡಿಸಬೇಕು. ಅಂದರೆ ಈ ಕೆಲ...ಸ ಹೆಚ್ಚು ಕಷ್ಟವಿಲ್ಲದೆಯೂ ಹುರುಪಿನಿಂದಲೂ ...ಕಲವು ಕೂಲವಾಗುವದು.

ದೀನಾಪೂರದಲ್ಲಿ ಹಿಂದೂ ಮುಸಲಮಾನ ದಂಗೆ.

—೦—

ದಿನಾಪೂರದಲ್ಲಾದ ಹಿಂದೂ ಮುಸಲಮಾನ ...ಗೆಯಲ್ಲಿ ಪೋಲೀಸರು ೪೦ ಹಿಂದೂ ಗೃಹಸ್ಥ...ನ್ನು ಹಿಡಿದಿದ್ದಾರೆ. ಇವರಲ್ಲಿ ಮ್ಯುನಿಸಿಪಾಲಿಟಿ ...ಚೇರಮನ್ನರಾಗಿದ್ದ ಮಿ. ಅಗರವಾಲ್, ಹಿಂ...ದೂ ಸಭೆಯ ಸೆಕ್ರೆಟರಿ ಮತ್ತು ವಕೀಲರಾಗಿರುವ ...ಜೇಂದ್ರನಾಥ ನಂದಿ, ವಕೀಲ ಶಿವದತ್ತವಾಲಾ ಆ...ರ್ಜನ ಗಿಣಿಯ ಮೂಲಕರಾದ ಗುರುಪಾದಶಿಂಗ ಪ್ರಮುಖರಾಗಿದ್ದಾರೆ.

ಪೋಲೀಸರು ಹಿಂದೂ ಜನರ ಮನೆಗಳಲ್ಲಿ ...ಶೋಧ ಪ್ರಾರಂಭಿಸಿದ್ದಾರೆ. ಪ್ರೇತಗಳನ್ನೂ, ಘಾ...ಯ ಹೊಂದಿದವರನ್ನೂ ಒಯ್ಯುವದಕ್ಕಾಗಿ ಮಾಡಿದ ...ದ ಮಂಚ ಮತ್ತು ಸಿದ್ದಿಗೆ, ಬಡಿಗೆ ಮುಂತಾದ ...ಸಿಕ್ಕವೆ. ಮುಸಲಮಾನರ ಮನೆಯೊಳಗಿಂದ ...ಳುಗಳನ್ನು ಬಲವಂತಿಕೆಯಿಂದ ತರುವದಕ್ಕಾಗಿ ...ನು ಸಾವಿರ ಜನರಿಗೆ ಸಾಲುವಷ್ಟು ಮಾಡಿದ ಅ...ಸ್ತ್ರ ಸಿಕ್ಕದೆ.

ಮುಸಲಮಾನರು ಹಿಂದೂ ಜನರ ಮೇಲೆ ...ದರು ಫಿರ್ಯಾದಿಗಳನ್ನು ಮಾಡಿದ್ದಾರೆ.

೧ ತಮ್ಮ ಮನೆಯಲ್ಲಿದ್ದ ಛತಳವನ್ನು ಬಲವಂತಿಕೆಯಿಂದ ಒಯ್ದದ್ದು.

೨ ಷಹನರೆಂಬವನನ್ನೂ ಅವರ ಅತ್ತೆಯನ್ನೂ ಕೊಂದದ್ದು.

೩ ಪಕೀರ ಅಜಮ್ಮರೆಂಬವರ ಮನೆಯಲ್ಲಿ ಸುಲಿಗೆ ಮಾಡಿ, ಅವರ ಮನೆಗೆ ಬೆಂಕಿ ಹಚ್ಚಿದ್ದು.

...ಜ್ಜೀಜಸಾಹೇಬರು ಹಿಂದೂ ಜನರ ಮೇಲೆ ...ಸು ಹಾಕಿದ್ದರಿಂದ ಮೇಲಿನ ಅನರ್ಥವು ಆಗಿ...ವಾಯಿ ... ಪೋಲೀಸರು ... ಮಾಡಿದ್ದಾರೆ. ... ಜಜ್ಜೀಜರನ್ನು ಹಿಡಿದಿರು...ದಿಲ್ಲ.

ಆಯರ್ಲಂಡದ ಚುನಾವಣೆಯು.

—೦—

ಡಿ ವ್ಹೆಲೆರಾನ ಭೀಷ್ಮ ಪ್ರತಿಜ್ಞೆ.

—೦೦೦—

ಆಯರ್ಲಂಡದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆಯಾಯಿತು. ಈಗಿನ ಮಂತ್ರಿಯಾದ ಮಿ. ಕಾಸಗ್ರೆವ್ಹ ಮತ್ತು ಪ್ರಜಾಸತ್ತಾತ್ಮಕವಾದಿಯಾದ ಡಿವ್ಹೆಲೆರಾನ ನಡುವೆ ಜಿದ್ದು ಬದ್ದಿತ್ತು. ಇವೆರಡರ ಹೊರ್ತು ಬೇರೆ ಬೇರೆ ಹೆಸರಿನ ಮೂರು ಪಕ್ಷಗಳಿರುವವು. ಇವುಗಳ ಮೆಂಬರರು ಹತ್ತರೊಳಗೆ ಇರುತ್ತಾರೆ. ಪ್ರಬಲವಾದ ಎರಡೂ ಪಕ್ಷಗಳ ಮೆಂಬರರು ೫೦ರ ತನಕ ಆರಿಸಲ್ಪಟ್ಟಿದ್ದಾರೆ. ಇವರಲ್ಲಿ ಡಿವ್ಹೆಲೆರಾನು ಉಳಿದ ಉಪ ಪಕ್ಷಗಳನ್ನು ಸೇರಿಸಿಕೊಂಡು ಮಂತ್ರಿಮಂಡಲ ಕಟ್ಟಿ ಸರಕಾರ ಪಕ್ಷದವರಾದ ಕಾಸಗ್ರೇವ್ಹಸಾಹೇಬನನ್ನು ಸೋಲಿಸಬಹುದಾಗಿತ್ತು. ಆದರೆ ಈತನು ಬ್ರಿಟಿಶ ಅಧಿಪತ್ಯದಲ್ಲಿ ರಾಜನಿಷ್ಠನಾಗಿರುತ್ತೇನೆಂಬ ಆಣೆಯನ್ನು ಮಾಡಲಿಕ್ಕೆ ಸಿದ್ಧನಿಲ್ಲ. ನಾನು ಮಾತ್ರವಲ್ಲ; ನನ್ನ ಪಕ್ಷದ ಯಾವ ಮೆಂಬರನೂ ಆಣೆ ಮಾಡಲಾರನೆಂದು ಖಂಡಿತವಾಗಿ ಹೇಳಿದ್ದಾನೆ. ಈ ತರದ ಭೀಷ್ಮ ಪ್ರತಿಜ್ಞೆಯಿಂದ ಇವರು ಪಾರ್ಲಮೆಂಟದಲ್ಲಿಯೇ ಪ್ರವೇಶ ಮಾಡುವದಿಲ್ಲ.

ಕೊಲೆಪಾತಕಂಗೆ ಕರಿನೀರಿನ ಶಿಕ್ಷೆ ಮೇಲೆ ದಯೆಯ ಶಿಫಾರಸ್ಸು.

ನಾರಸಾ ಸ್ಟೆಶನದಲ್ಲಿ ರಶಿಯಾದ ರಾಯಭಾರಿಯನ್ನು ಅಸುರತನದಿಂದ ಕೊಂದ ರಾಜಪಕ್ಷೀಯನು ಕೊಲೆಯನ್ನು ಒಪ್ಪಿದ್ದಲ್ಲದೆ, ಇಂಥ ಕೊಲೆ ಮಾಡತಕ್ಕದ್ದೇ ಎಂದು ಕಬುಲಿ ಜವಾಬು ಕೊಟ್ಟನು. ಆದರೂ ಈತನಿಗೆ ನ್ಯಾಯಕೋರ್ಟಿನವರು ಆಜನ್ಮ ಶಿಕ್ಷೆ ವಿಧಿಸಿ, ಮಂತ್ರಿಗಳು ಈತನ ಮೇಲೆ ದಯೆಮಾಡಿ ಶಿಕ್ಷೆಯನ್ನು ೧೫ ವರ್ಷದ್ದು ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಸ್ವರಾಜ್ಯದಲ್ಲಿ ನ್ಯಾಯಮೂರ್ತಿಗಳಂಥವರು ಸ್ವಜನಾಭಿಮಾನವುಳ್ಳವರಾಗಿ, ತಮ್ಮವರ ಪ್ರಾಣರಕ್ಷಣೆ ಹೇಗೆ ಮಾಡುತ್ತಾರೆಂಬದಕ್ಕೆ ಇದಕ್ಕೂ ಹೆಚ್ಚಿನ ದೃಷ್ಟಾಂತವಾವದು ಬೇಕು?

ರಶಿಯಾ... ಕೆಲ ಜನರನ್ನು ಗಲ್ಲಿಗೆ ಹಾಕಿದಂತೆ; ಇವರಲ್ಲಿ ಎಷ್ಟು ಜನರು ರಶಿಯಾ ಸರಕಾರದ ಗುಪ್ತ ಸಂಗತಿಗಳನ್ನು ಇಂಗ್ಲಿಷ ರಾಯಭಾರಿಗೆ ತಿಳಿಸಿದವರಿದ್ದಾರೆಂಬ ಪ್ರಶ್ನವನ್ನು ಪಾರ್ಲಮೆಂಟ ಸಭೆಯಲ್ಲಿ ಮಿ. ಲ್ಯಾಂಪ ಸ್ಟನೆಂಬವರು ಕೇಳಿದರು. ಇವರಿಗೆ ತಪ್ಪು ವರ್ತನವು ನಿರ್ಮೂಲವಾಗಿರುತ್ತದೆಂಬ ಉತ್ತರ ದೊರೆಯಿತು.

ಮುಂಬಯಿ ಕರ್ನಾಟಕದ ಮೊದಲನೇ ರ್‍ಯಾಂಗಲರ.

ಇಲ್ಲಿಯ ಕರ್ನಾಟಕದ ಫೆಲೋ ವಿದ್ಯಾಭ್ಯಾಸಕ್ಕಾಗಿ ಕೇಂಬ್ರಿಜಕ್ಕೆ ಹೋಗಿದ್ದ ವೀರಶೈವ ತರುಣರಾದ ಶ್ರೀ. ಪಾವಟೆಯವರು ರ್‍ಯಾಂಗಲರ ಪರೀಕ್ಷೆಯಲ್ಲಿ ಪಾಸಾದರೆಂದು ಬರೆಯುವದಕ್ಕೆ ಸಂತೋಷಪಡುತ್ತೇವೆ. ಇವರು ಈ ಪರೀಕ್ಷೆ ಪಾಸಾಗಿ ಕರ್ನಾಟಕಕ್ಕೇ ಭೂಷಣ ತಂದಿದ್ದಾರೆ.

ಕನ್ನಡಿಗರ ದೃಷ್ಟಿಯಿಂದ ಪ್ರೊಫೇಸರ ಕಟ್ಟಿಯವರು ಮೊದಲನೆಯವರು ಇವರು ಎರಡನೆಯವರಾಗುತ್ತಾರೆ,

---

ಗುಪ್ತ ಪೋಲಿಸರ ವಿರುದ್ಧ ದೂರು.

ಪಂಜಾಬದ ಸ್ವಾಮಿ ಸತ್ಯದೇವರು ಪಂಜಾಬ ಸರಕಾರದಿಂದ ಪಾಸಪೋರ್ಟ ಪಡಕೊಂಡದ್ದು ವಿಲಾಯತಿಗೆ ಹೋಗತಕ್ಕವರಿದ್ದಾರೆ. ಇವರು ಅಲ್ಲಿಗೆ ಹೋದ ಬಳಿಕ ಭಾರತ ಮಂತ್ರಿಯನ್ನು ಕಂಡು ಅವರ ಮುಂದೆ ಈ ದೇಶದಲ್ಲಿ ಗುಪ್ತ ಪೋಲಿಸ ಖಾತೆಯವರು ಮಾಡುತ್ತಿರುವ ಅತ್ಯಾಚಾರ, ಹಿಂಸೆ, ಸುಳ್ಳು ರಿಪೋರ್ಟ ಮುಂತಾದವುಗಳ ಪ್ರಕರಣ ಹೇಳತಕ್ಕವರಿದ್ದಾರೆ. ಈ ವಿಷಯವಾಗಿ ನಿಷ್ಪಕ್ಷಿಗಳವರು ಗಟ್ಟಿಮುಟ್ಟಯಾದ ಕಾಗದ ಪತ್ರಗಳ ಸಹಿತವಾಗಿ ಪುರಾವೆ ಕೂಡಿಹಾಕಿದ್ದಾರೆ.

ಪೊಲಿಟಿಕಲ ಏಜಂಟರ ಸಭೆ.

ರಾಯಲ ಕಮಿಶನದಿಂದ ಸಂಸ್ಥಾನಿಕರ ಹಿತ ಸಂಬಂಧಗಳಿಗೆ ಬರುವ ಹೊಸ ವಿಚಾರ ಮಾಡಲು ಸಂಸ್ಥಾನಿಕರ ಒಂದು ಸ್ಪೇಶಲ ಕಮಿಟಿಯು ಕೂಡುವದು. ಇದರ ಕೂಡ ಸಂಸ್ಥಾನಗಳಲ್ಲಿರುವ ಪೊಲಿಟಿಕಲ ಏಜಂಟರ ದರ್ಜೆ, ಅಧಿಕಾರ ಮತ್ತು ಬೇರೆ ಕರ್ತವ್ಯಗಳೂ ಕಡಿಮೆಯಾಗುವವು. ಈ ಬಗ್ಗೆ ಮುಂದಾಗಿ ವಿಚಾರ ಮಾಡಲು ಲಾರ್ಡ ಆಯರ್ವಿನಸಾಹೇಬರು ಈ ಏಜಂಟರ ಒಂದು ಪರಿಷತ್ತನ್ನು ಸಿಮ್ಲಾದಲ್ಲಿ ಕೂಡಿಸತಕ್ಕವರಿದ್ದಾರೆ. ಅದಕ್ಕಾಗಿ ಈಗಾಗಲೆ ಅನೇಕ ಏಜಂಟರು ಸಿಮ್ಲಾದ ದಾರಿ ಹಿಡಿದಿದ್ದಾರೆ.

ಮದ್ರಾಸದ ಮಂತ್ರಿಯಾದ ದಿವಾನ ಬಹಾದ್ದೂರ ರಂಗನಾಥ ಮೊದ್ಲಿಯಾರರು ಗ್ರಾಮಗಳ ಸುಧಾರಣೆಗಾಗಿ ಒಂದು ಫಂಡಿನ ವಿಚಾರ ಮಾಡುವರು ಮತ್ತು ತಾವು ದಿವಾನರಾಗಿರುವ ನಕತಿಂಗಳಿಗೆ ೮೦೦ ರೂಪಾಯಿಗಳಂತೆ ಈ ಫಂಡಿಗೆ ದ್ರವ್ಯ ಸಹಾಯ ಮಾಡುವರು.

ಸೆಕಂಡ ಎಲ್‌ಎಲ್ ಬಿ ಪರೀಕ್ಷೆ.

ಈ ಕೆಳಗಿನ ಕನ್ನಡಿಗರು ಸೆಕಂಡ ಎಲ್‌ಎಲ್ ಬಿ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ.

ಸೆಕಂಡ ಕ್ಲಾಸ—

೧ ಬತಕುಂಡ್ರಿ ಜಿ ಎಸ
೨ ಭಂಡಿವಾಡ ಬಿ ಬಿ
೩ ಭಂಡಿವಾಡ ಹೆಚ್ ಹೆಚ್
೪ ಭರಮಸಾಗರ ಬಿ ಎಮ
೫ ಚನ್ನಪ್ಪಗೌಡರ ಎಮ ಬಿ
೬ ಹೊಸಬನಿನ ಎ ಹೆಚ್
೭ ಕುದುರೆಮೋತಿ ಬಿ ಈ
೮ ಶಾಂತಗಿರಿ ಕೆ ಎನ್

ಪಾಸ—

೧ ಆರ. ರಾಮಸ್ವಾಮಿ
೨ ಹುನಗುಂದ ಎನ್ ಎಮ್
೩ ಎಸ ಕನಕನಹಳ್ಳಿ

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಪತಿಯಿಂದ ಕೌನ್ಸಿಲ್ಲಿಗಾಗಿ ಎಂಟು ಜನರನ್ನು ಆರಿಸಬೇಕಾಗಿತ್ತು. ಎಂಟೂ ಜನ ಬ್ರಾಹ್ಮಣೇತರರೇ ಆರಿಸಲ್ಪಟ್ಟರು.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವಳ ಕಡೆಯಿಂದಾ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ- ಕಲಘಟಗಿ ತಾಲೂಕ್ಕಾ ಸಿಟ್ಟೂರ ಗ್ರಾಮದಲ್ಲಿ ಸರಕಾರಿ ಜಮೀನು ಬಿ| ಸ| ನಂಬರು ಎಕರೆ ಆಕಾರ

೪	೭-೨೩	೧೨-೧೫
೭೯	೯- ೧	೧೧- ೧

ಮತ್ತು ಒಂದು ಹುಲ್ಲುಮನಿ ಹಿತ್ತಲ ಸಹಿತ ಈ ಪ್ರಕಾರ ಆಸ್ತಿಗಳನ್ನು ನನ್ನ ಮಾಲ್ಕಿಯ ಇದ್ದು ಪ ಕಗಡೆ ಬಸಪ್ಪನಾಯ ಎಂಬುವನನ್ನು ದತ್ತಕ ಮಾಡಿಕೊಂಡಿರುತ್ತೇನೆ ಈಗ ಸದರಿ ದತ್ತಕ ಮಗನು ಪ್ರಬುದ್ಧನಿದ್ದು ಯಾರದನೇ ಜನರ ಮಾತು ಕೇಳಿ ಖರೀದಿ ವಕ್ತಿ ವಗೈರೆ ರೀತಿಯಿಂದ ಆಸ್ತಿ ವಿಲೇವಾಟ ಮಾಡುತ್ತಾನೆ ಅಂತಾ ಕೇಳುತ್ತೇನೆ ಸದರ ಆಸ್ತಿಗಳು ನಂನ ತಾಬೇದಲ್ಲಿ ಇರುತ್ತವೆ ದತ್ತಕ ಮಗನು ನಂನ (ತಾಬಾದಲ್ಲಿ ಇಲ್ಲಾ) ಮನಿಯಲ್ಲಿ ಇಲ್ಲಾ ಯಾರದನೇ ಗ್ರಾಮದಲ್ಲಿ ಇರುತ್ತಾನೆ ನನ್ನ ಪಶ್ಚಾತ್ ನನ್ನ ಆಸ್ತಿ ದತ್ತಕ ಮಗನಿಗೆ ಹೋಗ ತಕ್ಕದ್ದು ಈಗ ನನ್ನ ದತ್ತಕ ಮಗನು ಅವಿವೇ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೧೦ ಕ್ಕೆ ೩ ರೂಪಾಯಿ.
೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗಿರುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು.
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ಕಿಯಾಗಿ ಸುರಾಪಾನೆ ಮುಳುಗಿಸಿ ನನ್ನ ಹೊಟ್ಟೆ ಉಪಜೀವನಕ್ಕೆ ಸಾಧನವಿಲ್ಲದಂತೆ ಮಾಡಬೇಕೆಂಬ ಇರಾದೆಯಿಂದ ಇರುತ್ತಾನೆ ಕಾರಣ ಮೇಲ್ಕಂಡ ಯಾವತ್ತು ಆಸ್ತಿಗಳನ್ನು ದತ್ತಕ ಮಗನ ಕಡೆಯಿಂದಾ ಖರೀದಿ ವಕ್ತಿ ವಗೈರೆ ಯಾವ ತರಹದಿಂದಲೂ ವಿಲೇವಾಟ ಮಾಡಿಸಿಕೊಳ್ಳಬಾರದು ಇದಕ್ಕೆ ತಪ್ಪಿದರೆ ನನ್ನ ತಕರಾರು ಸಂಪೂರ್ಣ ಇರತದೆ ತಿಳಿಯಿರಿ.

ತಾರೀಖು ೧೫ ನೇ ಜೂನ ಸನ್ನ ೧೯೨೭

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಚನಬಸಪ್ಪಾ ಕೋಂ ಚನಬಸಪ್ಪಾ ಅಂಗಡಿ ಸಹಿ ಮಾಡಿದ್ದು ಇರುತ್ತದೆ.

ನೋಟೀಸಿನ ಉತ್ತರ

—೦—

ಬಸ್ಸವ್ವ ಕೋಂ ಫಕೀರಪ್ಪ ಅಣ್ಣಿಗೇರಿಯವರ ಸಾಕೀನ ಕರೇವಾಡ ಇವಳಿಗೆ—

ಕೆಳಗೆ ಹೆಬ್ಬೆಟ್ಟಿನ ಗುರ್ತು ಮಾಡುವ ಫಕೀರಪ್ಪ ತಂದಿ ಗದಿಗೆಪ್ಪಾ ಅಣ್ಣಿಗೇರಿಯವರ ಈತನು ನಿನಗೆ ಈ ನೋಟೀಸಿನಿಂದ ಉತ್ತರ ಕೊಡುವದೇನಂದರೆ—

ನೀನು ವಿಜಯ ವರ್ತಮಾನಪತ್ರದಲ್ಲಿ ಕೊಟ್ಟ ನೋಟೀಸು ಮುಟ್ಟಿ ಮಜಕೂರು ತಿಳಿಯಿತು. ನೀನು ಅದರಲ್ಲಿ ಬರೆದ ಯಾವತ್ತು ಹಕೀಕತು ಸುಳ್ಳದೆ. ನೀನು ನನ್ನ ಮನೆಬಿಟ್ಟು ಹತ್ತು ವರ್ಷವಾಯಿತು ನೀನು ಬಿಟ್ಟು ಹೋದನಂತರ ನಾನು ಎರಡನೆಯವಳನ್ನು ಮದಿವೆ ಮಾಡಿಕೊಂಡು ಚಲೋ ರೀತಿಯಿಂದ ಬಾಳಿವೆ ಮಾಡಿಕೊಂಡಿರುತ್ತೇನೆ ನೀನು ನನ್ನ ಮನೆ ಬಿಟ್ಟು ಹೋದನಂತರ ವ್ಯಭಿಚಾರಕ್ಕೆ ಬಿದ್ದು ಮೂರು ಮಕ್ಕಳನ್ನು ಹಡೆದಿರುತ್ತೀದಿ ಅವುಗಳಲ್ಲಿ ಒಂದು ಗಂಡು ಇದೆಂದು ನಿನ್ನ ನೋಟೀಸಿನಿಂದ ತಿಳಿಯಿತು. ಆದರ ಹುಡುಗನ ವಾರಸಾ ಹಕ್ಕು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ತರಬೇಕೆಂದು ಮಾಡಿರುತ್ತೀದಿ ಈ ಪ್ರಕಾರ ನೀನು ಮಾಡಿದ ಮಸಲತ್ತಿಗೆ ನಾನು ಬಾಂಧಾಯಿಸುವದಿಲ್ಲ. ನಿನ್ನ ಸಂತತಿಯು ವ್ಯಭಿಚಾರದ್ದು ಆಗಿರುವದರಿಂದ, ನಿನ್ನ ಅಥವಾ ನಿನ್ನ ಹುಡುಗನ ಹಕ್ಕು ನನ್ನ ಮನೆತನದ ಮೇಲೆ ಮತ್ತು ನನ್ನ ಮೇಲೆ ಬಿಲಕೂಲ ನಡಿಯಬಾರದು ನೀನು ನನ್ನ ಮನೀ ಬಿಟ್ಟು ಹೋದ ದಿವಸವೇ ನಿನ್ನ ನನ್ನ ಸಂಬಂಧ ಕಡಿದು ಹೋಯಿತು ನೀನು ನನ್ನ ಮೇಲೆ ಕಾಯದೇಶೀರ ಇಲಾಜ ಮಾಡಿದರೆ- ಅದಕ್ಕೆ ಯೋಗ್ಯ ಉತ್ತರವನ್ನು ಕೊಡುವೆನು. ನಿನ್ನ ಹಕ್ಕು ನನ್ನ ಮೇಲೆ ಬಾಂಧಾಯಿಸಬಾರದೆಂದು ನಿನಗೆ ಈ ಉತ್ತರ ಕೊಡುವ ಅಗತ್ಯವುಂಟಾಯಿತು ನೀನು ನನ್ನ ಮನೆಯಿಂದ ಹೋಗುವಾಗ ನನ್ನ ಮಾಲಕಿಯ ದಾಗೀನೆ ಅಂದರೆ- ೧ ಒಂದು ಜೋಡು ಬಳಿ ಬಂಗಾರದ್ದು ೫ ತೊಲಿ ೨ ಒಂದು ಜೋಡು ತೋಳಬಂದಿ ೨೪ ರೂ. ೩ ಒಂದು ಗುಂಡಿನ ಟೀಕಿ ೧|| ತೊ ೪ ಕರ್ಣಫೂಲು ಪಟ್ಟಿ ಮುಂತಾದ ಚಿಲ್ಲರ ದಾಗೀನೆ ವೈದಿರತೀದಿ ಅವನ್ನು ನನಗೆ ಕೊಟ್ಟು ನನ್ನಿಂದ ಪಾವತಿ ಪಡೆಯಬೇಕು ಇದಕ್ಕೆ ತಪ್ಪಿದರೆ- ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡುವೆನು ಅಂತಾ ಕೊಟ್ಟ ಉತ್ತರಾ ತಿಳಿಯುವದು

ತಾ|| ೧೭-೬-೨೭ ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಫಕೀರಪ್ಪ ತಂದಿ ಗದಿಗಪ್ಪಾ ಅಣ್ಣಿಗೇರಿಯವರ ಈತನ ಕೈದು ಇರುತ್ತದೆ.

ಈ ಪತ್ರವನ್ನು ಅನ್ನದಾನಾಚಾರ್ಯ ಬಾಳಾಚಾರ್ಯ ಹೂಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧಾಣೆ

ಸಂಪಾದಕರು:— ಅಣ್ಣಾಚಾರ್ಯ ಬಾಲಾಚಾರ್ಯ ಪೂಸಳಕರ.

ವರ್ಷ ೮] ಧಾರವಾಡ ಸೋಮವಾರ ತಾರೀಖು ೨೦ ನೇ ಜೂನ ೧೯೨೭ | ಸಂಚಿಕೆ ೧೩೦

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು [illegible] ಇದಕ್ಕೆ [illegible] ದೊಡ್ಡ ಗಾಲಿಗಳಿದ್ದು [illegible] ನೀರಿನ [illegible]

[illegible]

ಕಿರ್ಲೋಸ್ಕರಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ
ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ [illegible] ಸೊಸಾಯಿಟಿಯ [illegible]

[illegible] ಮಾಡಲ್ಪಟ್ಟದೆ.

[illegible] ಬ್ಯಾಂಕಿನ ವ್ಯವಹಾರದಲ್ಲಿ

[illegible] ಸ್ಥಾನ.

[illegible]

ಮ್ಯಾನೇಜರ [illegible]

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ [illegible] ತಿಂಗಳ [illegible] ಹಣವನ್ನು [illegible] ಇಟ್ಟುಕೊಳ್ಳಲಾಗುವದು. [illegible] ತಿಳಿಸಲ್ಪಡುವದು.

ಈ ಬ್ಯಾಂಕಿನಲ್ಲಿ [illegible]

ಎ. ಜಿ. ಶೆಟ್ಟಿ

ಮ್ಯಾನೇಜಿಂಗ ಏಜೆಂಟ

ನೋಟೀಸಿನ ಬಗ್ಗೆ.

—o—

[illegible]

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[o][o]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಿಗಿಸ [illegible]

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

[illegible]

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೦-೬-೨೭ ನೇ ಇಸ್ವಿ

ಧಾರವಾಡದ ನೀರಿನ ಸಂಗ್ರಹ.

ಈ ವರ್ಷ ಧಾರವಾಡದ ನಳದ ಕೆರೆಯಲ್ಲಿ ನೀರು ಇಲ್ಲವಾದ್ದರಿಂದ, ನೀರಿನ ಪೂರೈಕೆಯ ವಿಷಯವಾಗಿ ಇಲ್ಲಿಯ ವರ್ತಮಾನ ಪತ್ರಗಳು ಹಿಂದು ಮುಂದಿನ ವಿಚಾರವಿಲ್ಲದಂಥ ಲೇಖಗಳನ್ನು ಬರೆದವೆ. ನಳದ ಕೆರೆಯೂ ಬೇಕು; ನಳವೂ ಬೇಕು. ಊರೊಳಗಿನ ಕೆರೆಬಾವಿಗಳನ್ನು ನೆಟ್ಟಗೆ ಮಾಡಿದರೆ ನೀರಿನ ವಿಪುಲ ಸಂಗ್ರಹವಾಗುವದೆಂದು ಹಾಲಕ್ಕೆ ನುಡಿದಿದೆ. ಈ ಬರಹವು ಕೇವಲ ಅವಿಚಾರಿತವಾದ್ದು. ನೀರಿನ ಸಂಗ್ರಹದ ಕಳೆದ ೪೦ ವರ್ಷಗಳ ಇತಿಹಾಸವನ್ನು ಲಕ್ಷ್ಯಕ್ಕೆ ತಂದರೆ ನಳ ಬೇಡವೆಂದು ಹೇಳುವದು ಬುದ್ಧಿಶೂನ್ಯತೆಯ ಲಕ್ಷಣವಾಗುತ್ತದೆ.

ಧಾರವಾಡಕ್ಕೆ ಮುಸಲಮಾನ ಬಾದಶಹರು ನವಪುರವೆಂಬ ಹೆಸರಿಟ್ಟಿದ್ದರೆ ಒಂಭತ್ತು ಊರುಗಳಗೂ ಅಲ್ಲಲ್ಲಿ ಕೆರೆಗಳುಂಟು. ಇಂಗ್ರೇಜಿ ಅಮಲಿನಲ್ಲಿ ಊರು ದೊಡ್ಡದಾಗಿ ಬೆಳೆದಂತೆ ನೀರಿನ ಸಂಗ್ರಹವು ಅಲ್ಲಲ್ಲಿ ಹೆಚ್ಚು ಅವಶ್ಯವೆನಿಸಿತು ಊರೊಳಗೆ ನೀರಿನ ಸೋಯಿಯಿದ್ದರಿಂದ, ದೊಡ್ಡ ದೊಡ್ಡ ಅಧಿಕಾರಿಗಳು ಮಡಿಹಾಳದಲ್ಲಿ ಮನೆ ಕಟ್ಟಿದರು. ಧಾರವಾಡದಲ್ಲಿ ಮಂಗಳವಾರ ಮತ್ತು ಶುಕ್ರವಾರಪೇಟೆಗಳು ಜನ ವಸತಿಯ ಮುಖ್ಯ ಭಾಗಗಳಾದವು. ಮಂಗಳವಾರಪೇಟೆಗೆ ಹಾಲಗೆರಿಯಾಯಿತು. ಶುಕ್ರವಾರ ಪೇಟೆಯಲ್ಲಿ ಹಿರೇ ಕೆರೆ ಇದ್ದರೂ, ಆ ನೀರನ್ನು ಜನರು ಕುಡಿಯುವದಕ್ಕಂತಿರಲಿ; ಬಳಿಕೆಗೆ ಕೂಡ ಉಪಯೋಗಿಸಲಿಲ್ಲ. ಇಂದಿಗೂ ಉಪಯೋಗಿಸುವದಿಲ್ಲ. ಇದರ ದಂಡೆಯ ಮೇಲೆ ರಾಯರ ಹಣಮಂತದೇವರ ಹಾಗು ನುಚ್ಚಂಬಲಿಯ ಬಾವಿಗಳನ್ನು ತೆಗೆದರು. ನೀರು ಸೌಳು ಬಿತ್ತು ಜಡ್ಡಿಯವರ ಬಾವಿಯದೂ ಅದೇ ಹಾಡು, ಹಾಲಗೆರಿಯ ದಂಡೆಯ ಮೇಲಿನ ಬಾವಿಗಳಲ್ಲಿ ಬಿದ್ದಂತೆ ಸವಿ ನೀರು ಬೀಳಲೇ ಇಲ್ಲ. ಗಬ್ಬಿನ ಬಾವಿಯಾಗುವ ತನಕ ಆ ಸಿಟ್ಟಿನವರು ಸೌಳು ನೀರನ್ನೇ ಕುಡಿಯುತ್ತಾ ಬಂದರು.

ನಳದ ಕೆರೆಯಾಗುವ ಪೂರ್ವದಲ್ಲಿ ನೀರಿನ ಅರಬು ಆಗಾಗ್ಗೆ ಆಗುತ್ತಾ ಬಂತು. ಪಟ್ಟಣದ ವಸತಿಯು ಮಂಗಳವಾರ ಮತ್ತು ಲೈನ ಪೇಟಿಯಲ್ಲಿ ಬೆಳೆಯಿತು. ಹಾಲಗೆರೆಯ ನೀರು ಸಾಲದಾಯಿತು. ಇದಕ್ಕೆ ಜಲಾಶಯವಾಗಿ ಲಕ್ಷ್ಮಣ ತಿಂಗನ ಕೆರೆ ಕಡಿಸಿದರು. ಆದರೂ ಅರಬು ತಪ್ಪಲಿಲ್ಲ. ನೀರಿನ ಬೊಗಳೆಯಾಯಿತು. ಜನರು ಮಡಿಹಾಳದ ತನಕ ನೀರಿನ ಸಾರಿಗೆ ಇಟ್ಟರು. ಈ ಭವಣಿ ತಪ್ಪಿಸಬೇಕೆಂದು ಮ್ಯುನಿಸಿಪಾಲಿಟಿಯವರು ಏಳು ಗಡೆಯ ಬಾವೀ ತೋಡಿಸಿದರು. ಹೆಬ್ಬಳ್ಳಿಯ ದಾರಿಯ ಮೇಲೆ ಭಾವೀ ಅಗಿಸಿದರು. ಮಡಿಹಾಳದಲ್ಲಿ ಬಾವೀ ಕಟ್ಟಿಸಿದರು. ಏನಾದರೂ ನಾಲ್ಕೈದು ವರ್ಷಕ್ಕೊಮ್ಮೆ ಮಳೆ ಸೆಳೆದು, ನೀರಿನ ಬೊಬ್ಬಾಟವಾಗುವದೆಷ್ಟೂ ತಪ್ಪಲಿಲ್ಲ. ಊರವರಂತೆ ರೇಲ್ವೆಯವರೂ ನೀರಿನ ತಾಪಪಟ್ಟರು. ರೇಲ್ವೆಯವರು ಒಂದೂವರೆ ಲಕ್ಷ ಕೊಡಬೇಕು ಮ್ಯುನಿಸಿಪಾಲಿಟಿಯವರು ಮೂರು ಲಕ್ಷ ಕೊಟ್ಟು ಕೆಲಗೇರಿಯಿಂದ ನಳ ತರಬೇಕೆಂಬ ವಿಚಾರವಾಯಿತು. ಊರ ಜನರು ಮಡಿ ವ್ಯಾಳಿಗೆಯ ಪುರಾತನದ ತಿಳುವಳಿಕೆಯಿಂದ ನಳವನ್ನು ವಿರೋಧಿಸಿದರು. ಊರ ಜನರ ವಿರೋಧ ಕಂಡು ಸರಕಾರದವರು ಈ ವಿಚಾರವನ್ನು ರಹಿತಪಡಿಸಿದರು.

ಆದರೂ ನೀರಿನ ಭವಣೆಯ ತಪ್ಪಿಸುವ ವಿಚಾರವು ಆಗಾಗ್ಗೆ ದುತ್ತೆಂದು ನಿಂತಿತು. ರೇಲ್ವೆಯ ಕಚೇರಿಯು ಇಲ್ಲಿಂದ ಹೋಯಿತು. ಅವರೊಂದು ಬಾವೀ ಮಾಡಿಕೊಂಡಿದ್ದರು. ಆದ್ದರಿಂದ ಅವರು ಎರಡನೆಯ ಸಾರೆ ದುಡ್ಡು ಕೊಡಲಿಕ್ಕೆ ಒಡಂಬಡಲಿಲ್ಲ. ಧಾರವಾಡಕ್ಕೆ ಇಡೀ ಜಿಲ್ಹೆಯಿಂದ ಜನರು ಬರುತ್ತಾರೆಂಬ ನಿಮಿತ್ಯದಿಂದ ಡಿಸ್ಟ್ರಿಕ್ಟ ಲೋಕಲ ಬೋರ್ಡಿನಿಂದ ಐವತ್ತು ಸಾವಿರ ರೂಪಾಯಿ ತಕ್ಕೊಂಡು ಮ್ಯುನಿಸಿಪಾಲಿಟಿಯು ಉಳಿದ ಹಣಕ್ಕೆ ಸಾಲ ಮಾಡಿ ನಳ ಮಾಡಿತು. ನಳವಾದ ಬಳಿಕ ನಮ್ಮ ತಿಳುವಳಿಕೆಯ ಪ್ರಕಾರ ಮೂರು ಸಾರೆ ನಳಬಂದಾಗಿರುತ್ತದೆ.

ಧಾರವಾಡ ಮಾತ್ರವಲ್ಲ. ಹುಬ್ಬಳ್ಳಿಯಲ್ಲಿಯೂ ನೀರಿನ ಕೊರತೆಯು ದಿನದ ಸಾವಾಗಿದೆ. ರೇಲ್ವೆಯವರು ಅಲ್ಲಿಯ ಮ್ಯುನಿಸಿಪಾಲಿಟಿಗೆ ಮೂರು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನೀರಿನ ಕೊರತೆಯಾಗಲು ೪೦ ಮೈಲಿನ ಮೇಲಿರುವ ವರದಾ ನದಿಯಿಂದ ನೀರಿನ ಸಾರಿಗೆ ಇಟ್ಟು ಬೇಸತ್ತು ಈಗ ಸ್ವತಂತ್ರ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಎರಡೂ ಪಟ್ಟಣಗಳ ಕೆರೆಗಳಿಗೆ ನದಿಯ ಸಹಾಯವಿಲ್ಲದ್ದರಿಂದ, ಮಳೆಯು ಸೆಳೆದ ಕೂಡಲೆ ನೀರಿನ ಕೊರತೆಯಾಗುತ್ತದೆ. ಆದ್ದರಿಂದಲೇ ಮಲಾಪಹಾರಿಯ ನೀರನ್ನು ತರಬೇಕೆಂಬ ವಿಚಾರ ಹುಟ್ಟಿರುತ್ತದೆ. ಅದೆಂದು ಆಚಾರದಲ್ಲಿ ಬರುವದೆಂಬ ನಿಯಮವಿಲ್ಲ.

ಹೋದ ವರ್ಷ ಹಿಂಗಾರಿಯ ಮಳೆಯು ಸೆಳೆದದ್ದರಿಂದ ದೇಶದ ತುಂಬ ನೀರಿನ ಕುಟಾಗ್ರವಾಗಿದೆ. ಬೆಂಗಳೂರಂಥ ನೀರಿನ ಮೇಲೆ ತೇಲುವ ಪಟ್ಟಣವು ನೀರು ನೀರೆಂದು ಪಾಂಚಜನ್ಯ ಮಾಡಿತು. ಮದ್ರಾಸದಲ್ಲಿಯೂ ಇದೇ ಹಾಡಾಗಿದ್ದು, ಮ್ಯುನಿಸಿಪಾಲಿಟಿಯವರು ಇಂಥ ದೊಡ್ಡ ಪಟ್ಟಣದ ವ್ಯವಸ್ಥೆ ಹೇಗೆ ಮಾಡಬೇಕೆಂಬ ಚಿಂತೆಯಲ್ಲಿ ಮುಣುಗಿ ದಿನಾಲು ನೀರನ್ನು ಹೇಗೆ ಉಪಯೋಗಿಸಬೇಕೆಂದೂ ಮಿತವ್ಯಯ ಮಾಡಬೇಕೆಂದೂ ನೋಟೀಸುಗಳನ್ನು ಊರ ತುಂಬ ಹಂಚುತ್ತಿದ್ದಾರೆ. ಒಳನಾಡೆನಿಸಿದ ಬೆಳಗಾವಿಯಲ್ಲಿಯೂ ಕೊರತೆಯಾಗಿದೆ. ಅಂದ ಬಳಿಕ ಧಾರವಾಡದಲ್ಲಿ ತಟಾಗ್ರತೆಯಾಗಿ ಜನರು ಕಷ್ಟ ನಷ್ಟ ಪಡುವದೆಷ್ಟೂ ಆಶ್ಚರ್ಯವಲ್ಲ.

ನಳದ ಕೆರೆಯನ್ನೇ ಒಂದು ಮಾಡಬೇಕು. ಕೆರೆಬಾವಿಗಳನ್ನು ಹೆಚ್ಚಿಗೆ ವಿಸ್ತರಿಸಬೇಕೆಂದು ಅನತಕ್ಕವರ ಮೇಲಿನ ಸಂಗತಿಯನ್ನು ಲಕ್ಷ್ಯಪೂರ್ವಕವಾಗಿ ನೋಡಿದರೆ ಅವರು ತಮ್ಮ ತಪ್ಪು ಒಪ್ಪಿಕೊಂಡು ಯದ್ವಾತದ್ವಾ ಬರಿಯಲಾರರು. ಮೂರು ತಿಂಗಳು ನಳವಿಲ್ಲವಾಯಿತೆಂದ ಕೂಡಲೆ ನಳವನ್ನೇ ಒಂದು ಮಾಡಬೇಕೆಂದು ಹೇಳುವದು ಕೆಮ್ಮು ಆಗಿದೆಂದು ಗಂಟಲವನ್ನೇ ಕೊಯ್ಯು ಹಾಕುವಂತಾಗುತ್ತದೆ. ಹಾಲಗೆರೆಯನ್ನು ಕೋಡಿ ಬೀಳುವ ತನಕ ತುಂಬಿಕೊಂಡರೂ, ಈ ನೀರು ಒಂದು ವರ್ಷ ಸಾಲದಷ್ಟು ಊರು ಬೆಳೆದಿದೆ. ಮಾಳಗುಡ್ಡ ಉಳವೀ ಬಸಪ್ಪನ ಗುಡ್ಡದಲ್ಲಿರುವಂಥವರು ಜನ್ಮಜನ್ಮಾಂತರದಲ್ಲಿಯೂ ನೀರು ನೀರೆಂದು ಗೋಳಿಡುವರು. ಇದೂ ಅಲ್ಲದೆ ಮನೆ ಮನೆಗೆ, ಬೀದಿ ಬೀದಿಗೆ ನಳದಿಂದಾಗುವ ಸೋಯಿಯು ಇದರಿಂದ ತಪ್ಪಿರುವ ತ್ರಾಸ, ಮತ್ತು ಉಳಿಯುವ ಹೊತ್ತು ಪುನಃ ಹೆಣ್ಣು ಮಕ್ಕಳನ್ನು ಪರಿಪರಿಯಾಗಿ ಪೀಡಿಸುವವು ತಿಂಗಳಿಗೆ ಎರಡು ರೂಪಾಯಿ ನಳಪಟ್ಟಿ ಕೊಡುವಂಥವರಿಗೆ ಮನೆಯಲ್ಲಿ ಹೇಳಿದಲ್ಲಿ ದಿನಾಲು ನಡಿರಾರು ಕೊಡ ನೀರು ಸಿಗುತ್ತದೆ ಈಗ ಒಂದು ಕೊಡಕ್ಕೆ ನೀರಿನವರು ತಿಂಗಳಿಗೆ ಎರಡು ರೂಪಾಯಿ ತಕ್ಕೊಳ್ಳುತ್ತಾರೆ. ಈ ಲಾಭ ನಷ್ಟ ಬಲ್ಲವರು ನಳ ಬೇಡೆಂದು ಎಂದೂ ಹೇಳಲಾರರು.

ಸ್ವಚ್ಛ ಮತ್ತು ವಿಪುಲ ನೀರನ್ನು ಪೂರೈಸುವದೇ ಈಗಿನ ಸುಧಾರಸಿದ ಕಾಲದಲ್ಲಿ ಮ್ಯುನಿಸಿಪಾಲಿಟಿಯ ಆದ್ಯ ಕರ್ತವ್ಯವಾಗಿರುತ್ತದೆ. ಸಾಲವಾದರೂ ತುಪ್ಪ ತಿನ್ನಬೇಕೆಂಬಂತೆ, ಸಾಲ ಮಾಡಿ, ನೀರಿನ ವ್ಯವಸ್ಥೆ ಮಾಡಬೇಕಾಗುತ್ತದೆ. ನಳವಿಲ್ಲದಂಥ ಪಟ್ಟಣವು ಹಿಂದೆಯುಳಿಯುವದೆಂಬದು ಖಂಡಿತ. ಧಾರವಾಡ ಮ್ಯುನಿಸಿಪಾಲಿಟಿಯವರು ಉ

ತ ಜನರ ವಿರೋಧವನ್ನು ಲೆಕ್ಕಿಸದೆ, ರೇಲ್ವೆಯಿಂದ ಒಂದೂವರೆ ಲಕ್ಷ ರೂಪಾಯಿ ತಕ್ಕೊಂಡು ನಳ ಮಾಡಿಸಿದ್ದರೆ- ಧಾರವಾಡದ ಜನಸಂಖ್ಯೆಯು ಇಮ್ಮಡಿಸಿ, ಉದ್ದಿಮೆ ವ್ಯವಹಾರ ಬೆಳೆಯುತ್ತಿತ್ತು. ಆಗ ನಳ ಮಾಡದ್ದರಿಂದ ಹುಬ್ಬಳ್ಳಿಯು ಮುಂದಾಗಿ, ಧಾರವಾಡವು ಹಿಂದಾಗಿರುವದು.

ಪ್ರಕೃತದಲ್ಲಿ ಧಾರವಾಡದ ಸೀಮೆಯು ಕಲ್ಪನಾಬಾಹ್ಯವಾಗಿ ಬೆಳೆದಿದೆ. ಬೈಲು ಕಂಡಲ್ಲಿ ಬಂಗಲೆಗಳು, ಮನೆಗಳು, ಚಾಳಗಳಾಗಿರುತ್ತವೆ. ಆದರೂ ಮನೆ ಕಟ್ಟಿಕೊಂಡಿರಬೇಕೆನ್ನುವಂಥವರಿಗೆ ಸ್ಥಳವಿಲ್ಲ. [illegible] ಹಾಂಗೆರೆ ಅಥವಾ ಗಚ್ಚಿನ ಬಾವಿ[illegible] ನೀರು ನಿಲ್ಲುವದು ಶಕ್ಯವಲ್ಲ. [illegible] ಎಷ್ಟೋ ಕಡಿಗೆ ಕೆಳಸನ ತಲೆಯ ತನಕ [illegible]ಗ ನೀರು ಬೀಳುತ್ತದೆ. ಹೆಣ್ಣು ಮಕ್ಕಳು [illegible]ಕ್ಕಾಗಿ ರಾಟಿ ತಿರಿವಿ ದಣಿಯುತ್ತಾರೆ. [illegible] ಗೋಳನ್ನು ಒಲ್ಲವರೇ ಬಲ್ಲರು. ಈ [illegible] ತಪ್ಪಲಿಕ್ಕೆ ನಳವೇ ನಿಜವಾದ [illegible]. ಸಾಲ[illegible]ಗುತ್ತದೆಂದು ಭಯಗೊಂಡು [illegible] ಸಾಲದ ಭಾರವು ದೈವಸ್ಥವರ ಮೇಲೆ ಹೆಚ್ಚು ಬಡವರ ಮೇಲೆ ಕಡಿಮೆ ಪ್ರಮಾಣದಿಂದ ಬೀಳುವದುಂಟು. ಅದೇ ಪ್ರಕಾರ ಧಾರವಾಡದ ನಳಪಟ್ಟಿಯು [illegible]. ಸಾಲವು ಸೂರ್ಯಚಂದ್ರರಿರುವ ತನಕ ಕುಬೇರನ ಸಾಲದಂತಿರುವದಿಲ್ಲ. ಕಂತದಿಂದ ಪೂರಾ ಮುಟ್ಟಿದ ಬಳಿಕ ನಳದ ಪಟ್ಟಿಯಿಂದ ಬರುವ ಪ್ರಾಪ್ತಿಯನ್ನು ಬೇರೆ ಹಿತಕೆಲಸಗಳಿಗೆ ವಿನಿಯೋಗಿಸಲಿಕ್ಕಾಗುವದು. ನೀರಿನ ಪೂರ್ವ ಸ್ಥಿತಿ, ವರ್ತಮಾನ ಸ್ಥಿತಿ ಮತ್ತು ಮುಂದಾಗುವ ಸುಸ್ಥಿತಿಯ ವಿಚಾರ ಮಾಡಿ, ನಳದ ವಿರುದ್ಧ ಯಾರೂ ಅಪ್ರಯೋಜಕ ಟೀಕೆ ಮಾಡಲಾರರೆಂದು ತಿಳಿಯುತ್ತೇವೆ.

ಮುಂಬಯಿಯಲ್ಲಿ ಅದ್ಭುತ ಮಳೆ.

—೦O೦—

ಕಳೆದ ವಾರದಲ್ಲಿ ಮಂಗಳವಾರ, ಬುಧವಾರ ಮತ್ತು ಗುರುವಾರದ ದಿವಸ ಮುಂಬಯಿಯಲ್ಲಿ ಸಂತತೋದ್ಧಾರ ಮಳೆ ಸುರಿಯಿತು. ದಿನಾಲು ಹತ್ತು ಇಂಚಿನ ತನಕ ಮಳೆ ಬಿತ್ತು. ಪಟ್ಟಣದಲ್ಲಿ ಎತ್ತನೋಡಿದತ್ತ ನೀರೇ ನೀರಾಯಿತು. ಟ್ರಾಮು ಬಂದಾದವು ರೇಲ್ವೆ ಗಾಡಿಯು ನಿಂತವು. ಕುದುರೆಯ ಬಂಡಿಗಳು ಸಹ ನಿಂತು ಹೋದವು. ಜನರು ಮೊಳಕಾಲ ಮಟ ನೀರಲ್ಲಿ ಬಹು ಕಷ್ಟದಿಂದ ನಡೆದರು. ವ್ಯವಹಾರ ಉದ್ದಿಮೆಗಳು ನಿಂತು ಹೋದವು. ಅಭೂತಪೂರ್ವವಾದಂಥ ಮಳೆಯನ್ನು ಆ ಪಟ್ಟಣಿಗರು ನೋಡಿ, ಜಲ ಪ್ರಳಯವೇ ಬಂದೆಂದುಕೊಂಡರು.

ಹಿಂದೂ ಮುಸಲಮಾನ ಮಿಶ್ರ ವಿವಾಹ.

ಮೌಲಾನಾ ಶೌಕತಲ್ಲಿಯವರ ಮತವು.

ವರ್ತಮಾನ ಪತ್ರದ ಸುದ್ದಿಗಾರನ ಮುಂದೆ ಮೌಲಾನಾ ಶೌಕಲ್ಲಿಯವರು ಕುರಾಣದಲ್ಲಿರುವ ವಿವಾಹ ವಿಧಿಯನ್ನು ಮುಂದೆ ಕೊಟ್ಟಂತೆ ಹೇಳುತ್ತಾರೆ.

ಮುಸಲಮಾನ ಸ್ತ್ರೀಯು ಅನ್ಯ ಧರ್ಮದವನನ್ನು ಮದಿವೆಯಾಗಲಿಕ್ಕಾಗದು. ಸ್ತ್ರೀಯರ ಸಂಬಂಧವಾಗಿ ಇಲ್ಲಿಗೆ ಮಾತೇ ಮುಗಿಯಿತು. ಮುಸಲಮಾನ ಗಂಡಸರು ದೇವತ್ವದ ಚಿನ್ಹವಿರುವಂಥ ಯಹುದಿ ಅಥವಾ ಕ್ರಿಶ್ಚನ್ನಳನ್ನು ಮದಿವೆಯಾಗಬಹುದು. ಈ ಪ್ರಕಾರ ಮಾಡಿಕೊಳ್ಳುವ ಮದಿವೆಯಿಂದ ಹೆಂಡಂದಿರು ತಮ್ಮ ಧರ್ಮ ಬಿಡುವ ಅಗತ್ಯವಿಲ್ಲ. ಇಂಥ ದಂಪತ್ತಿನಿಂದ ಆಗುವ ಸಂತತಿಯಲ್ಲಿ ಗಂಡು ಗಂಡನದು ಮತ್ತು ಹೆಣ್ಣು ಹೆಂಡತಿಯದಾಗಿ, ಅವರವರ ಧರ್ಮ ಸ್ವೀಕಾರ ಮಾಡುವವು. ಎರಡನೆಯ ಅಂದರೆ ಹಿಂದೂ, ಪಾರಶಿ, ಬೌದ್ಧ ಮುಸಲಮಾನನನ್ನು ಮದಿವೆಯಾಗಬೇಕಾದರೆ ಅವರು ಮುಸಲಮಾನ ಧರ್ಮ ಸ್ವೀಕಾರ ಮಾಡಲಿಕ್ಕೇ ಬೇಕು. ಅಥವಾ ಕ್ರಿಶ್ಚನ್ನ ಇಲ್ಲವೆ ಯಹುದಿಯಾದರೂ ನಡೆಯುವದು. ದೇವರು ಜಗತ್ತಿನಲ್ಲಿ ಧರ್ಮಸ್ಥಾಪಕರನ್ನೂ, ಭವಿಷ್ಯವಾದಿಗಳನ್ನೂ ಕಳಿಸಿದ್ದಾನೆ ಆದರೆ ಕುರಾಣದಲ್ಲಿ ಹಿಂದೂ ಅಥವಾ ಪಾರ್ಸಿಗಳು ಬರುವಂತೆ ತೋರುವದಿಲ್ಲ.

ಆನೆ ಹೋಗುತ್ತದೆ; ನಾಯಿ ಬೊಗಳುತ್ತದೆ.

—o—

ಮದ್ರಾಸ ಪಟ್ಟಣದ ಮ್ಯುನಿಸಿಪಾಲಿಟಿಯ ಕಮೀಶನರರು ಮೆಂಬರರು ತಮ್ಮ ಮೇಲೆ ಮಾಡಿದ ಟೀಕೆಗೆ ಉತ್ತರವಾಗಿ ಆನೆ ಹೋಗುತ್ತದೆ. ಶ್ವಾನ ಬೊಗಳುತ್ತದೆಂದು ಕೆಲವರ ಮುಂದೆ ಮಾತಾಡಿದ್ದರಿಂದ ಮೆಂಬರರಲ್ಲಿ ಕ್ಷೋಭೆಯಾಗಿರುತ್ತದೆ. ಮೆಂಬರರು ಇವರ ಮೇಲೆ ನಿಷೇಧದ ಠರಾವು ತರತಕ್ಕವರಿದ್ದಾರೆ.

ಆಯರ್ಲಂಡದ ಚುನಾವಣಿಯಲ್ಲಿ ಡಿ ವ್ಹೆಲೆರಾಸಾಹೇಬನು ಆಣೆ ಮಾಡಲಿಕ್ಕೆ ಒಪ್ಪದ್ದರಿಂದ, ಈಗಿನ ಮಂತ್ರಿಯಾದ ಕಾಸಗ್ರೇವಸಾಹೇಬನು ಪುನಃ ಪ್ರಧಾನ ಮಂಡಳವನ್ನು ಸ್ಥಾಪಿಸಬಹುದಾಗಿತ್ತು. ಆದರೆ- ತನಗೆ ಬಹುಮತದ ಬಲವಿಲ್ಲದ್ದರಿಂದ, ಈತನು ಈ ಗೋಜಿಗೆ ಹೋಗುವದಿಲ್ಲೆಂದು ಸಾರಿ ಹೇಳಿದ್ದಾನೆ. ಹಿಂದುಸ್ಥಾನದಲ್ಲಿ ಮಂತ್ರಿ ಪದಕ್ಕೆ ಹಪಾಪಿಸಿರುವಂಥವರು ಬುದ್ಧಿಗಲಿಯುವಂಥ ವಿಷಯವು.

ಕಾಲಿನ ಸುದ್ದಿಗಳು.

—o—

ಇಂಗ್ಲಿಷ ಸರಕಾರಕ್ಕೆ ರಶಿಯಾದ ಗುಪ್ತ ಸಂಗತಿಗಳನ್ನು ಒಡೆದು ಹೇಳುತ್ತಾನೆಂಬ ಆರೋಪದಿಂದ ರಶಿಯರು ಕ್ರಾಸನಸ್ಟಾಡದಲ್ಲಿದ್ದ ತಪೆಸ್ಕೋವ್ ದಳಪತಿಯನ್ನು ಗಲ್ಲಿಗೆ ಹಾಕಿದರು. ಮತ್ತು ಈತನ ಹೆಂಡತಿಗೆ ಇದೇ ಅಪರಾಧಕ್ಕಾಗಿ ಮೂರು ವರ್ಷದ ಶಿಕ್ಷೆ ವಿಧಿಸಿದರು.

ಪೋಲಂಡದ ನ್ಯಾಯಾಧೀಶರು ಜೊತೆಪಾತಕಿಯಾದ ಕಾವರದಾಸಿಗೆ ವಿಧಿಸಿದ [illegible], ವಿಚಾರಣೆಯ ವೇಳೆಯಲ್ಲಿ ಮಾಡಿದ ಅ[illegible] ರಶಿಯರು ಕುಪಿತರಾಗಿದ್ದಾರೆ [illegible] ಕೂಡ ಸ್ನೇಹಬೇಕೇ? ಬೇಡವೇ ಎಂದು [illegible] ಪತ್ರಗಳು ಪೋಲಂಡಕ್ಕೆ ಸವಾಲು ಮಾಡಿವೆ.

ಮಧುರೆಯಲ್ಲಿ ಕಾಯದೆಭಂಗ ಪ್ರಾರಂಭವಾಯಿತು. ಸ್ವಯಂಸೇವಕರ ಮುಂದಾಳಾದ ಗಣಪತಿ ಅಯ್ಯರನು ಸ್ವತಃ ಕಯ್ಯಲ್ಲಿ ಬಿತ್ತಿಗತ್ತಿ ಹಿಡಕೊಂಡು ಪಟ್ಟಣದ ಮಧ್ಯಭಾಗದಲ್ಲಿ ಮೆರವಣಿಗೆ ತೆಗೆದನು. ವಿದ್ಯಾಲಂಟಿಯರರು ಈತನನ್ನು ಹಿಂಬಾಲಿಸಿದ್ದರು. ಪಟ್ಟಣಿಗರು ಅಯ್ಯರ ಮತ್ತು ಆತನ ಶಸ್ತ್ರಕ್ಕೆ ಹೂವಿನ ಮಾಲೆ ಹಾಕಿ, ಗೌರವಿಸಿದರು. ಪೋಲೀಸರು ಇವರ ಹಾದಿಗೇ ಹೋಗಲಿಲ್ಲ.

ಸ್ವರ್ಗವಾಸಿ ಸರ ರಾಮಕೃಷ್ಣ ಭಾಂಡಾರಕರರ ಮೊಮ್ಮಗಳಾದ ಕುಮಾರಿ ಮಾನಂದಿಕರರು ಮುಸಲಮಾನ ಗೃಹಸ್ಥರಾದ ಮಿ. ಗುಲಾಬಖಾನರನ್ನು ಮದಿವೆಯಾಗುವದಕ್ಕೆ ವಿಘ್ನ ಬಂದಿದೆ. ಸಿವ್ಹಿಲ ಮ್ಯಾರೇಜ ಕಾಯದೆಯ ಪ್ರಕಾರ ಗುಲಾಬಖಾನರಿಗೆ ಒಬ್ಬಳೇ ಹೆಂಡತಿ ಇರತಕ್ಕದ್ದು. ಆದರೆ ಈ ಮುಂದಾಗಿ ಇವರು ಮದಿವೆಯಾಗ ಹೆಂಡತಿಯು ಜೀವಂತವಿರುವದರಿಂದ, ಮಾನಂದಿಕರರ ಲಗ್ನವಾಗಲಿಕ್ಕೆ ಬರುವದಿಲ್ಲೆಂದು ಆಕ್ಷೇಪಣೆ ತೆಕ್ಕೊಂಡು ಆ ಪ್ರಕಾರ ಲಗ್ನಕ್ಕೆ ವಿಘ್ನ ತಂದ ಅರ್ಜಿಯನ್ನು ಮಾಡಿದ್ದಾರೆ.

ಪಾಟಣಾದ ಹತ್ತರವೇ ಆದಾಪೂರವೆಂಬಲ್ಲಿ ಈದ ಹಬ್ಬದ ದಿವಸ ಹಿಂದೂಮುಸಲಮಾನ ದಂಗೆಯಾಗಿ ಒಬ್ಬ ಮುಸಲಮಾನ ಮತ್ತು ಇಬ್ಬರು ಹಿಂದೂ ಜನರು ಪ್ರಾಣ ಕಳಕೊಂಡರು.

ವರು ಇವರನ್ನು ಹಿಡಿದು, ತೋಫಿನ ಬಾಯಿಗೆ ಕಟ್ಟಿ ಟ್ಟರು.

ಇಜಿಪ್ತದ ಮಂತ್ರಿಯಾದ ಸಾರವತ ಪಾಶ್ಚಾನಿಗೂ ಇಂಗ್ಲಿಷ ಹಾಯ ಕಮೀಶನರನಿಗೂ ಆದ ಒಡಂಬಡಿಕೆಯು ರಾಷ್ಟ್ರೀಯ ಪಕ್ಷದವರಿಗೆ ಸರಿಗಂಡಿಲ್ಲ. ಅವರು ತಮ್ಮ ನಿಷೇಧವನ್ನು ಜಾಹೀರ ಮಾಡಿದ್ದಾರೆ.

ಇಜಿಪ್ತದ ಸುಲ್ತಾನರು ಜುಲೈ ತಿಂಗಳ ೪ ನೇ ತಾರೀಖಿನ ದಿವಸ ಇಂಗ್ಲಂಡಕ್ಕೆ ಹೋಗುವರು. ರಾಜಕೀಯ ಊಹಾಪೋಹವೇ ಮುಖ್ಯ ವಿಷಯವಾಗಿರಬಹುದು.

ಬಗದಾದದ ವಯೋವೃದ್ಧರಾದ ಧರ್ಮಗುರುಗಳು ಪರಲೋಕವಾಸಿಯಾದರು. ಇವರ ಅಂತ್ಯ ಸಂಸ್ಕಾರದ ಮೆರವಣಿಗೆಯಲ್ಲಿ ೫೦ ಸಾವಿರ ಜನರು ಕೂಡಿದ್ದರು.

ಧಾರವಾಡ—

ನಾಳಿನ ದಿವಸ ಸಾಯಂಕಾಲದಲ್ಲಿ ಈ ಊರಲ್ಲಿ ಶಿಕ್ಷಣ ಸಪ್ತಾಹ ಪ್ರಾರಂಭವಾಗುವದು. ಕಲೆಕ್ಟರರಾದ ಮಿ. ವೆಬ್ಬಸಾಹೇಬರು ಅಧ್ಯಕ್ಷರಾಗುವರು.

ಕಳೆದ ನಾಲ್ಕು ದಿವಸಗಳಿಂದ ಮಳೆಯು ಜೋರಾಗಿದೆ. ಬಿತ್ತುವವರಿಗೆ ಒಳ್ಳೇ ಅನುಕೂಲವು.

ಟ್ರೇನಿಂಗ ಸ್ಕೂಲನ್ನು ಬಂದು ಮಾಡಬೇಕೆಂದು ಸಾ. ಡಾಯರೆಕ್ಟರ ಸಾಹೇಬರಿಂದ ಬರೆದು ಬಂದಿರುತ್ತದೆ.

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ— ರಾ. ಸಾ. ಅಣ್ಣಾಚಾರ್ಯ ಕಟ್ಟಿ ವಕೀಲ ಧಾರವಾಡ ಇವರ ಸಾಗ್ವಾನಿ ಪೆಟ್ಟಿಗೆ (ಆಫೀಸ ಬಾಕ್ಸ) ಅಂದರೆ ಭಂಗಾರ, ಬೆಳ್ಳಿ, ದುಡ್ಡು ಇಲ್ಲದ್ದು ಖಾಸಗಿ ಕಾಗದ ಪತ್ರಗಳಿದ್ದದ್ದು ಧಾರವಾಡ ಜಿಲ್ಲಾ ಹಾವೇರಿ ಹದ್ದಿಯಲ್ಲಿ ಕಳೆದು ಹೋಗಿರುತ್ತದೆ. ಈ ಪೆಟ್ಟಿಗೆಯು ಯಾರಿಗಾದರೂ ಸಿಕ್ಕಿದ್ದರೆ ಒಂದು ವಾರದಲ್ಲಿ ತಂದು ಕೊಟ್ಟವರಿಗೆ ಯೋಗ್ಯ ಇನಾಮು ಕೊಡುವದಕಲ್ಲ ಬರುವದು. ತಾರೀಖು ೨೧-೬-೨೭ನೇ ಇಸ್ವಿ

ಅನಂತಾಚಾರ್ಯ ವೆಂಕಣ್ಣಾಚಾರ್ಯ ಚಿಕ್ಕೇರೂರ
ಧಾರವಾಡ ಜಿಲ್ಲಾ—

ವಿಶೇಷ ಸೂಚನೆ— ಪೆಟ್ಟಿಗೆ [illegible]ಕ್ಕವರು ಕೆಳಗೆ ಬರೆದ ಪತ್ತೆಗೆ ತಿಳಿಸಿದರೆ ಕೆಳಗೆ ಸಹಿ ಮಾಡಿದ ಅನಂತಾಚಾರ್ಯ ಚಿಕ್ಕೇರೂರ ಇವರಿಗೆ ತಿಳಿಯುವದು.

ರಾ. ಸಾ. ಕಟ್ಟಿ ವಕೀಲ, ಕಿಲ್ಲೆ ಧಾರವಾಡ — ಅಥವಾ — ಸು. ಹ. ಭಾದ್ರಿ ವಕೀಲ, ಹಾವೇರಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೧೦ಕ್ಕೆ ೪ ರೂಪಾಯಿ.
೨—೪ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗಿರುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವದು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಲಾ ಬೆಳಗಾವ

ನೋಟೀಸು.

ಫಕೀರಪ್ಪಾ ತಂದಿ ಭರಮಣ್ಣಾ ದೊಡ್ಡಮನಿಯವರ ಆಲೇರ ರಾಮನಾಳ ತಾಲೂಕ ಕಲಘಟಗಿ ಈತನಿಗೆ—

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಸೀತಾಬಾಯಿ ಭ್ರತಾರ ಫಕೀರಪ್ಪಾ ದೊಡ್ಡಮನಿಯವರ ಈಕೆಯು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ—

ನೀನು ನನ್ನ ಉಡಕಿಯ ಗಂಡನಾಗಬೇಕು ಉಡಿಕೆಯಾಗಿ ಮೂರು ವರ್ಷವಾಯಿತು. ನೀನು ನನ್ನ ಕೂಡ ಸರಾಸರಿ ಒಂದು ವರ್ಷ ಬಾಳಿವೆ ಮಾಡಿದಿ. ಅನಂತರ ಎರಡು ವರ್ಷವಾಯಿತು ನನನ್ನು ಹೊಡದು ಬಡದು ಮಾಡಿ, ಕೆಟ್ಟ ರೀತಿಯಿಂದ ನಡಿಸಿಕೊಂಡು ಮನೀ ಬಿಟ್ಟು ಹೊರಗೆ ಹಾಕಿದಿ ನೀನು ಹೊರಗೆ ಹಾಕುವಾಗ ಕಸಕೊಂಡ ನನ್ನ ಮೈ ಮೇಲಿನ ದಾಗೀನೆಗಳು ಅವುಗಳ ವಿವರ—

೧ ಬಂಗಾರದ ಬಳಿ ಒಂದು
೨ ತೋಳಬಂದಿ ಜೋಡು
೩ ಗುಂಡಿನ ಟೀಕೆ

ಈ ಪ್ರಕಾರ ಕಸಕೊಂಡು ಹೊರಗೆ ಹಾಕಿದಿ. ನೀನು ಹೊಂಗೆ ಹಾಕಿದ ಮೇಲೆ ನನ್ನ ಅಕ್ಕನ ಮನಿಗೆ ಬಂದೆನು. ಆಕೆ ಸಂರಕ್ಷಣೆ ಮಾಡಿದಳು ಅಕ್ಕನೂ ತೀರಿಕೊಂಡಳು. ಆಗಿನಿಂದ ನಾನು ಸಾಹುಕಾರರಲ್ಲಿ ದೇಣೆ ಮಾಡಿ ಉಪಜೀವನ ಮಾಡಿಕೊಂಡಿದ್ದೇನೆ. ಈಗ ಸಾಲದ ಕಡವು ಎರಡುನೂರ ರೂಪಾಯಿ ಆಗಿರುತ್ತದೆ. ಈಗ ಸಾಲಗಾರರ ತಗಾದಿಯಾಗಿರುತ್ತದೆ. ನಿನಗೆ ಎಷ್ಟು ಸಾರಿ ಹೇಳಿಕಳಿಸಿದರೂ ಕರಕೊಂಡು ಹೋಗಲಿಲ್ಲ. ಕಾರಣ ನಿರುಪಾಯವಾಗಿ ಈ ನೋಟೀಸು ಕೊಡಬೇಕಾಯಿತು. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಸಾಲ ತೀರಿಸಿ [illegible] ಒಳ್ಳೇ ರೀತಿಯಿಂದ ನಡಿಸಿಕೊಳ್ಳುತ್ತೇನೆಂದು ಪಂಚರ ಜಾಮೀನು ಕೊಟ್ಟು ಕರೆಕೊಂಡು ಹೋಗಿ ಸುರಳಿತ ಬಾಳಿವೆ ಮಾಡಿಕೊಂಡಿರಬೇಕು. ಜರ ಇದಕ್ಕೆ ತಪ್ಪಿದರೆ— ಇದೇ ನೋಟೀಸು ಸೋಡಪತ್ರವೆಂದು ತಿಳಿದು, ನಾನು ಎರಡನೆಯವನನ್ನು ಉಡಿಕ ಮಾಡಿಕೊಳ್ಳುವೆನು ಆ ನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕಿಯ ಗಂಡನ ಮೇಲೆ ಬಿಲಕೂಲ ನಡಿಯಲಾರದು. ಮತ್ತು ನನ್ನ ದಾಗೀನೆ ಹಾಗು ಸಾಲದ ರಕಮಿನ ದೆಸೆಯಿಂದ ಕಾಯದೆ ಪ್ರಕಾರ ನಿನ್ನ ಮೇಲೆ ಇಲಾಜ ಮಾಡುವೆನು. ಈ ಸಂಬಂಧ ಹತ್ತುವ ಖರ್ಚಿನ ಹಾಗು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲುಂಟು ತಿಳಿಯುವದು ಅಂತಾ ಕೊಟ್ಟ ಸೋಡಪತ್ರದ ನೋಟೀಸು ತಾ. ೧೯-೬-೨೭

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಸೀತಾಬಾಯಿ ಕೋಂ ಫಕೀರಪ್ಪಾ ದೊಡ್ಡಮನಿ ಸಾ॥ ಹಣಶಿಕಟ್ಟಿ ತಾ॥ ಕಲಘಟಗಿ ಈಕೆಯದು ಇರುತ್ತದೆ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮   ಧಾರವಾಡ ಬುಧವಾರ ತಾರೀಖು ೨೨ ನೇ ಜೂನ ೧೯೨೭   ಸಂಚಿಕೆ ೧೩೧

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯು ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೭೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ. ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಗಳು ಆರು ಲಕ್ಷದ ಷೇರುಗಳುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಸಲ್ಪಡುವದು. ಠೇವುಗಳಿಗೆ ಬೇರೆ ಬೇರೆ ದರದ ಬಡ್ಡಿ ಬಹಳ ಯೋಗ್ಯವಾಗಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಗೋವಿಂದರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ಸಾಲಕ್ಕೆ ತಿಂಗಳ ಕನ್ನ ರೂ. ಆಕರಿಸುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟ

ಸೂಚನೆಯ ದರಗಳು.

—o—

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಲೋಕಲ ಬ್ಯಾಂಕ ವಗೈರೆ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಕತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[o][o]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೪ ,,	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳದಿಂದ ವರ್ಷ ಪ್ರಾರಂಭವಾಗುವ ನಿತ್ಯ ವ. ಪ, ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೭-೬-೨೩ ನೇ ಇಸ್ವಿ

ಜನನ ರಜಿಸ್ಟರದಲ್ಲಿ ಸುಧಾರಣೆ.

ಸರಕಾರದವರು ಜನನ ಮರಣ ರಜಿಸ್ಟರವಿಟ್ಟಿದ್ದರಿಂದ, ಪುಷ್ಕಳವಾಗಿ ಹಿತವಾಗುತ್ತಲಿದೆ. ಆರೋಗ್ಯ ಮತ್ತು ಸಂಪತ್ತಿನ ದೃಷ್ಟಿಯಿಂದ ಲೋಕಸ್ಥಿತಿಯು ತಿಳಿಯುವದು. ವಾರಸಾ ಸರ್ಟೀಫಿಕೇಟ, ವಂಶಾವಳಿ ಮುಂತಾದ್ದರ ಲೆಖ್ಖವು ಸರಿಯಾಗಿ ಹೊಂದುವದು. ಆದರೆ ಮರಣ ರಜಿಸ್ಟರದಂತೆ ಜನನ ರಜಿಸ್ಟರವು ಪೂರ್ಣವಾಗಿರುವದಿಲ್ಲ. ಜನನವಾಗಲಿ, ಮರಣವಾಗಲಿ, ಆದ ೨೪ ತಾಸುಗಳಲ್ಲಿ ಸ್ಥಾನಿಕ ಅಧಿಕಾರಿಗಳಿಗೆ ತಿಳಿಸಲೇಬೇಕೆಂದು ಕಾಯದೆ ತಿಳಿಸವಿದ್ದರೆ- ದಂಡವುಂಟು ಕಾಯದೆಯು ಬಲವಂತಿಕೆಯಿಂದ ಪ್ರತಿಯೊಂದು ಜನನವೂ ಪ್ರತಿಯೊಂದು ಮರಣವೂ ರಜಿಸ್ಟರದಲ್ಲಿ ಹತ್ತುತ್ತದೆ. ಮರಣ ರಜಿಸ್ಟರದಲ್ಲಿ ಹೆಸರು ಬರೆಯಲ್ಪಡುತ್ತದೆ. ಹಾಗೆ ಜನನದಲ್ಲಿರುವದಿಲ್ಲ. ಹುಟ್ಟಿದ ೨೪ ತಾಸುಗಳಲ್ಲಿ ಜನನದ ವರ್ತಮಾನ ಹೇಳಬೇಕಾದುದರಿಂದ, ಹೆಸರು ಹತ್ತುವ ಸಂಭವವೇ ಇಲ್ಲ. ಏಕೆಂದರೆ- ಹಿಂದೂ, ಮುಸಲಮಾನ, ಕ್ರಿಶ್ಚನ್ನ ಮುಂತಾದ ಪ್ರತಿಯೊಂದು ಜಾತಿಯಲ್ಲಿಯೂ ಹೆಸರಿಡುವ ದಿವಸ ಗೊತ್ತು ಮಾಡಲ್ಪಟ್ಟಿರುತ್ತದೆ. ಯಾವ ಧರ್ಮದಲ್ಲಿಯೂ ೨೪ ತಾಸಿನೊಳಗಿರುವದಿಲ್ಲ. ಆದುದರಿಂದ ಅ ಎಂಬವನಿಗೆ ಒಂದು ಕೂಸು ಹುಟ್ಟಿತು. ಅದು ಹೆಣ್ಣು ಅಥವಾ ಗಂಡು ಎಂದಿಷ್ಟೇ ಜನನ ರಜಿಸ್ಟರದಲ್ಲಿ ಬರೆಯಲ್ಪಡುತ್ತದೆ. ಜನನವಾಗಿ ಹತ್ತುಸ್ಪತ್ತು ಅಥವಾ ೩೦-೪೦ ವರ್ಷಗಳ ನಂತರ ವಂಶಾವಳಿಯು ದಾಖಲೆ ಬೇಕಾದರೆ- ಇಂಥವರ ತಂದೆತಾಯಿಗಳು ಇಂಥವರು ಹುಟ್ಟಿದರೆಂದು ಕೋರ್ಟು ಕಚೇರಿಗಳಲ್ಲಿ ಪುರಾವೆ ಮಾಡುವದೊಂದು ಭಾಗವಾಗುತ್ತದೆ. ಕೆಲವು ಪ್ರಸಂಗಗಳಲ್ಲಿ ಪುರಾವೆ ಮಾಡುವದು ಬಹಳ ಬಿಗೇ ಹೋಗುತ್ತದೆ. ಆದುದರಿಂದ ಸರಕಾರದವರು- ಶಕ್ಯವಿದ್ದರೆ ಮ್ಯುನಿಸಿಪಾಲಿಟಿಯವರು ಜನನದ ಕೂಡ ಹೆಸರು ಬರಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇವೆ. ಜನನ ಹೇಳಿದ ನಂತರ ಹೆಸರು ಹೇಳುವದನ್ನು ಕಾಯದೆಯಿಂದ ಅಗತ್ಯಪಡಿಸತಕ್ಕದ್ದು. ಕಾಯದೆಯಲ್ಲಿ ಈ ಪ್ರಕಾರ ದುರಸ್ತಾಗುವಂತೆ ಕೌನ್ಸಿಲದ ಮೆಂಬರರು ಸೂಚನೆ ಮಾಡಬಹುದು. ಅಥವಾ ಒಂದು ಬಿಲ್ಲು ತರಬಹುದು. ಆಪರ್ಯಂತರ ಮ್ಯುನಿಸಿಪಾಲಿಟಿಗಳು ಜನನದ ಕೂಡ ಹೆಸರು ಬರಕೊಳ್ಳುವದನ್ನು ಪ್ರಾರಂಭಿಸಬೇಕು. ಇದರಿಂದ ಪುಷ್ಕಳ ಉಪಯೋಗವಾಗುತ್ತದೆಂದು ಕಂಡು ಬಂದು, ಸರಕಾರದವರು ತಾವಾಗಿ ಕಾಯದೆ ಮಾಡುವರು. ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ಕಾಯದೆ ಪಂಡಿತರಾದಂಥ ಅನೇಕ ವಕೀಲರಿದ್ದಾರೆ. ಇವರು ಈ ಬಗ್ಗೆ ಅವಶ್ಯವಾದ ನಿಯಮ ಮಾಡುವರೆಂದು ತಿಳಿಯುತ್ತೇವೆ.

ಮಧುರೆ ಮತ್ತು ನಾಗಪೂರದ ಕಾಯದಭಂಗವು.

ಮಧುರೆಯಲ್ಲಿಯೂ ಕಾಯದೆಭಂಗವು ಕಸವಿನಿಂದಲೂ ಹುರುಪಿನಿಂದಲೂ ನಡೆದದೆ. ಕತ್ತಿಯನ್ನು ಕಯ್ಯಲ್ಲಿಹಿಡಕೊಂಡು ಹೋಗಬಾರದೆಂದು ಶಸ್ತ್ರದ ಕಟ್ಟಳೆಯು ಬಂದುಕಟ್ಟು ಆ ಪ್ರಾಂತದಲ್ಲಿದ್ದದರಿಂದ, ಪೋಲೀಸರು. ಈ ಕಾಯದೆಭಂಗದ ಬಗ್ಗೆ ಸಿರುವಾಯರಾಗಿದ್ದಾರೆ. ಮಲಬಾರದಲ್ಲಿ ಮಾಪಿಳ್ಳೆ ಜನರು ಒಂಡಾಯ ಮಾಡಿದಾಗ, ಮದ್ರಾಸ ಸರಕಾರದವರು ಯಾರೂ ಕಯ್ಯಲ್ಲಿ ಕತ್ತಿ ಬಂದೂಕು ಹಿಡಕೊಂಡು ತಿರುಗಾಡಬಾರದೆಂದು ಡಂಗುರ ಹೊಡೆಸಿದರು. ಅದೇ ಪ್ರಕಾರ ಮಧುರೆಯಲ್ಲಿಯೂ ಮಾಡಬೇಕಾಗಿದೆ.

ಶ್ರೀ ಗಣಪತಿ ಅಯ್ಯಂಗರಿಗೆ ಮಿ. ಮಹಮದ ಸಾಕಿಯಾ ಎಂಬ ಹೆಸರಿನ ಮುಸಲಮಾನ ಗೃಹಸ್ಥರೂ ಕೂಡಿಕೊಂಡಿದ್ದಾರೆ. ಕತ್ತೀ ಹಿಡಕೊಂಡು ಹೋಗುವ ಮೆರವಣಿಗೆಗೆ ಸರಕಾರದವರು ಯಾವ ವಿರೋಧವನ್ನೂ ಮಾಡದಿದ್ದರೆ- ಇವರು ಅನ್ಯಮಾರ್ಗ ತೆಗೆದು, ಸರಕಾರವು ದಮ್ಮಯ್ಯವೆನ್ನುವಂಥ ಕಾಯದೆಭಂಗ ಮಾಡುವರು. ಇವರ ಸತ್ಯಾಗ್ರಹವು ನಾಗಪೂರಕ್ಕಿಂತ ಬಹಳ ಮುಂದೆ ಓಡಿದೆ. ಬಂಗಾಲದ ರಾಜಕೀಯ ಕೈದಿಗಳನ್ನು ಬಿಡಿಸುವದಷ್ಟೇ ಅವರ ಕೃತನಿಶ್ಚಯವು. ಇವರು ಇಂಗ್ರೇಜಿ ಸರಕಾರಕ್ಕೆ ಸರಿಯಾಗಿ ದೇಶದಲ್ಲಿ ಮತ್ತೊಂದು ಸರಕಾರವನ್ನುಂಟು ಮಾಡುವ ಅಭಿಲಾಷೆತೊಟ್ಟಿದ್ದಾರೆ.

ನಾಗಪೂರದ ಕಾಯದಭಂಗದಲ್ಲಿ ಚಿತ್ತು ಮತ್ತು ಕೇಜರಾವುರೆಂಬೀರ್ವರು ಕತ್ತೀ ಹಿಡಕೊಂಡು ಪಟ್ಟಣದಲ್ಲಿ ಮೆರೆದರು. ಮ್ಯಾಜಿಸ್ಟ್ರೇಟರು ಇವರಿಗೆ ಹತ್ತು ರೂಪಾಯಿ ದಂಡ ಅಥವಾ ೧೫ ದಿವಸ ಕಠಿಣ ಕೈದಿನ ಶಿಕ್ಷೆ ವಿಧಿಸಿದರು. ಸ್ವಯಂಸೇವಕರು ದಂಡ ಕೊಡದೆ, ಕಂಬಳಿಯ ಅಂಗಿಯನ್ನು ಹಾಕಿಕೊಳ್ಳುವದಕ್ಕೆ ಸೆರೆಮನೆಯ ದಾರೀ ಹಿಡಿದರು. ಶ್ರೀಮತಿ ಸೌ॥ ಚಕುತಾಬಾಯಿಯು ಇವರಿಗೆ ಸಹಾಯವಾಗಿಮುಂದೊರೆದಿದ್ದಾಳೆ ಇವಳು ಹೇಗೋ ಅನೇಕ ಕತ್ತಿಗಳನ್ನು ದೊರಕಿಸಿ, ಕಾಯದೆಭಂಗಕ್ಕೆ ಸಹಾಯವಾಗಿ ಕೊಟ್ಟಿದ್ದಲ್ಲದೆ, ಕಾಂಗ್ರೆಸ ಕಮಿಟಿಗೆ ಶಸ್ತ್ರ ಹಾಗು ಸ್ವಯಂಸೇವಕರ ಪುರವಣೆ ಮಾಡಿಕೊಡುವಂತೆ ಆಶ್ವಾಸನ ಕೊಟ್ಟಿದ್ದಾಳೆ. ಪುನಃ ಕಾಯದೆ ಭಂಗ, ಪುನಃ ಅಸಹಕಾರವೊದು ಆಂಧ್ರ ಮತ್ತು ತಮಿಳ ನಾಡಿನಲ್ಲಿದ್ದ ಚಳವಳಿಯಿಂದ ನಾಗಪೂರಿನವರು ಉತ್ತೇಜನ ಹೊಂದಿ, ತಮ್ಮ ಸತ್ಯಾಗ್ರಹವನ್ನು ಸಿದ್ಧಿಗೊಯ್ಯಲು ಹುರಿಗಟ್ಟಿದ್ದಾರೆ.

ತ್ರಿಶಂಕುರಾಯನಂಥ ಅವಸ್ಥೆ ಬೇಡ.

—o—

ಪಾರ್ಲಮೆಂಟ ಸಭೆಯಲ್ಲಿ ಹಿಂದುಸ್ಥಾನದ ಪ್ರಶ್ನೆ ಹೊರಟಿತ್ತು. ಸ್ವತಂತ್ರ ಕೂಲಿಕಾರ ಪಕ್ಷದ ಮೆಂಬರರಾದ ಮೆಸರ್ಸ ಲ್ಯಾನ್ಸಬರಿ ಮೊದಲಾದವರು ಮೊದಲು ಶ್ರೀ ಬೋಸರ ಪ್ರಶ್ನೆ ತೆಗೆದರು. ಬೋಸರ ವಿಚಾರಣೆಯು ಮ್ಯಾಜಿಸ್ಟ್ರೇಟರ ಮುಂದಾಗಿದೆ. ಜಸ್ಟೀಸ ಮುಂದಾಗಿದೆಂದು ಅರ್ಲ ವಿಂಟರಟನ್ನ ಸಾಹೇಬರು ಈ ಮೊದಲು ಬಟಾಟಿಕೆಯನ್ನಾಡಿದ್ದರು. ಯಾವ ಮ್ಯಾಜಿಸ್ಟ್ರೇಟ? ಯಾವ ಜಡ್ಜಿ? ಎಂದು ವಿಚಾರಣೆಯಾಗುತ್ತೆಂಬದನ್ನು ತಿಳಿಸಿರೆಂದು ಮಿ. ಲ್ಯಾನ್ಸಬರಿಸಾಹೇಬರು ಸವಾಲು ಹಾಕಿದ್ದಕ್ಕೆ ಸಾಹೇಬರು ತಣ್ಣಗಾಗಿ, ನಿಮ್ಮ ತಿಳುವಳಿಕೆ ತಪ್ಪಾಗಿರುತ್ತದೆಂದು ಹಾರಿಸಿಕೊಳ್ಳುವ ಉತ್ತರ ಕೊಟ್ಟರು. ಪಾರ್ಲಮೆಂಟ ಸಭೆಯಲ್ಲಿ ಪ್ರವೇಶ ಮಾಡುವಾಗ ಆಣೆ ಮಾಡಿದರೂ, ಪ್ರಶ್ನೋತ್ತರಗಳು ಸುಳ್ಳಾದರೆ- ಆ ಆಣೆಯು ಬಾಧಿಸುವದಿಲ್ಲ. ಅಪಮಾನವಾಗುವಂಥ ವಿಧಾನ ಮಾಡಿದರೂ, ಮಾನಹಾನಿಯು ಫಿರ್ಯಾದಿಯಾಗುವದಿಲ್ಲ. ಹೀಗಾಗಿ ಅರ್ಲವಿಂಟರಟನ್ನಸಾಹೇಬರು ತಮ್ಮ ಬಾಯಿಯಿಂ ಹೊರಟಂಥ ಅಸತ್ಯ ವಿಧಾನಕ್ಕಾಗಿ ಯಾವ ಭಯ ಬಾಧೆ ಇಲ್ಲದೆ ಪಾರಾದರು.

ಆ ನಂತರ ಸ್ವರಾಜ್ಯದ ವಿಷಯ ಹೊರಟಿತು. ಸ್ವರಾಜ್ಯವೆಂದರೆ- ಮುಂದೆ ಬರಬೇಕಾಗಿರುವ ರಾಯಲ ಕಮೀಶನದ ಚರ್ಚೆ! ರಾಯಲ ಕಮಿಶನ ನೇಮಿಸುವದು, ಅದರ ಮೆಂಬರರನ್ನು ಗೊತ್ತು ಮಾಡುವದು ಮತ್ತು ಹಿಂದುಸ್ಥಾನಕ್ಕೆಷ್ಟು ಹೆಚ್ಚಿನ ಅಧಿಕಾರ ಕೊಡಬೇಕೆಂದು ಗೊತ್ತು ಮಾಡುವದು ಭಾರತ ಮಂತ್ರಿಯ ಕಯ್ಯಲ್ಲಿಯೇ ಉಂಟು. ನೀವು ಹಿಂದುಸ್ಥಾನವನ್ನು ಅದ್ಲಂಡ ಮದ್ಲಂತ ಸ್ಥಿತಿಯಲ್ಲಿಡಬೇಡಿರಿ. ತ್ರಿಶಂಕುರಾಯನಂತೆ ಅಂತರಾಳದಲ್ಲಿ ತೂಗಹಾಕಬೇಡಿರಿ. ಗುಲಾಮಗಿರಿ ಮತ್ತು ಸ್ವಾತಂತ್ರ್ಯದ ನಡುವೆ ಅನ್ಯ ಅವಸ್ಥೆಯಿರುವ

ದಿಲ್ಲ. ಆದುದರಿಂದ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯ ಕೊಡಬೇಕೆಂತಲೇ ಶ್ರೀ ಶಕಲಾತವಾಲಾನವರು ಭಾಷಣ ಮಾಡಿದ್ದಾರೆ.

ಸಾರಾಯಿಯ ವ್ಯಾಪಾರ ನಿಲ್ಲಿಸುವ ಅಭಿನಂದನೀಯ ಠರಾವು.

—೦—

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊಸಕೋಟೆದ ಶ್ರೀ ಕೃಷ್ಣರಾಯರು ಅನೇಕ ಠರಾವುಗಳನ್ನು ತಂದರು. ಅವೆಲ್ಲ ಪ್ರಚಂಡ ಬಹುಮತದಿಂದ ಪಾಸಾದವು. ಮಹತ್ವವಾದಂಥವುಗಳನ್ನು ಇದರಡಿ ಕೊಡುತ್ತೇವೆ.

೧ ಸಂಪದಭಿವೃದ್ಧಿಯಾಗುವಂಥ ಖಾತೆಗಳ ನಿರ್ಮಾಣಕ್ಕಾಗಿ ದ್ರವ್ಯ ಉಳಿಸುವದಕ್ಕಾಗಿ ಬೇರೆ ಖಾತೆಗಳಲ್ಲಿ ಅವಾಸ್ತವ್ಯವಾಗಿ ಬೆಳೆದ ವೆಚ್ಚವನ್ನು ಕಡಿಮೆ ಮಾಡುವದು.

೨ ೨೫೦ ರೂಪಾಯಿ, ಅದಕ್ಕೂ ಹೆಚ್ಚು ಸಂಬಳವಿರುವಂಥ ಕಾಮದಾರರ ಸಂಬಳವನ್ನೂ ಪ್ರವಾಸದ ಭತ್ತೆಯನ್ನೂ ಕೆಲವೊಂದು ಪ್ರಮಾಣದಿಂದ ಕಡಿಮೆ ಮಾಡುವದು.

೩ ಶರೆ-ಶಿಂದಿಯ ವ್ಯಾಪಾರ ಪೂರಾ ಬಂದು ಮಾಡಿ, ಇದರಿಂದ ಸರಕಾರಕ್ಕೆ ಬರುವ ಹಾನಿಯನ್ನು ತುಂಬುವದಕ್ಕಾಗಿ ವಿಚಾರ ಮಾಡಲೋಸುಗ ಒಂದು ಕಮೀಟಿ ನೇಮಿಸುವದು.

೪ ಅಲ್ಪ ಸ್ವಲ್ಪ ಕಾರಣಕ್ಕಾಗಿ ಕಾದಿಟ್ಟ ನಿಧಿಯನ್ನು ವಾರ್ಷಿಕ ವೆಚ್ಚಕ್ಕಾಗಿ ಬಂದ ಕೊರತೆಗಾಗಿ ತೆಗೆದುಕೊಳ್ಳಬಾರದು.

ತರೆಯ ಠರಾವಿನ ವಿರುದ್ಧವಾಗಿ ಸರಕಾರದ ವತಿಯಿಂದ ದಿವಾನ ಬಹಾದ್ದೂರ ಕೃಷ್ಣರಾಯರು ಭಾಷಣ ಮಾಡಿದರು. ಇವರ ಭಾಷಣದ ಪರಿಣಾಮವು ಮೆಂಬರರ ಮೇಲಾಗಲಿಲ್ಲ. ದ್ರವ್ಯದ ಕೊರತೆ ಎರಡನೆಯ ಸಬಬ ಕಾರಣವಿರಲಿಲ್ಲ. ಮೆಂಬರರು ಬಹು ಸಂಖ್ಯೆಯಿಂದ ಸಾರಾಯಿಯ ವ್ಯಾಪಾರವನ್ನು ನಿಲ್ಲಿಸಬೇಕೆಂದೇ ಮತಕೊಟ್ಟರು.

ಕ್ರಾಸಗ್ರೇವ್ಹರ ನಿಜ ವಿಚಾರವು-

ಐರ್ಲಂಡದ ಅಧ್ಯಕ್ಷರಾಗಿದ್ದ ಮಿ. ಕ್ರಾಸಗ್ರೇವ್ಹಸಾಹೇಬರು ತಮಗೆ ಬಹುಮತ ದೊರೆಯದ್ದರಿಂದ, ಪ್ರಧಾನ ಮಂಡಲ ಕಟ್ಟುವದಿಲ್ಲೆಂದು ಈ ಮೊದಲು ಬರೆದಿದ್ದೇವೆ. ಈ ಬಗ್ಗೆ ಇವರೊಂದು ಸಂದೇಶ ಪ್ರಸಿದ್ಧ ಮಾಡಿದ್ದು ಅದರ ಸಾರಾಂಶವು ಮುಂದೆ ಕೊಟ್ಟಂತಿರುತ್ತದೆ.

" ಪಾರ್ಲಮೆಂಟ ಸಭೆಯಲ್ಲಿ ನನಗೆ ಬಹುಮತದ ಬಲವಿಲ್ಲ. ನನ್ನ ಪ್ರತಿಪಕ್ಷದವರು ಈಗ ಬಹುಮತವುಳ್ಳವರಾಗಿದ್ದಾರೆ. ಆದುದರಿಂದ ನಾನು ಅವರ ಬಹುಮತದ ಹಕ್ಕನ್ನು ಮುಣುಗಿಸಲಿಚ್ಛಿಸುವದಿಲ್ಲ. ರಾಜ್ಯಕಾರಭಾರ ನಡಿಸುವ ಜವಾಬದಾರಿಯು ಬಹುಮತದವರ ಮೇಲುಂಟು. ಈ ಜವಾಬದಾರಿಯನ್ನು ತಪ್ಪಿಸಿಕೊಳ್ಳುವದು ಅಥವಾ ಜಾರಿಕೊಳ್ಳುವದು ನನ್ನ ಕೆಲಸವಲ್ಲ.

ಮದ್ರಾಸದಲ್ಲಿ ಸ್ವರಾಜ್ಯ ಪಕ್ಷೀಯರು ಬಹುಮತವುಳ್ಳವರು. ಸ್ವತಂತ್ರರು ತಮಗೆ ಬಹುಮತವಿಲ್ಲದಿದ್ದರೂ- ಮಂತ್ರಿಯಾದರು. ಇವರು ಕ್ರಾಸಗ್ರೇವ್ಹಸಾಹೇಬರ ವಿಚಾರದಂತೆ ನಡಿಯಬೇಕಲ್ಲವೇ! ಕಿಂಬಲವಿಲ್ಲದೆ ಮಂತ್ರಿಪದಕ್ಕೆ ಆಶೆ ಮಾಡುವದು!

ಊಟಕ್ಕೆ ರುಚಿ ಉಪ್ಪಿನಕಾಯಿ-

ವಿಲಾಯತಿಯವರಿಗೆ ಹಿಂದುಸ್ಥಾನದ ಸಾರಿನ ಪುಡಿ ಮತ್ತು ಉಪ್ಪಿನಕಾಯಿಯು ವ್ಯಂಜನದ ಬಹು ರುಚಿಕರವಾದ ಪದಾರ್ಥಗಳಾಗಿವೆ. ಮೊದಲು ಇಲ್ಲಿಂದ ಸೀಸೆ ತುಂಬಿ ಮಾರಾಟಕ್ಕೆ ಕಳಿಸುತ್ತಿದ್ದರು. ಈಗ ಪೀಪು ತುಂಬಿ ಕಳಿಸುವರು. ಅಲ್ಲಿ ಭರಣಿ ಮತ್ತು ಸೀಸೆಗಳಲ್ಲಿ ತುಂಬಿ ಮಾರುವರು. ಇವು ಅಲ್ಲಿಗೆ ಹೋಗುವದೊಂದೇ ತಡ. ಜನರು ಮುಗಬಿದ್ದು ಕೊಳ್ಳುವರು. ಹೋದ ವರ್ಷ ಮುಂಬಯಿಯಿಂದಲೇ ಲಕ್ಷ ರೂಪಾಯಿಯ ಉಪ್ಪಿನಕಾಯಿ ಹೋಯಿತು ಈ ವರ್ಷ ಅದಕ್ಕೂ ಹೆಚ್ಚು ಹೋಗುವಂತೆ ತೋರುತ್ತದೆ ಠಾಣೆಯಲ್ಲಿ ಉಪ್ಪಿನಕಾಯಿ ಹಾಕುವ ದೊಡ್ಡ ಕಾರಖಾನೆ ಹೊರಟಿದ್ದು, ಸಾವಿರಾರು ಜನರು ಈಗ ಅಲ್ಲಿ ದುಡಿಯುತ್ತಿದ್ದಾರೆ.

ಅತ್ಯಂತ ನಿಂದ್ಯ ಆಚಾರ-

ರಜಪುತಾನಾಕ್ಕೆ ಸೇರಿದ ಉಜ್ಜಯನಿ, ದೇವಾಳಪೂರ ಬಾರಾನಗರ ಮುಂತಾದ ಪರಗಣೆಗಳಲ್ಲಿ ಹೋಳೀ ಹಬ್ಬದಲ್ಲಿ ಅಂತ್ಯಜ ಸ್ತ್ರೀಯರ ಕಣ್ಣುಕಟ್ಟಿ ಅವರನ್ನು ಊರತುಂಬ ಮೆರೆಸುವರು. ಬೀದಿಗುಂಟ ಜನರು ಇವರ ಮೇಲೆ ರಾಡಿ, ಕೊಳಚಿ ಮುಂದ್ದನ್ನು ಎರಚುವರು. ಸ್ತ್ರೀಯರು ಹೊಡತ ತಿಂದು, ಥಂಡಿಯಿಂದ ನಡುಗಿ ನೆಲಕ್ಕೆ ಬೀಳುವತನಕ ಜನರು ಚೆಲ್ಲಾಟವಾಡುವರು. ಈ ಅಮಾನುಷ ಕೃತ್ಯವನ್ನು ಅಂತ್ಯಜರು ನಿಷೇಧಿಸಲು ಜನರು ಇವರಿಗೆ ಬಹಿಷ್ಕಾರ ಹಾಕಿದರು. ಬಹಿಷ್ಕಾರಕ್ಕೆ ಹೆದರಿ ಅನೇಕ ಗ್ರಾಮಗಳ ಅಂತ್ಯಜರು ಗ್ರಾಮತ್ಯಾಗ ಮಾಡಿದ್ದಾರೆ.

ಇಂಗ್ಲಂಡ ಮತ್ತು ರಶಿಯಾ-

ಇಂಗ್ಲಂಡದ ವಿಷಯವಾಗಿ ರಶಿಯದ ಯಾವ ಮತವವರಾಗಿದ್ದಾರೆಂಬದೊಂದು ಮಾದರಿಯು-

ಇಂಗ್ಲಿಷ ಅರಸರಿಗೆ ಬುದ್ಧಿಯೇ ಇಲ್ಲ. ಮಿದುಳಿಲ್ಲದವರು. ಇಂಗ್ಲಂಡದ ತಲೆಯ ಮೇಲೆ ಕಬ್ಬಿಣ ಟೊಪ್ಪಿಗೆ ಇರುವದು. ಇದರ ಹೊಟ್ಟೆಯು ಕಬ್ಬಿಣದ ತಗಡಿನಿಂದ ಮುಚ್ಚಿದೆ. ಬ್ಯಾಂಕುಗಳೇ ಜೀವನಾಧಾರ ಇಂಗ್ಲಂಡವೆಂದರೆ- ಕೊಲೆಪಾತಕಿಗಳ ಮತ್ತು ನೀಚ ಜನರ ವಸತಿಸ್ಥಾನವು. ಇಂಗ್ಲಿಷರು ರಶಿಯರ ಹುಟ್ಟ ವೈರಿಯಾಗಿದ್ದಾರೆ. ಅವರ ಗಿರಣಿಗಳ ಬಂಬುಗಳು ಪಿಶಾಚಿಮುಷ್ಟಿಯಾಗಿವೆ. ಇಂಗ್ಲಂಡವನ್ನು ನೋಡಿರಿ. ಭಯಾನಕವಾಗಿಯೇ ತೋರುವದು.

ಚಾಂಗ-ಸೂ-ಲಿನ್ನನು-

ಚೀನ ದೇಶದಲ್ಲಿ ಬೊಲ್ಸೆವಿಕರ ಮತ್ತು ಕಂತಾನರ ವಿರುದ್ಧ ನಿಂತಿರುವ ಚಾಂಗಸೂಲಿನ್ನನು ಚೀನದ ಉಜಾಗಲ ಸೈನ್ಯದ ಪ್ರಭುತ್ವವನ್ನು ಅಂಗೀಕರಿಸಿ ಭೂಜಲ ಸೇನೆಯ ಅಧ್ಯಕ್ಷನಾಗಿದ್ದಾನೆ. ಈತನು ಪೇಕಿಂಗದ ಮಂತ್ರಿಗಳನ್ನೂ ಮುಖ್ಯ ಪ್ರಧಾನಿಯನ್ನೂ ನೇಮಿಸುವನು. ಮುಲಕೀ ಮತ್ತು ಲಷ್ಕರೀ ಅಧಿಕಾರ ಪಡಕೊಂಡು, ಬೊಲ್ಸೆವಿಕ ಭೂತವನ್ನು ಸೋಲಿಸಲು ಹೋರಾಡುವನು.

ವಿವಿಧ ವರ್ತಮಾನಗಳು

—೦—

ಹಿಂದುಸ್ಥಾನ—

ಮುಂಬಯಿಯಲ್ಲಾದ ಎಲ್‌ಎಲ್ ಬಿ. ಪರೀಕ್ಷೆಯಲ್ಲಿ ಕುಮಾರಿ ಸೆಸಿಲಿಯಾ ಫೆರಾರಿಯಾ ಎಂಬವಳು ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿದ್ದಾಳೆ.

ಮುಂಬಯಿಯಲ್ಲಿ ಬಿರುಗಾಳಿ ಬೀಸಿ, ಒಂದು ಮೋಟಾರ ಹಾರಿ, ಸಮುದ್ರದಲ್ಲಿ ಬಿತ್ತು.

ನಾಗಪೂರದಲ್ಲಿ ಒಬ್ಬನು ಮನೆಯ ಅಳಿಯತನಕ್ಕೆ ನಿಂತನು. ಮಾವನ ಕೂಡ ಜಗಳಾಡಿ, ಮನೆಬಿಟ್ಟು ಹೋದನು. ಬಳಿಕ ಮಾವನು ಆತನ ಹೆಂಡತಿ ಅಂದರೆ ತನ್ನ ಮಗಳನ್ನು ಎರಡನೆಯವನಿಗೆ ಲಗ್ನ ಮಾಡಿಕೊಟ್ಟನು. ಈ ಅಪರಾಧಕ್ಕಾಗಿ ಅಳಿಯನು ಈಗ ಮಾವನ ಮೇಲೆ ಫಿರ್ಯಾದಿ ಮಾಡಿದ್ದಾನೆ.

ಪರದೇಶ —

ಪೋಲಂಡದ ಇಬ್ಬರು ಗುಪ್ತಪೇರರು ರಶಿಯಾದ ಉಕ್ರೇನ ಪ್ರಾಂತದಲ್ಲಿ ಹೋಗಿ, ಅನೇಕರನ್ನು ಕೊಲ್ಲಬೇಕೆಂದಿದ್ದರು. ರಶಿಯಾ ಸರಕಾರದ

ಯುವರಾಜನ ಆಕಸ್ಮಿಕ ಮರಣ.

ವಿಜಾಪುರಪ್ರಾಂತದಲ್ಲಿ ಟೊಂಕವೆಂಬ ಸಂಸ್ಥಾನವುಂಟು. ಅಲ್ಲಿ ಇದೊಂದೇ ಮುಸಲಮಾನರ ಸಂಸ್ಥಾನವು. ಇದರ ನವಾಬಸಾಹೇಬರ ಸಾಹೇಬಜಾದಾನಿಗೆ ತಂದೆಯ ತರುವಾಯಾದಲ್ಲಿ ಪಟ್ಟವಾಗುವ ಸಂಭವಿಗೆ ಇರಲಿಲ್ಲ. ಚಿಕ್ಕ ಮಗನಿಗೆ ಪಟ್ಟವಾಗಬೇಕೆಂದು ನವಾಬರ ಇಚ್ಛೆ ಈ ಮಗನಿಗೆ ಆಗುವ ಪಟ್ಟದ ದೆಸೆಯಿಂದ ತಮ್ಮ ಜೀವವು ಗಂಡಾಂತರದಲ್ಲಿರುತ್ತದೆಂದು ಸಾಹೇಬಜಾದಾನು ಪೊಲಿಟಿಕಲ ಏಜಂಟರಿಗೆ ಕೆಲವು ದಿವಸಗಳ ಹಿಂದೆ ಪತ್ರ ಬರೆದಿರುವನು ಈಗ ಈತನಿಗೆ ಆಕಸ್ಮಿಕವಾಗಿ ಮರಣ ಸಂಭವಿಸಿದೆ. ಪ್ರಜರು ನಾನಾ ತರದ ತರ್ಕ ಮಾಡುತ್ತಿದ್ದಾರೆ.

ಹಿಂದುಸ್ಥಾನದ ಅಸೆಂಬ್ಲಿಯವರು ಲಂಡನದ ಪಾರ್ಲಮೆಂಟ ಸಭೆಯಿಂದ ಕಲಿಯತಕ್ಕಂಥ ವಿಶೇಷ ವಿಷಯವಾವದೂ ಇಲ್ಲೆಂದು ಶ್ರೀ. ಪಟೇಲರು ಲಂಡನದ ಒಬ್ಬ ಸುದ್ದಿಗಾರನ ಮುಂದೆ ಉದ್ಗಾರ ತೆಗೆದಿದ್ದಾರೆ.

ಧಾರವಾಡ.

ಇಲ್ಲಿಯ ಕರ್ನಾಟಕ ಕಾಲೇಜದಲ್ಲಿ ಕನ್ನಡವನ್ನು ಕಲಿಸುವದಕ್ಕೆ ಬೆಂಗಳೂರಿನ ಶ್ರೀ. ಪನ್ನಕೇಶವಯ್ಯಂಗಾರರು ನೇಮಿಸಲ್ಪಟ್ಟಿದ್ದಾರೆ.

ಕಾಕೋರಿಯ ಕೈದಿಗಳನ್ನು ರಾಜಕೀಯ ಕೈದಿಗಳಾಗಿ ನಡಿಸಿಕೊಳ್ಳಬೇಕೆಂದು ಸಂಯುಕ್ತಪ್ರಾಂತದ ಕೌನ್ಸಿಲದಲ್ಲಿ ಠರಾವು ಬರತಕ್ಕದ್ದಿದೆ.

ತಂಜಾವರದ ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ತಮ್ಮ ಜನರಿಗೆ ಬೇಕಾಗುವ ಬಟ್ಟೆಗಳಿಗಾಗಿ ಖಾದಿಯನ್ನೇ ಉಪಯೋಗಿಸಬೇಕೆಂಬ ಠರಾವ ಮಾಡಿದ್ದಾರೆ.

ಜಾಹೀರ ನೋಟೀಸು

ಶ್ರಾ॥ ರಾ॥ ೧ ಬಸಲಿಂಗಪ್ಪಾ ದೊಡಚಂದಿ ೨ ಯಡವಪ್ಪಾ ಬಾಗಲಕೋಟಿ ೩ ವೀರಪ್ಪಾ ಬಾಗಲಕೋಟಿ ೪ ಬಸವಂತಪ್ಪಾ ಗಟ್ಟಿಪ್ಪನವರ ೫ ಮಲಕಪ್ಪಾ ಜಿಂದಿ ೬ ಮಹಾಂತಪ್ಪಾ ಕಲ್ಲೂರ ೭ ದಾನಪ್ಪಾ ನಾರಾ ೮ ಶಿವಪ್ಪಾ ಕೆಂಚಗಳ್ಳಿ ೯ ಮಲ್ಲಪ್ಪಾ ಜಿಂದಿ ಇವರಿಗೆ—

ಕೆಳಗೆ ಸಹಿ ಮಾಡಿದ ನಾನು ಲಿಂಗನಗೌಡಾ ಪಾಟೀಲ ಸಾ॥ ಕಪ್ಪಲಿ ಪೇಠಾ ನರಗುಂದ ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ- ರಾ. ಸಾ. ಅಣ್ಣಾಚಾರ್ಯ ಕಟ್ಟಿ ವಕೀಲ ಧಾರವಾಡ ಇವರ ಸಾಗ್ವಾನಿ ಪೆಟ್ಟಿಗೆ (ಆಫೀಸ ಬಾಕ್ಸ) ಅಂದರೆ ಭಂಗಾರ, ಬೆಳ್ಳಿ, ದುಡ್ಡು ಇಲ್ಲದ್ದು ಖಾಸಗಿ ಕಾಗದ ಪತ್ರಗಳಿದ್ದದ್ದು ಧಾರವಾಡ ಜಿಲ್ಲಾ ಹಾವೇರಿ ಹದ್ದಿಯಲ್ಲಿ ಕಳೆದು ಹೋಗಿರುತ್ತದೆ. ಈ ಪೆಟ್ಟಿಗೆಯು ಯಾರಿಗಾದರೂ ಸಿಕ್ಕಿದ್ದರೆ ಒಂದು ವಾರದಲ್ಲಿ ತಂದು ಕೊಟ್ಟವರಿಗೆ ಯೋಗ್ಯ ಇನಾಮು ಕೊಡುವದರಲ್ಲಿ ಬರುವದು. ತಾರೀಖು ೨೧-೬-೨೮ನೇ ಇಸ್ವಿ

ಅನಂತಾಚಾರ್ಯ ವೆಂಕಣ್ಣಾಚಾರ್ಯ ಚಿಕ್ಕೇರೂರ
ಧಾರವಾಡ ಜಿಲ್ಲಾ.

ವಿಶೇಷ ಸೂಚನೆ:— ಪೆಟ್ಟಿಗೆ ಸಿಕ್ಕವರು ಕೆಳಗೆ ಬರೆದ ಪತ್ತೆಗೆ ತಿಳಿಸಿದರೆ ಕೆಳಗೆ ಸಹಿ ಮಾಡಿದ ಅನಂತಾಚಾರ್ಯ ಚಿಕ್ಕೇರೂರ ಇವರಿಗೆ ತಿಳಿಯುವದು.

ರಾ. ಸಾ. ಕಟ್ಟಿ ವಕೀಲ, ಕಿಲ್ಲೆ ಧಾರವಾಡ — ಅಥವಾ — ಸು. ಹ. ಭಾಟ್ರಿ ವಕೀಲ, ಹಾವೇರಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗಿರುವರು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ನೀವು ನಾವೂ ಕೂಡಿ ನಾಟಕ ಮಾಡಿಸಿದೆವು ನಾಟಕವು ಚಲೋ ರೀತಿಯಿಂದ ನಡೆಯಿತು. ಆಗ್ಗೆ ಸಾವಕಾಸ ಮಾಡಿಸೋಣ ಅಂತ ಎಲ್ಲರೂ ಠರಾವು ಮಾಡಿದೆವು. ಆಗಿನ ಕಾಲಕ್ಕೆ ಪಟ್ಟಿ ಯಾರದು ನೂರಾಹದಿನೆಂಟು ೨೧೮ ರೂಪಾಯಿ ಪಟ್ಟಿ ವಸೂಲ ಮಾಡಿದೆವು. ಇಷ್ಟೇ ರೂಪಾಯಿ ಸಾಲುವದಿಲ್ಲ ಅಂದೆನು ಆವಾಗ್ಗೆ ನೀವು ಅಂದದ್ದೇನಂದರೆ ಈಗ ಯಂಡನೆಯವರ ಕಡೆಯಿಂದ ತೆಗೊಂಡು ಬಾ ಅಂತಾ ನನಗೆ ಹೇಳಿದಿರಿ. ಆ ಪ್ರಕಾರ ಸತ್ತೀಗೇರಿಯವರ ಅಂಗಡಿಯಲ್ಲಿ ೨೬೭ ರೂಪಾಯಿ ಒಣ್ಣಾ ಗದಗಿನ ಕಬಾಡಿಯವರ ಅಂಗಡಿಯಲ್ಲಿ ೧೧೦ ರೂಪಾಯಿದ ಡ್ರೆಸ್ಸಿನ ಅರಿವೆ ಹಂಡಿನವರದ ಗುರಯ್ಯನ ಅಂಗಡಿಯಲ್ಲಿ ೧೩೫ ಚಿಲ್ಲರ ಖರ್ಚಿನ ಬಾಬತು ಪೆಂಟರನಿಗೆ ಕೊಟ್ಟ ೩೦೦ ರೂಪಾಯಿ ನನ್ನ ಸ್ವಂತದವು ಅಂದಾಜು ೭೦೦ ರೂಪಾಯಿ ಕಂಪನಿಯು ದೇಣೆ ಉಳಿಯಿತು. ಈಗ ನಿಮ್ಮೆಲ್ಲನ್ನು ಕೂಡಿಸಿಕೊಂಡು ಈ ದೇಣಿದ ಬಾಬತು ದರವಬ್ಬನಿಗೆ ಎಷ್ಟು ಕೊಡಬೇಕೆಂದು ಕೇಳಿದರೆ ಕೊಡುವದಿಲ್ಲಾ ಅಂದ ಬಗ್ಗೆ ಈ ನೋಟೀಸು ಕೊಡುವ ಭಾಗ ಬಿತ್ತು. ಈ ನೋಟೀಸು ಮುಟ್ಟಿದ ಹದಿನೈದು ದಿವಸಗಳಲ್ಲಿ ನಾಟಕದ ಲೇವಾದೇವಿ ಬಗ್ಗೆ ನಿಕಾಲಿ ಮಾಡಿಕೊಳ್ಳಬೇಕು. ಇದು ಅಲ್ಲದ ಹಂದ್ರೆಪ್ಪಾ ದೊಡಚಂದಿ ಇವರಲ್ಲಿ ಒಂದು ನೋಟು ಬರಕೊಟ್ಟು ತಂದ ಒಂದು ನೂರು ೧೦೦ ರೂಪಾಯಿ ಇದು ಸಹ ಕಂಪನಿಯದೇ ಇರುತ್ತದೆ. ಇದಕ್ಕೆ ನೀವು ತಪ್ಪಿದರೆ ನಿಮ್ಮ ಮೇಲೆ ಕೋರ್ಟಿನಲ್ಲಿ ಇಲಾಜ ಮಾಡಿ ವಸೂಲ ಮಾಡಲಾದೀತು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಅದೆ. ತಿಳಿಯುವದು

ತಾ॥ ೨೨-೬-೨೮ ಇಸ್ವಿ

ಸಹಿ ಇಂಗ್ಲಿಷ ಲಿಂಗನಗೌಡಾ ಪರ್ವತಗೌಡಾ ಪಾಟೀಲ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಸಕ್ಕರಿ ಇವರು ಧಾರವಾಡದಲ್ಲಿರುವ ತಮ್ಮ ವಾತ್ಸಲ್ಯಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಗುರುವಾರ ತಾರೀಖು ೨೩ ನೇ ಜೂನ ೧೯೨೭ | ಸಂಚಿಕೆ ೧೩೩

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೩೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಇನಸ್ಪೆಕ್ಟರಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಪ್ರಥಮ ಸ್ಥಾನ.

ಸೇವಿಂಗ್ಸ ಡಿಪಾಜಿಟ ಸೌಲಭ್ಯವುಂಟು. ಚೆಕ್ಕಿನಿಂದ ಹಣ ತೆಗೆಯಬಹುದು. ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುತ್ತದೆ. ಠೇವಿಗಳಿಗೆ ಬಡ್ಡಿ ಹೆಚ್ಚಾಗಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಡ್ಯಪ್ಪ ಜಿ. ಬಳಾಳಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ಆರು, ಒಂಬತ್ತು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಒಂದು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಒಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[೦][೦]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಿನಿಂದ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೩-೬-೨೭ ನೇ ಇಸ್ವಿ

ಪ್ರಜಾಪ್ರತಿನಿಧಿ ಸಭೆಯಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರು.

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಘೋಷವೆದ್ದಿರುತ್ತದೆ. ದರಬಾರಿನವರು ಬ್ರಾಹ್ಮಣರಿಗೆಷ್ಟು ಮತ್ತು ಬ್ರಾಹ್ಮಣೇತರರಿಗೆಷ್ಟು ಸರಕಾರೀ ಕೆಲಸಗಳನ್ನು ಕೊಡಬೇಕೆಂಬ ವಿಚಾರ ಮಾಡುವದಕ್ಕಾಗಿ ಹಿಂದಕ್ಕೆ ಒಂದು ಕಮೀಟಿ ನೇಮಿಸಿದರು. ಕಮೀಟಿಯ ಅಧ್ಯಕ್ಷರು ಮಿ. ಮಿಲರಸಾಹೇಬರಾಗಿದ್ದರೆಂದು, ಅದಕ್ಕೆ ಮಿಲರ ಕಮೀಟಿ ಎಂಬ ಹೆಸರು ಬಂದಿದೆ. ಈ ಕಮೀಟಿಯವರು ಸರಿಯರ್ಧ ಕೆಲಸಗಳನ್ನು ಬ್ರಾಹ್ಮಣೇತರರಿಗೆ ಕೊಡಬೇಕೆಂದೂ ಈ ಪ್ರಮಾಣ ಹತ್ತುವ ತನಕ ಏಳು ವರ್ಷಗಳ ಪರ್ಯಂತರ ಬ್ರಾಹ್ಮಣರಿಗೆ ಕೆಲಸಗಳನ್ನು ಕೊಡಬಾರದೆಂದೂ ರಿಪೋರ್ಟ ಮಾಡಿದರು. ದರಬಾರಿನವರೂ ಒಪ್ಪಿದರು. ಆದರೆ ಅನುಭವವು ಬೇರೆ ಪ್ರಕಾರದಿಂದ ಬರಹತ್ತಿತ್ತು. ಎಷ್ಟೋ ಖಾತೆಗಳಲ್ಲಿ ಯೋಗ್ಯರಾದಂಥ ಜನರೇ ಸಿಗದಾದರು. ಬ್ರಾಹ್ಮಣೇತರರು ಆಗೀಗ ಸರಕಾರೀ ಕೆಲಸಗಳಲ್ಲಿ ಸೇರಬೇಕೆಂಬ ಹಂಬಲಬಟ್ಟು, ಬಹುಮತದ ಬಲದಿಂದ ಸ್ಥಳಗಳ ಹಕ್ಕು ಪಡೆದರು. ಆದರೆ ಹಕ್ಕಿಗೆ ತಕ್ಕ ಯೋಗ್ಯತೆ ಎಲ್ಲಿಂದ ಬರುವದು? ಆದುದರಿಂದ ದರಬಾರಿನವರು ಸಾಧ್ಯವಾದಷ್ಟು ಕೆಲಸಗಳನ್ನು ಬ್ರಾಹ್ಮಣೇತರರಿಗೆ ಕೊಟ್ಟು, ಉಳಿದ ಕೆಲಸಗಳನ್ನು ಬ್ರಾಹ್ಮಣರಿಗೆ ಕೊಡುತ್ತಾ ಬಂದರು. ಇದರಿಂದ ಮಿಲರ ಕಮೀಟಿಯ ರಿಪೋರ್ಟಿಗೆ ಆಗಾಗ್ಗೆ ತೊಂದರೆ ಬರತೊಡಗಿದ್ದರಿಂದ, ಹೊಸದಾಗಿ ಒಂದು ಸರಕ್ಯೂಲರ ತೆಗೆದು, ಮೂರು ಸ್ಥಳಗಳಲ್ಲಿ ಒಂದು ಬ್ರಾಹ್ಮಣರಿಗೆ- ಎರಡು ಬ್ರಾಹ್ಮಣೇತರರಿಗೆ ಕೊಡಬೇಕೆಂದು ಗೊತ್ತು ಮಾಡಿದ್ದಾರೆ. ಈ ಸರಕ್ಯೂಲರದ ವಿರುದ್ಧ ಬ್ರಾಹ್ಮಣೇತರರು ದೊಡ್ಡ ಚಳವಳಿ ಎಬ್ಬಿಸಿದ್ದಾರೆ. ಇದರಿಂದ ಬ್ರಾಹ್ಮಣೇತರರ ಹಕ್ಕು ಬಾಧ್ಯತೆಯ ಮೇಲೆ ಆಕಾತದ ಕೊಡ್ಲಿ ಇಡಲೊದಗಿದ್ದು, ಸರ್ವಸ್ವೀ ಹಾನಿ ಮಾಡಿತೆಂದು ಗುರುಗುಟ್ಟುತ್ತಾರೆ. ಈ ಸರಕ್ಯೂಲರದ ವಿರುದ್ಧ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಂದು ಸ್ಪೇಶಲ ಠರಾವು ತರಬೇಕೆಂದರು. ದಿವಾನರು ಈ ಸೂಚನೆಯನ್ನು ಅಂಗೀಕರಿಸಲಿಲ್ಲ. ಅನಂತರ ೧೫೦ ಮೆಂಬರರು ಸಹೀ ಮಾಡಿ, ಮಿಕ್ಕ ಕೆಲಸಗಳನ್ನು ಬಿಟ್ಟು, ಇದೇ ವಿಷಯವನ್ನೇ ಚರ್ಚಿಸಬೇಕೆಂದು ಮತ್ತೊಂದು ವಿನಂತಿ ಪತ್ರ ಕಳಿಸಿದರು. ಸರಕಾರದಿಂದ ಹೊರಟ ಸರಕ್ಯೂಲರದ ವಿರುದ್ಧ ಏನೂ ಮಾಡಲಿಕ್ಕಾಗುವದಿಲ್ಲ. ಆದ್ದರಿಂದ ಈ ವಿನಂತಿಯನ್ನು ಅಂಗೀಕರಿಸುವದಕ್ಕಾಗುವದಿಲ್ಲೆಂದು ದಿವಾನರವರು ಮತ್ತೆ ಹೇಳಿ, ಅರ್ಜಿಯನ್ನು ನಿರಾಕರಿಸಿದರು.

ದಿವಾನರು ಮುಸಲಮಾನರು, ಬ್ರಾಹ್ಮಣೇತರರು. ಇಂಥವರು ಠರಾವು ಮತ್ತು ೧೫೦ ಪ್ರತಿನಿಧಿಗಳ ವಿನಂತಿಯನ್ನು ಒಪ್ಪದಿರುವದಕ್ಕೆ ಅಂಥ ಪ್ರಬಲ ಕಾರಣವೇ ಇರಬೇಕೆಂದು ಸ್ಪಷ್ಟವಾಗುತ್ತದೆ. ರಾಜ್ಯಕಾರಭಾರದಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರವಿರುವದಿಲ್ಲ. ಆಡಳಿತೆಯು ಉತ್ತಮವಾಗಿ ನಡೆಯಬೇಕೆಂತಲೇ ರಾಜ್ಯಕರ್ತರ ಮುಖ್ಯ ಧೋರಣ ಹಾಗು ಕರ್ತವ್ಯವಾಗಿರುತ್ತದೆ. ಈ ಧ್ಯೇಯಕ್ಕನುಸರಿಸಿ, ಅವರು ತಮಗೆ ಯೋಗ್ಯರೆಂದು ಕಂಡವರನ್ನೇ ನೇಮಿಸಿಕೊಳ್ಳುವರು. ಆದ್ದರಿಂದಲೂ ಅವರು ತೋರಿಸಿದ ಉದಾರ ಬುದ್ಧಿಯು ಪ್ರಶಂಸನೀಯವಾಗುತ್ತದೆ. ಒಂದು ಬ್ರಾಹ್ಮಣರಿಗೆ ಎರಡು ಬ್ರಾಹ್ಮಣೇತರರಿಗೆ ಎಂಬದಾಗಿ ಮಾಡಿದ ನಿಯಮವು ಬ್ರಾಹ್ಮಣೇತರರಿಗೆ ಸಾಮಾನ್ಯವಾದ ಲಾಭವಲ್ಲ. ಅವರು ಸದ್ಯದಲ್ಲಿ ದೊರೆತ ಹಕ್ಕನ್ನು ಯೋಗ್ಯ ರೀತಿಯಿಂದ ಉಪಯೋಗ ಮಾಡಿ, ತಾವು ಆಡಳಿತೆಯಲ್ಲಿ ಸಮರ್ಥರೆಂದು ತೋರಿಸಿದರೆ- ಕೆಲವು ವರ್ಷಗಳ ನಂತರ ಇದಕ್ಕೂ ಹೆಚ್ಚಿನ ಹಕ್ಕು ಮತ್ತು ಅಧಿಕಾರ ಪಡೆಯಬಹುದು. ಒಮ್ಮೆಯಲೆ ದಿವಾನರ ಮೇಲೂ ದರಬಾರದ ಮೇಲೂ ಕೋಪಿಸಿ ಉಪಯೋಗವಾಗಲಾರದು. ಸಂಸ್ಥಾನದಲ್ಲಿ ಎಷ್ಟು ಖಾತೆಗಳಿವೆ, ಆಯಾ ಖಾತೆಗಳಲ್ಲಿ ಕೆಲಸ ಮಾಡುವಂತೆ ವಿದ್ಯಾವಂತರು ತಮ್ಮವರಾಗಿರುವರೇ ಹೇಗೆಂಬದನ್ನು ಅವಲೋಕಿಸಬೇಕು. ಅಂದರೆ- ಅನೇಕ ಖಾತೆಗಳಲ್ಲಿ ಸೇರುವಂತೆ ಬ್ರಾಹ್ಮಣೇತರರಲ್ಲಿ ಶಿಕ್ಷಣ ಹೊಂದಿದವರಿಲ್ಲೆಂದೂ, ಅಲ್ಲಿ ಬ್ರಾಹ್ಮಣರು ಸೇರಲು ಅವಕಾಶವುಂಟೆಂದೂ, ಮಿಲರ ಕಮೀಟಿಯ ಪ್ರಮಾಣದ ವಿಚಾರವೇ ಹೊರಡುವದಿಲ್ಲೆಂದೂ ಕಂಡು ಬರುವದು.

ಮುಂಬಯಿ ಇಲಾಖೆಯಲ್ಲಿಯೂ ಸರಕಾರ ದರಬಾರದಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರವುಂಟು. ಮುಂಬಯಿ ಸರಕಾರದವರು ನೂರಕ್ಕೆ ೪೦ ಸ್ಥಳಗಳನ್ನು ಬ್ರಾಹ್ಮಣರಿಗೆ, ೬೦ ಸ್ಥಳಗಳನ್ನು ಬ್ರಾಹ್ಮಣೇತರರಿಗೆ ಕೊಡಬೇಕೆಂದು ಠರಾವು ಮಾಡಿದ್ದಾರೆ. ಮೈಸೂರು ದರಬಾರಿನವರು ೩೩ ಕೊಡಬೇಕೆಂದು ಅಂದಿರುವದನ್ನೂ ಮುಂಬಯಿ ಸರಕಾರದವರು ೪೦ ಕೊಡಬೇಕೆಂದಿರುವದನ್ನೂ ನೋಡಿದರೆ- ಮೈಸೂರಿನ ಬ್ರಾಹ್ಮಣೇತರರು ಮುಂಬಯಿಗಿಂತ ಮುಂದೆ ಹೋಗಿದ್ದಾರೆಂದು ಸ್ಪಷ್ಟವಾಗುತ್ತದೆ. ಹೋದ ವರ್ಷ ಸರ. ಕೆ. ವ್ಹಿ. ರಡ್ಡಿಯವರು ಧಾರವಾಡಕ್ಕೆ ಬಂದಾಗ, ಇಂಜಿನಿಯರ ಖಾತೆಯಲ್ಲಿ ತೆರವಾದ ೧೪ ಸ್ಥಳಗಳಲ್ಲಿ ೯ ಬ್ರಾಹ್ಮಣರಿಗೆ ೫ ಬ್ರಾಹ್ಮಣೇತರರಿಗೆ ಕೊಟ್ಟಿದ್ದೇವೆಂದು ತಾವಾಗಿ ಆಸ್ಥೆಯಿಂದ ಹೇಳಿದ್ದಾರೆ. ಬ್ರಾಹ್ಮಣೇತರ ಚಳವಳಿಯ ಧುರೀಣರಾದ ಸರರು ಬ್ರಾಹ್ಮಣರಿಗೇಕೆ ಹೆಚ್ಚಿಗೆ ಕೆಲಸಗಳನ್ನು ಕೊಟ್ಟರೆಂದು ತಿಳಿಯುವದಕ್ಕೆ ದೀರ್ಘ ವಿಚಾರಬೇಕಾಗಿಲ್ಲ. ಬ್ರಾಹ್ಮಣೇತರರು ಸಮರ್ಥರಿಲ್ಲೆಂತಲೇ ಬ್ರಾಹ್ಮಣರ ಮೇಲೆ ಉಪಕಾರ ಮಾಡಿದಂತೆ ತೋರಿಸಿದ್ದಾರೆ. ಇದೇ ವಿಚಾರವನ್ನು ಮೈಸೂರಿನ ಬ್ರಾಹ್ಮಣೇತರರೂ ಧ್ಯಾನಕ್ಕೆ ತಂದರೆ- ತಾವು ದರಬಾರದ ಮೇಲೆ ಕೋಪಿಸಿದ್ದು ಹೆಡ್ಡತನವಾಯಿತೆಂದೆನಿಸುವದು.

ಸಂಪೂರ್ಣ ಸೂರ್ಯಗ್ರಹಣ.

ಜ್ಯೇಷ್ಠ ವದ್ಯ ಅಮಾವಾಸ್ಯ ೨೯ನೆಯ ತಾರೀಖಿನ ದಿವಸ ಇಂಗ್ಲಂಡದ ಕೆಲ ಭಾಗದಲ್ಲಿ ಸಂಪೂರ್ಣ ಸೂರ್ಯಗ್ರಹಣವಾಗುವದು. ಅಲ್ಲಿ ಇಂಥ ಗ್ರಹಣವು ಇನ್ನೂರು ವರ್ಷಗಳ ಹಿಂದಾಗಿತ್ತು. ಈ ನಂತರ ೧೯೯೯ನೆಯ ಇಸವಿಯಲ್ಲಾಗುವದು. ಆದುದರಿಂದ ಈ ಅದ್ಭುತ ಚಮತ್ಕಾರವನ್ನು ನೋಡಲು- ವಿಲಾಯತಿಯ ಲಕ್ಷಾವಧಿ ಜನರು ಕುತೂಹಲವುಳ್ಳವರಾಗಿದ್ದಾರೆ. ಹಾರ್ಟಲಪೂಲಿನಿಂದ ಕಿಸಿಯರ್ಥವೆಂಬಲ್ಲಿಯ ತನಕ ಪೂರ್ಣ ಗ್ರಹಣ ಕಾಣಿಸುವದು. ಅಲ್ಲಿಗೆ ರೇಲ್ವೆ ಕಂಪನಿಯವರು ನೋಟಕರನ್ನು ಕರಕೊಂಡು ಹೋಗಲು ಪ್ರಚಂಡವಾದ ಸಿದ್ಧತೆ ಮಾಡಿದ್ದಾರೆ. ಲಂಡನದಿಂದ ದಿನಾಲು ಬಿಡುವ ಬಂಡಿಗಳ ಹೊರ್ತು ಅರವತ್ತು ಸ್ಪೇಶಲಟ್ರೇನುಗಳನ್ನು ಬಿಡುವರು. ಮತ್ತು ಪ್ರತಿಯೊಂದು ಬಂಡಿಯ ಡಬ್ಬಿಗಳನ್ನು ಇಮ್ಮಡಿಸುವರು. ಪ್ರೇಕ್ಷಕರಿಗೆ ಊಟ- ಉಪಹಾರ ದೊರೆಯುವದಕ್ಕಾಗಿ ಉಪಹಾರದ ಡಬ್ಬಿಗಳನ್ನಿಡುವರು. ರೇಲ್ವೆಯು ತಾವು ವಾಯು ಮೋಟಾರಗಳೂ ದಿಕ್ಕಿಲ್ಲದೆ ಬರುವವು. ಇವುಗಳಿಗಾಗಿ ಒಂದು ದೊಡ್ಡ ಬೈಲನ್ನು ಸಿದ್ಧಮಾಡಿದ್ದಾರೆ. ಜನರ ಆನಂದಕ್ಕೆ ಯಾವ ತರದ ತೊಂದರೆಯಾಗಬಾರದೆಂದು ಅಲ್ಲಿಯ ಮ್ಯುನಿಸಿಪಾಲಿಟಿಯವರು ನಾಟಕ, ಸಿನೇಮಾ, ಸರ್ಕಸ ಮುಂತಾದವುಗಳ ವಿಷಯಕವಾದ ನಿಯಮಗಳನ್ನು ಅಧಿ

ಷ್ಟು ಸಡಿಲು ಮಾಡಿದ್ದಾರೆ ಶಾಲೆಯ ವಿದ್ಯಾರ್ಥಿಗಳ ದೆಸೆಯಿಂದ ಸ್ಪೇಶಲ ಅನುಕೂಲತೆ ಮಾಡಿದ್ದಾರೆ. ಗ್ರಹಣ ಕಾಲದಲ್ಲಿ ಸೂರ್ಯನ ಭಾವಪರಿಕ್ಷೆ ಹೊಳ್ಳುವದಕ್ಕಾಗಿ ಹೆಸರಾದ ಜ್ಯೋತಿಷಜ್ಞರು ಬಲವಾದ ಕನ್ನಡಿಗಳನ್ನು ತಕ್ಕೊಂಡು ಹೋಗುವರು. ಕ್ಯಾಂಪುಗಳನ್ನಿಡುವದಕ್ಕಾಗಿ ಗುಡ್ಡ ದಿಣ್ಣೆಗಳ ಮೇಲೆ ಈಗಾಗಲೇ ಎತ್ತರವಾದ ಕಟ್ಟೆಗಳನ್ನು ಕಟ್ಟುತ್ತಿದ್ದಾರೆ.

— —

ಶ್ರೀ ರಾನಡೆಯವರ ಕಾಯಿದೆಭಂಗ.

ಮ್ಯಾಜಿಸ್ಟ್ರೇಟರಿಗೆ ನೋಟೀಸು.

ಸಾರ್ವಜನಿಕ ಜಾಗಗಳ ಮೇಲೆ ಗಂಟಿಬಾರಿಸುವ, ಹಿಂದೂ ಮುಸಲಮಾನ ಐಕ್ಯ ಸಂಬಂಧವಾಗಿ ಹಂಚುತ್ತಿರುವ ಹಸ್ತ ಪತ್ರಿಕೆಗಳ ಬಗ್ಗೆ ಪೈಸಾ ಫಂಡಿನ ಶ್ರೀ ರಾನಡೆಯವರಿಗೆ ಪುಣೆಯ ಮ್ಯಾಜಿಸ್ಟ್ರೇಟರು ಎರಡು ರೂಪಾಯಿ ದಂಡ ಅಥವಾ ಎರಡು ದಿವಸ ಸಾದಾ ಶಿಕ್ಷೆ ವಿಧಿಸಿ, ಎರಡೇ ದಿವಸಗಳ ಮಟ್ಟಿಗೆ ಇವರನ್ನು ತುರಂಗಕ್ಕೆ ಕಳಿಸಲಾರರೆ, ದಂಡವನ್ನು ವಸೂಲು ಮಾಡಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ.

ಹಿಂದೂ ಮುಸಲಮಾನ ಐಕ್ಯ ಸಂಬಂಧವಾಗಿ ತಾವು ಮಾಡುತ್ತಿರುವ ಕರ್ತವ್ಯದಲ್ಲಿ ಮ್ಯಾಜಿಸ್ಟ್ರೇಟರು ಪ್ರತಿಬಂಧವ ಹುಕುಮು ಕೊಡುವದು ತಮ್ಮ ಘನವಂತಿಕೆ ಯ ದೇಶಹಿತೈಕ ಕರ್ತವ್ಯಕ್ಕೂ ಅಪಮಾನ ತರುವಂಥಾದ್ದಾಗಿರುವದರಿಂದ, ಶ್ರೀ ರಾನಡೆಯವರು ಈ ಹುಕುಮನ್ನು ಮುಂದು ಕಾಯಿದೆಭಂಗ ಮಾಡಲು ಸಿದ್ಧರಾಗಿದ್ದಾರೆ.

ಇವರು ಮ್ಯಾಜಿಸ್ಟ್ರೇಟರಿಗೆ ಪತ್ರ ಬರೆದು "ಎರಡು ತಿಂಗಳ ವಿನಃ ಹ್ಯಾಂಡಬಿಲ್ಲನ್ನು ಹಂಚಬೇಡಿರೆಂದು ನೀವು ಮಾಡಿದ ಹುಕುಮನ್ನು ನಾನು ಮನ್ನಿಸುವದಿಲ್ಲ, ನಾನು ಈ ನಿಮ್ಮ ಹುಕುಮಿನ ವಿರುದ್ಧವಾಗಿ ಬುಧವಾರ ಚೌಕದಲ್ಲಿ ಹ್ಯಾಂಡಬಿಲ್ಲುಗಳನ್ನು ಹಂಚುವೆನು" ಎಂಬದಾಗಿ ಅರುಹಿದ್ದಾರೆ. ಮ್ಯಾಜಿಸ್ಟ್ರೇಟರು ಮುಂದೆ ಹೇಗೆ ಮಾಡುವರೆಂಬದನ್ನು ನೋಡಲು ನಾಗರಿಕರು ಅತು ಶೆಯಿಂದ ನಿರೀಕ್ಷಿಸುತ್ತಿದ್ದಾರೆ.

— —

ಹಾಂಕಾವಿನಲ್ಲಿ ಹೊಳೆಯು ದಾಟಿಯು ಬಂದಾದ್ದರಿಂದ, ಪ್ರಜರ ಮುಖ್ಯಾಹಾರವಾದ ಅಕ್ಕಿಯ ಕೊರತೆಯೂ ಆಗಿರುತ್ತದೆ.

ಚಾಂಗ-ಕೈ ಶೇಕನು ಸಮಸ್ತ ಚೀನದ ಸರ್ವ ಸೇನಾಧಿಪತಿ ಎಂಬ ಬಿರುದನ್ನು ಧಾರಣ ಮಾಡಿದ್ದಾನೆ. ಜಯ ದಿಗೇನು ಕಾಂಚಿ!! .

ಅಂಬ್ಯುಲನ್ಸದಲ್ಲಿ ರಾಜಕೀಯವು!!

—o—

ಡಾಕ್ಟರ ಹರ್ಡೀಕರರು ಚೀನಕ್ಕೆ ಕಳಿಸುವ ಅಂಬ್ಯುಲನ್ಸದಲ್ಲಿ ರಾಜಕೀಯವಿರುತ್ತದೆಂದು ಹಿಂದುಸ್ಥಾನ ಸರಕಾರದ ಗ್ರಹಿಕೆಯಾಗಿರುತ್ತದೆ. ಇದನ್ನು ಕಳಿಸುವವರು ಕಾಂಗ್ರೆಸದವರು ಮತ್ತು ಸೇವಾದಳದವರು. ಸೇವಾದಳದ ಮುಖ್ಯ ಪ್ರವರ್ತಕರು ಶ್ರೀ ಗೋಸಾವಿ ಮತ್ತು ಡಾಕ್ಟರ ಹರ್ಡೀಕರರು. ಇವರೆಲ್ಲರೂ ಸರಕಾರದ ವಿರುದ್ಧ ಚಳವಳಿ ಮಾಡತಕ್ಕವರು. ಹಿಂದುಸ್ಥಾನ ಸರಕಾರದವರು ಚೀನಕ್ಕೆ ಕಳಿಸಿದ ದಂಡಿನ ವಿರುದ್ಧ ಕಾಂಗ್ರೆಸ ಸಭೆಯವರು ಠರಾವು ಮಾಡಿದ್ದಾರೆ. ಸರಕಾರಕ್ಕೆ ಕಾಂಗ್ರೆಸ ಮತ್ತು ಇದರ ಪ್ರವರ್ತಕರು ವಿಷಮವಾಗಿ ಇದರಲ್ಲಿ ರಾಜಕೀಯ ಗೂಢವಿರಬೇಕೆಂಬ ಊಹೆಯಾಗಿ ಆ ಪ್ರಕಾರ ಸರಕಾರದವರು ಇವರಿಗೆ ತಿಳಿಸಿದ್ದಾರೆ. ನಮ್ಮ ಅಂಬ್ಯುಲನ್ಸದಲ್ಲಿ ರಾಜಕೀಯವೆಷ್ಟೂ ಇಲ್ಲ. ರೆಡಕ್ರಾಸದವರಂತೆ ಸಂಪೂರ್ಣ ಭೂತದಯದ್ದಾಗಿದೆ. ರೆಡ್ಡ ಕ್ರಾಸದ ನಿಯಮಗಳನ್ನು ಅಕ್ಷರಶಃ ಮನ್ನಿಸುವೆವೆಂದು ಡಾಕ್ಟರ ಹರ್ಡೀಕರರು ಪ್ರಸಿದ್ಧ ಮಾಡಿದ್ದಾರೆ.

ಚೀನಕ್ಕೆ ಹೋಗಲು ಅನೇಕ ಅರ್ಜಿಗಳು ಬಂದಿವೆ. ಇವುಗಳಲ್ಲಿ ಮಹಾರಾಷ್ಟ್ರ ೭೩, ಕರ್ನಾಟಕ ೧೨, ಬಂಗಾಲ ೩೫, ತಮಿಳ ೧೬, ಮುಂಬಯಿ ೧೭, ಮತ್ತು ಪಂಜಾಬ ೧೦ ಇದ್ದು, ಉಳಿದವು ಕಿರುಕುಳವಾಗಿರುತ್ತವೆ.

— —

ಧರ್ಮಾಚಾರ್ಯರ ಮೇಲೆ ಕೋಪ-

ಮುಂಬಯಿಯಲ್ಲಿ ಪಾರ್ಸಿ ತರುಣರ ಸಭೆಯಲ್ಲಿ ಸರ ಜಿಮಣಲಾಲ ಸೆತಲವಾಡರ ವ್ಯಾಖ್ಯಾನವಾಯಿತು. ಇವರು ಆಚಾರ್ಯ, ಮೌಲ್ವಿ ಮತ್ತು ದಸ್ತೂರರ ಮೇಲೆ ಕಡುತರವಾದ ಟೀಕ ಮಾಡಿದರು. ಯಾವದೊಂದು ರಾಷ್ಟ್ರೀಯ ಅಥವಾ ಧಾರ್ಮಿಕ ಪ್ರಗತಿಗೆ ಮಹಾತ್ಮರೆನಿಸಿಕೊಳ್ಳುವ ಧರ್ಮಾಧಿಕಾರಿಗಳು ವಿಘ್ನ ತರುತ್ತಾರೆ. ಇವರನ್ನು ಹಿಂಬಾಲಿಸಬೇಡಿರಿ. ಇವರನ್ನು ಇವರ ಸ್ಥಳದಲ್ಲಿ ಬಿಟ್ಟು, ಸ್ವತಂತ್ರ ವಿಚಾರದಿಂದ ನಡೆದರೇ ನಿಮ್ಮ ಉತ್ಕರ್ಷವಾಗುವದೆಂದು ಅಂದಿರುತ್ತಾರೆ.

— —

ಸ್ತ್ರೀಯರಿಗೆ ಉಪದೇಶ-

ಪುಣೆಯಲ್ಲಿ ಪ್ರೊಫೆಸರ ಕರ್ವೆಯವರ ಸ್ತ್ರೀಯರ ಯುನಿವ್ಹರ್ಸಿಟಿಯ ಪದವಿಧರರಿಗೆ ಪದವಿಗಳನ್ನು ಕೊಡುವ ಸಮಾರಂಭವು ಸರ ಶಂಕರನಾಯರರ ಅಧ್ಯಕ್ಷತೆಯಲ್ಲಾಯಿತು. ಇವರು ಸ್ತ್ರೀಯರಿಗೆ ಮಾಡಿದ ಉಪದೇಶವೇನಂದರೆ- ನೀವು ಸಂಪಾದನೆ ಮಾಡಿದ ವಿದ್ಯೆಯ ಉಪಯೋಗವನ್ನು ಸ್ತ್ರೀಸಮಾಜಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವದಕ್ಕಾಯೂ ಹೆಚ್ಚಳಕ್ಕಾಗಿಯೂ ಮಾಡಿರಿ. ಎಲ್ಲಕ್ಕೂ ಮೊದಲು ನೀವು ಗಂಡಸರ ಕಾಮಾತುರತೆಯ ಮನೋವಿಕಾರಗಳಿಗೆ ಬಲೀ ಬೀಳದಂತೆ ದಕ್ಷರಾಗಿರಿ. ಸೋಶಿತನಕ್ಕಾಗಿ ಸ್ತ್ರೀಯರ ಮಾರಾಟವಂತೂ ಮೊದಲು ನಿಲ್ಲಬೇಕು. ಸ್ತ್ರೀಯರಿಗೆ ಸ್ತ್ರೀಧನದ ಮೇಲೆ ಹಕ್ಕಿರುವದಂತೂ ಸರಿಯೇ. ವಿವಾಹವಾದ ಬಳಿಕ ಗಂಡನ ಕೂಡ ಸರಿಯಾಗಿ ಪ್ರಪಂಚ ಮಾಡುತ್ತಿರುವ ಮೂಲಕ ಮನೆಯವ ಎಲ್ಲ ಆಸ್ತಿಯಲ್ಲಿಯೂ ನಿಮ್ಮ ಅರ್ಧ ಭಾಗವಿರತಕ್ಕದ್ದು, ಗಂಡಸರು ನಿಮ್ಮ ಭಾಗಕ್ಕೆ ಎಂದೂ ಅಡ್ಡ ಬರಲಾರರು. ನಿಮಗೆ ಪೂರ್ಣ ಸಹಾಯ ಮಾಡುವರು. ಸ್ತ್ರೀಯರು ತಮ್ಮ ಗಂಡಂದಿರ ಕೈತೊತ್ತಾಗಿ ನಡಿಯಲಾಗದು. ತಮ್ಮ ವ್ಯಕ್ತಿ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯ ಕಾಯ್ದುಕೊಂಡಿರತಕ್ಕದ್ದು.

— —

ಸ್ವರಾಜ್ಯದಿಂದಲೇ ಸರ್ವಸಿದ್ಧಿಯು-

ಹಿಂದುಸ್ಥಾನ ಸರಕಾರದವರು ವಿಲಾಯತಿ ಮತ್ತು ಜಪಾನ ಸರಕಾರಗಳ ಮುಲಾಜಿಗಾಗಿ ಈ ದೇಶದ ಗಿರಣಿಗಳ ಸಂರಕ್ಷಣೆಗಾಗಿ ಅವಶ್ಯವಾದ ಕರ್ತವ್ಯ ಮಾಡದ್ದರಿಂದ, ಗಿರಣಿಯವರು ಈ ಪರ್ಯಂತರ ತಮ್ಮ ವ್ಯವಸಾಯದಲ್ಲಿಯೇ ಇದ್ದರು. ಯಾರ ದಾಕ್ಷಿಣ್ಯವಿಟ್ಟಿದ್ದಿಲ್ಲ. ಸ್ವದೇಶಿಗೆ ಉತ್ತೇಜನ ಕೊಡಲಿಲ್ಲ. ಆದರೆ ಈಗ ತಮಗೇ ಬಿಸಿ ಹತ್ತಿದ ಕೂಡಲೆ, ಕಣ್ಣು ತೆರೆದು, ಸ್ವರಾಜ್ಯವಿದ್ದ ಹೊರತು ಗಿರಣಿಗಳು ಬಾಳಲಾರವೆಂದು ಅನ್ನುತ್ತಿದ್ದಾರೆ. ಈ ಪ್ರಕಾರ ಇವರು ಸ್ವರಾಜ್ಯ ವಿಚಾರವನ್ನು ಸ್ಥಿರವಾಗಿಟ್ಟುಕೊಂಡು, ಕಾಂಗ್ರೆಸವನ್ನು ಸೇರಿದರೇ ಪ್ರಯೋಜನವು. ಗಿರಣಿಯವರಿಗೆ ಬಂದ ಬುದ್ಧಿಯು ಆಳ ಸರ ಶಂಕುಳದೊಳಗಿನ ಕೂಪಾಗಿರುವಂಥವರಿಗೂ ಬರಲಿ.

— —

ಸೊಲ್ಲಾಪೂರದ ಲೋಕಲ ಬೋರ್ಡು-

ಸೊಲ್ಲಾಪೂರ ಜಿಲ್ಹೆಯ ಲೋಕಲಬೋರ್ಡಿನ ಆಡಳಿತವು ಅಸಮಾಧಾನಕರವಾಗಿದೆ. ಈ ಖಾತೆಯ ಮಂತ್ರಿಯವರು ಬೋರ್ಡನ್ನು ಸಸ್ಪೆಂಡ ಅಥವಾ ಬರಖಾಸ್ತ ಮಾಡಬಹುದಾಗಿತ್ತು. ಆದರೆ ಬೋರ್ಡಿನ ಅಧ್ಯಕ್ಷರಿಗೆ ತಮ್ಮ ವತಿಯಿಂದ ಸ್ವರಾಜ್ಯ ಕೊಡಲು ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ವಿಚಾರಣೆಯಾಗಿದೆ. ಪ್ರೇಕಪಸಾಹೇಬರನ್ನು ನೇಮಿಸಿದ್ದಾರೆ. ವಿಚಾರಣೆಯು ಕೆಲವು ಕೋರ್ಟಿನಲ್ಲಿ ನಡೆಯುವದು.

(ಲೇಖಕ- ಮಡಿವಾಳೇಶ್ವರ ಸುತ)
ಕುಂಗುಂದ

ಸಂಭಾಷಣ

ಗುರುಪಾದ- ಮಿತ್ರಾ! ಈಗಿನ ಜನರು ಏನು ಮಾಡುತ್ತಿರುವರು?

ರಾಮ- ಹೇಳಲಿಕ್ಕೆ ಬಹು ನಾಚಿಕೆ ಬರುತ್ತದೆ.

ಗುರುಪಾದ- ಮಾಡುವವರಿಗೇ ನಾಚಿಕೆ ಇಲ್ಲ! ನಿಮಗೆ ಹೇಳಲಿಕ್ಕೆ ನಾಚಿಕೆ ಬರುವದೋ?

ರಾಮ- ಹೌದು ಹಾಗೇ ಇರುವದು!

ಗುರುಪಾದ- ಇರಲಿ! ಹೇಳು ನೋಡುವಾ

ರಾಮ- ಹಾಗಾದರೆ ಹೇಳುತ್ತೇನೆ ಕೇಳಿರಿ

ತಲೆ ಮೇಲೆ ಕ್ಯಾಪಿಂಗ್ |
ಬಾಯೊಳಗೆ ಚುಟ್ಟಿಂಗ ||
ಆಹಾ! ಕಾಫಿ ಡ್ರಿಂಕಿಂಗ |
ಸಂದ್ರಿ ಗೊಂದ್ರಿ ವಾಕಿಂಗ ||೧||
ಇಸ್ಪೇಟ ಪ್ಲೇಯಿಂಗ |
ಸೂಳೇರ ಮನೆಗೆ ಗೋಯಿಂಗ ||
ರೋಗ ಹಚ್ಚಿಗೊಂಡ ಬೀಳಿಂಗ |
ಹಾಳಾಗಿ ಹೋಗಿಂಗ ||೨||

ಶಿವ! ಶಿವ!! ಶಿವ!!!

ಗುರುಪಾದ- ಏನು ಇಂಗ್ಲಿಷ ಕನ್ನಡ ಕೂಡಿಸಿ ಭಾಷೆಯನ್ನೇ ಕೆಡಿಸಿ ಬಿಟ್ಟೆಲ್ಲ.

ರಾಮ- ಭಾಷಾ ಕೆಟ್ಟರೆ ಮಂದೀದು ತಿದ್ದಬಹುದು. ಸಮಾಜವೇ ಕೆಟ್ಟು ಹೋಗುತ್ತಿರುವದಲ್ಲ. ಇದಕ್ಕೆ ಉಪಾಯವೇನು?

ಗುರುಪಾದ- ಇದಕ್ಕೆ ಉಪಾಯವೋ! ಗೋರಕ್ಷಣೆ ಮಾಡಿ ಹಾಲು ಕುಡಿದು ಕನ್ನಡ ಮಾತಾಸೇವೆಯನ್ನು ಮಾಡಿದರೆ ತೀವ್ರವೇ ಎಲ್ಲವೂ ತಿದ್ದುವದು.

ರಾಮ- ನೀವೂ ತಿದ್ದುವಿರೋ?

ಗುರುಪಾದ- ನಾನೂ ತಿದ್ದುವೆನು. ನೀವೂ ತಿದ್ದುವಿರಿ! ಹೆಂಗಸರೂ, ಗಂಡಸರೂ, ಹುಡುಗರೂ ತಿದ್ದಿ ಬುದ್ಧಿಗಲಿತು ಸೌಖ್ಯ ಹೊಂದುವರು.

ನೋಟೀಸು

—೦—

ಹನಮಂತಾ ತಂದಿ ಫಕೀರಪ್ಪಾ ಸುಣಗಾರ ಹುಬ್ಬಳ್ಳಿ ಗಣೇಶಪೇಟ ಇವನಿಗೆ—

ಕೆಳಗೆ ಹೆಬ್ಬೆಟ್ಟಿನ ಗುರ್ತ ಮಾಡುವ ಸಾವಿತ್ರೆವ್ವಾ ಕೋಮ ಹನಮಂತಪ್ಪಾ ಸುಣಗಾರ ಹಾಲಿವಸ್ತಿ ಧಾರವಾಡ ಇವಳು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ-

ನೀನು ನನ್ನ ಮದುವೆಯ ಗಂಡನಾಗಿದ್ದೀ ಮದಿವೆಯಾಗಿ ಆಜಮಾಸು ಹತ್ತು ವರ್ಷವಾಯಿತು ಬಾಳುವೆ ಮಾಡಲಿಕ್ಕೆ ಹತ್ತಿ ಎಂಟು ವರ್ಷವಾಯಿತು ಈ ಎರಡು ವರ್ಷಗಳಲ್ಲಿ ನೀನು ನನ್ನ ಕಡೆ ಎಂದೂ ಒಳ್ಳೇ ರೀತಿಯಿಂದ ನಡಿಸಿಕೊಳ್ಳಲಿಲ್ಲ ಮುನಿಸಿಬಿಟ್ಟು ಉಟ್ಟ ಸೀರಿಯ ಮೇಲೆ ಹೊರಗೆ ಹಾಕಿದಿ ನೈಮೇಲಿನ ಎರಡು ತೋಳಬಂದಿ ಕಸಕೊಂಡು ಹೊರಗೆ ಹಾಕಿದಿ ಆ ಮಾತಿಗೆ ಆರು ವರ್ಷವಾಯಿತು ಎರಡು ಮೂರು ವರ್ಷ ನನ್ನ ತಾಯಿಯು ನನ್ನ ಸಂರಕ್ಷಣೆ ಮಾಡಿದಳು ಆದರೆ ಆಕೆಗೆ ನನ್ನನ್ನು ಹಿಡಿಯುವದಾಗದ್ದರಿಂದ ನಾನು ಎರಡನೆಯವರಲ್ಲಿ ಕೂಲಿ ಮಾಡಿ, ಉಪಜೀವನ ಮಾಡಿಕೊಂಡು ಬಂದ ಈ ದರಮ್ಯಾನ ನನ್ನನ್ನು ಕರಕೊಂಡು ಹೋಗಲಿಕ್ಕೆ ನಿನಗೆ ಅನೇಕ ಸಾರೆ ಹೇಳಿಸಿದೆ ಆದರೆ ನೀನು ದಿನಮೇಕ ಮಾಡುತಾ ಬಂದಿ ಆರು ವರ್ಷವಾದರೂ ಕರಕೊಂಡು ಹೋಗಲಿಲ್ಲ ಇದರಿಂದ ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾಳುವೆ ಮಾಡುವದು ಇದ್ದಂತೆ ತೋರುವದಿಲ್ಲ ಕಾರಣ ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನಗಾದ ಸಾಲ ಮುನ್ನೂರು ರೂಪಾಯಿ ತೀರಿಸಿ, ಒಳ್ಳೇ ರೀತಿಯಿಂದ ಪ್ರಪಂಚ ಮಾಡುತ್ತೇನೆಂದು ಪಂಚರ ಜಾಮೀನು ಕೊಟ್ಟು ಕರಕೊಂಡು ಹೋಗಬೇಕು. ಇದಕ್ಕೆ ತಪ್ಪಿದರೆ ನಾನು ನನ್ನ ಉಪಜೀವನದ ದೆಸೆಯಿಂದ ಎರಡನೇಯವನನ್ನು ಉಡಿಕೆ ಮಾಡಿಕೊಳ್ಳುವೆನು ಅನಂತರ ನಿನ್ನ ಹಕ್ಕು ನನ್ನ ಮೇಲೆ ಬಿಲಕೂಲ ನಡೆಯಲಾರದು ಈ ನೋಟೀಸೇ ನೋದಪತ್ರವೆಂದು ತಿಳಿಯಬೇಕು ಮತ್ತು ಈಗಾದ ಸಾಲದ ದೆಸೆಯಿಂದ ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡುವೆನು ಈ ಖರ್ಚ ಮತ್ತು ನೋಟೀಸಿನ ಖರ್ಚ ನಿನ್ನ ಮೇಲೆ ಎಂಟು ತಿಳಿಯುವದು.

ತಾ|| ೭-೬-೧೯೨೭ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ ಸಾವಿತ್ರೆವ್ವಾ ಕೋಮ ಹನಮಂತಾ ಸುಣಗಾರ ಇವಳದ್ದು ಇರುತ್ತದೆ.

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ- ರಾ. ಸಾ. ಅಣ್ಣಾಚಾರ್ಯ ಕಟ್ಟಿ ವಕೀಲ ಧಾರವಾಡ ಇವರ ಸಾಮಾನಿನ ಪೆಟ್ಟಿಗೆ (ಆಫೀಸ ಬಾಕ್ಸ) ಅಂದರೆ ಬಂಗಾರ, ಬೆಳ್ಳಿ, ರೊಕ್ಕ ಇಲ್ಲದ್ದು ಖಾಸಗಿ ಕಾಗದ ಪತ್ರಗಳಿದ್ದದ್ದು ಧಾರವಾಡ ಜಿಲ್ಹಾ ಹಾವೇರಿ ಹದ್ದಿಯಲ್ಲಿ ಕಳೆದು ಹೋಗಿರುತ್ತದೆ. ಈ ಪೆಟ್ಟಿಗೆಯು ಯಾರಿಗಾದರೂ ಸಿಕ್ಕಿದ್ದರೆ ಒಂದು ವಾರದಲ್ಲಿ ತಂದು ಕೊಟ್ಟವರಿಗೆ ಯೋಗ್ಯ ಇನಾಮು ಕೊಡುವದರಲ್ಲಿ ಬರುವದು. ತಾರೀಖು ೨೧-೬-೨೭ನೇ ಇಸ್ವಿ

ಅನಂತಾಚಾರ್ಯ ವೆಂಕಣ್ಣಾಚಾರ್ಯ ಚಿಕ್ಕೇರೂರ
ಧಾರವಾಡ ಜಿಲ್ಲಾ

ವಿಶೇಷ ಸೂಚನೆ— ಪೆಟ್ಟಿಗೆ ಸಿಕ್ಕವರು ಕೆಳಗೆ ಬರೆದ ಪತ್ತೆಗೆ ತಿಳಿಸಿದರೆ ಕೆಳಗೆ ಸಹಿ ಮಾಡಿದ ಅನಂತಾಚಾರ್ಯ ಚಿಕ್ಕೇರೂರ ಇವರಿಗೆ ತಿಳಿಯುವದು.

ರಾ. ಸಾ. ಕಟ್ಟಿ ವಕೀಲ, ಕಿಲ್ಲೆ ಧಾರವಾಡ — ಅಥವಾ — ಸು. ಹ. ಭಾಡ್ರಿ ವಕೀಲ, ಹಾವೇರಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೊರಟರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಶುಕ್ರವಾರ ತಾರೀಖು ೨೪ ನೇ ಜೂನ ೧೯೨೭ | ಸಂಚಿಕೆ ೧೩೩

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ಕಟಾದಿನ ಗಾಡಿ ಇರುವದು. ಕಬ್ಬಿಣ ಎರಡು ಊಸು ಗಳುಂಟು. ಗಾಲಿಯ ವ್ಯಾಸವು ೩೬ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೪|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ವಾಂಗಳವಾರ ಪೇಟೆ ಧಾರವಾಡ.

[illegible]

[illegible]

ವಿವರ [illegible] ದಿಂದ ತಿಳಕೊಳ್ಳಬೇಕು.

ಮಂದ್ಯ [illegible] ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಒಂದು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ

ವಾ [illegible]

ನೋಟೀಸಿನ ದರಗಳು.

—೦—

ತಿಂಗಳ ಕಾಲವಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಕೋರ್ಟ ಕಚೇರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಗೇಲೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಬಹಳ ಕಾಲವಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[೦][೦]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೪ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂ [illegible] ಗುರು [illegible] ರಿಂದ [illegible] ಚಂದಾದಾರರು [illegible] ವಿಜಯವನ್ನು [illegible] ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೨೪-೬-೨೭ ನೇ ಇಸ್ವಿ

ಶಾಲಾಖಾತೆಯ ಕಾರಕೂನರ ಗತಿಯೇನು?

ಒಂದೇ ವಾರ ಉಳಿಯಿತು.

ಜುಲೈ ತಿಂಗಳ ೧ನೆಯ ತಾರೀಖಿನಿಂದ ನಿಮ್ಮ ಕೈಕೆಳಗಿನ ಕಾರಕೂನರಿಗೆ ಮನೆಗೆ ಅಪ್ಪಣೆ ಎಂದು ಹೇಳಿರೆಂದು ಮ. ಸದರಶಾಗಿಣಿಯವರು ಆಯಾ ಭಾಗಗಳ ಅಧಿಕಾರಿಗಳಿಗೆ ಹುಕುಮು ಮಾಡಿ ಒಂದು ವಾರದ ಮೇಲಾಯಿತು. ಮತ್ತು ಈ ಕಾರಕೂನರು ಮನೆಗೆ ಹೋಗುವದಕ್ಕೆ ಒಂದೇ ವಾರ ಉಳಿಯಿತು. ೧ನೆಯ ತಾರೀಖಿನ ದಿವಸ ಹೋಗಬೇಕಾದರೂ ಇದೇ ತಿಂಗಳ ೩೦ನೇ ತಾರೀಖು ಗುರುವಾರ ಸಾಯಂಕಾಲದಲ್ಲಿ ಇವರು ಕಿನೆಯಲ್ಲಿ ನಾಳಿನಿಂದ ಕಚೇರಿಗೆ ಬರಬೇಡಿರೆಂಬ ಹುಕುಮು ಇಟ್ಟುಕೊಂಡು ತಂತಮ್ಮ ಮನೆಯ ದಾರೀ ಹಿಡಿಯುವರು. ವರ್ತಮಾನ ಪರಿಸ್ಥಿತಿಯ ವಿಚಾರ ಮಾಡಲಾಗಿ ಎಲ್ಲರೂ ನೋರೆ ಆಪ್ಪ ಮಾಡಿಕೊಂಡು ಹೋಗಲಾರರು. ಕರ್ನಾಟಕ ಕಾಲೇಜ, ನಾಲ್ಕು ಹಾಯಸ್ಕೂಲ, ಫೀಮೇಲ ಟ್ರೇನಿಂಗ ಕಾಲೇಜ, ಉರ್ದು ಹಾಯಸ್ಕೂಲು ಮತ್ತು ಕಾತವಾರದ ಡಿಪ್ಟಿ ಆಫೀಸಿನ ಕಾರಕೂನರು ಹೋಗಲಾರರೆಂದು ಗ್ರಹಿಸಲು ಯಾವ ಅಡ್ಡಿಯೂ ಇರುವದಿಲ್ಲ. ಇದರಿಂದ ಈಗಿದ್ದವರೇ ಅಲ್ಲೇ ಇದು, ಉಳಿದವರು ದುರ್ಭಾಗ್ಯರಾಗಿ ಮನೆಯ ದಾರೀ ಹಿಡಿಯುವರೆಂದು ಮಾತ್ರ ತಿಳಿಯಲಾಗದು. ವಿದ್ಯಾಖಾತೆಯವರು ಮೇಲಿನ ಸಂಸ್ಥೆಗಳ ಪೈಕಿಯಿಂದ ತಮಗೆ ಬೇಕಾದವರನ್ನು ಇಟ್ಟುಕೊಂಡು ಉಳಿದವರಿಗೆ ಹೋಗಿ ಒನ್ನಿರೆಂದು ಹೇಳುವರೆಂದು ಧ್ವನಿತವಾಗುತ್ತದೆ. ಹೀಗಾಗುವದು ಸಹಜವಾದದ್ದು.

ಈ ಅರ್ಧ ಪರಂಪರೆಗೆ ಧಾರವಾಡ ಜಿಲ್ಲೆಯ ಲೋಕಲ ಬೋರ್ಡ ಕಾರಣವೆಂದು ಪ್ರತಿಯೊಬ್ಬರ ಕಣ್ಣೊಳಗೆ ಒತ್ತಿದುತ್ತದೆ. ಮುಂಬಯಿಯ ಟಾಯಿಮ್ಸದ ಸುದ್ದಿಗಾರನೂ ಇದರ ಮೇಲೆ ಇದೇ ಆರೋಪ ಹೊರಿಸಿ, ಧಾರವಾಡದಂತೆ ಎಟ ಪೂರ್ವ ಕಾರಕೂನರು ಬೇಡೆನ್ನುವರೆಂದು ಕಾಣೇ ಹೇಳಿದ್ದಾನೆ. ಧಾರವಾಡದ ಲೋಕಲಬೋರ್ಡಿನವರು ಅನೇಕ ಜನ ಕಾರಕೂನರು ಒಮ್ಮಿಯಲೆ ಮನೆಗೆ ಹೋಗಿ, ಅವರ ಕುಟುಂಬವೆಂಬ ಮುತ್ತಿಗೆ ಬೆಂಕಿ ಹತ್ತುವಂಥ ದುರ್ಧರ ಪ್ರಸಂಗ ತರುವ ಪಾಪವೇಕೆ ಕಟ್ಟಿಕೊಳ್ಳುವದೆಂಬದು ನಮಗಂತೂ ತಿಳಿಯುವದಿಲ್ಲ. ಕಾರಕೂನರು ಬಹಳವಾದರೆ ಹತ್ತು ವರ್ಷಗಳಲ್ಲಿ ಪೆನಶನ ತಕ್ಕೊಂಡು ಹೋಗುವರು. ಹತ್ತು ವರ್ಷಗಳ ದೆಸೆಯಿಂದ ಒಬ್ಬರ ವೃತ್ತಿಚ್ಛೇದ ಮಾಡಿದ ಪಾಪಕ್ಕೇಕೆ ಗುರಿಯಾಗಬೇಕು?

ವಿದ್ಯಾಖಾತೆಯ ಮಂತ್ರಿ, ಡಾಯರೆಕ್ಟರ, ಲೋಕಲಬೋರ್ಡಿನ ಪ್ರೆಸಿಡೆಂಟ ಮೊದಲಾದವರು ರಾವುಂಡಟೇಬಲ ಪರಿಷತ್ತಿನಂತೆ ಕೂಡಿ, ಈ ವಿಷಯದ ನಿರ್ಣಯವನ್ನು ಸಮಾಧಾನವಾಗಿ ಮಾಡಿಕೊಳ್ಳಬೇಕೆಂದು ಕೆಲವರು ಸೂಚಿಸಿದ್ದಾರೆ ಆತೆರವಾಗಿ ಪ್ರಯತ್ನ ಮಾಡಬೇಕೆಂದು ನಾವೂ ಹೇಳುತ್ತೇವೆ ಲೋಕಲಬೋರ್ಡುಗಳು ಈ ಹಾದಿಗೆ ಬರದಿದ್ದರೆ ಇವು ಅನವಶ್ಯಕವಾದ ಸತ್ಯಾಗ್ರಹ ಮಾಡಲಿಸಿಸಿವೆಂದು ಬಗೆದು ಇವಕ್ಕೆ ಎಚ್ಚರಿಕೆ ಬರುವಂಥ ಯಾವದೊಂದು ಉಪಾಯ ಮಾಡಿದ ಹೊರ್ತು ಅನ್ಯ ಉಪಾಯವೇ ಇಲ್ಲದಂತಾಗುತ್ತದೆ. ಮೂಗು ಹಿಡಿದ ಹೊರ್ತು ಬಾಯಿ ತೆರೆಯುವದಿಲ್ಲ.

ಕಯ್ಯಿಂದಾಗದಿದ್ದರೆ ರಾಜೀನಾಮೆ ಕೊಡಬೇಕು.

ಧಾರವಾಡದ ಟ್ರೇನಿಂಗ ಸ್ಕೂಲಿಗೆ ಕಡೆಯ ಮಂಗಳಾರುತಿಯಾಯಿತು. ಕರ್ನಾಟಕದ ಲೋಕಲಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳು ಕುಂಭಕರ್ಣನ ನಿದ್ದೆ ಮಾಡುತ್ತವೆಂದರೂ ಸಲ್ಲುವದು. ಹಾಗೆ ಗುಜರಾಥದ ಶೋಚನೀಯ ಸ್ಥಿತಿಯಾಗಿಲ್ಲ ಅಹಮದಾಬಾದಿನಲ್ಲಿಯೂ ಟ್ರೇನಿಂಗ ಸ್ಕೂಲುಂಟು. ಅದಕ್ಕೂ ಸುದರ್ಶನ ಚಕ್ರ ಬೆನ್ನು ಹತ್ತಿದೆ. ಬ್ರಿಟಿಶ ಗುಜರಾಥದಲ್ಲಿ ಇದೊಂದೇ ಟ್ರೇನಿಂಗ ಸ್ಕೂಲಿರುವದು. ಇದನ್ನು ಬಂದು ಮಾಡಬಾರದು, ಬಂದು ಮಾಡದಂತೆ ಸರಕಾರಕ್ಕೆ ಆಲೋಚನೆಯನ್ನು ದಿವಾನರಾದ ದೇಸಾಯಿಯವರು ಹೇಳಬೇಕೆಂದು ಅಲ್ಲಿಯ ನಾಗರಿಕರ ಮತವು. ಅಹಮದಾಬಾದಿನ ಸ್ಕೂಲ ಬೋರ್ಡಿನ ಕಮಿಟಿ ಕೂಡಿ, ಇದೇ ತರಹವಾಗಿ ಠರಾವು ಪಾಸ ಮಾಡಲ್ಪಟ್ಟಿತು. ಹಿಂದಕ್ಕೆ ಬೋರ್ಡಿನ ವ್ಹಾಯಿಸ ಚೇರಮನ್ನರಾಗಿದ್ದ ಶ್ರೀ ಕಾಲಿದಾಸ ಜವ್ಹೇರಿಯವರು ದಿವಾನರಿಗೆ ಖಂಡತುಂಡಿನ ಆಲೋಚನೆ ಹೇಳಿದ್ದಾರೆ. ಸರಕಾರದವರು ಟ್ರೇನಿಂಗ ಸ್ಕೂಲನ್ನು ಬಂದು ಮಾಡುವಂತೆ ದುರಾಗ್ರಹಿಸಿದರೆ ದಿವಾನರಾದ ಸಾಮಳದಾಸ ದೇಸಾಯಿಯವರು ದಿವಾನಗಿರಿಗೆ ರಾಜೀನಾಮೆ ಕೊಡಬೇಕೆಂದು ಶ್ರೀ. ಜವ್ಹೇರಿಯವರು ಅನ್ನುತ್ತಾರೆ. ಇದೇ ತರದ ಠರಾವು ಮತ್ತು ಭಾಷಣಗಳನ್ನು ಕರ್ನಾಟಕದ ಮ್ಯುನಿಸಿಪಾಲಿಟಿ ಮತ್ತು ಲೋಕಲ ಬೋರ್ಡುಗಳೇಕೆ ಮಾಡಬಾರದು?

ಮದ್ರಾಸದ ಮಂತ್ರಿಗೆ ಬುದ್ಧಿ ಬಂತು.

ಮದ್ರಾಸ ಸರ್ಕಾರ ಮಂತ್ರಿಯಾದ ಶ್ರೀ ಆರೋಗ್ಯಸ್ವಾಮಿ ಮೊದ್ಲಿಯಾರರು ಅಬಕಾರಿ ಖಾತೆಯ ಮೇಲ್ವಿಚಾರಣಾ ಕರ್ತರಾಗಿದ್ದಾರೆ. ಹಿಂದೂ ಮುಸಲಮಾನರು ಮದ್ಯದ ವ್ಯಾಪಾರವನ್ನು ನಿಲ್ಲಿಸಲೇಬೇಕೆಂಬ ಮತದವರಾದರೂ, ದುಡ್ಡಿನ ಅಡಚಣಿಯ ಮೂಲಕ ಈ ವಿಚಾರಕ್ಕೆ ಅವರು ಶಾಂತಿರಸ್ತು, ತುಷ್ಟಿರಸ್ತು ಎಂದು ಆಶೀರ್ವಚನ ಹೇಳುತ್ತಾ ಬಂದರು. ಆದರೆ ಈಗ ಅವರಿಗೇ ಬುದ್ಧಿ ಬಂದು, ಅವರು ದೇಶೀ ಮತ್ತು ವಿಲಾಯತಿಯ ಎರಡೂ ಶರೆಯ ವ್ಯಾಪಾರವನ್ನು ನಿಲ್ಲಿಸಬೇಕೆಂದಿದ್ದಾರೆ. ಇವರು ಅನ್ನುವದೇನಂದರೆ-

ನಾನು ಈಗ ಮದ್ಯಪಾನವನ್ನು ಪೂರ್ಣ ಬಂದು ಮಾಡಬೇಕೆಂಬ ಮತದವನಾಗಿದ್ದೇನೆ ಶರೆ ಮಾಡಬಾರದು. ಮಾರಬಾರದು ಮತ್ತು ಪರದೇಶದಿಂದಲೂ ತರಿಸಬಾರದೆಂದು ನನ್ನ ಮತವು ವಿಲಾಯತಿಯಿಂದ ಶರೆ ತರಿಸುವದಕ್ಕೆ ವಿಶೇಷವಾದ ಆತಂಕ ಕಟ್ಟಿದಂಥ ಜಿಲ್ಲೆಯಲ್ಲಿ ಮೊದಲು ಸುಧಾರಕ್ಕಸಿಗೆ ಎದ್ದಲಗಾಟ ಕೊಡುವೆನು. ಮತ್ತು ಕ್ರಮೇಣ ಬೇರೆ ಜಿಲ್ಲೆಗಳಲ್ಲಿಯೂ ಈ ನಿಯಮ ಹಚ್ಚುವೆನು. ಅಬಕಾರಿ ಕಾಯದೆಯಲ್ಲಿ ದುರಸ್ತ ಮಾಡುವದಕ್ಕೆ ಹಿಂದುಸ್ಥಾನ ಸರಕಾರದ ಸಮ್ಮತಿ ಬೇಕು. ಈ ಹುಕುಮಿಗಾಗಿ ನಾನು ಬರೆದಿದ್ದು, ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ.

ಸಾಹೇಬರು ಸುಳ್ಳಾಡುತ್ತಾರೇನು?

ಸಾಹೇಬರು ಬೇಕಾದಂಥ ದೊಡ್ಡ ಅಧಿಕಾರ ಪಡೆಯಲಿ; ಸ್ವಾರ್ಥ ಮತ್ತು ಸ್ವದೇಶ ಹಿತ ಬಂದ ಕೂಡಲೆ ಬೇಕಾದಂಥ ಕೃತಿ ಮಾಡುತ್ತಾರೆಂಬದಕ್ಕೆ ಕ್ಲೈವನ ಒಂದು ಉದಾಹರಣೆ ಸಾಕು. ಕಲಕತ್ತೆಯಲ್ಲಿ ಬ್ಲ್ಯಾಕಹೋಲ ಜನರಲ್ಲರಾಗಿದ್ದ ಹಾಮಸ್ನರೆಂಬವರು ಹಿಂದೂ ಜನರು ಸ್ವರಾಜ್ಯಕ್ಕೆ ಹೇಗೆ ಅಪಾತ್ರರಿದ್ದಾರೆಂಬದನ್ನು ಕೆಳಗೆ ಹೇಳಿದ ಒಂದಕ್ಕೊಂದು ಹಿರಿದಿನ ಸುಳ್ಳುಗಳಿಂದ ಹೇಳುತ್ತಾರೆ

೧ ಮ.ಹಾತ್ಮಾ ಗಾಂಧಿ ಮತ್ತು ಸ್ವರ್ಗವಾಸಿ ದಾಸರನ್ನು ಸೆರೆಗಕ್ಕೆ ಕಳಿಸಿ, ಬ್ರಿಟಿಶ ಸಾಮ್ರಾಜ್ಯಕ್ಕಾಗಿ ಹಿಂದುಸ್ಥಾನವನ್ನು ಉಳಿಸಿಗೊಂಡಿತು.

೨ ಈ ಮೂರು ಸಾದ ಶಾಸನ ೧೯ ದಿವಸ

ಗಳ ಪರ್ಯಂತರ ಡಿಫೆನ್ಸ ಹೇಳಿದನು ಆದರೆ ಒಂದು ದಿವಸ ಕೂಡ ವಿಚಾರವಂತನಂಥ ಮಾತಾಡಲೇ ಇಲ್ಲ.

೩ ಕಲಕತ್ತೆಯಲ್ಲಿ ಯುನಿವರ್ಸಿಟಿಯುಂಟು ಅಲ್ಲಿ ಏನು ಕಲಿಸುತ್ತಾರೆಂಬದನ್ನು ದೇವರೇ ಬಲ್ಲ ಇಲ್ಲಿಯ ಪರೀಕ್ಷೆಯ ಪ್ರಶ್ನೆಯ ಕಾಗದಗಳು ಎರಡು ದಿವಸ ಮುಂಚಿತವಾಗಿ ಪೇಟೆಯಲ್ಲಿ ಕಾಸಿಗೊಂದರಂತೆ ಮಾರುತ್ತವೆ.

೪ ಯಾವನೊಬ್ಬ ಹಿಂದುವಿಗೆ ದೊಡ್ಡ ಅಧಿಕಾರ ದೊರೆತರಾಯಿತು ತನ್ನ ಬಳಗದವರನ್ನೂ ಬಂಗಾಲದವರನ್ನೂ ಕೆಲಸದಲ್ಲಿ ಸೇರಿಸುವನು.

೫ ಹಿಂದೂ ಜನರು ಮೂಲತಃ ಪ್ರಾಮಾಣಿಕರಲ್ಲವೇ ಅಲ್ಲ.

೬ ಇದೇ ಕಾರಣಕ್ಕಾಗಿ ಹಿಂದೂ ಜನರು ಸ್ವರಾಜ್ಯಕ್ಕೆ ಪಾತ್ರರಿರುವದಿಲ್ಲ.

ದರಿದ್ರ ನಾರಾಯಣರು–

ಕಲಕತ್ತೆ, ಮುಂಬಯಿಯಂಥ ಭಾಗ್ಯನಗರಗಳಲ್ಲಿ ಅರಮನೆಗಳನ್ನು ನೋಡುತ್ತಿರುವಾಗ, ಅನಾಥ ಜನರು ಫಿಲ್ಲಲಿಕ್ಕೂ ಮಲಗಲಿಕ್ಕೂ ನೆರಳು ಇಲ್ಲದೆ ನರಳುತ್ತಿರುವದನ್ನು ಕಾಣುತ್ತೇವೆ. ಇಂಥ ದರಿದ್ರ ನಾರಾಯಣರಿಗೆ ವಿಶ್ರಾಂತಿಸ್ಥಾನ ಮಾಡಿ ಕೊಡುವದಕ್ಕಾಗಿ ದೇಶಬಂಧುವಿನ ಹೆಸರಿನಿಂದ ಫಂಡು ಕೂಡಿಸುವ ಉದ್ಯೋಗ ನಡೆದಿದೆ. ಶ್ರೀಮಂತರು ಉದಾರತೆಯಿಂದ ದ್ರವ್ಯ ಸಹಾಯ ಮಾಡುತ್ತಿದ್ದಾರೆ. ವಿಜಾಪೂರ ಮ್ಯುನಿಸಿಪಾಲಿಟಿಗೆ ಇಂಥ ಸುಬುದ್ಧಿ ಹುಟ್ಟಬೇಕಲ್ಲವೇ?

ಕಲಬುರ್ಗಿಯ ನ್ಯಾಯ–

ಕಲಬುರ್ಗಿಯ ವಿದ್ಯಾಖಾತೆಯವರು ಅಲ್ಲಿಯ ವಕೀಲರ ಮೇಲೆ ಮಾನಹಾನಿಯಾಗುವಂಥ ಟೀಕೆ ಮಾಡಿದರು. ವಕೀಲರು ಇವರ ಮೇಲೆ ಹೈದರಾಬಾದಿನ ಕೋರ್ಟಿನಲ್ಲಿ ಫಿರ್ಯಾದಿ ಮಾಡಿದ್ದಾರೆ. ಫಿರ್ಯಾದಿಯ ವಿಷಯವಾಗಿ ವಕೀಲ ಮತ್ತು ಜ್ಯುಡಿಶ್ಯಲದಲ್ಲಿ ಗಳಿವಳಿಯಾಗಿದ್ದು, ಇವರು ಮೇಲಿಂದ ಮೇಲೆ ಕಮಿಟಿ ಕೂಡುತ್ತಿದ್ದಾರೆ ಈ ಮಧ್ಯದಲ್ಲಿ ವಕೀಲರ ಹೆಸರಿನಿಂದ ದಿನಾಲು ಅಸಭ್ಯ ಮತ್ತು ಆಘಪ್ರದ ಪತ್ರಗಳೂ ನಾಚಿಕೆಗೆಟ್ಟಂಥ ಭಂಡತನದ ಪತ್ರಗಳೂ ಹೋಗುತ್ತಿರುವವು.

ಕಟ್ಟಿಗೆಯ ಹಿಟ್ಟಿನಿಂದ ಸಕ್ಕರೆ–

ಸ್ವೀಡನದ ರಸಾಯನ ಶಾಸ್ತ್ರಜ್ಞರಾದ ಹೇಗಲಂಡರೆಂಬುವ ಸಾಹೇಬರು ಕಟ್ಟಿಗೆಯ ಕೊರೆದ ಪುಡಿಯಿಂದ ಸಕ್ಕರೆ ಮಾಡಬಹುದೆಂಬ ಹೊಸ ಶೋಧ ಮಾಡಿ, ಅದರ ಕೃತಿಯನ್ನು ರಸಾಯನ ಶಾಸ್ತ್ರಜ್ಞರಿಗೆ ತೋರಿಸುತ್ತಿದ್ದಾರೆ. ನೂರು ಶೇರು ಪುಡಿಯಲ್ಲಿ ೬೦ ಶೇರಿನ ತನಕ ಸಕ್ಕರೆಯಾಗುವದೆಂದೂ, ಇದು ಲಾಭಕರ ವ್ಯಾಪಾರವಾಗುವದೆಂದೂ ಹೇಳುತ್ತಾರೆ. ಸ್ವೀಡನ ದೇಶದಲ್ಲಿ ಗೊಂಡಾರಣ್ಯದಂಥ ಅರಣ್ಯಗಳುಂಟು. ಇಲ್ಲಿಯ ಕಟ್ಟಿಗೆಯ ಪುಡಿಯಿಂದ ಪ್ರತಿವರ್ಷ ಲಕ್ಷಾವಧಿ ಟನ್ನ ಸಕ್ಕರೆ ಹೊರಟು, ಇದರ ವ್ಯಾಪಾರವು ಪ್ರಚಂಡ ಪ್ರಮಾಣದಿಂದ ಬಲಿಯುವದೆಂದು ತಜ್ಞರ ಮತವಾಗಿರುತ್ತದೆ.

ಹೊಡಿಸಿಕೊಂಡ ಕಲ್ಲಿನ ಲಿಲಾವು:

ಮಧುರೆಯಲ್ಲಿ ಕಾಂಗ್ರೆಸದ ಅಧ್ಯಕ್ಷರಾಗಿದ್ದ ಶ್ರೀ ಶ್ರೀನಿವಾಸ ಅಯ್ಯಂಗಾರರ ಸಾರ್ವಜನಿಕ ವ್ಯಾಖ್ಯಾನವಾಯಿತು. ವ್ಯಾಖ್ಯಾನಕ್ಕೆ ಬಂದಿದ್ದ ಕೆಲ ಅನಿಷ್ಟರುಗಳು ಸಭೆಯಲ್ಲಿ ಗೊಂದಲವೆಬ್ಬಿಸಿದರು ಒಬ್ಬನಂತೂ ಅಯ್ಯಂಗಾರರ ಮೇಲೆ ಕಲ್ಲು ಎಸೆದನು. ಗುಂಪು ಶಾಂತವಾದ ಬಳಿಕ ಕಲ್ಲಿನ ಲಿಲಾವಾಯಿತು. ಮೂರನೆಯ ಸವಾಲು ಐದು ರೂಪಾಯಕ್ಕಾಯಿತು. ಹೂವಿನ ಮಾಲೆ, ಉಂಗುರ ಮುಂತಾದವುಗಳ ಲಿಲಾವಾಗುತ್ತಿದ್ದವು. ಕಲ್ಲು ಲಿಲಾವಾದದ್ದು ಇದೇ ಮೊದಲು

ಪುಣೆಯಲ್ಲಿ ಕಾಯದೆಭಂಗ–

ನಿನ್ನಿನ ಸಂಚಿಕೆಯಲ್ಲಿ ಪ್ರಸಿದ್ಧ ಮಾಡಿದಂತೆ ಪೈಸಾಫಂಡಿನ ರಾನಡೆಯವರು ಮ್ಯಾಜಿಸ್ಟ್ರೇಟರ ಹುಕುಮನ್ನು ಮುರಿದು, ಬುಧವಾರ ಚೌಕಿನಲ್ಲಿ ಗಂಟೆ ಬಾರಿಸುತ್ತಾ ಮೇಲಿಂದ ಮೇಲೆ ಹಸ್ತಪತ್ರಿಕೆಗಳನ್ನು ಹಂಚಿದರು. ಒನ್ನೊಮ್ಮೆ ಫರಾಸಖಾನೆ (ಪೋಲೀಸ ಸ್ಟೇಶನ) ಯ ತನಕ ಹೋಗುತ್ತಿದ್ದರು.

ವಿವಿಧ ವರ್ತಮಾನಗಳು

—o—

ಬಡೋದೆ ಸರಕಾರದವರು ತಮ್ಮ ದೇಶದಲ್ಲಿ ಬರುವ ಪರದೇಶದ ಸಕ್ಕರೆಯ ಮೇಲಿನ ಜಕಾತಿಯನ್ನು ತೆಗೆದು ಹಾಕಿದರು. ಇದು ಬಂಗಾಲಿ ಮಣಕ್ಕೆ ಒಂದು ರೂಪಾಯಿ ಇತ್ತು.

ಶ್ರೀಮತ್ ರಾಘವೇಂದ್ರಸ್ವಾಮಿಗಳವರ ಆರಾಧನೆಯು ಆಷಾಢ ಶುದ್ಧ ದ್ವಿತೀಯಾ, ತೃತೀಯಾ ಮತ್ತು ಚತುರ್ಥಿ ಈ ಮೂರು ದಿವಸ ಮಂತ್ರಾಲಯದಲ್ಲಾಗುವದು.

ವಿಜಾಪೂರ ಮ್ಯುನಿಸಿಪಾಲಿಟಿಯವರು ೫೦೦೦ ರೂಪಾಯಿ ವೆಚ್ಚ ಮಾಡಿ, ಬಾದಶಹರ ಶಿಲಾಮೂರ್ತಿಯನ್ನು ನಿಲ್ಲಿಸುವರು. ಬಾದಶಹರ ಹೆಸರಿನಿಂದ ಅನಾಥರಿಗಾಗಿ ಒಂದು ಧರ್ಮಶಾಲೆ ಕಟ್ಟಿದರೆ ಸ್ವಾರ್ಥವೂ ರಾಜನಿಷ್ಠೆಯೂ ಸಾಧಿಸುತ್ತಿತ್ತಲ್ಲವೇ?

ನಿಜಾಮರು ಹೈದರಾಬಾದಿನ ರೆಸಿಡೆಂಟರು ತಮ್ಮ ಸೇಕ್ರೆಟರಿಯನ್ನು ಕರಕೊಂಡು ಸಿಮ್ಲಾಕ್ಕೆ ಹೋಗುವರು. ಹೈದರಾಬಾದಿನ ಕೋರಸ್ಥಾನವು ಇನ್ನೂ ತೀರಿದಂತೆ ತೋರುವದಿಲ್ಲ.

ಹೈದರಾಬಾದಿನಲ್ಲಿ ಪೋಲಿಸ ಕಮಿಶನರಾಗಿದ್ದ ಮಿ. ಕ್ರಾಫರ್ಡ ಸಾಹೇಬರಿಗೆ ನಿಜಾಮ ಸಾಹೇಬರು ೧೫೦೦೦ ರೂಪಾಯಿಗಳ ಇನಾಮು ಕೊಟ್ಟರು.

ಮುಂಬಯಿಯಲ್ಲಿ ಯಾವನೊಬ್ಬನು ಸತ್ತನಂದರೆ ಆತನ ಹೆಸರಿನ ಮರಣದ ಪಾಸು ವೈದ್ಯರು ತರ್ಕ ಸ್ಮಶಾನದಲ್ಲಿ ಅಂತ್ಯವಿಧಿಗೆ ಅಪ್ಪಣೆ ದೊರೆಯುವದಿಲ್ಲ ಒಬ್ಬ ವೃದ್ಧನಾದ ಮುಸಲಮಾನನು ಸಾಯುವ ಮುಂಚಿತವಾಗಿ ಇಂಥ ಪಾಸ ಪಡಕೊಂಡು, ಆತನನ್ನು ಅಂತ್ಯವಿಧಿಗೆ ವೈದ್ಯರು ಹೊರಡಿದ್ದದೆ.

ಜಬಲಪೂರದ ಶ್ರೀ. ನರಸಿಂಹದಾಸಜಿ ಎಂಬ ಹೆಸರಿನ ಮಾರವಾಡಿ ಗೃಹಸ್ಥರು ನಾಗಪೂರದ ಕಾಯದೆಭಂಗಕ್ಕಾಗಿ ಹ್ವಾಲಂಟಿಯರರನ್ನು ಕಳಿಸಿದ್ದಾರೆ. ಅವಶ್ಯಕಂಡಂತೆ ಹೆಚ್ಚಿಗೆ ಜನರನ್ನು ಕಳಿಸುವರು.

ಬಡೋದೆ ಸರಕಾರದಿಂದ ಸ್ಕಾಲರಶಿಪ್ಪು ಪಡೆದ ಒಬ್ಬ ಕುಣುಬನು ಬಿ. ಎ. ಪರೀಕ್ಷೆಯಲ್ಲಿ ಪಾಸಾಗಿದ್ದಾನೆ.

ಬೆಂಗಳೂರಲ್ಲಿ ಖಾದಿ ಪ್ರದರ್ಶನದ ವೇಳೆಯಲ್ಲಿ ನೂಲುವ ಪಂದ್ಯ ನಡೆಯುವದು. ಇದಕ್ಕಾಗಿ ದರಬಾರಿನವರು ಐನೂರು ರೂಪಾಯಿ ಕೊಟ್ಟಿದ್ದಾರೆ. ಹಿಂದುಸ್ಥಾನದಲ್ಲಿ ನೂಲುವದರಲ್ಲಿ ಹೆಸರಾದವರು ಪಂದ್ಯಕ್ಕೆ ಬರುವರು.

ಇಜಿಪ್ತದ ಸುಲ್ತಾನರು ಮುಖ್ಯ ಪ್ರಧಾನಿಯಾದ ಸಾರವತ ಪಾಶ್ಯಾನ ಕೂಡ ಇಂಗ್ಲಂಡಕ್ಕೆ ಹೋಗುವರು. ಕೆಲಕಾಲ ಇವರು ಬಕಿಂಗಹ್ಯಾಮ ಅರಮನೆಯಲ್ಲಿ ಬಾದಶಹರ ಅತಿಥಿ ಆಗುವರು

ಸಾಧಿಸಿ ಬರೆದನು ಭಾಷ್ಯ ||
ಈ ಧರೆಯೊಳುವರ ಗುರುಪದವಾದಾ |
ಆದಿ ಪೀಠವ ಭೂಷಿಸಿದಾ ||೨೧||
ಜಗದಿ ಗುರುವು ತಾನಾಗುತ ಅಗಲೆ |
ಸಾಗಿದಾ ದಿಗ್ವಿಜಯಕ್ಕೇ ||
ಬಾಗಿಸಿದನು ವಿದ್ಯಾವಂತರ ಶಿರವನು |
ಬೇಗದಿ ನಿಜ ಚರಣಕ್ಕೆ ||೨೨||
ವಿಜಯದ ವಿದ್ಯಾರಣ್ಯನು ಎಂಬಾ |
ವಿಜಯ ಸೂಚಕದ ನಾಮಪನೆ ||
ಜಗದಲಿ ಸಾರುತೆ ಸುಗುಣಯುತನವ |
ನಿಜ ಧರ್ಮದ ಸೇವೆಗೈದಾ ||೨೩||
ಬಾಲ ನುಡಿಯಿಂದಾ ಪೇಳಿದೀ ಚರಿತವಾ |
ಬಾಲ ಕೃಷ್ಣನ ಸುತನನೂ ||
ಶೀಲ ಗುಣದ ಒಲ ಧೀವನ ಲೀಲೆಯು |
ಕಾಲಕಾಲದಿ ಪಾಡುವನೂ ||೨೪||

ನೋಟೀಸಿನ ಉತ್ತರಾ

—o—

ಮಲ್ಲಪ್ಪಾ ಚಿನ್ನ ಗೋಣೆಪ್ಪಾ ಕಟಗಿ ಸಾ| ಉಳ್ಳೀಗಡ್ಡಿ ಓಣಿ ಧಾರವಾಡ ಈತನಿಗೆ—

ಕೆಳಗ ಹಚ್ಚಿಟಿನ ಗುರ್ತಾ ಮಾಡುವ ಗೋಣೆಪ್ಪಾ ತಂದಿ ಹುಲಿಗೆಪ್ಪಾ ಕಟಗಿ ಈತನು ನಿನಗೆ ಈ ನೋಟೀಸಿನಿಂದ ಉತ್ತರ ಕೊಡುವದೇನಂದರೆ-

ನೀನು ಧಾರವಾಡ ರಾಜಹಂಸ ಪತ್ರದ ತಾರೀಖು ೨೧ ಜೂನ ೧೯೨೭ ನೆಯ ಪತ್ರದಲ್ಲಿ ಕೊಟ್ಟ ನೋಟೀಸು ಮುಟ್ಟಿತು. ನಾನು ನನ್ನ ೧೯೨೬ ನೇ ಇಸವಿ ಜೂನ ತಿಂಗಳ ೨೧ ನೇ ತಾರೀಖಿಗೆ ಕೊಟ್ಟ ನೋಟೀಸಿಗೆ ಉತ್ತರವೆಂದು ನೀನು ನನ್ನ ಮೇಲೆ ಒರೋಬರಿ ಒಂದು ವರ್ಷದ ನಂತರ ಉತ್ತರಾ ಛಾಪಿಸುತ್ತೀದಿ ಆದರೆ ಅದರಲ್ಲಿ ಬರೆದ ಯಾವತ್ತು ಮಜಕೂರು ಸುಳ್ಳು ಮತ್ತು ಮತಲಬಿಯದು ಇರುತ್ತದೆ. ನನ್ನ ನೋಟೀಸಿಗೆ ಉತ್ತರ ಕೊಡಬೇಕೆಂದು ಯಾರೋ ಈಗ ದುರಾಲೋಚನೆ ಹೇಳಿದ್ದರಿಂದ ಒಂದು ವರ್ಷದ ಮೇಲೆ ಉತ್ತರಾ ಬರಿಸಿರುತ್ತೀದಿ ಇದರಿಂದ ನಿನ್ನ ಕಪಟ ಮಾತ್ರ ತೋರಬಿತ್ತು ನಾನು ನಿನ್ನ ನೋಟೀಸಿನಿಂದ ಬಾಂಧಾಯಿಸುವದಿಲ್ಲ. ನಾನು ನನ್ನ ನೋಟೀಸಿನಲ್ಲಿ ಬರೆದ ಪ್ರಕಾರ ನನ್ನ ಪಿತ್ರಾರ್ಜಿತ ಆಸ್ತಿಗೆ ಪೂರ್ಣ ಮಾಲೀಕನೂ, ಒಹಿವಾಟದಾರನೂ ಇರುತ್ತೇನೆ ಈ ನಂತರ ನೋಟೀಸಿಗೆ ಉತ್ತರವೆಂದು ಪ್ರತ್ಯುತ್ತರ ಕೊಟ್ಟರೆ- ಅದು ನನ್ನ ಮೇಲೆ ಬಾಂಧಾಯ ಆಗಾರದು ಈ ನೋಟೀಸಿನ ಖರ್ಚು ನಿನ್ನ ಮೇಲುಂಟು. ಅಂತಾ ಕೊಟ್ಟ ಉತ್ತರಾ-

ತಾ|| ೨೪ ಜೂನ ೧೯೨೭ ನೆಯ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಗೋಣೆಪ್ಪಾ ದಸ್ತುರ ತಂದಿ ಹುಲಿಗೆಪ್ಪಾ ಕಟಗಿ ಈತನ ಕೈದು ಇರುತ್ತದೆ.

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ- ರಾ. ಸಾ. ಅಣ್ಣಾಚಾರ್ಯ ಕಟ್ಟಿ ವಕೀಲ ಧಾರವಾಡ ಇವರ ಸಾಗ್ವಾನಿ ಪೆಟ್ಟಿಗೆ (ಆಫೀಸ ಬಾಕ್ಸ) ಅಂದರೆ ಭಂಗಾರ, ಬೆಳ್ಳಿ, ದುಡ್ಡು ಇಲ್ಲದ್ದು ಖಾಸಗಿ ಕಾಗದ ಪತ್ರಗಳಿದ್ದದ್ದು ಧಾರವಾಡ ಜಿಲ್ಹಾ ಹಾವೇರಿ ಹದ್ದಿಯಲ್ಲಿ ಕಳೆದು ಹೋಗಿರುತ್ತದೆ. ಈ ಪೆಟ್ಟಿಗೆಯು ಯಾರಿಗಾದರೂ ಸಿಕ್ಕಿದ್ದರೆ ಒಂದು ವಾರದಲ್ಲಿ ತಂದು ಕೊಟ್ಟವರಿಗೆ ಯೋಗ್ಯ ಇನಾಮು ಕೊಡುವದರಲ್ಲಿ ಬರುವದು. ತಾರೀಖು ೨೧-೬-೨೭ನೇ ಇಸ್ವಿ

ಅನಂತಾಚಾರ್ಯ ವೆಂಕಣ್ಣಾಚಾರ್ಯ ಚಿಕ್ಕೇರೂರ
ಧಾರವಾಡ ಜಿಲ್ಲಾ-

ವಿಶೇಷ ಸೂಚನೆ:— ಪೆಟ್ಟಿಗೆ ಸಿಕ್ಕವರು ಕೆಳಗೆ ಬರೆದ ಪತ್ತೆಗೆ ತಿಳಿಸಿದರೆ ಕೆಳಗೆ ಸಹಿ ಮಾಡಿದ ಅನಂತಾಚಾರ್ಯ ಚಿಕ್ಕೇರೂರ ಇವರಿಗೆ ತಿಳಿಯುವದು.

ರಾ. ಸಾ. ಕಟ್ಟಿ ವಕೀಲ, ಕಿಲ್ಲೆ ಧಾರವಾಡ — ಅಥವಾ — ಸು. ಹ. ಭಾದ್ರಿ ವಕೀಲ, ಹಾವೇರಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.
೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು
ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!
ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.
ಬೇಗ ಸಂಗ್ರಹಿಸಿರಿ
ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ನೋಟೀಸು.

—o—

ಸಿದ್ದಿ ಕೋಂ. ಅಡಿವೆಪ್ಪಾ ಶಂಕರಗೌಡ ಸಾ. ಪಟ್ಟದ ಕಲ್ಲ ತಾ. ಬದಾಮಿ ಇರೋದು ತಂದಿ ಯಲ್ಲಪ್ಪಾ ದಾಗಣ್ಣವರ ಸಾ. ಹೊಸೂರ ತಾ. ಬದಾಮಿ ಇವರ ಮನಿಯಲ್ಲಿ ಈಕೆಗೆ—

ಕೆಳಗೆ ಸಹಿ ಮಾಡಿದವನಿಂದ ತಿಳಿಸೋದೇನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ವ್ಯಭಿಚಾರಿ ಇದ್ದದ್ದು ಕಂಡು ತಿರಾಯುತರ ಮಾಡಿಪತ್ರ ಬಿಟ್ಟಿರುತ್ತೇನೆ ನನ್ನ ಮನಿಯಿಂದ ಹೇಳದೆ ಕೇಳದೆ ಓಡಿ ಹೋದ ಹೋಗೋ ಕಾಲಕ್ಕೆ ನನ್ನ ದಾಗಿ ಕೆಳಗೆ ಬರೆದವುಗಳನ್ನು ಮನೆಗೆ ತೆಗೆದುಕೊಂಡು ಹೋಗಿರತೀದಿ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ಸದರ ದಾಗಿನ ನನ್ನ ಲಗ್ನದ ಖರ್ಚು ಕೊಟ್ಟು ಪಾವತಿ ತೊಗೊಂಬೋದಲ್ಲದೆ ಫಾರೀಖತು ಸಹ ಕೊಟ್ಟು ಹೋಗಬೇಕು. ಈ ಪ್ರಕಾರ ಮಾಡದಿದ್ದರೆ ನಿನ್ನ ಮೇಲೆ ಇಲಾಜ ಮಾಡಲಾಗುವದು ಈ ನೋಟೀಸು ವಗೈರೆ ಖರ್ಚ ನಿನ್ನ ಮೇಲೆ ಆದೆ ಸವಕ್ಕ ನಿನ್ನ ಲಗ್ನ ಸಂಬಂಧಕ್ಕ ವುಳಿದಿಲ್ಲಾ ನೀನು ನಿನ್ನ ಮರ್ಜಿ ಪ್ರಕಾರ ಇರಬೇಕು ನಾನು ನನ್ನ ಮರ್ಜಿ ಪ್ರಕಾರ ಇರತೇನೆ ದಾಗೀನೆ ತಪಶೀಲು-

೧ ಲಗ್ನದ ಶೀರಿ ಕಿ|| ರೂ|| ೨೫
೧ ಬೆಳ್ಳಿ ಬಂದಿ ಕಿ|| ರೂ| ೨೪
೧ ಭಂಗಾರದ ಬಳಿ ಕಿ| ರೂ| ೧೨೫
೧ ಗುಂಡಿನ ಟೀಕಿ ಭಂಗಾರದ್ದು ಕಿ| ರೂ ೬೦

ಈ ಪ್ರಕಾರ ಇಂತದೆ ತಿಳಿಯೋದು

ತಾರೀಖು ೨೧-೬-೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಅಡಿವೆಪ್ಪಾ ಬಿನ್ನ ಭೀಮಪ್ಪ ಶಂಕರಗೌಡ ಸಾಕೀನ ಪಟ್ಟದಕಲ್ಲ ತಾ| ಬದಾಮಿ.

ಈ ಪತ್ರಿಕೆಯನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ಸ್ವಾತಂತ್ರ್ಯಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೪ | ಧಾರವಾಡ ಶನಿವಾರ ತಾರೀಖು ೨೫ ನೇ ಜೂನ ೧೯೨೭ | ಸಂಚಿಕೆ ೧೩೪

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಕಾಲು ಗಳುಂಟು. ಗಾಲಿಯ ವ್ಯಾಸವು ೪೭ ಇಂಚು ಇರುತ್ತದೆ. ಆದ್ದರಿಂದ ಜನರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಇದಕ್ಕೆ ನೀರಿನ ಸೋರ ತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೭೫॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರ ಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ.

ಆಪರೇಟಿವ್ಹ್ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ... ಸಹಕಾರಿಯುಳ್ಳ ... ಪ್ರಕಾರ ... ಬ್ಯಾಂಕಿನ ವ್ಯವಹಾರದಲ್ಲಿ ... ಸನ್ನಿ.

ಬಡ್ಡಿ ... ಕೈಕೊಳ್ಳುತ್ತೇವೆ. ಹುಂಡಿ ಮೊದಲಾದ ... ಬ್ಯಾಂಕಿನಲ್ಲಿ ಪ್ರಕಾರ ... ಬಡ್ಡಿ ದರದ ... ಮಾಡಲಾಗುವದು.

ವಿವರ ... ಗಳನ್ನು ಬಂದು ಖುದ್ದ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಜಿ. ಬಳಾಪ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಇಟ್ಟು ತೆಗೆದುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳು ಒಂದ್ರುಪಾಯಿ ಆಗಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರಾತಿನ ದರಗಳು.

—o—

ತಿಂಗಳ ಕಾಲದ ಪತ್ರ ಪಟ್ಟಿಗೆ ... ರೂಪಾಯಿ ಮುಂದೆ ಪ್ರತಿಯೊಂದು ಸಲಕ್ಕೆ ಒಂದು ... ಆಣೆ ... ರೊಳಗೆ ... ಆಣೆ ... ಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ... ರಾಜಕೀಯ ಸಾರ್ವಜನಿಕ ಸೊಸೈಟಿಗಳ ಸಾಲಿಗೆ ಮುದ್ರಾಂಕ— ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ... ಆಣೆ ... ಕಾಲದವರ ಒಳಗೆ ಇನ್ನೂ ... ಕಾರಣ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾ

——

ವಿಜಯದ ವರ್ಗಣೀ ದರ

—[o][o]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರ
೬ "	೭—೦—೦ ರ
೪ "	೪—೦—೦ ರ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

——

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ... ವರ್ಷ ಪ್ರಾರಂಭವಾಗುವ ನಿಮಿತ್ತ ವಾರ್ಷಿಕ ಚಂದಾದಾರರು ... ರಿಂದ ವ್ಹಿ. ಪಿ. ಯನ್ನು ಕಳಿಸಿದೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ಪತ್ರಿಕೆ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾ

ವಿಜಯ.

ಧಾರವಾಡ ತಾ-೨೫-೬-೨೭ ನೇ ಇಸ್ವಿ

ಕರ್ನಾಟಕ ಟ್ರೇನಿಂಗ ಸ್ಕೂಲು.

ಮ್ಯುನಿಸಿಪಾಲಿಟಿ ವಿರುದ್ಧ ಲೋಕಲಬೋರ್ಡ.

ಇಲ್ಲಿಯ ಕರ್ನಾಟಕ ಟ್ರೇನಿಂಗ ಸ್ಕೂಲನ್ನು ಬಂದು ಮಾಡಬೇಕೆಂಬ ಸುದ್ದಿ ಬಂದ ಕೂಡಲೆ, ಧಾರವಾಡ, ಹುಬ್ಬಳ್ಳಿ, ಗದಗ ಮತ್ತು ವಿಜಾಪೂರದ ಮ್ಯುನಿಸಿಪಾಲಿಟಿಯವರು ಸ್ಕೂಲನ್ನು ಬಂದು ಮಾಡಬಾರದೆಂಬ ಪತ್ರವನ್ನು ವಿದ್ಯಾಖಾತೆಯವರಿಗೆ ಬರೆದರು. ಈ ನಾಲ್ಕು ಮ್ಯುನಿಸಿಪಾಲಿಟಿಗಳ ಹೊರತು ಬೇರೆ ಮ್ಯುನಿಸಿಪಾಲಿಟಿಗಳು ತಮ್ಮ ಮತವನ್ನು ಜಾಹೀರ ಮಾಡಿದಂತೆ ನಮ್ಮ ಕೇಳಿಕೆಯಲ್ಲಿಲ್ಲ. ಎಲ್ಲಿಯಾದರೂ ಒಂದೆರಡು ಇದ್ದರೆ ಅದೇನೂ ದೊಡ್ಡ ವಿಷಯವಲ್ಲ. ಬಹುತೇಕ ಮ್ಯುನಿಸಿಪಾಲಿಟಿಗಳು ಕುಂಭಕರ್ಣನ ನಿದ್ರೆ ಮಾಡುತ್ತಿರುವಂತಿರಬಹುದು.

ಈ ವಿಚಾರವು ಹೇಗೇ ಇರಲಿ; ಕೆಲ ಮ್ಯುನಿಸಿಪಾಲಿಟಿಗಳಾದರೂ ತಮಗೆ ಟ್ರೇನಿಂಗ ಸ್ಕೂಲು ಬೇಕೆಂದು ಬರೆದಿರುವದು ದುಃಖದಲ್ಲಿ ಸಂತೋಷವು. ಮ್ಯುನಿಸಿಪಾಲಿಟಿಗಳಂತೆ ಲೋಕಲಬೋರ್ಡುಗಳು ತಮ್ಮ ಕರ್ತವ್ಯದಲ್ಲಿ ಜಾಗರೂಕವಾಗಿರುವದಿಲ್ಲ. ಇಲ್ಲ ಧಾರವಾಡ ವಿಜಾಪೂರದ ಬೋರ್ಡುಗಳು ಟ್ರೇನ್ಡ ಶಿಕ್ಷಕರೇ ಬೇಡೆಂಬ ಆಗ್ರಹ ತೊಟ್ಟು, ಈಗ ಸತ್ಯಾಗ್ರಹದಂಥ ಸ್ವರೂಪ ಧಾರಣ ಮಾಡಿವೆ. ಬೆಳಗಾವಿಯಲ್ಲಿ ಶ್ರೀ ಚಿಕ್ಕೋಡಿಯವರು ಚೇರಮನ್ನ ಕೆಲಸ ಬಿಟ್ಟದ್ದರಿಂದ, ಅದೂ ಟ್ರೇನ್ಡ ಶಿಕ್ಷಕರು ಬೇಡೆಂಬ ಹುಚ್ಚನ್ನೇ ಹಿಡಿಯುವದು. ಕಾರಬಾರವು ತನ್ನ ಜವಾಬದಾರಿಯನ್ನು ಸರಕಾರದ ಮೇಲೆ ಹಾಕಿರುವದರಿಂದ, ಅದಕ್ಕೆ ಯಾವ ಸುಖದುಃಖದ ವ್ಯಾಪವೇ ಇರುವದಿಲ್ಲ.

ಮ್ಯುನಿಸಿಪಾಲಿಟಿಗೆ ಮಾತ್ರ ಟ್ರೇನ್ಡ ಶಿಕ್ಷಕರು ಬೇಕು. ಲೋಕಲಬೋರ್ಡಿಗೆ ಬೇಡೆಂಬುದು ಸಮೀಚೀನವಲ್ಲವೇ? ಸುಶಿಕ್ಷಿತರಿಂದ ಶಿಕ್ಷಣವನ್ನು ಪೂರೈಸುವಂಥ ಸಾಮರ್ಥ್ಯವು ತನ್ನಲ್ಲಿರದಿದ್ದರೆ ಈ ಬೋರ್ಡುಗಳು, ಕಾರವಾರದಂತೆ ಶಾಲೆಗಳನ್ನು ಸರಕಾರಕ್ಕೆ ಒಪ್ಪಿಸಿ, ಭೋಳೆತನವನ್ನು ತಪ್ಪಿಸಿಕೊಳ್ಳುವದೇ ಲೇಸು. ಕಾರ್ಯಕಾರಣ ಸಂಬಂಧವಿಲ್ಲದೆ, ಪ್ರಜರ ಕೋಪ ಶಾಪಗಳಿಗೆ ಗುರಿಯಾಗುವದರಿಂದ ಬರುವ ಪುರುಷಾರ್ಥವೇನು?

ವಿದ್ಯಾಖಾತೆಯವರು ಲೋಕಲಬೋರ್ಡಿನ ಮೇಲಿನ ಸಿಟ್ಟಿನಿಂದಲೇ ಟ್ರೇನಿಂಗ ಸ್ಕೂಲನ್ನು ಬಂದು ಮಾಡಿದರೆಂಬ ಜನಜನಿತವಾಗಿದೆ. ಇದು ದಿಟವೋ ಸಟಿಯೋ ಎಂದು ಯಾರು ಹೇಳುವರು? ಕೌನ್ಸಿಲದ ಮೆಂಬರು ಇದರ ಸ್ಪಷ್ಟೀಕರಣ ಮಾಡಿಕೊಳ್ಳತಕ್ಕದ್ದು. ಧಾರವಾಡದ ಸ್ಕೂಲಿನಂತೆ ಅಹಮದಾಬಾದಿನ ಸ್ಕೂಲೂ ಬಂದಾಗುವದು. ಸಮದುಃಖಿಗಳಾದ ಕರ್ನಾಟಕ ಹಾಗು ಗುಜರಾಥಿಯ ಮೆಂಬರರು ಒಂದು ವಿಚಾರದಿಂದ ಈ ವಿಷಯವನ್ನು ಕೌನ್ಸಿಲದಲ್ಲಿ ಎತ್ತಿದರೆ ಲಾಭವಾಗದೆ ಹೋಗದೆಂದು ನಮ್ಮ ನಂಬಿಗೆಯು.

ಕೋಚಿನ ಮ್ಯುನಿಸಿಪಾಲ್ಟಿಯ ಮೇಲೆ ಗದಾಪ್ರಹಾರ.

ಕೋಚೀನ ಸಂಸ್ಥಾನದಲ್ಲಿ ಇಂಗ್ಲಿಷ ದರಬಾರಕ್ಕೆ ಸೇರಿದ ಕೋಚಿನಪುರ ಉಂಟು. ಇಲ್ಲಿಯ ಮ್ಯುನಿಸಿಪಾಲಿಟಿಯು ಬಹಳ ತೀರ ಕೆಟವಾಯಿತು. ಮದ್ರಾಸ ಸರಕಾರದವರು ಮ್ಯುನಿಸಿಪಾಲಿಟಿಗೆ ಅನೇಕ ವಿಶೇಷಣಗಳನ್ನು ಅಲಂಕಾರವಾಗಿ ಕೊಟ್ಟಿದ್ದಾರೆ.

೧ ಮ್ಯುನಿಸಿಪಾಲಿಟಿಗೆ ತಿಳುವಳಿಕೆ ಇಲ್ಲ. ೨ ಬುದ್ಧಿ ದೌರ್ಬಲ್ಯವುಂಟು. ೩ ತನ್ನ ಕರ್ತವ್ಯ ಮಾಡಲು ಅಪಾತ್ರನಾಗಿದೆ. ೪ ಈ ಮೂಲಕ ಮ್ಯುನಿಸಿಪಾಲಿಟಿಯ ಆಡಳಿತೆಯು ತಿರಸ್ಕರಣೀಯವಾಗಿದೆ

ಇದಕ್ಕೂ ಚಮತ್ಕಾರವೇನಂದರೆ- ಈ ಎಲ್ಲ ಅಪಮಾನ- ಅಪಕೀರ್ತಿಗೆ ಮಿ. ಜೇಕಬರೆಂಬ ಚೇರಮನ್ನರೇ ಕಾರಣರಾದರು. ಇವರ ಮೇಲೆ ದಿವಾಣಿ ಮತ್ತು ಫೌಜದಾರಿಯಲ್ಲಿ ಕೆಲಸ ನಡಿಸಬೇಕೆಂದು ಜನರಲ ಕಮಿಟಿಯಲ್ಲಿ ಠರಾವು ಪಾಸಾಯಿತು ನಾಲ್ಕು ತಿಂಗಳಾಯಿತು. ಕೆಲಸ ನಡಿಸಲಿಲ್ಲ. ಇಷ್ಟೇ ಅಲ್ಲ; ಪುನಃ ಜೇಕಬಸಾಹೇಬರನ್ನೇ ಚೇರಮನ್ನರಾಗಿ ಆರಿಸಿದ್ದಾರೆ ಚೇರಮನ್ನರೆಂದರೆ ಅಧ್ಯಕ್ಷರು ಈಗಿನ ಅಧ್ಯಕ್ಷರು ನಾಲ್ಕು ತಿಂಗಳ ಹಿಂದಿನ ಅಧ್ಯಕ್ಷರ ಮೇಲೆ ದಿವಾಣಿ ಮತ್ತು ಫೌಜದಾರಿಯಲ್ಲಿ ಫಿರ್ಯಾದಿ ಮಾಡಬೇಕಾಯಿತು. ಅಂದರೆ- ಜೇಕಬಸಾಹೇಬರು ವಾದಿ ಮತ್ತು ಫಿರ್ಯಾದಿಯಾಗಿ ಕೋರ್ಟುಗಳಲ್ಲಿ ಕೆಲಹೊತ್ತು ಒಂದೆಡೆಯಲ್ಲಿ ನಿಂತು, ಪ್ರತಿವಾದಿ ಮತ್ತು ಆರೋಪಿಯಾಗಿ ಮತ್ತೊಂದೆಡೆಯಲ್ಲಿ ನಿಲ್ಲಬೇಕಾಗುವದು ಲೋಕವಿಲಕ್ಷಣವಾದ ಕೃತ್ಯವು ಸಂಭವಿಸುವಂತಾಯಿತು. ಮ್ಯುನಿಸಿಪಾಲಿಟಿಯವರು ಜೇಕಬಸಾಹೇಬರನ್ನು ಈ ಸ್ಥಿತಿಯಲ್ಲಿ ಹಾಕಿಕೊಂಡು, ಅವರನ್ನು ಪುನಃ ಚೇರಮನ್ನ ಮಾಡಿದರು. ಆದರೆ ಈ ನಡತೆಯು ಸರಕಾರಕ್ಕೆ ಒಪ್ಪಿಗೆಯಾಗಿಲ್ಲ. ಮ್ಯುನಿಸಿಪಾಲಿಟಿಯು ತನ್ನ ನಡತೆಯಲ್ಲಿ ದುರಸ್ತು ಮಾಡಿಕೊಳ್ಳದಿದ್ದರೆ- ಸರಕಾರದವರು ಇದನ್ನು ಸಸ್ಪೆಂಡ ಮಾಡುವ ಭಯಹಾಕಿದ್ದಾರೆ.

ಧಾರವಾಡ ಮ್ಯುನಿಸಿಪಾಲಿಟಿಯವರು ಓದಿ ತಿಳುಕೊಳ್ಳುವಂಥ ದೃಷ್ಟಾಂತವು.

ಹೇಮಗರ್ಭ ಮಾತ್ರೆ ಬಿತ್ತು.

ಸಾಯುವಂಥ ಸ್ಥಿತಿಯಲ್ಲಿ ಹೇಮಗರ್ಭ ಮಾತ್ರೆಯನ್ನು ಹಾಕಿದರೆ- ತುಸುವಾದರೂ ಎಚ್ಚರಾಗಿ ನಾಲ್ಕು ಮಾತಾಡುವನು. ಅದೇ ಪ್ರಕಾರ ಸದ್ಯದಲ್ಲಿ ಶಾಳಾಖಾತೆಯ ಕಾರಕೂನರ ವೃತ್ತಿಗೆ ಹೇಮಗರ್ಭ ಮಾತ್ರೆ ಹಾಕಿದಂತೆ ವರ್ತಮಾನ ಬಂದಿದೆ. ಜುಲೈ ತಿಂಗಳ ೧ನೆಯ ತಾರೀಖಿನ ದಿವಸ ಇವರು ಮನೆಗೆ ಹೋಗುವದು ಕನಿಷ್ಠ ಒಂದು ತಿಂಗಳಾದರೂ ಮುಂದೆ ಬಿದ್ದಿದೆಂದೂ ಆಯಿಪಿಥಿಯಲ್ಲಿ ವಿದ್ಯಾಖಾತೆಯವರು ಕಾರಕೂನರಿಗಾಗಿ ಎಲ್ಲಾದರೂ ಸ್ಥಳ ನೋಡುವರೆಂದೂ ಹೇಳುವಂತಾಗಿದೆ.

ಜುಬಿಲಿಯ ವೃಕ್ಷಗಳು

ಮೈಸೂರ ರಾಜ್ಯದಲ್ಲಿ ಶ್ರೀಮನ್ಮಹಾರಾಜರ ಜ್ಯುಬಿಲಿ ಉತ್ಸವದಲ್ಲಿ ಪ್ರತಿಯೊಂದು ಊರವರು ಈಗ ೪೪ ಗಿಡಗಳನ್ನು ಹಚ್ಚಬೇಕು. ಏಕಂದರೆ- ಮಹಾರಾಜರು ೪೪ ವರ್ಷದವರಾಗಿದ್ದಾರೆ. ಮುಂದೆ ಮಹಾರಾಜರು ಶತಾಯುಷಿಯಾಗಲೆಂದು ಪ್ರತಿವರ್ಷ ಒಂದು ಗಿಡವನ್ನು ಹಚ್ಚುತ್ತಾ ಹೋಗಬೇಕೆಂದು ಮಿ. ಕೆಂಬ್ರಿಗಾಯಿಲ ಸಾಹೇಬರು ಸೂಚಿಸಿದ್ದಾರೆ. ಈ ಪ್ರಕಾರ ಗಿಡಗಳನ್ನು ಹಚ್ಚುವದಾದರೆ- ಸ್ಥಳ ಕೊಡುವೆವೆಂದೂ ಸಾಹೇಬರು ಅಂದಿದ್ದಾರೆ. ಒಂದೇ ಸಿಟ್ಟಿನಲ್ಲಿ ಗಿಡ ಹಚ್ಚದೆ, ಒಂದೂರಿಂದ ಮತ್ತೊಂದೂರಿಗೆ ಹೋಗುವ ದಾರಿಯ ಮೇಲೆ ಅಲ್ಲಲ್ಲಿ ನೆರಳಾಗುವಂತೆ ಗಿಡಗಳನ್ನು ಹಚ್ಚುವದು ಹೆಚ್ಚು ಶ್ರೇಯಸ್ಕರವಾಗುತ್ತದೆ.

ನ್ಯಾಯಮೂರ್ತಿ ಕೆಂಪಸಾಹೇಬರ ರಾಜೀನಾಮೆ-

ಮುಂಬಯಿ ಹಾಯಕೋರ್ಟಿನ ಆಕ್ಟಿಂಗ ಜಡ್ಜರಾಗಿದ್ದ ಮಿ. ಕೆಂಪಸಾಹೇಬರು ನಿಂತ ಕಾಲ ಮೇಲೆ ರಾಜೀನಾಮೆ ಕೊಟ್ಟು ಇಂಗ್ಲೇಂಡಕ್ಕೆ ಹೋದರು ಅಲ್ಲಿ ಇವರ ತಂಗಿಗೆ ಬಹಳ ಜಡ್ಡಾಗಿದೆ. ಹತ್ತರ ಯಾರೂ ಇಲ್ಲ. ನಿಂತಕಾಲ ಮೇಲೆ ಹೊರಟು ಬರಬೇಕೆಂದು ತಾರು ಬಂದದ್ದರಿಂದ ಸಾಹೇಬರು ರಾಜೀನಾಮೆ ಕೊಟ್ಟರು ಈ ಸಾಹೇಬರ ಪರಿಚಯವು ದಾ ವಾಡಸ್ಥರಿಗೆ ವಿಶೇಷವಾಗಿರುತ್ತದೆ. ಗೋಕಾಕಭಾಂ ಪ್ರಕರಣದಲ್ಲಿ ಇವರ

ಕಾಂದ ವತಿಯಿಂದ ಬ್ಯಾರಿಸ್ಟರರಾಗಿ ಬಂದವರು ಇವರೇ!

ಉದಾರ ದಾನ-

ಶ್ರೀ. ಮನೋರಮಾ ಲೇಲೆ ಎಂಬ ಹೆಸರಿನ ಸುಶಿಕ್ಷಿತ ಹೆಣ್ಣು ಮಗಳು ಪುಣೆಯಲ್ಲಿರುವ ಕರ್ವೆಯವರ ವಿಶ್ವವಿದ್ಯಾಲಯಕ್ಕೆ ನಾಲ್ವತ್ತು ಸಾವಿರ ರೂಪಾಯಿದ ಸ್ಥಾವರಾಸ್ತಿಯನ್ನು ದಾನವಾಗಿ ಬರಕೊಟ್ಟಿದ್ದಾರೆ. ಇದರ ಹೊರ್ತು ತಮ್ಮ ವಿವಾಹದ ಶುಭ ಸ್ಮರಣೆಗಾಗಿ ಪ್ರತಿವರ್ಷ ಉತ್ಸವ ಮಾಡುವದಕ್ಕಾಗಿ ಪ್ರತ್ಯೇಕವಾಗಿ ೬೮೦೦ ರೂಪಾಯಿ ಕೊಟ್ಟಿದ್ದಾರೆ.

ಇನ್ನೊಂದು ಸ್ತುತ್ಯಕೃತ್ಯ-

ಕಳೆದ ವಾರದಲ್ಲಿ ಹುಬ್ಬಳ್ಳಿಯಲ್ಲಿ ಡಾಕ್ಟರ ಪಾಟೀಲರ ಮನೆಯಲ್ಲಿ ವಿವಾಹವಾಯಿತು. ಅಲ್ಲಿಯ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಫಂಡಿನ ವ್ಯವಸ್ಥಾಪಕರು ಇವರಿಂದ ೧೦೧ ರೂಪಾಯಿದ ಕ್ಷೆಗೆ ಪಡಕೊಳ್ಳಬೇಕೆಂದು ೧೦೧ ಅಂಕಿ ಹಾಕಿದ ಕಾಗದವನ್ನು ಅವರ ಮುಂದಿಟ್ಟರು. ಡಾಕ್ಟರಸಾಹೇಬರು ಒಂದರ ಎರಡು ಅಂಕಿಗಳ ನಡುವೆ ಒಂದು ಪೂಜೆಯನ್ನು ಹೆಚ್ಚಿಸಿ, ೧೦೦೧ ಮಾಡಿ, ಅವರ ಮುಂದಿಟ್ಟರು. ನೆರೆದ ವೀರಶೈವರೆಲ್ಲರೂ ಅತ್ಯಾನಂದಭರಿತರಾಗಿ, ಡಾಕ್ಟರರನ್ನು ಬಹುವಾಗಿ ಕೊಂಡಾಡಿದರು.

ಹಿಂದೂ ಜನರ ಬಹಿಷ್ಕಾರ-

ಜಾತಿಯ ಪಕ್ಷಪಾತದಿಂದ ಲಾಹೋರ ಮ್ಯುನಿಸಿಪಾಲಿಟಿಯ ಆಡಳಿತೆಯು ನಡೆದದ್ದರಿಂದ ಅಲ್ಲಿಯ ಹಿಂದೂ ಜನರು ಮ್ಯುನಿಸಿಪಾಲಿಟಿಗೆ ಬಹಿಷ್ಕಾರ ಹಾಕಿ, ಚುನಾವಣೆಗಾಗಿ ಯಾರೂ ಉಮೇದವಾರರಾಗಿ ನಿಲ್ಲಲಿಲ್ಲ. ಮಂತ್ರಿಯಾದ ಸರ ಫಜಲಿ ಹುಸೇನಸಾಹೇಬರು ಹಿಂದೂ ಜನರೊಂದಿಗೆ ರಾಜಿಯ ಸಂಧಾನ ನಡೆಸಿದರು. ರಾಜಾ ನರೇಂದ್ರ ಪ್ರಸಾದ ಮೊದಲಾದವರ ಕೂಡ ಕಳೆದೊಂದು ತಿಂಗಳಿಂದ ಚರ್ಚೆ ಮಾಡಿದರು. ಪರಿಣಾಮವು ಗುಡ್ಡಕ್ಕೆ ಕಲ್ಲು ಹೊಡೆದಂತಾಯಿತು. ಹಿಂದೂ ಜನರು ಮ್ಯುನಿಸಿಪಾಲಿಟಿಯನ್ನು ತ್ಯಜಿಸತಕ್ಕದ್ದೆಂದೇ ಹಿಂದೂ ಪಂಚರು ಜಾಹೀರಮಾಡಿದ್ದಾರೆ.

ಈ ವರ್ಷ ರಾಷ್ಟ್ರ ಸಂಘಕ್ಕಾಗಿ ಹಿಂದುಸ್ಥಾನದ ವತಿಯಿಂದ ಲಾರ್ಡ ಲಿಟನ, ಕಪೂರಥಳಾದ ಮಹಾರಾಜರು ಮತ್ತು ಸರ ಅಮುಸಾಮಿ ಅಯ್ಯರ ಇವರು ಪ್ರತಿನಿಧಿಯಾಗಿ ಹೋಗುವರು.

ಶ್ರೀ ವಿದ್ಯಾರಣ್ಯರ ಸಂಪೂರ್ಣ ಚರಿತ್ರೆ

ಸ್ತ್ರೀಯರಿಗಾಗಿ

ಪದ್ಯಕರ್ತರು—ಶ್ರೀ. ರಾಮಚಂದ್ರ ಬಾಳಕೃಷ್ಣ ಬ. ಲೆ! ಹೊಸೂರ

ಧಾಟಿ— ಜೋಳಿನ ಮುಚ್ಚಿನಂತೆ

ಇಂದು ವದನೆಯರೆ ಛಂದದಿ ಬನ್ನಿರಿ|
ಇಂದು ಧರೆಯೊಳೀದಿನದಿ ||
ಅಂದದಾಗೀತೆಯ ನೊಂದೊಗೆಯಲು ಗಡ |
ಮಂದಗಮನೆಯರೆ ಮುದದಿ ||೧||
ಪರಮಪುಣ್ಯಪಾದಾ ಭರತ ಭೂಮಿಯೊಳು |
ಉರೆ ಪೊರೆದುದು ಕರನಾಟಾ ||
ಪರಿ ಪರಿ ಸಿರಿಸೌಖ್ಯಗಳನೆ ನೀಡುತೆ |
ಕರಿವದನನ ದಯದಿಂದಾ ||೨||
ಹರಿಯುವ ತುಂಗಾಭದ್ರೆಯ ತೀರದಿ |
ಇರುತಿಹುದಾ ಪಂಪಾಪುರವು ||
ನೆರೆ ನೆಲಸಿರುವಾ ವಿರೂಪಾಕ್ಷನು ತಾ|
ಭರದಿ ಭಕುತರ ಪೋಷಿಸನು ||೩||
ಪದಿನಾಲ್ಕನೆ ಶತಮಾನದಾದಿಯಲಿ |
ಮದನಾರಿಯಾ ಈ ಪುರದಿ ||
ಬುಧಮತಿ ಸೂಪಾ ಮಾಯಣನೆಂಬಾ |
ಸದುಭಕುತನು ವಾಸಿಸಿದಾ ||೪||
ಭವಭಯ ಹರನಾ ಸೇವೆಗೈಯುತಿರೆ|
ಭಾವಿಕನಾದಾ ಬ್ರಾಹ್ಮಣಗೆ ||
ಆ ವಿರುಪಾಕ್ಷನ ಕರುಣದಿಂದಲಾಗ |
ಪುತ್ರ ಮೂವರು ಜನಿಸಿದರು ||೫||
ಜೇಷ್ಠನಾದ ಮಾಧವನವ ಗಡವಿ |
ಶ್ರೇಷ್ಠ ವಿದ್ಯೆಯ ದೊರಕಿಸಲು ||
ಶಿಷ್ಯನಾದಾ ವಿಷ್ಣುಶರ್ಮನ ಬಳಿ |
ಕಷ್ಟದಿ ಕಾಲವ ಕಳೆದಾ ||೬||
ಉರುತರ ವಿದ್ಯೆಯ ದೊರೆಕಿಸಲವನು |
ಬರೆದವನು ಗ್ರಂಥವನೇಕಾ ||
ಧರೆಯೊಳಗಿಲ್ಲವಾ ವರಸುಜನರಿಗೆ |
ಅರುಹಿದಾ ಧರ್ಮದ ತತ್ವಾ ||೭||
ತನಗೀಜನುಮದೆ ಸಿರಿ ಲಕುಮಿಯು ತಾ |
ದೊರಕಲಾರಳೆಂಬ ವಚನಾ ||
ಭರದಲಿ ಅರಿಯುತೆ ಮರುಗಿತಾಮನದಲಿ|
ನಿಂದೆ ಸೇರಿದಾ ಗುರು ಚರಣಾ ||೮||
ವರ ಗುರುವಾದಾ ವಿದ್ಯಾತೀರ್ಥನು |
ಪರಮ ಶಿಷ್ಯನ ಬೋಧಿಸಿದಾ ||
ಮರಳಿ ಪೋಗಿನೀ ಯವನರ ತಾಪವ |
ಹರಿಸಿ ರಕ್ಷಿಸು ವಿಮಾಧವರ್ಮಾ ||೯||
ಘನತರವಾದಾ ಗುರುವಿನ ವಚನವ |
ಮನ ತಿರುಗಿತು ಮಾಧವನಾ ||
ಅನಿತಾಶೀರ್ವಚನವನೆ ಪಡೆಯುತೆ |
ವಿನಯದಿ ಚರಣಕೆರಗಿದಾತ್ಮ ||೧೦||
ಮರುಳಿ ಬರುತಲೆ ಮಾಧವನವನು ||
ಉರುತರ ತಪವ ಆಚರಿಸಿ ||
ವನಘವನೇಶ್ವರಿಗರುಹಿದಾ ತವಮನ |
ದರಿಕೆಯ ನೆಲ್ಲವ ಮುದದೀ ||೧೧||
ಕಡೆಗತಿ ಕಷ್ಟದಿ ಪಡೆಯುತೆ ವರವಾ |
ಅಡಿಗೆರಗಿದಾ ಭಕುತಿಯಲಿ ||
ಪೊಡವಿಗೆ ಸುರಿಸಿ ಸುವರ್ಣದ ವೃಷ್ಟಿಯ |
ಕಡು ಅಚ್ಚರಿಗೊಳಿಸಿದನಾ ||೧೨||
ನಿಜ ಸಾಮರ್ಥ್ಯದಿ ಗಳಿಯಿಸಿದಾ ಧನ |
ತ್ಯಜಿಸುತೆ ಸ್ವಜನರಿಗಾಗಿ ||
ಸೃಜಿಸಲು ಪೇಳಿದಾ ವಿಜಯನಗರವಾ |
ಸುಜನನಾದಾ ಹರಿಹರಗೆ ||೧೩||
ಮೋದದಿ ಹರಿಹರ ರಾಯನ ಮನವನೆ |
ಛೇದಿಸಿದನು ಪ್ರೇಮದಲ್ಲಿ||
ಬೋಧಿಸುತೆಲ್ಲವ ರಾಜನೀತಿಯ ಗಡ |
ಸಾಧಿಸಿದನು ಮನದಿಚ್ಛೆ ||೧೪||
ಲಕ್ಷಿಸಿ ಹರಿಹರ ಸ್ವಜನರ ತಾಪವಾ |
ಕ್ಷಾತ್ರ ತೇಜವ ತೋರಿದನು ||
ಶೀಕ್ಷಿಸಿ ಯವನರ ಬಾಧೆಯಿಂದ ಗಡ |
ಮೋಕ್ಷಗೈದಾ ಕರನಾಟಾ ||೧೫||
ಹರಹರನಾಗಲೆ ಹರಿಸುತೆ ಯವನರ |
ಉರೆ ಸ್ವಜನರ ಕಾಪಾಡಿಸುದಾ ||
ಅರುಹಿದರೈ ಬಹು ಹರುಷದಿಂದಲಿ |
ಪುರ ಜನರು ಮಾಧವಗೆ ||೧೬||
ಮಾಧವನೀ ವಾರ್ತೆಯ ಅರಿಯುತೆನೀ |
ವೇದಿಸಿದನು ಹರಿಹರಗೆ |
ಮೋದದಿ ರಾಜ್ಯವ ಸ್ವೀಕರಿಸುತಲೆ |
ಆದರಿಸೆಲ್ಲರ ದಯದೀ ||೧೭||
ಗುರುವಿನ ನುಡಿಯಾ ಆಲಿಸಿ ಹರಿಹರ |
ಕರನಾಟ ರಾಜ್ಯಭಾರವನು ||
ಸುರಪತಿಯಂದದಿ ನಿರಿದೆ ಸ್ವೀಕರಿಸುತೆ |
ಪೊರೆದನು ಧರೆಯಾ ತಾಮುದದಿ ||೧೮||
ಬಂಧು ಭಗಿನಿಯರು ಬಂದಾಗುತೆ ಬಹು |
ಅಂದದ ರಾಜ್ಯವಿ ತಾವು ||
ಒಂದೆ ಮನದಿ ಗಡ ಹರಿಹರ ರಾಯಗೆ |
ಅಂದು ತನುಮನವ ನೀಡಿದರು ||೧೯||
ನಿರ್ಮಿಸುತಲೆ ಕರನಾಟಕ ರಾಜ್ಯವಾ |
ಹರುಷಗೊಂಡಾ ಬಹುಮನದೀ ||
ಜರುಗಿಸಿ ಯಲ್ಲವ ಕಾರ್ಯಗಳೀಪರಿ |
ವರಸನ್ಯಾಸವ ತಳೆವಾ ||೨೦||
ವೇದಗಳನೆ ತಾ ನೋಡುತೆ ಯಲ್ಲವಾ

ಪ್ರಾರ್ಥನೆ.

ಕಾಂಗ್ರೆಸದ ಸಭಾಸದರನ್ನು ಕೂಡಿಸುವ ಸಲುವಾಗಿ ಹಿಂದುಸ್ತಾನೀ ಸೇವಾದಳದ ಸ್ವಯಂಸೇವಕರು ಶೀಘ್ರವೇ ಕರ್ನಾಟಕದಲ್ಲಿ ಸಂಚಾರ ಮಾಡತಕ್ಕವರಿದ್ದಾರೆ ಆ ವಿಷಯವಾಗಿ ಬೇರೊಂದು ಪ್ರಕಟನಾ ಪತ್ರಿಕೆಯು ಪ್ರಕಟಿಸಲ್ಪಟ್ಟಿದೆ ಕರ್ನಾಟಕದಲ್ಲಿಯ ಕಾಂಗ್ರೆಸ ಭಕ್ತರೂ ಎಲ್ಲ ತಾಲೂಕ ಮತ್ತು ಜಿಲ್ಹಾ ಕಾಂಗ್ರೆಸ ಕಮಿಟಿಗಳೂ ಕಾಂಗ್ರೆಸ ಸಭಾಸದರನ್ನು ಕೂಡಿಸುವ ಸೇವಾದಲದವರಿಗೆ ಸಹಾಯ ಮಾಡತಕ್ಕದ್ದು. ಕಾಂಗ್ರೆಸ ಸಭಾಸದರನ್ನು ಕೂಡಿಸುವ ಕೆಲಸವು ಒಳ್ಳೇ ಮಹತ್ವದ್ದಿರುತ್ತದೆಂದು ನಾವು ಪ್ರತಿವಿಷ ಹೇಳುವ ಅವಶ್ಯವಿಲ್ಲ. ಕಾಂಗ್ರೆಸ ಸಂಸ್ಥೆಯನ್ನು ಬಲಪಡಿಸಬೇಕಾದರೆ ಸಭಾಸದರ ಸಂಖ್ಯೆಯನ್ನು ಹೆಚ್ಚಿಸಲೇಬೇಕು. ಎಲ್ಲರೂ ಸೇವಾದಲದವರಿಗೆ ತುಂಬಾ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಸೇವಾದಲದವರು ಕೂಡಿಸತಕ್ಕ ಹಣದಲ್ಲಿ ಒಂದು ನಾಲ್ಕಾಂಶ ಹಣವು ಸೇವಾದಲದ ನಿಧಿಗೆ ಕೊಡತಕ್ಕದ್ದೆಂದು ಗೊತ್ತು ಮಾಡಿದೆ ಉಳಿದ ಹಣವನ್ನು ಆಯಾ ತಾಲೂಕ ಅಥವಾ ಜಿಲ್ಹಾ ಕಾಂಗ್ರೆಸ ಕಮಿಟಿಗಳು ತಮ್ಮಲ್ಲಿ ಸೇರಿಸಿಕೊಳ್ಳುವವು ಕರ್ನಾಟಕದಲ್ಲಿಯ ಎಲ್ಲ ಕಾಂಗ್ರೆಸ ಕಮಿಟಿಗಳು ಈ ವಿಷಯವಾಗಿ ಜಾಗ್ರತೆ ವಹಿಸಬೇಕಾಗಿ ವಿನಂತಿ

ಶ್ರೀನಿವಾಸರಾವ ಕೌಜಲಗಿ
ಅಧ್ಯಕ್ಷ, ಕರ್ನಾಟಕ ಪ್ರಾಂತಿಕ
ಕಾಂಗ್ರೆಸ ಕಮಿಟಿ.

ಸಿಂಧ ಹೈದರಾಬಾದಿನ ತುರಂಗದಲ್ಲಿ ಸಿಂಧಿ ಮುಸಲಮಾನ ಮತ್ತು ಪಠಾಣರ ನಡುವೆ ಜಗಳ ಬಂದು ದಿನಾಲು ಗೊಂದಲವೇಳುತ್ತಿತ್ತು. ಅಧಿಕಾರಿಗಳು ಮುಖ್ಯಸ್ಥರನ್ನು ಬೇರೆ ತುರಂಗಗಳಿಗೆ ಕಳಿಸಿ, ಜಗಳ ನಿಲ್ಲಿಸಿದರು.

ಸಂಯುಕ್ತ ಪ್ರಾಂತದಲ್ಲಿ ಮುರಾದಾಬಾದ ಜಿಲ್ಹೆಯಲ್ಲಿ ಪೋಸ್ಟ ಮಾಸ್ತರನಾಗಿದ್ದ ಜ್ಯೋತಿ ಸರೂಪನೆಂಬವನು ಪೋಸ್ಟ ಖಾತೆಯ ಎರಡು ಲಕ್ಷ ರೂಪಾಯಿಗಳನ್ನು ಎತ್ತಿ ಹಾಕಿ, ಕೃಷ್ಣಮುಖ ಮಾಡಿದ್ದಾನೆ. ಇವನನ್ನು ಹಿಡಿಕೊಟ್ಟವರಿಗೆ ಪೋಸ್ಟ ಮಾಸ್ತರ ಜನರಲ್ಲರು ಐನೂರು ರೂಪಾಯಿ ಇನಾಮು ಕೊಡುವರು.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡುವ ಮೈಲಾಸಾಹೇಬ ವ|| ಬಾಬನಸಾಹೇಬು ಕಾಕರ ಧಾರವಾಡ ಈತನು ಯಾವತ್ತು ಜನರಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ- ನಾನು ಧಾರವಾಡ ಜಿಲ್ಹಾ ಹ ಲ್ಯಾಳದಲ್ಲಿರುತ್ತಿದ್ದ ಕೊಲ್ಲು ಪಟೇಲ್ಲರೆಂಬವನ ಸರಳ ವಾರಸದಾರನು ಆತನಿಗೆ ನಾನೊಬ್ಬನೇ ಸರಳ ವಾರಸದಾರನಿದ್ದೇನೆ ಅಲ್ಲಿ ಕನ್ನಡ ಶಾಲೆಯ ಹತ್ತರಿರುವ ಮ್ಯು. ಮನಿ ನಂಬರ ೪೬೦ ಇದರ ಮಾಲಕೀ ಮತ್ತು ವಹಿವಾಟಿಯು ನನ್ನದಿರುತ್ತದೆ. ಆದರೆ ನಾನು ಊರಲ್ಲಿರದ ಸಮಯ ಸಾಧಿಸಿ, ಆಶಾಬಿ ಕೋಂ ಭಾಂಗಡೆ ಫತ್ತೆಮಹಮದ ಎಂಬ ಹೆಸರಿನ ಒಬ್ಬ ಹೆಂಗಸು ತನಗೆ ಈ ಮನೆಯು ಸಂಬಂಧವಿರುತ್ತದೆಂದು ಹೇಳಿ, ಸದರ ಮನಿಯನ್ನು ಕೆಲವು ಲಫಂಗರ ಸಹಾಯದಿಂದ ಬಲಜಬರಿಯಿಂದ ಕಬಜಾ ತಕ್ಕೊಳ್ಳುವಂತೆ ಮತ್ತು ಯಾರಿಗಾದರೂ ಸುಳ್ಳು ಸುಳ್ಳೇ ಖರೀದಿ ಪತ್ರ, ವಗೈರೆ ಕಾಗದ ಮಾಡಿಕೊಳ್ಳುವ ದುರಾಲೋಚನೆಯುಳ್ಳರುವಂತೆ ಕೇಳತೇನೆ ಆದರೆ ಆಕೆಯಿಂದ ಯಾರೂ ಕಾಗದ ಬರಿಸಿಕೊಳ್ಳಬಾರದು. ಮತ್ತು ಯಾರೇದರೂ ಆಕೆಗೆ ಸಹಾಯವಾಗಿ ದಾಂಡಗಾಯಿ ಮಾಡಲಿಕ್ಕೆ ಬಂದರೆ- ನಾನು ಸದರಿಯವರ ಮೇಲೆ ಕಾಯದೇಶೀರ ಇಲಾಜ ಮಾಡುವೆನು ಈ ಸಂಬಂಧ ಆಗುವ ಖರ್ಚು ನುಕ್ಸಾನಿಕ್ಕೆ ಅವರೇ ಪಾತ್ರರಾಗುವರು ಅಂತಾ ಜಾಹೀರ ಮಾಡಿದ ನೋಟೀಸು

ಇದೇ ನೋಟೀಸಿನಿಂದ ಸದರ ಆಶಾಬೀಕೆಗೆ ತಿಳಿಸುವದೇನಂದರೆ-

ಸದರ ಮನೆಯಲ್ಲಿ ನಿನ್ನದೇನಾದರೂ ಹಕ್ಕು ಇದ್ದರೆ- ನೀನು ದಿವಾಣಿಯಲ್ಲಿ ಇಲಾಜ ಮಾಡಬೇಕು ದಾಂಡಗಾಯಿ ಮಾಡಿದರೆ- ನಿನ್ನ ಮೇಲೆ ಕಾಯದೇಶೀರ ಇಲಾಜ ಮಾಡುವನು ತಿಳಿಯಬೇಕು.

ತಾ|| ೨೫-೬-೧೯೩೭ ಇಸ್ವಿ

ಸಹಿ ಮುಸಲಮಾನಿ ಮೈಲಾಸಾಹೇಬ ವ|| ಬಾಬನಸಾಹೇಬ ಕಾಕರ-

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ- ರಾ|| ಸಾ. ಅಣ್ಣಾಚಾರ್ಯ ಕಟ್ಟಿ ವಕೀಲ ಧಾರವಾಡ ಇವರ ಸಾಗ್ವಾನಿ ಪೆಟ್ಟಿಗೆ (ಅಫೀಸ ಬಾಕ್ಸ) ಅಂದರೆ ಬಂಗಾರ, ಬೆಳ್ಳಿ, ರೊಕ್ಕ ಇಲ್ಲದ್ದು ಖಾಸಗಿ ಕಾಗದ ಪತ್ರಗಳಿದ್ದದ್ದು ಧಾರವಾಡ ಜಿಲ್ಹಾ ಹಾವೇರಿ ಹದ್ದಿಯಲ್ಲಿ ಕಳೆದು ಹೋಗಿರುತ್ತದೆ. ಈ ಪೆಟ್ಟಿಗೆಯು ಯಾರಿಗಾದರೂ ಸಿಕ್ಕಿದ್ದರೆ ಒಂದು ವಾರದಲ್ಲಿ ತಂದು ಕೊಟ್ಟವರಿಗೆ ಯೋಗ್ಯ ಇನಾಮು ಕೊಡುವದಲ್ಲಿ ಬರುವದು. ತಾರೀಖು ೩೧-೫-೩೭ನೇ ಇಸ್ವಿ

ಅನಂತಾಚಾರ್ಯ ವೆಂಕಣ್ಣಾಚಾರ್ಯ ಚಿಕ್ಕೇರೂರ
ಧಾರವಾಡ ಜಿಲ್ಹಾ-

ವಿಶೇಷ ಸೂಚನೆ— ಪೆಟ್ಟಿಗೆ ಸಿಕ್ಕವರು ಕೆಳಗೆ ಬರೆದ ಪತ್ತೆಗೆ ತಿಳಿಸಿದರೆ ಕೆಳಗೆ ಸಹಿ ಮಾಡಿದ ಅನಂತಾಚಾರ್ಯ ಚಿಕ್ಕೇರೂರ ಇವರಿಗೆ ತಿಳಿಯುವದು.

ರಾ. ಸಾ. ಕಟ್ಟಿ ವಕೀಲ, ಕಿಲ್ಲೆ ಧಾರವಾಡ — ಅಥವಾ — ಸು. ಹ. ಭಾದ್ರಿ ವಕೀಲ, ಹಾವೇರಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸಿರುವರು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ರವಿವಾರ ತಾರೀಖು ೨೬ ನೇ ಜೂನ ೧೯೨೭ | ಸಂಚಿಕೆ ೧೩೫

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತರಡಿನ ಗಾಡಿ ಇರುವದು. ಕಬ್ಬಿಣ ಎರಡು ಕೂಸುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೩೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರವಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೫೫|| ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಸಂದರಿಯು ಬರು ಲಕ್ಷದ ಮೇಲುಂಟು. ಚೆಕ್ಕು ಮುಂದಿ ಮೂಲಕವಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಯುವದು. ಠೇವುಗಳನ್ನು ಬೇರೆ ಬೇರೆ ಮುದತಿಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿವರ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಂಗೇಶರಾವ ಬಿ. ಬಳ್ಳಾರಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಇಟ್ಟಿರುತ್ತದೆ.

ಎ. ಜಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—o—

ತಿಂಗಳ ಕಾಲದ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ; ಕೋರ್ಟು, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೇಟಿವ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಸಾಲುಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[o][o]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೩—೮—೦ ರೂ
೬ ”	೭—೦—೦ ರೂ
೪ ”	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಿಂದ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ಸಹಾಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೬-೬-೨೭ ನೇ ಇಸ್ವಿ

ಕೊನೆಯ ಹೇಳಿಕೆ.

ನಾಲ್ಕು ವರುಷಗಳ ಕೆಳಗೆ ಧಾರವಾಡದ ಟ್ರೇನಿಂಗ ಕಾಲೇಜವು ಸಾಯುವಾಗ ಒಂದು ಮರಿಯನ್ನು ಬಿಟ್ಟು ಹೋಗಿತ್ತು. ಅದೂ ಈಗ ಮಾಯವಾಯಿತು. ಮಾಂಟೆಗ್ಯೂ ಸುಧಾರಣೆಯ ಮೇರೆಗೆ ಸ್ವರಾಜ್ಯದ ಒಂದು ಅಂಶವೆಂದು ದೊರೆದ ವಿದ್ಯಾಖಾತೆಯ ಅಧಿಕಾರವನ್ನು ಕೈಕೊಂಡ ಮೊದಲನೆಯ ಮಂತ್ರಿಗಳಾದ ನಾಮದಾರ ಪರಾಂಜಪೆಯವರು ಕಾಲೇಜದ ಕೊಲೆ ಮಾಡಿದರೆ ಮೂರನೆಯ ಮಂತ್ರಿಗಳಾದ ನಾ॥ ದೇಸಾಯಿಯವರು ವರ್ಷಾಂತದ ಬಜೆಟಿನಲ್ಲಿ ಮುಂದಿಟ್ಟು ಅದರ ಮೂರು ವರ್ಷದ ಚಿಕ್ಕಮಗುವಾದ ಟ್ರೇನಿಂಗ ಸ್ಕೂಲನ್ನು ಕಡಿದು ಬಿಸುಟಿದರು. ಇದೆಂದು ಕರ್ನಾಟಕವೇ ಗೋಳಿಟ್ಟು ಅಳುವದು ನಾಮದಾರರ ಕಣ್ಣಿಗೆ ಕಾಣಲಿಲ್ಲ; ಕಿವಿಗೆ ಕೇಳಿಸಲಿಲ್ಲ. ಕನ್ನಡಿಗರ ಕೂಗು ಕಟುಕನ ಮುಂದೆ ಕುರಿಯ ಕೀರಲಿಗೆಯನ್ನು ವಪ್ಪಿಸಿದಂತಾಗಿ ಹೋಯಿತು. ಕರ್ನಾಟಕ ಪಿತಾಮಹರೆನಿಸಿಕೊಂಡ ದಿ. ಬ. ರೊದ್ದರಾಯರೇ ಮುಂತಾದವರು ಪುಣೆಯವರೆಗೂ ಹೋಗಿ ತಮ್ಮ ಹೇಳಿಕೆಯನ್ನೆಲ್ಲ ಹೇಳಿದ್ದಾಯಿತು. ವೃತ್ತ ಪತ್ರಗಳು ಏಕಕಂಠದಿಂದ "ಬೇಡ ಬೇಡ" ವೆಂದು ಸಾರಿದ್ದಾಯಿತು. ಆದರ ಪರಿಣಾಮವೇನಾಯಿತೆಂದರೆ, ಅರಣ್ಯರೋದನದಂತೆ ನಿಷ್ಫಲವಾಯಿತು! ದೇಶೀಯ ಮಂತ್ರಿಗಳನ್ನು ಆ ಖಾತೆಗಳ ಮುಖ್ಯಾಧಿಕಾರಿ (*Hend of tle Office*) ಗಳ ಕೈಗೊಂಬೆಗಳಂತೆ ಕುಣಿಸುವದು ಮತ್ತು ಆಡಿಸುವ ಮಾತಿನ ಅನುಭವವು ಹೆಜ್ಜೆ ಹೆಜ್ಜೆಗೆ ಕಂಡು ಬರುತ್ತಿರುವದು ದುಃಖದ ಸಂಗತಿಯಷ್ಟೇ ಅಲ್ಲ. ಮಂತ್ರಿಗಳ ಪರವಾಗಿ ನೋಡಿದರೆ ತೀರ ಕರುಣಾಜನಕವಾಗಿದೆ.

ಕಾಲೇಜವನ್ನು ನಿಲ್ಲಿಸಿದ್ದರಿಂದ ಅಖಿಲ ಕರ್ನಾಟಕಕ್ಕೇ ಎಂದೂ ತುಂಬಿ ಬರದಂಥ ಹಾನಿಯಾಯಿತು. ಸಾಮಾನ್ಯರ ದೃಷ್ಟಿಯಿಂದ ನೋಡಿದರೆ ಶಿಕ್ಷಕರ ಕೆಲಸ ಮಾಡಿ ಹೊಟ್ಟೆ ತುಂಬಿಕೊಳ್ಳುವ ನಾಲ್ಕು ಜನರಿಗೆ ನೌಕರಿಯು ಸಿಗುವದು ಹೋಯಿತೆಂಬಷ್ಟೇ ಅನಿಸಬಹುದು. ಆದರೆ ನಾವು ಈ ಮಾತಿಗೆ ಎಷ್ಟೂ ಮಹತ್ವ ಕೊಡುವದಿಲ್ಲ. ಮನುಷ್ಯನು ನೌಕರಿಗಾಗಿಯೇ ಹುಟ್ಟಿರುವನೆಂದು ನಾವು ಹೇಳಲಾರೆವು. ಆದರೆ ಇದರಿಂದ ಕನ್ನಡ ಭಾಷೆಯ ಅಭ್ಯಾಸವು ಕನ್ನಡ ಸಾಲೆಗಳಲ್ಲಿ ಸರಕಾರದವರು ತಮ್ಮ ಚಿತ್ರಗುಪ್ತರಿಂದ ಬರೆಯಿಸಿದ ಸಪ್ತಗೀತೆ (*Vernacular Readers*) ಗಳ ಅಧ್ಯಯನಕ್ಕೇ ಕೊನೆಗಂಡಂತಾಯಿತು. ಟ್ರೇನಿಂಗ ಕಾಲೇಜವು ಇಂಗ್ಲಿಷ ಟ್ರೇನಿಂಗ ಕಾಲೇಜದಂತೆ ಕೇವಲ ಶಿಕ್ಷಣ ವಿಷಯಕ ಪದವಿಯ ಮುದ್ರೆಯನ್ನೊತ್ತುವ ಟಂಕಸಾಲೆಯಾಗಿರಲಿಲ್ಲ. ಮುಲಕೀ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಕನ್ನಡ ಸಂಸ್ಕೃತ ವಾಙ್ಮಯದ ಪರಿಚಯವನ್ನು ತಕ್ಕಮಟ್ಟಿಗೆ ಮಾಡಿಕೊಟ್ಟು ಅವರ ಬುದ್ಧಿ ಸಂಸ್ಕಾರಕ್ಕೆ ಅವಶ್ಯಕವೆನಿಸುವ ಮಿಕ್ಕ ವಿಷಯಗಳನ್ನು ಕೆಲವು ಮಟ್ಟಿಗೆ ಕಲಿಸುವ ಕಾರ್ಯವು ಈ ಟ್ರೇನಿಂಗ ಕಾಲೇಜದಲ್ಲಿ ನಡೆಯುತ್ತಿದ್ದಿತು. ನಮ್ಮ ಭಾಗದೊಳಗಿನ ನಾಮಾಂಕಿತರಾದ ಆಧುನಿಕ ಗ್ರಂಥಕರ್ತರೆಲ್ಲರೂ ಒಂದಿಲ್ಲೊಂದು ರೀತಿಯಿಂದ ಟ್ರೇನಿಂಗ ಕಾಲೇಜಕ್ಕೆ ಸಂಬಂಧಪಟ್ಟವರೇ ಇದ್ದ ಸಂಗತಿಯನ್ನು ಹಿಂದೆ ಹಲವು ಸಾರೆ ಹೇಳಿರುವೆವು. ಮುಂದೂ ಹೇಳದೇ ಇರಲಾರೆವು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಟ್ರೇನಿಂಗ ಕಾಲೇಜದ ಕೊಲೆಯಿಂದ ಕರ್ನಾಟಕಕ್ಕೆ ಎಂಥ ವಿಪತ್ತು ಒದಗಿದಂತಾಯಿತೆಂಬದನ್ನು ವಾಚಕರೇ ಊಹಿಸಲಿ.

ಈ ಪ್ರಸಂಗದಲ್ಲಿ ನಾವು ಹೇಳಬೇಕಾದ ಕೊನೆಯ ಹೇಳಿಕೆ

ಯೊಂದು ಉಳಿದಿರುವದು. ಕಾಲೇಜವೂ ಆದರ ಮರಿಯೂ ಹೋದವು. ಆದರಲ್ಲಿ ನಮಗೆ ಅನಿಸುವ ದುಃಖವನ್ನು ಇಂದಿನವರೆಗೂ ಊರಿಕೊಂಡಂತಾಗಿದೆ. ಈಗ ಅದರಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ದಿಕ್ಕಿಗೊಬ್ಬರಂತೆ ಎಸೆದು ಬಿಡುವ ಕೆಲಸ ನಡೆದಿರಬೇಕೆಂಬದು ಸಹಜವು. ಆದರಲ್ಲಿ ನಮ್ಮ ಈ ಭಾಗದ ಕನ್ನಡ ವಿಷಯದ ನಿಜವಾದ ಪಂಡಿತರೆನಿಸಿಕೊಂಡಿರುವ (ಬರೇ ಪಂಡಿತರೆಂಬ ಪದವಿಯನ್ನು ಪಡೆದ ಪಂಡಿತರಲ್ಲ) ಶ್ರೀ. ಪೂಜಾರ ಇವರೂ ಒಬ್ಬರು. ಅವರನ್ನು ಇಲ್ಲಿಂದ (ಧಾರವಾಡದಿಂದ) ಹೊರಗೆ ಹಾಕುವ ವ್ಯವಸ್ಥೆಯೊಂದು ಎಂದೂ ಆಗಬಾರದ ವಿಷಯವು. ಶ್ರೀ. ಪೂಜಾರರು ಇಲ್ಲಿಂದ ಹೊರಗೆ ಹೋದರೆ ಧಾರವಾಡದ ಕಣ್ಣೇ ಹೋದಂತಾಗುವದು. ಮಹಾರಾಷ್ಟ್ರಕ್ಕೆ ಪುಣೆಯು ಹೇಗೋ ಹಾಗೆ ಉತ್ತರ ಕರ್ನಾಟಕಕ್ಕೆ ಧಾರವಾಡವು ವಿದ್ಯಾವಿಷಯಕ ಕೇಂದ್ರವಾಗಿದೆ. ಕರ್ನಾಟಕ ಕಾಲೇಜದಲ್ಲಿ ಕನ್ನಡವನ್ನು ಓದುತ್ತಿರುವ ಬಿ. ಎ. ಎಮ್. ಎ. ಪರೀಕ್ಷೆಗಳ ವಿದ್ಯಾರ್ಥಿಗಳೆಲ್ಲರೂ ಇಂದಿನವರೆಗೆ, ಒಂದಿಲ್ಲೊಂದು ರೀತಿಯಿಂದ ಶ್ರೀ ಪೂಜಾರ ಇವರ ಶಿಷ್ಯರಾಗಿರುವರು. ಕನ್ನಡದಲ್ಲಿ ಯಾರಿಗೆ ಯಾವ ತರದ ಸಂಶಯವುಂಟಾಗಿರಲಿ ಅದರ ನಿವಾರಣೆ ಮಾಡಿಕೊಳ್ಳಲಿಕ್ಕೆ ಶ್ರೀ. ಪೂಜಾರ ಇವರ ಕಡೆಗೆ ಹೋದ ಹೊರತು ಗತ್ಯಂತರವಿರಲಿಲ್ಲ. ಮತ್ತು ಕನ್ನಡ ತೆಗೆದುಕೊಂಡ ಎಮ್. ಎ. ಬಿ. ಎ. ಕ್ಲಾಸಿನ ವಿದ್ಯಾರ್ಥಿಗಳಿಗೆ ಶ್ರೀ ಪೂಜಾರರ ಹೊರತು ಅನ್ಯ ಆಶ್ರಯವೇ ಇರಲಿಲ್ಲ. ಶ್ರೀ ಪೂಜಾರ ಇವರು ಹಣದ ಕಡೆಗೆ ಎಂದೂ ದೃಷ್ಟಿಯನ್ನಿಟ್ಟು ಕೆಲಸ ಮಾಡಿದವರಲ್ಲ. ಕೇವಲ ವಿದ್ಯಾದಾನ ಬುದ್ಧಿಯಿಂದ ಇಂದಿನ ವರೆಗೆ ಕೆಲಸ ಮಾಡುತ್ತಾರೆ. ಯಾವ ವಿದ್ಯಾರ್ಥಿಯೇ ಬಂದು ಕೇಳಿದರೂ ಇತರರಂತೆ ನನಗೆ ವೇಳೆಯಿಲ್ಲ. ಕೆಲಸವಿದೆ; ನಾಳೆ ಬಾ" ಇತ್ಯಾದಿ ಶಬ್ದಗಳನ್ನು ಎಂದೂ ಆಡಿದವರಲ್ಲ. ಅಥವಾ "ನನಗೆ ಈ ವಿಷಯ ಗೊತ್ತಿಲ್ಲ ಪುಸ್ತಕ ನೋಡಿ ಹೇಳುತ್ತೇನೆ" ಎಂದು ಹೇಳುವ ಪ್ರಸಂಗವು ಇವರಿಗೆ ಎಂದೂ ಬರುತ್ತಿರಲಿಲ್ಲ.

ಇಂಥ ಸ್ಥಿತಿಯಿರುವಾಗ ಶ್ರೀ. ಪೂಜಾರ ಇವರನ್ನು ಧಾರವಾಡದಿಂದ ಬೇರೆ ಕಡೆಗೆ ವರ್ಗ ಮಾಡಿದರೆ ಕರ್ನಾಟಕಕ್ಕೆ "ಹುಣ್ಣಿನ ಮೇಲೆ ಬರೆ ಎಳೆದಷ್ಟು" ದುಃಖವಾಗುವದರಲ್ಲಿ ಸಂಶಯವಿಲ್ಲ. ಮಿ. ಎಜ್ಯುಕೇಶನಲ್ ಇನ್ಸಪೆಕ್ಟರ ಸಾಹೇಬರ ಒಟ್ಟಂಬ ಮೇಂಟಿನ ಕೆಲಸ ಕಟುತರ ಶಕ್ತಿಯನ್ನು ಎತ್ತಿದ ಡಾಯರೆಕ್ಟರ ಸಾಹೇಬರೇ ಕೂಡಿ ವಿಚಾರ ಮಾಡಿ ಶ್ರೀ. ಪೂಜಾರ ಇವರ ವರ್ಗಾವರ್ಗಿಯನ್ನೇ ತಡೆಯಬೇಕೆಂದೂ ಅವರನ್ನು ಧಾರವಾಡದಲ್ಲಿಯೇ ಇಡಬೇಕೆಂದೂ ನಮ್ಮ ಕೊನೆಯ ಹೇಳಿಕೆಯಿದೆ. ಅವರು ಮನಸು ಮಾಡಿದರೆ ಧಾರವಾಡದ ಹಾಯಸ್ಕೂಲಿನಲ್ಲಾಗಲಿ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿಯಾಗಲಿ ಅವರನ್ನು ಇಡಲಿಕ್ಕೆ ಏನೊಂದು ಅಡ್ಡಿಯು ಇರುವದಿಲ್ಲ.

ಮುಂಬೆಯವರಿಗೆ ಬೆದರಿಕೆಯಂತೆ-

ಡಾಕ್ಟರ ಮುಂಜೆಯವರು ಅಹಮದನಗರಕ್ಕೆ ಹೋಗ ಕೂಡಲೆ, ಅಲ್ಲಿಯ ಡಿಪುಟಿ ಪೋಲಿಸ ಸುಪರಿಂಟೆಂಡೆಂಟರು ಇವರ ಕಯ್ಯಲ್ಲಿ "ನೀವು ಜನರಲ್ಲಿ ಕೋಪೋದ್ರೇಕವಾಗುವಂಥ ಭಾಷಣ ಮಾಡದ ತನಕ ಸರಕಾರವು ನಿಮ್ಮ ಉಸಾಬರಿ ಮಾಡದು; ಇದರ ವಿರುದ್ಧ ನಡೆಸಿದರೆ- ನಿಮ್ಮ ಮೇಲೆ ಕಾಯದೆ ಪ್ರಕಾರ ವ್ಯವಸ್ಥೆ ಮಾಡಲಾದೀತು" ಎಂಬದಾಗಿ ಬರೆದ ನೋಟೀಸು ಕೊಟ್ಟರು. ಡಾಕ್ಟರರ ಮೇಲೆ ಸುರತದ ಕಲೆಕ್ಟರರು ಬಿಟ್ಟಂಥ ಬಾಣದ ಎರಡನೆಯ ಪ್ರಕಾರವೇ ಇದು. ಡಾಕ್ಟರರು ಇಂಥ ಬೆದರಿಕೆಗಳಿಗೆ ಹೆದರುವಂಥ ಅಳ್ಳೆದೆಯವರಿರುವದಿಲ್ಲೆಂದು ಸರಕಾರಕ್ಕೆ ಈ ಮೊದಲು ಎಷ್ಟೋ ಸಾರೆ ಗೊತ್ತಾಗಿದೆ.

ಪಂಜಾಬದಲ್ಲಿದ್ದ ಮುಸಲಮಾನರ ಕೋಪವು.

—೦೦೦—

ಪಂಜಾಬದ ಮುಸಲಮಾನರು ಹಿಂದೂ ಜನರ ಮೇಲೂ, ನ್ಯಾಯಕೋರ್ಟುಗಳ ಮೇಲೂ ಅತಿಶಯವಾಗಿ ಕ್ಷೋಭೆಗೊಳ್ಳಲು ಎರಡು ಕಾರಣಗಳಾಗಿವೆ. ರಂಗೀಲರಸೂಲವೆಂಬ ವರ್ತಮಾನ ಪತ್ರದಲ್ಲಿ ಮಹಮದ ಪೈಗಂಬರ ಹಾಗು ಬೇರೆ ಪೀರರ ವಿಷಯವಾಗಿ ಟೀಕ ಮಾಡಿದ ಲೇಖಗಳು ಬಂದವು. ಮುಸಲಮಾನರು ಈ ಪತ್ರದ ಮೇಲೆ ಫಿರ್ಯಾದಿ ಮಾಡಿದರು. ಅಪೀಲಿನಲ್ಲಿ ಈ ಪತ್ರಕಾರರು ದೋಷಮುಕ್ತರಾದರು. ತೀರ್ಪು ಹೇಳಿದವರು ದಲೀಪಸಿಂಗರೆಂಬ ಶೀಖ ಗೃಹಸ್ಥರಾಗಿದ್ದಾರೆ.

ಮುಸಲಮಾನರ ಔಟಲುಕವೆಂಬ ಪತ್ರವು ಹಾಯಕೋರ್ಟಿನ ಜಡ್ಜರ ತೀರ್ಪಿನ ಮೇಲೆ ಟೀಕ ಮಾಡಿತು. ಈ ಟೀಕೆಯು ಹಾಯಕೋರ್ಟಿನ ಅಪಮಾನ ಮಾಡುತ್ತಿತ್ತೆಂದು ಇವರ ಮೇಲೆ ಕೇಸ ನಡೆದು, ನ್ಯಾಯಮೂರ್ತಿಗಳು ಈ ಪತ್ರ ಸಂಪಾದಕರಿಗೆ ಆರು ತಿಂಗಳ ಶಿಕ್ಷೆ ವಿಧಿಸಿದ್ದಾರೆ. ತೀರ್ಪು ಹೇಳಿದವರು ಯುರೋಪಿಯನ್ನರಾಗಿದ್ದಾರೆ.

ಈ ಎರಡೂ ಠರಾವುಗಳನ್ನು ನಿಷೇಧಿಸುವ ವಶಕ್ಕಾಗಿ ಲಾಹೋರಿನಲ್ಲಿ ಮುಸಲಮಾನರ ಪ್ರಚಂಡ ಸಭೆ ಕೂಡಿತ್ತು. ಮೌಲ್ವಿ ಜಾಫರ ಅಲ್ಲೀಖಾನರು ಅಧ್ಯಕ್ಷರಾಗಿದ್ದರು. ಮುಸಲಮಾನರಲ್ಲುಂಟಾಗಿದ್ದ ಚಳವಳಿ ಮತ್ತು ಧರ್ಮಾಭಿಮಾನದ ಆವೇಶ ಕಂಡು, ಸಭೆಯಲ್ಲಿ ಅಥವಾ ಸಭೆಯನಂತರ ಗೊಂದಲವೇಳಬಾರದೆಂದು ಪೋಲೀಸರು ವಿಶೇಷವಾದ ಬಂದೋಬಸ್ತ ಮಾಡಿದ್ದರು. ಯುರೋಪಿಯನ್ನ ಮ್ಯಾಜಿಸ್ಟ್ರೇಟರೂ ಬಂದಿದ್ದರು.

ಸಭೆಯಲ್ಲಿ ಅನೇಕ ಮೌಲ್ವಿಗಳು ಉಗ್ರಸಿನ ಭಾಷಣ ಮಾಡಿದರು. ನಮ್ಮ ಪೈಗಂಬರರ ಮೇಲೆ ರಂಗೀಲರಸೂಲದಲ್ಲ ಬಂದಂಥ ಲೇಖಗಳನ್ನು ನಾವು ನೋಡುವದು ಹೇಗೆ? ಓದುವದು ಹೇಗೆ? ಈ ಪ್ರಕಾರ ಪೈಗಂಬರರ ಅಪಮಾನವಾಗುವದನ್ನು ನೋಡುವದಕ್ಕಿಂತ ಸಾಯುವದೇ ಲೇಸೆಂದು ಇವರು ಭಾಷಣ ಮಾಡಿ, ಠರಾವು ಒರೆದು ಜಡ್ಜ ದಲೀಪಸಿಂಗರು ರಾಜೀನಾಮೆ ಕೊಡುವಂತೆ ಒತ್ತಾಯ ಪಡಿಸಬೇಕೆಂಬ ಸೂಚನೆಯ ಠರಾವು ಮಾಡಿದರು.

ಔಟಲುಕ ಪತ್ರದ ಸಂಪಾದಕರು ಹಾಯಕೋರ್ಟಿನ ತೀರ್ಪಿನ ಮೇಲೆ ಮಾಡಿದ ಟೀಕೆಯು ನ್ಯಾಯವಾಗಿದೆ. ಸಂಪಾದಕರಿಗೆ ಶಿಕ್ಷೆ ಕೊಟ್ಟದ್ದು ಅನ್ಯಾಯವಾದದ್ದು. ಯಾವ ಲೇಖದ ದೆಸೆಯಿಂದ ಶಿಕ್ಷೆಯಾಗಿದೆ ಅದನ್ನು ಪುನಃ ಮುದ್ರಿಸಿ ಪ್ರಸಿದ್ಧ ಮಾಡಬೇಕು. ಸಾರ್ವಜನಿಕ ಸಭೆ ಮಾಡಿ, ಅಲ್ಲಿ ಆ ಟೀಕೆಯನ್ನು [illegible] ಉಳಿದವರು ಪುನರುಚ್ಚರಣೆ ಮಾಡಬೇಕು. ಮತ್ತು ಈ ತೆರದಿಂದ ಕಾಯದೆಭಂಗ ಮಾಡಿ ತರುಣ ಮುಸಲಮಾನರು ತುರಂಗಕ್ಕೆ ಹೋಗಬೇಕೆಂಬ ಎರಡನೆಯ ಠರಾವು ಮಾಡಿದ್ದಾರೆ. ಆದರೆ ಇದರಲ್ಲಿ ಯುರೋಪಿಯನ್ನ ಜಡ್ಜರಿಗೆ ರಾಜೀನಾಮೆಯನ್ನಿಮೆನ್ನು ಬರತರ್ಫ ಮಾಡಬೇಕೆಂದು ಇರುವದಿಲ್ಲ.

ಮಹಾತ್ಮರ ಮತ–

ಹಿಂದುಸ್ತಾನ ಸರಕಾರದ ಕೃತ್ಯದಿಂದ ಗಿರಣಿಗಳಿಗೆ ಬಂದ ಅಧೋಮುಖವನ್ನು ಕುರಿತು ಮಹಾತ್ಮರು ಗಿರಣಿಯವರಿಗೆ ಉಪದೇಶದ ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ. ಹಿಂದುಸ್ತಾನದ ರಾಟಿಗೆ ಅಗ್ನಿ ಸಂಸ್ಕಾರ ಮಾಡಿ, ಅದರ ಬೂದಿಯ ಮೇಲೆ ಇಂಗ್ಲಂಡದ ಗಿರಣಿಗಳು ಕಟ್ಟಲ್ಪಟ್ಟಿವೆ. ರಾಟಿಯ ವ್ಯವಸಾಯ ಮುರಿದು, ಹಿಂದುಸ್ತಾನವು ದರಿದ್ರವಾಯಿತು. ಹಿಂದುಸ್ತಾನದ ಗಿರಣಿಗಳಿಗೆ ಉತ್ತೇಜನ ಬಂದರೆ– ಇಂಗ್ಲಂಡದವರಿಗೆ ದರಿದ್ರತನ ಬರುತ್ತದೆ ಆದುದರಿಂದ ಇಂಗ್ಲಿಷ ಜನರ ಹಿತಕ್ಕಾಗಿ ಸರಕಾರದವರು ಈ ಗಿರಣಿಗಳ ಯೋಗಕ್ಷೇಮ ನೋಡಲಾರರು. ಈ ಸ್ವಾರ್ಥದ ಮೂಲಕ ಮ್ಯಾಂಚಸ್ಟರದ ನೀತಿಯು ದರಿದ್ರವಾಗಿದೆ.

ದಂಗೆ ಮತ್ತು ಕಲೆಕ್ಟರರು–

ಹಿಂದೂ ಮುಸಲಮಾನ ದಂಗೆಯಾಗಲಿಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಯಾವದೊಂದು ಜಾತಿಯ ಪಕ್ಷಪಾತ ಹಿಡಿಯುವದೇ ಮುಖ್ಯ ಕಾರಣವಾಗುತ್ತದೆ. ಯಾವ ಜಿಲ್ಹೆಯಲ್ಲಿ ದಂಗೆಯಾಗುತ್ತದೆ; ಆ ಜಿಲ್ಹೆಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಅಥವಾ ಕಲೆಕ್ಟರನು "ನಾಲಾಯಕ" ನಿರುತ್ತಾನೆಂದು ಹೇಳಿ, ಆತನಿಗೆ ಸರಕಾರದವರು ಯಾವದೊಂದು ಶಾಸನ ಮಾಡುವದಾದರೆ– ದಂಗೆಗಳಾಗಲಾರವೆಂದು ದಿವಾನ ಬಹಾದ್ದೂರ ಚಿಂತಾಮಣಿಯವರು ಸಂಯುಕ್ತ ಪ್ರಾಂತದ ಕೌನ್ಸಿಲದಲ್ಲಿ ಭಾಷಣ ಮಾಡಿದ್ದಾರೆ. ಕಲೆಕ್ಟರರಿಗೆ ನಾಲಾಯಕಿಯ ಸರ್ಟಿಫಿಕೇಟು ಕೊಡುವಂಥ ಬುದ್ಧಿಯು ಸರಕಾರಕ್ಕೆ ಹುಟ್ಟಿದರೆ– ದೇಶದಲ್ಲಿ ಅಸಂತೋಷವೇ ಉಂಟಾಗಲಾರದು.

ಪರದುಃಖ ಶೀತಲ–

ಉತ್ತರ ಹಿಂದುಸ್ಥಾನದ ಒಂದು ತುರಂಗದಲ್ಲಿ ಒಬ್ಬನಿಗೆ ಹೊಡೆಯಬೇಕಾದ ಛಡಿಯನ್ನು ತಪ್ಪಿ ಮತ್ತೊಬ್ಬನಿಗೆ ಹೊಡೆದರು. ಈ ಅನ್ಯಾಯದ ಬಗ್ಗೆ ಪಾರ್ಲಮೆಂಟ ಸಭೆಯಲ್ಲಿ ಪ್ರಶ್ನೆ ಹೋಟಿತು. ಇದೇನು ದೊಡ್ಡ ಮಾತಲ್ಲ, ಫೋಳ ನಂದ [illegible] ಉತ್ತರ ಕೊಟ್ಟರು. ಸಾಹೇಬರೇ ಆ ಛಡಿಯ ಪೆಟ್ಟುಗಳು ನಿಮಗೇ ಬಿದ್ದಿದ್ದರೆ– ಹೇಗಾಗುತ್ತಿತ್ತೆಂದು ಒಂದು ಪತ್ರವು ಪ್ರಶ್ನೆ ಮಾಡಿರುತ್ತದೆ.

ಜಪಾನರಿಗೆ ಬಹಿಷ್ಕಾರ–

ಜಪಾನದ ಒಟ್ಟೆಯ ವ್ಯಾಪಾರ ಮಾಡುವಂಥ ಜವಳಿಯವರಿಗೆ ಶಾಂಘಾಯಿಯ ಬಹಿಷ್ಕಾರವಾದಿಗಳು ಜುಲೈದಿಂದ ನವ್ಹೆಂಬರದ ತನಕ ಜಪಾನದ ಬಟ್ಟೆಯ ವ್ಯಾಪಾರ ಮಾಡಬಾರದು. ಈ ವ್ಯಾಪಾರದ ಹಣದ ವಿನಿಮಯವನ್ನು ಆಗಸ್ಟ ಜುಲೈದಿಂದ ನಿಲ್ಲಿಸಲ್ಪಡುವದೆಂದು ಜಾಹೀರ ಮಾಡಿದ್ದಾರೆ ಈ ಬಹಿಷ್ಕಾರದ ಪರಿಣಾಮವು ಶಾಂಘಾಯಿಯಲ್ಲಿಯೇ ಇರುವ ಜಪಾನದ ಗಿರಣಿಗಳ ಮೇಲೆ ಹೇಗಾಗುವದೆಂಬದು ತಿಳಿಯುವದಾಗಿದೆ.

ಮುನಸಫರ ಆತ್ಮಹತ್ಯೆ–

ದರಭಂಗಾದ ಮುನಸಫರಾಗಿದ್ದ ಮಿ. ಮೂಕರಜಿ ಎಂಬವರು ಗುಂಡು ಹಾಕಿಕೊಂಡರು. ಆತ್ಮಹತ್ಯ ಮಾಡಿಕೊಂಡವರು ಸಾಯುವ ಪೂರ್ವದಲ್ಲಿ ಕಲೆಕ್ಟರ ಮತ್ತು ತಮ್ಮ ಹೆಂಡತಿಯ ಹೆಸರಿನಿಂದ ಎರಡು ಪತ್ರಗಳನು ಬರೆದಿಟ್ಟಿದ್ದರು. ಪೂರ್ಣ ವಿಚಾರ ಮಾಡಿ, ಗುಂಡ ಹಾಕಿ ಕೊಂಡಿದ್ದೇನೆ ಅದರ ಕಾರಣವು ನನಗೇ ಗೊತ್ತು. ಬರೆದು ಹೇಳುವಂತಿಲ್ಲೆಂಬದಾಗಿ ಆ ಪತ್ರಗಳಲ್ಲಿ ಬರೆದಿದ್ದಾರೆ.

ಬಂಗಾಲದಲ್ಲಿ ಪಟವಾಖಾಲಿಯ ಸತ್ಯಾಗ್ರಹ ನಡೆದು ೨೫೭ ದಿವಸಗಳಾದವು. ೯೯೩ ಜನ ಸ್ವಯಂಸೇವಕರು ತುರಂಗ ಕಂಡು ಬಂದರು. ಸತ್ಯಾಗ್ರಹವೂ ನಿಂತಿಲ್ಲ. ಸರಕಾರವೂ ಮಣಿವಿಲ್ಲ. ಇಬ್ಬರ ಕುಸ್ತಿಯೂ ಸಮವಾಗಿದೆ.

ಬ್ರಹ್ಮದೇಶದಲ್ಲಿ ಸಾನಹೇಪನೆಂಬವನು ಬಹಳ ಪುಂಡತನ ನಡಿಸಿದ್ದಾರೆ. ಈತನನ್ನು ಹಿಡಿಯುವದಕ್ಕಾಗಿ ೧೫೦ ಜನ ಪೋಲಿಸರು ತಿರುಗಿದ್ದಾರೆ. ಹಿಡಿದವರಿಗೆ ಸರಕಾರದವರು ಐದು ಸಾವಿರ ರೂಪಾಯಿ ಇನಾಮು ಕೊಡುವರು.

ಮಿ. ವಡಿಯರ ಇವರು ಭಡೋಚ ಜಿಲ್ಹೆಗೆ ಡಿ. ಡಿ. ಕಲೆಕ್ಟರರಾಗಿ ವರ್ಗ ಮಾಡಲ್ಪಟ್ಟಿದ್ದಾರೆ.

ಮದ್ರಾಸಿನಲ್ಲಿ ನೀರಿನ ಕೊರತೆಯಾಗಿದ್ದರಿಂದ; ಊರೊಳಗಿನ ಖಾಸಗಿ ಮತ್ತು ಸಾರ್ವಜನಿಕ ಬಾವಿಗಳಿಗೆ ಪಹರೆ ಹಚ್ಚಿ, ನೀರು ಹೊರಗೆ [illegible] [illegible] ಮುನಸಿಪಾಲಿಟಿಯವರಲ್ಲಿ [illegible] [illegible]

ನೋಟೀಸು

ಹಜರತಬಿ ಕೋಂ ಖುತಬೋದಿನ್ ಮುಲ್ಲಾ ಸಾಕೀನ ವೆಂಕಟಾಪೂರ ಹಾಲಿವಸ್ತಿ ಧಾರವಾಡ ಇವರಿಗೆ—

ಕೆಳಗೆ ಸಹ ಮಾಡುವವನ ಕಡಿಂದಾ ನೋಟೀಸಿನಿಂದ ತಿಳಿಸುವದೇನಂದರೆ— ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನವಾಗಿ ಅಜಮಾಸು ೧೨ ವರ್ಷವಾಯಿತು ಆವಾಗ್ಗೆ ನಾಲ್ಕು ಮಂದಿ ಪ್ರಮುಖ ಸಮಕ್ಷಮ ನಿನ್ನ ಮೈಮೇಲೆ ಹಾಕಿದ ದಾಗೀನೆಗಳ ತಪಸೀಲ— ಬಂಗಾರದ ಬಳಿ ಜೋಡು ೧ ತೊಲಿ ೬ ಕಿಮ್ಮತ್ತು ೧೫೦ ಬಂಗಾರದ ಗೆಜ್ಜೆ ಟಿಕ್ಕಿ ೧ ತೋಲಿ ೧|| ಕಿಮ್ಮತ್ತು ೪೦ ಬೆಳ್ಳಿತೋಡೆ ಬಂದಿ ೧ ತೊಲಿ ೨೪ ಕಿಮತ್ತು ೨೪ ಸರಿಗಿ ಸರ ೨೦ ತೊಲಿ ೨೪ ಅಜಮಾಸು ಕಿಮತ್ತು ೨೪ ಗೆಜ್ಜೆ ಪಟ್ಟಿ ತೊಲಿ ೨೦ ಕಿಮ್ಮತ್ತು ೨೦ ಕೋಡೆ ಜೋಡು ೧ ತೊಲಿ ೧೬೦ ಕಿಮ್ಮತ್ತು ೮೦ ದಂಡಿದ ಕಾಲಿ ೧ ರ|| ೫೦ ಈ ಪ್ರಕಾರ ಮುನ್ನೂರಾಯಿಂಬತೆಂಟು ರೂಪಾಯದ ಕಿಮ್ಮತ್ತಿನವು ಹಾಕಿ ಲಗ್ನವಾದ ತಿಂಗಳ ಮೇಲೆ ದಡವಾಡಕ್ಕೆ ನಿಮ್ಮ ತಮ್ಮನ ಮನೆಯು ವ್ಯವಸ್ಥಾ ಮಾಡುವ ಕೆಲಸವದೆ ಎಂದು ನನ ಹೆಳಿ ಅಹಮ್ಮದಖಾನ ವ|| ಮಹಾಮೂದಖಾನ ದೊಡ್ಡಮನಿ ಇವನ ಕೂಡಾ ಹೋಗಿ ಮುಂದೆ ಕೆಲವು ದಿವಸ ಹಾದ್ದರಿಂದ ಹಲವು ಸಾರೆ ಕರಿಯಲಿಕ್ಕ ಬಂದರೆ ಒಕಲಿಲ್ಲಾ ಮತ್ತು ದಡವಾಡದ ಸಂಭಾವಿತ ಜನರಿಂದಾ ಹೇಳಿಸಿದರೂ ಸಹಾ ಬರಲಿಲ್ಲಾ ಹೀಗಿದ್ದು ಸದರ ಅಹಮದಖಾನ ಸಂಗಡಲೇನೆ ಇದ್ದು ೨-೩ ಮಕ್ಕಳನ್ನ ಹಡದು ಜನನ ಮರಣದ ರಜಿಷ್ಟರಕ್ಕೆ ನನ್ನ ಹೆಸರು ದಾಖಲ ಮಾಡಿರುತ್ತಿ ಎಂದು ಕೇಳುತ್ತೇನೆ ಇದಲ್ಲದೆ ಈಗಾಗಲೆ ದಡವಾಡದ ಮುಸಲಮಾನ ಗೃಹಸ್ತರಿಗೆ ನೋಟೀಸು ಮಾಡಿ ತಿಳಿಸಿದ ಪ್ರಕಾರ ಅವರು ನಿಮ್ಮ ಮನಿತನಕ್ಕೆ ಸಹ ಬೈಷ್ಕಾರ ಕೊಟ್ಟಿರುತ್ತಾರೆ ಆದಕಾರಣ ನಮ್ಮ ಧರ್ಮದ ವಿರುದ್ಧ ನಡಕೊಂಡದ್ದರಿಂದ ನನ್ನ ಮೇಲೆ ನಿನಗೆ ಬರತಕ್ಕ ಮಹಾರಿನ ರಕಮು ವ ನಿನ್ನ ಮಕ್ಕಳದು ಬೋಜಾ ನನ್ನ ಮೇಲೆ ಬಿಲಕೂಲ ಉಳಿಯಲಿಲ್ಲಾ ಇರಲಿ ಈ ನೋಟೀಸು ಮುಟ್ಟಿದ ೭ ದಿವಸಗಳಲ್ಲಿ ಮೇಲೆ ನಮೂದ ಇದ್ದ ದಾಗಿನೆ ಸಹಿತ ತಂದು ಕೊಟ್ಟು ನನ್ನ ಸೋಡಪತ್ರವನ್ನು ತೆಗೆದುಕೊಂಡು ಹೋಗಬೇಕು. ಇದಕ್ಕೆ ತಪ್ಪಿದರೆ ಮುಂದೆ ನಿನ್ನ ಮೇಲೆ ವ ನಿನ್ನನ್ನು ಮಾಡಿಕೊಂಡವನ ಮೇಲೆ ದಾಗೀನೆಗಳ ದಸಿಂದಾ ವ ಲಗ್ನದ ಖರ್ಚಿನ ದಸಿಂದಾ ಯೋಗ್ಯ ಇಲಾಜ ಮಾಡಲಾದೀತು. ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದೆ. ತಿಳಿಯುವದು.

ತಾ|| ೨೫-೬-೧೯೩೨ ನೇ ಇಸ್ವಿ

ಈ ಯಡಗೈ ಹೆಬ್ಬಟ್ಟಿನ ಗುತಾರ್ ಖುತಬೋದಿನ್ ಪ|| ಫಕರೊದಿನ ಮುಲ್ಲಾ ಸಾಕೀನ ವೆಂಕಟಾಪೂರ ಈತನ ಕೈದು ಅದೆ.

ನೋಟೀಸು.

ಜೂವತ್ತು ಜನರಿಗೆ ತಿಳಿಸುವದೇನಂದರೆ— ರಾ. ಸಾ. ಅಣ್ಣಾಚಾರ್ಯ ಕಟ್ಟಿ ವಕೀಲ ಧಾರವಾಡ ಇವರ ಸಾಗ್ವಾನಿ ಪೆಟ್ಟಿಗೆ (ಆಫೀಸ ಬಾಕ್ಸ) ಅಂದರೆ ಭಂಗಾರ, ಬೆಳ್ಳಿ, ರೊಕ್ಕ ಇಲ್ಲದ್ದು ಖಾಸಗಿ ಕಾಗದ ಪತ್ರಗಳಿದ್ದದ್ದು ಧಾರವಾಡ ಜಿಲ್ಲಾ ಹಾವೇರಿ ಹದ್ದಿಯಲ್ಲಿ ಕಳೆದು ಹೋಗಿರುತ್ತದೆ ಈ ಪೆಟ್ಟಿಗೆಯು ಯಾರಿಗಾದರೂ ಸಿಕ್ಕಿದ್ದರೆ ಒಂದು ವಾರದಲ್ಲಿ ತಂದು ಕೊಟ್ಟವರಿಗೆ ಯೋಗ್ಯ ಇನಾಮು ಕೊಡುವದರಲ್ಲಿ ಬರುವದು. ತಾರೀಖು ೨೧-೬-೩೨ನೇ ಇಸ್ವಿ

ಅನಂತಾಚಾರ್ಯ ವೆಂಕಣ್ಣಾಚಾರ್ಯ ಚಿಕ್ಕೇರೂರ
ಧಾರವಾಡ ಜಿಲ್ಲಾ

ವಿಶೇಷ ಸೂಚನೆ— ಪೆಟ್ಟಿಗೆ ಸಿಕ್ಕವರು ಕೆಳಗೆ ಬರೆದ ಪತ್ತೆಗೆ ತಿಳಿಸಿದರೆ ಕೆಳಗೆ ಸಹಿ ಮಾಡಿದ ಅನಂತಾಚಾರ್ಯ ಚಿಕ್ಕೇರೂರ ಇವರಿಗೆ ತಿಳಿಯುವದು.

ರಾ. ಸಾ. ಕಟ್ಟಿ ವಕೀಲ, ಕಿಲ್ಲೆ ಧಾರವಾಡ — ಅಥವಾ — ಸು. ಹ. ಭಾದ್ರಿ ವಕೀಲ, ಹಾವೇರಿ

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಸುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ನೋಟೀಸು.

ಮೋದಿನಸಾ|| ವ|| ಸಣ್ಣ ಹಸನಸಾ|| ಕಾಜಿ ಗರಗ ಹಾಲಿವಸ್ತಿ ಧಾರವಾಡ ಇವರಿಗೆ—

ಉಸಮಾನಸಾ|| ವ|| ಸಣ್ಣ ಮಕ್ತುಮಸಾ|| ಕಾಜಿ ಸಾ. ಗರಗ ನಾನು ಇಂತಕ್ಕ ಹಳೆ ಮಾಳ್ಗಿ ಮನೆಯು ಇದರ ಪೈಕಿ ನಿನ್ನ ಹಿಸೇದ ಮನೆಯು ಹಿತ್ತಲಾ ಅಂಗಳ ವ ಪಡಸಾಲಿಗಾ ಸಹಿತಾ ಕೋರ್ಟಿನಿಂದ ಹಿಸೆ ಆದ ನಂತ್ರ ಅಜಮಾಸ ೧೭ ವರ್ಷಗಳಿಂದ ನಾನು ವಾರಸದಾರನಾಗಿ ನನ್ನ ವಹಿವಾಟಿಯಲ್ಲಿ ಇದ್ದದ್ದನ್ನು ಒಳಗಡೆ ನೀನು ಮೂರು ನೂರು ರೂಪಾಯಿಗಳಿಗೆ ಖರೀದಿ ಗೊತ್ತು ಮಾಡಿದ್ದರ ಪೈಕಿ ರೋಖ ಒಂದನೂರಾ ಇಪ್ಪತ್ತು ರೂಪಾಯಿಗಳನ್ನು ನನ್ನ ಕಡಿಂದಾ ನೀವು ತಗೊಂಡು ಖರಿದಿ ಪಾವತಿ ಮಾಡಿಕೊಟ್ಟಿರುತ್ತೀರಿ ಖರೀದಿ ಬಾಬತ ಬಾಕಿ ಉಳಿದ ರೂಪಾಯಿಗಳನ್ನು ತಗೊಂಡು ಖರೀದಿ ಪತ್ರ ಮಾಡಿ ನೊಂದಾಯಿಸಿಕೊಡದಕ್ಕೆ ಇಂದ ನಾಳೆ ಅಂತಾ ದಿನಮೋಕ ಮಾಡತೀರಿ. ಸದರ ಮನೆಯ ಕೆಲವು ಭಾಗ ಬಿದ್ದು ಕೆಲವುಭಾಗ ಬೀಳುವ ಸಂಭವವದೆ. ಕಾರಣ ಈ ನೋಟೀಸ ಮುಟ್ಟಿದ ಯೆಂಟು ದಿವಸಗಳಲ್ಲಿ ನಿಮ್ಮ ಬಾಕಿ ಉಳಿದ ರೂಪಾಯಿಗಳನ್ನು ತಗೊಂಡು ಖರೀದಿ ಪತ್ರ ನೊಂದಾಯಿಸಿ ಕೊಡಬೇಕು ಹಾಗೆ ಇದಕ್ಕೆ ತಪ್ಪಿದರೆ ನಿಮ್ಮಿಂದ ನನಗೆ ಆಗುವ ಲುಕ್ಸಾನವನ್ನು ಕಾಯದೆ ಪ್ರಕಾರ ವಸೂಲ ಮಾಡಲಾದೀತು ಈ ನೋಟೀಸಿನ ಖರ್ಚು ನಿಮ್ಮ ತಲೆಯ ಮೇಲೆ ಅದೆ ತಿಳಿಯುವದು ತಾ ೨೩-೬-೩೨

ಯು. ಎಮ್. ಕಾಜಿ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ನಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1448

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ!

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮: ಧಾರವಾಡ ಸೋಮವಾರ ತಾರೀಖು ೨೭ ನೇ ಜೂನ ೧೯೨೭ ಸಂಚಿಕೆ ೧೩೬

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಊಸುಗಳುಂಟು. ಗಾಲಿಯ ವ್ಯಾಸವು ೩೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ, ಜಿಲ್ಲಾ, ಸಾತಾರಾ

ನೋಟೀಸಿನ ದರಗಳು.

—o—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ... ಕೋರ್ಟು, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಇಲ್ಲವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ಲಿ ಗೆ ಮೂ ರಾ ಣೆ— ಇಂ ಗ್ಲಿ ಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಕ್ಕೆ ಎರಡು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—[o][o]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—o—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರಿಗಳು ಆರು ಲಕ್ಷದ ಮೇಲುಂಟು. ಚಕ್ಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುತ್ತವೆ. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿವರ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವಿಠ್ಠಲರಾವ ಜಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಪದ್ಧತಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂಟಾಗುತ್ತದೆ.

ಎ. ಪಾ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-೨೭-೬-೨೭ ನೇ ಇಸ್ವಿ

ರಾಯಲ ಕಮಿಶನದಿಂದ ಸ್ವರಾಜ್ಯ ದೊರೆಯುವದೇ?

ರಾಯಲ ಕಮಿಶನದ ವಿಷಯವಾಗಿ ರಾಜಕಾರಣ ಪಟುಗಳೆಂಬವರು ತರ ತರದ ವಿಚಾರಗಳನ್ನು ಪ್ರಕಟ ಮಾಡುತ್ತಿದ್ದಾರೆ. ಪಿಂಡವಿದ್ದಷ್ಟು ಪ್ರಕೃತಿಯು. ಮವಾಳ, ರಾಷ್ಟ್ರೀಯ, ಅಸಹಕಾರ, ಬ್ರಾಹ್ಮಣೇತರ ಮೊದಲಾದವರೆಲ್ಲರೂ ತಂತಮ್ಮ ಕುದುರೆಗಳಿಗೆ ಹಣೆಪಟ್ಟಿ ಕಟ್ಟಿ, ಅದನ್ನು ಬೇಕಾದವರು ಕಟ್ಟಿ ಹಾಕಲೆಂದು ಅಶ್ವಮೇಧ ಯಜ್ಞದ ದೀಕ್ಷೆ ತಕ್ಕೊಂಡಿದ್ದಾರೆ. ಇದರಲ್ಲಿ ತಾವೇ ಜಯಶಾಲಿಯಾಗುವರೆಂದು ಪ್ರತಿಯೊಬ್ಬರು ಅಂದುಕೊಳ್ಳುತ್ತಿದ್ದಾರೆ. ತಮ್ಮೆಲರ ತಲೆಯ ಮೇಲೂ ಮೆಣಸು ಅರೆಯುವಂಥ ಧೀರರು ಅರಸರಾಗಿದ್ದಾರೆಂಬುದನ್ನು ಯಾವಾಗಲು ಮರೆಯುವಂತಿಲ್ಲ. ಕಳೆದ ೫೦ ವರ್ಷಗಳಲ್ಲಿ ಇರಾಣ, ಇಜಿಪ್ತ, ಚೀನದೇಶಗಳು ಸ್ವಾತಂತ್ರ್ಯತೆಗಾಗಿ ಪ್ರಯತ್ನ ಮಾಡಿವೆ. ಅವುಗಳ ಇತಿಹಾಸವನ್ನು ನೋಡಿದರೆ- ರಾಯಲ ಕಮಿಶನದಂಥ ನೂರಾರು ಕಮಿಶನಗಳು ಬಂದರೂ ಸ್ವರಾಜ್ಯ ಸ್ವಾತಂತ್ರ್ಯ ದೊರೆಯಲಾರದೆಂದು ಧಾರಾಳವಾಗಿ ಹೇಳಬಹುದು. ಸ್ವಾತಂತ್ರ್ಯವೆಂದರೇನೆಂಬ ಪ್ರಶ್ನವು ಮಹತ್ವದ್ದಾಗಿರುತ್ತದೆ. ಅದರ ಮುಖ್ಯಾಂಶಗಳು ಕೆಳಗೆ ಹೇಳಿದಂತಿರುತ್ತವೆ.

೧ ಚುನಾವಣಿಯು ಪೂರ್ಣ ಸ್ವಾತಂತ್ರ್ಯವಿರಬೇಕು.

೨ ಕೌನ್ಸಿಲಗಳಲ್ಲಾದ ಠರಾವುಗಳಂತೆ ರಾಜ್ಯಕಾರಭಾರ ನಡಿಯಬೇಕು.

೩ ಗವ್ಹರ್ನರ- ಗವ್ಹರ್ನರ ಜನರಲರು ಕೌನ್ಸಿಲಗಳಿಗೆ ಅಧೀನರಾಗಿರಬೇಕು.

೪ ಪ್ರಧಾನ ಮೊದಲಾದವರನ್ನು ತೆಗೆದು ಹಾಕುವ ಅಧಿಕಾರವು ಕೌನ್ಸಿಲಗಳಿಗಿರಬೇಕು.

೫ ಯುದ್ಧ ಮಾಡುವದು, ಒಡಂಬಡಿಕೆ ಮಾಡಿಕೊಳ್ಳುವದು, ಹಣದ ವೆಚ್ಚ ಮಂಜೂರು ಮಾಡುವದು ಕೌನ್ಸಿಲಗಳ ಅಧಿಕಾರಕ್ಕೊಳಪಟ್ಟಿರಬೇಕು.

೬ ರಾಷ್ಟ್ರಹಿತವರ್ಧನೆಗೆ ಅವಶ್ಯವಾದ ಎಲ್ಲ ಕರ್ತವ್ಯಗಳನ್ನು ಮಾಡಲು ಕೌನ್ಸಿಲದ ಅಪ್ಪಣೆಯಂತೆ ನಿಯೋಜಿತರಾದ ಅಧಿಕಾರಿಗಳು ಕರ್ತವ್ಯದಕ್ಷರಾಗಿರತಕ್ಕದ್ದು.

ಇವುಗಳಲ್ಲಿ ಸದ್ಯದ ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಯಾವ ಅಧಿಕಾರ ದೊರೆತಿರುತ್ತವೆಂಬುದನ್ನು ನೋಡುವಾ-

೧ ಚುನಾವಣಿಯು ಸಂಪೂರ್ಣ ಸ್ವಾತಂತ್ರ್ಯವಿಲ್ಲ. ವಯಸ್ಸಿಗೆ ಬಂದಂಥ ಪ್ರತಿಯೊಬ್ಬ ಸ್ತ್ರೀಪುರುಷನಿಗೆ ಮತಕೊಡುವ ಅಧಿಕಾರವಿರಬೇಕು. ಅಂಥ ಅಧಿಕಾರ ದೊರೆಯುವ ಸಂಭವವಿಲ್ಲ.

೨ ಕೌನ್ಸಿಲಗಳಲ್ಲಾಗುವ ಠರಾವುಗಳಂತೆ ರಾಜ್ಯಕಾರಭಾರ ನಡೆಯುವದು ಸಹಸಾ ಶಕ್ಯವಿಲ್ಲ. ಇದಕ್ಕೆ ಎರಡು ವಿಘ್ನಗಳುಂಟು. ಅಳರಸರು ತಮ್ಮ ವತಿಯಿಂದ ಕೆಲವರನ್ನು ನೇಮಿಸುವರು. ಮಂತ್ರಿಗಳಲ್ಲದೆ, ಕಮಿಶನರ ಮೊದಲಾದವರನ್ನು ತಮಗೆ ಬಲವಾಗಿ ಕಾಯಮ ಮೆಂಬರ ಮಾಡಿದ್ದಾರೆ. ಕೌನ್ಸಿಲದಲ್ಲಿ ಯಾವದೊಂದು ಠರಾವು ಪಾಸಾದರೂ ಅದನ್ನು ರದ್ದು ಮಾಡಿದ ಸರ್ಟಿಫಿಕೇಟು ಕೊಡುವ ಅಸಾಧಾರಣ ಅಧಿಕಾರವನ್ನು ಗವ್ಹರ್ನರರಿಗೆ ಕೊಟ್ಟಿದ್ದಾರೆ. ಇಂಥ ಅಧಿಕಾರವು ಜಗತ್ತಿನಲ್ಲಿ ಎಲ್ಲಿಯೂ ಇರುವದಿಲ್ಲ.

೩ ಗವ್ಹರ್ನರ- ಗವ್ಹರ್ನರ ಜನರಲ್ಲರು ಕೌನ್ಸಿಲ ಅಥವಾ ಅಸೆಂಬ್ಲಿಗೆ ಅಧೀನರಾಗುವರೆಂಬುದು ಈಗಿನ ಧೋರಣದ ಪ್ರಕಾರ ಕನಿಷ್ಠ ೫೦ ವರ್ಷಗಳ ಪರ್ಯಂತರ ಶಕ್ಯವಲ್ಲ. ಈ ಅಧಿಕಾರಿಗಳು ಹಿಂದೀ ಗೃಹಸ್ಥರಾದ ಮೆಂಬರ ಕೌನ್ಸಿಲಗಳಿಗೆ ಅಧೀನರಾಗಿ ನಡೆಯಲಾರರು. ಯುರೋಪಿಯನ್ನರು ಪಾರತಂತ್ರ್ಯದಲ್ಲಿ ಸಿಕ್ಕು ರಾಜ್ಯಕಾರಭಾರ ನಡಿಸಲಿಕ್ಕೆ ಬರಲಾರರು.

೪ ಯಾವದೊಂದು ಧೋರಣವು ಬಹುಮತದಿಂದ ಪ್ರಧಾನರಿಗೆ ಪ್ರತಿಕೂಲವಾದರೆ- ಅವರು ರಾಜೀನಾಮೆ ಕೊಡುವದು ವಿಲಾಯತಿಯಲ್ಲಿ ಶಿಷ್ಟ ಸಾಂಪ್ರದಾಯವಾಗಿರುತ್ತದೆ. ಇಲ್ಲಿ ಪ್ರಧಾನರೆಂಬವರೇ ಇರುವದಿಲ್ಲ. ಗವ್ಹರ್ನರ ಜನರಲ್ಲರು ವಿಲಾಯತಿಯಿಂದ ಬರುವರು. ಇವರ ಅಪ್ಪ ಪ್ರಧಾನರು ಪಾರ್ಲಮೆಂಟಿನ ಒಪ್ಪಿಗೆಯಿಂದ ನೇಮಿಸಲ್ಪಟ್ಟವರಿರುತ್ತಾರೆ. ಇವರಿಗೆ ಠರಾವು ಪ್ರತಿಕೂಲವಾದರೇನು? ಅನುಕೂಲವಾದರೇನು? ಸುಖದುಃಖಗಳಿಂದ ಅಲಿಪ್ತರಾಗಿರುತ್ತಾರೆ. ಊರು ಸುಟ್ಟರೂ ಹಣಮಪ್ಪ ಹೊರಗೆ!!

೫ ಯುದ್ಧ ಮಾಡುವದು, ಒಡಂಬಡಿಕೆ ಮಾಡುವ ವಿಚಾರವಂತೂ ಬಹು ವರ್ಷಗಳ ಕನಸು. ದಂಡಿನ ಅಧಿಕಾರವಿಲ್ಲ. ಪರರಾಷ್ಟ್ರಗಳಲ್ಲಿ ಹಿಂದುಸ್ಥಾನದ ರಾಯಭಾರಿ ಇರುವದಿಲ್ಲ. ಹಿಂದುಸ್ಥಾನವು ಇಂಗ್ಲಂಡದ ಒಂದು ಭಾಗವಾಗಿರುವದರಿಂದ, ಇಂಗ್ಲಂಡವು ಕುಣಿಸಿದಂತೆ ಕುಣಿಯುವದೇ ಹಿಂದುಸ್ಥಾನದ ಕೆಲಸವು. ಕಾಂಗ್ರೆಸ ಸಭೆಯು ಚೀನಕ್ಕೆ ಹಿಂದೀ ಸೈನ್ಯ ಕಳಿಸಬಾರದೆಂದು ಮಾಡಿದ ಠರಾವಿನ ಪರಿಣಾಮವೇನಾಯಿತು? ೩೩ ಕೋಟಿ ಹಿಂದೀ ಜನರ ವಿರೋಧದ ನೋವು ಆನೆಗೆ ನೊಣ ಕಡೆದಷ್ಟು ಕೂಡ ಬ್ರಿಟಿಶ ಪ್ರಭುತ್ವಕ್ಕಾಗಲಿಲ್ಲ.

೬ ರಾಷ್ಟ್ರ ಹಿತವರ್ಧನೆಗೆ ಅವಶ್ಯವಾದ ಕರ್ತವ್ಯಗಳಲ್ಲಿ ಸದ್ಯದಲ್ಲಿ ಮುಂಬಯಿಯ ಗಿರಣಿಗಳಿಗೆ ಬಂದ ಸಂಕಟವು ಒಂದು ಪ್ರತ್ಯಕ್ಷ ಉದಾಹರಣೆಯಾಗಿದೆ. ಹಿಂದುಸ್ಥಾನದ ಯುನಿವ್ಹರ್ಸಿಟಿಗಳು ಬರೇ ಕಾರಕೂನರನ್ನು ತೆಗೆಯುವ ಶಿಕ್ಷಣಾಲಯಗಳಾಗಿವೆ. ವಿಲಾಯತಿಯಲ್ಲಿ ಬೆಳೆಯುವಂಥ ಪುಟ್ಟ ದೇಶದಲ್ಲಾಗಿರುವ ಆರ್ಥಿಕ ಅಭ್ಯುದಯವನ್ನು ನೋಡಿದರೆ- ಸಾಕು, ಹಿಂದುಸ್ಥಾನ ಸರಕಾರವು ಎಷ್ಟು ಹಿಂದಿರುತ್ತದೆಂಬುದು ಕಾನಾಗಿ ವಿದಿತವಾಗುತ್ತದೆ.

ಮೇಲಿನ ವಿಚಾರಗಳಿಗೆ ಸೋಜಿಗವೆನಿಸುವಂತೆ ಲಾರ್ಡ ರೀಡಿಂಗಸಾಹೇಬರು ಕಮಿಶನದ ಅಧ್ಯಕ್ಷರಾಗಿ ಬರುವರೆಂಬ ವಾರ್ತೆಯು. ಇವರು ಬಂದರಂತೂ ಮಾತೇ ಮುಗಿಯಿತು. ತಮ್ಮ ಕಳೆದೈದು ವರ್ಷಗಳ ಕಾರಭಾರದ ಮೇಲೆ ತಾವೇ ಠರಾವು ಬರೆಯುವಂತಾಯಿತು. ಇವರಂತೂ ಬೇಡವೇ ಬೇಡ. ಹಿಂದುಸ್ಥಾನದ ಬಗ್ಗೆ ಪೂರ್ವಾಗ್ರಹಿಕೆಯಿಲ್ಲದಂಥ ಒಬ್ಬ ಸಾಹೇಬರು ಅಧ್ಯಕ್ಷರಾಗಿ ಬರಲೆಂದು ಕೆಲವರೆನ್ನುತ್ತಾರೆ. ಯಾರು ಬಂದರೇನು? ಅವರು ಮೊದಲು ಇಂಗ್ಲಂಡದ ಹಿತ, ಇಂಗ್ಲಿಷ ಕಾಮದಾರರ ಹಿಗುವು, ಇಂಗ್ಲಿಷ ವ್ಯಾಪಾರದ ತೇಜಿಯನ್ನು ಮುಂದಿಟ್ಟುಕೊಂಡೇ ವಿಲಾಯತಿಯಿಂದ ಪ್ರಯಾಣ ಬೆಳೆಸುವರು. ಈ ತೇಜಿಗೂ ಹಿಂದೂ ಜನರು ಬಿಡುವ ತೇಜಿಗೂ ಆಗುವ ಅಹವದಲ್ಲಿ ವಿಲಾಯತಿಯ ತೇಜಿಯು ತೇಜಸ್ಸೇ ಹೆಚ್ಚುವದುಂಟು!!! ಅಂದಬಳಿಕ ಸ್ವರಾಜ್ಯವೆಂತಹುದು?

ಮೊಹರಮ್ಮ ಹಬ್ಬದಲ್ಲಿ ಮುಸಲಮಾನರು ಎದೆ ಎದೆ ಬಡಕೊಂಡು ಅಳುವರು. ಕಬ್ಬಿಣದ ಹಾಪಾದ ಮುಳ್ಳುಗಳ ಮೇಲೆ ನಿಂತು, ರಕ್ತ ತರಿಸಿಕೊಂಡು, ಅಸುರತನದಿಂದ ಜರಿಂದ ದ್ರವ್ಯ ಸೆಳೆಯುವರು. ಧರ್ಮದ ಹೆಸರಿನಿಂದ ನಡೆಯುವ ಇವೆರಡೂ ಆಚಾರಗಳು ಮುಸಲಮಾನ ಧರ್ಮವನ್ನು ಪಹಾಸ್ಯಕ್ಕೆ ಗುರಿಮಾಡುವಂಥವಾಗಿವೆ ಡು ಹೈದರಾಬಾದಿನ ನಿಜಾಮಸಾಹೇಬರು ಅಂದು, ಇವೆರಡನ್ನೂ ಬಂದು ಮಾಡುವಂತೆ ಫರಮಾನ ತೆಗೆದಿದ್ದಾರೆ.

ಪಾರ್ಲಮೆಂಟದ ಲಾರ್ಡರ ಸಭೆಯಲ್ಲಿ ನವೀನವಾದ ಸುಧಾರಣೆ.

—o—

ಹಿಂದುಸ್ಥಾನದ ರಾಜ್ಯಕಾರಭಾರದಲ್ಲಿ ೧೯೨೯ನೆಯ ಇಸವಿಯ ಆಚೆಯಿಂದ ಸುಧಾರಣೆ ಮಾಡಬೇಕೆಂದು, ರಾಯಲ ಕಮಿಶನ ಬರುವ ಮುಂಚಿತವಾಗಿಯೇ ಲಾರ್ಡರ ಸಭೆಯಲ್ಲಿ ಸುಧಾರಣೆ ಮಾಡಿ, ಅದನ್ನು ಆಚಂದ್ರಾರ್ಕ ಗಟ್ಟಿಮುಟ್ಟಿ ಮಾಡಬೇಕೆಂದು ಈಗಿನ ಮಂತ್ರಿಗಳು ಅವಸರ ಪಡುತ್ತಿದ್ದಾರೆ. ಇಂಗ್ಲಂಡದ ರಾಜಕೀಯ ಪರಿಸ್ಥಿತಿಯು ಚಮತ್ಕಾರವಾಗಿದೆ. ಕಾನ್ಸರವೇಟೀವ್ ಮತ್ತು ಲಿಬರಲರು ರಾಜಪಕ್ಷೀಯರು. ಅಂಸೊತ್ತಿಗೆ ಬೇಕೆನ್ನುವಂಥವರು. ಲೇಬರ ಅಥವಾ ಬೊಲ್ಸೆವಿಕ ಪಂಥವರು ಬಾದಶಾಹಿ ಬೇಡೆನ್ನುವಂಥವರು ಬಾದಶಹರ ವರ್ಧಂತಿಯ ದಿವಸ ಇವರ ವಿದ್ಯಾರ್ಥಿಗಳು ರಾಷ್ಟ್ರಗೀತಗಳನ್ನು ಹಾಡುವದರ ಬದಲು, ಬೊಲ್ಸೆವಿಕ ಗೀತೆ ಹಾಡಿ, ಕೆಂಪು ನಿಶಾನೆ ಹಿಡಕೊಂಡು ರಾಜನಿಷ್ಠೆಯನ್ನು ಅಣಕಿಸುವರು. ಪಾರ್ಲಮೆಂಟದ ಚುನಾವಣೆಯಲ್ಲಿ ಕೂಲಿಕಾರರ ಬಹುಮತವಾಗಿ ಅವರು ಎಂದೇ ವರ್ಷ ದಿವಾನರಾದರೆ ಸಾಕು. ಅವರು ಬಹುಮತದ ಬಲದಿಂದ ಗುಂಡಿನ ಸಪ್ಪಳ ಮಾಡದೆ, ಅರಸೊತ್ತಿಗೆಯನ್ನೂ, ಲಾರ್ಡರನ್ನೂ ಅಳಿದು, ಪ್ರಜಾಸತ್ತಾತ್ಮಕ ದೊರೆತನ ಸ್ಥಾಪಿಸಬಹುದಾಗಿದೆ. ಈ ಪ್ರಕಾರ ಅವರು ಮಾಡಬಹುದೆಂಬ ಹೆದರಿಕೆಯು ಮಂತ್ರಿಗಳಿಗುಂಟಾಗಿದ್ದು, ಆ ಪ್ರಕಾರ ಪಾರ್ಲಮೆಂಟ ಸಭೆಯಲ್ಲಿ ಭಾಷಣ ಮಾಡಿದ್ದಾರೆ. ಕೂಲಿಕಾರರ ಉಚ್ಛ್ರಾಂಖಲತನವು ಯಾವಾಗಲು ಅನುಕೂಲ್ಲದಂತೆ ಹೆಚ್ಚಾಗಬಾರದು; ಲಾರ್ಡರ ಸಭೆಯು ಬಲಿಷ್ಠವಾದರೆ ಅರಸೊತ್ತಿಗೆಯೂ ಉಳಿಯುವದು. ಲಾರ್ಡರೂ ಉಳಿಯುವರೆಂದು ಭಾವಿಸಿ, ಈ ಬಗ್ಗೆ ಹೊಸ ಕಾಯದೆ ಮಾಡಹೊರಗಿದ್ದಾರೆ. ಪಾರ್ಲಮೆಂಟದ ಚುನಾವಣೆಯು ೧೯೨೯ರಲ್ಲಾಗುವದು. ಆಗ ಯಾವ ಪಕ್ಷದ ಮೇಲ್ಮೆಯಾಗುವದೆಂಬ ನಿಯಮವಿಲ್ಲ. ತತ್ಪೂರ್ವದಲ್ಲಿ ಲಾರ್ಡರ ತಳವನ್ನು ಗಟ್ಟಿ ಮಾಡಬೇಕೆಂದು ಮಂತ್ರಿಗಳು ಹಾತೊರೆದಿದ್ದಾರೆ.

ಇಂಗ್ಲಂಡದ ಗಿರಣಿಯವರು ಅಮೇರಿಕೆಯಿಂದ ಅರಳೆಯ ಇಪ್ಪತ್ತು ಲಕ್ಷ ಬೇಲುಗಳನ್ನು ಕರಿಸುವರು. ಹಿಂದುಸ್ಥಾನದಿಂದ ಒಂದು ಲಕ್ಷ ಇಪ್ಪತ್ತು ಸಾವಿರ ತರಿಸುವರು. ಹಿಂದುಸ್ಥಾನದ ಹೆಚ್ಚು ವ್ಯಾಪಾರವಾಗಬೇಕಾದರೆ ಹತ್ತಿಯಲ್ಲಿ ಸುಧಾರಣೆಯಾಗಬೇಕೆಂದು ಮ್ಯಾಂಚೆಸ್ಟರದ ಗಿರಣಿಯವರು ಅನ್ನುತ್ತಾರೆ.

ಆಯರ್ಲಂಡದ ಚುನಾವಣೆಯ ಗಲಭೆ.

—o—

ಆಯರ್ಲಂಡದಲ್ಲಾದ ಚುನಾವಣೆಯಲ್ಲಿ ಮಿ. ಕ್ರಾಸಗ್ರೇವ್ಹ ಸಾಹೇಬರ ಬಹುಮತವಾಗಲಿಲ್ಲ. ಆದ್ದರಿಂದ ಅವರು ದಿವಾನಗಿರಿಗೆ ಅಭಿಲಾಷೆ ಪಡುವದಿಲ್ಲೆಂದು ಈ ಮೊದಲು ಬರೆದಿದ್ದೇವೆ. ಇವರ ಪ್ರತಿಪಕ್ಷೀಯನಾದ ಡಿವ್ಹೆಲೆರಾಸಾಹೇಬನು ರಾಜನಿಷ್ಠೆಯ ಆಣೆ ಮಾಡುವದಿಲ್ಲೆಂದು ಶಪಥ ತೊಟ್ಟದ್ದರಿಂದ, ಕ್ರಾಸಗ್ರೇವ್ಹಸಾಹೇಬನಿಗೆ ಅಯಾಚಿತವಾಗಿ ದಿವಾಣಗಿರಿಯು ಲಭಿಸಿತು. ಪಾರ್ಲಮೆಂಟದಲ್ಲಿ ಮಂತ್ರಿಮೊದಲಾದವರ ನೇಮಣೂಕಾಗುವ ದಿವಸ ಮುಖ್ಯ ಪಟ್ಟಣವಾದ ಡಬ್ಲಿನದಲ್ಲಿ ಅದ್ಭುತವಾದ ಗಳವಳಿಯುಂಟಾಯಿತು. ಪಾರ್ಲಮೆಂಟದ ದಾರಿಯಲ್ಲಿ ಸಾವಿರಾರು ಜನರು ತಂಡತಂಡಾಗಿ ಮುಂದಾಗುವ ಸೋಜಿಗವನ್ನು ನೋಡಲುತ್ಸುಕರಾಗಿ ನಿಂತರು. ದಂಗೆಯಾಗಬಾರದೆಂದು ಕಾಲ್ಬಲದ ಮತ್ತು ರಾಹುತರ ಕಾವಲಿಟ್ಟರು. ಎಲ್ಲ ವ್ಯವಹಾರ ಬಂದಾಯಿತು. ಡಿವ್ಹೆಲೆರಾನ ಪಕ್ಷದವರು ಮೋಟಾರುಗಳಲ್ಲಿ ಕೂತು ಬಂದರು. ಇವುಗಳಿಗೆ "ಆಣೆಯನ್ನು ತೆಗೆದು ಹಾಕಿರಿ" ಎಂಬ ವಚನಗಳನ್ನು ಬರೆದ ಕಾಗದಗಳನ್ನು ಹಚ್ಚಿದ್ದರು. ಇಷ್ಟು ಸಂಭ್ರಮ ಮತ್ತು ಆವೇಶದಿಂದ ಇವರು ಸಭೆಯ ಬಾಗಿಲದ ತನಕ ಹೋದದ್ದಾಯಿತು. ತಲೆಬಾಗಿಲದಲ್ಲಿ ಇವರನ್ನು ತಡೆದರು. ಇವರು ಬೇಕಾದಷ್ಟು ದೂರಿಕೊಂಡರು. ಅಧಿಕಾರಿಗಳ ಕೃತ್ಯವನ್ನು ನಿಷೇಧಿಸಿದರು. ಎದುವಾದಿಸಿದರು. ಆದರೂ ಇವರನ್ನು ಒಳಗೆ ಬಿಡಲಿಲ್ಲ. ಹೊರಗೆ ಈ ಪ್ರಕಾರ ಗದ್ದಲ ನಡೆದಾಗ ಒಳಗೆ ಚುನಾವಣೆಯಾಯಿತು. ಮಿ. ಕ್ರಾಸಗ್ರೇವ್ಹಸಾಹೇಬರು ೭೮ ಅನುಕೂಲ ಮತ್ತು ೬೨ ಪ್ರತಿಕೂಲ ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ವಿರೋಧಿಗಳವರು ಲಿಬರಲರು.

ಬ್ರಾಹ್ಮಣ ಮರಾಠಾ ವಿವಾಹ.

—o—

ವಿಲಾಯತಿಗೆ ಹೋಗಿ ಆಯ. ಸಿ. ಎಸ. ಪರೀಕ್ಷೆ ಪಾಸಾಗಿ ಬಂದಿರುವ ವಿ. ವೆಂಟಾಚಾರ್ಯರು ಮುಂಬಯಿಯಲ್ಲಿಯ ಮರಾಠಾ ಕುಮಾರಿ ನಿರ್ಮಲೆಯನ್ನು ಮುಂಬಯಿಯಲ್ಲಿ ಮದುವೆಯಾದರು. ಆಚಾರ್ಯರು ಬೆಂಗಳೂರಲ್ಲಿ ಡ್ಯಾಡಹೋಕೇಟರಾಗಿರುವ ಶ್ರೀ. ಶೇಷಾಚಾರ್ಯರ ಚಿರಂಜೀವರು. ಸಂಯುಕ್ತ ಪ್ರಾಂತಕ್ಕೆ ಸೇರಿದ ಬುಡಾವುನವೆಂಬಲ್ಲಿ ಕಲೆಕ್ಟರರಾಗಿದ್ದಾರೆ. ವಧುವು ಅಲ್ಲಿ ಪ್ರಸಿದ್ಧವಾಗಿರುವ ಕಾಲಸೆಕರ ಮನೆತನಕ್ಕೆ ಸೇರಿದ್ದಾರೆ. ಪಿತಾಮಹರು ರಾ. ಬ. ಆನಂದರಾಯರು. ಮಾತಾಮಹರು ರಾ. ಬ. ಮುಕುಂದರಾವ ರಾಮಚಂದ್ರರು. ವಿವಾಹವು ಬಹು ಸಂಭ್ರಮದಿಂದಾಯಿತು. ಮುಂಬಯಿ ಪಟ್ಟಣದ ಅನೇಕ ಪ್ರತಿಷ್ಠಿತರು ಮಂಗಲ ಮಹೋತ್ಸವಕ್ಕೆ ಬಂದು ವಧೂವರರನ್ನು ಆಶೀರ್ವದಿಸಿದರು. ವಿಲಾಯತಿಯಲ್ಲಿರುವ ಹೋಳಕರ ಮಹಾರಾಜಾ ಮಹಾರಾಣಿಯವರು ಅಭೀಷ್ಟ ಚಿಂತನೆಯ ತಾರು ಕಳಿಸಿರುವರು. ಬೆಲೆಯುಳ್ಳ ಅನೇಕ ಉಡುಗರೆ ಬಂದಿವೆ.

ಪ್ರೊಫೇಸರ ಭಾಟಯವರ ತರುವಾಯ ಬ್ರಾಹ್ಮಣ ಮರಾಟರಲ್ಲಿ ಇದು ಎರಡನೆಯ ವಿವಾಹವು.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮಾರಿಕಾ ಬೇನೆ ಇರುವದರಿಂದ ಪಂಢರಪೂರದ ಯಾತ್ರೆಗೆ ಹೋಗುವಂಥವರು ಬಹಳ ಎಚ್ಚರದಿಂದ ಹೋಗಬೇಕು. ವಾರಕರಿ ಪಂಥದವರು ಮಾರಿಕಾದ ವೈಲೀ ಚುಚ್ಚಿಸಿಕೊಳ್ಳುವದು ಉತ್ತಮ. ವೈಲಿಯ ರಸಿಕೆಯಲ್ಲಿ ಮಾಂಸ ಮುಂತಾದ ಧರ್ಮ ವಿರುದ್ಧ ಪದಾರ್ಥವಿರುವದಿಲ್ಲ. ಜನರು ಜೀವವನ್ನು ಗಂಡಾಂತರದಲ್ಲಿ ಹಾಕಿಕೊಳ್ಳಬಾರದೆಂದು ಮುಂಬಯಿ ಸರಕಾರದವರು ಪ್ರೆಸನೋಟನ್ನು ಪ್ರಸಿದ್ಧ ಮಾಡಿದ್ದಾರೆ.

ಆಂಧ್ರ ದೇಶದ ಪ್ರಸಿದ್ಧ ಅಸಹಕಾರಿಯಾದ ಶ್ರೀ. ಸಾಂಬಮೂರ್ತಿಯವರೂ, ಮುಂಬಯಿಯ ಪ್ರಸಿದ್ಧ ಪಾರ್ಶಿ ಗೃಹಸ್ಥರಾದ ಮಿ. ಭರುಚಾಸಾಹೇಬರೂ ನಾಗಪೂರದ ಸತ್ಯಾಗ್ರಹ ನೋಡಲಿಕ್ಕೆ ಹೋಗಿದ್ದಾರೆ. ಶ್ರೀ. ಸಾಂಬಮೂರ್ತಿಯವರ ಸ್ವಾಗತಕ್ಕಾಗಿ ಸ್ಟೇಶನಕ್ಕೆ ಬಂದಿದ್ದ ಐವರು ಹ್ವಾಲಂಟಿಯರರನ್ನು ಪೋಲೀಸರು ಸ್ಟೇಶನದಲ್ಲಿಯೇ ದಸ್ತಗಿರ ಮಾಡಿದರು.

ಮಹಾತ್ಮರು ಇನ್ನೂ ೧೫ ದಿವಸಗಳ ಪರ್ಯಂತರ ಬೆಂಗಳೂರಲ್ಲಿರುವರು.

ಧಾರವಾಡ—

ಶ್ರೀ. ವಿದ್ಯಾರಣ್ಯರ ಮಹೋತ್ಸವಕ್ಕಾಗಿ ಇಂದಿನ ದಿವಸ ಸಾಯಂಕಾಲದ ೬॥ ಗಂಟೆಯ ಸಮಯದಲ್ಲಿ ಶ್ರೀ. ಜಗದ್ಗುರು ಮಹಾಭಾಗವತ ಸ್ವಾಮಿಗಳವರು ನ್ಯೂ ಇಂಗ್ಲಿಷ ಸ್ಕೂಲಿನಲ್ಲಿ ಪ್ರವಚನ ಮಾಡುವರು. ಇದೇ ಸಮಯದಲ್ಲಿ ಡಾಕ್ಟರ ಮುಂಜೆಯವರೂ ಅಲ್ಲಿಗೆ ಬರುವ ಸಂಭವವುಂಟು.

R N B 1443

ವಿಜಯ

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮) ಧಾರವಾಡ ಮಂಗಳವಾರ ತಾರೀಖು ೨೮ ನೇ ಜೂನ ೧೯೨೭ (ಸಂಚಿಕೆ ...

ವಿಜಯ.

ಧಾರವಾಡ ತಾ-೨೮-೬-೨೭ ನೇ ಇಸ್ವಿ

ರಾಯಲ ಕಮಿಶನದಿಂದ ಸ್ವರಾಜ್ಯ ದೊರೆಯುವದೇ?

ರಾಯಲ ಕಮಿಶನದ ವಿಷಯವಾಗಿ ರಾಜಕಾರಣ ಪಟುಗಳೆಂಬವರು ತರ ತರದ ವಿಚಾರಗಳನ್ನು ಪ್ರಕಟ ಮಾಡುತ್ತಿದ್ದಾರೆ. ಪಿಂಡವಿದ್ದಷ್ಟು ಪ್ರಕೃತಿಯು ಮವಾಳ, ರಾಷ್ಟ್ರೀಯ, ಅಸಹಕಾರ, ಬ್ರಾಹ್ಮಣೇತರ ಮೊದಲಾದವರೆಲ್ಲರೂ ತಂತಮ್ಮ ಕುದುರೆಗಳಿಗೆ ಪಣೆಪಟ್ಟಿ ಕಟ್ಟಿ, ಅದನ್ನ ಬೇಕಾದವರು ಕಟ್ಟಿ ಹಾಕಲೆಂದು ಅಶ್ವಮೇಧ ಯಜ್ಞದ ದೀಕ್ಷೆ ತಕ್ಕೊಂಡಿದ್ದಾರೆ ಇದರಲ್ಲಿ ತಾವೇ ಜಯಶಾಲಿಯಾಗುವರೆಂದು ಪ್ರತಿಯೊಬ್ಬರು ಅಂದುಕೊಳ್ಳುತ್ತಿದ್ದಾರೆ. ತಮ್ಮೆಲರ ತಲೆಯ ಮೇಲೂ ಮೆಣಸು ಅರೆಯುವಂಥ ಧೀರರು ಆಳರಸರಾಗಿದ್ದಾರೆಂಬದನ್ನು ಯಾವಾಗಲು ಮರೆಯುವಂತಿಲ್ಲ. ಕಳೆದ ೫೦ ವರ್ಷಗಳಲ್ಲಿ ಇರಾಣ, ಇಜಿಪ್ತ, ಚೀನದೇಶಗಳು ಸ್ವಾತಂತ್ರ್ಯತೆಗಾಗಿ ಪ್ರಯತ್ನ ಮಾಡಿವೆ ಅವುಗಳ ಇತಿಹಾಸವನ್ನು ನೋಡಿದರೆ- ರಾಯಲ ಕಮಿಶನನಂಥ ನೂರಾರು ಕಮಿಶನಗಳು ಬಂದರೂ ಸ್ವರಾಜ್ಯ ಸ್ವಾತಂತ್ರ್ಯ ದೊರೆಯಲಾರದೆಂದು ಧಾರಾಳವಾಗಿ ಹೇಳಬಹುದು. ಸ್ವಾತಂತ್ರ್ಯವೆಂದರೇನೆಂಬ ಪ್ರಶ್ನವು ಮಹತ್ವದ್ದಾಗಿರುತ್ತದೆ ಅದರ ವ್ಯಾಖ್ಯಾಂಶಗಳು ಕೆಳಗೆ ಹೇಳಿದಂತಿರುತ್ತವೆ

೧ ಚುನಾವಣೆಯು ಪೂರ್ಣ ಸ್ವಾತಂತ್ರ್ಯವಿರಬೇಕು

೨ ಕೌನ್ಸಿಲಗಳಲ್ಲಾದ ಠರಾವುಗಳಂತೆ ರಾಜ್ಯಕಾರಭಾರ ನಡಿಯಬೇಕು

೩ ಗವ್ಹರ್ನರ- ಗವ್ಹರ್ನರ ಜನರಲರು ಕೌನ್ಸಿಲಗಳಿಗೆ ಅಧೀನರಾಗಿರಬೇಕು.

೪ ಪ್ರಧಾನ ಮೊದಲಾದವರನ್ನ ತೆಗೆದು ಹಾಕುವ ಅಧಿಕಾರವು ಕೌನ್ಸಿಲಗಳಿಗಿರಬೇಕು

೫ ಯುದ್ಧ ಮಾಡುವದು, ಒಡಂಬಡಿಕೆ ಮಾಡಿಕೊಳ್ಳುವದು, ಹಣದ ವೆಚ್ಚ ಮಂಜೂರು ಮಾಡುವದು ಕೌನ್ಸಿಲಗಳ ಅಧಿಕಾರಕ್ಕೊಳಪಟ್ಟಿರಬೇಕು.

೬ ರಾಷ್ಟ್ರಹಿತವರ್ಧನೆಗೆ ಅವಶ್ಯವಾದ ಎಲ್ಲ ಕರ್ತವ್ಯಗಳನ್ನು ಮಾಡಲು ಕೌನ್ಸಿಲದ ಅಪ್ಪಣೆಯಂತೆ ನಿಯೋಜಿತರಾದ ಅಧಿಕಾರಿಗಳು ಕರ್ತವ್ಯದಕ್ಷರಾಗಿರತಕ್ಕದ್ದು

ಇವುಗಳಲ್ಲಿ ಸದ್ಯದ ಕೌನ್ಸಿಲ ಮತ್ತು ಅಸೆಂಬ್ಲಿಗಳಿಗೆ ಯಾವ ಅಧಿಕಾರ ದೊರೆತಿರುತ್ತವೆಂಬದನ್ನು ನೋಡುವಾ-

೧ ಚುನಾವಣೆಯು ಸಂಪೂರ್ಣ ಸ್ವಾತಂತ್ರ್ಯವಿ... ವಯಸ್ಸಿಗೆ ಬಂದಂಥ ಪ್ರತಿಯೊಬ್ಬ ಸ್ತ್ರೀಪುರುಷನಿಗೆ ಮತ ಕೊಡುವ ಅಧಿಕಾರವಿರಬೇಕು ಅಂಥ ಅಧಿಕಾರ ದೊರೆಯುವ ಸಂಭವವಿಲ್ಲ

೨ ಕೌನ್ಸಿಲಗಳಲ್ಲಾಗುವ ಠರಾವುಗಳಂತೆ ರಾಜ್ಯಕಾರಭಾರ ನಡೆಯುವದು ಸಹಸಾ ಶಕ್ಯವಿಲ್ಲ ... ಎರಡು ವಿಘ್ನಗಳುಂಟು ಆಳರಸರು ತಮ್ಮ ಪತಿಯಿಂದ ಕೆಲವರನ್ನು ನೇಮಿಸುವರು ಮಂತ್ರಿಗಳಲ್ಲದೆ, ಕಮಿಶನರ ಮೊದಲಾದವರನ್ನು ... ಬಲವಾಗಿ ಠಾಹೀರ ಮೆಂಬರ ಮಾಡಿದ್ದು ಕೌನ್ಸಿಲದಲ್ಲಿ ಯಾವದೊಂದು ಠರಾವು ಪಾಸಾದರೂ ಅದನ್ನು ರದ್ದುಮಾಡಿದ ಸರ್ಟಿಫಿಕೇಟು ಕೊಡುವ ಅಸಾಧಾರಣ ಅಧಿಕಾರವನ್ನು ಗವ್ಹರ್ನರರಿಗೆ ಕೊಟ್ಟಿದ್ದಾರೆ ಇಂಥ ಅಧಿಕಾರವು ಜಗತ್ತಿನಲ್ಲಿ ಎಲ್ಲಿಯೂ ಇರುವದಿಲ್ಲ.

೩ ಗವ್ಹರ್ನರ- ಗವ್ಹರ್ನರ ಜನೆರಲ್ಲರ ಕೌನ್ಸಿಲ ಅಥವಾ ಅಸೆಂಬ್ಲಿಗೆ ಅಧೀನರಾಗುವದೆಂಬದು ಈಗಿನ ಧೋರಣದ ಪ್ರಕಾರ ಕನಿಷ್ಠ ೫೦ ವರ್ಷಗಳ ಪರ್ಯಂತರ ಶಕ್ಯವಲ್ಲ ಈ ಅಧಿಕಾರಿಗಳು ಹಿಂದೀ ಗೃಹಸ್ಥರಾದ ಹೊರ್ತು ಕೌನ್ಸಿಲಗಳಿಗೆ ಅಧೀನರಾಗಿ ನಡೆಯಲಾರರು. ಯುರೋಪಿಯನ್ನರು ಪಾರತಂತ್ರ್ಯದಲ್ಲಿ ಸಿಕ್ಕು ರಾಜ್ಯಕಾರಭಾರ ನಡಿಸಲಿಕ್ಕೆ ಬರಲಾರರು

೪ ಯಾವದೊಂದು ಧೋರಣವು ಬಹುಮತದಿಂದ ಪ್ರಧಾನರಿಗೆ ಪ್ರತಿಕೂಲವಾದರೆ- ಅವರು ರಾಜೀನಾಮೆ ಕೊಡುವದು ವಿಲಾಯತಿಯಲ್ಲಿ ಶಿಷ್ಟ ಸಾಂಪ್ರದಾಯವಾಗಿರುತ್ತದೆ ಇಲ್ಲಿ ಪ್ರಧಾನರೆಂಬವರೇ ಇರುವದಿಲ್ಲ. ಗವ್ಹರ್ನರ ಜನರಲ್ಲರು ವಿಲಾಯತಿಯಿಂದ ಬರುವರು. ಇವರ ಆಪ್ತ ಪ್ರಧಾನರು ಪಾರ್ಲಮೆಂಟದ ಒಪ್ಪಿಗೆಯಿಂದ ನೇಮಿಸಲ್ಪಟ್ಟವರಾಗುತ್ತಾರೆ. ಇವರಿಗೆ ಠರಾವು ಪ್ರತಿಕೂಲವಾದರೇನು? ಅನುಕೂಲವಾದರೇನು? ಸುಖದುಃಖಗಳಿಂದ ಅಲಿಪ್ತರಾಗಿರುತ್ತಾರೆ. ಊರು ಸುಟ್ಟರೂ ಹಣಮಪ್ಪ ಹೊರಗೆ!!

೫ ಯುದ್ಧ ಮಾಡುವದು, ಒಡಂಬಡಿಕೆ ಮಾಡುವ ವಿಚಾರವಂತೂ ಬಹು ವರ್ಷಗಳ ಕನಸು ದಂಡಿನ ಅಧಿಕಾರವಿಲ್ಲ. ಪರರಾಷ್ಟ್ರಗಳಲ್ಲಿ ಹಿಂದುಸ್ಥಾನದ ರಾಯಬಾರಿ ಇರುವದಿಲ್ಲ. ಹಿಂದುಸ್ಥಾನವು ಇಂಗ್ಲಂಡದ ಒಂದು ಭಾಗವಾಗಿರುವದರಿಂದ, ಇಂಗ್ಲಂಡವು ಕುಣಿಸಿದಂತೆ ಕುಣಿಯುವದೇ ಹಿಂದುಸ್ಥಾನದ ಕೆಲಸವು ಕಾಂಗ್ರೆಸ ಸಭೆಯು ಚೀನಕ್ಕೆ ಹಿಂದೀ ಸೈನ್ಯ ಕಳಿಸಬಾರದೆಂದು ಮಾಡಿದ ಠರಾವಿನ ಪರಿಣಾಮವೇನಾಯಿತು? ೩೩ ಕೋಟಿ ಹಿಂದೀ ಜನರ ವಿರೋಧದ ನೋವು ಆನೆಗೆ ನೊಣ ಕಡೆದಷ್ಟು ಕೂಡ ಬ್ರಿಟಿಶ ಪ್ರಭುತ್ವಕ್ಕಾಗಲಿಲ್ಲ

೬ ರಾಷ್ಟ್ರ ಹಿತವರ್ಧನೆಗೆ ಅವಶ್ಯವಾದ ಕರ್ತವ್ಯಗಳಲ್ಲಿ ಸದ್ಯದಲ್ಲಿ ಮುಂಬಯಿಯ ಗಿರಣಿಗಳಿಗೆ ಬಂದ ಸಂಕಟವು ಒಂದು ಪ್ರತ್ಯಕ್ಷ ಉದಾಹರಣೆಯಾಗಿದೆ. ಹಿಂದುಸ್ಥಾನದ ಯುನಿವ್ಹರ್ಸಿಟಿಗಳು ಬರೇ ಕಾರಕೂನರನ್ನು ತೆಗೆಯುವ ಶಿಕ್ಷಣಾಲಯಗಳಾಗಿವೆ ವಿಲಾಯತಿಯಲ್ಲಿ ಬೆಲ್ಜಿಯಮ ದಂಥ ಪುಟ್ಟ ದೇಶದಲ್ಲಾಗಿರುವ ಆರ್ಥಿಕ ಅಭ್ಯುದಯವನ್ನು ನೋಡಿದರೆ- ಸಾಕು, ಹಿಂದುಸ್ಥಾನ ಸರಕಾರವು ಎಷ್ಟು ಹಿಂದಿರುತ್ತದೆಂಬದು ಠಾಣಾಗಿ ವಿದಿತವಾಗುತ್ತದೆ.

ಮೇಲಿನ ವಿಚಾರಗಳಿಗೆ ಸೋಜಿಗವೆನಿಸುವಂತೆ ಲಾರ್ಡ ರೀಡಿಂಗಸಾಹೇಬರು ಕಮಿಶನದ ಅಧ್ಯಕ್ಷರಾಗಿ ಬರುವರೆಂಬ ವಾರ್ತೆಯು ಇವರು ಬಂದರಂತೂ ಮಾತೇ ಮುಗಿಯಿತು ತಮ್ಮ ಕಳೆದೈದು ವರ್ಷಗಳ ಕಾರಭಾರದ ಮೇಲೆ ತಾವೇ ಠರಾವು ಬರೆಯುವಂತಾಯಿತು ಇವರಂತೂ ಬೇಡವೇ ಬೇಡ ಹಿಂದುಸ್ಥಾನದ ಬಗ್ಗೆ ಪೂರ್ವಗ್ರಹಕಿಯಿಲ್ಲದಂಥ ಒಬ್ಬ ಸಾಹೇಬರು ಅಧ್ಯಕ್ಷರಾಗಿ ಬರಲೆಂದು ಕೆಲವರೆನ್ನುತ್ತಾರೆ ಯಾರು ಬಂದರೇನು? ಅವರು ಮೊದಲು ಇಂಗ್ಲಂಡದ ಹಿತ, ಇಂಗ್ಲಿಷ ಕಾಮದಾರರ ಬಿಗುವು, ಇಂಗ್ಲಿಷ ವ್ಯಾಪಾರದ ಕೀಜಿಯನ್ನು ಮುಂದಿಟ್ಟುಕೊಂಡೇ ವಿಲಾಯತಿಯಿಂದ ಪ್ರಯಾಣ ಬೆಳಿಸುವರು ಈ ತೀಜಿಗೂ ಹಿಂದೂ ಜನರು ಬಿಡುವ ಕೇಜಿಗೂ ಆಗುವ ಅಪನದಲ್ಲಿ ವಿಲಾಯತಿಯ ಕೇಜಿಯ ತೇಜಸ್ಸೇ ಹೆಚ್ಚಾಗುವದುಂಟು!!! ಅಂದಬಳಿಕ ಸ್ವರಾಜ್ಯವೆಂತಹದು?

ಪಾರ್ಲಮೆಂಟದ ಲಾರ್ಡರ ಸಭೆಯಲ್ಲಿ ನವೀನವಾದ ಸುಧಾರಣೆ

—o—

ಹಿಂದುಸ್ಥಾನದ ರಾಜ್ಯಕಾರಭಾರದಲ್ಲಿ ೧೯೨೯ ನೆಯ ಇಸವಿಯ ಅವಿಯಿಂದ ಸುಧಾರಣೆ ಮಾಡವೇಕೆಂದು ರಾಯಲ ಕಮಿಶನ ಬರುವ ಮುಂಚಿತವಾಗಿಯೇ ಲಾರ್ಡರ ಸಭೆಯಲ್ಲಿ ಸುಧಾರಣೆ ಮಾಡಿ, ಅದನ್ನು ಆ ಒಂದ್ರಾರ್ಕ ಗಟ್ಟಿಮುಟ್ಟಿ ಮಾಡಬೇಕೆಂದು ಈಗಿನ ಮಂತ್ರಿಗಳು ಅವಸರ ಪಡುತ್ತಿದ್ದಾರೆ ಇಂಗ್ಲಂಡದ ರಾಜಕೀಯ ಪರಿಸ್ಥಿತಿಯು ಚಮತ್ಕಾರವಾಗಿದೆ ಕಾನ್ಸರವೇಟಿವ್ಹ ಮತ್ತು ಲಿಬರಲರು ರಾಜಪಕ್ಷಿಯರು ಅರಸೊತ್ತಿಗೆ ಬೇಕೆನ್ನುವಂದವರು, ಲೇಬರ ಅಥವಾ ಬೋಲ್ಶೆವಿಕ ಪಂಥದವರು ಬಾದಶಾಹಿ ಬೇಡೆನ್ನುವಂಥವರು ಬಾದಶಹರ ವರ್ಧಂತಿಯ ದಿವಸ ಇವರ ವಿದ್ಯಾರ್ಥಿಗಳು ರಾಷ್ಟ್ರಗೀತಗಳನ್ನು ಹಾಡುವದರ ಬದಲು, ಬೋಲ್ಶೆವಿಕ ಗೀತೆ ಹಾಡಿ, ಕೆಂಪು ನಿಶಾಣೆ ಹಿಡಕೊಂಡು ರಾಜನಿಷ್ಠರನ್ನು ಅಣಕಿಸುವರು ಪಾರ್ಲಮೆಂಟದ ಚುನಾವಣೆಯಲ್ಲಿ ಕೂಲಿಕಾರರ ಬಹುಮತವಾಗಿ ಅವರು ಎರಡೇ ವರ್ಷ ದಿವಾನರಾದರೆ ಸಾಕು ಅವರು ಬಹುಮತದ ಬಲದಿಂದ ಗುಂಡಿನ ಸಪ್ಪಳ ಮಾಡದೆ, ಅರಸೊತ್ತಿಗೆಯನಳ್ಳಿ, ಲಾರ್ಡರನ್ನೂ ಅಳಿದು, ಪ್ರಜಾಸತ್ತಾತ್ಮಕ ದೊರೆತನ ಸ್ಥಾಪಿಸಬಹುದಾಗಿದೆ ಈ ಪ್ರಕಾರ ಅವರು ಮಾಡಬಹುದೆಂಬ ಹೆದರಿಕೆಯು ಮಂತ್ರಿಗಳಿಗುಂಟಾಗಿದ್ದು, ಆ ಪ್ರಕಾರ ಪಾರ್ಲಮೆಂಟ ಸಭೆಯಲ್ಲಿ ಭಾಷಣ ಮಾಡಿದ್ದಾರೆ, ಕೂಲಿಕಾರರ ಉಚ್ಛಾಳತನವು ಯಾವಾಗಲು ಅಸುಕೊಳ್ಳದಂತೆ ಹೆಚ್ಚಾಗಬಾರದು, ಲಾರ್ಡರ ಸಭೆಯು, ಬಲಿಷ್ಠವಾದರೆ ಅರಸೊತ್ತಿಗೆಯೂ ಉಳಿಯುವದು. ಲಾರ್ಡರೇ ಉಳಿಯುವರೆಂದು ಭಾವಿಸಿ, ಈ ಬಗ್ಗೆ ಹೊಸ ಕಾಯದೆ ಮಾಡಹೊರಗಿದ್ದಾರೆ ಪಾರ್ಲಮೆಂಟರ ಚುನಾವಣೆಯು ೧೯೨೯ರಲ್ಲಾಗುವದು. ಆಗ ಯಾವ ಪಕ್ಷದ ಮೇಲ್ಮೆಯಾಗುವದೆಂಬ ನಿಯಮವಿಲ್ಲ ಕತ್ತಿವರ್ಷದಲ್ಲಿ ಲಾರ್ಡರ ಕಳವನ್ನು ಗಟ್ಟಿ ಮಾಡಬೇಕೆಂದು ಮಂತ್ರಿಗಳು ಹಾತೊರೆದಿದ್ದಾರೆ

ಆಯರ್ಲಂಡದ ಚುನಾವಣೆಯ ಗಲಬೆ

—o—

ಆಯರ್ಲಂಡದಲ್ಲಾದ ಚುನಾವಣೆಯಲ್ಲಿ ಮಿ. ಕಾಸ್‌ಗ್ರೇವ್ಹ ಸಾಹೇಬರ ಒಡ ಮತವಾಗಲಿಲ್ಲ ಆದ್ದರಿಂದ ಅವರು ದಿವಾನಗಿರಿಗೆ ಅಂಬಲಾಷೆ ಪಡುವದಿಲ್ಲೆಂದು ಈ ಮೊದಲು ಬರೆದಿದ್ದೇವೆ ಇವರ ಪ್ರತಿಪಕ್ಷೀಯನಾದ ಡಿವ್ಹೆಲೆರಾಸಾಹೇಬನು ರಾಜನಿಷ್ಠೆಯ ಆಣೆ ಮಾಡುವದಿಲ್ಲೆಂದು ಶಪಥ ತೊಟ್ಟದ್ದರಿಂದ, ಕಾಸಗ್ರೇವ್ಹಸಾಹೇಬನಿಗೆ ಅಯಾಚಿತವಾಗಿ ದಿವಾಣಗಿರಿಯು ಲಭಿಸಿತು. ಪಾರ್ಲಮೆಂಟದಲ್ಲಿ ಮಂತ್ರಿಮೊದಲಾದವರ ನೇಮಣೂಕಾಗುವ ದಿವಸ ಮುಖ್ಯ ಪಟ್ಟಣವಾದ ಡಬ್ಲಿನದಲ್ಲಿ ಅದ್ಭುತದ ಗಳವಳಿಯುಂಟಾಯಿತು. ಪಾರ್ಲಮೆಂಟದ ದಾರಿಯಲ್ಲಿ ಸಾವಿರಾರು ಜನರು ತಂಡತಂಡವಾಗಿ ಮುಂದಾಗುವ ಸೋಜಿಗವನ್ನು ನೋಡಬಯಸುವರಾಗಿ ನಿಂತರು. ದಂಗೆಯಾಗಬಾರದೆಂದು ಕಾಲ್ಬಲದ ಮತ್ತು ರಾಹುತರ ಕಾವಲಿಟ್ಟರು. ಎಲ್ಲ ವ್ಯವಹಾರ ಬಂದಾಯಿತು ಡಿವ್ಹೆಲೆರಾನ ಪಕ್ಷದವರು ಮೋಟಾರುಗಳಲ್ಲಿ ಕೂತು ಬಂದರು ಇವುಗಳಿಗೆ "ಆಣೆಯನ್ನು ತೆಗೆದು ಹಾಕಿರಿ' ಎಂಬ ವಚನಗಳನ್ನು ಬರೆದ ಕಾಗದಗಳನ್ನು ಹಚ್ಚಿದ್ದರು ಇಷ್ಟು ಸಂಭ್ರಮ ಮತ್ತು ಆವೇಶದಿಂದ ಇವರು ಸಭೆಯ ಬಾಗಿಲವರೆಗೆ ಹೋದದ್ದಾಯಿತು. ತಲೆಬಾಗಿಲದಲ್ಲಿ ಇವರನ್ನು ತಡೆದರು ಇವರು ಬೇಕಾದಷ್ಟು ದೂರಿಕೊಂಡರು. ಅಧಿಕಾರಿಗಳ ಕೃತ್ಯವನ್ನು ನಿಷೇಧಿಸಿದರು. ಎದುವಾರ್ದಿಸಿದರು. ಆದರೂ ಇವರನ್ನು ಒಳಗೆ ಬಿಡಲಿಲ್ಲ ಹೊರಗೆ ಈ ಪ್ರಕಾರ ಗದ್ದಲ ನಡೆದಾಗ ಒಳಗೆ ಚುನಾವಣೆಯಾಯಿತು ಮಿ ಕಾಸಗ್ರೇವ್ಹಸಾಹೇಬರು ೬೮ ಅನುಕೂಲ ಮತ್ತು ೨೨ ಪ್ರತಿಕೂಲ ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು ವಿರೋಧಿಗಳು ದವರು ಲಿಬರಲರು.

ಬ್ರಾಹ್ಮಣ ಮರಾಠಾ ವಿವಾಹ

—o—

ವಿಲಾಯತಿಗೆ ಹೋಗಿ ಆಯ. ಸಿ ಎಸ. ಪರೀಕ್ಷೆ ಪಾಸಾಗಿ ಬಂದಿರುವ ವಿ ವೆಂಟಕಾಚಾರ್ಯರು ಮುಂಬಯಿಯಲ್ಲಿಯ ಮರಾಠಾ ಕುಮಾರಿ ನಿರ್ಮಲೆಯನ್ನು ಮುಂಬಯಿಯಲ್ಲಿ ಮದಿವೆಯಾದರು ಆಚಾರ್ಯರು ಬೆಂಗಳೂರಲ್ಲಿ ಹೈಕೋರ್ಟ ಹೋಕೀಲರಾಗಿರುವ ಶ್ರೀ ಕೇಶವಾಚಾರ್ಯರ ಚಿರಂಜೀವರು ಸಂಯುಕ್ತ ಪ್ರಾಂತಕ್ಕೆ ಸೇರಿದ ಬುಡಾವುನವೆಂಬಲ್ಲಿ ಕಲೆಕ್ಟರರಾಗಿದ್ದಾರೆ ವಧುವು ಅಲ್ಲಿ ಪ್ರಸಿದ್ಧವಾಗಿರುವ ಕಾಲಜೆಕರ ಮನೆತನಕ್ಕೆ ಸೇರಿದ್ದಾಳೆ ಪಿತಾಮಹರು ರಾ ಬ ಆನಂದರಾಯರು ಮಾತಾಮಹರು ರಾ. ಬ. ಮುಕುಂದರಾವ ರಾಮಚಂದ್ರರು ವಿವಾಹವು ೬ ರ ಸಂಭ್ರಮದಿಂದಾಯಿತು ಮುಂಬಯಿ ಪಟ್ಟಣದ ಅನೇಕ ಪ್ರತಿಷ್ಠಿತರ ಮಂಗಲ ಮಹೋತ್ಸವಕ್ಕೆ ಬಂದು ವಧೂವರರನ್ನು ಆಶೀರ್ವದಿಸಿದರು ವಿಲಾಯತಿಯ ಕ್ಲೆರವ ಹೋಳಂದ ಮಹಾರಾಜಾ ಮಹಾರಾಣಿಯವರು ಅಭಿನಂದನೆಯ ತಾರು ಕಳಿಸಿರುವರು. ಬೆಲೆಯುಳ್ಳ ಅನೇಕ ಉಡುಗರೆ ಬಂದಿವೆ

ಪ್ರೊಫೇಸರ ಭಾಟೆಯವರ ಕರುವಾಯಾ- ಬ್ರಾಹ್ಮಣ ಮರಾಠರಲ್ಲಿ ಇದು ಎರಡನೆಯ ವಿವಾಹವು

ಪ್ರಾರ್ಥನೆ.

ಕಾಂಗ್ರೆಸ ಸಭಾಸದರನ್ನು ಕೂಡಿಸುವ ಸಲುವಾಗಿ ಹಿಂದುಸ್ಥಾನೀ ಸೇವಾದಲದ ಸ್ವಯಂಸೇವಕರು ತೀವ್ರವೇ ಕರ್ನಾಟಕದಲ್ಲಿ ಸಂಚಾರ ಮಾಡತಕ್ಕವರಿದ್ದಾರೆ ಆ ವಿಷಯವಾಗಿ ಬೇರೊಂದು ಪ್ರಕಟನಾ ಪತ್ರಿಕೆಯು ಪ್ರಕಟಿಸಲ್ಪಟ್ಟಿದೆ ಕರ್ನಾಟಕದಲ್ಲಿಯ ಕಾಂಗ್ರೆಸ ಭಕ್ತರೂ ಎಲ್ಲ ತಾಲೂಕ ಮತ್ತು ಜಿಲ್ಲಾ ಕಾಂಗ್ರೆಸ ಕಮಿಟಿಗಳೂ ಕಾಂಗ್ರೆಸ ಸಭಾಸದರನ್ನು ಕೂಡಿಸುವ ಸೇವಾದಲದವರಿಗೆ ಸಹಾಯ ಮಾಡತಕ್ಕದ್ದು. ಕಾಂಗ್ರೆಸ ಸಭಾಸದರನ್ನು ಕೂಡಿಸುವ ಕೆಲಸವು ಒಳ್ಳೇ ಮಹತ್ವದ್ದಿರುತ್ತದೆಂದು ನಾವು ಪ್ರತಿವರುಷ ಹೇಳುವ ಅವಶ್ಯವಿಲ್ಲ ಕಾಂಗ್ರೆಸ ಸಂಸ್ಥೆಯನ್ನು ಬಲಪಡಿಸಬೇಕಾದರೆ ಸಭಾಸದರ ಸಂಖ್ಯೆಯನ್ನು ಹೆಚ್ಚಿಸಲೇಬೇಕು. ಎಲ್ಲರೂ ಸೇವಾದಲದವರಿಗೆ ತುಂಬಾ ಸಹಾಯ ಮಾಡಬೇಕಾಗಿ ಪ್ರಾರ್ಥನೆ

ಸೇವಾದಲದವರು ಕೂಡಿಸತಕ್ಕ ಹಣದಲ್ಲಿ ಒಂದು ನಾಲ್ಕಾಂಶ ಹಣವು ಸೇವಾದಲದ ನಿಧಿಗೆ ಕೊಡತಕ್ಕದ್ದೆಂದು ಗೊತ್ತು ಮಾಡಿದೆ ಉಳಿದ ಹಣವನ್ನು ಆಯಾ ತಾಲೂಕ ಅಥವಾ ಜಿಲ್ಲಾ ಕಾಂಗ್ರೆಸ ಕಮಿಟಿಗಳು ತಮ್ಮಲ್ಲಿ ಸೇರಿಸಿಕೊಳ್ಳುವವು ಕರ್ನಾಟಕದಲ್ಲಿಯ ಎಲ್ಲ ಕಾಂಗ್ರೆಸ ಸಂಸ್ಥೆಗಳು ಈ ವಿಷಯವಾಗಿ ಜಾಗ್ರತೆ ಪಡಬೇಕಾಗಿ ಸೂಚನೆ.

ಶ್ರೀನಿವಾಸರಾವ ಕೌಜಲಗಿ,
ಅಧ್ಯಕ್ಷ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

ಕೊನೆಯ ಹೇಳಿಕೆ

ನಾಲ್ಕು ವರುಷಗಳ ಕೆಳಗೆ ಧಾರವಾಡದ ಟ್ರೇನಿಂಗ ಶಾಲೆಯು ಸಾಯುವಾಗ ಒಂದು ಮರಿಯನ್ನು ಬಿಟ್ಟು ಹೋಗಿತ್ತು. ಅದೂ ಈಗ ಮಾಯವಾಯಿತು. ಮಾಂಟೆಗ್ಯೂ ಸುಧಾರಣೆಯು ಮೇರೆಗೆ ಸ್ವರಾಜ್ಯದ ಒಂದು ಅಂಶವೆಂದು ದೊರೆತ ವಿದ್ಯಾಖಾತೆಯ ಅಧಿಕಾರವನ್ನು ಕೈಕೊಂಡ ಮೊದಲನೆಯ ಮಂತ್ರಿಗಳಾದ ನಾಮದಾರ ಪರಾಂಜಪೆಯವರು ಕಾಲೇಜದ ಕೊಲೆ ಮಾಡಿದರೆ ಮೂರನೆಯ ಮಂತ್ರಿಗಳಾದ ನಾಮದಾರ ದೇಸಾಯಿಯವರು ಒಂದು ಹಜ್ಜೆಯನ್ನು ಮುಂದಿಟ್ಟು ಅದರ ಮೂರು ವರ್ಷದ ಚಿಕ್ಕಮಗನಾದ ಟ್ರೇನಿಂಗ ಸ್ಕೂಲನ್ನು ಕಡಿದು ಬಿಸುಟಿದರು. ಇಂದು ಕರ್ನಾಟಕವೇ ಗೋಳಿಟ್ಟು ಅಳುವದು ನಾಮದಾರರ ಕಣ್ಣಿಗೆ ಕಾಣಲಿಲ್ಲ; ಕಿವಿಗೆ ಕೇಳಿಸಲಿಲ್ಲ. ಕನ್ನಡಿಗರ ಕೂಗು ... ಮುಂದೆ ಕಿರಿಯ ಪೀಳಿಗೆಯನ್ನು ... ದಂತಾಗಿ ಹೋಯಿತು. ಕರ್ನಾಟಕ ಪಿತಾಮಹರೆನಿಸಿಕೊಂಡ ರಾ. ಬ. ರೊದ್ದರಾಯರೇ ಮುಂತಾದವರು ಪುಣೆಯವರೆಗೂ ಹೋಗಿ ತಮ್ಮ ಹೇಳಿಕೆಯನ್ನೆಲ್ಲ ಹೇಳಿದ್ದಾಯಿತು. ವೃತ್ತ ಪತ್ರಗಳು ಏಕಕಂಠದಿಂದ "ಬೇಡ ಬೇಡ"ವೆಂದು ಸಾರಿದ್ದಾಯಿತು. ಅದರ ಪರಿಣಾಮವೇನಾಯಿತೆಂದರೆ ಅರಣ್ಯರೋದನದಂತೆ ... ವೇಳೆಯು ಮಂತ್ರಿಗಳನ್ನು ಆ ಖಾತೆಯ ಮುಖ್ಯಾಧಿಕಾರಿ (*Head of the Office*) ಗಳ ಅಂಕಿತದೊಳಗಿನ ... ಮಾತಿನ ಅನುಭವ ... ಕಂಡು ಬರುತ್ತಿರುವದು ದುರ್ದೈವದ ಸಂಗತಿಯಷ್ಟೇ ಅಲ್ಲ, ಮಂತ್ರಿಗಳ ಪದವಿಗೆ ಕುಂದು ತರುವಂಥದಾಗಿದೆ.

ಕಾಲೇಜವನ್ನು ನಿಷ್ಕರುಣೆಯಿಂದ ಅಖಿಲ ಕರ್ನಾಟಕಕ್ಕೇ ಎಂದೂ ತುಂಬಿ ಬರದಂಥ ಹಾನಿಯಾಯಿತು. ನ್ಯಾಯಾನ್ಯಾಯದ ದೃಷ್ಟಿಯಿಂದ ನೋಡಿದರೆ ... ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳುವ ನಾಲ್ಕು ಜನರಿಗೆ ನೌಕರಿಯು ಸಿಗುವದು ಹೋಯಿತೆಂದಷ್ಟೇ ಅನಿಸಬಹುದು. ಆದರೆ ನಾವು ಆ ಮಾತಿಗೆ ಅಷ್ಟು ಮಹತ್ವ ಕೊಡುವದಿಲ್ಲ. ಮನುಷ್ಯನು ನೌಕರಿಗಾಗಿಯೇ ಹುಟ್ಟಿರುವನೆಂದು ನಾವು ತಿಳಿಯಲಾರೆವು. ಆದರೆ ಇದರಿಂದ ಕನ್ನಡ ಬಾಲ ಅಭ್ಯಾಸಕ್ಕೆ ಕನ್ನಡ ಶಾಲೆಗಳಲ್ಲಿ ಸರಕಾರದ ... ತಮ್ಮ ... ದಿಂದ ಬರೆಯಿಸಿದ ಪುಸ್ತಕ (*Vernacular Readers*) ಗಳ ಅಧ್ಯಯನಕ್ಕೆ ... ಟ್ರೇನಿಂಗ ಕಾಲೇಜು ಹಾಯಸ್ಕೂಲ ಟ್ರೇನಿಂಗ ಕಾಲೇಜದಂತೆ ಕೇವಲ ಶಿಕ್ಷಣ ವಿಷಯಕ ಪದವಿಯ ಮುದ್ರೆಯನ್ನು ಒತ್ತುವ ಶಾಲೆಯಾಗಿರಲಿಲ್ಲ. ಮುಲ್ಕೀ ಪರೀಕ್ಷೆಯನ್ನು ಪಾಸಾದ ವಿದ್ಯಾರ್ಥಿಗಳಿಗೆ ಕನ್ನಡ ಸಂಸ್ಕೃತ ವ್ಯಾಕರಣದ ಪರಿಚಯವನ್ನು ತಕ್ಕಮಟ್ಟಿಗೆ ಮಾಡಿಕೊಟ್ಟು ಅವರ ಬುದ್ಧಿ ಸಂಸ್ಕಾರಕ್ಕೆ ಅನುಕೂಲವಾಗುವ ಎಷ್ಟೋ ವಿಷಯಗಳನ್ನು ಹಲವು ಮಟ್ಟಿಗೆ ಕಲಿಸುವ ಕಾರ್ಯವು ಈ ಟ್ರೇನಿಂಗ ಕಾಲೇಜದಲ್ಲಿ ನಡೆಯುತ್ತಿದ್ದಿತು. ನಮ್ಮ ಭಾಗದೊಳಗಿನ ನಾಮಾಂಕಿತರಾದ ಆಧುನಿಕ ಗ್ರಂಥಕರ್ತರಲ್ಲನೇಕರು ಒಂದಿಲ್ಲೊಂದು ರೀತಿಯಿಂದ ಟ್ರೇನಿಂಗ ಕಾಲೇಜಕ್ಕೆ ಸಂಬಂಧಪಟ್ಟವರೇ ಇದ್ದ ಸಂಗತಿಯನ್ನು ಹಿಂದೆ ಹಲವು ಸಾರೆ ಹೇಳಿರುವೆವು. ಮುಂದೂ ಹೇಳದೇ ಇರಲಾರೆವು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಟ್ರೇನಿಂಗ ಕಾಲೇಜದ ಕೊಲೆಯಿಂದ ಕರ್ನಾಟಕಕ್ಕೆ ಎಂಥ ವಿಪತ್ತು ಒದಗಿದಂತಾಯಿತೆಂಬದನ್ನು ವಾಚಕರೇ ಊಹಿಸಲಿ.

ಈ ಪ್ರಸಂಗದಲ್ಲಿ ನಾವು ಹೇಳಬೇಕಾದ ಕೊನೆಯ ಹೇಳಿಕೆ

ಹೋದದ್ದು ಹೋಯಿತು. ಕಾಲೇಜವೂ ಅದರ ಮರಿಯೂ ಹೋದವು. ಅದರಲ್ಲಿ ನಮಗೆ ಆಗುವ ದುಃಖವನ್ನು ಇಂದಿನವರೆಗೂ ಹೇಳಿಕೊಂಡಂತಾಗಿದೆ. ಈಗ ಅದರಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ನಿಕ್ಕಿಗೊಳ್ಳುವಂತೆ ... ಕೆಲಸ ನಡೆಯಬೇಕೆಂಬದು ನಿಜವು. ಅದರಲ್ಲಿ ನಮ್ಮ ಈ ಭಾಗದ ಕನ್ನಡ ವಿಷಯದ ನಿಜವಾದ ಪಂಡಿತರೆನಿಸಿಕೊಂಡಿರುವ (ಬರೇ ಪಂಡಿತರೆಂಬ ಪದವಿಯನ್ನು ಪಡೆದ ಪಂಡಿತರಲ್ಲ) ಶ್ರೀ. ಪೂಜಾರ ಇವರೂ ಒಬ್ಬರು. ಅವರನ್ನು ಇಲ್ಲಿಂದ (ಧಾರವಾಡದಿಂದ) ಹೊರಗೆ ಹಾಕುವ ಪ್ರಸಂಗವೊಂದು ಎಂದೂ ಆಗಬಾರದ ವಿಷಯವು. ಶ್ರೀ. ಪೂಜಾರರು ಇಲ್ಲಿಂದ ಹೊರಗೆ ಹೋದರೆ ಧಾರವಾಡದ ಕನ್ನಡವೇ ಹೋದಂತಾಗುವದು. ಮಹಾರಾಷ್ಟ್ರಕ್ಕೆ ಪುಣೆಯು ಹೇಗೋ ಹಾಗೆ ಉತ್ತರ ಕರ್ನಾಟಕಕ್ಕೆ ಧಾರವಾಡವು ವಿದ್ಯಾವಿಷಯಕ ಕೇಂದ್ರವಾಗಿದೆ. ಕರ್ನಾಟಕ ಕಾಲೇಜದಲ್ಲಿ ಕನ್ನಡವನ್ನು ಓದುತ್ತಿರುವ ಬಿ. ಎ. ಎಮ್. ಎ. ಪರೀಕ್ಷೆಗಳ ವಿದ್ಯಾರ್ಥಿಗಳೆಲ್ಲರೂ ಇಂದಿನವರೆಗೆ, ಒಂದಿಲ್ಲೊಂದು ರೀತಿಯಿಂದ ಶ್ರೀ ಪೂಜಾರ ಇವರ ಶಿಷ್ಯರಾಗಿರುವರು. ಕನ್ನಡದಲ್ಲಿ ಯಾರಿಗೆ ಯಾವ ತರದ ಸಂಶಯವುಂಟಾಗಿರಲಿ ಅದರ ನಿವಾರಣೆ ಮಾಡಿಕೊಳ್ಳಲಿಕ್ಕೆ ಶ್ರೀ. ಪೂಜಾರ ಇವರ ಕಡೆಗೆ ಹೋದ ಹೊರತು ಗತ್ಯಂತರವಿಲ್ಲ. ಮತ್ತು ಕನ್ನಡ ಕಲಿಯುತ್ತಿರುವ ಎಮ್. ಎ. ಬಿ. ಎ. ಕ್ಲಾಸಿನ ವಿದ್ಯಾರ್ಥಿಗಳಿಗೆ ಶ್ರೀ ಪೂಜಾರರ ಹೊರತು ಅನ್ಯ ಆಶ್ರಯವೇ ಇಲ್ಲ. ಶ್ರೀ ಪೂಜಾರ ಇವರು ಹಣದ ಕಡೆಗೆ ಎಂದೂ ದೃಷ್ಟಿಯನ್ನಿಟ್ಟು ಕೆಲಸ ಮಾಡಿದವರಲ್ಲ. ಕೇವಲ ವಿದ್ಯಾದಾನ ಬುದ್ಧಿಯಿಂದ ಇಂದಿನವರೆಗೆ ಕೆಲಸ ಮಾಡುತ್ತಾರೆ. ಯಾವ ವಿದ್ಯಾರ್ಥಿಯೇ ಬಂದು ಕೇಳಿದರೂ 'ಇತರರಂತೆ ನನಗೆ ವೇಳೆಯಿಲ್ಲ, ಕೆಲಸವಿದೆ, ನಾಳೆ ಬಾ' ಇತ್ಯಾದಿ ಶಬ್ದಗಳನ್ನು ಎಂದೂ ಆಡಿದವರಲ್ಲ. ಅಥವಾ "ನನಗೆ ಈ ವಿಷಯ ಗೊತ್ತಿಲ್ಲ ಪುಸ್ತಕ ನೋಡಿ ಹೇಳುತ್ತೇನೆ" ಎಂದು ಹೇಳುವ ಪ್ರಸಂಗವು ಅವರಿಗೆ ಎಂದೂ ಬರುತ್ತಿರಲಿಲ್ಲ.

ಇಂಥ ಸ್ಥಿತಿಯಿರುವಾಗ ಶ್ರೀ. ಪೂಜಾರ ಇವರನ್ನು ಧಾರವಾಡದಿಂದ ಬೇರೆ ಕಡೆಗೆ ವರ್ಗ ಮಾಡಿದರೆ ಕರ್ನಾಟಕಕ್ಕೆ "ಹುಣ್ಣಿನ ಮೇಲೆ ಬರೆ ಎಳೆದಷ್ಟು" ದುಃಖವಾಗುವದರಲ್ಲಿ ಸಂಶಯವಿಲ್ಲ. ಎಜ್ಯುಕೇಶನಲ್ ಇನ್ಸಪೆಕ್ಟರ ಸಾಹೇಬರ ಸಿಟ್ಟಿಂಗ ಮೆಂಬರಿನ ಕೆಲಸದ ... ಕತ್ತಿಯನ್ನು ಎತ್ತಿದ ಡಾಯರೆಕ್ಟರ ಸಾಹೇಬರೇ ಕೂಡಿ ವಿಚಾರ ಮಾಡಿ ಶ್ರೀ. ಪೂಜಾರ ಇವರ ವರ್ಗಾವರ್ಗಿಯನ್ನೇ ರದ್ದ ಮಾಡಬೇಕೆಂದೂ ಅವರನ್ನು ಧಾರವಾಡದಲ್ಲಿಯೇ ಇಡಬೇಕೆಂದೂ ನಮ್ಮ ಕೊನೆಯ ಹೇಳಿಕೆಯಿದೆ. ಅವರು ಮನಸ್ಸು ಮಾಡಿದರೆ ಧಾರವಾಡದ ಹಾಯಸ್ಕೂಲಿನಲ್ಲಾಗಲಿ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿಯಾಗಲಿ ಅವರನ್ನು ಇಡಲಿಕ್ಕೆ ಏನೊಂದು ಅಡ್ಡಿಯಿರುವದಿಲ್ಲ.

ಪಂಜಾಬದಲ್ಲಿದ್ದ ಮುಸಲಮಾನರ ಕೋಪವು.

ಪಂಜಾಬದ ಮುಸಲಮಾನರು ಹಿಂದೂ ಜನರ ಮೇಲೂ, ನ್ಯಾಯಕೋರ್ಟುಗಳ ಮೇಲೂ ಅತಿಶಯವಾಗಿ ಕ್ಷೋಭೆಗೊಳ್ಳಲು ಎರಡು ಕಾರಣಗಳಾಗಿವೆ. ರಂಗೀಲರಸೂಲವೆಂಬ ವರ್ತಮಾನ ಪತ್ರದಲ್ಲಿ ಮಹಮದ ಪೈಗಂಬರ ಹಾಗು ಬೇರೆ ಪೀರರ ವಿಷಯವಾಗಿ ಟೀಕೆ ಮಾಡಿದ ಲೇಖಗಳು ಬಂದವು. ಮುಸಲಮಾನರು ಈ ಪತ್ರದ ಮೇಲೆ ಫಿರ್ಯಾದಿ ಮಾಡಿದರು. ಅಪೀಲಿನಲ್ಲಿ ಈ ಪತ್ರಕಾರರು ದೋಷವಿಮುಕ್ತರಾದರು. ತೀರ್ಪು ಹೇಳಿದವರು ದಲೀಪಸಿಂಗರೆಂಬ ಶೀಖ ಗೃಹಸ್ಥರಾಗಿದ್ದಾರೆ.

ಮುಸಲಮಾನರ ಔಟಲುಕವೆಂಬ ಪತ್ರವು ಹಾಯಕೋರ್ಟಿನ ಜಡ್ಜರ ತೀರ್ಪಿನ ಮೇಲೆ ಟೀಕೆ ಮಾಡಿತು. ಈ ಟೀಕೆಯು ಹಾಯಕೋರ್ಟಿನ ಅಪಮಾನ ಮಾಡಿದ್ದಾಯಿತೆಂದು ಇವರ ಮೇಲೆ ಕೇಸ ನಡೆದು, ನ್ಯಾಯಮೂರ್ತಿಗಳು ಈ ಪತ್ರ ಸಂಪಾದಕರಿಗೆ ಆರು ತಿಂಗಳ ಶಿಕ್ಷೆ ವಿಧಿಸಿದ್ದಾರೆ. ತೀರ್ಪು ಹೇಳಿದವರು ಯುರೋಪಿಯನ್ನರಾಗಿದ್ದಾರೆ.

ಈ ಎರಡೂ ಕಾರಣಗಳನ್ನು ನಿವೇದಿಸುವದಕ್ಕಾಗಿ ಲಾಹೋರದಲ್ಲಿ ಮುಸಲಮಾನರ ಪ್ರಚಂಡ ಸಭೆ ಕೂಡಿತ್ತು. ... ಜಾಫರ ಅಲ್ಲೀಯವರು ಅಧ್ಯಕ್ಷರಾಗಿದ್ದರು. ಮುಸಲಮಾನರೆಲ್ಲರ ... ಚಳವಳಿ ಮತ್ತು ಧರ್ಮಾಭಿಮಾನದ ಆವೇಶ ಕಂಡು, ಸಭೆಯಲ್ಲಿ ಅಥವಾ ಸಭೆಯನಂತರ ಗೊಂದಲವೇಳಬಾರದೆಂದು ಪೋಲೀಸರು ವಿಶೇಷವಾದ ಬಂದೋಬಸ್ತ ಮಾಡಿದ್ದರು. ಯುರೋಪಿಯನ್ನ ಮ್ಯಾಜಿಸ್ಟ್ರೇಟರೂ ಬಂದಿದ್ದರು.

ಸಭೆಯಲ್ಲಿ ಅನೇಕ ಮೌಲ್ವಿಗಳು ಬಿರುಸಿನ ಭಾಷಣ ಮಾಡಿದರು. ನಮ್ಮ ಪೈಗಂಬರರ ಮೇಲೆ ... ಬಂದಂಥ ಲೇಖಗಳನ್ನು ನಾವು ನೋಡುವದು ಹೇಗೆ ಓದುವದು ಹೇಗೆ? ಈ ಪ್ರಕಾರ ಪೈಗಂಬರರ ಅಪಮಾನವಾಗುವದನ್ನು ನೋಡುವದಕ್ಕಿಂತ ಸಾಯುವದೇ ಲೇಸೆಂದು ಇವರು ಭಾಷಣ ಮಾಡಿ, ... ಕೊಡುವಂತೆ ಒತ್ತಾಯ ಪಡಿಸಬೇಕೆಂದು ಮೊದಲನೆಯ ಠರಾವು ಮಾಡಿದರು.

ಔಟಲುಕ ಪತ್ರದ ಸಂಪಾದಕರು ಹಾಯಕೋರ್ಟಿನ ತೀರ್ಪಿನ ಮೇಲೆ ಮಾಡಿದ ಟೀಕೆಯು ನ್ಯಾಯವಾಗಿದೆ. ಸಂಪಾದಕರಿಗೆ ಶಿಕ್ಷೆ ಕೊಟ್ಟದ್ದು ನಿಂದ್ಯವಾದದ್ದು. ಯಾವ ಲೇಖದ ದೆಸೆಯಿಂದ ಶಿಕ್ಷೆಯಾಗಿದೆ. ಅದನ್ನು ಪುನಃ ಮುದ್ರಿಸಿ ಪ್ರಸಿದ್ಧ ಮಾಡಬೇಕು. ಸಾರ್ವಜನಿಕ ಸಭೆ ಮಾಡಿ, ಅಲ್ಲಿ ಈ ಟೀಕೆಯನ್ನು ಓದಬೇಕು. ಉಳಿದವರು ಪುರಸ್ಕರಣೆ ಮಾಡಬೇಕು. ಮತ್ತು ಈ ತೆರದಿಂದ ಕಾಯದೆಭಂಗ ಮಾಡಿ ತರುಣ ಮುಸಲಮಾನರು ಸೆರೆಮನೆಗೆ ಹೋಗಬೇಕೆಂದು ಎರಡನೆಯ ಠರಾವು ಮಾಡಿದ್ದಾರೆ. ಆದರೆ ಇದರಲ್ಲಿ ಯುರೋಪಿಯನ್ನ ಜಡ್ಜರಿಗೆ ರಾಜೀನಾಮೆಯನ್ನಿಡಲಿಕ್ಕೆ ... ಮಾಡಬೇಕೆಂದು ಇರುವದಿಲ್ಲ.

ಶ್ರೀ ರಾನಡೆಯವರ ಕಾಯದೆಭಂಗ.

ಮ್ಯಾಜಿಸ್ಟ್ರೇಟರಿಗೆ ನೋಟೀಸು.

ಸಾರ್ವಜನಿಕ ಬೀದಿಗಳ ಮೇಲೆ ಗಂಟೆ ಬಾರಿಸುತ್ತ ಹಿಂದೂ ಮುಸಲಮಾನ ಐಕ್ಯ ಸಂಬಂಧವಾಗಿ ಹಂಚುತ್ತಿರುವ ಪತ್ರ ಪತ್ರಿಕೆಗಳ ಬಗ್ಗೆ ... ದಿನ ಶ್ರೀ ರಾನಡೆಯವರಿಗೆ ಪುಣೆಯ ಮ್ಯಾಜಿಸ್ಟ್ರೇಟರು ಎರಡು ರೂಪಾಯಿ ದಂಡ ಅಥವಾ ಎರಡು ದಿವಸ ಕೈದಿನ ಶಿಕ್ಷೆ ವಿಧಿಸಿ, ಎರಡೇ ದಿವಸಗಳ ಮಟ್ಟಿಗೆ ಇವರನ್ನು ಸೆರೆಮನೆಗೆ ಕಳಿಸಲಾಗಿದೆ. ದಂಡವನ್ನು ರದ್ದು ಮಾಡಿದ ಸಂಗತಿಯನ್ನು ಈ ಮೊದಲು ಬರೆದಿರುತ್ತೇವೆ.

ಹಿಂದೂ ಮುಸಲಮಾನ ಐಕ್ಯ ಸಂಬಂಧವಾಗಿ ತಾವು ಮಾಡುತ್ತಿರುವ ಕರ್ತವ್ಯದಲ್ಲಿ ಮ್ಯಾಜಿಸ್ಟ್ರೇಟರು ಪ್ರತಿಬಂಧದ ಹುಕುಮು ಕೊಡುವದು ತಮ್ಮ ಧರ್ಮಸಂಹಿತೆಗೂ ದೇಶಭಕ್ತಿಕ ಕರ್ತವ್ಯಕ್ಕೂ ಅಪಮಾನಕರವೆಂದಾಗಿರುವದರಿಂದ, ಶ್ರೀ ರಾನಡೆಯವರು ಈ ಹುಕುಮನ್ನು ಮುರಿದು ಕಾಯದೆಭಂಗ ಮಾಡಲು ಸಿದ್ಧರಾಗಿದ್ದಾರೆ.

ಇವರು ಮ್ಯಾಜಿಸ್ಟ್ರೇಟರಿಗೆ ಪತ್ರ ಬರೆದು "ಎರಡು ತಿಂಗಳ ಕಾಲ ಹ್ಯಾಂಡಬಿಲ್ಲನ್ನು ಹಂಚಬೇಡೆಂದು ನೀವು ಮಾಡಿದ ಹುಕುಮನ್ನು ನಾನು ಮನ್ನಿಸುವದಿಲ್ಲ. ನಾನು ಈ ನಿಮ್ಮ ಹುಕುಮಿನ ವಿರುದ್ಧವಾಗಿ ಬುಧವಾರ ಚೌಕಿನಲ್ಲಿ ಹ್ಯಾಂಡಬಿಲ್ಲಗಳನ್ನು ಹಂಚುವೆನು" ಎಂದು ತಿಳಿಸಿದ್ದಾರೆ. ಮ್ಯಾಜಿಸ್ಟ್ರೇಟರು ಮುಂದೆ ಹೇಗೆ ಮಾಡುವರೆಂಬದನ್ನು ನೋಡಲು ನಾಗರಿಕರು ಆತುರದಿಂದ ನಿರೀಕ್ಷಿಸುತ್ತಿದ್ದಾರೆ.

ಅಂಬ್ಯುಲನ್ಸದಲ್ಲಿ ರಾಜಕೀಯವು!!

ಡಾಕ್ಟರ ಹರ್ಡೀಕರರು ಬೆಳಗಕ್ಕೆ ಕಳಿಸುವ ಅಂಬ್ಯುಲನ್ಸದಲ್ಲಿ ರಾಜಕೀಯವಿರುತ್ತದೆಂದು ಹಿಂದುಸ್ತಾನ ಸರಕಾರದ ಗ್ರಹಿಕೆಯಾಗಿರುತ್ತದೆ. ಇದನ್ನು ಕಳಿಸುವವರು ಕಾಂಗ್ರೆಸದವರು ಮತ್ತು ಸೇವಾದಲದವರು; ಸೇವಾದಲದ ಮುಖ್ಯ ಪ್ರವರ್ತಕರು ಶ್ರೀ ಗಂಗಾಧರರಾವ ಮತ್ತು ಡಾಕ್ಟರ ಹರ್ಡೀಕರರು. ಇವರೆಲ್ಲರೂ ಸರಕಾರದ ವಿರುದ್ಧ ಚಳವಳಿ ಮಾಡತಕ್ಕವರು. ಹಿಂದುಸ್ಥಾನ ಸರಕಾರದವರು ಬೆಳಗಕ್ಕೆ ಕಳಿಸಿದ ದಂಡಿನ ವಿರುದ್ಧ ಕಾಂಗ್ರೆಸ ಸಭೆಯವರು ಠರಾವು ಮಾಡಿದ್ದಾರೆ. ಸರಕಾರಕ್ಕೆ ಕಾಂಗ್ರೆಸ ಮತ್ತು ಇದರ ಪ್ರವರ್ತಕರು ... ಇದರಲ್ಲಿ ರಾಜಕೀಯ ... ಊಹೆಯಾಗಿ ಈ ಪ್ರಕಾರ ಸರಕಾರದವರು ಇವರಿಗೆ ತಿಳಿಸಿದ್ದಾರೆ. ನಮ್ಮ ಅಂಬ್ಯುಲನ್ಸದಲ್ಲಿ ರಾಜಕೀಯವೆ ಇಲ್ಲ, ರೆಡಕ್ರಾಸದವರಂತೆ ಸಂಪೂರ್ಣ ಭೂತದಯೆಯದ್ದಾಗಿದೆ. ರೆಡ್ಡ ಕ್ರಾಸದ ನಿಯಮಗಳನ್ನು ಅಕ್ಷರಶಃ ಮನ್ನಿಸುವೆವೆಂದು ಡಾಕ್ಟರ ಹರ್ಡೀಕರರು ಪ್ರಸಿದ್ಧ ಮಾಡಿದ್ದಾರೆ.

ಬೆಳಗಕ್ಕೆ ಹೋಗಲು ... ಅರ್ಜಿಗಳು ಬಂದಿವೆ. ಇವುಗಳಲ್ಲಿ ಮಹಾರಾಷ್ಟ್ರ ೬೩, ಕರ್ನಾಟಕ ೧೧೫, ಬಂಗಾಲ ೩೩, ತಮಿಳ ೧೬, ಮುಂಬಯಿ ೧೭, ಮತ್ತು ವರ್ಹಾಡ ೧೧೦ ಇದ್ದು, ಉಳಿದವು ಕಿರುಕುಳವಾಗಿರುತ್ತವೆ.

ಸಾಹೇಬರು ಸುಳ್ಳಾಡುತ್ತಾರೇನು?

ಸಾಹೇಬರು ಬೇಕಾದಂದೆ ... ರ ಪಡೆಸರಲ, ಸ್ಟಾರ್ಡ ಮತ್ತು ... ದ ಕೂಡಲೆ ಬೇಕಾದಂಥ ಕೃತಿ ... ದಕ್ಕೆ ... ಒಂದು ಉದಾಹರಣೆ ... ಕತ್ತೆಯಲ್ಲಿ ... ಒಪ್ಪಿಕೊಂಡ ... ಹಿಂದೂ ಜನರು ಸ್ವರಾಜ್ಯಕ್ಕೆ ಹೇಗೆ ಅಪಾತ್ರರೆಂಬದನ್ನು ಕೆಳಗೆ ಹೇಳಿದ ಒಕ್ಕೊಂದು ಹಿಂದಿನ ಸುಳ್ಳುಗಳಿಂದ ಹೇಳುತ್ತಾರೆ.

೧ ಮಹಾತ್ಮಾ ಗಾಂಧಿ ಮತ್ತು ಸ್ವರಾಜ್ಯವಾದಿ ದಾಸರನ್ನು ಜಿರಂಗಕ್ಕೆ ಕಳಿಸಿ, ಬ್ರಿಟಿಶ ಸಾಮ್ರಾಜ್ಯಕ್ಕಾಗಿ ಹಿಂದುಸ್ಥಾನವನ್ನು ಉಳಿಸಿಕೊಂಡೆನು.

೨ ಈ ಮೂವರ ... ದಾಸನು ೧೯ ದಿವಸಗಳ ಪರ್ಯಂತರ ... ಹೇಳಿದನು ಅದರ ಒಂದು ದಿವಸ ಕೂಡ ವಿಚಾರವಂತನಂಥ ಮಾತಾಡಲೇ ಇಲ್ಲ.

೩ ಕಲಕತ್ತೆಯಲ್ಲಿ ಯುನಿವರ್ಸಿಟಿಯುಂಟು ಅಲ್ಲಿ ಏನು ಕಲಿಸುತ್ತಾರೆಂಬದನ್ನು ದೇವರೇ ಬಲ್ಲ. ಇಲ್ಲಿಯ ಪರೀಕ್ಷೆಯ ಪ್ರಶ್ನೆಯ ಕಾಗದಗಳು ಎರಡು ದಿವಸ ಮುಂಚಿತವಾಗಿ ಪೇಟೆಯಲ್ಲಿ ಕಾಣಿಸಿಕೊಂಡರಂತೆ ಮಾರುತ್ತವೆ.

೪ ಯಾವನೊಬ್ಬ ಹಿಂದುವಿಗೆ ದೊಡ್ಡ ಅಧಿಕಾರ ದೊರೆತರಾಯಿತು ಕಡ್ಡ ಬಳಗದವರನ್ನೂ ಬಂಧುಗಳನ್ನೂ ಕೆಲಸದಲ್ಲಿ ಸೇರಿಸುವನು.

೫ ಹಿಂದೂ ಜನರು ಮೊದಲೇ ಪ್ರಾಮಾಣಿಕರಲ್ಲವೇ ಅಲ್ಲ.

೬ ಇದೇ ಕಾರಣಕ್ಕಾಗಿ ಹಿಂದೂ ಜನರು ಸ್ವರಾಜ್ಯಕ್ಕೆ ಪಾತ್ರರಿರುವದಿಲ್ಲ.

ಕೋಚಿನ ಮ್ಯುನಿಸಿಪಾಲ್ಟಿಯ ಮೇಲೆ ಗದಾಪ್ರಹಾರ.

ಕೋಚೀನ ಸಂಸ್ಥಾನದಲ್ಲಿ ಇಂಗ್ಲಿಷ ದರ್ಬಾರ ರಕ್ಷಿತ ಸೇರಿದ ಕೋಚಿನವೂ ಉಂಟು. ಇಲ್ಲಿ ಮ್ಯುನಿಸಿಪಾಲಿಟಿಯ ಆಡಳಿತೆಯು ತೀರ ಕೆಟ್ಟದಾಯಿತು. ಮದ್ರಾಸ ಸರಕಾರದವರು ಮ್ಯುನಿಸಿಪಾಲಿಟಿಗೆ ಅನೇಕ ಎಚ್ಚರಿಕೆಗಳನ್ನು ಅಂತರಂತರವಾಗಿ ಕೊಟ್ಟಿದ್ದಾರೆ.

೧ ಮ್ಯುನಿಸಿಪಾಲಿಟಿಗೆ ತಿಳುವಳಿಕೆ ಇಲ್ಲ. ೨ ಬುದ್ಧಿ ಪೂರ್ವಕವಾಗಿ ... ೩ ತನ್ನ ಕರ್ತವ್ಯ ಮಾಡಲು ಅಸಮರ್ಥವಾಗಿದೆ. ೪ ಈ ವರುಷ ಮ್ಯುನಿಸಿಪಾಲಿಟಿಯು ಅತಿ ತಿರಸ್ಕಾರಯೋಗ್ಯವಾಗಿದೆ.

ಇದಕ್ಕೂ ಮಹತ್ವದ್ದವೇನೆಂದರೆ- ಈ ಎಲ್ಲ ಅಪವಾದ ಅಪಕೀರ್ತಿಗೆ ಮಿ. ಜೇಕಬರೆಂಬ ಚೇರಮನ್ನರೇ ಕಾರಣರಾದರು. ಇವರ ಮೇಲೆ ದಿವಾಣಿ ಮತ್ತು ಫೌಜದಾರಿಯಲ್ಲಿ ಕೇಸ ನಡೆಸಬೇಕೆಂದು ಜನರ ಸಭೆಯಲ್ಲಿ ಠರಾವು ಪಾಸಾಯಿತು ನಾಲ್ಕು ತಿಂಗಳಾಯಿತು. ಕೇಸು ನಡೆಸಲಿಲ್ಲ. ಇಷ್ಟೇ ಅಲ್ಲ ಪುನಃ ಜೇಕಬಸಾಹೇಬರನ್ನೇ ಚೇರಮನ್ನರಾಗಿ ಆರಿಸಿದ್ದಾರೆ. ಚೇರಮನ್ನರೆಂದರೆ ಅಧ್ಯಕ್ಷರು. ಈಗಿನ ಅಧ್ಯಕ್ಷರು, ನಾಲ್ಕು ತಿಂಗಳ ಹಿಂದಿನ ಅಧ್ಯಕ್ಷರ ಮೇಲೆ ದಿವಾಣಿ ಮತ್ತು ಫೌಜದಾರಿಯಲ್ಲಿ ಫಿರ್ಯಾದಿ ಮಾಡಬೇಕಾಗಿತ್ತು. ಅಂದರೆ- ಜೇಕಬಸಾಹೇಬರು ವಾದಿ ಮತ್ತು ಫಿರ್ಯಾದಿಯಾಗಿ ಕೋರ್ಟುಗಳಲ್ಲಿ ಒಂದೆಡೆಯಲ್ಲಿ ನಿಂತು, ಪ್ರತಿವಾದಿ ಮತ್ತು ಆರೋಪಿಯಾಗಿ ಮತ್ತೊಂದೆಡೆಯಲ್ಲಿ ನಿಲ್ಲಬೇಕಾಗುವದು ಲೋಕದಾಶ್ಚರ್ಯಕರವಾದ ಕೃತ್ಯವು ಸಂಭವಿಸುವಂತಾಯಿತು. ಮ್ಯುನಿಸಿಪಾಲಿಟಿಯವರು, ಜೇಕಬಸಾಹೇಬರನ್ನು ಈಗ ಹೊಟ್ಟೆಯಲ್ಲಿ ಹಾಕಿಕೊಂಡು, ಅವರನ್ನು ಪುನಃ ಚೇರಮನ್ನ ಮಾಡಿದರು. ಅವರ ಈ ನಡತೆಯು ಸರಕಾರಕ್ಕೆ ಒಪ್ಪಿಗೆಯಾಗಲಿಲ್ಲ. ಮ್ಯುನಿಸಿಪಾಲಿಟಿಯು ತನ್ನ ನಡತೆಯಲ್ಲಿ ದುರಸ್ತಿ ಮಾಡಿಕೊಳ್ಳದಿದ್ದರೆ ಸರಕಾರದವರು ಇದನ್ನು ಸಸ್ಪೆಂಡ ಮಾಡುವ ಭಯ ಹಾಕಿದ್ದಾರೆ.

ಧಾರವಾಡ ಮ್ಯುನಿಸಿಪಾಲಿಟಿಯವರು ತಿಳಿದುಕೊಳ್ಳುವಂಥ ದೃಷ್ಟಾಂತವು.

ಬಗದಾದದ ... ಧರ್ಮಗುರುಗಳು ಪರಲೋಕವಾಸಿಯಾದರು. ಇವರ ಶವ ಸಂಸ್ಕಾರದ ಮೆರವಣಿಗೆಯಲ್ಲಿ ಐದು ಸಾವಿರ ಜನರು ಕೂಡಿದ್ದರು.

ವಿವಿಧ ವಿಷಯಗಳು

ಮುಚ್ಚಿಡುವರಿಗೆ ಬೆದರಿಕೆಯು–

ಡಾಕ್ಟರ ಮುಂಜೆಯವರು ಅಹಮದನಗರಕ್ಕೆ ಬಂದ ಕೂಡಲೆ, ಅಲ್ಲಿಯ ಡಿಪುಟಿ ಪೋಲೀಸ ಸುಪರಿಂಟೆಂಡೆಂಟರು "ಇವರ ಕಯ್ಯಲ್ಲಿ" ನೀವು ಜನರಲ್ಲಿ ಕ್ಷೋಭೋದ್ರೇಕವಾಗುವಂಥ ಭಾಷಣ ಮಾಡದ [illegible] ಸರಕಾರವು ನಿಮ್ಮ ಉಪಚಾರ ಮಾಡದು, ಇದರ ವಿರುದ್ಧ ವರ್ತಿಸಿದರೆ ನಿಮ್ಮ ಮೇಲೆ ಕಾಯದೆ ಪ್ರಕಾರ ವ್ಯವಸ್ಥೆ ಮಾಡಲಾದೀತು" ಎಂಬದಾಗಿ ಬರೆದ ನೋಟೀಸು ಕೊಟ್ಟರು. ಡಾಕ್ಟರರ ಮೇಲೆ ಸುಂಕದ ಕಲೆಕ್ಟರರು ಬಿಟ್ಟಂಥ ಬಾಣದ ಎರಡನೆಯ ಪ್ರಕಾರವೇ ಸೈ. ಡಾಕ್ಟರರು ಇಂಥ ಬೆದರಿಕೆಗೆ ಹೆದರುವಂಥ ಅಳ್ಳೆದೆಯವರಿರುವದಿಲ್ಲೆಂದು ಸರಕಾರಕ್ಕೆ ಈ ಮೊದಲು ಎಷ್ಟೋ ಸಾರೆ ಗೊತ್ತಾಗಿದೆ.

ಮಹಾತ್ಮರ ಮತ–

ಹಿಂದುಸ್ಥಾನ ಸರಕಾರದ ಕೃತ್ಯದಿಂದ ಗಿರಣಿಗಳಿಗೆ ಬಂದ ಅಧೋಮುಖವನ್ನು ಕುರಿತು ಮಹಾತ್ಮರು ಗಿರಣಿಯವರಿಗೆ ಉಪದೇಶದ ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ. ಹಿಂದುಸ್ಥಾನದ ರಾಟಿಗೆ ಅಗ್ನಿ ಸಂಸ್ಕಾರ ಮಾಡಿ, ಅದರ ಬೂದಿಯ ಮೇಲೆ ಇಂಗ್ಲಂಡದ ಗಿರಣಿಗಳು ಕಟ್ಟಲ್ಪಟ್ಟಿವೆ. ರಾಟಿಯ ವ್ಯವಸಾಯ ಮುರಿದು, ಹಿಂದುಸ್ಥಾನವು ದರಿದ್ರವಾಯಿತು. ಹಿಂದುಸ್ಥಾನದ ಗಿರಣಿಗಳಿಗೆ ಉತ್ತೇಜನ ಬಂದರೆ– ಇಂಗ್ಲಂಡದವರಿಗೆ ದರಿದ್ರತನ ಬರುತ್ತದೆ. ಆದುದರಿಂದ ಇಂಗ್ಲಿಷ ಜನರ ಹಿತಕ್ಕಾಗಿ ಸರಕಾರದವರು ಈ ಗಿರಣಿಗಳ ಯೋಗಕ್ಷೇಮ ನೋಡಲಾರರು. ಈ ಸ್ವಾರ್ಥದ ಮೂಲಕ ನ್ಯಾಯಸ್ವರದ ನೀತಿಯು ದರಿದ್ರವಾಗಿದೆ.

ದಂಗೆ ಮತ್ತು ಕಲೆಕ್ಟರರು–

ಹಿಂದೂ ಮುಸಲಮಾನ ದಂಗೆಯಾಗಲಿಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಯಾವದೊಂದು ಜಾತಿಯ ಪಕ್ಷಪಾತ ಹಿಡಿಯುವದೇ ಮುಖ್ಯ ಕಾರಣವಾಗುತ್ತದೆ. ಯಾವ ಜಿಲ್ಲೆಯಲ್ಲಿ ದಂಗೆಯಾಗುತ್ತದೆ, ಆ ಜಿಲ್ಲೆಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಅಥವಾ ಕಲೆಕ್ಟರನು "ನಾಲಾಯಕ" ನಿರುತ್ತಾನೆಂದು ಹೇಳಿ, ಆತನಿಗೆ ಸರಕಾರದವರು ಯಾವದೊಂದು ಶಾಸನ ಮಾಡುವದಾದರೆ– ದಂಗೆಗಳು ಶಾಂತವೆಂದು ದಿವಾನ ಬಹಾದ್ದೂರ ಚಿಂತಾಮಣಿಯವರು ಸಂಯುಕ್ತ ಪ್ರಾಂತದ ಕೌನ್ಸಿಲದಲ್ಲಿ ಭಾಷಣ ಮಾಡಿದ್ದಾರೆ. ಕಲೆಕ್ಟರರಿಗೆ ನಾಲಾಯಕಿಯ ಸರ್ಟಿಫಿಕೇಟು ಕೊಡುವಂಥ ಬುದ್ಧಿಯು ಸರಕಾರಕ್ಕೆ ಹುಟ್ಟಿದರೆ– ದೇಶದಲ್ಲಿ ಅಸಂತೋಷವೇ ಉಂಟಾಗಲಾರದು.

ಪರದೇಶಿ ಸೀತಲು–

ಉತ್ತರ ಹಿಂದುಸ್ಥಾನದ ಒಂದು ತುರಂಗದಲ್ಲಿ ಒಬ್ಬನಿಗೆ ಹೊಡೆಯಬೇಕೆಂದ ಪಟಕಿಯನ್ನು ತಪ್ಪಿ ಮತ್ತೊಬ್ಬನಿಗೆ ಹೊಡೆದರು. ಈ ಅನ್ಯಾಯದ ಬಗ್ಗೆ ಪಾರ್ಲಮೆಂಟ ಸಭೆಯಲ್ಲಿ ಪ್ರಶ್ನೆ ಹೊರಟಿತು. ಇದೇನು ದೊಡ್ಡ ಮಾತಲ್ಲ. ಹೇಳುವಂಥ ಅನ್ಯಾಯವಲ್ಲೆಂದು ಅರ್ಲ ವಿಂಟರಟನ್ನ ಸಾಹೇಬರು ಉತ್ತರ ಕೊಟ್ಟರು. ಸಾಹೇಬರೇ ಆ ಬೆತ್ತದ ಪೆಟ್ಟುಗಳು ನಿಮಗೇ ಬಿದ್ದಿದ್ದರೆ– ಹೇಗಾಗುತ್ತಿತ್ತೆಂದು ಒಂದು ಪತ್ರವು ಪ್ರಶ್ನೆ ಮಾಡಿರುತ್ತದೆ.

ಜಪಾನರಿಗೆ ಬಹಿಷ್ಕಾರ–

ಜಪಾನದ ಬಟ್ಟೆಯ ವ್ಯಾಪಾರ ಮಾಡುವಂಥ ಜವಳಿಯವರಿಗೆ ಶಾಂಘಾಯಿಯ ಬಹಿಷ್ಕಾರವಾದಿಗಳು ಜುಲ್ಮಿನಿಂದ ನವ್ವಂಬರದ ತನಕ ಜಪಾನದ ಬಟ್ಟೆಯ ವ್ಯವಹಾರ ಮಾಡಬಾರದು. ಈ ವ್ಯವಹಾರದ ಹಣದ ನಿಯಮವನ್ನು ಗನೆಯ ಜುಲ್ಮಿನಿಂದ ನಿಲ್ಲಿಸಲ್ಪಡುವದೆಂದು ಜಾಹೀರ ಮಾಡಿದ್ದಾರೆ. ಈ ಬಹಿಷ್ಕಾರದ ಪರಿಣಾಮವು ಶಾಂಘಾಯಿಯಲ್ಲಿರುವ ಜಪಾನದ ಗಿರಣಿಗಳ ಮೇಲೆ ಹೇಗಾಗುವದೆಂದು ತಿಳಿಯಬೇಕಾಗಿದೆ.

ಶೇರ [illegible]–

ಇಂಗ್ಲಂಡದ ಮುನಸಿಫರಾಗಿದ್ದ ಮಿ. ಮೂ[illegible] ಎಂಬವರು ಗುಂಡು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡರು. ನ್ಯಾಯದ ಪೂರ್ವದಲ್ಲಿ ಕಲೆ[illegible] ತಮ್ಮ ಹೆಂಡತಿಯ ಹೆಸರಿನಿಂದ ಎರಡು ಪತ್ರಗಳನ್ನು ಬರೆದಿಟ್ಟಿದ್ದರು. "ಪೂರ್ಣ ವಿಚಾರ ಮಾಡಿ, ಗುಂಡು ಹಾಕಿಕೊಂಡಿದ್ದೇನೆ. ಅದರ ಕಾರಣವು ನನಗೇ ಗೊತ್ತು. ಒಡೆದು ಹೇಳುವಂತಿಲ್ಲೆಂಬದಾಗಿ ಆ ಪತ್ರಗಳಲ್ಲಿ ಬರೆದಿದ್ದಾರೆ.

ಹೇಮಗರ್ಭ ಮಾತ್ರೆ ಬಿತ್ತು.

ಸಾಯುವಂಥ ಸ್ಥಿತಿಯಲ್ಲಿ ಹೇಮಗರ್ಭ ಮಾತ್ರೆಯನ್ನು ಹಾಕಿದರೆ– ಕುಸುವಾದರೂ ಎಚ್ಚರಾಗಿ ನಾಲ್ಕು ಮಾತಾಡುವನು. ಅದೇ ಪ್ರಕಾರ ಸದ್ಯದಲ್ಲಿ ಸಾಯಲಿರುವ ಕಾರಕೂನರ ವೃತ್ತಿಗೆ ಹೇಮಗರ್ಭ ಮಾತ್ರೆ ಹಾಕಿದಂತೆ ವರ್ತಮಾನ ಬಂದಿದೆ. ಜುಲೈ ತಿಂಗಳ ಗನೆಯ ತಾರೀಖಿನ ದಿವಸ ಇವರು ಮನೆಗೆ ಹೋಗುವದು ಕನಿಷ್ಠ ಒಂದು ತಿಂಗಳಾದರೂ ಮುಂದೆ ಬಿದ್ದಿದೆಂದೂ ಈ ಅವಧಿಯಲ್ಲಿ ವಿದ್ಯಾಖಾತೆಯವರು ಕಾರಕೂನರಿಗಾಗಿ ಎಲ್ಲಾದರೂ ಸ್ಥಳ ನೋಡುವರೆಂದೂ ಹೇಳುವಂತಾಗಿದೆ.

ಜುಬಿಲಿಯ ವೃಕ್ಷಗಳು–

ಮೈಸೂರು ರಾಜ್ಯದಲ್ಲಿ ಶ್ರೀಮನ್ಮಹಾರಾಜರ ಜ್ಯುಬಿಲಿ ಉತ್ಸವದಲ್ಲಿ ಪ್ರತಿಯೊಂದು ಊರವರು ಈಗ ೪೪ ಗಿಡಗಳನ್ನು ಹಚ್ಚಬೇಕು. ಏಕಂದರೆ– ಮಹಾರಾಜರು ೪೪ ವರ್ಷದವರಾಗಿದ್ದಾರೆ. ಮುಂದೆ ಮಹಾರಾಜರು ಶತಾಯುಷಿಯಾಗಲೆಂದು ಪ್ರತಿವರ್ಷ ಒಂದು ಗಿಡವನ್ನು ಹಚ್ಚುತ್ತಾ ಹೋಗಬೇಕೆಂದು ಮಿ. ಕೇಬ್ರಿಗಾಡಿಯ ಸಾಹೇಬರು ಸೂಚಿಸಿದ್ದಾರೆ. ಈ ಪ್ರಕಾರ ಗಿಡಗಳನ್ನು ಹಚ್ಚುವದಾದರೆ– ಸ್ಥಳ ಕೊಡಬೇಕೆಂದೂ ಸಾಹೇಬರು ಅಂದಿದ್ದಾರೆ. ಒಂದೇ ನೆಟ್ಟಿನಲ್ಲಿ ಗಿಡ ಹಚ್ಚದೆ, ಒಂದೂರಿಂದ ಮತ್ತೊಂದೂರಿಗೆ ಹೋಗುವ ದಾರಿಯ ಮೇಲೆ ಅಲ್ಲಲ್ಲಿ ನೆರಳಾಗುವಂತೆ ಗಿಡಗಳನ್ನು ಹಚ್ಚುವದು ಹೆಚ್ಚು ಶ್ರೇಯಸ್ಕರವಾಗುತ್ತದೆ.

ದರಿದ್ರ ನಾರಾಯಣರು–

ಕಲಕತ್ತೆ, ಮುಂಬಯಿಯಂಥ ಭಾಗ್ಯನಗರಗಳಲ್ಲಿ ಅರಮನೆಗಳನ್ನು ನೋಡುತ್ತಿರುವಾಗ, ಅನಾಥ ಜನರು ನಿಲ್ಲಲಿಕ್ಕೂ ಮಲಗಲಿಕ್ಕೂ ನೆರಳು ಇಲ್ಲದೆ ನರಳುತ್ತಿರುವದನ್ನೂ ಕಾಣುತ್ತೇವೆ. ಇಂಥ ದರಿದ್ರ ನಾರಾಯಣರಿಗೆ ವಿಶ್ರಾಂತಿಸ್ಥಾನ ಮಾಡಿ ಕೊಡುವದಕ್ಕಾಗಿ ದೇಶಬಂಧುವಿನ ಹೆಸರಿನಿಂದ ಫಂಡು ಕೂಡಿಸುವ ಉದ್ಯೋಗ ನಡೆದಿದೆ. ಶ್ರೀಮಂತರು ಏಕ ಮನಸ್ಸಿನಿಂದ ದ್ರವ್ಯ ಸಹಾಯ ಮಾಡುತ್ತಿದ್ದಾರೆ. ವಿಜಾಪೂರ ಮ್ಯುನಿಸಿಪಾಲಿಟಿಗೆ ಇಂಥ ಸುಬುದ್ಧಿ ಹುಟ್ಟಬೇಕಲ್ಲವೇ?

ಕಲಬುರ್ಗಿಯ ನ್ಯಾಯ–

ಕಲಬುರ್ಗಿಯ ವಿದ್ಯಾರ್ಥಿಯವರು ಅಲ್ಲಿಯ ವಕೀಲರ ಮೇಲೆ ಮಾನಹಾನಿಯಾಗುವಂಥ ಟೀಕೆ ಮಾಡಿದರು. ವಕೀಲರು ಇವರ ಮೇಲೆ ಹೈದರಾಬಾದಿನ ಕೋರ್ಟಿನಲ್ಲಿ ಫಿರ್ಯಾದಿ ಮಾಡಿದ್ದಾರೆ. ಫಿರ್ಯಾದಿಯ ವಿಷಯವಾಗಿ ವಕೀಲರು ಮತ್ತು ಬ್ಯಾರಿಸ್ಟರರಲ್ಲಿ ಗಲಬಲೆಯಾಗಿದ್ದು, ಇವರು ಮೇಲಿಂದ ಮೇಲೆ ಕಮಿಟಿ ಕೂಡುತ್ತಿದ್ದಾರೆ. ಈ ಸ್ಪರ್ಧೆಯಲ್ಲಿ ವಕೀಲರ ಹೆಸರಿನಿಂದ ದಿನಾಲು ಅಸಭ್ಯ ಮತ್ತು ಅಘಟಿತದ ಪತ್ರಗಳೂ ನಬಿಕಗೆಟ್ಟಿಂಗ ಭಡಕದ ಪತ್ರಗಳೂ ಹೋಗುತ್ತಿರುವವು.

ಕಟ್ಟಿಗೆಯ ಹಿಟ್ಟಿನಿಂದ ಸಕ್ಕರೆ–

ಸ್ವೀಡನದ ರಸಾಯನ ಶಾಸ್ತ್ರಜ್ಞರಾದ ಹೇಗಲಂಡ ಸಾಹೇಬರು ಕಟ್ಟಿಗೆಯ ಹಿಟ್ಟಿನಿಂದ ಸಕ್ಕರೆ ಮಾಡುವ ಹೊಸ ಶೋಧ ಮಾಡಿ, ಅದರ ಕೃತಿಯನ್ನು ರಸಾಯನ ಶಾಸ್ತ್ರಜ್ಞರಿಗೆ ತೋರಿಸುತ್ತಿದ್ದಾರೆ. ಸೂಜು ಕೇರು ಹುಡಿಯಲ್ಲಿ ೭೦ ಶೇಕಡಾ ಸಕ್ಕರೆಯಾಗುವದೆಂದೂ, ಇದು ಲಾಭಕರ ವ್ಯಾಪಾರವಾಗುವದೆಂದೂ ಹೇಳುತ್ತಾರೆ. ಸ್ವೀಡನ ದೇಶದಲ್ಲಿ ಗೊಂಡಾರಣ್ಯದಂಥ ಅರಣ್ಯಗಳುಂಟು. ಇಲ್ಲಿಯ ಕಟ್ಟಿಗೆಯ ಹುಡಿಯಿಂದ ಪ್ರತಿವರ್ಷ ಲಕ್ಷಾವಧಿ ಟನ್ನ ಸಕ್ಕರೆ ಹೊರಟು, ಇದರ ವ್ಯಾಪಾರವು ಪ್ರಚಂಡ ಪ್ರಮಾಣದಿಂದ ಬೆಳೆಯುವದೆಂದು ತಜ್ಞರ ಮತವಾಗಿರುತ್ತದೆ.

ಧರ್ಮಾಚಾರ್ಯರ ಮೇಲೆ ಕೋಪ–

ಮುಂಬಯಿಯಲ್ಲಿ ಪಾರ್ಸಿ ತರುಣರ ಸಭೆಯಲ್ಲಿ ಸರ ಜಿವನಜಿಯವರ ನ್ಯಾಯವಾದ ವ್ಯಾಖ್ಯಾನವಾಯಿತು. ಇವರು ಆಚಾರ್ಯ, ಪ್ರೈಸ್ಟ್ ಮತ್ತು ದಸ್ತೂರರ ಮೇಲೆ ಕಡುಕರವಾದ ಟೀಕೆ ಮಾಡಿದರು. ಯಾವದೊಂದು ರಾಷ್ಟ್ರೀಯ ಅಥವಾ ಧಾರ್ಮಿಕ ಪ್ರಗತಿಗೆ ಮಹಾತ್ಮರೆನಿಸಿಕೊಳ್ಳುವ ಧರ್ಮಾಧಿಕಾರಿಗಳು ವಿಘ್ನ ತರುತ್ತಾರೆ. ಇವರನ್ನು ಹಿಂಬಾಲಿಸಬೇಡಿರಿ. ಇವರನ್ನು ಇವರ ಸ್ಥಳದಲ್ಲಿ ಬಿಟ್ಟು, ಸ್ವತಂತ್ರ ವಿಚಾರದಿಂದ ನಡೆದರೇ ನಿಮ್ಮ ಉತ್ಕರ್ಷವಾಗುವದೆಂದು ಅಂದಿರುತ್ತಾರೆ.

ಸ್ತ್ರೀಯರಿಗೆ ಉಪದೇಶ

ಪುಣೆಯಲ್ಲಿ ಪ್ರೊಫೇಸರ ಕರ್ವೆಯವರ ಸ್ತ್ರೀಯರ ಯುನಿವರ್ಸಿಟಿಯ ಪದವೀಧರರಿಗೆ ಪದವಿಗಳನ್ನು ಕೊಡುವ ಸಮಾರಂಭವು ಸರ ಶಂಕರನಾಯರ ಅಧ್ಯಕ್ಷತೆಯಲ್ಲಾಯಿತು. ಇವರು ಸ್ತ್ರೀಯರಿಗೆ ಮಾಡಿದ ಉಪದೇಶವೇನಂದರೆ– ನೀವು ಸಂಪಾದನೆ ಮಾಡಿದ ವಿದ್ಯೆಯ ಉಪಯೋಗವನ್ನು ಸ್ತ್ರೀಸಮಾಜಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವ ದಿಕ್ಕಿನಲ್ಲಿಯೂ ಹೆಚ್ಚಾಗಿ ಮಾಡಿರಿ. ಎಲ್ಲಕ್ಕೂ ಮೊದಲು ನೀವು ಗಂಡಸರ ಕಾನೂನಿನಂತೆಯ ಮನೋವಿಕಾರಗಳಿಗೆ ಬಲಿ ಬೀಳದಂತೆ ದಕ್ಷರಾಗಿರಿ. ಸೂಳೆತನಕ್ಕಾಗಿ ಸ್ತ್ರೀಯರ ವ್ಯಾಪಾರ ಮೊದಲು ನಿಲ್ಲಬೇಕು. ಸ್ತ್ರೀಯರಿಗೆ ಸ್ತ್ರೀಧನದ ಮೇಲೆ ಹಕ್ಕಿರುವದಂತೂ ಸರಿಯೇ. ವಿವಾಹವಾದ ಬಳಿಕ ಗಂಡನ ಕೂಡ ಸರಿಯಾಗಿ ಪ್ರಪಂಚ ಮಾಡುತ್ತಿರುವ ವರೆಗೆ ಆ ಮನೆಯ ಎಲ್ಲ ಆಸ್ತಿಯಲ್ಲಿಯೂ ನಿಮ್ಮ ಅರ್ಧ ಭಾಗವಿರತಕ್ಕದ್ದು. ಗಂಡಸರು ನಿಮ್ಮ ಭಾಗಕ್ಕೆ ಎಂದೂ ಅಡ್ಡ ಬರಲಾರರು. ನಿಮಗೆ ಪೂರ್ಣ ಸಹಾಯ ಮಾಡುವರು. ಸ್ತ್ರೀಯರು ತಮ್ಮ ಗಂಡಂದಿರ ಕೈತಾಳಿಗೆ ನಡೆಯಲಾಗದು. ತಮ್ಮ ವ್ಯಕ್ತಿ ಸ್ವಾತಂತ್ರ್ಯ ಮತ್ತು ವಿಚಾರ ಸ್ವಾತಂತ್ರ್ಯ ಕಾಯ್ದುಕೊಂಡಿರತಕ್ಕದ್ದು.

ಸ್ವರಾಜ್ಯದಿಂದಲೇ ಸರ್ವಸಿದ್ಧಿಯು

ಹಿಂದುಸ್ಥಾನ ಸರಕಾರದವರು ವಿಲಾಯತಿ ಮತ್ತು ಜಪಾನ ಸರಕಾರಗಳ ಮುಲಾಜೆಗಾಗಿ ಈ ದೇಶದ ಗಿರಣಿಗಳ ಸಂರಕ್ಷಣೆಗಾಗಿ ಅವಶ್ಯವಾದ ಕರ್ತವ್ಯ ಮಾಡದ್ದರಿಂದ, ಗಿರಣಿಯವರು ಈ ಪರ್ಯಂತರ ತಮ್ಮ ನೈಷ್ಕರ್ಮ್ಯದಲ್ಲಿಯೇ ಇದ್ದರು. ಯಾರ ದಾಕ್ಷಿಣ್ಯಪಟ್ಟಿದ್ದಿಲ್ಲ. ಸ್ವದೇಶಿ ಚಳವಳಿಗೆ ಜನ ಕೊಡಲಿಲ್ಲ. ಆದರೆ ಈಗ ತಮಗೇ ಏಟು ಹತ್ತಿದ ಕೂಡಲೆ, ಕಣ್ಣು ತೆರೆದು, ಸ್ವರಾಜ್ಯವಿದ್ದ ಹೊರತು ಗಿರಣಿಗಳು ಬಾಳಲಾರವೆಂದು ಅನ್ನುತ್ತಿದ್ದಾರೆ. ಈ ಪ್ರಕಾರ ಇವರು ಸ್ವರಾಜ್ಯ ವಿಚಾರವನ್ನು ಸ್ಥಿರವಾಗಿಟ್ಟುಕೊಂಡು ಕಾಂಗ್ರೆಸವನ್ನು ಸೇರಿದರೇ ಪ್ರಯೋಜನವು. ಗಿರಣಿಯವರಿಗೆ ಬಂದ ಬುದ್ಧಿಯು ಆಳ [illegible] ರುವಂಥವರಿಗೂ ಬರಲಿ.

ಹೊಡಿಸಿಕೊಂಡ ಕಲ್ಲಿನ ಲಿಲಾವು.

ಮಧ್ಯ ದೇಶದಲ್ಲಿ ಕಾಂಗ್ರೆಸದ ಅಧ್ಯಕ್ಷರಾಗಿದ್ದ ಶ್ರೀ ಶ್ರೀನಿವಾಸ ಅಯ್ಯಂಗಾರರ ಸಾರ್ವಜನಿಕ ವ್ಯಾಖ್ಯಾನವಾಯಿತು. ವ್ಯಾಖ್ಯಾನಕ್ಕೆ ಒಂದಿಬ್ಬರು ಕೆಲ ಅಸಹಿಷ್ಣುಗಳು ಸಭೆಯಲ್ಲಿ ಗೊಂದಲವೆಬ್ಬಿಸಿದರು. ಶ್ರೀನಿವಾಸ ಅಯ್ಯಂಗಾರರ ಮೇಲೆ ಕಲ್ಲು ಎಸೆದರು. ಗಲಭೆ ಶಾಂತವಾದ ಬಳಿಕ ಕಲ್ಲಿನ ಲಿಲಾವಾಯಿತು. ಮುರಾದಿಯ ಸವಾಲು ಏರು ರೂಪಾಯಿಗಳಾಯಿತು. ಹಡಿವಿನ ಮಾಲೆ, ಉಂಗುರ ಮುಂತಾದವುಗಳ ಲಿಲಾವಾಗುತ್ತಿದ್ದವು. ಕಲ್ಲು ಲಿಲಾವಾದದ್ದು ಇದೇ ಮೊದಲು.

ನ್ಯಾಯಮೂರ್ತಿ ಕೆಂಪಸಾಹೇಬರ ರಾಜೀನಾಮೆ–

ಮುಂಬಯಿ ಹಾಯಕೋರ್ಟಿನ ಆಕ್ಟಿಂಗ ಜಡ್ಜರಾಗಿದ್ದ ಮಿ. ಕೆಂಪಸಾಹೇಬರು ನಿಂತ ಕಾಲ ಮೇಲೆ ರಾಜೀನಾಮೆ ಕೊಟ್ಟು ಆಸ್ಟ್ರೇಲಿಯಾಕ್ಕೆ ಹೋದರು. ಅಲ್ಲಿ ಇವರ ಹಿರಿಗೆ ಬಹಳ ಒತ್ತಾಗಿದೆ. ಹತ್ತರ ಯಾರೂ ಇಲ್ಲ. ನೌಕರಿಯ ಮೇಲೆ ಹೊರಟು ಬರಬೇಕೆಂದು ತಾರು ಬಂದದ್ದರಿಂದ ಸಾಹೇಬರು ರಾಜೀನಾಮೆ ಕೊಟ್ಟರು. ಈ ಸಾಹೇಬರ ಪರಿಚಯವು ವಾಚಕರಿಗೆ ವಿಶೇಷವಾಗಿರುತ್ತದೆ. ಗೋಕಾವಿಯ ಪ್ರಕರಣದಲ್ಲಿ ಸರಕಾರದ ಪರಿಯಿಂದ ಬ್ಯಾರಿಸ್ಟರರಾಗಿ ಬಂದವರು ಇವರೇ!

ಸತ್ಯಾಗ್ರಹ–

ಕಳೆದ ವಾರದಲ್ಲಿ ಹುಬ್ಬಳ್ಳಿಯಲ್ಲಿ ಡಾಕ್ಟರ ಪಾಟೀಲರ ಮನೆಯಲ್ಲಿ ಸಮಾರಂಭವಾಯಿತು. ಯು ವಿದ್ಯಾರ್ಥಿ [illegible] ಘಂಡಿಗೆ ಸ್ವದೇಶಿ [illegible] ೧೧೧ ರೂ [illegible] ೧೧೧ ರೂ [illegible] ವನ್ನು ಅವರ ಹಸ್ತದಲ್ಲಿಟ್ಟರು. [illegible] ಹೇಟಿಕು ಒಂದರ [illegible] ಅಂತಿಗೆ [illegible] ಪೂಜೆಯನ್ನು [illegible], ೧೦೦ ರೂ [illegible] ಮುಂದಿಟ್ಟರು. ನೆರೆದ [illegible] ಕೃತಜ್ಞರಾಗಿ, ಡಾಕ್ಟರರನ್ನು [illegible] ಕೊಂಡಾಡಿದರು.

ಹಿಂದೂ ಜನರ ಬಹಿಷ್ಕಾರ–

ಜಾತಿಯ ಪಕ್ಷಪಾತದಿಂದ ಲಾಹೋರ ಮ್ಯುನಿಸಿಪಾಲಿಟಿಯು [illegible] ನಡೆದದ್ದರಿಂದ ಅಲ್ಲಿಯ ಹಿಂದೂ ಜನರು ಮ್ಯುನಿಸಿಪಾಲಿಟಿಗೆ ಬಹಿಷ್ಕಾರ ಹಾಕಿ, [illegible] ಗಾಗಿ [illegible] ಇಲ್ಲ. ಮಂತ್ರಿಯಾದ ಸರ ಫಜಲಿ ಹುಸೇನಸಾಹೇಬರು ಹಿಂದೂ ಜನರೊಂದಿಗೆ ರಾಜಿಯ ಸಂಧಾನ ನಡೆಸಿದರು. ರಾಜಾ ನರೇಂದ್ರ ಪ್ರಸಾದ ಮೊದಲಾದವರ ಕಡೆ [illegible] ಕಡೆಯಿಂದ ಅರ್ಜಿ ಮಾಡಿದರು. ಪರಿಣಾಮವು ಗುಡ್ಡಕ್ಕೆ ಕಲ್ಲು ಹೊಡೆದಂತಾಯಿತು. ಹಿಂದೂ ಜನರು ಮ್ಯುನಿಸಿಪಾಲಿಟಿಯನ್ನು [illegible] ಹಿಂದೂ ಜನರು ಜಾಹೀರ ಮಾಡಿದ್ದಾರೆ.

ಶ್ರಾವಸ್ತ್ರೇಲಿಯದ [illegible]

[illegible] ಕ್ರಾಸ್ರೇಲಿಯಾದ [illegible] ಯುಮತ ದೊರೆಯದ್ದರಿಂದ, [illegible] ಇಲ್ಲವಲ್ಲೆಂದು ಈ ಮೊದಲು [illegible] ಈ ಬಗ್ಗೆ ಇತರೆಯದು [illegible] ಮಾಡಿದ್ದು ಅದರ [illegible]

"[illegible] ಪೆಯಲ್ಲಿ ನನಗೆ [illegible] ಅಧಿಕಾರಿಗಳು ಈಗ [illegible] ಆದುದರಿಂದ [illegible] ವನ್ನು [illegible] ವಿಲ್ಲ [illegible] ವರೆಗೆ [illegible] ಈ [illegible] ಬಂದಿಲ್ಲ.

[illegible] ಸ್ವರಾಜ್ಯ [illegible] ಮಂತ್ರಿಸಭಕ್ಕೆ ಅತಿ [illegible]"

ಉಪ್ಪಿಗೆ [illegible] ಉಪ್ಪು [illegible]–

[illegible] ಹಿಂದುಸ್ಥಾನದ [illegible] ಮತ್ತು ಉಪ್ಪಿನ [illegible] ಕಲ್ಲಿಂದ [illegible] ಈಗ [illegible] ಅಲ್ಲಿ [illegible] ಮಾಡುವರು. ಇನ್ನು ಅಲ್ಲಿಗೆ ಹೋಗುವದೆಂತ. ಜನರು ಮುಗಿಬಿದ್ದು ಕೊಳ್ಳುವರು. ಕೋಟ್ ದ ವರ್ಷ ಮುಂಬಯಿಯೊಂದರಲ್ಲೇ [illegible] ಉಪ್ಪಿನ [illegible] ಈ ವರ್ಷ ಅದಕ್ಕೂ ಹೆಚ್ಚು [illegible] ಕೋಟ್ಸುತ್ತದೆ. ರಾಣಿಯಲ್ಲಿ ಉಪ್ಪಿನ [illegible] ದೊಡ್ಡ ಕಾರಖಾನೆ [illegible], [illegible] ಈಗ ಅಲ್ಲಿ [illegible]

ಚಾಂಗಸೋಲಿನ್ನನು–

ಚೀನ ದೇಶದಲ್ಲಿ ಬೋಲ್ಶೆವಿಕರ ಮತ್ತು ಕಲ್ಲಿ[illegible] ಕಾನರ ವಿರುದ್ಧ ನಿಂತಿರುವ ಚಾಂಗಸೋಲಿನ್ನನು ಚೀನದ ಉತ್ತರ ಸೈನ್ಯದ ಪ್ರಭುತ್ವವನ್ನು ಅಂಗೀಕರಿಸಿ ಫಾಜಿಲ ಸೇನೆಯ ಅಧ್ಯಕ್ಷನಾಗಿದ್ದಾನೆ. ಈತನು ಪೆಕಿಂಗದ ಮಂತ್ರಿಗಳನ್ನು ಮುಖ್ಯ ಪ್ರಧಾನಿಯನ್ನು ನೇಮಿಸುವನು. ಮುಂದೆ ಮತ್ತು ಅಧ್ಯಕ್ಷರೇ ಅಧಿಕಾರ ಪಡೆದೊಂದು, ಬೋಲ್ಶೆವಿಕ ಬಣವನ್ನು ಸೋಲಿಸಲು ಹೋರಾಡುವನು.

ಸಂಪೂರ್ಣ ಸೂರ್ಯಗ್ರಹಣ.

ಈ ಜೇಷ್ಠ ವದ್ಯ ಅಮಾವಾಸ್ಯೆ ದಿನವು ಅದೇ ದಿವಸ ಇಂಗ್ಲಂಡದ ಕೆಲ ಭಾಗದಲ್ಲಿ ಸಂಪೂರ್ಣ ಗ್ರಹಣವಾಗುವದು ಅಲ್ಲಿ ಇಂಗ್ಲೀಷ ಜನರು ನೂರಾರು ವರ್ಷಗಳ ಮೇಲೆ ಈ ಗ್ರಹಣವನ್ನು ನೋಡುವ ಸಮಯ ಬಂದಿರುವದು, ಆ ದಿವಸ ಈ ಅದ್ಭುತ ಚಮತ್ಕಾರವನ್ನು ನೋಡಲು ವಿಲಾಯತಿಯು ಲಕ್ಷಾವಧಿ ಜನರು ಕುತೂಹಲಪಡುತ್ತಿದ್ದಾರೆ. ಯಾರ್ಕಶೈರದಿಂದ ಕೆಲ ಮೈಲುಗಳಲ್ಲಿ ಸಂಪೂರ್ಣ ಗ್ರಹಣ ಕಾಣುವದು ಅಲ್ಲಿಗೆ ರೇಲ್ವೆ ಕಂಪನಿಯವರು ನೋಡುವವರನ್ನು ಕರಕೊಂಡು ಹೋಗಲು ಪ್ರಚಂಡವಾದ ಸಿದ್ಧತೆ ಮಾಡುತ್ತಾರೆ. ಲಂಡನದಿಂದ ದಿನಾಲು ಎಪ್ಪತ್ತು ಮೂರು ಅರವತ್ತು ಸ್ಪೇಶಲ್ ಟ್ರೇನುಗಳನ್ನು ಬಿಡುವರು ಮತ್ತು ಪ್ರತಿಯೊಂದು ಬಂಡಿಯ ಡಬ್ಬಿಗಳನ್ನು ಇಮ್ಮಡಿಸುವರು. ಪ್ರೇಕ್ಷಕರಿಗೆ ಊಟ ಉಪಹಾರ ದೊರೆಯುವದಕ್ಕಾಗಿ ಉಪಹಾರದ ಡಬ್ಬಿಗಳನ್ನಿಡುವರು. ರೇಲ್ವೆಯು ತರುವಂಥ ಮೋಟಾರಗಳೂ ದಿಕ್ಕಿಲ್ಲದೆ ಬರುವವು ಅವುಗಳಿಗಾಗಿ ಒಂದು ದೊಡ್ಡ ಬೈಲನ್ನು ಸಿದ್ಧ ಮಾಡಿದ್ದಾರೆ ಜನರ ಆನಂದಕ್ಕೆ ಯಾವ ತರದ ಕುಂದಿರಕೂಡದೆಂದು ಅಲ್ಲಿಯ ಮ್ಯುನಿಸಿಪಾಲಿಟಿಯವರು ನಾಟಕ, ಸಿನೇಮಾ, ಸರಕಸ ಮುಂತಾದವುಗಳ ವಿಷಯಕವಾದ ನಿಯಮಗಳನ್ನು ಸಡಿಲು ಮಾಡಿದ್ದಾರೆ ಶಾಲೆಯ ವಿದ್ಯಾರ್ಥಿಗಳ ದೆಸೆಯಿಂದ ಸ್ಪೇಶಲ ಅನುಕೂಲತೆ ಮಾಡುತ್ತಾರೆ ಗ್ರಹಣ ಕಾಲದಲ್ಲಿ ಸೂರ್ಯನ ಭಾವಚಿತ್ರ ತೆಗೆಯುವದಕ್ಕಾಗಿ ಹೆಸರಾದ ಜ್ಯೋತಿಷಜ್ಞರು ವಿಮಾನ ಕನ್ನಡಿಗಳನ್ನು ತಕ್ಕೊಂಡು ಹೋಗುವರು ಕ್ಯಾಮರಾಗಳನ್ನಿಡುವದಕ್ಕಾಗಿ ಗುಡ್ಡ ಬೆಟ್ಟಗಳ ಮೇಲೆ ಈಗಾಗಲೇ ಎತ್ತರವಾದ ಕಟ್ಟೆಗಳನ್ನು ಕಟ್ಟುತ್ತಿದ್ದಾರೆ.

ಕೊಲ್ಹಾಪೂರದ ಲೋಕಲ ಬೋರ್ಡು–

ಕೊಲ್ಹಾಪೂರ ಜಿಲ್ಲೆಯ ಲೋಕಲಬೋರ್ಡಿನ ಅಧಿಕಾರವು ಅಸಾಧಾರಣವಾದ್ದಾಗಿದೆ. ಈ ಸಾಲಿಯ ಮಂತ್ರಿಯವರು ಬೋರ್ಡಿನ್ನು ನಸ್ಸಂಡ ಅಧಿಕಾರ ಒದಗಿಸ ಮಾಡುವದಾಗಿತ್ತು. ಆದರೆ ಜೋಡೀನ ಅಧಿಕ್ಯರಿಗೆ ತಮ್ಮ ಪಕ್ಷದಿಂದ ಪುರಾವೆ ಕೊಡಲು ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ನಿಜಾಮಗಾಗಿ ಮೆ ಪ್ರೇಸಿಡೆಂಟರನ್ನು ನೇಮಿಸಿದರೆ ವಿಚಾರಣೆಯು ತೆರೆದ ಕೋರ್ಟಿನಲ್ಲಿ ನಡೆಯುವದು

ಮುವೆರಾಜನ ಆಕಸ್ಮಿಕ ಮರಣ–

ರಜಪುತಾನಾದಲ್ಲಿ ಟಾಂಕಿನೆಂಬ ಸಂಸ್ಥಾನವೊಂದು ಅಲ್ಲಿ ಇದೊಂದೇ ಮುಸಲಮಾನ ಸಂಸ್ಥಾನವು ಇದರ ನವಾಬಸಾಹೇಬರ ಸಾಹೇಬಜಾದಾರಿಗೆ ಸಂಪೆಯ ತರುವಾಯದಲ್ಲಿ ಪಟ್ಟವಾಗುವ ಸಂಭವಿಗೆ ಇರಲಿಲ್ಲ. ಚಿಕ್ಕ ಮಗನಿಗೆ ಪಟ್ಟವಾಗಬೇಕೆಂದು ನವಾಬರ ಇಚ್ಛೆ ಈ ಮಗನಿಗೆ ಆಗುವ ಪಟ್ಟದ ದೆಸೆಯಿಂದ ತಮ್ಮ ಜೀವವು ಗಂಡಾಂತರದಲ್ಲಿರುತ್ತದೆಂದು ಸಾಹೇಬಜಾದಾರು ಪೊಲಿಟಿಕಲ ಏಜಂಟರಿಗೆ ಕೆಲವು ದಿವಸಗಳ ಹಿಂದೆ ಪತ್ರಬರೆದಿದ್ದರು ಈಗ ಇವರಿಗೆ ಆಕಸ್ಮಿಕವಾಗಿ ಮರಣ ಸಂಭವಿಸಿದ ಪ್ರಯುಕ್ತ ನಾನಾ ತರದ ತರ್ಕ ಮಾಡುತ್ತಿದ್ದಾರೆ

ಅತ್ಯಂತ ನಿಂದ್ಯ ಆಚಾರ–

ರಜಪುತಾನಾಕ್ಕೆ ಸೇರಿದ ಉಜ್ಜಯನಿ, ದೇವಾಸಪೂರ ಭಾವನಗರ ಮುಂತಾದ ಪರಗಣೆಗಳಲ್ಲಿ ಹೋಳೀ ಹಬ್ಬದಲ್ಲಿ ಅಂತ್ಯಜ ಸ್ತ್ರೀಯರ ಕಣ್ಣುಕಟ್ಟಿ ಅವರನ್ನು ಊರ ತುಂಬ ಮೆರೆಸುವರು. ಎದುರಿಗೂ ಬಿಟ್ಟ ಜನರು ಇವರ ಮೇಲೆ ರಾಡಿ, ಕೊಳೆ ಮುಂತಾದ್ದನ್ನು ಎಸೆಯುವರು. ಸ್ತ್ರೀಯರು ಹೊಡತ ತಿಂದು, ಘಂಡಿಯಿಂದ ನಡುಗಿ ನೆಲಕ್ಕೆ ಬೀಳುವವರೆಗೆ ಜನರು ಚೆಲ್ಲಾಟವಾಡುವರು ಈ ಅನಾಗರಿಕ ಕೃತ್ಯವನ್ನು ಅಂತ್ಯಜರು ನಿಷೇಧಿಸಲು ಜನರು ಇವರಿಗೆ ಬಹಿಷ್ಕಾರ ಹಾಕಿದರು. ಬಹಿಷ್ಕಾರದ್ದ ಪೆಡರು ಅನೇಕ ಗ್ರಾಮಗಳ ಅಂತ್ಯಜರು ಗ್ರಾಮತ್ಯಾಗ ಮಾಡಿದ್ದಾರೆ.

ಇಂಗ್ಲಂಡ ಮತ್ತು ರಶಿಯಾ

ಇಂಗ್ಲಂಡದ ವಿಷಯವಾಗಿ ರಶಿಯಾ ಯಾವ ಮತವನ್ನಿಟ್ಟುಕೊಂಡಿದೆಯೆಂಬದೊಂದು ವಾದಿರುವದು.

ಇಂಗ್ಲೀಷ ಅರಸರಿಗೆ ಬುದ್ಧಿವಾದ ಇಲ್ಲ ಮುದುಕರಾದವರು ಇಂಗ್ಲಂಡದ ಬಲಿಷ್ಠ ಮೇರೆ ತಪ್ಪಿ ಬ್ರಿಟಿಷರು ಇಂಡಿಯಾ ಇದರ ಹೊಟ್ಟೆಯು ಕಷ್ಟದ ತಗಡಿನಿಂದ ಮುಚ್ಚಿದೆ ಜಾಗತಿಕ ಜೀವನದಾಗ ಇಂಗ್ಲಂಡ ಬೆಲೆ ಕೊಲೆಗಾರಿಕೆಯ ಮತ್ತು ನೀಚ ಜನರ ವಸತಿಸ್ಥಾನವು ಇಂಗ್ಲೀಷರು ರಶಿಯಾದ ಪಟ್ಟ ವೈರಿಯಾಗಿದ್ದಾರೆ ಅವರ ಗಿರಣಿಗಳ ಬಾಬುಗಳು ಹಿಡಿದು ಸ್ಥಿರವಾಗಿದೆ ಇಂಗ್ಲಂಡವನ್ನು ನೋಡಿರಿ ಭಯಾನಕವಾಗಿ ತೋರುವದು.

ಪುಣೆಯಲ್ಲಿ ಕಾಯದೆಭಂಗ–

ನಿನ್ನಿನ ಸಂಚಿಕೆಯಲ್ಲಿ ಪ್ರಸಿದ್ಧ ಮಾಡಿದಂತೆ ಸೈನಾಪತಿನ ಠಾಣದೆಯವರು ಮ್ಯಾಜಿಸ್ಟ್ರೇಟರ ಹುಕುಮನ್ನು ಮುರಿದು, ಬುಧವಾರ ಚೌಕದಲ್ಲಿ ಗಂಟೆ ಬಾರಿಸುತ್ತಾ ಮೇಲಿಂದ ಮೇಲೆ ಹಸ್ತಪತ್ರಿಕೆಗಳನ್ನು ಹಂಚಿದರು ಒಮ್ಮೆ ಪರಾಸಖಾನೆ (ಫೋಲೀಸ ಸ್ಟೇಶನ) ಯ ತನಕ ಹೋಗುತ್ತಿದ್ದರು

ವಿವಿಧ ವರ್ತಮಾನಗಳು

—o—

ಬಡೋದೆ ಸರಕಾರದವರು ತಮ್ಮ ದೇಶದಲ್ಲಿ ಬರುವ ಪರದೇಶದ ಸಕ್ಕರೆಯ ಮೇಲಿನ ಜಕಾತಿಯನ್ನು ತೆಗೆದು ಹಾಕಿದರು. ಇದು ಬಂಗೀಲಿ ಮಣಕ್ಕೆ ಒಂದು ರಕ್ಷಣೆ ಇತ್ತು.

ಶ್ರೀಮತ್ ರಾಘವೇಂದ್ರಸ್ವಾಮಿಗಳವರ ಆರಾಧನೆಯು ಆಷಾಢ ಶುದ್ಧ ದ್ವಿತೀಯಾ ತೃತೀಯಾ ಮತ್ತು ಚತುರ್ಥಿ ಈ ಮೂರು ದಿವಸ ಮಂತ್ರಾಲಯದಲ್ಲಾಗುವದು.

ವಿಜಾಪೂರ ಮ್ಯುನಿಸಿಪಾಲಿಟಿಯು ೨೫೦೦೦ ರೂಪಾಯಿ ವೆಚ್ಚ ಮಾಡಿ, ಜಾದಶಹ ಶಿವಾ ಮೂರ್ತಿಯನ್ನು ನಿಲ್ಲಿಸುವರು ಜಾದಶಹರ ಪೆಸರಿನಿಂದ ಅನಾಥರಿಗಾಗಿ ಒಂದು ಧರ್ಮಶಾಲೆ ಕಟ್ಟಿದರೆ ಸಾರ್ಥಕವೂ ರಾಜನಿಷ್ಠೆಯೂ ಸಾಧಿಸುತ್ತಿತ್ತಲ್ಲವೇ!

ನಿಜಾಮರು ಹೈದರಾಬಾದಿನ ರೆಸಿಡೆಂಟರು ತಮ್ಮ ಸೆಕ್ರೆಟರಿಯನ್ನು ಕರಕೊಂಡು ಸಿಮುಲಾಕ್ಕೆ ಹೋಗುವರು. ಹೈದರಾಬಾದಿನ ಕಾರಸ್ಥಾನವು ಇನ್ನೂ ತೀರಿದಂತೆ ತೋರುವದಿಲ್ಲ,

ಹೈದರಾಬಾದಿನಲ್ಲಿ ಪೋಲೀಸ ಕಮಿಶನರರಾಗಿದ್ದ ಮೆ. ಶ್ಯಾಫರ್ಡ ಸಾಹೇಬರಿಗೆ ನಿಜಾಮರು ಸಾಹೇಬರು ೧೨೦೦೦೦ ರೂಪಾಯಿಗಳ ಇನಾಮು ಕೊಟ್ಟರು.

ಮುಂಬಯಿಯಲ್ಲಿ ಯಾಕೂಬನು ಸತ್ತನಂದರೆ ಆತನ ಹೆಸರಿನ ಮರಣದ ಪಾಸು ವೈದ್ಯ ಹಾಕುವ ಸ್ಮಶಾನದಲ್ಲಿ ಅಂತ್ಯವಿಧಿಗೆ ಅಪ್ಪಣೆ ದೊರೆಯುವದಿಲ್ಲ ಒಬ್ಬ ವೃದ್ಧನಾದ ಮುಸಲಮಾನನು ಸಾಯುವ ಮುಂಚಿತವಾಗಿ ಇಂಥ ಸಾಸ ಪಡೆಕೊಂಡನು, ಆತನನ್ನು ಅಂತ್ಯವಿಧಿಗೆ ವೈದ್ಯ ಹೊರವಿಟ್ಟನೆ

ಬಡೋದೆ ಸರಕಾರದಿಂದ ಸ್ಕಾಲರಶಿಪ್ ಪಡೆದ ಒಬ್ಬ ಹುಡುಗನು ಎ ಎ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ.

ಬೆಂಗಳೂರದಲ್ಲಿ ಖಾದಿ ಪ್ರದರ್ಶನದ ವೇಳೆಯಲ್ಲಿ ನೂಲಿನ ಸಂಘ್ಯ ನಡೆಯುವದು. ಇದಕ್ಕಾಗಿ ದರಬಾರ ದಿನವರು ಐನೂರು ರೂಪಾಯಿ ಕೊಟ್ಟಿದ್ದಾರೆ. ಹಿಂದುಸ್ಥಾನದಲ್ಲಿ ನೂಲುವದರಲ್ಲಿ ಹೆಂಗಾದವರು ಪಂದ್ಯಕ್ಕೆ ಬರುವರು

ಸಂಯುಕ್ತ ಪ್ರಾಂತದಲ್ಲಿ ಮುರಾದಾಬಾದ ಜಿಲ್ಲೆಯಲ್ಲಿ ಪೋಲೀಸ ಮಾಸ್ತರನಾಗಿದ್ದ ಜ್ಯೋತಿ ಸರೂಪನೆಂಬವನು ಪೋಸ್ಟ ಖಾತೆಯ ಎರಡು ಲಕ್ಷ ರೂಪಾಯಿಗಳನ್ನು ಎತ್ತಿ ಹಾಕಿ, ಕೃಷ್ಣವ ಬಿಮಾ ಇದ್ದಾನೆ. ಇತನನ್ನು ಹಿಡಕೊಟ್ಟವರಿಗೆ ಪೋಸ್ಟ ಮಾಸ್ತರ ಜನರಲ್ಲರು ಐನೂರು ರೂಪಾಯಿ ಇನಾಮು ಕೊಡುವರು

ಸಿಂಧ ಹೈದರಾಬಾದಿನ ಹುರಂಗದಲ್ಲಿ ಸಿಂಧಿ ಮುಸಲಮಾನ ಮತ್ತು ಪಠಾಣರ ನಡುವೆ ಜಗಳ ಒಂದು ದಿನಾಲು ಗೊಂದಲವೇಳುತ್ತಿತ್ತು. ಅಧಿಕಾರಿಗಳು ಮುಖ್ಯಸ್ಥರನ್ನು ಬೇರೆ ಹುರಂಗಗಳಿಗೆ ಕಳಿಸಿ, ಜಗಳ ನಿಲ್ಲಿಸಿದರು.

ಹಿಂದಿ ಸ್ವಾಧೀನದ ಅಸೆಂಬ್ಲಿಯ ಮತ್ತು ಅಂದಿನ ಪಾರ್ಲಿಮೆಂಟ ಸಭೆಯಿಂದ ಆಲಿಖಿತರಿಂದ ವಿಶೇಷ ವಿಷಯವಾಗಿ ಒಳ್ಳೆಂದ ಶ್ರೀ ಪಟೇಲರು ಆದರ ಒಬ್ಬ ಸುದ್ದಿಗಾರನ ಮುಂದೆ ಉದ್ಗಾರ ತೆಗೆದಿದ್ದಾರೆ

ಒಂಗಾಲದಲ್ಲಿ ಪ್ರತಿವರ್ಷವು ಸತ್ಯಾಗ್ರಹ ನಡೆದು ಕೆಲ ದಿವಸಗಳಾದವು ಕೆಲ ಜನ ಸ್ವಯಂಸೇವಕರು ಹುರಂಗ ಕಂಡು ಬಂದರು ಸತ್ಯಾಗ್ರಹವು ನಿಂತಿಲ್ಲ. ಸರಕಾರವೂ ನಿಂತಿಲ್ಲ ಇಬ್ಬರ ಹಠವೂ ನಡೆದಿದೆ

ಬ್ರಹ್ಮದೇಶದಲ್ಲಿ ಸಾನದಾಂತೆಂಬನು ಬಹಳ ಪುಂಡತನ ನಡೆಸಿದ್ದಾರೆ ಈತನನ್ನು ಹಿಡಿಯುವದಕ್ಕಾಗಿ ೧೫೦೦ ಜನ ಪೋಲೀಸರು ಕೆಲಸಕ್ಕಿದ್ದಾರೆ. ಹಿಡಿದವರಿಗೆ ಸರಕಾರದವರು ಐದು ಸಾವಿರ ರೂಪಾಯಿ ಇನಾಮು ಕೊಡುವರು

ಮಿ ವಡಿಯರ ಇವರು ಧಾರವಾಡ ಜಿಲ್ಲೆಗೆ ಡಿ ಡಿ ಕಲೆಕ್ಟರರಾಗಿ ವರ್ಗ ಮಾಡಲ್ಪಟ್ಟಿದ್ದಾರೆ

ಮದ್ರಾಸಿನಲ್ಲಿ ನೀರಿನ ಕೊರತೆಯಾಗಿದಷ್ಟೇ, ಊರೊಳಗಿನ ಖಾಸಗಿ ಮತ್ತು ಸಾರ್ವಜನಿಕ ಬಾವಿಗಳಿಗೆ ಪಂಪು ಹಚ್ಚಿ, ನೀರು ಹೊರಗೆ ತರಬೇಕೆಂದು ಅಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಒಂದು ಠರಾವು ಬರತಕ್ಕದ್ದಿದೆ

ಚಾಂಚಾವಿನಲ್ಲಿ ಹೊಲಿಯ ದಾರಿಯು ಬಂದಾದ್ದರಿಂದ, ಪ್ರಜರ ಮುಖ್ಯಾಹಾರವಾದ ಅಕ್ಕಿಯು ಕೊರತೆಯಾಗ ಆಗುತ್ತದೆ

ಚಾಂಗ–ಸೊ ಲಿನ್ನನು ಸದ್ಯಸ್ಯ ಚೀನದ ಸರ್ವ ಸೇನಾಧಿಪತಿ ಎಂಬ ಪದವನ್ನು ಧರಿಣ ಮಾಡಿದ್ದಾನೆ. ದುರುದಿಗೇನು ಕೊರತೆ!!

ಮೊಹರಮ ಹಬ್ಬದಲ್ಲಿ ಮುಸಲಮಾನರು ಎದೆ ಎದೆ ಬಡಕೊಂಡು ಅಳುವರು ಕಬ್ಬಿಣದ ಚೂಪಾದ ಮುಳ್ಳುಗಳ ಮೇಲೆ ನಿಂತು, ರಕ್ತ ಸುರಿಸಿಕೊಂಡು, ಅನುರಕ್ತದಿಂದ ಜರಿಂದ ದೃಶ್ಯ ನೆಳೆಯುವರು. ಧರ್ಮದ ಹೆಸರಿಂದ ನಡೆಯುವ ಇವರ ಈ ಆಚಾರಗಳು ಮುಸಲಮಾನ ಧರ್ಮವನ್ನು ಅಪಹಾಸ್ಯಕ್ಕೆ ಗುರಿಮಾಡುವಂಥವಾಗಿವೆ ಮೈಸೂರ ರಾಜ್ಯದ ನಿಜಾಮುಸಾಹೇಬರು ಅಂದು, ಇವರಿಂದ ನಮ್ಮ ಒಂದು ನಡೆಯುವಂತೆ ಫರ್ಮಾನ ತೆಗೆದಿದ್ದಾರೆ

ಇಂಗ್ಲಂಡದ ಗಿರಣಿಕಾರರು ಅಮೇರಿಕೆಯಿಂದ ಅರಳಿಯ ಇಪ್ಪತ್ತು ಲಕ್ಷ ಬೇಲುಗಳನ್ನು ತರಿಸುವರು. ಹಿಂದುಸ್ಥಾನದಿಂದ ಒಂದು ಲಕ್ಷ ಇಪ್ಪತ್ತು ಸಾವಿರ ತರಿಸುವರು ಹಿಂದುಸ್ಥಾನದ ಹತ್ತಿ ವ್ಯಾಪಾರವು ಬೆಳೆಯಬೇಕಾದರೆ ಹತ್ತಿಯಲ್ಲಿ ಸುಧಾರಣೆಯಾಗಬೇಕೆಂದು ಮ್ಯಾಂಚೆಸ್ಟರದ ಗಿರಣಿಯವರು ಅನ್ನುತ್ತಾರೆ

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮಾರವಾಡಿ ಬೇನೆ ಇರುವದರಿಂದ ಸಿಂಹಸ್ಥವಾದ ಯಾತ್ರೆಗೆ ಹೋಗುವಂಥವರು ಬಹಳ ಎಚ್ಚರದಿಂದ ಹೋಗಬೇಕು ಬಾರಕರ ಪಧರು ಮಾರಾಟದ ವೈಲೀ ಜುಟ್ಟಿಸಿಕೊಳ್ಳುವರು ಉತ್ತಮ ಮೈಲಿಯ ಲಸಿಕೆಯಲ್ಲಿ ಮಾನವ ಮುಂತಾದ ಧರ್ಮ ವಿರುದ್ಧ ಪದಾರ್ಥವಿರುವದಿಲ್ಲ. ಜನರು ಜೀವನನ್ನು ಗಂಡಾಂತರದಲ್ಲಿ ಹಾಕಿಕೊಳ್ಳದಿರಬೇಕೆಂದು ಮುಂಬಯಿ ಸರಕಾರದವರು ಪ್ರೆಸನೋಟನ್ನು ಪ್ರಸಿದ್ಧ ಮಾಡಿದ್ದಾರೆ

ಆಂಧ್ರ ದೇಶದ ಪ್ರಸಿದ್ಧ ಆಸಹಕಾರಿಯಾದ ಶ್ರೀ ಸಾಂಬಮೂರ್ತಿಯವರೂ, ಮುಂಬಯಿಯ ಪ್ರಸಿದ್ಧ ಪಾರ್ಸಿ ಗೃಹಸ್ಥರಾದ ಮೆ ಭರುಚಾಸಾಹೇಬರೂ ನಾಗಪೂರದ ಸತ್ಯಾಗ್ರಹ ನೋಡಲಿಕ್ಕೆ ಹೋಗಿದ್ದಾರೆ ಶ್ರೀ ಸಾಂಬಮೂರ್ತಿಯವರ ಸ್ವಾಗತಕ್ಕಾಗಿ ಸ್ಟೇಶನಕ್ಕೆ ಬಂದಿದ್ದ ಐವರು ಸ್ವಾಗತಿಕರನ್ನು ಪೋಲೀಸರು ಸ್ಟೇಶನದಲ್ಲಿಯೇ ದಸ್ತಗಿರ ಮಾಡಿದರು.

ಮಹಾತ್ಮರು ಇನ್ನೂ ಗಜ ದಿವಸಗಳ ಪರ್ಯಂತರ ಬೆಂಗಳೂರದಲ್ಲಿರುವರು.

ಮುಂಬಯಿಯಲ್ಲಾದ ಎಲ್ ಎಲ್ ಬಿ ಪರೀಕ್ಷೆಯಲ್ಲಿ ಕುಮಾರಿ ಸೆಸಿಲಿಯಾ ಫೆರಾಂಡಿಸಾ ಎಂಬವಳು ಫರ್ಸ್ಟಕ್ಲಾಸಿನಲ್ಲಿ ಪಾಸಾಗಿದ್ದಾಳೆ

ಮುಂಬಯಿಯಲ್ಲಿ ಬಿರುಗಾಳಿ ಬೀಸಿ, ಒಂದು ಮೋಟಾರ ಹಾರಿ, ಸಮುದ್ರದಲ್ಲಿ ಬಿತ್ತು

ನಾಗಪೂರದಲ್ಲಿ ಒಬ್ಬನು ತನೆಯ ಅಳಿಯತನಕ್ಕೆ ನಿಂತನು. ಮಾವನ ಕಡೆ ಜಗಳಾಡಿ, ಮನೆಬಿಟ್ಟು ಹೋದನು ಒಳಿತ ಮಾವನು ಅಳಿಯನು ಅಂದರೆ ತನ್ನ ಮಗಳನ್ನು ಎರಡನೆಯವನಿಗೆ ಕೊಟ್ಟ ಮದುವೆ ಮಾಡಿಕೊಟ್ಟನು. ಈ ಅಪರಾಧಕ್ಕಾಗಿ ಅಳಿಯನು ಈಗ ಮಾವನ ಮೇಲೆ ಫಿರ್ಯಾದಿ ಮಾಡಿದ್ದಾನೆ

ಫೋಲೆಂಡದ ಇಬ್ಬರು ಗುಪ್ತಪೋಲೀಸರು ರಶಿಯಾದ ಉಕ್ರೇನ ಪ್ರಾಂತದಲ್ಲಿ ಹೋಗಿ, ಅನೇಕರನ್ನು ಕೊಲ್ಲಬೇಕೆಂದಿದ್ದರು ರಶಿಯಾ ಸರಕಾರದವರು ಇವರನ್ನು ಹಿಡಿದು, ಗುಂಡಿಕ್ಕಿ ಕೊಂದರು.

ಇತ್ತೀಚಿನ ಮಂತ್ರಿಯಾದ ಸಾಕಲತ ವಾಲಾರಿಗೂ ಇಂಗ್ಲೀಷ ಹಾಯು ಕಮೀಶನ ವಿಗೂ ಆದ ಒಡಂಬಡಿಕೆಯು ರಾಷ್ಟ್ರೀಯ ಪಕ್ಷದವರಿಗೆ ಸರಿಗಂಡಿಲ್ಲ, ಅವರು ತಮ್ಮ ನಿಷೇಧವನ್ನು ಜಾಹೀರ ಮಾಡಿದ್ದಾರೆ

ಇತ್ತೀಚಿನ ಸುಲ್ತಾನರು ಜುಲೈ ತಿಂಗಳ ೯ ನೇ ತಾರೀಖಿನ ದಿವಸ ಇಂಗ್ಲಂಡಕ್ಕೆ ಹೋಗುವರು. ರಾಜಕೀಯ ಉಪಾಯೋಪದ ಮುಖ್ಯ ವಿಷಯವಾಗಿರುವದು

ಕಾಕೋರಿಯ ಕೈದಿಗಳನ್ನು ರಾಜಕೀಯ ಕೈದಿಗಳಾಗಿ ನಡೆಸಿಕೊಳ್ಳಬೇಕೆಂದು ಸಂಯುಕ್ತ ಪ್ರಾಂತದ ಕೌನ್ಸಲದಲ್ಲಿ ಠರಾವು ಬರತಕ್ಕದ್ದಿದೆ.

ಕಂಜಾವರದ ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ತಮ್ಮ ಒಸಗೆ ದೇಶಾಗುವ ಒಟ್ಟಿಗಳಿಗಾಗಿ ಖಾದಿಯನ್ನೇ ಉಪಯೋಗಿಸಬೇಕೆಂಬ ಠರಾವು ಮಾಡಿದ್ದಾರೆ

ರಂಗೂನದಲ್ಲಿ ಒಂದು ಅಕ್ಕಿಯ ಗಿರಣಿಗೆ ಬೆಂಕಿ ಹತ್ತಿ ಎರಡು ಲಕ್ಷದ ಹಾನಿಯಾಯಿತು. ಗಿರಣಿಯು ವಿಮೆ ಇಳಿಸಿದೆ

ಧಾರವಾಡ–

ಇಲ್ಲಿಯ ಕರ್ನಾಟಕ ಕಾಲೇಜದಲ್ಲಿ ಕನ್ನಡವನ್ನು ಕಲಿಸುವದಕ್ಕೆ ಬೆಂಗಳೂರಿನ ಶ್ರೀ ಚನ್ನಕೇಶವಯ್ಯಂಗಾರರು ನೇಮಿಸಲ್ಪಟ್ಟಿದ್ದಾರೆ.

ಕಳೆದ ನಾಲ್ಕು ದಿವಸಗಳಿಂದ ಮಳೆಯು ಹೆಚ್ಚಾಗಿದೆ. ಬಿತ್ತುವರಿಗೆ ಒಳ್ಳೇ ಅನುಕೂಲವು.

ಟ್ರೇನಿಂಗ ಸ್ಕೂಲನ್ನು ಒಂದು ಮಾಡಬೇಕೆಂದು ಶಾ ಡಾಯರೆಕ್ಟರ ಸಾಹೇಬರಿಂದ ಬರೆದು ಬಂದಿರುತ್ತದೆ

ಶ್ರೀ. ವಿದ್ಯಾರಣ್ಯರ ಮಹೋತ್ಸವಕ್ಕಾಗಿ ಇಂದಿನ ದಿವಸ ಸಾಯಂಕಾಲದ ೬॥ ಗಂಟೆಯ ಸಮಯದಲ್ಲಿ ಶ್ರೀ ಜಗದ್ಗುರು ಮಹಾಭಾಗವತ ಸ್ವಾಮಿಗಳವರು ಸ್ಕೌ ಇಂಗ್ಲೀಷ ಸ್ಕೂಲಿನಲ್ಲಿ ಪ್ರವಚನ ಮಾಡಿದರು

ಪೋಲೀಟೀಕಲ ಪಡಗಳು.

ಹಿಂಗಳ ಕಾಲಮಿನ ಹತ್ತು ಪಡಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಡಕ್ಕೆ ಒಂದುವರೆ ಆಣೆ ಇಂಗ್ಲೀಷ ಪ್ರತಿಯೊಂದು ಒಳಗೆ ... ಆಣೆ ... ಮ್ಯುನಿಸಿಪಾಲಿಟಿ ಲೋಕಲಬೋರ್ಡ ... ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ... ದಿಂದ ಅವತರಿಸಿ ಕನ್ನಡದಲ್ಲಿ ... ಜಾಹಿರಾತುಗಳನ್ನು ... ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ...

ಈ ಪತ್ರವನ್ನು ... ರ್ಯ ಹೊನಕೇರಿ ಇವರು ಧಾರವಾಡದಲ್ಲಿ ... ಮೈವಾಡಕರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಶ್ರೀ ಕೇಳಕರ, ಮೊದಲಾದ ಆರು ಜನ ಮೆಂಬರರು ಅಸೆಂಬ್ಲಿಯಲ್ಲಿ ಠರಾವು ತರುವರು. ಈ ವಿಷಯವಾಗಿ ಒಂದು ಕಮಿಟಿ ನೇಮಿಸಬೇಕೆಂದು ಇವರ ಮತವು.

ಇಜಿಪ್ತದಲ್ಲಿ ಹಾಯ ಕಮೀಶನರರಾಗಿದ್ದ ಲಾರ್ಡ ಲಾಯ್ಡಸಾಹೇಬರು ಇಂಗ್ಲಂಡದ ದಾರೀ ಹಿಡಿದರು. ತಿರುಗಿ ಬರುವ ಸಂಭವವಿಲ್ಲ.

ಜಾಹೀರ ನೋಟೀಸು

—೦—

ಇದರಲ್ಲಿ ಕೆಳಗೆ ಸಹಿ ಮಾಡಿದವಳ ಕಡೆಯಿಂದ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ ನನ್ನ ಖಾಸ ಗಂಡನಾದ ಬಸವಣ್ಣೆಪ್ಪಾ ಶಿವಪ್ಪಾ ಕಲ್ಲಜ್ಜನವರ ಸ|| ಕಂದರಮುಂಡಲಗಿ ತಾ|| ರಾಣೇಬೆನ್ನೂರ ಈತನ ಖಾಸ ಹೆಂಡತಿ ನಾನು ಇದ್ದು ನನ್ನ ಹೊಟ್ಟೆಯಿಂದ ಯರಡು ಗಂಡು ವ ಯರಡು ಹೆಣ್ಣು ಮಕ್ಕಳು ಇದ್ದು ಸದರಿಯವರು ಈಗ ವಂದು ವರ್ಷದ ಲಾಗಾಯಿತ ದುಷ್ಟ ಜನರ ಸಹವಾಸದಿಂದ ಹೆಂಡರು ಮಕ್ಕಳನ್ನು ಬಿಟ್ಟು ರಾಂಡಬಾಜಿ ವ ದುರ್ವ್ಯಸನಕ್ಕೆ ಬಿದ್ದು ತಲೆ ಕೆಟ್ಟವನಂತಾಗಿ ನಮ್ಮ ಘರಾಣೆದ ಸರ್ವೆನಂಬರು ೨೦೭/೩ ೨೯೪/೨ ೩೧೬/೨ ೩೧೬/೩ ನೇ ಜಮೀನು ವ ಮನಿ ಜಂಗಮ ಆಸ್ತಿ ಸಹಾ ವಿಲೇವಾಟ ಮಾಡಲಿಕ್ಕೆ ಹಚ್ಚಿದ್ದಾನೆ ಅಂತಾ ಕೇಳಿಕೆಯಲ್ಲಿ ಆದೆ ಆದ್ದರಿಂದ ಯಾರೂ ಯಾವ ನಮ್ಮ ಘರಾಣೇದ ಆಸ್ತಿಯ ಬಗ್ಗೆ ಯಾವ ಕರದ ವ್ಯವಹಾರ ಮಾಡಬಾರದು ಮತ್ತು ಸದ್ರಿಯವನಿಗೆ ಸಾಲಾ ಸಹಾ ಕೊಡಬಾರದು. ಆತನು ಮಾಡುವ ಯಾವತ್ತು ವ್ಯವಹಾರಗಳು ನಮ್ಮ ಘರಾಣೆದ ಹಿತದ ಬಗ್ಗೆ ಆದ್ದವು ಇರುವದಿಲ್ಲ. ಜರ ಯಾರಾದರು ಆತನ ಕೂಡಾ ಏನಾದರೂ ವ್ಯವಹಾರ ಮಾಡಿದಲ್ಲಿ ಆ ವ್ಯವಹಾರಗಳು ನನ್ನ ವ ಮಕ್ಕಳ ಮೇಲೆ ಬಾಂಧಾಯಿಸುವದಿಲ್ಲ. ಮತ್ತು ನನ್ನ ವ ನನ್ನ ಮಕ್ಕಳ ಸಮ್ಮತಿ ಶಿವಾಯ ಜರ ವಂದು ವೇಳೆ ಘರಾಣೆದ ಆಸ್ತಿ ಸಂಬಂಧಿ ಯಾರಾದರೂ ಯಾವ ಧರದ ವ್ಯವಹಾರ ಮಾಡಿದರೂ ಆ ವ್ಯವಹಾರಗಳನ್ನು ಕೋರ್ಟಿನಿಂದ ರದ್ದು ಮಾಡಿಸುವದರಲ್ಲಿ ಬರುವದಲ್ಲದೇ ನುಕ್ಸಾನಿಕ್ಕೆ ಪಾತ್ರರಾಗುವದರಲ್ಲಿ ಬರುವದು.

ತಾ|| ೨೫-೬-೧೯೩೭ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಬಸವ್ವಾ ಕೋಮ ಬಸವಣ್ಣೆಪ್ಪಾ ಕಲ್ಲಜ್ಜನವರ, ಈಕೆ ಮಾಡಿದ್ದು ಆದೆ.

ಜಾಹೀರಾತು.

ಪ್ರಿಯ ಬಾಂಧವರೇ

ನಮ್ಮಲ್ಲಿ ಅತಿ ಉತ್ತಮವಾದ ಬ್ರೌನ್ಸ ಚಹಾ ಮತ್ತು ಕಾಫೀ ಸೋವೀ ದರದಿಂದ ಸಿಗುವದಲ್ಲದೆ, ಕೋಳಿ ವ್ಯಾಪಾರಸ್ಥರಿಗೆ ಕಮಿಶನ್ ಸಹ ದೊರೆಯುತ್ತದೆ.

ಮತ್ತು ನೀವು ಒಂದಾವರ್ತಿಯಾದರೂ ನಮ್ಮ ಚಹಾ ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ತಮ್ಮ ಮನಸ್ಸಿಗೆ "ಉತ್ತಮ" ಅನಿಸಿದರೆ ತೆಗೆದುಕೊಳ್ಳಬಹುದು. ಯಾಕಂದರೆ ಊರಲ್ಲಿ ಎಲ್ಲ ತರದ ಚಹಾ ನಮ್ಮ ಕಡೆಗೆ ಪಸಾರವಾಗುತ್ತದೆ. ಆದರಲ್ಲಿ ಇದು ಉತ್ತಮವಿರುತ್ತದೆ. ಪರಸ್ಥಳದವರು ತಮಗೆ ಬೇಕಾದಲ್ಲಿ ಕೆಳಗಿನ ಪತ್ರಕ್ಕೆ ಬರೆದು ವಿಚಾರಿಸತಕ್ಕದ್ದು. ಮತ್ತು ನಿಮ್ಮ ಆರ್ಡರ ಮಾಲು ವ್ಹಿ. ಪಿ. ಯಿಂದ ಕಾಳಜೀ ಪೂರ್ವಕ ಕಳಿಸಿ ಕೊಡುತ್ತೇವೆ. ಆರ್ಡರ ಕೊಡುವದಾದರೆ ೧/೩ ಹಣವನ್ನು ಆಡವಾನ್ಸ ಕಳಿಸತಕ್ಕದ್ದು.

[ಶಿಗ್ಗಾವ ಪತ್ತೆ]

ಏಜಂಟ:—

ಗಣಪತ ಭವಾನರಾವ ಲೋಖಂಡೆ ಮೋತಿ ತಲಾವ ಧಾರವಾಡ

ಮತ್ತು

ಜನಾರ್ದನ ರಾಮಚಂದ್ರರಾವ ಪಿಶಾರೆ,

ವಾಚ ರಿಪೇರರ ವ ಡೀಲರ ದೇಗಾವಿಗಲ್ಲಿ, ಹುಬ್ಬಳ್ಳಿ.

ತ್ವರೆ ಮಾಡಿರಿ. **ಮಾರಿಕಾ ಬೇನೆಗೆ** ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿದಿರುವದು.

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಲಾ ಬೆಳಗಾವ.

ನೋಟೀಸು

ರಾ|| ಹುಶೇನಸಾಬ ಮತ್ತು ಮಕ್ತುಮಸಾಬ ಭಂಗಿ ಸಾ|| ಅಮಿನಭಾವಿ ತಾ|| ಧಾರವಾಡ ಇವನಿಗೆ—

ಕೆಳಗೆ ಸಹಿ ಮಾಡುವಳಿಂದ ನೋಟೀಸ ಕೊಡೋದೇನಂದರೆ ನೀನು ನನ್ನ ಲಗ್ನದ ಗಂಡನಿರುತ್ತಿ ನೀನು ನನ್ನ ಸಂಗಡ ಕೆಲವು ದಿನ ಬಾಳ್ವೆ ಮಾಡಿದಿ ಮುಂದೆ ನೀನು ದುರ್ವ್ಯಸನಕ್ಕೆ ಬಿದ್ದು ನನಗೆ ಶೇರದೆ ೧|| ವರ್ಷದ ಹಿಂದೆ ನನಗೆ ಹೊಡದು ಉಟ್ಟ ಶೀರಿಲೆ ಹೊರಗೆ ಹಾಕಿದಿ ಮುಂದೆ ಕರಕೊಂಡು ಹೋಗಲಿಲ್ಲ ನಾನಾಗಿ ಬಂದರೆ ಇಟಗೊಳ್ಳಲಿಲ್ಲ ನೀನು ರಂಡಿ ಇಟ್ಟ ಕಾರಣ ನನ್ನ ಗತಿಯು ನಿನಗೆ ಇಲ್ಲಾ ನನ್ನ ತವರ ಮನಿಯವರು ಸಹ ಇಟಗೊಂಡು ಹೊಟ್ಟೆಗೆ ಹಾಕಲಿಲ್ಲ ಹೀಗಾದ್ದರಿಂದ ನಾನು ಈ ವರೆಗೆ ರೂಪಾಯಿ ೧೫೦ ಸಾಲಾ ಮಾಡಿ ಹೊಟ್ಟೆ ತುಂಬಿಕೊಂಡೆ ಮುಂದೆ ಸಾಲಾ ಸಿಗೋದಿಲ್ಲ ಸಾಲದ ತಗಾದಿ ಆಗಿದೆ ನೀನು ಈ ನೋಟೀಸ ಮುಟ್ಟಿದ ೮ ದಿವಸದಲ್ಲಿ ಒಂದು ನಾನು ಮಾಡಿದ ಸಾಲಾ ಮತ್ತು ನಮ್ಮ ಧರ್ಮದ ಪ್ರಕಾರ ನನಗೆ ಕೊಡೊ ಮಹಾರಿನ ಬಾ|| ರೂಪಾಯಿ ೧೨೫ ಕೊಟ್ಟು ಮತ್ತು ನನ್ನ ಇಟಗೊಂಡು ಚಂನಾಗಿ ಬಾಳ್ವೆ ಮಾಡತೇನೆಂದು ಯೋಗ್ಯ ಜಾಮೀನ ಕೊಟ್ಟು ಕರಕೊಂಡು ಹೋಗಬೇಕು ಹಾಗೆ ಮಾಡದೆ ಇದ್ದರೆ ಇದೇ ನೋಟಪತ್ರ ಅಂತ ತಿಳದು ನಾನು ಯರಡನೇದವನನ್ನು ಉಡಕಿ ಆಗತೇನೆ ನನ್ನ ಮೇಲೆ ನಿನ್ನದು ಯಾವ ಪ್ರಕಾರದ ಹಕ್ಕ ವಗೈರೆ ಉಳಿಯಲಿಕ್ಕಿಲ್ಲಾ ನನಗೆ ಬರೋ ನನ್ನ ಸಾಲದ ಬಾಬತ ಹಣ ನಿನ್ನ ಮೇಲೆ ದಿವಾಣಿಯಲ್ಲಿ ದಾವೆ ಮಾಡಿ ವಸೂಲ ಮಾಡಲಾದೀತು. ಈ ನೋಟೀಸಿನ ಖರ್ಚು ನಿನ್ನ ಮೇಲೆ ಆದೆ. ತಿಳಿಯೋದು ತಾ|| ೨೩-೬-೩೭

ಈ ಯಡಗೈ ಹೆಬ್ಬಟ್ಟಿನ ಗುರ್ತ ಜೈನಾಬಿ ಕೋಮ ಹುಶೇನಸಾಬ ಭಂಗಿ ಈಕಿ ಕೈದು ಆದೆ.

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮ | ಧಾರವಾಡ ಬುಧವಾರ ತಾರೀಖು ೨೯ ನೇ ಜೂನ ೧೯೨೭ | ಸಂಚಿಕೆ ೧೩೭

ಕಿರ್ಲೋಸ್ಕರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಆರು ನೀರಿನ ಡಬ್ಬಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯ ವ್ಯಾಸವು ೩೬ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಬಹು ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೨೯॥ ರೂಪಾಯಿ.

ಸವಿಸ್ತಾರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರಾ

ಬೆಳಗಾವಿಯ ೩॥ ಲ॥ ಬೊ॥ ಸ್ಕೂಲ ಬೋರ್ಡಿನ ಚುನಾವಣೆಯಾಯಿತು. ಈ ಮೊದಲು ಭವಿಷ್ಯ ಮಾಡಿದಂತೆ ಮಿ. ಮಮದಾಪೂರರು ಚೇರಮನ್ನರೂ, ಮಿ. ಕಾಕಟಕರಿಯವರು ಹ್ವಾಯಿಸ ಚೇರಮನ್ನರೂ ಆದರು. ಇವರಿಬ್ಬರೂ ಪೀಂಸ್ಕೈವರು.

ಬಂಗಾಲದಲ್ಲಿ ದರೋಡೆಗಾರರ ಒಂದು ಟೊಂಡೆ ಹಿಡಿದಿದ್ದಾರೆ. ಒಬ್ಬ ಸ್ತ್ರೀಯು ಇದರ ಮುಖ್ಯಸ್ಥಳಾಗಿದ್ದಾಳೆ. ಇವಳು ದರೋಡೆಗೆ ಹೋಗುವಾಗ ಪುರುಷರಂತೆ ವೇಷ ಧರಿಸುವಳು.

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ನೀಲಿ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ— ಇಂಗ್ಲಿಷ ದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಐದು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೇಕ್ಕೆ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

... ಬಂಡಗೆಯು ಐದು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ... ಲ್ಪಡುವದು. ಕಾಯಿಮುಮತ್ತು ಚೇಂಜ ಖರದ ... ಟಗಳಿಗೆ ಚನ್ನಾಗಿ ಬಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ವೆಂಕಟರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

—[೦][೦]—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೭—೦—೦ ರೂ
೪ "	೪—೦—೦ ರೂ
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೯-೬-೧೯೨೭ ನೇ ಇಸ್ವಿ

ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸ್ಕೂಲ ಕಮೀಟಿಯಲ್ಲಾದ ಫಾರ್ಸ!!

ಮೊನ್ನೆ ರವಿವಾರ ೨೬ ನೆಯ ತಾರೀಖಿನ ದಿವಸ ಜಿಲ್ಲೆಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಸ್ಕೂಲ ಕಮೀಟಿಯ ವತಿಯಿಂದ ಸುಪರವಾಯಜರನ್ನು ನೇಮಿಸುವದಕ್ಕಾಗಿ ಕಮೀಟಿ ಕೂಡಿತ್ತು. ಶ್ರೀ. ಹೊಸಮನಿಯವರು ಚೇರಮನ್ನರಾಗಿದ್ದರು. ಸಭೆಯು ಮಹತ್ವದ್ದಾಗಿದ್ದದರಿಂದ, ಡಿ॥ ಲೋ॥ ಬೋರ್ಡಿನ ಅಧ್ಯಕ್ಷರಾದ ಶ್ರೀ. ಹುಲಕೋಟಿಯವರೂ ಕಮೀಟಿಗೆ ಬಂದಿದ್ದರು.

ಕಮೀಟಿಯು ಪ್ರಾರಂಭವಾದ ಕೂಡಲೆ ಶ್ರೀ ವಿನಾಯಕರಾವ ಜೋಶಿ ಮೊದಲಾದವರು ಒಂದು ಮಹತ್ವದ ಸೂಚನೆ ಮಾಡಿದರು. ಸುಪರವಾಯಜರ ಕೆಲಸಕ್ಕೆ ಅನೇಕ ಅರ್ಜಿಗಳು ಬಂದಿವೆ ಅವುಗಳಲ್ಲಿ ಯೋಗ್ಯವಾದಂಥವುಗಳನ್ನೇ ಆರಿಸಿ, ಅವನ್ನು ಕಮೀಟಿಯ ಮುಂದಿಡಬೇಕು. ಮತ್ತು ಕೆಲವೊಂದು ಜಾತಿಯವರಿಗೇ ಹೆಚ್ಚು ಸ್ಥಳಗಳನ್ನು ಕೊಡದೆ, ಜಾತಿಯ ಪ್ರಕಾರ ಸ್ಥಳಗಳನ್ನು ಕೊಡಬೇಕೆಂದು ಸೂಚಿಸಿದರು. ಈ ಸೂಚನೆಯು ಯಾರೊಬ್ಬರಿಗೆ ಮಾನ್ಯವಾಗುವಂತಿತ್ತು. ಆದರೆ ತಮ್ಮವರಿಗೇ ಎಲ್ಲ ಕೆಲಸಗಳು ದೊರೆಯಬೇಕೆಂದು ಅಧ್ಯಕ್ಷರ ಕಾಸ್ಟಿಂಗ ವೋಟಿನಿಂದ ಬಹುಮತವುಳ್ಳಂಥ ಕಮೀಟಿಯವರು ಈ ಸೂಚನೆಯನ್ನು ಅಂಗೀಕರಿಸಲಿಲ್ಲ. ಪ್ರಥಮಗ್ರಾಸೆ ಮಕ್ಷಿಕಾಪಾತವೆಂಬಂತೆ ತಮಗಾದ ಅಶುಭ ಶಕುನವನ್ನು ನೋಡಿ, ರಾ. ಬ. ಗೋಪಾಳಗಿರಿ ಜೋಶಿ ಮೊದಲಾದ ಏಳು ಜನ ಮೆಂಬರರು ಕಮೀಟಿ ಬಿಟ್ಟು ಹೊರಬಿದ್ದು ಬಂದರು. ಅವರ ಹೆಸರುಗಳು—

೧ ರಾ. ಬ. ಗೋಪಾಳಗಿರಿ-
೨ ಶ್ರೀ ವಿನಾಯಕರಾವ ಜೋಶಿ-
೩ ಮೌ. ಫಕರುದ್ದೀನಸಾಹೇಬ-
೪ ಶ್ರೀ ಬ್ಯಾವನಗೌಡಾ ಪಾಟೀಲ
೫. ಸಾಂಬ್ರಾಣಿ (ಅಸ್ಪೃಶ್ಯ)
೬ ಶ್ರೀ ಸೌ॥ ಲಕ್ಕಂಬಾಯಿ ಕುಂಭಕೋಣ
೭ ಶ್ರೀ. ಕಲ್ಲಣ್ಣನವರ-

ಈ ಏಳು ಜನರು ಬಿಟ್ಟು ಹೋದ ಬಳಿಕ ಕಮೀಟಿಯಲ್ಲಿ ಉಳಿದ ಮೆಂಬರರು ವೀರಶೈವರು- ೧ ಹೊಸಮನಿ ೨ ಮಿ. ಹುಲೀಕೊಪ್ಪ ೩ ನೆಲವಗಿ ೪ ಮಿ. ಚನ್ನಪ್ಪಗೌಡರ ೫ ಮಿ. ಬಣಗಾರ ೬ ಬಸನಗೌಡಾ ತಳವಾರ ಮಿ. ಬೂದಿಹಾಳ. ಶ್ರೀ ಹೊಸಮನಿ ಮೊದಲಾದವರಿಗೆ ಅಳಿದ ಊರೊಳಗೆ ಉಳಿದವನೇ ಗೌಡನೆಂತಾಯಿತು. ಇವರು ತಮಗೆ ಬೇಕಾದ ಜನರ ನೇಮಣೂಕಿ ಮಾಡಿಕೊಂಡರು. ಐವರು ಲಿಂಗಾಯತರು ಒಬ್ಬನು ತಳವಾರ ಈ ಪ್ರಕಾರ ಆರು ಜನರು ಸುಪರವಾಯಜರರಾದರು. ಇವರಿಗೆ ಈಗಾಗಲೇ ಕೆಲಸದ ಮೇಲೆ ಹಾಜರಾಗಲು (ಕನ್ನಡ ಮಾಸ್ತರರಿಗೆ ಇಂಗ್ಲಿಷದಲ್ಲಿ) ಹುಕುಮು ಸಹ ಹೋದವೆಂದು ವರ್ತಮಾನವುಂಟು.

ರಾ. ಬ. ಗೋಪಾಳಗಿರಿ ಮೊದಲಾದವರು ಎಲ್ಲ ಜಾತಿಗಳಿಗೂ ಸರಿಯಾಗಿ ಅಧಿಕಾರ ದೊರೆಯಬೇಕೆಂಬ ಸೂಚನೆ ಮಾಡಿದ್ದರು. ಇವರು ಬ್ರಾಹ್ಮಣರನ್ನು ಎಷ್ಟು ಮಾತ್ರಕ್ಕೂ ಎತ್ತಿ ಹಿಡಿದಿದ್ದಿಲ್ಲ. ಇವರು ವರ್ಗೀಕರಣವನ್ನು ಕೆಳಗೆ ಕೊಟ್ಟಂತೆ ಮಾಡಿದ್ದರು.

ಬ್ರಾಹ್ಮಣ	೧
ವೀರಶೈವ	೨
ಮರಾಠಾ	೧
ಮುಸಲಮಾನ	೧
ಅಸ್ಪೃಶ್ಯ	೧

ಈ ಪ್ರಕಾರ ಎಲ್ಲ ಜಾತಿಯ ಜನರು ಸೇರುವಂತೆಯೂ ಪಕ್ಷಪಾತವೆನಿಸದಂತೆಯೂ ನೇಮಣೂಕು ಮಾಡಬೇಕೆಂದು ಇವರು ಮಾಡಿದ್ದ ಸೂಚನೆಯು ಶ್ಲಾಘನೀಯವಾಗಿತ್ತೆಂದು ಪಕ್ಷಾಭಿಮಾನಿಯ ಹೊರತು ಪ್ರತಿಯೊಬ್ಬನು ಹೇಳುವಂತಾಗಿರುತ್ತದೆ. ಆದರೆ ತಮಗೆ ಬಹುಮತ ದೊರೆದಿರುತ್ತದೆಂಬ ಅಹಂಕಾರದಿಂದ ಸ್ವಜಾತಿಯವರಿಗೇ ಸ್ಥಳಕೊಟ್ಟಿದ್ದು ನೋಡುವವರಿಗೆ ಕಣ್ಣು ಕಿಸಿರಾಯಿತು. ಟ್ರೇನಿಂಗ ಸ್ಕೂಲು ಬೇಡ, ಟ್ರೇನ್ಡ ಶಿಕ್ಷಕರು ಬೇಡ, ಕಾರಕೂನರು ಬೇಡೆಂದು ಒಂದೇ ಸವನೆ ಹಟ ಹಿಡಿದು ವಿದ್ಯಾಖಾತೆಯ ಕೂಡ ಅಸಹಕಾರ ಮಾಡುತ್ತಿರುವ ಬೋರ್ಡಿನ ಕೃತ್ಯವು ತೀರ ಅಸಹ್ಯವೆನಿಸುವಂತಾಯಿತು. ಇದು ಜಾತಿಯ ಪ್ರಶ್ನವಲ್ಲ. ಸಾರ್ವಜನಿಕ ಪ್ರಶ್ನವು. ಅಲ್ಪಸಂಖ್ಯಾಕರಿಗೂ ಸಹ ಮಾನ ಮರ್ಯಾದೆ ದೊರೆಯುವ ವಿಷಯವು. ಲಿಂಗಾಯತೇತರರು ಲಿಂಗಾಯತರನ್ನು ಆಡಿಕೊಳ್ಳುತ್ತಾರೆಂಬದಿಷ್ಟೇ ಪ್ರಶ್ನವಲ್ಲ. ಇವರು ತಮ್ಮ ಕರ್ತವ್ಯವನ್ನು ನ್ಯಾಯ ನಿಷ್ಪಕ್ಷಪಾತದಿಂದ ಮಾಡುತ್ತಾರೋ? ಅಧಿಕಾರದ ದುರುಪಯೋಗ ಮಾಡುತ್ತಾರೋ? ಎಂಬುದನ್ನು ನೋಡಲು ತ್ರಯಸ್ಥರಾದ ಯುರೋಪಿಯನ್ನರು ಕಣ್ಣೊಳಗೆ ಎಣ್ಣೀ ಹಾಕಿಕೊಂಡು ಕೂತಿದ್ದಾರೆ. ಅವರ ಮುಂದೆ ಇವರಾವ ಜವಾಬ ಕೊಡುವರು? ಆಯ್ಯಾ ಹೊಸಮನಿಯವರೇ ಇದು ಪ್ರತ್ಯಕ್ಷ ಜಾತಿಯ ಪಕ್ಷಪಾತವಲ್ಲವೇ? ವೋಟಿನ ದೆಸೆಯಿಂದ ತಳವಾರವನಿಗೆ ಒಂದು ಸ್ಥಳಕೊಟ್ಟು ತಳವಾರ ಮೆಂಬರನ ವೋಟು ಸಂಪಾದಿಸಲಿಲ್ಲವೇ? ಎಂದು ಕಲೆಕ್ಟರ ಅಥವಾ ಕಮಿಶನರಸಾಹೇಬರು ಪ್ರಶ್ನ ಮಾಡಿದರೆ- ಇವರು ಎದೆ ಮುಂದೆ ಮಾಡಿ, ಉತ್ತರ ಕೊಡುವರೇ? ಮೋರೆ ಕೆಳಗೆ ಹಾಕುವರೇ? ಎಂಬದನ್ನು ಯಾರುತಾನೆ ಸಹಜವಾಗಿ ಊಹಿಸಬಹುದು.

ಆ್ಯಡಮಿನಿಸ್ಟ್ರೇಟರರನ್ನು ನೇಮಿಸುವಾಗ ಮಾಡಿದ ಫಾರ್ಸಿನಂತೆಯೇ ಈಗಿನ ಫಾರ್ಸ ಆಗಿರುತ್ತದೆ. ಆ್ಯಡಮಿನಿಸ್ಟ್ರೇಟರರ ನೇಮಣೂಕಿಗೆ ವಿದ್ಯಾಖಾತೆಯ ಮಂತ್ರಿಯ ಮಂಜೂರಿ ಬೇಕು. ಆ ಮಂಜೂರಿ ದೊರೆಯಲಿಲ್ಲ. ಮೂಗ. ಹೋದರೂ, ಮೂಗಿನ ಹೊಳ್ಳೆ ಹೋಗಿದೇನೆನ್ನುವಂತೆ ಪುನಃ ತಮ್ಮ ಉಮೇದವಾರನನ್ನೇ ಮಂಜೂರ ಮಾಡಬೇಕೆಂದು ಮಂತ್ರಿಯವರಿಗೆ ಬರೆಕೊಂಡಿರುವರು. ಆ್ಯಡಮಿನಿಸ್ಟ್ರೇಟರ ನೇಮಣೂಕಿಯ ವಿಷಯವಾಗಿ ಕೈ ಜೋಡಿಸಿ ಅವಲಕ್ಷಣ ಮಾಡಿಕೊಂಡಿರುವ ಪ್ರಕಾರವೇ ಸುಪರವಾಯಜರ ದೆಸೆಯಿಂದಲೂ ಆಗಿರುತ್ತದೆ. ಇವರ ನೇಮಣೂಕಿಗೆ ಮಂತ್ರಿಯ ಮಂಜೂರಿಯು ಅಗತ್ಯವಿಲ್ಲ. ಇವರ ನಿರ್ಣಯವೇ ಕೊನೆಯದು. ಡಿಸ್ಟ್ರಿಕ ಲೋಕಲಬೋರ್ಡಿನ ಮಂಜೂರಿ ಬೇಕಾಗಿದ್ದರೆ- ಅದಂತೂ ತೀರ ಸುಲಭವು. ಏಕೆಂದರೆ- ಆ್ಯಡಮಿನಿಸ್ಟ್ರೇಟರ ಅಧಿಕಾರದ ಮಂಜೂರಿಯ ವಿಷಯವು ಅಜೆಂಡಾದ ಮೇಲಿಂದಿದ್ದರೂ- ಕಮೀಟಿಯ ಮುಂದೆ ಬಂದು ಪಾಸಾಯಿತು. ಅದರಂತೆ ಇದೂ ಪಾಸಾದೀತು. ತಮಗೆ ಅಧಿಕಾರವದೆಂದು ಅನೇಕ ಜಾತಿಯ ಜನರನ್ನು ಅಸಂತೋಷದಲ್ಲಿ ಹಾಕಿ ದೊರೆಕಿಸುವ ಪುರುಷಾರ್ಥವೇನು?

ಬಹುಮತದ ಬೆಂಬಲದಿಂದ ವೀರಶೈವ ಮೆಂಬರರು ತಮ್ಮ ಹಾನಿಯನ್ನು ಹೇಗೆ ಮಾಡಿಕೊಳ್ಳುತ್ತಿರುವರೆಂಬದು ಹೊರಗಿನವರಿಗೆ ತಿಳಿದಂತೆ ಸ್ವತಃ ಅವರಿಗೆ ತಿಳಿಯುವಂತೆ ತೋರುವದಿಲ್ಲ. ಬೇನೆಯು ಹೇಗುಂಟೆಂಬದು ರೋಗಿಗೂ ಅವನ ಮನೆಯವರಿಗೂ ತಿಳಿಯುವದಿಲ್ಲ. ವೈದ್ಯರಿಗೂ ನೋಡಬಂದವರಿಗೂ ಬೇಗನೆ ತಿಳಿಯುತ್ತದೆ. ಇದೇ ಪ್ರಕಾರ ವೀರಶೈವರು ಸ್ವಾರ್ಥೈಕ ಪರಾಯಣರು; ತಮ್ಮವರ ಹಿತ ಮಾತ್ರ ನೋಡುವರು. ಯಾವನೊಬ್ಬನನ್ನು ಸುಪ್ರಸನ್ನ ಮಾಡಿಕೊಳ್ಳುವದಾದರೆ- ತಮ್ಮ ಉದ್ದೇಶ ಸಾಧಿಸಿಕೊಳ್ಳುವದಕ್ಕಾಗಿರುತ್ತದೆಂದು ಲಿಂಗಾಯತೇತರರಿಗೆ ಪೂರಾ ಹೊಳೆಯುತ್ತದೆ. ಇದರಿಂದಾಗುವ ಅನಿಷ್ಟ ಪರಿಣಾಮದ ವಿಚಾರವನ್ನು

ಪೀಠಸ್ಥರ ಪ್ರಮುಖರು ಚಿಂತಾಗ್ರಸ್ತರಂತೆ ಮಾಡುವ ಹೊತ್ತು ಬಂದಿರುತ್ತದೆ.

ಶ್ರೀವಿದ್ಯಾರಣ್ಯರ ವಂಶಜರು ಈಗ ಎಲ್ಲಿದ್ದಾರೆ?

(ಲೇ:— ನಾ. ಶ್ರೀ., ರಾಜಪುರೋಹಿತ, ಧಾರವಾಡ)

ಹತ್ತನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾದ ರಾವ ಬಹಾದ್ದೂರ ಎಚ್. ಕೃಷ್ಣಶಾಸ್ತ್ರಿಗಳವರು ತಮ್ಮ ಭಾಷಣದಲ್ಲಿ ಹೇಳಿದ್ದೇನಂದರೆ, "ಹಂಪೆಯ ಕೃಷ್ಣದೇವರ ಗುಡಿಗೆ ಸಮೀಪದಲ್ಲಿ ಕಮಲಾಪುರದಿಂದ ವಿರೂಪಾಕ್ಷ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಒಂದು ನಾಲ್ಕು ಸ್ತಂಭದ ಮಂಟಪವಿದೆ. ಇದರಲ್ಲಿ ಕರೀಕಲ್ಲಿನ ಹಾಸುಗೆಯ ಮೇಲೆ ಮುತ್ತುಗಳಂತಿರುವ ಸುಂದರಾಕ್ಷರಗಳಿಂದ ಕೆತ್ತಲ್ಪಟ್ಟ ಉತ್ಕೃಷ್ಟವಾದ ಶಾಸನವೊಂದುಂಟು. ಇದು ಶೀಘ್ರದಲ್ಲಿ ಪ್ರಚುರವಾಗಲಿರುವ ದಾಕ್ಷಿಣಾತ್ಯ ಶಾಸನಗಳೆಂಬ ಸಂಪುಟದಲ್ಲಿ ಮುದ್ರಿತವಾಗುತ್ತದೆ. ಇದು ವಿಜಯನಗರ ಪ್ರಭುವಾದ ಮೊದಲನೇ ದೇವರಾಯನ ಕಾಲದ್ದು. ದೇವರಾಯನ ಮುಖ್ಯ ಮಂತ್ರಿಯಾದ ಲಕ್ಷ್ಮೀಧರ ಅಮಾತ್ಯನಿಂದ ಪೋಷಿತನಾದ ಮಧುರ ಕವಿಯು ಈ ಶಾಸನವನ್ನು ರಚಿಸಿರುವನು. ಲಕ್ಷ್ಮೀಧರನು ಮಾದರಸ-ಸಾಯಣರೆಂಬ ಮಹಾಪ್ರಧಾನರ ತಂಗಿಯಾದ ಸಿಂಗಲೆಗೂ ವಿಷ್ಣುವೃದ್ಧಗೋತ್ರದ ರಾಮರಸನಿಗೂ ಜನಿಸಿದವನು. ಈತನು "ಕನ್ನಡಿಗಕುಲಕ್ಕೆ ರನ್ನದ ಕನ್ನಡಿ"ಯೆಂದು ವರ್ಣಿಸಲ್ಪಟ್ಟಿರುವದರಿಂದ ಲಕ್ಷ್ಮೀಧರನ ಸೋದರ ಮಾವಂದಿರಾದ ಮಾಧವಸಾಯಣರೂ ಅಂದರೆ, ಮಾಧವಾಚಾರ್ಯ, ಸಾಯಣಾಚಾರ್ಯರೂ ಕನ್ನಡಿಗ ಬ್ರಾಹ್ಮಣರೇ ಆಗಿರಬೇಕೆಂಬುದು ಸಿದ್ಧವಾಗುತ್ತದೆ"

ಈಗ ಕರ್ನಾಟಕ ದೇಶದಲ್ಲಿ "ಕನ್ನಡಿಗ ಬ್ರಾಹ್ಮಣರು' ಎಂಬ ಬ್ರಾಹ್ಮಣ ಪಂಗಡದವರು ಎಲ್ಲಿರುತ್ತಾರೆಂಬುದನ್ನು ಸಂಶೋಧನ ಮಾಡುತ್ತಿರಲು, ಶಿವಮೊಗ್ಗಾ ಜಿಲ್ಹೆಯಲ್ಲಿ.

(೧) ತ್ಯಾಗರ್ತಿ (ಶಿಕಾರಿಪುರ ತಾಲೂಕ)
(೨) ಗೌಜ (,,)
(೩) ಕಣ್ಣೂರು (,,)
(೪) ಕುಪ್ಪಗಡ್ಡೆ (ಸೊರಬ ತಾಲೂಕ)
(೫) ಎಲ್ಸಿ (,,)

ಈ ಐದು ಗ್ರಾಮಗಳಲ್ಲಿ ಇರುತ್ತಾರೆಂದು ಗೊತ್ತಾಯಿತು. ಅದು ಹೇಗೆಂದರೆ, ಈ ಐದು ಗ್ರಾಮಗಳಲ್ಲಿದ್ದ ' ಬೋಧಾಯನ ಶಾಖೆಯ ಬ್ರಾಹ್ಮಣರಿಗೆ " ಪಂಚಗ್ರಾಮ ಬ್ರಾಹ್ಮಣರು ' ಎಂದು ಹೆಸರಿದೆ. ಈ ಬ್ರಾಹ್ಮಣರ ಮನೆತನಗಳಲ್ಲಿ ತಾಮ್ರಶಾಸನಗಳುಂಟು. ಅವುಗಳಲ್ಲಿ ಎರಡು ಶಾಸನಗಳು "ಶಿವಮೊಗ್ಗಾ ಜಿಲ್ಹೆಯ ಶಾಸನ ಪುಸ್ತಕದಲ್ಲಿ ಮುದ್ರಿಸಲ್ಪಟ್ಟಿವೆ. (೧) ಸೊರಬ ತಾಲೂಕ ೧೮೩ನೆಯ ತಾಮ್ರಶಾಸನ (ಕುಪ್ಪಗಡ್ಡೆಯ ತಾಮ್ರಪಟ*) (೨) ಶಿಕಾರಿಪುರ ತಾಲೂಕ ೪೫ನೆಯ ತಾಮ್ರಶಾಸನ (ಗೌಜದ ತಾಮ್ರಪಟ†) ಈ ಎರಡು ತಾಮ್ರಪಟಗಳಲ್ಲಿ ಈ ಬ್ರಾಹ್ಮಣರು ಕನ್ನಡ ಶಾಖೆಯವರೆಂದು ಹೇಳಲ್ಪಟ್ಟಿದ್ದಾರೆ. ಅರ್ಥಾತ್ ಈ ಬೋಧಾಯನ ಶಾಖೆಯು "ಕನ್ನಡಶಾಖೆ" ಯೆಂದು ಸಂಬೋಧಿಸಲ್ಪಟ್ಟಿರುವದರಿಂದ ಕನ್ನಡ ಬ್ರಾಹ್ಮಣರೆಲ್ಲರೂ ಬೋಧಾಯನ ಶಾಖೆಯವರೇ ಮಾತ್ರ ಇದ್ದಿರಬೇಕೆಂದು ವ್ಯಕ್ತವಾಗುತ್ತದೆ. ವಸ್ತುಸ್ಥಿತಿಯೂ ಹೀಗೆಯೇ ಇರುತ್ತದೆ. ಕನ್ನಡಿಗ ಬ್ರಾಹ್ಮಣರಾದ ಶ್ರೀ. ವಿದ್ಯಾರಣ್ಯರೂ ಸಾಯಣಾಚಾರ್ಯರೂ ಮತ್ತು ಲಕ್ಷ್ಮೀಧರನೂ ಬೋಧಾಯನ ಶಾಖೆಯವರೆಂಬುದು ಪ್ರಸಿದ್ಧವಾಗಿಯೇ ಇದೆ.

ಇತ್ಯರ್ಥವೇನೆಂದರೆ, ಬೋಧಾಯನ ಶಾಖೆಯವರಾದ ಈ ಪಂಚಗ್ರಾಮ ಬ್ರಾಹ್ಮಣರೇ ಕನ್ನಡಿಗ ಕುಲದ ಬ್ರಾಹ್ಮಣರೆಂಬುದು ಧಾರಾಳವಾಗಿ ವ್ಯಕ್ತವಾಗುತ್ತದೆ. ಅತ ಏವ ಇವರೇ ಶ್ರೀ ವಿದ್ಯಾರಣ್ಯರ ವಂಶಜರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಚಹದ ಮಹಿಮೆ.

—o—

ಲೇಖಕ— ಮಡಿವಾಳೇಶ್ವರಸುತ.

ಭಾಮಿನಿ॥

ಚಹದ ನಾಮವ ನೆನೆಯುತಿರುವರು ।
ಚಹದ ಮಂತ್ರವ ಜಪಿಸುತಿರುವರು ।
ಚಹದ ವರ್ಣನೆ ಹೇಳುತಿರುವರು ಕವಿಗಳೆಂದಲಿ ॥
ಚಹದ ಮನೆಯಂ ಕಟ್ಟುತಿರುವರು ।
ಚಹದ ಪಾರ್ಟಿಯ (ಪೂಜೆಯ) ಮಾಡುತಿರುವರು ॥
ಚಹವ ಮುದದಿಂ ಕುಡಿಯುತಿರುವರು ಹಗಲು ರಾತ್ರಿಯಲಿ॥

ಚಹವ ಕುಡಿಯುವ ಜನರ ಕೇಳಲು ।
ಅಹಹ! ಬಣ್ಣಿಸಿ ತತ್ವ ಪೇಳ್ವರು ।
ಕುಹಕ ತತ್ವವ ಕೇಳಿ ನನಗದು ನಗೆಯು ಬರುತಿಹುದು ॥
ಹಸಿವೆಗೋಸುಗ ಜನರು ದುಡಿವರು ।
ಹಸಿವೆ ಕಟ್ಟುವ ಕೆಟ್ಟ ಚಹದಲಿ ।
ಹಸಿಬಿಸಿಯ ತತ್ವವನು ಕೇಳುತ ದುಃಖವಾಗುವದು ॥

ಗಪ್ಪಗಪ್ಪನೆ ಭಜಿಯ ತಿನ್ನುತ ।
ಕಪ್ಪು ಬಸಿಯನ್ನು ನೆನೆಯುದಾಲೆ ।
ರೆಪ್ಪೆ ಮುಚ್ಚುತ ಸಕಲರೋಗದ ಮುಸುರಿನೀರನ್ನು ॥
ಒಪ್ಪಿನಿಂದಲಿ ಕುಡಿಯುತಿರುವರು ।
ಸಪ್ಪಳಿಲ್ಲದೆ ರೊಕ್ಕ ಕಳೆಯುತ ।
ತಪ್ಪದೀಗಲೆ ದುಷ್ಟರೋಗವ ಕೊಳ್ಳುತಿರುತಿಹರು॥
ಮುಖವು ಕಪ್ಪದು ಆಗುತಿಗುವದು ।
ಸಖನೆ! ವೀರ್ಯವು ಬಸಿದು ಪೋಪುದು ।
ಸುಖವು ಲಯವಾಗುವದು ಶಿವಶಿವ! ಚಹದ ವ್ಯಸನದಲಿ॥

ಸಕಲ ಜಗದಲಿ ಪ್ರಕಟವಾಗಿಹ ।
ವಿಕಟ ರೂಪದ ಚಹವು ಕಾಫಿಯು ।
ಅಕಟ! ಅಕಟ! ಹಾಳು ಮಾಡಿತು ನಮ್ಮ ನಾಡನ್ನು ॥

(ಶಿವಸ್ತುತಿ.)

ಪರಮ ಸುಂದರ ಪಾವನಾತ್ಮನೆ ।
ಸಿರಿಯ ಪೀತಾಂಬರನ ದೇವನೆ ।
ಸ್ಮರನ ಸುಂದರ ಪೂಗಣೆಯನಂ ನಾಶಗೈದವನೆ ॥
ಶಿರೆಯ ಪೇರ್ನೆಲೆಯಲ್ಲಿ ಧರಿಸುತಲಿ ।
ಧರಿಸಿ ಪೈಶಾಚಾದಿ ಗಣವನು ।
ಪೊರೆದ ಶಿವ ಶಿವ! ಪೋಷಿಸೆಮ್ಮನು ಪರಮ ಪೌರುಷಿಯೇ ॥

(ಕನ್ನಡ ಕಾವ್ಯ ಓದಿರಿ.)

ಹರನ ಭಕ್ತರು ಹಾಸ್ಯ ವಚನದಿ ।
ಹಿರಿಯ ಕಿರಿಯರ ಹೀನ ಮನಸಿಗೆ ।
ಹುರುಪು ಗೊಳಿಸುವ ಸರಸ ರೂಪಿನ ಮಾಲೆರಚಿಸಿಹರು ॥
ಪರರ ಭಾಷೆಯು ಹೆಸರು ಹೇಳದೆ ।
ಸಿರಿಯ ಕನ್ನಡ ಹೈನ ಸವಿಯುವ ।
ಸರಸ ಹೊತ್ತಿಗೆ ಪೋರೆ ನೋಡಿರಿ ಹಾದು ಸುಖವಹುದು ॥

ಡಾಕ್ಟರ ಭಾಂಡಾರಕರ ಮೊಮ್ಮಗಳು ಕುಮಾರಿ ಮಾಲತಿಯು ಗುಲಾಬಖಾನನ ಕೈ ಹಿಡಿದು ಮದುವೆಯಾದಳು. ಸ್ವಯಂವರ ವಿಧಿಯು ಪುಣೆಯಲ್ಲಿ ಗುಲಾಬಖಾನರ ಮನೆಯಲ್ಲಾಯಿತು. ಅಸಿಸ್ಟಂಟ ರಜಿಸ್ಟ್ರಾರರಾದ ಮಿ. ಜುಜಾರೆಟರೆಂಬವರು ಇವರ ಮನೆಗೆ ಬಂದು ವಿವಾಹ ವಿಧಿಯ ಕಾಗದ ಮೇಲೆ ವಧುವರರ ಸಹೀ ತಕ್ಕೊಂಡರು. ಜಗ್ಗೆ ಮೂವರೇ ಇದ್ದರು. ಒಬ್ಬ ಜರ್ಮನ ಲೇಡಿ, ಮತ್ತು ಇಬ್ಬರು ಮುಸಲಮಾನರು. ಇವರು ಲಗ್ನವಾದ ಬಗ್ಗೆ ಸಾಕ್ಷೀ ಹಾಕಿದರು.

ಹತ್ತಿಯ ಬೆಳೆಯು ಪ್ರತಿವರ್ಷ ಕೆಡುತ್ತಾ ನಡೆದಿದೆ. ಇದರಲ್ಲಿ ಸುಧಾರಣೆಯಾಗಬೇಕೆಂದು

ಬೆಳಗಾವಿಯ 'ಡಿಸ್ಟ್ರಿಕ್ಟ್' ಲೋಕಲಬೋರ್ಡಿನ ಅಧ್ಯಕ್ಷ ಪದದ ದೆಸೆಯಿಂದ ರಾ. ಬ. ಅಂಗಡಿ ಮತ್ತು ಶ್ರೀ. ಚಿಕ್ಕೋಡಿಯವರ ನಡುವೆ ನ್ಯಾಯ ಬಂದು, ಪ್ರಕರಣವು ಹಾಯಕೋರ್ಟಿಗೆ ಹೋಗಿ ಪ್ರಸ್ತುತ ಹಾಯಕೋರ್ಟಿನಲ್ಲಿ ಜಡ್ಜರು ರಾ. ಬ. ಅಂಗಡಿಯವರಂತೆ ತೀರ್ಪು ಹೇಳಿ, ಅವರ ಅಧ್ಯಕ್ಷ ಸ್ಥಾನವನ್ನು ಗಟ್ಟಿ ಮಾಡಿದರು.

ರಜಪೂತಾನಾದಲ್ಲಿರುವ ಕೋಟಾ ಸಂಸ್ಥಾನದಲ್ಲಿ ಭಯಂಕರ ಬರಬಿದ್ದದೆ, ರೈತರು ಹೆಂಡರ ಮಕ್ಕಳ ಮೈಮೇಲಿನ ಚಿಲ್ಲರ ಒಡಿವೆಗಳನ್ನು ಮಾರಿ, ಹಸ್ತಿಕೊಟ್ಟು, ಹೊಲಮನೆಬಿಟ್ಟು, ಗ್ರಾಮಾಂತರ, ದೇಶಾಂತರ ಮಾಡುತ್ತಿದ್ದಾರೆ.

ಅಹಮದಾಬಾದಿನಲ್ಲಿ ಸುರಿಯುವ ಮಳೆಯಲ್ಲಿಯೇ ಅರಳೆಯ ಪೇಲುಗಳಿಗೆ ಬೆಂಕಿ ಹತ್ತಿ, ೬೦ ಸಾವಿರ ಹಾನಿಯಾಯಿತು.

ಜಾಹೀರ ಬಹಿಷ್ಕಾರ ಪತ್ರ

—೦—

ಸಮಸ್ತ ನಮ್ಮ ಬಾಂಧವರಾದ ಗಂಗಿ ಮತದ ಕಬ್ಬೇರ ಜಾತಿ ಜನರಿಗೆ

ಕೆಳಗೆ ಸಹಿ ಮಾಡಿದ ಬಂಕಾಪೂರ ಬಾವೀಸ ಮಹಾಲ ಅಧಿಕಾರಸ್ಥರಿಂದ ಅಧಿಕಾರ ಪಡಕೊಂಡ ಕಟ್ಟಿಮನಿ ರಾಮಣ್ಣಾ ಕಬ್ಬೇರ ಸಾಕೀನ ಶಿಂಗಾಂವ ತಾಲೂಕು ಹಾನಗಲ್ಲ ನಾನು ಈ ಜಾಹೀರ ಮೂಲಕ ಕೆಳಗಿನ ಮಕ್ತಾನದ ಜನರಿಗೆ ಬಹಿಷ್ಕಾರ ಕೊಡುವದೇನೆಂದರೆ-

ಹಾನಗಲ್ಲ ದೇವಾಂಗ ಜಾತಿಯ ಚಕ್ರವ್ವಾ ಅನ್ನುವಾಕೆ ೧೯-೨೦ ವರುಷದ ಹಿಂದೆ ಮುಸಲಮಾನರವನ ವಶ ಕೊಡಲ್ಪಟ್ಟ ಕುಲ ಕಟ್ಟಿದ್ದರಿಂದಾ ಮುಂದೆ ಮಣ್ಣಿಗೆ ಆಸರಾ ಮಾಡೋದಕ್ಕೆ ಹಾನಗಲ್ಲ ಮುಸಲಮಾನರು ಹಜರತಸಾಬ ಅಲಿಯವರ ಮನ್ಯಾಗೆ ಆಗುತ್ತಿರುವ ಮಂದು ಕಾರಣದ ದಿವಸಾ ಚಕ್ರವ್ವನನ್ನು ಮುಸಲಮಾನರ ದರಮುದಲ್ಲಿ ಕೂಡಿಸಿಕೊಂಡು ಕುಲಸುಂಬ ಅನ್ನೋ ಹೆಸರು ಇಟ್ಟಿರುತ್ತಾರೆ ಅನಂತರಾ ನಮ್ಮ ಜಾತಿ ಬಾಂಧವನಾದ ಹಾನಗಲ್ಲ ಗುಡ್ಡಪ್ಪಾ ಬಿನ್ನ ನಿಂಗಪ್ಪಾ ಕಬ್ಬೇರ ಅನ್ನುವವನು ಜೇಲಿನಿಂದಾ ಸಿಕ್ಷಾ ಅನುಭೋಗಿಸಿ ಬಂದ ಬಳಿಕ ಚಕ್ರವ್ವನನ್ನು ಕೂಡಿಕೊಂಡು ಪರಕೇರ ಮನ್ಯಾಗೆ ಆ ಕೊಡಲ್ಪಟ್ಟ ವ್ಯವಹಾರ ಮಾಡಿಕೋತಾ ೭ ೮ ವರುಷದ ಬಂಗಾಯ್ತು ಇರೋದರಾಗ

೧ ಮಯಿಲಾರೆಪ್ಪಾ ಬಿನ್ನ ನಿಂಗಪ್ಪಾ ಕಬ್ಬೇರ ಸಾ. ಹಾನಗಲ್ಲ.

೨ ಫಕೀರಾ ತಾಯಿ ಯಲ್ಲವ್ವಾ ಹುಲಮನಿ ಸಾಕೀನ ಹಾನಗಲ್ಲ

೩ ಹನಮಣ್ಣಾ ಕಬ್ಬೇರ ಸಾಕೀನ ಸಿಂಗಾಪೂರ ತಾಲೂಕ ಹಾನಗಲ್ಲ

ಈ ಪ್ರಕಾರ ಮೂರು ಜನರು ಕೂಡಿ ಒಂದು ತಿಂಗಳ ಹಿಂದ ಕಟ್ಟಿಮನಿ ಅಧಿಕಾರ ಇಲ್ಲದೆ ಉಭಯತರನ್ನು ಸುಧ್ಧಾಚಾರ ಮಾಡಿ ಉಭಯತರ ಕೂಡ ಬಳಕಿ ಬೋಜನಾ ಮಾಡುವದನ್ನು ನೋಡಿ ಹಾನಗಲ್ಲ ಗ್ರಾಮದ ಬಾಕಿ ಉಳಿದಿರುವ ನಮ್ಮ ಜಾತಿ ಬಾಂಧವರು ಮೇಲೆ ನಮೂದಿಸಿದವರ ಕೂಡ ಬಳಕಿ ಬೋಜನ ಬಿಟ್ಟು ಕಟ್ಟಿಮನಿಗೆ ವರದಿ ಕೊಟ್ಟದ್ದರಿಂದ ನಾನು ಮುದ್ದಾಮು ಹೋಗಿ ವಿಚಾರಿಸಿ ವಹಿವಾಟ ಮಾಡುವವನ್ನು ಖಾತರಿಯಿಂದಾ ಬಹಿಷ್ಕಾರ ಪತ್ರ ಛಾಪಿಸಿಕೊಟ್ಟಿರುತ್ತೇನೆ

ಇದರಂತೆ ಛಾಪಿಸಿದ ನನ್ನ ಸಹಿನಿಸಿ ಸುದ್ದಬಾರ ಪತ್ರಾ ನಮ್ಮ ಜಾತಿ ಬಾಂಧವರಿಗೆ ತಿಳಸೊವರಿಗೆ ಮೇಲಿನ ಮೂರು ವ್ಯಕ್ತಿನಸ್ಥ ಜನರ ಕೂಡ ಹಾಗು ಇವರ ಕೂಡ ಸಂಪರ್ಕ ಮಾಡುವ ಜನರ ಕೂಡಾ ಸಹಾ ಜಾತಿ ಬಾಂಧವರು ಬಳಕಿ ಭೋಜನ ಬೆಂಕಿ ನೀರು ವಗೈರೆ ವ್ಯವಹಾರ ಯಾರು ಮಾಡಬಾರದು ಅಂತ ಕೊಟ್ಟ ಬಹಿಷ್ಕಾರ ಪತ್ರ ತಾರೀಖು ೨೭-೬-೨೭

ಸಹಿ ರಾಮಣ್ಣಾ ಕಟ್ಟಿಮನಿ ಸಾಕೀನ ಶಿಂಗಾಂವ ತಾಲೂಕ ಹಾನಗಲ್ಲ

ಖಾತರಿ ಮಾಡಿರಿ. ಮಾರಕಾ ಬೇನೆಗೆ ಆಲಸ್ಯವು ಅನರ್ಥಕ್ಕೆ ಕಾರಣವು.

ಅತ್ಯಂತ ಖಾತ್ರಿಯಾದ ಗುಳಿಗೆ ೧೦೦ ಕ್ಕೆ ೩ ರೂಪಾಯಿ.

೨—೩ ಗುಳಿಗೆ ಸೇವಿಸಿ ಒಂದು ಪ್ರಾಣ ಉಳಿಗುಂದು

ಇದೇ ತಿಂಗಳಲ್ಲಿ ಸಹಸ್ರಾವಧಿ ರೋಗಿಗಳು ಈ ಗುಳಿಗೆ ಸೇವಿಸಿ ಬದುಕಿದರು!

ಅಸಂಖ್ಯ ಕುಟುಂಬಗಳು ದಿನಾಲು ಒಂದೊಂದು ಗುಳಿಗೆ ಸೇವಿಸುತ್ತ ಹೋದರೆ ರೋಗಕ್ಕೆ ಹೆದರದೆ ಸುರಕ್ಷಿತವಾಗಿರುವರು.

ಬೇಗ ಸಂಗ್ರಹಿಸಿರಿ

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ. ಕಿತ್ತೂರ, ಜಿಲ್ಹಾ ಬೆಳಗಾವ.

ನೋಟೀಸು

—೦—

ಶೀತಾ ಕೋಂ ಫಕೀರಪ್ಪಾ ದೊಡ್ಡಮನಿ ಸಾ. ಹುಣಶಿಕಟ್ಟಿ ಇವಳಿಗೆ

ಕೆಳಗೆ ಸಹಿ ಮಾಡಿದವರ ಕಡೆಯಿಂದಾ ನೋಟೀಸು ಕೊಡೋದೇನಂದರೆ ನೀನು ಕೊಟ್ಟ ನೋಟೀಸು ಮುಟ್ಟಿತು ನೀನು ನಿನ್ನ ಮಾವನ ಬಿಡಾ ವಣಿಯಿಂದಾ ಸುಳ್ಳು ... ದಾ ಕೊಟ್ಟಿರುತ್ತಿದ ನೀನು ನನ್ನನ್ನು ಮಾತುಕೊಂಡ ಬಾಗಾಯ್ತ ಸುತ್ತಿತ ಬಾಳ್ವೆ ಮಾಡಿಕೋತಾ ಇದ್ದು ನನ್ನ ಊಂದಾ ಯುಗಾದಿ ಹಬ್ಬಕ್ಕೆ ಹೋದವಳು ಈ ... ವನ ತೆಗೆದಾವಿ ನಾನು ಯರಡ ಮೂರು ಸಲ ಕರಿಯಲಿಕ್ಕ ಒಂದೆ ನೀನು ಇವತ್ತ ನಾಳ ಬರತೇನೆ ಅಂತಾ ಹೇಳಿದಿ ಈಗ ನೀನು ನನಗೆ ಸುಳ್ಳ ನೋಟೀಸು ಕೊಟ್ಟಿರತೀದಿ ನೀನು ನಮ್ಮ ಮನೆಯಿಂದ ಹೋಗುವಾಗ್ಯೆ ನಿನ್ನ ಮೇಲೆ ಇದ್ದ ದಾಗೀನೆಗಳು

ಬಂಗಾರ ಬಳೆ ಎರಡು ತೊಲೆ ೬	೧೨೪ ರೂ
ಬೆಳ್ಳಿ ತೋಳಬಂದಿ ತೊಲಿ ೨೪	೨೦
ಗುಂಡಿನ ಟಿಕ್ಕಿ ಬಂಗಾರದ್ದು ತೊ.೧॥	೩೦
ಸರಾ ಒಂದು ಅಚಮಾಸ ತೊಲಿ ೧॥	೩೦
ಮೂಗತಿ ಒಂದು	೮
ಉಡಿಕೆ ಶಿರಿ ಒಂದು	೨೪
	೨೩೬

ಈ ಪ್ರಕಾರ ದಾಗಿನೆಗಳು ತಗೊಂಡು ಈ ನೋಟೀಸು ಮುಟ್ಟಿದ (೮) ದಿವಸದಲ್ಲಿ ಬರದು ಬಾಳ್ವೆ ಮಾಡಬೇಕು ಇಲ್ಲದಿದ್ದರೆ ಮೇಲ್ಕಾಣಿಸಿದ ನನ್ನ ದಾಗೀನೆ ಮತ್ತು ನಾನು ಕೊಟ್ಟ ತೆರದನ (೩೫೦) ಅಂತು ೫೮೬ ರೂಪಾಯಿ ಕೊಟ್ಟು ನನ್ನ ಕಡಿಂದಾ ಸೋಡಚೀಟಿ ತಗೋಬೇಕು ಇದರ ಶಿವಾಯ ನೀನು ಯಾರದನೇ ಉಡ್ಕಿ ವಗೈರೆ ಮಾಡಿಕೊಂಡರೆ ನಿನ್ನ ಮೇಲೂ ನಿನ್ನ ಮಾಡಿಕೊಂಡವನ ಮೇಲೂ ರೀತಿ ಪ್ರಕಾರ ಇಲಾಜ ಮಾಡಲಾದೀತು ಈ ನೋಟೀಸಿನ ಖರ್ಚು ನಿನ್ನ ತಲಿಯ ಮೇಲೆ ಅದೆ ತಿಳಿಯೋದು ತಾ. ೨೮-೬-೨೭

ಈ ಎಡಗೈ ಹೆಬ್ಬೆರಳಿನ ಗುರ್ತ ಫಕ್ಕೀರಪ್ಪಾ ಭೀಮಪ್ಪಾ ರಾಮನಾಳ ಈತಾ ಮಾಡಿದ್ದು ಇರುತ್ತದೆ.

ಈ ಪತ್ರಿಕೆಯನ್ನು ಅಣ್ಣಾಜಿ ಬಲವಂತರಾವ್ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೮] ಧಾರವಾಡ ಗುರುವಾರ ತಾರೀಖು ೩೦ ನೇ ಜೂನ ೧೯೨೭ [ಸಂಚಿಕೆ ೧೩೮

ಕಿರ್ಲೋಸ್ಕರರ ನೀರಿನ ಗಾಡಿಗಳು.

ಈ ಗಾಡಿಯು ಕಬ್ಬಿಣದು. ಇದಕ್ಕೆ ಎರಡು ದೊಡ್ಡ ಗಾಲಿಗಳಿದ್ದು ಅದು ನೀರಿನ ಪಿಪ್ಪಿಗಳನ್ನು ಹಿಡಿಸುವಷ್ಟು ಕಬ್ಬಿಣ ತಗಡಿನ ಗಾಡಿ ಇರುವದು. ಕಬ್ಬಿಣ ಎರಡು ಈಸುಗಳುಂಟು. ಗಾಲಿಯ ವ್ಯಾಸವು ೨೭ ಇಂಚು ಇರುತ್ತದೆ. ಆದ್ದರಿಂದ ಬಾರಿಗೆ ೨೪ ಗ್ಯಾಲನ್ ನೀರಿನ ಭಾರವನ್ನು ಒಬ್ಬ ಹಗುರಾಗಿ ತರುತ್ತದೆ. ಸದ್ಯಕ್ಕೆ ನೀರಿನ ಕೊರತೆಯು ಎಲ್ಲ ಕಡೆಗೂ ಉಂಟು. ಆದ್ದರಿಂದ ದೂರದಿಂದ ನೀರು ತರತಕ್ಕವರಿಗೆ ಈ ನಮ್ಮ ಗಾಡಿಯು ಬಹಳೇ ಉಪಯೋಗಕ್ಕೆ ಬರುವದು. ಬೆಲೆಯೊಂದಕ್ಕೆ ೬೯॥ ರೂಪಾಯಿ.

ಸವಿಸ್ತರ ಸಂಗತಿ ಬಗ್ಗೆ ಸದ್ಯಕ್ಕೆ ಧಾರವಾಡ ತಾಲೂಕಿನಲ್ಲಿ ತಿರುಗುತ್ತಿರುವ ನಮ್ಮ ಪ್ರತಿನಿಧಿಗಳಾದ ಶ್ರೀಯುತ ಬಾಗಲ ಇವರನ್ನಾಗಲೀ ಅಥವಾ ಕಾರಖಾನೆಗೆ ಕಾಗದವನ್ನು ಬರೆದಾಗಲೀ ತಿಳಿದುಕೊಳ್ಳಬಹುದು.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇರ ಬಂಡವಲವು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯಲ್ಪಡುವದು. ಕರೆಂಟ ಮತ್ತು ಠೇವಿ ತರದ ಠೇವಣಿದಾರರಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಎಮ್ಮ. ವಿ. ಜಕಾತಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಶಿ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ

ಬ್ರಹ್ಮಚಾರಿ ಮತ್ತು ಮದಿವೆಯ ಮೇಲೆ ಕರ ಕೊಡಿಸುವರೆಂದು ಸಂಯುಕ್ತ ಪ್ರಾಂತದಲ್ಲಿ ಸುದ್ದಿಯಾಗಿತ್ತು. ಇದು ಸುಳ್ಳೆಂದು ಸರಕಾರದಿಂದ ಉತ್ತರ ಕೊಡಲ್ಪಟ್ಟದೆ.

ಅಲಹಾಬಾದ ತೆಗೆದು ಲಖನೌ ಪಟ್ಟಣವನ್ನು ಸಂಯುಕ್ತ ಪ್ರಾಂತದ ರಾಜಧಾನಿ ಮಾಡಬೇಕೆಂಬುದಾಗಿ ಸರಕಾರದ ವಿಚಾರದ ವಿರುದ್ಧವಾಗಿ ಲಕ್ಷಾವಧಿ ಸಹಿಗಳ ಒಂದು ಅರ್ಜಿಯನ್ನು ಲಾರ್ಡ ಅಯರ್ವಿನಸಾಹೇಬರ ಕಡಿಗೆ ಕಳಿಸುವ ವಿಚಾರವು ನಡೆದಿದೆ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಪತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ನಡೆಸಿರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ರೇಲ್ವೆ ಬ್ಯಾಂಕ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರು ಆಣೆ— ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕಬೇಕಾದಲ್ಲಿ ಆರು ಆಣೆ ದೊಡ್ಡ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರು.
೬ ,,	೭—೦—೦ ರು.
೩ ,,	೪—೦—೦ ರು.
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರು.

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ ಧಾರವಾಡ

ವಿಜಯ.

ಧಾರವಾಡ ತಾ-೩೦-೬-೩೭ ನೇ ಇಸ್ವಿ

ಲೋಕಲಬೋರ್ಡಿನ ಸ್ಕೂಲ ಕಮೀಟಿ. ಮಣ್ಣಿನ ಗೋಡೆ ತೊಳೆದಂತೆ ರಾಡಿಯೇ!!

ನಿನ್ನಿನ ಸಂಚಿಕೆಯಲ್ಲಿ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಸ್ಕೂಲ ಕಮೀಟಿಯ ವಿಷಯವನ್ನು ಕೆಲವಟ್ಟಿಗೆ ಬರೆಯುತ್ತೇವೆ. ಇದೇ ವಿಷಯವಾಗಿ 'ನಾಡದ ಶಿಕ್ಷಣ ಮತ್ತು ಚರ್ಚೆಯಿಂದ ಸ್ಕೂಲ ಕಮೀಟಿಯ ಕೃತ್ಯವು ಗೋಡೆ ತೊಳೆದಂತೆ ರಾಡಿಯೇ' ಎಂದು ಹೇಳುವಂತಾಗುತ್ತದೆ. ಗಚ್ಚಿನ ಗೋಡೆ, ಮೇಲೆ ಶಿಳಿಗಚ್ಚು ಮಾಡಿದ್ದು ರಾಡಿಯಲ್ಲಿಂದ ಬರುವದೆಂದು ಪುರಾತನದ ಗಾದೆಯು ಮಾತಿಗೆ ಅಪವಾದ ಕೆಲಸಂಥ ಮಹಾ ಮೂರ್ಖರೂ ಹೊರಡುವರು. ಆದ್ದರಿಂದ ಮಣ್ಣಿನ ಗೋಡೆ ತೊಳೆದಂತೆ ರಾಡಿಯೇ ಎಂದು ಸ್ಪಷ್ಟೀಕರಣಕ್ಕಾಗಿ ಹೇಳಿದ್ದೇವೆ.

ಸ್ಕೂಲ ಕಮೀಟಿಯಲ್ಲಿ ಒಟ್ಟು ೧೨ ಜನ ಮೆಂಬರಿದ್ದಾರೆ. ಇವರಲ್ಲಿ ಎಂಟು ಜನರು ಶ್ರೀ ಹೊಸಮನಿಯವರ ಪಕ್ಷಕ್ಕೂ, ಎಳು ಜನರು ಸರ್ವೇಜನಾ ಸುಖಿನೋ ಭವಂತು ಎಂಬ ಪಕ್ಷಕ್ಕೂ ಸೇರಿದವರಿದ್ದಾರೆ. ಶ್ರೀ ಹೊಸಮನಿಯವರ ಪಕ್ಷದಲ್ಲಿ ಆರು ಜನರು ಲಿಂಗಾಯಿತರು, ಒಬ್ಬರು ತಳವಾರರು ಇದ್ದದ್ದನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ ಇನ್ನೊಬ್ಬರು ನವಲಗುಂದ ಖಾನಸಾಹೇಬ ಖುದಾವಂದರು. ಇವರು ಹಿಂದಕ್ಕೆ ಡ್ಯಾಮಿನಿಸ್ಟ್ರೇಟರರ ನೇಮಣೂಕಿಯ ವಿಷಯದಲ್ಲಿಯೂ ಶ್ರೀ ಹೊಸಮನಿಯವರ ಬೆನ್ನು ಬಿಡಲಿಲ್ಲ. ಇವರಂತೆ ತಳವಾರ ಮೆಂಬರರೂ ಬಿಡಲಿಲ್ಲ. ಇವರಿಬ್ಬರು ಈಗಲೂ ಶ್ರೀ ಹೊಸಮನಿಯವರಿಗೇ ಅಂಟಿಕೊಂಡಿದ್ದಾರೆ. ಈ ಪ್ರಕಾರ ಇವರು ಸಾರಾಸಾರ ವಿಚಾರವಿಲ್ಲದೆ, ಒಂದೇ ಇಂಗಿತದವರಾದ್ದರಿಂದ ಸುಪರವಾಯಜರ ಮತ್ತು ಕಾರಕೂನರ ಚುನಾವಣಿಯಲ್ಲಿ ಆಕ್ಷಮ್ಯವಾದ ಅನ್ಯಾಯವಾಗಲು ಕಾರಣವಾಗಿರುತ್ತದೆ. ಆರು ಜನ ಲಿಂಗಾಯಿತ ಮೆಂಬರರ ದೆಸೆಯಿಂದ ಆರು ಜನ ಲಿಂಗಾಯತರು ಒಬ್ಬ ತಳವಾರ ಮತ್ತು ಒಬ್ಬ ಮುಸಲಮಾನ ಗೃಹಸ್ಥರ ದೆಸೆಯಿಂದ ಒಬ್ಬ ತಳವಾರ ಮತ್ತು ಒಬ್ಬ ಮುಸಲಮಾನ ಈ ಪ್ರಕಾರ ಬೋರ್ಡಿನ ನೇಮಣೂಕಾಗಿರುತ್ತದೆಂದು ಸ್ಪಷ್ಟವಾಗಿ ಹೇಳುವಂತಾಗಿರುತ್ತದೆ. ಮೊದಲು ನೇಮಣೂಕಿಗಳನ್ನು ನೋಡುವಾ-

ಸುಪರವಾಯಜರರು.

೧ ಕರಣಿ
೨ ಮುದಕವ್ವಿ
೩ ಮರಡೂರ
೪ ಸಿ. ಜಿ. ಕುಲಕರ್ಣಿ
೫ ಬಿ. ಡಿ. ಬೂದಿಹಾಳ
೬ ಎಫ. ವಾಯ ತಳವಾರ

ಈ ಆರು ಜನರನ್ನು ಆರ್ತ ನೆಯ ತಾರೀಖಿನ ಕಮೀಟಿಯಲ್ಲಿ ನೇಮಿಸಿಕೊಂಡರು. ಈ ಮೊದಲು ಮಿ ಪಾಟೀಲ ಮತ್ತು ಮಿ [illegible] ಆಕ್ಟಿಂಗ ನೇಮಿಸಿಕೊಂಡಿದ್ದರು. ಇವರನ್ನು ಕಾಯಮ ಮಾಡುವ ಶಿಫಾರಸು ಮಾಡಿದರು.

ಕಾರಕೂನರು

೧ ಹುಲಕಿಮಠ
೨ ಆವರಿ
೩ ಶಿವಯ್ಯನಮಠ
೪ ಕುರಹಟ್ಟಿ
೫ ಬೂದಿಹಾಳ
೬ ದಲಾಯತ

ಸುಪರವಾಯಜರರಲ್ಲಿ ಆರು ಜನ ಲಿಂಗಾಯಿತರಿದ್ದಾರೆ. ಶ್ರೀ ಹೊಸಮನಿಯವರ ಪಕ್ಷದ ಬೋರ್ಡಿನಲ್ಲಿ ಆರು ಜನ ಲಿಂಗಾಯಿತ ಮೆಂಬರಿದ್ದಾರೆ. ಒಬ್ಬ ಲಿಂಗಾಯಿತನಿಗಾಗಿ ಒಬ್ಬ ಲಿಂಗಾಯಿತನಂತೆ ಆರು ಜನರನ್ನು ಉಳಿದ ಇಬ್ಬರ ದೆಸೆಯಿಂದ ಅವರವರ ಜಾತಿಯವರನ್ನೂ ನೇಮಿಸಿಕೊಂಡಂತೆ ಕಂಡುಬರುತ್ತದೆ. ಅಂಗೈ ಹುಣ್ಣು ನೋಡಲಿಕ್ಕೆ ಕನ್ನಡಿ ಬೇಡ.

ಕಾರಕೂನರಲ್ಲಿ ನಾಲ್ವರು ಲಿಂಗಾಯಿತರೂ ಒಬ್ಬ ತಳವಾರ ಮತ್ತು ಒಬ್ಬ ಮುಸಲಮಾನರು ಇರು. ತಳವಾರ ಮತ್ತು ಮುಸಲಮಾನ ಮೆಂಬರರನ್ನು ಸುಪ್ರಸನ್ನ ಮಾಡಿಕೊಳ್ಳುವದಕ್ಕಾಗಿ ಅವರ ಮುಂದೆ ರೊಟ್ಟಿಯ ಒಂದೊಂದು ತುಣುಕನ್ನು ಚಲ್ಲಿ ರೊಟ್ಟಿಯ ದೊಡ್ಡ ಭಾಗವನ್ನು ಇವರು ತಮ್ಮ ಜನರಿಗಾಗಿ ತಕ್ಕೊಂಡರೆಂದು ಕಾನಾಗಿ ಕಾಣಿಸುತ್ತದೆ. ಇದರಲ್ಲಿ ಚಮತ್ಕಾರವೇನಂದರೆ- ಮಿ. ಬೂದಿಹಾಳ ರೆಂಬುವರು ತಳವಾರ ಮೆಂಬರರ ಚಿರಂಜೀವರು. ಇವರು ಯಾವ ಪರೀಕ್ಷೆ ಪಾಸಾಗಿಲ್ಲ. ಆದರೂ ಅಪ್ಪನ ಮುಲಾಜಿಗಾಗಿ ಮಗನಿಗೆ ಕೆಲಸ ದೊರೆಯಿತು. ಮಿ. ಬೂದಿಹಾಳ ಮೆಂಬರರು ಗಾಳಿ ಬಂದಾಗ ತೂರಿಕೊಳ್ಳದೆ, ಇನ್ನಾವಾಗ ತೂರಿಕೊಳ್ಳಬೇಕು?

ನೇಮಣೂಕಿಯ ನೋಜಿಗವನ್ನಂತೂ ಬಣ್ಣಿಸಲಳವಲ್ಲ. ೨೬ ನೇ ತಾರೀಖು ಮಧ್ಯಾಹ್ನದ ತನಕ ಬಂದ ಅರ್ಜಿಗಳನ್ನು ತಕ್ಕೊಳ್ಳಬೇಕೆಂದು ಗೊತ್ತಾದದ್ದು. ೫೫೦ ರ ತನಕ ಅರ್ಜಿಗಳು ಬಂದಿದ್ದವು. ಇವುಗಳಲ್ಲಿ ಜಾತಿ, ಹಿಂದುಳಿದ ವರ್ಗ, ಶಿಕ್ಷಣ, ಅನುಭವ ಮುಂತಾದವುಗಳ ವಿಚಾರ ಮಾಡಬೇಕೆಂದು ಒಂದು ಪಕ್ಷದವರು ಸೂಚನೆ ಮಾಡಿದ್ದು ಸಮಂಜಸವೂ ಯೋಗ್ಯವೂ ಆಗುತ್ತದೆ. ಎಲ್ಲಾ ದರೂ ಇದೇ ಪದ್ಧತಿಯುಂಟು. ಬಹಳ ಅರ್ಜಿಗಳು ಬಂದರೆ- ಒಂದು ಸಬ್ ಕಮೀಟಿ ನೇಮಿಸುವರು. ಅವರ ಅರ್ಜಿಗಳ [illegible] ಮಾಡುವರು. ಈ ಪ್ರಕಾರ ಆರಿಸಿದ ಅರ್ಜಿಗಳಲ್ಲಿ ತಮಗೆ ಬೇಕಾದವರನ್ನು ನೇಮಿಸಿಕೊಳ್ಳುವರು. [illegible] ಬಹಳ [illegible]. [illegible] ಸರಕಾರ [illegible] ಚೇರ [illegible] ಅರ್ಜಿಗಳ ಪರಿಶೋಧನೆ ಮಾಡಲು ಒಂದು ಕಮೀಟಿ ನೇಮಿಸಿದ್ದರು. ಆ ಪ್ರಕಾರ ಸ್ಕೂಲ [illegible] ಸಬ ಕಮೀಟಿ ನೇಮಿಸಬೇಕಾಗಿತ್ತು. ಹೀಗಂತೂ ಮಾಡಲೇ ಇಲ್ಲ. ಯಾರಿಗೆ ಕೆಲಸ ಕೊಡಬೇಕೆಂದು ಮೊದಲೇ ನಿಶ್ಚಯ ಮಾಡಿಕೊಂಡಿದ್ದರು. ಅವರ ಹೆಸರುಗಳನ್ನು [illegible] ಕಮೀಟಿಯಲ್ಲಿ ಹಿಡಿದರು. ಈ ಪ್ರಕಾರ [illegible] ಕೊಂಡು ತಮ್ಮ [illegible] ಅರ್ಜಿ [illegible] ಮೆಂಬರ ಮುಂದೆ ಉಳಿದ ಅಲ್ಪ [illegible] ಕರು ಕೂತು ಮಾಡುವದೇನೆಂದು ಒಗೆದು, [illegible] ನಿಷೇಧವನ್ನು ವ್ಯಕ್ತಪಡಿಸಿ ಕಮೀಟಿಗೆ [illegible] ಬಂದದ್ದು ಎಷ್ಟು ಅನ್ಯವಾಯವಾಯಿತು ಅಥವಾ ಆಶ್ಚರ್ಯವಲ್ಲ.

ಅರ್ಜದಾರರಲ್ಲಿ ಬಿ. ಎ. ಇದ್ದಾರೆ. ಇಂಟರ ಮತ್ತು ಪಿ. ಈ. ಪಾಸಾದವರಿದ್ದಾರೆ. ಶಿಕ್ಷಣದಲ್ಲಿ ಅನುಭವಗೊಂಡು ಸುಶಿಕ್ಷಿತರಿದ್ದಾರೆ. ಇಂಥವರಲ್ಲಿದ್ದ ಬ್ರಾಹ್ಮಣರನ್ನು ಹೊರಕ್ಕೆ ಹಾಕಿ, ಬ್ರಾಹ್ಮಣೇತರರನ್ನೇ ಆರಿಸಿಕೊಳ್ಳಬೇಕಾಗಿದ್ದರೂ, ಅನೇಕ ಜನರು ಹೊರಡುತ್ತಿದ್ದರು, ಇವರಲ್ಲಿ ಒಬ್ಬರನ್ನಾದರೂ ಆರಿಸದೆ ಇದ್ದದ್ದು ಅತ್ಯಂತವಾಗಿ ವಿಷಾದದ ಸಂಗತಿಯು. ಹೆಸರು ಬ್ರಾಹ್ಮಣೇತರ! ಆರಿಸುವದು ಸ್ವಜನವೆಂಬ ಕೃತಿಯು ವಿಹಿತಾವಿಹಿತ ವಿಚಾರವುಳ್ಳಂಥ ವೀರಶೈವರಿಗೇ ನಿಂದ್ಯವೆನಿಸದಿರಲಾರದು. ಇವರಲ್ಲಿ ಸುಶಿಕ್ಷಿತ ಲಿಂಗಾಯಿತರೂ ರಡ್ಡಿ ಮೊದಲಾದವರೂ ಇಲ್ಲೆಂದು ಹೇಳಲಿಕ್ಕಾಗುವದೇ? ಬೋರ್ಡಿನಲ್ಲಿ ಲಿಂಗಾಯಿತ ಮಹಾಧಿಕ್ಯವಿದ್ದರೂ, ಲಿಂಗಾಯಿತರಲ್ಲಿ ಉತ್ತಮರೆಂಬವರನ್ನು ಆರಿಸದೆ, ತಮಗೆ ಬೇಕಾದವರನ್ನೇ ಆರಿಸಿದರೆಂದು ಈ ಕೃತ್ಯದಿಂದ ಧ್ವನಿತವಾಗುತ್ತದೆ.

ಮತ್ತು ಇಂಥ ಕೃತ್ಯವನ್ನು ವಿವೇಕಶಾಲಿಗಳಾದಂಥ ಲಿಂಗಾಯತರೇ ಮೊದಲು ಅತ್ಯಂತ ತೀವ್ರ ಶಬ್ದಗಳಿಂದ ನಿಷೇಧಿಸಬೇಕಾಗಿದೆ.

ಬೋರ್ಡಿನ ಪ್ರತಿ ಪಕ್ಷದಲ್ಲಿ ಏಳು ಜನ ಮೆಂಬರರಿದ್ದು ಅವರ ಹಿತಸಂಬಂಧವು ಮುಂದೆ ಕೊಟ್ಟಿರುತ್ತದೆ.

೧ ರಾ. ಬ. ಗೋಪಾಳಗಿರಿ, ಬ್ರಾಹ್ಮಣೇತರ

೨ ಶ್ರೀ ಜೋಶಿ, ವಿದ್ಯಾಖಾತೆಯಲ್ಲಿ ಅನುಭವ [illegible]

೩ ಶ್ರೀ. [illegible] ಪಾಟೀಲ, ಹಿಂದುಳಿದವರ [illegible]

೪ ಮಿ. [illegible], ಮುಸಲಮಾನ

೫ ಶ್ರೀ [illegible]

೬ ಶ್ರೀ. [illegible], [illegible]

೭ ಶ್ರೀ [illegible] ಬಾಯಿ, ಸ್ತ್ರೀಯರ ಹಿ[illegible]

ಇವರು ಜಾತಿಯ ಪಕ್ಷಪಾತ ಹಿಡಿಯಲೇ ಇಲ್ಲ. ಎಲ್ಲ ಜಾತಿ[illegible] [illegible] ಒಂದು ಸ್ಥಳ ಬ್ರಾಹ್ಮಣರಿಗೆ [illegible] ಅದರ ಆಗ್ರಹವಿದ್ದಿಲ್ಲ. [illegible] ಹಿಂದುಳಿದಂಥವನ್ನು [illegible], ಸ್ಥಳ ಉಳಿದರೆ ಬೇರೆಯವರನ್ನು [illegible] ಮತದವರು. ೧ ಅಸ್ಪೃಶ್ಯ ೨ ಮುಸಲಮಾನ, ೩ ಕಿಳವಾರ ೪ ಕು[illegible] ೫ [illegible] ೬ [illegible], ೭ [illegible], ೮ ಪಾಂಚಾಳ, ೯ [illegible], ೧೦ ಕ್ರಿಶ್ಚನ್ನ ಇವೇ ಮೊದಲಾದ ಜಾತಿಯವರಲ್ಲಿ- ವಸೀಲೆಯಿಂದಲ್ಲ- ಶಿಕ್ಷಣದಲ್ಲಿ ಯೋಗ್ಯರಾದಂಥವರನ್ನು ನೇಮಿಸಬೇಕು, ಇವರಲ್ಲಿ ಅಂ[illegible] ಹೊಂದಿದ್ದರೆ- ಲಿಂಗಾಯತ, ವೈಶ್ಯ, ಬ್ರಾಹ್ಮಣ ಮೊದಲಾದವರನ್ನು [illegible]ವಿ ಸಬೇಕೆಂದು ಇವರ ಮತವಿತ್ತು. ಈ ಮತವು ರೋ[illegible] ಮಂದ್ರ[illegible] ಕೂಡ ಸ್ವಾರ್ಥವಿಲ್ಲದಂಥ ಹೋಟುಗಳಿಂದಾ[illegible]. ಅಸ್ಪೃಶ್ಯರಲ್ಲಿ ಶಿಕ್ಷಣಹೊಂದಿದವನಿದ್ದರೂ ಆತನಿಗೆ ಕೆಲಸ ದೊರೆಯಲಿಲ್ಲ. ಏಕೆ ಸಿಗಲಿಲ್ಲೆಂಬುದನ್ನ ಶಿವನೇ ಬಲ್ಲನು !!

ಲ್ಯಾಡಮಿನಿಸ್ಟ್ರೇಟರ ನೇಮಣೂಕಿಗಿಂತ ಈ ಸುಪರವಾಯಜರ ಮತ್ತು ಕಾರಕೂನರ ನೇಮಣೂಕಿಯು ಭಯಂಕರವಾದ ಅನ್ಯಾಯ ಮತ್ತು ಪಕ್ಷಪಾತವಾದದ್ದು. ಇದು ಶಿಶುಪಾಲನ ೧೦೧ ತಪ್ಪಿನಂತಿರುತ್ತದೆ. ಈ ತಪ್ಪನ್ನು ಅಳಿಸಿ, ಹಿಂದುಳಿದ ಪ್ರತಿಯೊಂದು ಜಾತಿಯವರಲ್ಲಿ ಸಮಾಧಾನ ಹುಟ್ಟುವಂತೆ ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಈ ತ್ವರ್ಯದಕ್ಷರಾಗಬೇಕೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಅಧ್ಯಕ್ಷರಾದ ಶ್ರೀ ಹುಳಕೋಟಿಯವರು ಕರ್ಣಾಟಕ ನಡೆದ ಪ್ರಾಸರ್ಯ ನೋಡಿದ್ದಾರೆ. ಇವರು ಜನರಲ ಕಮೀಟಿಯಲ್ಲಿ ನಡೆದ ಸಂಗತಿಯನ್ನು ವಿವರಿಸಿ ಹೇಳಿ, ಈ ನೇಮಣೂಕಿಗಳನ್ನು ರದ್ದುಪಡಿಸುವಂತೆ ಬೇರೆ ಮೆಂಬರರಲ್ಲಿ ಪ್ರೇರಣೆಯಾಗುವಂಥ ವರ್ತನವಿಡುವರೆಂದು ಆಶಿಸುತ್ತೇವೆ.

ಪಾನೆಗಲ್ಲದ ರಾಜರ ಫಜೀತಿಯು.

—o—

ಬ್ರಾಹ್ಮಣೇತರರು ಕಾಂಗ್ರೆಸದಲ್ಲಿ ಸೇರಬೇಕೆಂದು ಮದ್ರಾಸ [illegible] ತುಂಬ ಹರವಿಸ[illegible]. [illegible]ಸಲ್ಲಿ [illegible] ಸಭೆಯಲ್ಲಿ [illegible] ಸಿರ್ಣಯವಾಗುವದು. ಈ ಪ್ರವಾದದಲ್ಲಿ [illegible] ಪಾನಗಲ್ಲಿನ ರಾಜರಿಗೆ ನೀವು ಕಾಂಗ್ರೆಸ [illegible] ಎಂದು ಪ್ರಶ್ನೆ ಮಾಡಿ[illegible] ಅದಕ್ಕೆ [illegible] ಕೊಡಲು ರಾಜರು ಫಜೀತಿ ಪಟ್ಟರು. ಕಾಂಗ್ರೆಸ ಸೇರುವದಿಲ್ಲ[illegible] ಬಹಳ ಜನ ಬ್ರಾಹ್ಮಣೇತರರ ವಿರುದ್ಧ [illegible] ನೋಡಿದರೆ. ಕಾಂಗ್ರೆಸದಲ್ಲಿ ಬ್ರಾಹ್ಮಣೇತರರೆಂದು [illegible] ಹೋಗಿ, ಅವರೊಂದು ದರ್ಜಾ[illegible] [illegible]ವಾಗುವದು. ಕಾಂಗ್ರೆಸದಲ್ಲಿದ್ದ ಬ್ರಾಹ್ಮಣೇತರರನ್ನು ತಮ್ಮ ಪಕ್ಷಕ್ಕೆ ಪರವಾಗಿ ಕೂಡಿಬೇಕೆಂದು ಹಂಬಲಿಸಿದ್ದಾರೆ. ಉತ್ತರ ದೇಶದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ವಿರೋಧವಿಲ್ಲ. ಅಲ್ಲ ಈ ಚಳುವಳಿ ಬೆಳೆಯಬೇಕೆಂದರೆ- ದುಡ್ಡಿನ ಸಹಾಯ ಬೇಕು. ಕಾಪು ರಾಜರಾದರೂ, ಚಳವಳಿಯ ಪುರಸ್ಕರ್ತರಾದರೂ, ಚಳವಳಿ ಮಾಡುವದಕ್ಕೆ ಬೇಕಾದಷ್ಟು ದ್ರವ್ಯವು ಇವರ ಹತ್ತರವೂ ಇಲ್ಲ. ಇವರ ಬ್ರಾಹ್ಮಣೇತರ ಸಂಸ್ಥೆಯಲ್ಲಿಯೂ ಇಲ್ಲ. ಅದ್ದರಿಂದ ಮುಂದೇನೆಂಬ ವಿಚಾರದಲ್ಲಿ ಚಿಂತಾಗ್ರಸ್ತರಾಗಿದ್ದಾರೆ. ಇಂಥ ಫಜೀತಿಯಿಂದ ಅವರು ಪಾರಾಗುವದೆಂತು?

ಅಡಿಗೆಯವರ ಸಂಪು.

—o—

ನೂರಾರು ಜನರಿಗೆ ಬರಕಪ್ಪರ್.

—o—

ಲಾಹೋರಿನಲ್ಲಿ ಆರ್ಯಸಮಾಜದ ದಯಾನಂದ ಕಾಲೇಜದಲ್ಲಿ ಮ್ಯಾಟ್ರಿಕ ವಾಸಾದಂಥ ಒಬ್ಬ ಮಾದರವನು ಕಲಿಯಲಿಕ್ಕೆ ಹೋದನು. ಈಗಿನಿಗೆ ಬಡಿಸಲಿಕ್ಕೂ, ಬೇರೆ ವಿದ್ಯಾರ್ಥಿಗಳ ಪಂಕ್ತಿಯಲ್ಲಿ ಆತನನ್ನು ಕೂಡ್ರಿಸಲಿಕ್ಕೂ ಅಡಿಗೆಯವರು ಅಡ್ಡಿ ತಕ್ಕೊಂಡರು. ಹಿಂದೂ ಜನಾಂಗದಲ್ಲಿ ಜಾತಿಭೇದ, ಪಂಕ್ತಿಭೇದ ಮಾಡಬಾರದೆಂಬದೇ ಆರ್ಯಸಮಾಜದ ಧ್ಯೇಯವು ಈ ಧ್ಯೇಯದ ವಿರುದ್ಧ ನಡೆಯಬಾರದೆಂದು ವ್ಯವಸ್ಥಾಪಕರು ಸ್ವಯಂಪಾಕಿಗಳಿಗೆ ಪರಿಪರಿಯಾಗಿ ಉಪದೇಶ ಮಾಡಿದರು. ಆದರೂ ಈ ಬಲ್ಲವರು ತಮ್ಮ ಅಗ್ರಹ ಬಿಡಲಿಲ್ಲ. ವ್ಯವಸ್ಥಾಪಕ ಕಮೀಟಿಯವರು ಇವರೆಲ್ಲರಿಗೂ ಬರಕಪ್ಪರ್ ಮಾಡಿ, ಬೇರೆ ಅಡಿಗೆಯವರನ್ನು ತಂದು ಊಟ ಸಾಗಿಸಿದರು.

ಡಾಕ್ಟರ ಮುಂಜೆಯವರ ಹೇಳಿಕೆ-

ಹೋದ ವಾರದಲ್ಲಿ ಬೆಳಗಾವಿಯಲ್ಲಿ ಡಾಕ್ಟರ ಮುಂಜೆಯವರ ವ್ಯಾಖ್ಯಾನವಾಯಿತು. [illegible] ಯ ಹಿಂದೂ [illegible] ಮತ್ತು ಸಂಗಟನೆ. ತಮ್ಮ ವ್ಯಾಖ್ಯಾನದಲ್ಲಿ ಇವರು ಹೇಳಿದ್ದೇನೆಂದರೆ—

"ಹಿಂದು ಮಹಾಸಭೆಯು ಕ್ರಾಂತಿಕಾರಕವಾಗಿರುತ್ತದೆಂದು ಅದರ ಮೇಲೆ ಅನ್ಯರು ಹೊರಿಸುವ ಅರೋಪವು ಪ್ರಶಾರ ಸುಳ್ಳು. ಇದೆಂದೂ [illegible] ತಿಜಾತಿಗಳಲ್ಲಿ [illegible] ಹುಟ್ಟಿಸುವದಿಲ್ಲ. [illegible] ಇದರ ಧ್ಯೇಯವು. ಜರ್ಮನರು ಒಕ್ಕಟ್ಟಿನಿಂದ [illegible] ಇಡೀ ಜಗತ್ತಿಗೆ ಭಾರವಾದರೆಂಬುದು ಮೋರ[illegible] ಹಾಯಿದ್ದರಿಂದ ಕಂಡು ಬಂದಿದೆ. ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕೆ ಕಲಂಕವಾಗಿದೆ. ಇವರು ಸಾಧ್ಯಮಾರ್ಗದಲ್ಲಿ ಹೋದಂತೆ ಮಾಡಿರಿ."

ಡಾಕ್ಟರರು ಮುಂದಿನ ವಾರದಲ್ಲಿ ಧಾರವಾಡಕ್ಕೆ ಬರುವರು.

ಅಂಬ್ಯುಲನ್ಸ-

ಡಾಕ್ಟರ ಪರೀಕ್ಷಕರರು ಚೀನಕ್ಕೆ ಕಳಿಸಬೇಕಾಗಿರುವ ಅಂಬ್ಯುಲನ್ಸದಲ್ಲಿ ರಾಜಕೀಯವಿರುತ್ತವೆಂಬ ನಾತವು ಸರಕಾರಕ್ಕೆ ಬಡೆದ ವರ್ತಮಾನವನ್ನು ಈ ಮೊದಲು ಪ್ರಸಿದ್ಧ ಮಾಡಿದ್ದೇವೆ. ಸರಕಾರಕ್ಕೆ ಉತ್ತರವಾಗಿ ಡಾಕ್ಟರ ಅನಸಾರಿಯವರು ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ. ತುರ್ಕಸ್ಥಾನಕ್ಕೆ ಕಳಿಸಿದ ಪತ್ಥದ ಪ್ರಕಾರವೇ ಕಾರವೇ ಚೀನಕ್ಕೂ ಅಂಬ್ಯುಲನ್ಸ ಹೋಗುವದು. ಇದರಲ್ಲಿ ಯಾವ ತರದ ರಾಜಕೀಯವಿರುವದಿಲ್ಲೆಂದು ಅಲ ಇಂಡಿಯಾ ಕಾಂಗ್ರೆಸ ಕಮಿಟಿಗೆ ತಿಳಿಸಿದ್ದೇವೆಂದು ಡಾಕ್ಟರರು ಅಂದು, ಅಂಬುಲನ್ಸಕ್ಕೆ ಪಾಸಪೋರ್ಟ ಕೊಡಬೇಕೆಂದಿದ್ದಾರೆ.

ಒಳ್ಳಾರಿಯ ಇಂಡಸ್ಟ್ರಿಯಲ ಸ್ಕೂಲಿನಲ್ಲಿ ಕಂಬಳಿ ನೇಯುವದನ್ನು ಕಲಿಸುವ ವರ್ಗ ತೆಗೆಯುವರು. ಇದಕ್ಕಾಗಿ ಮಂದಲೂರಿನ ಹಣಮಂತಪ್ಪನವರು ೫೦೦ ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಸಾರ್ವಜನಿಕ ಬೀದಿಗಳ ಮೇಲೆ ಈದ ಹಬ್ಬದಲ್ಲಿ ಗೋಪತ್ಯ ಮಾಡಬಾರದೆಂಬ ಠರಾವು ಅಹಮದಾಬಾದ ಮ್ಯುನಿಸಿಪಾಲಿಟಿಯಲ್ಲಿ ಠರಾಯಿಸ್ಪಟ್ಟಿದೆ.